ವಾಗ್ಭೂಷಣ

ಪ್ರೊ. ಟಿ. ಕೇಶವ ಭಟ್ಟ

ಆಕರ ಗ್ರಂಥಮಾಲೆ

ವಾಗ್ಭೂಷಣ

ಪ್ರೊ. ಟಿ. ಕೇಶವ ಭಟ್ಟ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು

VĀGBHŪSHANA

Collection of Articles

Writer

Prof. T. Keshava Bhatta

Formerly Professor of Kannada

A.P.S. College, Bangalore - 560 019.

Publisher

Administrative Officer

Kannada Pustaka Pradhikara

(Kannada Book Authority)

Pampamahakavi Road, Chamarajapet

Bangalore-560 018

First Edition : 2003

Pages : xii + 290   Price : Rs. 200/-

ISBN 81-7713-025-0

Cover Design

Suresh Babu

Printer

Sri Venkateshwara Printers

No. 50, Main Road

Kempegowda Nagar

Bangalore - 560 019

Phone : 6677556

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ಸಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೊದ್ದೇಶ್ಯವಲ್ಲ. ಪ್ರಕಟಣೆಯ ಜತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಹಲವು ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿ ಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು.

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು ! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ

ಲೇಖಕನ ಅರಿಕೆ

ಮಾನವನಿಗೆ ಭೂಷಣವಾದುದು ಬೇರಾವುದೂ ಅಲ್ಲ. ಅದು ಮಾತು. ಅದನ್ನೇ ವಾಗ್ಭೂಷಣ ಎನ್ನಲಾಗಿದೆ. ಎಂತಹ ಮಾತು? ಎಂಬುದೂ ಮುಖ್ಯ. ಅದು ಸಂಸ್ಕಾರಗೊಂಡ ಮಾತು, ಶಿಷ್ಟಭಾಷೆ ಎಂದು ತಿಳಿದುಕೊಳ್ಳಬೇಕಾಗುವುದು. ಅದನ್ನೇ ವಿಶದಪಡಿಸತಕ್ಕ ಒಂದು ಸುಭಾಷಿತ ಹೀಗಿದೆ -

> **ಕೇಯೂರಾಣಿ ನ ಭೂಷಯಂತಿ ಪುರುಷಂ ಹಾರಾ ನ ಚಂದ್ರೋಜ್ವಲಾ**
> **ನ ಸ್ನಾನಂ ನ ವಿಲೇಪನಂ ನ ಕುಸುಮಂ ನಾಲಂಕೃತಾ ಮೂರ್ಧಜಾಃ**
> **ವಾಣ್ಯೇಕಾ ಸಮಲಂಕರೋತಿ ಪುರುಷಂ ಯಾ ಸಂಸ್ಕೃತಾ ಧಾರ್ಯತೇ**
> **ಕ್ಷೀಯಂತೇऽ ಖಿಲಭೂಷಣಾನಿ ಸತತಂ ವಾಗ್ಭೂಷಣಂ ಭೂಷಣಂ ॥**

ಅಂದರೆ - ತೋಳ ಬಂದಿಗಳು, ಚಂದ್ರನಂತೆ ಹೊಳೆವ ಸರಗಳು, ಇವಾವುವೂ ಅಲಂಕಾರಗಳಲ್ಲ. ಸ್ನಾನ, ಅನುಲೇಪನ, ಮುಡಿದ ಹೂವುಗಳ ಕೂದಲಿನ ಸೊಬಗು - ಇವಾವವೂ ಭೂಷಣಪ್ರಾಯವಲ್ಲ. ಸುಸಂಸ್ಕೃತವಾದ ಮಾತನ್ನು ಧರಿಸಿಕೊಂಡಿದ್ದರೆ ಅದೊಂದೇ ಅಲಂಕಾರಪ್ರಾಯವಾಗುವುದು. ಮಾತೆಂಬ ತೊಡಿಗೆಯನ್ನು ಹೊರತಾದ ತೊಡಿಗೆಗಳೆಲ್ಲವೂ ಕ್ಷಯಿಸುತ್ತವೆ. ಆದುದರಿಂದ ವಾಗ್ಭೂಷಣವೇ ಭೂಷಣ - ಎಂದು ಸುಭಾಷಿತದ ಅರ್ಥ.

ಅಂತಹ ಮಾತಿನ (ಭಾಷೆಯ) ರೂಪ ಪದ್ಯವಾಗಿರಬಹುದು ಅಥವಾ ಗದ್ಯವಿರಬಹುದು. ಪ್ರಕೃತ , ಇಲ್ಲಿ ಗದ್ಯ ಅನುಲಕ್ಷಿತ. ಗದ್ಯವು ಕಥೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾದ ರೂಪಗಳಲ್ಲಿರುತ್ತದೆ. ಪ್ರಬಂಧವನ್ನು ಲೇಖನವೆಂದೂ ಹೇಳಬಹುದು. ಅದು ಕೂಡ ಹಲವು ಬಗೆಯದಾಗಿದೆ - ವಿವಿಧ ಲೋಕಾನುಭವಗಳನ್ನು ವಿವರಿಸುವ ವಿವರಣಾತ್ಮಕ, ವರ್ಣನಾತ್ಮಕ, ಅನುವಾದಾತ್ಮಕ, ವಿನೋದಾತ್ಮಕ - ಎಂಬವು ಹೆಚ್ಚು ಪ್ರಚಲಿತವಿರುವ ರೂಪಗಳು. ಇವುಗಳಲ್ಲಿ ಮೇಲ್ಮಟ್ಟದವು - ಶೈಕ್ಷಣಿಕ, ಬೋಧನಾತ್ಮಕ. ಸಂಶೋಧಾತ್ಮಕ ಮತ್ತು ವಿಮರ್ಶಾತ್ಮಕವಾಗಿರುವ ಲೇಖನಗಳು. ಪ್ರಕೃತ ಈ ಕೃತಿ ಅಂತಹ ಲೇಖನಸಮುಚ್ಚಯವೇ ಆಗಿರುತ್ತದೆ. ಈ ವಾಗ್ಭೂಷಣ ಕೃತಿ ಕನ್ನಡ ಓದುಗರ ಹಸ್ತಭೂಷಣವಾಗಲು ಅಣಿಯಾಗಿದೆ.

ಈ ಲೇಖಕನ ಇದುವರೆಗಿನ ಸಾಹಿತ್ಯ ರಚನೆಗಳು - ಕಾವ್ಯ, ಕವನಸಂಕಲನ, ಲಲಿತಪ್ರಬಂಧ, ಸಂಶೋಧಾತ್ಮಕ ಮತ್ತು ವಿಮರ್ಶಾತ್ಮಕ ಪ್ರಬಂಧಗಳು, ವ್ಯಾಕರಣ, ಶಬ್ದಕೋಶ, ಬಾಲಸಾಹಿತ್ಯ, ಜನಪದಗೀತಗಳು, ಭಕ್ತಿನೀತಿ ಕೃತಿಗಳು ಇತ್ಯಾದಿಯಾಗಿ ಬಹುಮುಖದವು.

'ಸತ್ವಾಲೋಕನಂ' ಎಂಬ ಚಂಪುಕಾವ್ಯ ೧೯೬೦ರಲ್ಲಿ ರಾಜ್ಯ ಸರಕಾರದ ಬಹುಮಾನ ಪಾತ್ರವಾಗಿದೆ. 'ಸಂಶೋಧನ ರತ್ನಮಾಲಿಕೆ' ಎಂಬುದಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ೧೯೭೨ನೆಯ ವರ್ಷದ ಹೊನ್ನ ಹಬ್ಬದ ಬಹುಮಾನ ಪ್ರಾಪ್ತವಾಗಿದೆ. 'ಹವ್ಯಕರ ಶೋಭಾನೆಗಳು' ೧೯೮೮ನೆಯ ವರ್ಷದ ಯಕ್ಷಗಾನ ಜಾನಪದ ಅಕಾಡೆಮಿಯಿಂದ ಬಹುಮಾನಿತವಾಗಿದೆ. 'ಗೋವಿನ ಕಥಾಸಾಹಿತ್ಯ' ಎಂಬ ಕೃತಿಗೆ ೨೦೦೦ದಲ್ಲಿ ಸಾಹಿತ್ಯ ಅಕಾಡೆಮಿ ಪುರಸ್ಕಾರ ಗೌರವವನ್ನು ನೀಡಿದೆ.

ಸುಮಾರು ಅರುವತ್ತು ವರ್ಷಗಳಿಂದ ಈ ಲೇಖಕನು ಬರೆಯುತ್ತ ಬಂದ ಸಾಹಿತ್ಯಮೌಲ್ಯದ ಲೇಖನಗಳು ಸಂಖ್ಯೆಯಲ್ಲಿ ಐನೂರನ್ನು ಮೀರಬಹುದು. ಅವೆಲ್ಲ ಈಗ ಉಪಲಬ್ಧವೂ ಆಗಿರುವುದಿಲ್ಲ. ಉಪಲಬ್ಧವಿರುವ ಲೇಖನಗಳಿಂದ ಆಯ್ದ ಸಂಕಲನವಿದು. ಇದರಲ್ಲಿ ಲೇಖನಗಳನ್ನು ಮಾತ್ರವಲ್ಲದೆ, ಎಷ್ಟೋ ಕಡೆಗಳಲ್ಲಿ - ಸಾಹಿತ್ಯ ಸಮ್ಮೇಳನಗಳಲ್ಲಿ, ಸಾಹಿತ್ಯಗೋಷ್ಠಿಯಲ್ಲಿ ಮಾಡಿರುವ ಭಾಷಣಗಳಲ್ಲಿ ಉಪಲಬ್ಧವಿರುವವುಗಳಲ್ಲಿ ಮುಖ್ಯವಾದ ಕೆಲವನ್ನು ಸೇರಿಸಿಕೊಳ್ಳಲಾಗಿದೆ. ಲೇಖನಗಳಲ್ಲಿ ಕೆಲವು ಶೈಕ್ಷಣಿಕ ಮಹತ್ವದವು. ಕೆಲವು ಸಂಶೋಧನದ ಬಗೆಯವು. ಅನುಭವಪೂರ್ಣವಾದುವು. ಕೆಲವು ಪ್ರಮುಖ ಗ್ರಂಥವಿಮರ್ಶೆಗಳೂ ಇಲ್ಲಿವೆ. ಇವನ್ನೆಲ್ಲ ಈಗ ಮುದ್ರಣಕ್ಕೆ ಸಿದ್ಧಪಡಿಸುವ ಹೆಳೆಯಲ್ಲಿ ನನಗೆ ಅವುಗಳ ವಿಚಾರಗಳ ಪುನಃಸ್ಮರಣೆಯಿಂದ ಅನುಭವ ನವೀಕರಣವಾಗುವಂತೆ ಆದುದಕ್ಕಾಗಿ ಅಭಿಮಾನಪಡುತ್ತೇನೆ.

'ವಾಗ್ಭೂಷಣ' ಎಂಬ ಹೆಸರನ್ನು ಕರೆದಾಗ, ಇದೇ ಹೆಸರ ಪತ್ರಿಕೆಯ ನೆನಪು ಹಲವರಿಗಾಗಬಹುದು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣೆಯಾಗಿ ೧೮೯೬ ನವಂಬರ ತಿಂಗಳಿಂದ ಪ್ರಾರಂಭವಾದ ಮಾಸಪತ್ರಿಕೆಗೆ ಇದೇ ಹೆಸರಿದ್ದಿತು. ಅದು ಮುಂದೆ ಎರಡು ದಶಕಗಳ ಕಾಲ ನಿಂತುಹೋಗಿ ೧೯೭೩ ಮೇ ತಿಂಗಳಿನಿಂದ ಪ್ರಾರಂಭಗೊಂಡರೂ ಮುಂದುವರಿದಿಲ್ಲ. ಆ ಪತ್ರಿಕೆಗೂ ಈ ಲೇಖನ ಸಂಕಲನಕ್ಕೂ ನಾಮಸಂಬಂಧ ಮಾತ್ರವಲ್ಲದೆ, ವಿಷಯಸಂಬಂಧವೇನೂ ಇಲ್ಲ.

ಇದನ್ನೀಗ ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಾಶನಪಡಿಸುವ ಅವಕಾಶವಾದುದಕ್ಕೆ ಅಭಿಮಾನಪಡುತ್ತೇನೆ. ಅದಕ್ಕಾಗಿ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಮತ್ತು ಇತರರಿಗೆ, ಗ್ರಂಥಮುದ್ರಕರಿಗೆ ಅಭಿನಂದನಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

- ಇಂತು ಸುಜನ ವಿಧೇಯ

ಬೆಂಗಳೂರು

ಪ್ರೊ|| ಟಿ. ಕೇಶವ ಭಟ್ಟ

ಪರಿವಿಡಿ

— o —

ವಾಗ್ಭೂಷಣ

೧

ಕನ್ನಡ ಅಕ್ಷರಾಭ್ಯಾಸ

ಮನುಷ್ಯನ ಸಾಮಾಜಿಕ ವ್ಯವಹಾರಗಳಿಗೆಲ್ಲ ಭಾಷೆಯಷ್ಟು ಉಪಯುಕ್ತ ಸಾಧನ ಇನ್ನೊಂದಿಲ್ಲ. ವಿವಿಧ ವಿದ್ಯಾಪರಿಣತಿಗೆ ಭಾಷಾಪ್ರಯೋಗ ಪರಿಣತಿಯೇ ಆದಿ. ಭಾಷೆ ಶಬ್ದಮಯ. ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸುವ ಜ್ಯೋತಿ ಶಬ್ದ - ಎಂದು ದಂಡಿ ಎಂಬ ಕವಿ ಹೇಳಿದ್ದಾನೆ -

ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಂ
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಾನ್ನ ದೀಪ್ಯತೇ

ಅಂದರೆ - ಈ ಪ್ರಪಂಚದಲ್ಲಿ ಶಬ್ದವೆಂಬ ಹೆಸರುಳ್ಳ ಬೆಳಕು ಪ್ರಕಾಶಿಸದೆ ಇರುತ್ತಿದ್ದರೆ, ಮೂಲೋಕವೂ ಕಗ್ಗತ್ತಲೆಯಿಂದ ಕೂಡಿರುತ್ತಿದ್ದಿತು. ಅಂತಹ ಶಬ್ದವು ಭಾಷಾಂತರ್ಗತ. 'ಭಾಷಾ' ಎಂಬ ಶಬ್ದ 'ಭಾಷತ ಇತಿ' ಎಂಬ ವ್ಯುತ್ಪತ್ತಿಯಂತೆ 'ಪ್ರಕಾಶಿಸುವಂಥದು' ಎಂಬ ಅರ್ಥವನ್ನೇ ಕೊಡುತ್ತದೆ. ಜ್ಞಾನದ ಬೆಳಕು ಭಾಷೆ. ಭಾಷೆಯ ಘಟಕವೆನಿಸುವ ಶಬ್ದವನ್ನು 'ಶಬ್ದಬ್ರಹ್ಮ' ಎಂದೂ ಕರೆಯಲಾಗಿದೆ. ಶಬ್ದಬ್ರಹ್ಮದ ಮೂಲಕ ಪರಬ್ರಹ್ಮವನ್ನೇ ಸೇರಬಹುದೆಂದು ಜ್ಞಾನಿಗಳ ಅಭಿಪ್ರಾಯ -

ದ್ವೇ ವಿದ್ಯೇ ವೇದಿತವ್ಯೇ ತು ಶಬ್ದಬ್ರಹ್ಮ ಪರಂ ಚ ಯತ್
ಶಬ್ದಬ್ರಹ್ಮಣಿ ನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ

ಅಂದರೆ - ಅವಶ್ಯವಾಗಿ ತಿಳಿಯಬೇಕಾದವು - ಶಬ್ದಬ್ರಹ್ಮ ಮತ್ತು ಪರಬ್ರಹ್ಮ ಎಂಬೆರಡು ವಿದ್ಯೆಗಳು. ಮೊದಲನೆಯದಾದ ಶಬ್ದಬ್ರಹ್ಮದಲ್ಲಿ ನಿಷ್ಠೆಯುಳ್ಳವನು ಪರಬ್ರಹ್ಮನನ್ನು ಸೇರುತ್ತಾನೆ. ಹೀಗೆ ಭಾಷಾಜ್ಞಾನವೆಂಬುದು ಇಹಕ್ಕೂ ಪರಕ್ಕೂ ಸಾಧನವಾಗುವುದು.

ಭಾಷಾಜ್ಞಾನಕ್ಕೆ ಹಾಗೂ ಅದರ ಅಭಿವೃದ್ಧಿಗೆ ಸಾಧನಗಳು - ಮಾತು, ಓದು, ಬರೆಹ ಎಂಬ ಮೂರು ಬಗೆಯವು. ಪರಿಶ್ರಮದ ಮಟ್ಟಕ್ಕೆ ಅನುಗುಣವಾಗಿ ಈ ಮೂರರಿಂದಲೂ ಭಾಷಾಜ್ಞಾನವಾಗುವುದು. ಮಾತು ಲಿಖಿತವಾಗಿ ಚಾಕ್ಷುಷರೂಪ ತಾಳಿದಾಗ ಬರೆಹವೆನಿಸುತ್ತದೆ. ಆಗ ಅದು ಓದಲು ಅರ್ಹವಾಗುತ್ತದೆ. ಈ ಓದು ಬರೆಹಗಳಿಗೆ ಅಕ್ಷರಾಭ್ಯಾಸವೇ ಮೂಲ. ಆದುದರಿಂದಲೇ ವಿದ್ಯಾಭ್ಯಾಸದಲ್ಲಿ ಮೊತ್ತಮೊದಲ ಹಾಗೂ ಅತಿಮುಖ್ಯವಾದ ಅಭ್ಯಾಸವಿಷಯ- ಅಕ್ಷರಜ್ಞಾನ.

ಅಕ್ಷರಗಳನ್ನು ಬರೆದ ಅಥವಾ ಕಾಣಿಸಿದ ಚಾಕ್ಷುಷರೂಪವೇ ಲಿಪಿ. ಲಿಪಿಜ್ಞಾನವು ಮಾನವನಿಗೆ ದೈವದತ್ತವಾದ ವರವೆನ್ನಲಾಗಿದೆ. ನಾರದಸ್ಮೃತಿಯ ಉಲ್ಲೇಖವಿದು -

ನಾಕರಿಷ್ಯದ್ಯದಿ ಬ್ರಹ್ಮಾ ಲಿಖಿತಂ ಚಕ್ಷುರುತ್ತಮಂ
ತತ್ರೇಯಮಸ್ಯ ಲೋಕಸ್ಯ ನಾ ಭವಿಷ್ಯತ್ ಶುಭಾ ಗತಿಃ

ಅಂದರೆ - ಬ್ರಹ್ಮದೇವನು ಕಣ್ಣಿಗೆ ಸೊಗಸಾಗಿರುವ ಬರೆಹವನ್ನು ನಿರ್ಮಿಸದೆ ಇರುತ್ತಿದ್ದರೆ, ಈ ಲೋಕಕ್ಕೆ ಶುಭಗತಿಯೇ ಇಲ್ಲವಾಗುತ್ತಿತ್ತು. ಇಂತಹ ಅಕ್ಷರಾಭ್ಯಾಸಕ್ಕೆ ಸಲ್ಲತಕ್ಕ ಮಹತ್ತ್ವವನ್ನು ಚೂಡಾರತ್ನಶತಕದ ಒಂದು ಸುಭಾಷಿತ ಹೀಗೆ ಸಾರುತ್ತದೆ -

ಮಕ್ಕಳಿಗೆ ತಂದೆ ಬಾಲ್ಯದೊ
ಳಕ್ಕರವಿದ್ಯೆಗಳನರಿಪದಿರ್ದೊಡೆ ಕೊಂದಂ
ಲಕ್ಕ ಧನಮಿರಲು ಕೆಡುಗುಂ
ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನಾ

ವಿದ್ಯಾವಂತನನ್ನು ಸಂಸ್ಕೃತದಲ್ಲಿ ಸಾಕ್ಷರನೆನ್ನುವರು. ಕನ್ನಡದಲ್ಲಿ ಅಕ್ಕರಿಗನೆಂದು ಹೇಳುವರು. 'ಅಕ್ಷರ' ಎಂಬ ಶಬ್ದವೇ (ಅ + ಕ್ಷರ) ನಾಶವಿಲ್ಲದುದು ಎಂಬ ಅರ್ಥವಾಹಿಯಾಗಿದ್ದು ಜ್ಞಾನದ ಸಂಕೇತವೇ ಆಗಿರುತ್ತದೆ. ವಿದ್ಯಾರಂಭವಾಗುವುದು ಅಕ್ಷರಾಭ್ಯಾಸದಿಂದ. ಭಾಷಾಭ್ಯಾಸಕ್ಕೆ ಮತ್ತು ಅದರ ದೃಢತೆಗಾಗಿರುವ ವ್ಯಾಕರಣಾಭ್ಯಾಸಕ್ಕೆ ತಳಹದಿ ಅಕ್ಷರ ಪರಿಚಯವಾಗಿದೆ. ಆದುದರಿಂದಲೇ ವೈಯಾಕರಣರು ತಮ್ಮ ಗ್ರಂಥಾರಂಭದಲ್ಲಿ ಅಕ್ಷರವಿವರವನ್ನೇ ತಿಳಿಸಿರುವರು -

ಅರಯೆ ತಚ್ಛಾಸ್ತ್ರವ್ಯವ
ಹಾರ ಜ್ಞಾನಾರ್ಥಮಾಗಿ ಪೇಳಲ್ಪಡೆಗುಂ
ಧೀರರಿನಕ್ಷರಸಂಜ್ಞಾ
ಕಾರಂ ವ್ಯಾಕರಣದಾದಿಯೊಳ್ ಪರಿವಿಡಿಯಿಂ (ಶ. ದ. ಸೂತ್ರ ೧)

ನಮ್ಮ ಕರ್ಣಾಟಕದಲ್ಲಿ ಪ್ರಾಚೀನ ವಿದ್ಯಾಭ್ಯಾಸದ ಪದ್ಧತಿಯನ್ನು ಕುರಿತು ಹಲವು ಶಾಸನಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ನಮ್ಮ ನಾಡಿನ ಘಟಿಕಾಸ್ಥಾನಗಳು, ಅಗ್ರಹಾರಗಳು, ಮಠಗಳು, ದೇವಸ್ಥಾನಗಳು ಹಿಂದೆ ಪ್ರಾಥಮಿಕ ಶಿಕ್ಷಣಕೇಂದ್ರಗಳಾಗಿದ್ದವು. ಪ್ರೌಢಶಿಕ್ಷಣ ಸಂಸ್ಕೃತದಲ್ಲಿ ಇರುತ್ತಿತ್ತು. ಆದರೆ, ಪ್ರಾಥಮಿಕ ಶಿಕ್ಷಣ ಕನ್ನಡದಲ್ಲೇ ಇರುತ್ತಿದ್ದಿತು. ಅಂತಹ ಪ್ರಾಥಮಿಕ ಶಿಕ್ಷಣವನ್ನು 'ಕರ್ಣಾಟಕಶಿಕ್ಷೆ' ಅಂದರೆ ಕನ್ನಡವನ್ನು ಕಲಿಯುವುದು ಎಂದೇ ಕರೆಯುತ್ತಿದ್ದರು. ಬಾಲಶಿಕ್ಷೆ, ಕರ್ಣಾಟಕ ಬಾಲಶಿಕ್ಷೆ ಎಂತಲೂ ಹೇಳುತ್ತಿದ್ದರು. ಅಕ್ಷರಾಭ್ಯಾಸ ಎಂದೂ ಕರೆಯುವ ರೂಢಿಯಿದ್ದಿತು. ಈ ಶಿಕ್ಷಣದಲ್ಲಿ ಕನ್ನಡದ ಅಕ್ಷರಗಳನ್ನು - ಕಾಗುಣಿತವನ್ನು ಸರಿಯಾಗಿ ಹೇಳಿಕೊಡುತ್ತಿದ್ದುದಾಗಿ ತಿಳಿದುಬರುತ್ತದೆ (ಕರ್ನಾಟಕದ ಪರಂಪರೆ, ಸಂಪುಟ ೧, ಪುಟ : ೪೧೧-೪೧೨). ಅಕ್ಷರಾಭ್ಯಾಸ ಮಾಡಿಸುವುದಕ್ಕಾಗಿಯೇ ನಿಯುಕ್ತರಾದ ಬೋಧಕರು ಅಂದಿನ ವಿದ್ಯಾಲಯಗಳಲ್ಲಿ ಇರುತ್ತಿದ್ದರು. ತಾಳಗುಂದದ ಪ್ರಣವೇಶ್ವರ ದೇವಾಲಯದ ಕ್ರಿ.ಶ. ೧೧೫೮ನೆಯ ವರ್ಷದ ಶಾಸನದ ಪ್ರಕಾರ, ಅಲ್ಲಿ ಕನ್ನಡದ ಅಕ್ಷರಗಳನ್ನು ಕಲಿಸುವ ಬೋಧಕರು

ಇಪ್ಪರೆಂದೂ ಅವರಲ್ಲಿ ಒಬ್ಬೊಬ್ಬರಿಗೆ ಎಂಟೆಂಟು ಮಂದಿ ವಿದ್ಯಾರ್ಥಿಗಳು ಇದ್ದರೆಂದೂ ಹೇಳಲಾಗಿದೆ.

ವಿಶ್ವದ ಭಾಷೆಗಳ ಅಕ್ಷರಮಾಲಿಕೆಯಲ್ಲಿ ಅತಿಸುಂದರವಾದುದು ಹಾಗೂ ಬಳೆದು ಪರಿಷ್ಕಾರಗೊಂಡುದು ಕನ್ನಡದ ಲಿಪಿ-ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಇತರ ಪಲವು ಲಿಪಿಗಳಂತೆ ಇದು ಬ್ರಾಹ್ಮೀಲಿಪಿಯಿಂದಲೇ ಬಳೆದು ಬಂದಿದೆ. ಬ್ರಾಹ್ಮೀಲಿಪಿ ರೇಖಾರೂಪಿ. ಅದು ವಿಕಾಸಗೊಂಡು ಚೌಕಾಕೃತಿ, ಕೋನಾಕೃತಿಗಳನ್ನು ದಾಟಿ, ಈಗಿನ ದುಂಡಗಿನ ರೂಪಕ್ಕೆ ತಲಪಿದೆ. ಈ ರೂಪಕ್ಕೆ ಬಂದ ಮೇಲೆ ಪರಿವರ್ತನೆಯಾಗಿಲ್ಲ, ಆಗುವ ಆವಶ್ಯಕತೆಯೂ ಇಲ್ಲ. ಇದೀಗ ಸುಧಾರಣೆಯ ತುದಿಮಟ್ಟಕ್ಕೆ ಬಂದಿದೆಯೆಂದು ಹೇಳಬಹುದು. ಈ ಅಕ್ಷರಗಳಿಗೆ ನಿರ್ದಿಷ್ಟ ಅವಯವಗಳು ರೂಪಗೊಂಡು ಸರ್ವಾಂಗಸುಂದರವಾಗಿವೆ. ತಲೆಕಟ್ಟುಗಳು ಇವಕ್ಕೆ ಸೊಗಸನ್ನುಂಟು ಮಾಡಿವೆ. ಕನ್ನಡದ ಅಕ್ಷರಾವಯವಗಳ ವಿವರವನ್ನು ಒಬ್ಬರು ವೈಯಾಕರಣರು ಓಗೆ ತಿಳಿಸಿದ್ದಾರೆ -

ಇಳಿ, ಗುಡಿಸು, ಕೊಂಬು, ವಟ್ಟಸುಳಿ
ಯಳವಡಲೇತ್ವೈತ್ವವೋತ್ವ ವೌತ್ವಗಳೆಂಬೀ
ದಳಸರದಿಂ ಕಾಗುಣಿತದೆ
ತಿಳಿವಿಕೆಗೊಂದೆರಡು ಸೊನ್ನೆ ತೋರುವುದದರೊಳ್

(ಸಂಶೋಧನ ರತ್ನಮಾಲಿಕೆ, ಪುಟ : ೨೦)

ಕನ್ನಡ ಅಕ್ಷರಶರೀರಕ್ಕೆ ತಲೆಕಟ್ಟು, ಹೊಟ್ಟೆ, ಹೊಕ್ಕುಳ, ಸುಳಿ, ಇಳಿ, ಗುಡಿಸು, ಕೊಂಬು, ವಟ್ಟಸುಳಿ, ಎತ್ವ, ಐತ್ವ, ಒತ್ವ, ಓತ್ವ ಔತ್ವಗಳುಳ್ಳ ಕಾಗುಣಿತದ ರೂಪಗಳಿವೆ. ಹಲವು ಬಗೆಯ ಒತ್ತುಗಳೂ ಇವೆ. ಇವೆಲ್ಲವೂ ಅಕ್ಷರಾವಯವಗಳು. ಇವು ಇರುವುದರಿಂದ ಅಕ್ಷರಗಳು ಸರ್ವಾಂಗಪೂರ್ಣವಾಗಿ ಸುಂದರವಾಗಿವೆ. ಕೆಲವು ಅಕ್ಷರಗಳಿಗೆ ತಲೆಕಟ್ಟು ಇರುವುದಿಲ್ಲ (ಉದಾ : ಖ, ಜ, ಜ, ಞ, ಟ, ಣ, ಬ, ಲ - ಇತ್ಯಾದಿ).

ಈ ಅಕ್ಷರಾವಯವಗಳು ಅಭ್ಯಾಸಕ್ಕೂ ಬೆರಲಚ್ಚಿಗೂ ತೊಡಕು ಎಂದೂ ಆದುದರಿಂದಲೇ ಕನ್ನಡದ ಕಾಗುಣಿತಗಳಲ್ಲಿ ಕೆಲವನ್ನು ಬಿಟ್ಟು ಲಿಪಿಸುಧಾರಣೆ ಮಾಡುವುದು ಅಪೇಕ್ಷಣೀಯವೆಂದೂ ವಾದಿಸುವವರಿದ್ದಾರೆ. ಕನ್ನಡದಲ್ಲಿಯ ಒತ್ತುಗಳನ್ನೇ ನಿವಾರಿಸಬೇಕೆನ್ನುವವರಿದ್ದಾರೆ. ಉದಾ : 'ಅಷ್ಟು ಹೊತ್ತಿಗೆ' ಎಂಬುದನ್ನು ಅ-ಷ್-ಟು-ಹೊ-ತ್-ತಿ-ಗೆ- ಎಂದು ಬರೆಯಬಹುದೆಂದು ಅವರ ಅಭಿಮತ. ಈ ಬಗೆಯ ಸುಧಾರಣೆ ಕನ್ನಡದ ವೈಶಿಷ್ಟ್ಯಕ್ಕೇ ಘಾತಕ. ಅಕ್ಷರಾಭ್ಯಾಸದಲ್ಲಿ ಗೊಂದಲಕ್ಕೆ ಎಡೆ. ಈ ಸುಧಾರಣೆಯ ರೂಪ ತಲೆಯೆತ್ತಿದಾಗ, ಇದುವರೆಗೆ ತಾತ್ವಿಕವಾಗಿ ಏಕರೂಪದಲ್ಲಿದ್ದ ಲಿಪಿ ಎರಡು ಕವಲೊಡೆದಂತಾಗುವುದು. ಯಾವುದು ಹೇಯ? ಯಾವುದು ಉಪಾದೇಯ? ಎನ್ನಲು ಕಷ್ಟವಾಗುವುದು. ಇದರಿಂದಾಗಿ ಇದುವರೆಗೆ ಮುದ್ರಿತವಾದ ಗ್ರಂಥಕೋಟಿಯಲ್ಲಿ ಕಾಣಿಸುವ ಲಿಪಿರೂಪ ಹಾಗೂ ಇದುವರೆಗೆ ಕನ್ನಡ ಕಲಿತವರು ಬಳಸುವ ಲಿಪಿರೂಪ ಒಂದು; ಈ ಸುಧಾರಿತ (?) ಎಂದುಕೊಳ್ಳುವ ಲಿಪಿರೂಪ ಇನ್ನೊಂದು. ಇದರಿಂದ

ಎರಡೂ ಬಗೆಯ ಲಿಪಿಯ ಅಭ್ಯಾಸ ಎಲ್ಲರಿಗೂ ಅವಶ್ಯವೆನಿಸದಿರದು. ಈಚೆಗೆ ಪ್ರಾಥಮಿಕ ಅಕ್ಷರಾಭ್ಯಾಸದಲ್ಲಿ ಋ, ೠ ಎಂಬೆರಡು ಸ್ವರಾಕ್ಷರಗಳನ್ನೂ ಕವರ್ಗ ಚವರ್ಗಗಳ ಅನುನಾಸಿಕವನ್ನೂ ಬಿಟ್ಟುಬಿಡುವ ಕಾರ್ಯವಿದು, ಅನಾವಶ್ಯಕ-ಅನುಚಿತ-ಅಶಾಸ್ತ್ರೀಯ ಸುಧಾರಣೆ ಅಜ್ಞಾನದಿಂದ ಪರಿಣಮಿಸಿದೆ.

ಬೆರಲಚ್ಚಿನ ಪ್ರಯೋಗಕ್ಕಾಗಿ ಈಗಣ ಕನ್ನಡ ಲಿಪಿಯಲ್ಲಿ ಏನೊಂದೂ ಸುಧಾರಣೆ ಅನವಶ್ಯವೆಂದು ಕನ್ನಡ ಬೆರಲಚ್ಚಿನ ನಿರ್ಮಾಪಕರಾದ ಡಾ. ಕ. ಅನಂತಸುಬ್ಬರಾಯರು ತೋರಿಸಿಕೊಟ್ಟಿದ್ದರು. ಕನ್ನಡದ ಈಗಿನ ಲಿಪಿ ಪರಿಪೂರ್ಣ ಸುಧಾರಿತ ಲಿಪಿಯೆಂದು ಅವರು ರುಜುಪಡಿಸಿದ್ದರು. ಕನ್ನಡ ತೆಲುಗುಗಳಿಗೆ ಬೆರಕೆಯ ಏಕಲಿಪಿ ಯೋಜನೆಯೂ ಸರಿಯಲ್ಲ. ಈಸಂಗತಿಯನ್ನು ನನ್ನ ಸಂಶೋಧನ ರತ್ನಮಾಲಿಕೆಯಲ್ಲಿ ಚರ್ಚಿಸಲಾಗಿದೆ.

ಕನ್ನಡ ಅಕ್ಷರಗಳ ಚಾಕ್ಷುಷ ಸೌಂದರ್ಯವನ್ನು ಮಾದಿರಾಜನೆಂಬ ಕವಿ (ಕ್ರಿ.ಶ. ೧೩೦೦) ಹೀಗೆ ವರ್ಣಿಸಿದ್ದಾನೆ -

ಬಿಂದುವಿನೊಂದು ಶೋಭೆ, ತಲೆಕಟ್ಟಿನ ಪೊರ್ಕುಳ ಚೆಲ್ವು, ಮಾತ್ರೆಯೊಳ್
ನಿಂದ ಬೆಡಂಗು, ಬಳ್ಳಿಯೊಳೊಡಂಬಡುತಿರ್ಪ ನಯಂ, ವಿಸರ್ಗದೊ
ಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ
ಲ್ಗುಂದದ ಮಾದಿರಾಜ ವಿಬುಧಂ ವಿಬುಧೋದಿತ ನವ್ಯಕಾವ್ಯಮಂ

(ಕರ್ಣಾಟಕ ಕವಿಚರಿತೆ, ಸಂ. ೧, ಪುಟ : ೪೬೯)

ಬಿಂದು (ಸೊನ್ನೆ), ತಲೆಕಟ್ಟು, ಮಾತ್ರೆ, ಪೊಕ್ಕುಳು, ಬಳ್ಳಿ (ಕಾಬಳ್ಳಿ ಅಥವಾ ಕಾಗುಣಿತ), ವಿಸರ್ಗ- ಇವುಗಳಿಂದ ಕನ್ನಡ ಅಕ್ಷರಗಳು ಸುಂದರವಾಗಿವೆ - ಎಂದು ಅವನ ಅಭಿಪ್ರಾಯ. ಹಾಗೆ ಸುಂದರವಾಗಿ ತಾನು ಬರೆದಿದ್ದೇನೆ - ಎಂದುಕೊಂಡಿದ್ದಾನೆ. ಕನ್ನಡದ ಲಿಪಿಸೌಂದರ್ಯ ಕನ್ನಡಿಗರಿಗೆ ಮಾತ್ರ ಒಪ್ಪಿಗೆಯಾದುದಲ್ಲ, ಒಬ್ಬರಸಿಕ ಸಂಸ್ಕೃತಕವಿ ಉಪಮೇಯ ಸಾಮಾನ್ಯಧರ್ಮಗಳೊಂದಿಗೆ ಹೀಗೆಂದಿದ್ದಾನೆ -

ಅಕ್ಷರಾಣಿ ಸಶೀರ್ಷಾಣಿ ವರ್ತುಲಾನಿ ಘನಾನಿ ಚ
ಪರಸ್ಪರ ವಿಲಗ್ನಾನಿ ತರುಣೀ ಕುಚಯುಗ್ಮವತ್ ॥

ಅಂದರೆ - ಕನ್ನಡದ ಅಕ್ಷರಗಳು ಯುವತಿಯ ಸ್ತನಯುಗಳದಂತೆ ಸಶೀರ್ಷವಾಗಿವೆ (ತಲೆಕಟ್ಟಿನಿಂದ, ಚೂಚಕದಿಂದ ಕೂಡಿವೆ). ವರ್ತುಲಾನಿ (ದುಂಡಗೆ) ಇವೆ. ಘನವಾಗಿ (ಗಟ್ಟಿಯಾಗಿ, ಪೂರ್ಣ ಬಳೆದುವಾಗಿ) ಇವೆ. ಒಂದಕ್ಕೊಂದು ಹತ್ತಿರ ಸೇರಿಯೂ ಬೇರೆ ಬೇರೆಯಾಗಿ ಕಾಣುವಂತಿವೆ. ಇದರಿಂದ ಕನ್ನಡ ಅಕ್ಷರಗಳ ರೂಪವೈಶಿಷ್ಟವೆಂಬುದು ಎಲ್ಲರ ಮೆಚ್ಚಿಕೆಯನ್ನು ಎಂದೇ ಗಳಿಸಿರುವುದು ವಿದಿತವಾಗುತ್ತದೆ. ಆದುದರಿಂದ ಕನ್ನಡದ ಅಕ್ಷರಾಭ್ಯಾಸ ಅಭಿಮಾನಕರವೂ ಪ್ರೀತ್ಯಾಸ್ಪದವೂ ಕರಕೌಶಲದರ್ಶಕಕ್ರಿಯೆಯೂ ಆಗಿದೆಯೆಂದು ಹೇಳಬಹುದು.

ಕನ್ನಡ ಅಕ್ಷರಾಭ್ಯಾಸಕ್ಕೆ ತೊಡಕು ಕಡಮೆ, ಸೌಕರ್ಯವೇ ಹೆಚ್ಚು. ಏಕೆಂದರೆ - ಕನ್ನಡವು ಸಂಸ್ಕೃತದಂತೆ ಧ್ವನಿಯುಕ್ತ ಭಾಷೆ (Phonetic). ಭಾಷೆಯ ಎಲ್ಲ ಉಚ್ಚಾರಣೆಗಳಿಗೂ ಬೇಕಾಗುವ

ಲಿಪಿಗಳು ಕನ್ನಡದಲ್ಲಿವೆ. ಶ, ಷ, ವಿಸರ್ಗ, ಹಕಾರಗಳು, ಮಹಾಪ್ರಾಣಗಳೂ ಕನ್ನಡದಲ್ಲಿವೆ. ಏತ್ವ, ಓತ್ವಗಳ ಹ್ರಸ್ವರೂಪಗಳೂ ಇವೆ. ಸಂಸ್ಕೃತಲಿಪಿಯಲ್ಲಿ ಎಲೆ, ಒಲೆ, ಕೊಡೆ - ಎಂದು ಬರೆಯಲಿಕ್ಕಾಗುವುದಿಲ್ಲ. ಬರೆದಾಗ-ಏಲೇ, ಓಲೇ, ಕೋಡೇ ಎಂದಾಗುವುದು. ಈ ಉದಾಹರಣೆಯಿಂದ ಕನ್ನಡ ಅಕ್ಷರಗಳು ಸಂಸ್ಕೃತಕ್ಕಿಂತಲೂ ಹೆಚ್ಚಿನ ಸೌಕರ್ಯವುಳ್ಳವು ಎನ್ನಬಹುದಾಗಿದೆ. ಕನ್ನಡದಲ್ಲಿ ಉಚ್ಚಾರಣೆಗೂ ಬರವಣಿಗೆಗೂ ಇರತಕ್ಕ ಹೊಂದಿಕೆ ಇದರ ಸೋದರ ಭಾಷೆಯಾದ ತಮಿಳಿಗಿಲ್ಲ. ಕನ್ನಡದಂತೆ ಮಹಾಪ್ರಾಣಾಕ್ಷರಗಳೇ ತಮಿಳಿನಲ್ಲಿಲ್ಲ. ಆದುದರಿಂದ 'ಗಾಂಧಿ' ಎಂಬುದನ್ನು 'ಕಾಂತಿ' ಎಂದು ಬರೆಯುತ್ತಾರೆ. 'ಶಬ್ದಮಣಿದರ್ಪಣ' ಎಂಬುದನ್ನು 'ಸಪ್ತಮಣಿತರ್ಪಣ' ಎಂದು ಬರೆದು ಓದಬೇಕಾಗುತ್ತದೆ. ಕನ್ನಡದಂತೆ ಇಂಗ್ಲಿಷ್ ಹಿಂದೀ ಭಾಷೆಗಳೂ ಧ್ವನಿಯುಕ್ತಗಳಲ್ಲ. ಇಂಗ್ಲೀಷಿನಲ್ಲಿ ಒಂದೇ ಅಕ್ಷರಕ್ಕೆ ಬೇರ ಬೇರೆ ಉಚ್ಚಾರಗಳು. ಚರ್ಚ್ (Church) ಎಂಬಲ್ಲಿಯ ಉಚ್ಚಾರ, ಕ್ಯಾರೆಕ್ಟರ್ (Character) ಎಂಬಲ್ಲಿಯ ch ಸಂತಲ್ಲ. ಹೀಗೆಯೇ ಎಷ್ಟೂ ಉದಾಹರಣೆ ಕೊಡಬಹುದು.

ಹಿಂದಿಯಲ್ಲಿ ಕಿತಾಬ, ಲಡಕಾ ಎಂದು ಬರೆದರೆ, ಕಿತಾಬ್, ಲಡ್ಕಾ ಎಂದು ಓದಬೇಕು, 'ಅವರು ಓದುತ್ತಾರೆ' ಎಂಬುದನ್ನು 'ವೇ ಪಢತೇ ಹೈಂ' ಎಂದು ಬರೆಯಲಾಗುವುದು. ಉಚ್ಚಾರಣೆಯಲ್ಲಿ ಒಂದು, ಲಿಪಿರೂಪದಲ್ಲಿ ಇನ್ನೊಂದು - ಹಿಂದೀಭಾಷೆಯ ಜಾಯಮಾನ. ಇಂತಹ ತೊಂದರೆ ಕನ್ನಡದಲ್ಲಿ ಇಲ್ಲದಿರುವುದು ಇದರ ಒಂದು ಹಿರಿಮೆಯೆನ್ನಬಹುದಲ್ಲವೆ? ಕನ್ನಡ ಅಕ್ಷರಗಳ ಮುದ್ರಿತರೂಪ, ಬೆರಲಚ್ಚಿನ ರೂಪ, ಕೈಬರೆಹದ ರೂಪ - ಈ ಮೂರೂ ಒಂದೇ ತೆರನಾಗಿವೆ. ಈಗಿನ ಬೆರಲಚ್ಚಿನಲ್ಲಿ 'ಕೂ' ಎಂಬುದು 'ಕುಾ' ಎಂದಾಗುತ್ತದೆ. ಹಾಗೆಯೇ 'ಭ' ಎನ್ನುವುದು ' ಭ' ಎಂದಾಗುವುದು. ಇದಕ್ಕೆ ಕಾರಣ ಬೆರಳಚ್ಚಿನಲ್ಲಿ ಭಕಾರಕ್ಕೆ ತಲೆಕಟ್ಟಿಲ್ಲ. ಅದಲ್ಲದೆ ಅದರಲ್ಲಿ ಶಕಟರೇಫ (ಱ) ಮತ್ತು ಱಟ(ೞ) ಅಕ್ಷರಗಳಿಲ್ಲ. ಇದು ಯಂತ್ರನಿರ್ಮಾಣದ ಕೊರತೆಯಲ್ಲದೆ ಕನ್ನಡದ ಕೊರತೆಯಲ್ಲ. ಇವನ್ನೆಲ್ಲ ಒಳಗೊಳ್ಳುವ ಲಿಪಿಯಂತ್ರವನ್ನು ಸಿದ್ಧಪಡಿಸಲು ಸಾಧ್ಯವಿದೆಯೆಂದು ಶ್ರೀ ಅನಂತಸುಬ್ಬರಾಯರು ಹಿಂದೆಯೇ ನನಗೆ ತಿಳಿಸಿದ್ದರು. ಅದನ್ನು ಈಗಣವರು ಮಾಡಿಕೊಳ್ಳಬಹುದು. ಆದರೆ, ಆ ಬಗೆಗೆ ಒತ್ತಡ ತರುವವರು ಇರಬೇಕಲ್ಲವೆ? ಒತ್ತಡ ತರಬೇಕಾದರೆ, ಅದರ ಆವಶ್ಯಕತೆಯನ್ನು ಅರ್ಥಮಾಡಿ ತಿಳಿದವರಿರಬೇಕಲ್ಲವೆ?

ಸುಮಾರು ಆರೇಳು ದಶಕಗಳ ಹಿಂದೆ, ನಮ್ಮ ನಾಡಿನಲ್ಲಿ ಅಕ್ಷರಾಭ್ಯಾಸವನ್ನು ಹೇಗೆ ಮಾಡಿಸುತ್ತಿದ್ದರೆಂಬ ನೆನಪುಳ್ಳವರು ಇಂದಿಗೂ ಇದ್ದಾರೆ. ಶಾಲೆಗೆ ಸೇರಿಸುವ ಮೊದಲೇ ಮಗುವಿಗೆ ತನ್ನ ಮನೆಯಲ್ಲೇ ಅಕ್ಷರಾಭ್ಯಾಸಮಾಡಿಸುತ್ತಿದ್ದರು. ಓದಲೂ ಬರೆಯಲೂ ಕಲಿಸುತ್ತಿದ್ದರು. ಬಳಪದ ಹಲಗೆ (ಪಾಟಿ, ಸ್ಲೇಟು), ಬಳಪದ ಕಡ್ಡಿಗಳು ಮಗುವಿಗೆ ಪ್ರಾರಂಭದಲ್ಲಿ ಬರೆಯುವ ಸಾಧನಗಳು. ಒಂದನೆ, ಎರಡನೆ ತರಗತಿ ದಾಟುವ ವೇಳೆಗೆ ಸೀಸಕಡ್ಡಿ (ಪೆನ್ಸಿಲು) ಕಾಗದಗಳನ್ನು ಉಪಯೋಗಿಸಲಾಗುತ್ತಿತ್ತು. ಮೂರನೆಯ ತರಗತಿಯ ಅನಂತರ, ಮಸಿ (ಶಾಯಿ) ಲೇಖನಿಗಳನ್ನು ಉಪಯೋಗಿಸುತ್ತಿದ್ದರು. ಫೌಂಟನ್ ಪೆನ್ ನಿಷೇಧಿಸಲಾಗುತ್ತಿತ್ತು. ಉಪಾಧ್ಯಾಯರು

ಪ್ರಾರಂಭದಲ್ಲಿ ತಾವು ಬರೆದ ದೊಡ್ಡ ಅಕ್ಷರಗಳ ಮೇಲೆ ಬಳಪದ ಕಡ್ಡಿಯಿಂದ ಅದೇ ಆಕೃತಿ ಕೆಡದಂತೆ ಕ್ರಮವಾಗಿ ಮತ್ತೆ ಮತ್ತೆ ಬರೆದು ಉಚ್ಚಾರಣೆಮಾಡುತ್ತ, ಆಟದ ರೂಪದಲ್ಲಿ ಅದನ್ನು ಮಗು ಕಲಿಯುತ್ತಿತ್ತು. ಮೇಲಿನ ತರಗತಿಗಳಿಗೆ ಏರಿದಂತೆ, ಆ ಮೇಲೆ ಎರಡು ಗೆರೆಗಳಲ್ಲಿ, ಮುಂದೆ ಒಂದೇ ಗೆರೆಯಲ್ಲಿ, ಅನಂತರ ಗೆರೆಯಿಲ್ಲದೆ ಬರೆಯುವ ಅಭ್ಯಾಸವಿರುತ್ತಿತ್ತು. ಹಾಗೆ ಬರೆಯುವಾಗ, ಆಯಾ ಅಕ್ಷರಾಕೃತಿ ಸರಿಯಾಗಿರುವಂತೆ - ಏಕರೀತಿಯ ಗಾತ್ರವಿರುವಂತೆ, ಬರೆಯುವ ಸಾಧನಗಳನ್ನು (ಬಳಪದ ಕಡ್ಡಿ, ಪಾಟಿ, ಸೀಸಕಡ್ಡಿ, ಪುಸ್ತಕ, ಲೇಖನಿ ಇವನ್ನು) ಸರಿಯಾದ ಕ್ರಮದಲ್ಲಿ ಹಿಡಿದುಕೊಳ್ಳುವಂತೆ ಉಪಾಧ್ಯಾಯರು ಲಕ್ಷ್ಯವಿಡುತ್ತಿದ್ದರು. ಶಾಲೆಗಳಲ್ಲಿ ಪ್ರತಿದಿನವೂ ನೋಡಿ ಬರೆಯುವುದು (ಕಾಪಿ ಬರೆಯುವುದು), ಐದು ಸ್ಲೇಟುಗಳಿಗೆ ಕಡಮೆಯಾಗದಂತೆ ವಿದ್ಯಾರ್ಥಿಗೆ ಕಡ್ಡಾಯವಿರುತ್ತಿತ್ತು. ಮನೆಯ ಕಾಪಿ (ನೋಡಿ ಬರೆದುದನ್ನು) ನಿತ್ಯವೂ ತಂದೊಪ್ಪಿಸುವ ರೂಢಿ ಚೆನ್ನಾಗಿ ಪ್ರಚಲಿತವಿದ್ದಿತು. ಇದರಿಂದ ಶುದ್ಧವಾಗಿ ಮತ್ತು ಸುಂದರವಾಗಿ ಬರೆಯುವ ಅಭ್ಯಾಸ ನಮ್ಮ ಹಿಂದಿನ ಪೀಳಿಗೆಯ ಮಕ್ಕಳಿಗೆ ಚೆನ್ನಾಗಿ ಆಗುತ್ತಿತ್ತು. ಆಗಿನ ಕನ್ನಡ ಪಠ್ಯಪುಸ್ತಕಗಳು ಅಕ್ಷರಾಭ್ಯಾಸಕ್ಕೆ ಅನುಕ್ರಮವಾಗಿ ಸಹಾಯಕವೂ ಆಗಿದ್ದುವು. ಹೀಗೆ ಅಕ್ಷರಾಭ್ಯಾಸ ಮಾಡಿದ 'ಅಕ್ಕರಿಗರು' ಒಂದಡಿ ಎರಡಡಿ ಉದ್ದದ ಓಲೆಗರಿಯಲ್ಲಿ ಗ್ರಂಥಗಳನ್ನು ಪ್ರತಿಮಾಡಿದಾಗ, ಅಕ್ಷರಪಂಕ್ತಿಗಳು ಉರುಳುಗೋಲು (ರೂಲರ್) ಇಟ್ಟು ಗೆರೆಯೆಳೆದು ಬರೆದುದೋ! ಎಂಬಂತೆ ನೇರವಾಗಿ ಇರುತ್ತಿದ್ದವು. ಅಂತಹ ಓಲೆಗರಿಯ ಗ್ರಂಥಗಳನ್ನು - ಪ್ರಾಚೀನ ಲಿಖಿತಾವಶೇಷಗಳನ್ನು, ಇಂದಿಗೂ ನಾವು ಗ್ರಂಥಸಂಗ್ರಹಾಲಯಗಳಲ್ಲಿ ಹಾಗೂ ಸಂಗ್ರಹಿಸಿ ಇಟ್ಟುಕೊಂಡವರ ಮನೆಗಳಲ್ಲಿ ಕಾಣಬಹುದು. ಹಾಗೆ ಕಂಡು, ನಮ್ಮ ಹಿಂದಿನವರ ಬರೆವಣಿಗೆಯ ಕೌಶಲಕ್ಕೆ ಅಚ್ಚರಿಯನ್ನೂ ಅಭಿಮಾನವನ್ನೂ ತಾಳಬಹುದು. ಆದರೆ ಇಂದಿನ ಬರೆವಣಿಗೆಯ ಪರಿಸ್ಥಿತಿಯೇನು?

ಇಂದಿಗೆ, ಸರ್ವಾಂಗಸುಂದರವಾದ ಮತ್ತು ತಪ್ಪಿಲ್ಲದ ಅಕ್ಷರ ಬರೆವಣಿಗೆಯನ್ನು ಕನ್ನಡ ಕಲಿಸುವವರಲ್ಲೇ ಕಾಣಸಿಗುವುದು ವಿರಳ. ಅಕ್ಷರಗಳ ಉಚ್ಚಾರಣೆಯೇ ಹಲವರಿಗೆ ಬಾರದು! ನಮ್ಮ ಶಾಲಾ ಕಾಲೇಜುಗಳಲ್ಲಿ ಸುಂದರ ಶುದ್ಧ ಬರೆವಣಿಗೆಗೆ ಒತ್ತಡವಿಲ್ಲ. ಭಾಷಾ ಸಾಹಿತ್ಯ ಪರೀಕ್ಷೆಗಳ ಪ್ರಶ್ನಪತ್ರಗಳಲ್ಲಿ 'ಕಾಗುಣಿತ ತಪ್ಪಿದರೆ ಅಂಕಗಳನ್ನು ಕಳೆಯಲಾಗುವದು' ಎಂಬ ಗದರಿಕೆಯ ವಾಕ್ಯವಿರುವುದುಂಟು. ಉತ್ತರಗಳಿಗೆ ಅಂಕಗಳನ್ನು ನೀಡುವಾಗ, ಕಾಗುಣಿತದ ತಪ್ಪುಗಳು ಎಷ್ಟಿದ್ದರೂ ಕಳೆಯತಕ್ಕ ಅಂಕಗಳು ನೂರರಲ್ಲಿ ಐದು ಮಾತ್ರ. ಇದರಿಂದಾಗಿ ಪರೀಕ್ಷಾರ್ಥಿ ಎಷ್ಟು ಅಕ್ಷರದ ತಪ್ಪು ಮಾಡಿದ್ದರೂ ಉತ್ತರ ಸರಿಯಿದ್ದರಾಯಿತು, ಅಂಕಗಳನ್ನು ಕೊಡಲೇಬೇಕಾಗುತ್ತದೆ. ಸ್ಪಷ್ಟವಾಗಿ, ಶುದ್ಧವಾಗಿ, ಸುಂದರವಾಗಿ ಕಾಗುಣಿತದ ತಪ್ಪಿಲ್ಲದೆ ಬರೆಯಲು ಕಲಿತಿಲ್ಲದ ಇಂದಿನ ವಿದ್ಯಾರ್ಥಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಗಳಿಸಿ ತೇರ್ಗಡೆಯಾಗುವುದುಂಟು. ಅಂಥವನೇ ಮುಂದೆ ಅಧ್ಯಾಪಕನಾಗಿ, ಖ್ಯಾತ ಲೇಖಕನಾಗಿ ಬರುವುದು ಅಸಂಭವವೇನೂ ಅಲ್ಲ.

ಇಂದಿನ ಕಾಲೇಜು ವಿದ್ಯಾರ್ಥಿಗಳಿಗೆ, ಐಚ್ಛಿಕವಾಗಿ ಕನ್ನಡತೆಗೆದುಕೊಂಡವರಿಗೆ ಕೂಡ, ಸಾಮಾನ್ಯವಾಗಿ ತಪ್ಪಿಲ್ಲದೆ ಅಕ್ಷರಮಾಲೆಯ ಉಚ್ಚಾರ ಬಾಯಿಗೆ ಬಾರದು. ಬರೆಯಲೂ ಕಷ್ಟ. ಇದು ಆಶ್ಚರ್ಯವೂ ಹೌದು, ಆಶ್ಚರ್ಯವಲ್ಲದುದೂ ಹೌದು. ಅವರಿಂದ ಅಕ್ಷರಮಾಲೆ ಹೇಳಿಸಿ ನೋಡಿ :- ಅ,ಅ, ಇ,ಇ, ಉ,ಉ ಎನ್ನುತ್ತಾರೆ. ಉಚ್ಚಾರಣೆಯಲ್ಲಿ ಹ್ರಸ್ವ - ದೀರ್ಘ ತಾರತಮ್ಯ ಕಾಣಿಸದು. ವರ್ಗೀಯ ವ್ಯಂಜನಗಳನ್ನು ಕಾ ಕ ಗಾ ಗ ಙ, ಚಾ ಚ ಜಾ ಜ ಞ- ಎಂದು ಉಚ್ಚರಿಸುವುದನ್ನು ಕಾಣಬಹುದು. ಅಲ್ಪಪ್ರಾಣ-ಮಹಾಪ್ರಾಣಗಳ ತಾರತಮ್ಯವೇನೂ ಕಾಣಿಸದು. ಕೃತಜ್ಞ, ಜ್ಞಾನ, ಕಿಙ್ಞಣ್ಣ - ಇವನ್ನು ಕೃತಗ್ನ, ಗ್ನಾನ, ಕಿಯ್ಯಣ್ಣ - ಎನ್ನುವ ಕನ್ನಡ ಪ್ರಾಧ್ಯಾಪಕರನ್ನೇ ಕಾಣಬಹುದು. ಅವರಿಗೇಕೆ ಈ ಉಚ್ಚಾರಣೆ ಬಾರದು? ಎಂಬುದಕ್ಕೆ ಉತ್ತರ ಸುಲಭ. ಅವರು ತಮ್ಮ ಶಾಲೆಯಲ್ಲಿ ಕಲಿತಿಲ್ಲ. ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಬಾರದಿರಲು ಕಾರಣ - ಅವರು ಪ್ರಾಥಮಿಕಶಾಲೆಯಲ್ಲಿ ಕಲಿತಿಲ್ಲ. ಅದರೊಂದಿಗೆ ಅವರ ಉಪಾಧ್ಯಾಯರು ಅವರಿಗೆ ಕಲಿಸಿಲ್ಲ ಎಂಬ ಉತ್ತರವೂ ಸೇರಿಕೊಳ್ಳುತ್ತದೆ. ಪ್ರಾಥಮಿಕ ಶಾಲಾಧ್ಯಾಪಕರು ಈ ಕೊರತೆಗೆ ಕಾರಣವನ್ನು ವಿದ್ಯಾರ್ಥಿಗಳ ತಂದೆತಾಯಿಗಳ ಮತ್ತು ಅವರ ಮನೆಯ ಪರಿಸರದ ಮೇಲೆ ಆರೋಪಿಸಿ ತಾವು ತಪ್ಪಿನಿಂದ ತಪ್ಪಿಸಿಕೊಳ್ಳುವುದೂ ಉಂಟು. ಒಟ್ಟಿನಲ್ಲಿ ಚಿಕ್ಕಂದಿನಲ್ಲಿ ಕಲಿಯದೆ ಆದ ತಪ್ಪು- ವ್ಯಕ್ತಿ, ಸಮಾಜ ಜೀವನವನ್ನೇ ವ್ಯಾಪಿಸಿ, ಕೇಡೆಸಗುವುದು ಸಹಜ.

ಇಂತಹ ಅಕ್ಷರಗಳ ಅಜ್ಞಾನವನ್ನು ಎಲ್ಲಿಯೂ ತಿದ್ದಬಹುದು. ತಿದ್ದಬೇಕು. ಇದರ (ತಿದ್ದುವುದರ) ಪ್ರಾರಂಭ ಪ್ರಾಥಮಿಕ ಶಾಲೆಗಳಲ್ಲಿ ಆಗದಿರಲು ಈ ಕೆಲವು ಕಾರಣಗಳನ್ನು ಕೊಡಬಹುದು-

1. ಪ್ರಾಥಮಿಕ ಶಾಲೆಗಳಲ್ಲಿ ಕಲಿಸಲು ನಿಯುಕ್ತರಾಗಿ ಬಂದವರು ವಿಶೇಷ ವಿದ್ಯಾವಂತರಲ್ಲ. ಹೇಗೋ ಎಸ್.ಎಸ್.ಎಲ್.ಸಿ. ಆಗಿ ಬೇರೇನೂ ಉದ್ಯೋಗ ದೊರೆಯದಿದ್ದವರು. ಮನಮೆಚ್ಚದ ಪ್ರಕೃತದ ಉದ್ಯೋಗದಲ್ಲಿ ನಿಷ್ಠೆಯಾಗಲಿ, ಕೌಶಲವಾಗಲಿ ಇಲ್ಲದ ಉದರಂಭರಣದವರು. ಸ್ವತಃ ಕನ್ನಡ ಅಕ್ಷರಮಾಲೆ, ಕಾಗುಣಿತ ಉಚ್ಚಾರಣೆಗಳನ್ನು ತಿಳಿದು ಕೊಂಡಿರದವರು.

2. ವಿದ್ಯಾರ್ಥಿಗಳಲ್ಲಿ ಅವರವರ ಕುಲಾಗತ, ಪರಿಸರಾಗತಗಳಾಗಿ ಅಕ್ಷರೋಚ್ಚಾರಣೆಯ ದೋಷಗಳಿರುವುದು. ಅರಿತ ನುರಿತ ಅಧ್ಯಾಪಕರಿಂದ ಅವರಿಗೆ ಸಾಕಷ್ಟು ಭಾಷಾಸಂಸ್ಕಾರ ದೊರೆಯದಿರುವುದು.

3. ಕನ್ನಡ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯಾಧಿಕ್ಯ. ಇದರಿಂದಾಗಿ ಅಧ್ಯಾಪಕರ ವೈಯಕ್ತಿಕ ಲಕ್ಷ್ಯಕ್ಕೆ ಅವಕಾಶ ಕಡಮೆಯಾಗಿರುವುದು.

4. ತಥೋಕ್ತ ಸಂಶೋಧಿತವೆನ್ನಲಾದ ಪ್ರಾಥಮಿಕ ಶಿಕ್ಷಣ ಪದ್ಧತಿಯಲ್ಲಿ ಮತ್ತು ಪಠ್ಯಪುಸ್ತಕದಲ್ಲಿ ಅಜ್ಞಾತವಾಗಿ ಬೇರೂರಿರುವ ನ್ಯೂನತೆಗಳು; ಮುದ್ರಣದೋಷಗಳು.

ಇಂದಿನ ಪ್ರಾಥಮಿಕಶಾಲೆಗಳಲ್ಲಿ ಅಕ್ಷರಮಾಲೆ ಕಾಗುಣಿತಗಳನ್ನು ಕಲಿಸುವುದರಲ್ಲಿಯೇ ದೋಷಗಳು ತುಂಬಿಹೋಗಿವೆ. ಅಕ್ಷರಗಳ ಸ್ಪಷ್ಟೋಚ್ಚಾರಣೆ ಮೊದಲನೆಯದು. ಅವುಗಳ ಸ್ವರೂಪದೋಷ ಎರಡನೆಯದು. ಸಮಗ್ರವಾಗಿ ತಿಳಿಸಲು ಲೇಖನಕ್ಕಿಂತ ಒಂದು ಪ್ರಾತ್ಯಕ್ಷಿಕೆಯೇ ಅವಶ್ಯವಾಗಬಹುದು. ಕೆಲವಕ್ಕೆ ನಾನಿಲ್ಲಿ ಉದಾಹರಣೆಗಳನ್ನು ಕೊಡುತ್ತೇನೆ - ಮೊದಲು ಅಕ್ಷರಗಳ ಸಂಖ್ಯೆ.

ಕನ್ನಡದಲ್ಲಿರುವ ಮೂಲಾಕ್ಷರಗಳು ೫೨. ಪ್ರಾಥಮಿಕವಾಗಿ ೫೦ ಎಂದಿಟ್ಟುಕೊಳ್ಳಬಹುದು. ಅಕಾರದಿಂದ ಔ ಕಾರದವರೆಗೆ (ಋ, ೠ ಸೇರಿ) ೧೪ ಸ್ವರಗಳು. ಯೋಗವಾಹಗಳು (ಬಿಂದು, ವಿಸರ್ಗಃ) ೨. ವರ್ಗೀಯ ವ್ಯಂಜನಗಳು ೨೫. ಅವರ್ಗೀಯಗಳು (ಯಕಾರದಿಂದ ಳಕಾರದ ವರೆಗೆ) ೯. ಹೀಗೆ ಒಟ್ಟು ೫೦ ಮೂಲವರ್ಣಗಳು. ಮುಂದೆ ಪ್ರೌಢತರಗತಿಗೆ ಬಂದಾಗ ಹಳಗನ್ನಡದಲ್ಲಿ ಬಳಕೆಯಲ್ಲಿರುವ ಶಕಟರೇಫ (ಱ) ಮತ್ತು ರಳ (ೞ) ಎಂಬೆರಡನ್ನೂ ಕಲಿತುಕೊಳ್ಳಬೇಕಾಗುತ್ತದೆ. ಇದನ್ನು ಅಲ್ಲಗಳೆಯುವದು ಭಾಷಾದ್ರೋಹವಲ್ಲದೆ ಬೇರೇನೂ ಅಲ್ಲ.

ವ್ಯಂಜನಗಳಾದ ಮ,ಯ ಎಂಬಿವುಗಳ ಕಾಗುಣಿತದಲ್ಲಿ ತಪ್ಪುಗಳಾಗುತ್ತಿವೆ. ಇವುಗಳ ಆತ್ವದ ಶುದ್ಧರೂಪ ಮಾ ಮತ್ತು ಯಾ. ಆದರೆ, ಮೂ ಮತ್ತು ಯೂ ಎಂಬುದು ಸರಿಯಲ್ಲ. ಊತ್ವ ಒತ್ವಗಳಲ್ಲಿ ಮೂ, ಮೋ, ಯೂ, ಯೋ - ಹೀಗಿರಬೇಕು. ಯೂ, ಯೋ, ಮೂ, ಮೋ ಹೀಗಿರಬಾರದು. ಮಾತು (ಸರಿ), ಮೂತು (ಸರಿಯಲ್ಲ) ಮೋಡ (ಸರಿಯಲ್ಲ) ಮೋಡ (ಸರಿ).

ಮೀನು, ಮೀಸೆ (ಸರಿ.), ಮೀನು, ಮೀಸೆ (ಸರಿಯಲ್ಲ). ಯೀ (ಸರಿ). ಯೀ (ಸರಿಯಲ್ಲ) ಯೂಪ (ಸರಿ), ಯೂಪ (ಸರಿಯಲ್ಲ). ಒಟ್ಟಿನಲ್ಲಿ ಈ ಎರಡು ವ್ಯಂಜನಗಳಿಗೆ ಆ ತ್ವಕ್ಕೆ ಈತ್ವದ ಅಥವಾ ಊತ್ವದ ದೀರ್ಘ ಚಿಹ್ನೆ ಕೊಡಬಾರದು. ಊತ್ವ ಓತ್ವಗಳಿಗೆ ಆತ್ವದ ದೀರ್ಘ ಚಿಹ್ನೆ ಕೊಡಬಾರದು. ಈ ನಿಯಮದ ಪಾಲನೆಯಲ್ಲಿ ಎಲ್ಲೆಡೆಯೂ ಪ್ರಮಾದಗಳಾಗುತ್ತಿವೆ. ಅದನ್ನು ನಿಲ್ಲಿಸಬೇಕು; ಶುದ್ಧರೂಪವನ್ನೇ ಅನುಸರಿಸಬೇಕು.

ಇನ್ನೊಂದು ದೊಡ್ಡ ತಪ್ಪು ಅರ್ ಒತ್ತಿನ (ಅರ್ಕಾರೊತ್ತಿನ) ಬಳಕೆಯಲ್ಲಿರುತ್ತದೆ. ಅರ್ಕಾವೊತ್ತು ಎಂಬ ಉಚ್ಚಾರಣೆಯೇ ಸರಿಯೆನಿಸದು. ಅಲ್ಲಿ ಅರ್‌ಕಾರದ ಒತ್ತು ಇರುತ್ತದೆ. ಆದುದರಿಂದ 'ಅರ್ಕಾರೊತ್ತು' ಅಥವಾ ಅರ್ಕ್ಕಾರೊತ್ತು ಎಂದು ಬರೆಯಬೇಕು, ಉಚ್ಚಾರಣೆ ಮಾಡಬೇಕು. 'ಗರ್ವ' ಎಂಬಲ್ಲಿ ಅರ್ಕಾರೊತ್ತಿರುತ್ತದೆ. ಆದರೆ ಅದರ ಉಚ್ಚಾರಣೆ ವಕಾರಕ್ಕೆ ಮೊದಲು ಇರುತ್ತದೆ. ಕನ್ನಡದಲ್ಲಿ ಅರ್ಕಾರೊತ್ತಿಲ್ಲದೆಯೂ ಸುಧಾರಿಸಬಹುದು. ಗರ್ವ ಎಂದು ಬರೆಯಬಹುದು. ಆದರೆ ಅದು (ಅರ್ ಒತ್ತು) ಪೂರ್ವಕಾಲದಿಂದಲೇ ಬಂದು ಸೇರಿಹೋಗಿದೆ. ಅದನ್ನು ಪ್ರಯೋಗಿಸುವಲ್ಲಿ ಎಲ್ಲೆಡೆಯೂ ತಪ್ಪು ಕಾಣಿಸುತ್ತದೆ. ಅಂದರೆ - ಅದಕ್ಕೆ ಕೊಡುವ ದೀರ್ಘ ರೂಪದಲ್ಲಿ ಸ್ಥಾನದೋಷ ಕಾಣಿಸುತ್ತದೆ. ಉದಾ: ನಿರ್ದೇಶಕ ವರ್ಗೀಕರಣ, ಸರ್ವೋದಯ,

ಇವು ಸರಿಯಾದ ರೂಪಗಳು. ಆದರೆ ಇವನ್ನು ನಿರ್ದೇಶಕ, ವರ್ಗೀಕರಣ, ಸರ್ವೋದಯ ಎಂದು ಬರೆಯುತ್ತಾರೆ, ಮುದ್ರಣ ಮಾಡುತ್ತಾರೆ. ಇದು ತಪ್ಪು ಏಕೆಂದರೆ -

ಅರ್ಕಾರೊತ್ತನ್ನು ಯಾವುದೇ ಪೂರ್ಣಾಕ್ಷರಕ್ಕೆ ಕೊಡಬೇಕಲ್ಲದೆ, ಅಪೂರ್ಣಾಕ್ಷರಕ್ಕೆ ಕೊಡಬಾರದು. ನಿರ್ಮಾಣ ಎಂಬುದನ್ನು ನಿರ್ಮ ಎಂದು ಬರೆದು ಆ ಮೇಲೆ ದೀರ್ಘಚಿಹ್ನೆ ಕೊಡುವುದಿಲ್ಲವಷ್ಟೆ ? ಅರ್ ಒತ್ತನ್ನು ಯಾವುದೇ ಪೂರ್ಣಾಕ್ಷರದ ನಡುವೆ ತುರುಕುವುದು ತಪ್ಪು. ದೇವನಾಗರಿಲಿಪಿಯಲ್ಲಿ ಇಂತಹ ತಪ್ಪಾಗುವುದಿಲ್ಲ.

ಹಲವರು 'ಬೆಕ್ಕು' ಎಂಬುದನ್ನು ಬರೆಯುವಾಗ 'ಬಿಕ್ಕು' ಎಂದಾಗುವುದುಂಟು. ಆದುದರಿಂದ ಎತ್ವದ ಸ್ಥಾನವನ್ನು ಸರಿಯಾಗಿ ನೋಡಿಕೊಳ್ಳಬೇಕು. 'ಯ' ವನ್ನು 'ಂು' ಎಂದು ಅಕ್ಷರಾವಯವವನ್ನು ವಿಂಗಡವಾಗಿ ಕಾಣುವಂತೆ ಬರೆಯಬಾರದು. ಅತ್ವಕ್ಕೆ ಐತ್ವದ ಒತ್ತನ್ನು ಬಳಸುವುದೂ ಸರಿಯಲ್ಲ. ಉದಾ: ತಾಯ್ ಅಥವಾ ತಾಯಿ ಎಂದಿರಬೇಕಾದುದನ್ನು 'ತ್ಯಾ' ಎಂದು ಬರೆಯಬಾರದು. ಕೊಯಿಲು, ಮೊಯಿಲಿ, ನೆಲ್ಲಿಕಾಯಿ - ಇಂಥವನ್ನು ಕ್ಯೊಲು, ಮ್ಯೊಲಿ, ನೆಲ್ಲಿಕ್ಯಾ ಎಂದು ಬರೆಯುವುದು ಸರಿಯಲ್ಲ. ಇಂತಹ ತಪ್ಪೊಪ್ಪಿನ ನಿರ್ಣಯ ಅಕ್ಷರಾಭ್ಯಾಸದಲ್ಲಿ ಅವಶ್ಯವಾದುದು.

ಕನ್ನಡದಲ್ಲಿ 'ನ್' ಎಂಬ ಅರ್ಧಾಕ್ಷರವನ್ನು '೯' ಹೀಗೆ ಕಾಣಿಸುವುದುಂಟು. ಉದಾ : 'ವಿದ್ವಾ೯' ಇದು ತಪ್ಪು. ಇದು ರೂಪಗೆಟ್ಟ ನಕಾರ. ಇದನ್ನು ಬಳಸುವುದೆಂದರೆ ಒಂದು ಅಕ್ಷರವನ್ನು (ಸರಸ್ವತಿಯನ್ನು) ಕೊಂದುದಕ್ಕೆ ಸಮಾನ!

ಇಂತಹ ಅಕ್ಷಮ್ಯವಾದ ತಪ್ಪುಗಳನ್ನು ಸ್ವತಃ ಬಳಸಿ ಅಭ್ಯಾಸಗೊಂಡವರು ತಮ್ಮದು ತಪ್ಪೆಂದು ಒಪ್ಪಲು ಸಿದ್ಧರಿರುವುದಿಲ್ಲ. ಅವರ ತಪ್ಪನ್ನು ತೋರಿಸಿಕೊಟ್ಟರೆ ಮೂಗುಕೊಯ್ಯನು ಕನ್ನಡಿತೋರಿಸಿದವನ ಮೇಲೆ ರೇಗುವಂತೆ ಅವರು ನಮ್ಮ ಮೇಲೆಯೇ ಕೋಪಾರುಣಕೇಕರರಾಗುತ್ತಾರೆ! ಹೇಗೆ ಬರೆದರೇನು? ಬರೆದದ್ದೇನೆಂದು ಗೊತ್ತಾದರೆ ಸಾಲದೇ? ಹೇಗೆ ಉಚ್ಚಾರಣೆ ಮಾಡಿದರೇನು? ಅರ್ಥವಾದರೆ ಸಾಕು - ಎಂಬವರಿಗೀ ಸಮೀಕ್ಷೆ ಸಲ್ಲದು. 'ರಾಮನು ಬಂದನು ಎಂದರೂ ಸರಿ; ಬಂದಳು ಎಂದರೂ ಸರಿ' ಬರುವ ಕ್ರಿಯೆ ನಡೆದಿದೆ ಎಂದು ಅರ್ಥವಾಗುತ್ತದೆ-ಎಂದು ವಾದಿಸುವವರಿಗೆ ಈ ವಿವೇಚನ ಲೇಖನ ಗ್ರಾಹ್ಯವಾಗದೆಂದು ಹೇಳಬಹುದು.

□

(೧೯೭೮, ನವಂಬರ, ಮಧುಕರ ಮಾಸಪತ್ರಿಕೆಯಲ್ಲಿ ಪ್ರಕಟಿತ)

೨

ಕನ್ನಡ ಜಾಗೃತಿ

ಕನ್ನಡ ಜಾಗೃತಿಯ ವರ್ಷಾಚರಣೆಯನ್ನು ವಾರಕ್ಕೊಂದು ವಿಶೇಷ ಸಭಾಕಾರ್ಯಕ್ರಮದಂತೆ ತಪ್ಪದೆ ವರ್ಷಪೂರ್ತಿ ಯಶಸ್ವಿಯಾಗಿ ನೆರವೇರಿಸಿಕೊಂಡು ಬಂದ ಕೀರ್ತಿ ಬೆಂಗಳೂರಿನ ಜ್ಞಾನಮಿತ್ರ ವಿದ್ಯಾಸಂಸ್ಥೆಗಿದೆ. ಈ ಆಚರಣೆ ಮತ್ತು ಇದರ ಪ್ರಭಾವ ನಿರಂತರವಾಗಿ ಎಲ್ಲ ಕಡೆಗೂ ಆಗಬೇಕಾದುದೇ ಸರಿ. ಇದರಿಂದ ಕನ್ನಡ ಭಾಷೆ-ಸಾಹಿತ್ಯಗಳ ಕಸ್ತುರಿಗಂಪು ಎಲ್ಲೆಲ್ಲಿಯೂ ಪಸರಿಸುವಂತಾಗಬೇಕು. ಅನುಚಿತ ಪರಭಾಷಾದಾಸ್ಯ ತೊಲಗಬೇಕು. ಕನ್ನಡದಲ್ಲಿ ಮಾತುಕತೆಗಳು, ಪತ್ರವ್ಯವಹಾರ, ಶಿಕ್ಷಣ, ಪಾಠಬೋಧನೆ, ನ್ಯಾಯಾಲಯ ಕಾರ್ಯಗಳು, ಮನೋರಂಜನೆಗಳು ಮಿನುಗುವಂತಾಗಬೇಕು. ಹಾಗೆ ಆಗುವಷ್ಟರ ಮಟ್ಟಿಗೆ ಪರಿಸ್ಥಿತಿ ಮಾರ್ಪಡಬೇಕು. ಇದರಿಂದ ಭಾಷಾಭಿವೃದ್ಧಿ ಸಾಹಿತ್ಯ ಸಮೃದ್ಧಿಗಳಾಗಬೇಕು. ಇದಕ್ಕೆ ಪ್ರೇರಕವಾಗಿ ಕೆಲವು ವಾಸ್ತವಾಂಶಗಳನ್ನು ನಾವು ನಮ್ಮಲ್ಲಿ ಜಾಗೃತಗೊಳಿಸಬೇಕಾಗುತ್ತದೆ.

ಅವುಗಳಲ್ಲಿ ಮೊದಲನೆಯದು - ಕನ್ನಡವು ಈ ನಾಡಿನ ಪ್ರಾಂತ ಭಾಷೆ ಮತ್ತು ಮಾತೃಭಾಷೆ ಎಂಬುದು. ಯಾರು ಎಲ್ಲಿಯೇ ವಾಸಿಸುತ್ತಿರಲಿ, ಅಲ್ಲಿಯ ಪ್ರಾಂತಭಾಷೆಯ ಅರಿವು ಇಲ್ಲವಾದರೆ, ಆತನು ಬಾಹಿರನು; ಅರ್ಥಾತ್ ಪರಕೀಯನೆನಿಸುತ್ತಾನೆ. ಆತನು ಅಲ್ಲಿ ಹೆಚ್ಚುಕಾಲ ವಾಸಕ್ಕೆ ತಕ್ಕವನಾಗುವುದಿಲ್ಲ. ಹಾಗೆಯೇ ಮಾತೃಭಾಷೆಯನ್ನು (ತಾಯ್ನುಡಿಯನ್ನು) ಅಲಕ್ಷ್ಯಮಾಡುವವನು ತಾಯಿಗೆ ದ್ರೋಹ ಬಗೆದಂತೆಯೇ ಸರಿ. ಈ ಬಗೆಯ ಭಾವನೆ ಮಾನವತೆಯ ಲಕ್ಷಣದಲ್ಲೇ ಬರುತ್ತದೆ. ನಮ್ಮ ನಾಡಿನಲ್ಲಿ ಈಗ ಅಂತಹ ಭಾವನೆ ಜಾಗೃತಗೊಳ್ಳದೆ ಇರುವುದು ಹಿರಿಮೆಯ ಅಥವಾ ಔದಾರ್ಯದ ದ್ಯೋತಕವೇನೂ ಅಲ್ಲ. ಅದು ಅಜ್ಞಾನದ ಹಾಗೂ ನೀತಿಬಾಹಿರತೆಯ ಚಿಹ್ನೆಯೆಂದು ನಾವು ಮೊದಲು ನಿರ್ಧರಿಸಬೇಕಾಗುತ್ತದೆ.

ಎರಡನೆಯದಾಗಿ - ಕನ್ನಡ ಒಂದು ಕ್ಷುಲ್ಲಕ ಭಾಷೆಯಲ್ಲ ; ಇದೊಂದು ಮಹಾಭಾಷೆ; ಶ್ರೇಷ್ಠಭಾಷೆ ಮತ್ತು ಸೊಗಸಾದ ಭಾಷೆ. ಇತರ ಅನೇಕ ಭಾಷೆಗಳಿಗಿಲ್ಲದ ಹಿರಿಮೆ ಕನ್ನಡಕ್ಕಿದೆ-ಎಂಬುದನ್ನು ನಾವು ಮನದಟ್ಟುಮಾಡಬೇಕು. ಈ ಎರಡನೆಯ ವಾಸ್ತವಾಂಶ ಮೊದಲನೆಯದಕ್ಕಿಂತ ಮುಖ್ಯ. ಏಕೆಂದರೆ, ಇದು ಮೊದಲನೆಯದಕ್ಕೆ ಇರತಕ್ಕ ಗಟ್ಟಿಯ ತಳಹದಿ.. ಇದನ್ನಿಲ್ಲಿ ಸ್ವಲ್ಪ ವಿವರಿಸಲಾಗುವುದು.

ಕನ್ನಡವು ದೇವವಾಣಿ ಎನಿಸುವ ಸಂಸ್ಕೃತಕ್ಕಿಂತ ಕೀಳಲ್ಲವೆಂಬುದನ್ನು ಮನಗಂಡ ಪ್ರಾಚೀನ ಕವಿಗಳು ಮತ್ತು ಲಾಕ್ಷಣಿಕರು ಕನ್ನಡದಲ್ಲಿ ಒಂದು ಸಾವಿರ ವರ್ಷದಿಂದಲೇ ಶ್ರೇಷ್ಠ ಕಾವ್ಯಗಳನ್ನು ರಚಿಸುತ್ತ ಬಂದಿದ್ದಾರೆ. ಕನ್ನಡಕ್ಕೆ ತಕ್ಕ ವ್ಯಾಕರಣ, ಛಂದೋಲಂಕಾರ, ರಸ, ಕಾವ್ಯಲಕ್ಷಣ ವಿಷಯಕ ಶಾಸ್ತ್ರ ಗ್ರಂಥಗಳನ್ನೂ ರಚಿಸಿ, ನಮ್ಮ ಕಾವ್ಯರಚನೆ ಉತ್ಕೃಷ್ಟವೆನಿಸಬೇಕಾದರೆ ಹೇಗಿರಬೇಕೆಂಬುದಕ್ಕೆ ಸೂಕ್ತ ಮಾರ್ಗದರ್ಶನ ಮಾಡಿದ್ದಾರೆ. ಕನ್ನಡವನ್ನು ವಿಶ್ವಭಾಷೆಯ ಮಟ್ಟಕ್ಕೆ ತರುವ ಉದ್ದೇಶದಿಂದಲೇ ಎರಡನೆಯ ನಾಗವರ್ಮನು (ಕ್ರಿ. ಶ ೧೦೪೦) 'ಭಾಷಾಭೂಷಣ' ಎಂಬ ಕನ್ನಡ ವ್ಯಾಕರಣ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿ ಅಚ್ಚರಿಪಡಿಸಿದ್ದಾನೆ. ಕನ್ನಡ ಸಂಸ್ಕೃತ ಎಂಬ ಉಭಯ ಶಬ್ದಸಾಗರವನ್ನೇ ದಾಟಿದವನಾದ ಭಟ್ಟಾಕಲಂಕನು (೧೬೦೪) ಸಂಸ್ಕೃತದ ಪಾಣಿನಿವ್ಯಾಕರಣವನ್ನೇ ಮೀರಿಸುವಂತೆ 'ಕರ್ಣಾಟಕ ಶಬ್ದಾನುಶಾಸನ' ಎಂಬ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ವ್ಯಾಖ್ಯಾನಸಹಿತ ರಚಿಸಿರುತ್ತಾನೆ. ಅದರಲ್ಲಿ ಕನ್ನಡವು ಸಂಸ್ಕೃತಕ್ಕಿಂತ ಹಿರಿದೆಂದು ಪ್ರತಿಪಾದಿಸಿದ್ದಾನೆ. ಅದರ ಉಲ್ಲೇಖವಿದು 'ಸರಸ ಪರಿಷತ್ ಪ್ರೌಢರೂಢ ವಿದ್ವತ್ಕವೀನಾಂ ಪೂರ್ಣಂ ಕರ್ಣಾಟನೇನ ತೂರ್ಣಂ ಚೇತಶ್ಚಮತ್ಕಾರಕಾರಿಣೀ ಚ ಕಾರ್ಣಾಟಿಕ್ಯೇವ ಗೀರ್ನಾನ್ಯಾ' ಅಂದರೆ, ರಸಿಕರ ಸಭೆಗಳಲ್ಲಿ ಪ್ರೌಢರೆನಿಸಿ ಕೀರ್ತಿಗಳಿಸಿದ ವಿದ್ವತ್ಕವಿಗಳ ಕಿವಿಗಳಲ್ಲಿ ಸಂಚರಿಸಿ ದನಿಗೂಡುತ್ತ ಒಡನೆಯೇ ಮನಕ್ಕೆ ಚಮತ್ಕೃತಿಯನ್ನು ಉಂಟುಮಾಡುವ ಭಾಷೆ ಕನ್ನಡವೇ ಆಗಿದೆ; ಬೇರೆ ಯಾವುದೂ (ಅಂದರೆ ಸಂಸ್ಕೃತವೂ) ಅಲ್ಲ. ಹೀಗೆ ದೃಢವಾಗಿ ನುಡಿದಿದ್ದಾನೆ.

'ಕರ್ಣಾಟ' ಎಂಬ ಶಬ್ದಕ್ಕೆ 'ಕರ್ಣೇ ಅಟತಿ' ಎಂದರೆ ಕಿವಿಯಲ್ಲಿ ಸಂಚರಿಸುವಂತಹುದು, ಕಿವಿಗಿಂಪಾದುದು ಎಂದು ಅರ್ಥಮಾಡಲಾಗಿದೆ. 'ಕನ್ನಡ' ಎಂಬುದು ನಾಡು ನುಡಿಗಳೆರಡರ ಹೆಸರೂ ಆಗಿದ್ದು, ಇದರ ನಿಷ್ಪತ್ತಿಯನ್ನು 'ಕರುನಾಡು' ಅಂದರೆ ಭೌಗೋಳಿಕವಾಗಿ 'ಎತ್ತರದ ನಾಡು' ಎಂತಲೂ ಅಂತರಾರ್ಥದಿಂದ 'ಅತಿಶ್ರೇಷ್ಠವಾದ ನಾಡು ಮತ್ತು ಆ ನಾಡಿನ ನುಡಿ' ಎಂದು ತಿಳಿಯಲಾಗಿದೆ. ಇದು ನಿಜವೆಂಬುದರಲ್ಲಿ ಸಂದೇಹವಿಲ್ಲ. ಕನ್ನಡದ ಮೇಲೆ ಸಂಸ್ಕೃತ ಮೇಧಾವಿಗಳಿಗೆ ಮಾತ್ರವೇ ಅಲ್ಲ, ತೆಲುಗರಿಗೂ ಪ್ರೀತ್ಯಭಿಮಾನ'. ಸುಮಾರು ೧೫ನೆಯ ಶತಮಾನದಲ್ಲಿದ್ದ ತೆಲುಗು ಕವಿ ಶ್ರೀನಾಥನು 'ನಾ ಕವಿತ್ವಂಬು ನಿಜಮು ಕರ್ಣಾಟ ಭಾಷ' ನನ್ನ ಕಾವ್ಯದ ಭಾಷೆ ನಿಜವಾಗಿ ಕನ್ನಡ - ಎಂದು ಅಭಿಮಾನದಿಂದ ಹೇಳಿದ್ದಾನೆ. ಅವನು ಕಾವ್ಯರಚನೆಮಾಡಿರುವದು ತೆಲುಗಿನಲ್ಲಿ ಕನ್ನಡದಲ್ಲಲ್ಲ. ತನ್ನ ಕಾವ್ಯಭಾಷೆ ಕಿವಿಗಿಂಪು ಮತ್ತು ಅರ್ಥದ ಸೊಗಸಿನಿಂದ ಕೂಡಿದುದು ಎಂದು ತಿಳಿಸುವುದೇ ಅವನ ಉದ್ದೇಶ.

ಸುಮಾರು ಕ್ರಿ.ಶ. ೯೦೦ರಲ್ಲಿದ್ದ ಕಾಶ್ಮೀರದ ಲಾಕ್ಷಣಿಕನಾದ ರಾಜಶೇಖರನು ತನ್ನ 'ಕಾವ್ಯ ಮೀಮಾಂಸಾ' ಎಂಬ ಗ್ರಂಥದಲ್ಲಿ ಕನ್ನಡಿಗರ ಓದುಗಾರಿಕೆಯನ್ನು ಹೀಗೆ ಕೊಂಡಾಡಿದ್ದಾನೆ-

ರಸಃ ಕೋಪ್ಯಸ್ತು ಕಾಪ್ಯಸ್ತು ರೀತಿಃ ಕೋಪ್ಯಸ್ತು ವಾ ಗುಣಃ
ಸಗರ್ವಂ ಸರ್ವಕರ್ಣಾಟಾಃ ಟಂಕಾರೋತ್ತರಪಾಠಿನಃ ॥

ಅಂದರೆ - ಎಲ್ಲ ಕನ್ನಡಿಗರೂ ಕನ್ನಡದ ಶ್ರೇಷ್ಠ ಕಾವ್ಯಗಳಲ್ಲಿ ಕಂಡುಬರುವ ರಸ, ರೀತಿ, ಗುಣ- ಇವು ಯಾವ ಬಗೆಯವೆಂಬುದನ್ನು ಅರಿತುಕೊಂಡು, ಟಂಕಾರದಿಂದ (ಬಹಳ ಅಭಿಮಾನದಿಂದ) ಓದತಕ್ಕವರು. ಇಂದು ಹಾಗೆ ಓದುತ್ತಾರೆಯೋ? ಎಂದು ನಾವು ಪ್ರಶ್ನಿಸಿ, ಏಕೆ ಓದುವುದಿಲ್ಲ? ಎಂಬುದಕ್ಕೆ ಕಾರಣಗಳನ್ನು ಕಂಡು, ತೊಂದರೆಗಳನ್ನು ಪರಿಹರಿಸಿ, ಕನ್ನಡಕ್ಕೆ ಮೆರೆಯಲು ದಾರಿಮಾಡಬೇಕಾಗಿದೆ.

ಕನ್ನಡನುಡಿ ಕಿವಿಗಿಂಪು ಮಾತ್ರವಲ್ಲ, ಸುಂದರವೂ ಅರ್ಥಗ್ರಹಣಕ್ಕೆ ಸುಲಭವೂ ಆದುದೆಂದು ಮಹಲಿಂಗರಂಗನು ತನ್ನ 'ಅನುಭಾವಮೃತ' ಎಂಬ ತಾತ್ತ್ವಿಕಗ್ರಂಥದಲ್ಲಿ ಹೀಗೆ ಹೇಳಿದ್ದಾನೆ

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರುವ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ, ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು?

ಕನ್ನಡ ಎಷ್ಟು ಸುಲಭವೆಂದರೆ - ಸುಲಿದ ಬಾಳೆಯ ಹಣ್ಣಿನಂತೆ; ಸಿಪ್ಪೆ ತೆಗೆದ ಕಬ್ಬಿನ ಹಾಗೆ; ಬಿಸಿಯಾರಿದ ಹಾಲಿನ ರೀತಿ. ಅಷ್ಟು ಸೊಗಸಾದುದು ಕನ್ನಡನುಡಿ. ಅಂತಹ ಕನ್ನಡದ ಮೂಲಕ ತತ್ತ್ವವನ್ನರಿತು ಮೋಕ್ಷವನ್ನು ಗಳಿಸಲು ಸಾಧ್ಯ. ಅದಕ್ಕಾಗಿ ಬಹಳ ಕಷ್ಟಪಟ್ಟು ಸಂಸ್ಕೃತವನ್ನು ಕಲಿತೇ ಆಗಬೇಕೆಂದೇನೂ ಇಲ್ಲ -ಎಂದು ಇಲ್ಲಿ ಅಭಿಪ್ರಾಯ. ಮುದ್ದಣಕವಿ ತನ್ನ ರಾಮಾಶ್ವಮೇಧ ಕಾವ್ಯದಲ್ಲಿ 'ಕನ್ನಡಂ ಕತ್ತುರಿಯಲ್ತೆ? ಎಂಬ ಮಾತಿನಿಂದ ಮನೋರಮೆಯ ಮೂಲಕ ಕನ್ನಡದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾನೆ. ದಿವಂಗತ ರಾಷ್ಟ್ರಕವಿ ಗೋವಿಂದ ಪೈಯವರು 'ಕನ್ನಡ ತಾಯಿ' - ಎಂಬ ಕವಿತೆಯಲ್ಲಿ ಹೇಳಿದುದು ಹೀಗೆ - ಕಸ್ತೂರಿಮೃಗವು ತನ್ನ ಮೈಯಲ್ಲೇ ಸುವಾಸನೆಯಿದ್ದರೂ ತಿಳಿದುಕೊಳ್ಳಲಾರದೆ, ಆ ಪರಿಮಳವನ್ನು ಹೊರಗೆ ಹುಡುಕುವಂತೆ, ಪರಭಾಷೆಗೆ ಮರುಳಾಗಿ ನಮ್ಮ ಭಾಷೆಯನ್ನು ಕಡೆಗಣಿಸುವ ನಮ್ಮ ಪಾಡಾಗಿದೆ. ಇದು ಸಲ್ಲದು. ಕನ್ನಡ ಕಸ್ತೂರಿಪರಿಮಳವನ್ನು ಎತ್ತೆತ್ತಲೂ ನಾವು ಹರಡಿಸಬೇಕು. ಹೀಗೆಂದಿರುವ ಅವರು ನಮ್ಮ ಬಾಳಿನ ಮಂತ್ರವಾಗಿ ಹೀಗೆಂದಿದ್ದಾರೆ -

'ತನು ಕನ್ನಡ ಮನ ಕನ್ನಡ ನುಡಿ ಕನ್ನಡವೆಮ್ಮವು'

ರಾಷ್ಟ್ರಕವಿ ಕುವೆಂಪು ಅವರ ಕವನದ ನುಡಿಗಳಿವು -

ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನಡತನವೊಂದಿದ್ದರೆ ನೀ ನಮ್ಮಗೆ ಕಲ್ಪತರು.'

ಕನ್ನಡದ ಕಣ್ವ ಬಿ.ಎಂ. ಶ್ರೀ ಕಂಠಯ್ಯನವರ ಘೋಷಣೆಯ ನುಡಿಮುತ್ತುಗಳಿವು -

ಬಾಳ್ ಕನ್ನಡ ತಾಯ್
ಏಳ್ ಕನ್ನಡ ತಾಯ್
ಆಳ್ ಕನ್ನಡ ತಾಯ್
ಕನ್ನಡಿಗರೊಡತಿ ಓ ರಾಜೇಶ್ವರೀ ॥

ಭಾಷೆಯ ದೃಷ್ಟಿಯಿಂದ ಪರಿಶೀಲಿಸಿದರೆ, ವಿಶೇಷ ಗೌರವಾರ್ಹವೆನಿಸುವ ಎಲ್ಲ ಲಕ್ಷಣಗಳೂ ನಮ್ಮ ಕನ್ನಡಕ್ಕಿವೆ. ಈ ಭಾಷೆ ವ್ಯಾವಹಾರಿಕವೂ ಆಗಿದೆ; ಗ್ರಾಂಥಿಕವೂ ಆಗಿದೆ. ಶಬ್ದಸಂಪತ್ತು ಳ್ಳುದಾಗಿದ್ದು, ಸಾಲದುದಕ್ಕೆ ಸಂಸ್ಕೃತದಿಂದ ನೇರವಾಗಿಯೂ ತದ್ಭವಗೊಳಿಸಿಯೂ ಶಬ್ದಗಳನ್ನು ಸ್ವೀಕರಿಸುವ ಲಾಕ್ಷಣಿಕ ನಿಯಮ ಕನ್ನಡಕ್ಕಿದೆ. ಇದಲ್ಲದೆ, ಅತ್ಯವಶ್ಯವಾದಾಗ ಅನ್ಯದೇಶಿ (ಇಂಗ್ಲೀಷ್, ಹಿಂದಿ) ಶಬ್ದಗಳನ್ನು ತುಸು ಮಾರ್ಪಡಿಸಿಯೂ ತೆಗೆದುಕೊಳ್ಳುತ್ತಿದೆ. ಆದುದರಿಂದ ಯಾವ ಅಭಿಪ್ರಾಯವನ್ನು ವ್ಯಕ್ತಗೊಳಿಸಲೂ ಶಬ್ದದಾರಿದ್ರ್ಯ ಕನ್ನಡಕ್ಕಿಲ್ಲ.

ಕನ್ನಡವು ಸಂಸ್ಕೃತದಂತೆಯೇ ಧ್ವನಿಯುಕ್ತ ಭಾಷೆ (Phonetic Language). ಈ ಭಾಷೆಯಲ್ಲಿ ಲಿಖಿತರೂಪವೂ ಉಚ್ಚಾರಣವೂ ಒಂದೇ. ಈ ಯೋಗ್ಯತೆ ಅನೇಕ ಭಾಷೆಗಳಿಗಿಲ್ಲ. ಉದಾ: ಇಂಗ್ಲೀಷಿನಲ್ಲಿ ವರ್ಷ ಎಂಬ ಅರ್ಥದ ಈಯರ್ ಎಂಬುದನ್ನು ಬರೆಯಲು ವೈ ಇ ಎ ಆರ್ (Year) ಎಂಬ ನಾಲ್ಕು ಅಕ್ಷರಗಳು ಬೇಕು. ಅದೇ ಉಚ್ಚಾರಣೆಯ ಕಿವಿ ಎಂಬ ಅರ್ಥದ ಶಬ್ದಕ್ಕೆ ಇ ಎ ಆರ್ (Ear) ಎಂಬ ಮೂರಕ್ಷರ ಮಾತ್ರ. Put-ಪುಟ್ ಆದರೆ, But ಎಂಬುದು ಬುಟ್ ಆಗುವುದಿಲ್ಲ. ಬಟ್ ಆಗುತ್ತದೆ. ಹಿಂದೀ ಭಾಷೆಯಲ್ಲಿ ಶಬ್ದಗಳ ಕೊನೆಯ ಮತ್ತು ಮೂರಕ್ಷರ ಶಬ್ದಗಳ ನಡುವಣ ಪ್ರಸ್ವಕ್ಕೆ ಅರ್ಧಾಕ್ಷರದ ಉಚ್ಚಾರಣೆ. ಉದಾ: ಪುಸ್ತಕ ಎಂಬುದನ್ನು ಪುಸ್ತಕ್ ಎಂದು ಓದಬೇಕು; ಕಪಡಾ ಎಂಬುದನ್ನು ಕಪ್‌ಡಾ ಎಂದೋದಬೇಕು. ತಮಿಳಿನಲ್ಲಿ ಗಾಂಧಿ ಎಂದು ಓದಬೇಕಾದಲ್ಲಿ ಬರೆದಿರುವುದು 'ಕಾಂತಿ' ಎಂದು. ಈ ತೊಂದರೆಗಳು ಕನ್ನಡಕ್ಕಿಲ್ಲ; ಬರೆದಂತೆಯೇ ಓದಬೇಕು. ಆದುದರಿಂದ ಕನ್ನಡ ಅಕ್ಷರಾಭ್ಯಾಸವಾದರೆ ಸಾಕು, ಕನ್ನಡದ ಯಾವ ಪುಸ್ತಕವನ್ನೂ ಓದಬಹುದು.

ಕನ್ನಡದಲ್ಲಿ ಸಾಹಿತ್ಯಸಮೃದ್ಧಿಯಿದೆ. ಪದ್ಯರಚನೆಯಲ್ಲಿ ಛಂದೋವೈವಿಧ್ಯಕ್ಕೂ ಕನ್ನಡ ಹೆಸರಾದುದು. ಬಗೆಬಗೆಯ ಅಕ್ಷರವೃತ್ತಗಳು, ಕಂದ, ರಗಳೆಗಳು, ಷಟ್ಪದಿಗಳು, ಸಾಂಗತ್ಯ, ತ್ರಿಪದಿ, ವಿವಿಧ ರಾಗತಾಳಗಳಿಗೆ ಒಡಂಬಡುವ ಕೀರ್ತನೆಗಳು, ಯಕ್ಷಗಾನ ಪದಗಳು, ಶೋಭಾನ ಗೀತಗಳು - ಕನ್ನಡ ಹೇಗೆ ವಿವಿಧ ಛಂದಸ್ಸಿಗೆ ಒಗ್ಗುವ ಭಾಷೆಯಾಗಿದೆ ಎಂಬುದಕ್ಕೆ ಸಾಕ್ಷ್ಯಗಳಾಗಿವೆ. ಇವುಗಳಲ್ಲೆಲ್ಲ ನಾನಾ ಶಬ್ದಾಲಂಕಾರಗಳು, ಗೂಢಾರ್ಥದ ಧ್ವನಿಕಾವ್ಯಗುಣಗಳು ಹಾಸುಹೊಕ್ಕಾಗಿವೆ. ಪದ್ಯರಚನೆಯಲ್ಲಿ ಕನ್ನಡಕ್ಕೆ ಮಾತ್ರ ವಿಶಿಷ್ಟವಾಗಿ ಕನ್ನಡಸಾಹಿತ್ಯದ ಹಿರಿಮೆಯನ್ನು ಮುಗಿಲು ಮುಟ್ಟಿಸತಕ್ಕ ದ್ವಿತೀಯಾಕ್ಷರಪ್ರಾಸ, ಅನುಪ್ರಾಸ ಯಮಕಗಳು ಕನ್ನಡ ಸರಸ್ವತಿಯ ಮಾಂಗಲ್ಯಸೂಚಕಗಳಾಗಿವೆ. ಇಂತಹ ಕನ್ನಡವನ್ನು ತಮ್ಮ ನುಡಿಯನ್ನಾಗಿ ಮಾಡಿಕೊಂಡ

ಪ್ರಾಚೀನರಾದ ಕನ್ನಡಿಗರು ಹೇಗಿದ್ದರೆಂಬುದನ್ನು ಒಂಬತ್ತನೆಯ ಶತಮಾನದಲ್ಲಿ ರಚಿತವಾದ ಕವಿರಾಜಮಾರ್ಗ ಗ್ರಂಥದಲ್ಲಿ ಹೇಳಿರುವುದನ್ನು ಕೇಳಬೇಕು-

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ (೧-೩೮)

ಅಂದರೆ ಕನ್ನಡಿಗರು, ಹದವನ್ನರಿತು ನುಡಿವವರು, ನುಡಿದುದನ್ನು ಅರ್ಥಮಾಡಿ ತಿಳಿದು ವಿಮರ್ಶಿಸತಕ್ಕವರು, ಕವಿತಾ ಚಾತುರ್ಯವುಳ್ಳವರು, ವಿಶೇಷೋದ್ದೇಶವನ್ನಿಟ್ಟು ಓದದವರೂ ಕಾವ್ಯ ರಚಿಸುವಷ್ಟು ಪರಿಣತವಾದ ಬುದ್ಧಿ ಶಕ್ತಿಯುಳ್ಳವರು. ಈ ಸಂಗತಿ ನಮಗೆ ಅಭಿಮಾನಕರ ವಲ್ಲವೇ ? ಈಗ ನಾವು ಇನ್ನೂ ಮುಂಬರಿದವರಾಗಬೇಕಿತ್ತು. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಏಳಿಗೆಗೆ ಕನ್ನಡ ಜಾಗೃತಿ ಅತ್ಯಂತ ಆವಶ್ಯಕವೆನಿಸುವುದಲ್ಲವೇ?

□

೩

ಕನ್ನಡ - ಸಂಸ್ಕೃತ ಭಾಷಾಬಾಂಧವ್ಯ

ಮಾನವನಿಗೆ ಪ್ರಕೃತಿದತ್ತವಾದ ಅಥವಾ ದೈವಾನುಗ್ರಹೀತವಾದ ಶಕ್ತಿಗಳಲ್ಲಿ ಪ್ರಮುಖವಾದುದು ಭಾಷೆ. ಅಂದರೆ, ಅವನು ಮಾತಾಡಬಲ್ಲನು. ಅಷ್ಟೇ ಅಲ್ಲ; ಮಾತನ್ನು, ಮಾತಿನ ಮೂಲಕ ಅನುಭವವನ್ನು, ಸಂದೇಶವನ್ನು ಬರೆಹದ ಮೂಲಕ ಇತರರಿಗೆ - ದೇಶ ಕಾಲಗಳ ದೂರವನ್ನು ಲೆಕ್ಕಿಸದೆ, ದಾಟಿಸಬಲ್ಲನು. ಇಂತಹ ಶಕ್ತಿಯಿಂದಲೇ ನಮ್ಮ ಪೂರ್ವಿಕರ ಅನುಭವಗಳು, ಚಿಂತನೆಗಳು, ತತ್ತ್ವವಿಚಾರಗಳು ಕೃತಿಗಳ ನವೀನಸೃಷ್ಟಿಗಳೂ ಆಗುತ್ತಿವೆ ಎನ್ನಬಹುದು. ಆದರೆ ಅಂತಹ ಮಾತು ಅಥವಾ ಭಾಷೆ ಪ್ರಚಲಿತವಾಗಿರುವುದು ಒಂದೇ ಅಲ್ಲ; ಅದು ಅಸಂಖ್ಯ. ಹೀಗೆ ಭಾಷೆ ಬಹುಸಂಖ್ಯಾಕವಾಗಲು ಕಾರಣಗಳೇನು? ಭಟ್ಟಾಕಲಂಕನು ತನ್ನ ಶಬ್ದಾನುಶಾಸನದಲ್ಲಿ (೧೬೦೪) ಹೇಳಿರುವಂತೆ ವಿವರವಿದು -

ಮೂಲಭಾಷೆಯಾಗಿದ್ದುದು ಭಗವದ್ವಾಣಿ. ಅದು ಸಮುದ್ರ ಘೋಷದಂತೆ ಒಂದೇ ಆಗಿದ್ದರೂ ಅದನ್ನು ಕೇಳಿದ ಜನವರ್ಗದ ಶ್ರವಣ ಮತ್ತು ಅಭಿವ್ಯಂಜನ ಶಕ್ತಿಗನುಗುಣವಾಗಿ ಅಸಂಖ್ಯಭಾಷೆಗಳಾದವು. ಆಕಾಶದಿಂದ ಬಿದ್ದ ಮಳೆನೀರು ಒಂದೇ ಆದರೂ ಅದನ್ನು ಹೀರಿದ ಸಸ್ಯಗಳ ಪ್ರಕೃತಿಗೆ ಅನುಸಾರವಾಗಿ ಬೇರೆ ಬೇರೆ ಬಗೆಯ ಫಲಪುಷ್ಪಗಳಾಗುವುದನ್ನು ಇದು ಹೋಲುವುದು. ಅಂತಹ ಭಾಷೆಗಳ ಸಂಖ್ಯೆಯನ್ನು ಶಬ್ದಾನುಶಾಸನಕಾರನು ಅಷ್ಟಾದಶ (ಹದಿನೆಂಟು) ಮಹಾಭಾಷೆಗಳೆಂದೂ ಸಪ್ತಶತ (ಏಳ್ನೂರು) ಕುಲ್ಲಕಭಾಷೆಗಳೆಂದೂ ಲೆಕ್ಕಹಾಕಿದ್ದಾನೆ. ಈಗಿನ ಭಾಷಾಶಾಸ್ತ್ರಜ್ಞರು ಪ್ರಪಂಚದಲ್ಲಿ ಪ್ರಚಲಿತವಾಗಿರುವ ಭಾಷಾಸಂಖ್ಯೆಯನ್ನು ಸುಮಾರು ಮೂರು ಸಾವಿರವೆಂದು ಪರಿಗಣಿಸಿದ್ದಾರೆ. ಶಬ್ದಾನುಶಾಸನದಲ್ಲಿ ಹೇಳಿದ ಈ ಮಹಾಭಾಷೆಗಳಲ್ಲಿ ಸಂಸ್ಕೃತವೂ ಕನ್ನಡವೂ ಸೇರಿವೆಯಲ್ಲದೆ, ಅನೇಕ ವಿಚಾರಗಳಲ್ಲಿ ಕನ್ನಡವು ಸಂಸ್ಕೃತವನ್ನು ಮೀರಿಸುವುದಾಗಿ ಭಟ್ಟಾಕಲಂಕನ ವಿವರಣೆಗಳಿವೆ. ಇವೆರಡರ ಬಾಂಧವ್ಯ ಯಾವ ಬಗೆಯದೆಂಬುದನ್ನಿಲ್ಲಿ ಪರಿಶೀಲಿಸಬೇಕಾಗಿದೆ.

ಕನ್ನಡ ಮತ್ತು ಸಂಸ್ಕೃತ ಎಂಬಿವೆರಡೂ ಧ್ವನಿಯುಕ್ತ ಭಾಷೆಗಳು. ಅಂದರೆ ಅಕ್ಷರಕ್ಕೆ ಅನುಗುಣವಾಗಿ ಶುದ್ಧವಾದ ಉಚ್ಚಾರಣೆಯುಳ್ಳವು. ಬರೆದಂತೆ ಓದಿಸಿಕೊಳ್ಳತಕ್ಕುವು. ಉದಾ: ಇಂಗ್ಲೀಷ್ ನಲ್ಲಿ ಪಿ + ಯು + ಟಿ - ಪುಟ್, ಸಿ + ಯು + ಟಿ - ಕಟ್, ಇ + ಎ + ಆರ್ - ಈಯರ್ ಅಂದರೆ ಕಿವಿ; ಆದರೆ ವೈ + ಇ + ಎ + ಆರ್ - ಈಯರ್

ಅಂದರೆ 'ವರ್ಷ' ಎಂದರ್ಥ. ತಮಿಳಿನಲ್ಲಿ ಗಾಂಧಿ ಎಂಬುದನ್ನು ಕಾಂತಿ ಎಂದು ಬರೆಯಬೇಕಷ್ಟೆ. ಏಕೆಂದರೆ ಆ ಭಾಷೆಯಲ್ಲಿ ಆ ವರ್ಗಾಕ್ಷರಗಳಿಲ್ಲ. ಇಂತಹ ತೊಡಕುಗಳು ಕನ್ನಡಕ್ಕೂ ಇಲ್ಲ, ಸಂಸ್ಕೃತಕ್ಕೂ ಇಲ್ಲ. ಆದುದರಿಂದ ಇವೆರಡೂ ಶ್ರೇಷ್ಠ ಭಾಷೆಗಳು.

'ಸಂಸ್ಕೃತ' ಎಂಬ ಶಬ್ದವೇ ನಿರೂಪಿಸುವಂತೆ ಅದು ಸಂಸ್ಕಾರಗೊಂಡಿರುವ ಭಾಷೆ. ಅದನ್ನು ದೇವಭಾಷ ಅಥವಾ ಗೀರ್ವಾಣಭಾಷೆ ಎಂದೂ ಕರೆಯಲಾಗಿದೆ. ವಿಶ್ವದಲ್ಲೇ ಪ್ರಾಚೀನ ಸಾಹಿತ್ಯಗಳಾದ ವೇದೋಪನಿಷತ್ತುಗಳು, ಪುರಾಣಗಳು, ರಾಮಾಯಣ- ಮಹಾಭಾರತ ಕಾವ್ಯಗಳು, ಆಯುರ್ವೇದ - ಜ್ಯೋತಿಷ್ಯ ಮುಂತಾದುವು ಸಂಸ್ಕೃತದಲ್ಲೇ ಮೊದಲು ರಚಿತವಾಗಿವೆ. ಅಂತಹ ಸಂಸ್ಕೃತಕ್ಕೆ ಅದರದೇ ಆದ ನಿರುಕ್ತ, ವ್ಯಾಕರಣ, ನಿಘಂಟು ಮುಂತಾದ ಪ್ರಯೋಗ ನಿಶ್ಚಿತತೆಗಳು ರೂಢಿವಡೆದಿವೆ. ಆದುದರಿಂದಲೇ ಸಂಸ್ಕೃತದಲ್ಲಿ ವ್ಯಾವಹಾರಿಕ ಭಾಷೆ, ಗ್ರಾಂಥಿಕ ಭಾಷೆ ಎಂಬ ಪ್ರಭೇದವಿಲ್ಲ. ಅದರಲ್ಲಿರುವ ಶಬ್ದಸಂಪತ್ತು ಇತರ ಯಾವ ಭಾಷೆಯಲ್ಲಿಯೂ ಇರದು. ಒಂದು ಉದಾಹರಣೆ ಕೊಡುವುದಾದರೆ - ಎಲ್ಲ ಜೀವಿಗಳಿಗೂ ಪ್ರಾಣಧಾರಣೆಗೆ ಉಪಯುಕ್ತವಾಗಿರುವ ನೀರು ಎಂಬುದಕ್ಕೆ ಅಚ್ಚಗನ್ನಡದಲ್ಲಿ ಕಾಣುವದು ಇದೊಂದೇ ಶಬ್ದ. ಸಂಸ್ಕೃತದಲ್ಲಾದರೆ ಅದೇ ಶಬ್ದ ನೀರಂ ಎಂಬ ರೂಪದಲ್ಲಿರುವುದಲ್ಲದೆ ಅಂಬು, ವಾರಿ, ಜಲ, ತೋಯ ಮುಂತಾಗಿ ೨೭ ಶಬ್ದಗಳನ್ನು ಅಮರಕೋಶದಲ್ಲಿ ಹೇಳಲಾಗಿದೆ. ನಾನಾರ್ಥಗಳುಳ್ಳ ಶಬ್ದಗಳು ಸಂಸ್ಕೃತದಲ್ಲಿರುವಷ್ಟು ಬೇರೆ ಕಡೆ ಕಾಣಸವು. ಸಂಸ್ಕೃತಭಾಷೆಯ ಶಬ್ದಗಳು ಇತರ ಎಲ್ಲಾ ಭಾಷೆಗಳ ಶ್ರೀಮಂತಿಕೆಗೂ ಕಾರಣವಾಗಿರುವುದು ಪರಿಶೀಲನೆಯಿಂದ ಗೊತ್ತಾಗುವುದು. ಅಂತಹ ಸಂಸ್ಕೃತವನ್ನು 'ಮೃತಭಾಷೆ' ಎನ್ನುವವರೂ ಇದ್ದಾರೆ! ಹಾಗೆನ್ನುವವರು ತಮ್ಮ ವಾಕ್ಯದಲ್ಲಿ ಪ್ರಯೋಗಿಸಿದ ಮೃತ ಮತ್ತು ಭಾಷೆ ಎಂಬ ಎರಡೂ ಶಬ್ದಗಳು ಸಂಸ್ಕೃತವೇ ಆಗಿರುವುದನ್ನು ತಿಳಿಯದವರಾಗಿರುತ್ತಾರೆ.

ಕನ್ನಡವು ದ್ರಾವಿಡ (ಅಂದರೆ, ದಕ್ಷಿಣಭಾರತದ) ಭಾಷಾ ವರ್ಗದಲ್ಲಿ ಒಂದಾಗಿದೆ. ಈ ಭಾಷೆಗೆ ವ್ಯಾವಹಾರಿಕ ಮತ್ತು ಗ್ರಾಂಥಿಕ ಎಂಬ ಎರಡು ರೂಪಗಳುಂಟು. ಗ್ರಾಂಥಿಕರೂಪವನ್ನು ಶಿಷ್ಟಭಾಷೆ ಎಂತಲೂ ವ್ಯಾವಹಾರಿಕವನ್ನು ಜಾನಪದ ರೂಪವೆಂದೂ ಹೇಳುವರು. ಗ್ರಾಂಥಿಕ ಭಾಷೆಗೆ ಬಹುರೂಪವಿಲ್ಲ. ಅದು ಅಧ್ಯಯನಕ್ಕೆ, ವಿದ್ಯಾಲಯಗಳಲ್ಲಿ ಬೋಧನೆಗೆ ಮತ್ತು ಶಿಷ್ಟ ಸಾಹಿತ್ಯರಚನೆಗೆ ಬಳಸತಕ್ಕುದಾಗಿದೆ. ಅದಕ್ಕೆ ವ್ಯಾಕರಣಮರ್ಯಾದೆಯೂ ಇರುತ್ತದೆ. ಜಾನಪದ ಭಾಷೆಗೆ ಅಂತಹ ಕಟ್ಟುನಿಟ್ಟೇನೂ ಇಲ್ಲದಿರುವುದರಿಂದ ಅದು ಪ್ರಾದೇಶಿಕ ಮತ್ತು ಜಾಗತಿಕ ಭಿನ್ನತೆಗಳಿಂದ ಬಹುರೂಪವಾಗಿರುತ್ತದೆ. ಅಂತಹ ಭಿನ್ನತೆ ಎಷ್ಟರ ಮಟ್ಟಿಗೆ ಇರುತ್ತದೆಂದರೆ ಒಂದು ಕಡೆಯ ಕನ್ನಡ ಇನ್ನೊಂದೆಡೆಯವರಿಗೆ ಅರ್ಥವಾಗದೆಯೂ ಹೋಗಬಹುದು. ಆದರೆ, ಶಿಷ್ಟ ಕನ್ನಡವೆಂಬುದು ಏಕರೂಪವುಳ್ಳುದಾಗಿ ವ್ಯಾಕರಣ ನಿಯಮಗಳಿಗೆ ಅನುಗುಣವಾಗಿ ಪರಿಪಕ್ವತೆ - ಪರಿಶುದ್ಧತೆಗಳಿಂದ ಒಪ್ಪುವದು. ಪ್ರಕೃತ, ಕನ್ನಡ ಸಂಸ್ಕೃತ ಭಾಷಾಬಾಂಧವ್ಯ ಸಮೀಕ್ಷೆಯಲ್ಲಿ ಶಿಷ್ಟ ಕನ್ನಡವೇ ಲಕ್ಷ್ಯಾರ್ಹವೆನ್ನಬಹುದು.

ಕನ್ನಡ ಎಂಬ ಶಬ್ದ ಉಚ್ಚಾರಣೆಯಲ್ಲಿ ಕನ್ನಡಿಯನ್ನು ನೆನಪಿಗೆ ತರುತ್ತದೆ. ಸ್ವಚ್ಛತೆಗೆ, ಪ್ರತಿಬಿಂಬತೆಗೆ ಕನ್ನಡಿ ಹೆಸರಾದುದಷ್ಟೆ? ಅದರಂತೆ ಸ್ವಚ್ಛವಾದ, ಕಿವಿಗಿಂಪಾದ, ಉಚ್ಚಾರಣೆಗೆ ಸುಕರವಾದ, ಭಾವ ಪ್ರಕಟನೆಗೆ ಸೊಗಸಾದ, ಸವಿಯಾದ ನುಡಿ ಕನ್ನಡ. ಇದರ ಮೂಲವನ್ನು ಕಮ್ಮಿತು ನಾಡು (ಗಂಧದ ಮರಗಳಿಂದಲೂ ಪರಿಮಳಿಸುವ ಹೂಗಳಿಂದಲೂ ಶೋಭಿಸುವ ನಾಡು) ಎಂತಲೂ ಕರು + ನಾಡು (ಕರು-ಎತ್ತರವಾದ, ಹಿರಿಮೆಯುಳ್ಳ) ಎಂತಲೂ ಸಂಶೋಧಕರು ಹೇಳಿದ್ದಾರೆ. ಕನ್ನಡ ಎಂಬುದರ ಸಂಸ್ಕೃತರೂಪ 'ಕರ್ಣಾಟಕ' ಕರ್ಣೇ + ಅಟತಿ ಅಂದರೆ, ಶಬ್ದ ಸೌಂದರ್ಯ ಅರ್ಥಮಾಧುರ್ಯಗಳಿಂದ ಕಿವಿಗಳಲ್ಲಿ ಸಂಚರಿಸುವಂತಹುದು ಎಂದು ಸರಿಯಾದ ಅರ್ಥಮಾಡಿರುತ್ತಾರೆ. ಆದರೆ - ಪ್ರಾಂತರಚನೆಯಾಗುವಾಗ ಧಾರವಾಡ ಕಡೆಯ ಉಚ್ಚಾರಣೆಯನ್ನು ಮಾನ್ಯಮಾಡಿಕೊಂಡು ಈ ನಾಡಿಗೆ ಮತ್ತು ಭಾಷೆಗೆ 'ಕರ್ನಾಟಕ' ಎಂದು ಶಬ್ದರೂಪವನ್ನು ಮಾಡಿಕೊಳ್ಳಲಾಗಿದೆ. ಇಂತಹ ಶಿಷ್ಟ ಕನ್ನಡದಲ್ಲಿ ಸಂಸ್ಕೃತಶಬ್ದಗಳು ಸಮಸಂಸ್ಕೃತರೂಪದಿಂದ ಧಾರಾಳವಾಗಿ ಬಳಕೆಯಾಗುತ್ತಿವೆ.

ಕನ್ನಡದ ಎಷ್ಟೋ ಶಬ್ದಗಳು ಸಂಸ್ಕೃತದಲ್ಲಿ ಸೇರಿಕೊಂಡುದನ್ನು ಕಾಣಬಲ್ಲೆವು. 'ನೀರು' ಎಂಬುದು ಅಲ್ಲಿ 'ನೀರಂ' ಎಂದಾಗಿದೆ. ಕೇಶಿರಾಜನು (೧೨೬೦) ತನ್ನ ಶಬ್ದಮಣಿದರ್ಪಣದಲ್ಲಿ ಕನ್ನಡದ ಶಬ್ದ ಭೇದವನ್ನು ದೇಶಿ (ಅಚ್ಚಗನ್ನಡ), ತದ್ಭವ (ಸಂಸ್ಕೃತದಿಂದ ಮಾರ್ಪಾಡಾಗಿಬಂದವು), ಸಮಸಂಸ್ಕೃತ (ಕನ್ನಡದ ಪ್ರತ್ಯಯಗಳನ್ನು ಹಚ್ಚುವಷ್ಟು ಮಾತ್ರ ಮಾರ್ಪಾಡಾದ ಸಂಸ್ಕೃತಶಬ್ದಗಳು), ಮತ್ತು ತತ್ಸಮ ಶಬ್ದಗಳು ಎಂದು ನಾಲ್ಕು ಬಗೆಯವಾಗಿ ಹೇಳಿದ್ದೇನೆ. ಇತ್ತೀಚೆಯ ವಿದ್ವಾಂಸರು ಅನ್ಯದೇಶಿ (ಇಂಗ್ಲೀಷ್, ಹಿಂದಿ, ಫಾರ್ಸಿ ಮುಂತಾದ ಪರಭಾಷಾಶಬ್ದಗಳು) ಎಂಬುದನ್ನೂ ಸೇರಿಸಿಕೊಂಡಿದ್ದಾರೆ. ಇವುಗಳಲ್ಲಿ 'ತತ್ಸಮ' ಶಬ್ದಗಳು ಉಭಯಭಾಷೆಗಳಿಗೂ ಸಮವಾಗಿರುವವು. ಅವು ಸಂಸ್ಕೃತವೂ ಹೌದು, ಕನ್ನಡವೂ ಹೌದು ಎಂಬಂತಿರುವುವು. ಕೇಶಿರಾಜನು ಮಣಿ, ಮಂಚ, ಪಟ್ಟ, ಗೋಣಿ - ಮುಂತಾದ ಇಪ್ಪತ್ತೊಂದು ಶಬ್ದಗಳನ್ನು ತತ್ಸಮ ಶಬ್ದಗಳು ಎಂದಿದ್ದಾನೆ. ಕನ್ನಡದ ವ್ಯಾಕರಣದ ಪ್ರಕಾರ, ಸಂಸ್ಕೃತವನ್ನು ಕನ್ನಡದೊಡನೆ ಬೆರಸಿ ಸಮಾಸಮಾಡಬಾರದು. ಅದು ಅರಿಸಮಾಸವೆನಿಸುವುದು. ಆದರೆ 'ತತ್ಸಮ ಶಬ್ದಗಳು' ಉಭಯ ಭಾಷೆಗಳಲ್ಲಿಯೂ ನಿರ್ದೋಷವಾಗಿ ಸಮಾಸಪದಗಳಾಗುತ್ತವೆ. ಸಂಸ್ಕೃತ ಶಬ್ದ ಭಂಡಾರವನ್ನು ನೋಡಿದರೆ, ಇನ್ನೂ ನೂರಾರು ಕನ್ನಡ ಶಬ್ದಗಳು ತುಸುಮಾರ್ಪಾಡಿನಿಂದ ಸಂಸ್ಕೃತದಲ್ಲಿ ಸೇರಿ, ಸಂಸ್ಕೃತವೇ ಎಂಬಂತೆ ಆಗಿರುವುದನ್ನು ನಾವು ಕಾಣಬಲ್ಲೆವು. ಕಿಟ್ಟೆಲ್ಲರ ಶಬ್ದಕೋಶವನ್ನು ನೋಡಿದರೆ - ಅದರಲ್ಲಿ ೪೨೦ ಸಂಸ್ಕೃತ ಶಬ್ದಗಳನ್ನು ದ್ರಾವಿಡ ಭಾಷಾಮೂಲದವೆಂದು ಗುರುತಿಸುವುದು ಕಂಡುಬರುತ್ತದೆ. ಮಾತು ಎಂಬ ಕನ್ನಡ ಶಬ್ದವನ್ನು ಸಂಗೀತಶಾಸ್ತ್ರ ನಿರೂಪಣೆಯ ಸಂಸ್ಕೃತಗ್ರಂಥದಲ್ಲಿ ಸಂಸ್ಕೃತವೆಂದೇ ಪರಿಗಣಿಸಲಾಗಿದೆ. 'ಧಾತು ಮಾತು ಸಮಾಯುಕ್ತಂ ಗೀತಮಿತ್ಯುಚ್ಯತೇ ಬುಧೈಃ' 'ಧಾತು' ಎಂದರೆ - ಸರಿಗಮಾದಿ ಸ್ವರರಚನೆ. ಮಾತು ಎಂದರೆ ಸಾಹಿತ್ಯ. ಹೀಗೆ ಸಂಸ್ಕೃತ ಭಾಷೆ ನಮ್ಮ ಕನ್ನಡದಿಂದ ತನ್ನ ಶಬ್ದಸಂಪತ್ತನ್ನು ಹೆಚ್ಚಿಸಿಕೊಂಡಿರುವುದು ವೇದ್ಯವಾಗುವ ಸಂಗತಿಯಾಗಿದೆ.

ಸಂಸ್ಕೃತದಿಂದ ಕನ್ನಡಕ್ಕೆ ಆಗಿರುವ ಶಬ್ದೋಪಯೋಗ ಅಷ್ಟಿಷ್ಟಲ್ಲ. ಜನಸಾಮಾನ್ಯರಿಗೆ ಮಾತ್ರವಲ್ಲ. ವಿದ್ವಾಂಸರಿಗೆ ಕೂಡ ಇದು ಸಂಸ್ಕೃತ ಶಬ್ದ, ಇದು ಕನ್ನಡ ಶಬ್ದ ಎಂಬ ಅರಿವು ಆಗದಿರುವಷ್ಟು ಮಟ್ಟಿಗೆ ಕನ್ನಡದಲ್ಲಿ ಸಂಸ್ಕೃತದ ಬೆರಕೆಯಾಗಿದೆ. ಹಾಗೆ ಆಗುವಾಗ ಅಂತಹ ಶಬ್ದಗಳು ಸಮಸಂಸ್ಕೃತರೂಪ ತಾಳಿರುತ್ತವೆ. ಕನ್ನಡದ ಯಾವುದೇ ವಾಕ್ಯರಚನೆಯನ್ನು ನೋಡಿದರೆ ಆ ವಾಕ್ಯದ ಶಬ್ದಗಳಲ್ಲಿ ಹೆಚ್ಚಿನವೂ ಸಂಸ್ಕೃತವಾಗಿದ್ದು ಕನ್ನಡವೆಂಬಂತೆ ಭಾಸವಾಗುತ್ತದೆ. ಆದುದರಿಂದ ಸಂಸ್ಕೃತವನ್ನು ಬಿಟ್ಟು ಕನ್ನಡವನ್ನು ಬಳಸುವುದಾಗಲಿ, ಬೆಳಸುವುದಾಗಲಿ, ಆಗದ ಮಾತೇ ಸರಿ. ಕನ್ನಡದ ಕಾವ್ಯಗಳಲ್ಲಿ ಕನ್ನಡ ಶಬ್ದಗಳಿಗಿಂತ ಹೆಚ್ಚಾಗಿ ಸಂಸ್ಕೃತಶಬ್ದಗಳೇ ಇರುತ್ತವೆ. ಒಂದೆರಡು ಉದಾಹರಣೆಗಳಿವು. ಪಂಪನ ವಿಕ್ರಮಾರ್ಜುನವಿಜಯದ ಒಂದು ಪದ್ಯವಿದು -

ಚಳದನಿಳಾಹತ ಕ್ಷುಭಿತ ಭಂಗುರ ತುಂಗ ತರಂಗಮಾಲಿಕಾ
ವಳನ ಸಮುಚ್ಚಳನ್ಮಣಿಗಣಾತ್ತ ಮರೀಚಲತಾಪ್ರತಾನ ಸಂ
ವಳಯಿತ ವಿದ್ರುಮದ್ರುಮವಿಳಾಸ ವಿಶೇಷಿತ ಬಾಡಬಾನಳಾ
ವಿಳ ಜಳಮಂ ಮನಂ ಬಯಸಿ ನೋಡಿದನರ್ಣವಮಂ ಗುಣಾರ್ಣವಂ (೪-೨೫)

ಈ ಪದ್ಯದಲ್ಲಿ 'ಬಯಸಿ ನೋಡಿದಂ' ಎಂಬೆರಡು ಶಬ್ದಗಳು ಮಾತ್ರ ಕನ್ನಡವಾಗಿವೆ.

ಆಧುನಿಕ ಕನ್ನಡ ಕವಿಗಳೂ ತಮ್ಮ ಕಾವ್ಯಗಳಲ್ಲಿ ಸಂಸ್ಕೃತಶಬ್ದಗಳನ್ನೇ ತುಂಬುವುದರಲ್ಲೇನೂ ಹಿಂದುಳಿದಿಲ್ಲವೆಂಬುದಕ್ಕೆ ಉದಾಹರಣೆಗಳಿಲ್ಲಿವೆ -

ಜನಚರಣ ಚಲದ್ಧೂಳಿದೂರಂ ಮೃಗಖುರಾ
ಕ್ಷುಣ್ಣ ಶಾದ್ವಲ ಸುಂದರಂ ಜಲಪಾನತೃಪ್ತ
ಪಕ್ಷಿಪಾದಾಂಕಿತ ಶಿಲಾತಲಾ ಶೈವಾಲಚಿತ್ರಿತಂ
ವೃಕ್ಷ ಗುಲ್ಮವ್ರತತಿ ಸಂಯುತಂ

(ಕುವೆಂಪು-ಶ್ರೀ ರಾಮಾಯಣ ದರ್ಶನ)

ಇದರಂತೆ ಕವಿ ಪು.ತಿ.ನ. ಅವರ ಶ್ರೀ ಹರಿಚರಿತೆ ಎಂಬ ಮಹಾಕಾವ್ಯದ ಪ್ರಾರಂಭಪಂಕ್ತಿಗಳು ಹೀಗಿವೆ -

ಶ್ರೀ ಪುರುಷನನುಪಮನುದಾರನಖಿಲಾರ್ತಿ ಪ್ರಶಮನಂ
ರಸಮೂರ್ಜಸ್ವಿ ತೇಜೋಮಯಂ ಓಂ ತತ್ ಸತ್ ವಾಚ್ಯಂ
ಪ್ರಾಚ್ಯಂ ಸೃಷ್ಟ್ಯಾದಿಮೂಲಂ ಸ್ಥಿತಿಭರಣಾದಿ ಲೀಲಂ
ಸ್ವಸ್ಥಂ ಶಿವಂ ಸುಂದರಂ ಸರ್ವಾಂತರ್ಬಹಿಶ್ಚರಂ

ಇಂತಹ ಸಂಸ್ಕೃತಮಯವಾದ ಕನ್ನಡ ಕಾವ್ಯರಚನೆಗಳನ್ನು ನೋಡಿದಾಗ, ಈ ಕವಿಗಳು ಸಂಸ್ಕೃತದಲ್ಲೇ ಕನ್ನಡ ಕಾವ್ಯರಚನೆಗೆ ಬದ್ಧಕಂಕಣರಾದಂತೆ ತೋರುವುದು. ಸಂಸ್ಕೃತವನ್ನು ಬಿಟ್ಟರೆ ಕನ್ನಡಕ್ಕೆ ಗತಿಯಿಲ್ಲವೆಂಬಂತೆ ಇವರ ವರ್ತನೆಯೆ? ಹಾಗೆನ್ನಬಹುದೆ?

ಹೀಗಿದ್ದರೂ ಸಂಸ್ಕೃತ ಶಬ್ದಗಳನ್ನು ಬಳಸದೆ ಅಚ್ಚಗನ್ನಡದಲ್ಲಿ ಕಾವ್ಯರಚನೆ ಸಾಧ್ಯವೆಂಬುದನ್ನು ತೋರಿಸಿಕೊಟ್ಟ ಕನ್ನಡ ಕವಿಗಳೂ ಇದ್ದಾರೆ. ಅಂಥವರಲ್ಲಿ ಮೊದಲಿಗನಂತೆ ಆಂಡಯ್ಯನು ಅಚ್ಚಗನ್ನಡದಲ್ಲಿ ಅಂದರೆ ಸಂಸ್ಕೃತ ಶಬ್ದವನ್ನು ಬಳಸದೆ, ಕಬ್ಬಿಗರ ಕಾವ (ಕ್ರಿ.ಶ. ೧೨೩೫)

ಎಂಬ ಖಂಡಕಾವ್ಯವನ್ನು ರಚಿಸಿರುವುದು ಅಭಿಮಾನದ ಸಂಗತಿ. ಆಧುನಿಕ ಪಂಡಿತ ಕವಿಗಳಲ್ಲೊಬ್ಬರಾದ ಮುಳಿಯ ತಿಮ್ಮಪ್ಪಯ್ಯನವರು (೧೮೮೮-೧೯೫೦) ಅಚ್ಚಗನ್ನಡದಲ್ಲಿ ಸೊಬಗಿನ ಬಳ್ಳಿ ಎಂಬ ಕಾವ್ಯವನ್ನೂ ರಚಿಸಿದ್ದಾರೆ. ಆದರೆ, ಇವರಿಬ್ಬರೂ ಸಂಸ್ಕೃತಶಬ್ದಗಳನ್ನು ಪ್ರಯೋಗಿಸದಿದ್ದರೂ ತದ್ಭವಗಳನ್ನು ಯಥೇಚ್ಛವಾಗಿ ಬಳಸಿದ್ದಾರೆ. ತದ್ಭವ ಎಂದಾಗ ಅದು ಸಂಸ್ಕೃತಜನ್ಯವಾದರೂ ಅಚ್ಚಗನ್ನಡವೇ ಆಗಿದೆಯೆಂದಿಟ್ಟುಕೊಂಡಿದ್ದಾರೆ. ಇದಕ್ಕೆ ಅಪವಾದವೆಂಬಂತೆ ದಿ. ವಿದ್ವಾನ್ ಕೊಳಂಬೆ ಪುಟ್ಟಣ್ಣ ಗೌಡರು ತದ್ಭವರಹಿತವಾದ ಅಚ್ಚಗನ್ನಡದಲ್ಲಿ 'ಕಾಲೂರ ಚೆಲುವೆ' ಎಂಬ ಕಾವ್ಯವನ್ನು ರಚಿಸಿರುವುದು ೧೯೬೩ ರಲ್ಲಿ ಅಚ್ಚಾಗಿದೆ. ಹೀಗೆ ಪ್ರಾಯೋಗಿಕವಾಗಿ ಅಚ್ಚಗನ್ನಡದಲ್ಲೇ ಕೃತಿರಚನೆ ಮಾಡಬೇಕಾದರೂ ಅಂತಹ ಕವಿಗಳಿಗೆ ಚೆನ್ನಾಗಿ ಸಂಸ್ಕೃತ ಭಾಷೆಯಲ್ಲಿ ಹಾಗೂ ಸಾಹಿತ್ಯದಲ್ಲಿ ಪರಿಣತಿ ಇದ್ದೇ ಇರಬೇಕಾಗುತ್ತದೆ. ಅದಿಲ್ಲವಾದರೆ, ಕಾವ್ಯ ರಚನೆಮಾಡುವಾಗ ಸಂಸ್ಕೃತಶಬ್ದವಾವುದು ? ಕನ್ನಡ ಶಬ್ದವಾವುದು ಎಂಬ ಅರಿವು ಉಂಟಾಗಲು ಹೇಗೆ ಸಾಧ್ಯ? ಇದರಿಂದ ಗೊತ್ತಾಗುವುದೇನೆಂದರೆ - ಸಂಸ್ಕೃತಕ್ಕೂ ಕನ್ನಡಕ್ಕೂ ಭದ್ರವಾದ ಬೆಸುಗೆಯ ಸಂಬಂಧವಿದೆ - ಎಂಬುದು.

ಸಂಸ್ಕೃತದಲ್ಲಿರುವಂತೆ ಕನ್ನಡದಲ್ಲಿಯೂ ಕಾವ್ಯಸಾಹಿತ್ಯ ಮಾತ್ರವಲ್ಲದೆ, ಶಾಸ್ತ್ರಸಾಹಿತ್ಯವೂ ಸಮೃದ್ಧವಾಗಿಯೇ ಇದೆ. ಕನ್ನಡದಲ್ಲಿ ವ್ಯಾಕರಣ, ಛಂದಸ್ಸು, ಅಲಂಕಾರ, ರಸ ಮುಂತಾದ ಕಾವ್ಯಶಾಸ್ತ್ರ ಗ್ರಂಥಗಳು ಮಾತ್ರವಲ್ಲದೆ - ನಿಘಂಟು, ವೈದ್ಯ, ಜ್ಯೋತಿಷ್ಯ, ಕಲಾವಿಷಯಕ ಗ್ರಂಥಗಳೂ ಇವೆಯಲ್ಲದೆ, ಅವುಗಳಲ್ಲಿ ಬರುವ ಲಾಕ್ಷಣಿಕ ಹಾಗೂ ಪಾರಿಭಾಷಿಕಶಬ್ದಗಳು ಸಂಸ್ಕೃತವೇ ಆಗಿರುತ್ತವೆ. ವ್ಯಾಕರಣವೊಂದನ್ನೇ ಲಕ್ಷಿಸಿ ಹೇಳುವುದಾದರೆ - ಅಕ್ಷರ, ವರ್ಣ, ಸಂಜ್ಞೆ, ಶಬ್ದ, ಪದ, ಪ್ರಕೃತಿ, ಪ್ರತ್ಯಯ, ವಿಭಕ್ತಿ, ಲಿಂಗ, ವಚನ, ನಾಮ, ಸರ್ವನಾಮ, ಕರ್ತೃ, ಕರ್ಮ, ಧಾತು, ಕ್ರಿಯೆ, ಅವ್ಯಯ, ಸಂಧಿ, ಸಮಾಸ-ಮುಂತಾದ ಪಾರಿಭಾಷಿಕಗಳು ಸಂಸ್ಕೃತವೇ ಆಗಿವೆ. ಅವಕ್ಕೆಲ್ಲ ಕನ್ನಡದ ಪ್ರತಿಶಬ್ದಗಳಿಲ್ಲ. ಛಂದಸ್ಸಿನಲ್ಲಿ ಬರುವ ಲಘು, ಗುರು, ಮಾತ್ರೆ, ಗಣ, ಪ್ರಸ್ತಾರ, ವೃತ್ತ, ವೃತ್ತಗಳ ಹೆಸರುಗಳು, ಷಟ್ಪದಿಗಳು-ಸಂಸ್ಕೃತದಲ್ಲೇ ಹೆಸರುಪಡೆದಿವೆ. ಅಲಂಕಾರಶಾಸ್ತ್ರದಲ್ಲಿ ಬರುವ ಅಲಂಕಾರಗಳೆಲ್ಲವೂ ಸಂಸ್ಕೃತನಾಮವಾಚಿಗಳು. ನವರಸಗಳ ಹೆಸರುಗಳೂ ಸಂಸ್ಕೃತದಲ್ಲಿವೆ. ಶಾಸ್ತ್ರಗಳ ನಿರೂಪಣ ಕ್ರಮವಾಗಿರುವ ಸೂತ್ರ, ವೃತ್ತಿ, ವ್ಯಾಖ್ಯೆ, - ಮುಂತಾದುವು ಸಂಸ್ಕೃತ ಶಬ್ದರೂಪಗಳೇ ಆಗಿರುತ್ತವೆ.. ಆದುದರಿಂದ ಕನ್ನಡಕ್ಕೂ ಸಂಸ್ಕೃತಕ್ಕೂ ಅವಿನಾಭಾವದ ಸಂಬಂಧವಿರುವುದು ಯಾರಿಗೂ ಗೋಚರಿಸುವ ಸಂಗತಿಯಾಗಿದೆ. ಕನ್ನಡವನ್ನು ಕಲಿಯುವುದೆಂದರೆ-ಹಾಗಂತ ಹೇಳಿಕೊಳ್ಳದೆ, ಸಂಸ್ಕೃತವನ್ನೂ ಕಲಿಯುವುದೇ ಆಗುತ್ತದೆ. ಇವೆರಡರ ಸಂಬಂಧ ಅಥವಾ ಬಾಂಧವ್ಯವೆಂಬುದು ಬೆಂಕಿಗೂ ಬಿಸುಪಿಗೂ, ಬಿಸಿಲಿಗೂ ನೆರಳಿಗೂ ಇರುವ ಸಂಬಂಧದಂತೆಯೇ ಸರಿ.

ಸಂಸ್ಕೃತ ಕಲಿಯದೆ ಕನ್ನಡದಲ್ಲಿ ವಿದ್ವಾಂಸರಾದವರು ಸಂಧಿ, ಸಮಾಸ, ಶಬ್ದಪ್ರಯೋಗ ದೋಷಗಳನ್ನು ಸರಿಯಾಗಿ ತಿಳಿಯಲಾರರು. ಉದಾ : ಅರ್ಪಿತ, ನಮಿತ ಶಬ್ದಗಳಂತೆ ಒಪ್ಪಿತ (ಒಪ್ಪಿಗೆ ಯಾದ ಎಂಬರ್ಥದಲ್ಲಿ) ಎಂಬುದು ಸರಿಯಲ್ಲ. ಹಾಗೆಯೇ ನಂಬಿಕಸ್ಥ , ತಪ್ಪಿತಸ್ಥ, ಬದಲಾಯಿತ ಮುಂತಾದುವು ಅಶುದ್ಧ ಪ್ರಯೋಗಗಳು. ಶನೇಶ್ವರ, ರಘೋತ್ತಮ, ಆರತಕ್ಷತೆ, ಮುಂತಾದವೂ ಅಸಾಧು. ಕನ್ನಡದ ಪ್ರಗತಿ ಎಂದುಕೊಂಡು ಅಬದ್ಧ ಪ್ರಯೋಗಗಳನ್ನು ಮಾನ್ಯಮಾಡುವುದು ಉಭಯಭಾಷೆಗಳಿಗೂ ಕೇಡೆನಿಸುವುದು. ಕನ್ನಡ ಸಂಸ್ಕೃತಗಳ ಭಾಂಧವ್ಯದ ತೆರನನ್ನು ಅರ್ಥವಿಸಿಕೊಂಡು, ಭಾಷಾಧ್ಯಯನ ಮಾಡಬೇಕಾದುದು ಅತ್ಯವಶ್ಯ. □

೪

ಕನ್ನಡ ಕಾವ್ಯಗಳ ಮೇಲೆ ಸಂಸ್ಕೃತದ ಪ್ರಭಾವ

ಮನುಷ್ಯನು ಇತರ ಜೀವಿಗಳಂತಲ್ಲ. ಅವನು ಮಾತು ಬಲ್ಲವನು. ತನ್ನ ಮಾತು, ಬರಹ, ಓದುಗಳ ಮೂಲಕ ಇತರರೊಡನೆ ವ್ಯವಹರಿಸಬಲ್ಲನು. ಹಾಗೆ ವ್ಯವಹರಿಸುವುದರಲ್ಲಿ ಪ್ರಯೋಗಗೊಳ್ಳುವ ಮಾತು, ಮತ್ತು ಆ ಭಾಷೆ-ವಿವಿಧವಾಗಿದೆ. ಆದರೆ ಮೂಲಭಾಷೆ ಒಂದೇ ಆಗಿದ್ದಿತು ಎನ್ನಲಾಗಿದೆ. ಆದೇ ಭಗವದ್ವಾಣಿ; ಅದು ಸರ್ವ ಭಾಷಾಮಯೀ ಭಾಷೆ. ಭಟ್ಟಾಕಲಂಕನು ತನ್ನ ಶಬ್ದಾನುಶಾಸನದಲ್ಲಿ ಹೇಳಿರುವಂತೆ, ಭಾಷೆಯು ಮೊದಲು ಭಗವದ್ವಾಣಿ ಒಂದೇ ಆಗಿದ್ದು, ಆಯಾ ಪ್ರದೇಶ ಮತ್ತು ವ್ಯಕ್ತಿಭಿನ್ನತೆಯ ಲಕ್ಷಣಾನುಸಾರವಾಗಿ ವಿವಿಧಭಾಷೆಗಳಾಗಿ ರೂಪಗೊಂಡಿದ. ಅವನು ಹೇಳಿರುವಂತೆ ಅಷ್ಟಾದಶ ಮಹಾಭಾಷೆಗಳಿವೆ ಸಪ್ತಶತ ಕುಲ್ಲಕಭಾಷೆಗಳಿವೆ. ಅಂತಹ ಹದಿನೆಂಟು ಮಹಾಭಾಷೆಗಳಲ್ಲಿ ಸಂಸ್ಕೃತವು ಒಂದಾದರೆ ನಮ್ಮ ಕನ್ನಡ ಇನ್ನೊಂದಾಗಿದೆ. ಕನ್ನಡವು ಒಂದೆಡೆ ಆಡುಮಾತಾಗಿ ಅಥವಾ ಜಾನಪದ ಭಾಷೆಯೂ ಆಗಿದೆ. ಇನ್ನೊಂದೆಡೆ ಶಿಷ್ಟ ಭಾಷೆಯೂ ಆಗಿದೆ. ಸಂಸ್ಕೃತಕ್ಕೆ ಈ ಎರಡು ರೂಪಗಳಿಲ್ಲ, ಅದು ಎಂದೆಂದಿಗೂ ಶಿಷ್ಟಭಾಷೆ.

'ಸಂಸ್ಕೃತ' ಸಂಸ್ಕಾರಗೊಂಡ ಭಾಷೆಯೆಂದೇ ಅರ್ಥ. ಅದರ ಪ್ರತಿಯೊಂದು ರೂಪವೂ ನಿಷ್ಕೃಷ್ಟವಾದುದು. ವ್ಯಾಕರಣ ಮರ್ಯಾದೆಗೆ ಒಳಪಟ್ಟುದು. ವೇದಕಾಲದಿಂದಲೇ ಪ್ರಚಲಿತವಿದ್ದುದು. ಇಂದಿಗೂ ತನ್ನ ಶಿಷ್ಟ ರೂಪವನ್ನೇ ಉಳಿಸಿಕೊಂಡಿರುವುದು. ಅಂತಹ ಸಂಸ್ಕೃತದಲ್ಲಿ ಶ್ರುತಿ ಸ್ಮೃತಿಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಹದಿನೆಂಟು ಪುರಾಣಗಳು, ಅಷ್ಟೇ ಉಪಪುರಾಣಗಳು, ಆಯುರ್ವೇದ ಜ್ಯೋತಿಷ್ಯಾದಿ ವೇದಾಂಗಗಳು, ಕಾವ್ಯಗಳು, ನಾಟಕಗಳು, ಶಬ್ದಕೋಶಗಳು, ವಿವಿಧಶಾಸ್ತ್ರಗ್ರಂಥಗಳು ರಚಿತವಾಗಿವೆ. ಆ ಭಾಷೆಯಲ್ಲಿರುವಷ್ಟು ಶಬ್ದಸಂಪತ್ತು ಇತರ ಯಾವ ಭಾಷೆಯಲ್ಲಿಯೂ ಇರಲಾದರು. ಒಂದೇ ಉದಾಹರಣೆ ಕೊಡುವುದಾದರೆ ಸಕಲ ಚರಾಚರ ಜೀವಿಗಳಿಗೂ ಜೀವನಾಧಾರವಾಗಿರುವ 'ನೀರು' ಎಂಬುದಕ್ಕೆ ಬೇರೆ ಭಾಷೆಗಳಲ್ಲಿ - ಕನ್ನಡದಲ್ಲಿ, ಬೇರಾವ ಶಬ್ದವಿದೆ? ಸಂಸ್ಕೃತದಲ್ಲಿ ಅದೇ ಶಬ್ದವನ್ನು 'ನೀರಂ' ಎಂತಲೂ ಇಟ್ಟುಕೊಂಡು ಅದೇ ಅರ್ಥವಿರುವ ಇಪ್ಪತ್ತೇಳು ಶಬ್ದಗಳನ್ನು ನಾವು ಅಮರಕೋಶದಲ್ಲಿ ಕಾಣುತ್ತೇವೆ. ಹೀಗೆಯೇ ಇತರ ಎಷ್ಟೋ ಅರ್ಥವಾಹಕ ಶಬ್ದಮಾಲಿಕೆಗಳನ್ನು ನಾವು ಸಂಸ್ಕೃತದಲ್ಲಿ ಕಾಣಬಲ್ಲೆವು. ಇದರಿಂದ ಗೊತ್ತಾಗುವುದೇನೆಂದರೆ - ಸಂಸ್ಕೃತವು ಪರಿಪೂರ್ಣವಾಗಿ ಬೆಳೆದು ಪ್ರಯೋಗಪ್ರಚಲಿತಗೊಂಡ ಮಹಾಭಾಷೆ, ಶಾಸ್ತ್ರೋಪಯೋಗಿ

ಯಾದುದು. ಆದುದರಿಂದಲೇ ಇತರ ಹಲವಾರು ಭಾಷೆಗಳಂತೆ, ಸಂಸ್ಕೃತದಿಂದ ಕನ್ನಡಕ್ಕೆ ಆಗುವ ಪ್ರಭಾವ ಅಮಿತವಾಗಿಯೇ ಇದೆಯೆನ್ನಬಹುದು.

ಸಂಸ್ಕೃತದ ಹಿರಿಮೆಯನ್ನು ಮತ್ತು ಕನ್ನಡದಲ್ಲಿ ಅದರ ಶಬ್ದಗಳ ಪ್ರಯೋಗ ಬಾಹುಳ್ಯವನ್ನು ಅದರಿಂದಾಗಿಯೇ ಸಂಸ್ಕೃತದ ಅನಿವಾರ್ಯತೆಯನ್ನು ಅರಿಯದೆಯೇ ಕನ್ನಡದಲ್ಲಿ ಅಭಿಮಾವವನ್ನು ವ್ಯಕ್ತಪಡಿಸುವವರು, ಅಂತಹ ಅಭಿಮಾವವನ್ನೇ ಸಂಸ್ಕೃತದ್ವೇಷವನ್ನಾಗಿ ಮಾಡಿಕೊಂಡು ಸಂಸ್ಕೃತವನ್ನು ನಿಂದಿಸುವವರು 'ಸಂಸ್ಕೃತವು ಸಜೀವ ಭಾಷೆಯಲ್ಲ, ಅದು ಮೃತ ಭಾಷೆ' ಎಂದು ಟೀಕಿಸುವವರಿದ್ದಾರೆ. ಹೀಗೆನ್ನುವವರು ತಮ್ಮ ಮಾತಿನಲ್ಲಿ ಸಂಸ್ಕೃತಶಬ್ದಗಳೇ ಇರುವವೆಂಬುದನ್ನು, ಅಚ್ಚಗನ್ನಡದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಮಾಡಲರಿಯೆವೆಂಬುದನ್ನು ಅವರು ತಿಳಿಯಲಾರರು. ಸಂಸ್ಕೃತ ಬಲ್ಲವರಿಗೆ ಅದರ ಹಿರಿಮೆಯೂ ಗೊತ್ತಿರುತ್ತದೆ.

ಲಂಡನ್ನಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ರಾಯಲ್ ಏಸ್ಯಾಟಿಕ್ ಸೊಸೈಟಿಯ ಡೈರೆಕ್ಟರೂ ಆಗಿದ್ದ ಎ.ಎಚ್. ವಿಲ್ಸನ್ (೧೭೮೬-೧೮೬೦) ಭಾರತದಲ್ಲಿ ಸಂಸ್ಕೃತದ ನೆಲೆಬೆಲೆಗಳನ್ನು ಕುರಿತು ತಾನೇ ರಚಿಸಿದ ಒಂದು ಶ್ಲೋಕದಲ್ಲಿ ಹೀಗೆಂದಿದ್ದಾನೆ.

ಯಾವದ್ಭಾರತವರ್ಷಃ ಸ್ಯಾತ್ ಯಾವದ್ ವಿಂಧ್ಯಾಹಿಮಾಚಲಮ್
ಯಾವದ್ಗಂಗಾ ಚ ಗೋದಾ ಚ ತಾವದೇವ ಹಿ ಸಂಸ್ಕೃತಮ್

ಭಾರತದ ಪ್ರಥಮ ಪ್ರಧಾನಿಯಾದ ಪಂಡಿತ ನೆಹರು ಅವರು ತಮ್ಮ ದೇಹಾಂತ್ಯಕಾಲಕ್ಕೆ ಸ್ವಲ್ಪ ಮೊದಲು ಪುಣೆಯಲ್ಲಿ ನಡೆದ ಒಂದು ಸಭೆಯಲ್ಲಿ-"ನಾನು ಸಂಸ್ಕೃತವನ್ನು ಕಲಿಯದುದು ನನ್ನ ಜೀವನದಲ್ಲಿಯ ಒಂದು ಮಹಾವಿಷಾದವಾಗಿ ಉಳಿಯುವುದು" ಎಂದಿದ್ದರು. ಅನಂತರ ಪ್ರಧಾನಮಂತ್ರಿಯಾದ ಲಾಲ್ ಬಹದೂರ್ ಶಾಸ್ತ್ರಿಗಳು ಭಾರತದ ಪ್ರತಿಯೊಂದು ರಾಜ್ಯದಲ್ಲಿಯೂ ಒಂದೊಂದರಂತೆ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸುವ ತಮ್ಮ ಇಚ್ಛೆಯನ್ನು ಪ್ರಕಟಿಸಿರುವುದುಂಟು. ಅಂತಹ ಹಿರಿಮೆಗೆ ಪಾತ್ರವಾಗಿರುವುದರಿಂದಲೇ ಸಂಸ್ಕೃತ ಶಬ್ದ ಪ್ರಯೋಗವಿಲ್ಲದ ಭಾಷೆಯಿಲ್ಲವೆಂಬಂತಾಗಿದೆ.

ಸಂಸ್ಕೃತವು ಕನ್ನಡದಲ್ಲಿಯೂ ವಿಜೃಂಭಿಸುತ್ತಿದೆಯಾದರೂ ಕನ್ನಡಕ್ಕೆ ತನ್ನದೇ ಆದ ವೈಶಿಷ್ಟ್ಯಗಳಿವೆ. ಶಿಷ್ಟಭಾಷಾರೂಪದ ಕನ್ನಡಕ್ಕೆ ಏಕರೂಪತೆಯಿದೆ. ಇದಕ್ಕೆ ಸರಿಯಾದ ವ್ಯಾಕರಣವೂ ಇದೆ. ಇತರ ಕಾವ್ಯಶಾಸ್ತ್ರಗಳೂ ಇವೆ. ಆದುದರಿಂದಲೇ ಕನ್ನಡದಲ್ಲಿ ಸುಮಾರು ಹತ್ತನೆಯ ಶತಮಾನದಿಂದಲೇ ಕವಿಗಳು ಕಾವ್ಯರಚನೆ ಮಾಡುತ್ತ ಬಂದಿದ್ದಾರೆ. ಸಂಸ್ಕೃತದ ಹಾಗೆಯೇ ಇದು ಧ್ವನಿಯುಕ್ತ ಭಾಷೆ ಆಗಿರುತ್ತದೆ. ಅಂದರೆ ಬರೆದಂತೆಯೇ ಉಚ್ಚಾರಣೆಗೊಳ್ಳುವ ಭಾಷೆಯಾಗಿದೆ. ಹಿಂದೀ, ಇಂಗ್ಲೀಷ್ ಭಾಷೆಗಳು ಧ್ವನಿಯುಕ್ತ ಭಾಷೆಗಳಲ್ಲ. ಉದಾ : ಪಿಯುಟಿ (Put) ಪುಟ್, ಬಿಯುಟಿ (But) ಬಟ್. ಹಾಗೆಯೇ ಹಿಂದಿಯಲ್ಲಿ ಕಪಡಾ ಎಂದು ಬರೆದುದನ್ನು ಕಪ್ಡಾ ಎಂದು, ಪುಸ್ತಕ ಎಂದರೆ ಪುಸ್ತಕ್ ಎಂದು ಕೊನೆಯ ಅಕ್ಷರವನ್ನು ಅರ್ಧಾಕ್ಷರವಾಗಿ ಉಚ್ಚರಿಸಬೇಕೆಂದು ನಿಯಮ. ಆದುದರಿಂದ ಕನ್ನಡವು ಶಾಸ್ತ್ರಬದ್ಧ ಭಾಷೆಯಾಗಿದೆ. ಭಟ್ಟಾಕಲಂಕನು (೧೬೦೪) ತನ್ನ ಶಬ್ದಾನು ಶಾಸನ ಗ್ರಂಥದಲ್ಲಿ ಕನ್ನಡವು ಆಡುಮಾತಾಗಿರುವುದು ಮಾತ್ರವಲ್ಲ ಶಾಸ್ತ್ರೋಪಯೋಗಿಯೂ ಆಗಿದೆ ಎಂಬುದನ್ನು ಹೇಳಿರುವ ಮಾತಿದು -

"ನ ವೈಷಾ ಭಾಷಾ ಶಾಸ್ತ್ರಾನುಪಯೋಗಿನೀ, ತತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನಸ್ಯ ಷಣ್ಣವತಿಸಹಸ್ರ ಪ್ರಮಿತ ಗ್ರಂಥ ಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯ ಅನ್ಯೇಷಾಂ ಚ ಶಬ್ದಾಗಮ ಯುಕ್ತ್ಯಾಗಮ ಪರಮಾಗಮವಿಷಯಾಣಾಂ ತಥಾ ಕಾವ್ಯ ನಾಟಕಾಲಂಕಾರ ಕಲಾಶಾಸ್ತ್ರವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯ ಮಾನತ್ವಾತ್". ಅಷ್ಟು ಮಾತ್ರವಲ್ಲದೆ, ಸಂಸ್ಕೃತದಲ್ಲಿ ಅಗಾಧಪಾಂಡಿತ್ಯವುಳ್ಳ, ಆದುದರಿಂದಲೇ ಕನ್ನಡ ವ್ಯಾಕರಣ ಗ್ರಂಥವನ್ನು ಸಂಸ್ಕೃತದಲ್ಲಿ ಪ್ರೌಢವಾಗಿ ರಚಿಸಿರುವ ಆತನು, ಕಿವಿಗಿಂಪಾಗಿ ವಿದ್ವದ್ರಂಜಕವಾದ ಕನ್ನಡಕ್ಕೆ ಸಮಾನವಾದ ಬೇರೊಂದು ಭಾಷೆಯೇ ಇಲ್ಲವೆಂತಲೂ ಹೇಳಿರುತ್ತಾನೆ. ಇದಕ್ಕೆ ಕಾರಣವಾದುದು ಕನ್ನಡದ ಕೆಲವು ಲಕ್ಷಣವೈಶಿಷ್ಟಗಳೆಂದು ಹೇಳಬಹುದು -ಕನ್ನಡದ ಅಕ್ಷರಮಾಲೆಯ ವಿಭಾಗಕ್ರಮವು ಸಂಸ್ಕೃತದಂತೆ ಇದ್ದರೂ ಕನ್ನಡದಲ್ಲಿ ಸ್ವರಾಕ್ಷರಗಳಾಗಿ ಎ ಮತ್ತು ಒ ಎಂಬ ಹ್ರಸ್ವಗಳೂ ಇವೆ. ಸಂಸ್ಕೃತದ ದೇವನಾಗರೀಲಿಪಿಯಲ್ಲಿ ಎಲೆ, ಒಲೆ ಎಂಬವನ್ನು ಏಲೇ, ಓಲೇ ಎಂದು ಬರೆಯಬೇಕಾಗುವುದು. ಸಂಸ್ಕೃತದಂತೆ ಕನ್ನಡದಲ್ಲಿ ದೀರ್ಘ, ಗುಣ, ವೃದ್ಧಿ, ಯಣ್ ಸಂಧಿಗಳಿಲ್ಲ. ಸಂಸ್ಕೃತದಲ್ಲಿ ಶಬ್ದಾನುಗುಣವಾಗಿ ಲಿಂಗನಿರ್ಣಯುವಿರುತ್ತದೆ. ಅಂದರೆ ಯಾವುದಾದರೂ ಪುಲ್ಲಿಂಗವೆನಿಸಬೇಕಾದರೆ, ಅದು ಗಂಡಾಗಿರಬೇಕೆಂದಿಲ್ಲ. ಉದಾ : ಕಿವಿ ಎಂಬ ಅರ್ಥವುಳ್ಳ ಕರ್ಣ ಎಂಬುದು ಸಂಸ್ಕೃತದಲ್ಲಿ ಪುಲ್ಲಿಂಗ. ಕಿವಿಯನ್ನು ಚುಚ್ಚುವ ಸೂಜಿ ಎಂಬ ಅರ್ಥವುಳ್ಳ ಕರ್ಣವೇಧನೀ ಎಂಬುದು ಸ್ತ್ರೀಲಿಂಗ ಶಬ್ದ. ಶಾಲಾ, ಮಾಲಾ, ದಯಾ ಮುಂತಾದವು ಸ್ತ್ರೀಲಿಂಗಗಳಾಗಿವೆ. ಕನ್ನಡದಲ್ಲಿ ಪುರುಷರು ಮಾತ್ರ ಪುಲ್ಲಿಂಗ; ಸ್ತ್ರೀಯರು ಸ್ತ್ರೀಲಿಂಗ. ಉಳಿದುವೆಲ್ಲವೂ ನಪುಂಸಕ ಶಬ್ದಗಳು. ಪ್ರಾಣಿ ವಾಚಕಗಳು ಗಂಡಿರಲಿ ಹೆಣ್ಣಾಗಿರಲಿ ಅವೆಲ್ಲವೂ ನಪುಂಸಕಲಿಂಗ ಶಬ್ದಗಳಾಗಿವೆ. ಇದು ಕನ್ನಡದ ವೈಶಿಷ್ಟ್ಯ.

ಕನ್ನಡದಲ್ಲಿ ಪದ್ಯರಚನೆ ಯಾವುದೇ ಆಗಿರಲಿ, ಪ್ರತಿ ಪಾದದಲ್ಲಿ ದ್ವಿತೀಯಾಕ್ಷರ ಪ್ರಾಸವಿರಲೇಬೇಕು. ಆಧುನಿಕರು ಬೇಕೆಂತಲೇ ಅದನ್ನು ಉಲ್ಲಂಘಿಸಿ ಕನ್ನಡದ ಗೌರವವನ್ನು ಕೆಡಿಸುತ್ತಿರುವ ಸಂಗತಿ ಬೇರೆ. ಆದರೆ, ದ್ವಿತೀಯಾಕ್ಷರ ಪ್ರಾಸದ ಕಡ್ಡಾಯವು ಕನ್ನಡ ಕವಿತೆಯ ಲಕ್ಷಣವಾಗಿರುತ್ತದೆ. ಸಂಸ್ಕೃತ ಶಬ್ದವನ್ನು ಕನ್ನಡ ಶಬ್ದದೊಂದಿಗೆ ಬೆರಸಿ ಸಮಾಸಮಾಡಬಾರದೆಂಬುದು-ಅಂದರೆ, ಅರಿಸಮಾಸದ ತ್ಯಾಜ್ಯತೆಯು ಕನ್ನಡದ ಹಿರಿಮೆಯ ಇನ್ನೊಂದು ಲಕ್ಷಣ. ಅದರಂತೆ ಸಹಬಾಳ್ವೆ, ಸನ್ನಡತೆ, ಮನೆರಹಿತ, ಕನ್ನಡಾಂಬೆ ಮುಂತಾದ ಪ್ರಯೋಗಗಳು ಅಸಾಧು. ಹೀಗಿದ್ದರೂ ಅತ್ತ ಸಂಸ್ಕೃತವನ್ನರಿತಿರದೆ, ಇತ್ತ ಕನ್ನಡವನ್ನೂ ಲಾಕ್ಷಣಿಕವಾಗಿ ಕಲ್ತಿರದೆ, ಸ್ವಯಂಮನ್ಯ ವಿದ್ವಾಂಸರು ಮಾಡುವ ಅಸಾಧುಪ್ರಯೋಗಗಳಿಗೆ ಇಂದು ಮಿತಿಯಿಲ್ಲವಾಗಿದೆ. ಬೆಂಬಲಿತ ಬೆಲೆ, ಬದಲಾಯಿತ ಪರಿಸ್ಥಿತಿ, ತಪ್ಪಿತಸ್ಥ , ನಂಬಿಕಸ್ಥ- ಮುಂತಾದವು ಅಂತಹರ ಮಾತುಗಳಲ್ಲಿ ಬರೆವಣಿಗೆಗಳಲ್ಲಿ ಇದ್ದೇ ಇರುತ್ತವೆ.

ಹಿಂದಿನ ಕವಿಗಳು ಸಂಸ್ಕೃತವನ್ನು ಧಾರಾಳವಾಗಿ ಕನ್ನಡದಲ್ಲಿ ಬಳಸಿಕೊಂಡಿದ್ದರೂ ಸಂಸ್ಕೃತವನ್ನು ಸಂಸ್ಕೃತವಾಗಿಯೇ ಬಳಸಿದ್ದಾರೆ. ಸಂಸ್ಕೃತ ಕಾವ್ಯಶಾಸ್ತ್ರಗಳಿಂದ ಅವರು

ಪ್ರಭಾವಿತರಾಗಿದ್ದರು. ತಮ್ಮ ರಚನೆಗಳಲ್ಲಿ ಸಂಸ್ಕೃತದ ಕೊಲೆಗೆ ಕೈಯಿಕ್ಕಿಲ್ಲ. ಕನ್ನಡವನ್ನೂ ಕುಲಗೆಡಿಸಿಲ್ಲವೆನ್ನಬಹುದು. ಏಕೆಂದರೆ-ಆ ಪೂರ್ವಕವಿಗಳಲ್ಲಿ ಹೆಚ್ಚಿನವರೂ ಉಭಯಭಾಷಾ ಕೋವಿದರಾದ ಕವಿಗಳು. ಕನ್ನಡದ ಶ್ರೇಷ್ಠಕವಿಗಳಾದ ಪಂಪ, ರನ್ನ, ರುದ್ರಭಟ್ಟ ರಂತಹ ಕವಿಗಳ ರಚನೆಯ ಕೆಲವು ಪದ್ಯಗಳನ್ನು ನೋಡಿದರೆ ಅವರು ಸಂಸ್ಕೃತದಲ್ಲಿಯೇ ಬರೆದರೋ ಎಂಬಷ್ಟು ಮಟ್ಟಿಗೆ ಸಂಸ್ಕೃತಭೂಯಿಷ್ಠವಾಗಿರುವುದೂ ಉಂಟು. ಪಂಪನ ಒಂದು ಪದ್ಯವನ್ನಿಲ್ಲಿ ನೋಡೋಣ:

ಚಳದನಿಳಾಹತ ಕ್ಷುಭಿತ ಭಂಗುರ ತುಂಗ ತರಂಗ ಮಾಲಿಕಾ
ವಳನ ಸಮುಚ್ಚಳನ್ಮಣಿಗಣಾತ್ತ ಮರೀಚಿ ಲತಾಪ್ರತಾನ ಸಂ
ವಳಯಿತ ವಿದ್ರುಮದ್ರುಮ ವಿಳಾಸ ವಿಶೇಷಿತ ಬಾಡಬಾನಳಾ
ವಿಳಜಳಮಂ ಮನಂ ಬಯಸಿ ನೋಡಿದನರ್ಣವಮಂ ಗುಣಾರ್ಣವಂ

(೪-೨೫)

ಕಥಾನಾಯಕನಾದ ಗುಣಾರ್ಣವನು ಅರ್ಣವವನ್ನು ನೋಡಿದನೆಂಬುದು ಇಲ್ಲಿ ಮುಖ್ಯ ವಿಷಯವಾಗಿದೆ. ಉಳಿದ ಭಾಗಗಳೆಲ್ಲವೂ ಸಮುದ್ರದ ವರ್ಣನ ವಿಶೇಷವಾಗಿರುತ್ತವೆ. ಕವಿಯ ಸಂಸ್ಕೃತಪಾಂಡಿತ್ಯದ ಪ್ರಭಾವವಿಲ್ಲಿ ಎದ್ದು ಕಾಣುತ್ತದೆ. ಕವಿ ರನ್ನನ ಸಾಹಸಭೀಮವಿಜಯದಲ್ಲಿ ಭೀಮನನ್ನು ಕವಿ ವರ್ಣಿಸಿದ ಬಗೆ ಹೀಗಿದೆ -

ಕುರುಭೂಭೃದ್ಬಲ ಕೂಲತೂಲ ಪವನಂ ಕೌರವ್ಯಗಂದೇಭ ಕೇ
ಸರಿ ದುಃಶಾಸನರಕ್ತರಕ್ತವದನಂ ದುರ್ಯೋಧನೋರುಕ್ಷಮಾ
ಧರ ವಜ್ರಂ ಕುರುರಾಜರತ್ನ ಮಕುಟೋತ್ಕೂಟಾಂಘ್ರಿ ಸಂಘಟ್ಟ ಸಂ
ಗರನೆಂದೆಂದಭಿವರ್ಣಿಪಂ ರಣಯಶಃಶ್ರೀ ರಾಮನಂ ಭೀಮನಂ (೧-೫೨)

ಕುರುಸೈನ್ಯವೆಂಬ ಕಡಲ ತೀರದ ಅರಳೆಗೆ ಗಾಳಿಯೆಂದು, ಕೌರವನೆಂಬ ಮದ್ದಾನೆಗೆ ಸಿಂಹನೆಂದು, ದುಃಶಾಸನನ ನೆತ್ತರನ್ನು ಹೀರಿ ಕೆಂಪಾದ ಬಾಯಿಯುಳ್ಳವನೆಂದು, ದುರ್ಯೋಧನನ ತೊಡೆ ಎಂಬ ಪರ್ವತಕ್ಕೆ ವಜ್ರಾಯುಧವಾದವನೆಂದು, ಕೌರವನ ರತ್ನಕಿರೀಟದ ತುದಿಗೆ ಒದೆದು ಯುದ್ಧಮಾಡಿದವನೆಂದು ಯುದ್ಧದ ಕೀರ್ತಿಶ್ರೀಯ ಮನೋಹರನೆಂದು, ಭೀಮನ ಪ್ರಶಂಸೆ ಮಾಡಿರುವುದರಲ್ಲಿ ಅವನ ಸಂಸ್ಕೃತಪಾಂಡಿತ್ಯವನ್ನು ಕಾಣುತ್ತೇವೆ.

ಮಹಾಕವಿ ರುದ್ರಭಟ್ಟನ (೧೧೮೦) ಜಗನ್ನಾಥವಿಜಯ ಕಾವ್ಯದ ಮೊದಲ ಪದ್ಯವಿದು-

ಶ್ರೀರಾಮಾನಟಿ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪ ವ
ಕ್ಷೋರಂಗಸ್ಥಿತಿಯಾದ ಪಾದನಖರೋಚಿರ್ಗಂಗೆ ಪೃಥ್ವೀಶ ಕೋ
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದ ಸಂದೋಹಮಂ

ಈ ಕಾವ್ಯದ ಉದ್ದಕ್ಕೂ ಸಂಸ್ಕೃತಪ್ರೌಢಿಮ ವ್ಯಕ್ತವಾಗುತ್ತದೆ. ಉಭಯಭಾಷಾಪ್ರಾವೀಣ್ಯ ಎದ್ದು ಕಾಣುವ ಸಂಗತಿಯಾಗಿದೆ. ಇದೇ ಕವಿಯ ಪ್ರಾರಂಭದ ಐದು ಮಂಗಳಪದ್ಯಗಳಿಗೆ ಸಂಸ್ಕೃತದಲ್ಲಿ ಬರೆಯಲಾದ ಪಂಚಪಾಷಾಣವ್ಯಾಖ್ಯಾನ ಎಂಬ ವಿವರಣೆಯೂ ಇದೆ. ಈ

ಉದಾಹರಣೆಯಿಂದ ಗೊತ್ತಾಗುವುದೇನೆಂದರೆ - ಕನ್ನಡ ಭಾಷೆಯ ಅಧ್ಯಯನದೊಂದಿಗೆ ಸಂಸ್ಕೃತದ ಅಧ್ಯಯನ ಅನಿವಾರ್ಯವೆಂದು.

ಹೀಗಿದ್ದರೂ ಸಂಸ್ಕೃತಶಬ್ದವೊಂದನ್ನೂ ಬಳಸಿಕೊಳ್ಳದೆ, ಅಚ್ಚಗನ್ನಡದಲ್ಲಿಯೇ ಕಾವ್ಯ ರಚನೆಮಾಡುವ ಪ್ರಯತ್ನಗಳು ನಡೆದಿರುವ ಉದಾಹರಣೆಗಳಿವೆ. ಕ್ರಿ.ಶ. ೧೨೩೫ ರಲ್ಲಿದ್ದ ಆಂಡಯ್ಯನೆಂಬ ಕನ್ನಡ ಕಬ್ಬಿಗನು 'ಕಬ್ಬಿಗರ ಕಾವ' ಎಂದರೆ - ಕವಿಗಳ ರಕ್ಷಕ ಎಂಬ ಒಂದು ಖಂಡಕಾವ್ಯವನ್ನು ಚಂಪೂಶೈಲಿಯಲ್ಲಿ ರಚಿಸಿರುತ್ತಾನೆ. ಇದರ ರಚನೋದ್ದೇಶವನ್ನು ಕವಿಯೇ ಹೇಳಿರುವುದು ಹೀಗಿದೆ -

ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇಳಲಾರರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ
ಬ್ಬಿಗರದು ಮಾತನಾಡಿದವೊಲಂದವನಾಳ್ದಿರೆ ಪೇಳ್ವ ಬಲ್ಮು ನೆ
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ (೧೫)

ಆಂಡಯ್ಯನ ಕವಿತಾಸಾಮರ್ಥ್ಯವನ್ನರಿತ ಆ ಕಾಲದ ವಿದ್ವಾಂಸರು ಹೀಗೆನ್ನುತ್ತಿದ್ದರಂತೆ - "ಹಿರಿಮೆಗೆ ಹೆಸರಾದ ಪ್ರಾಚೀನ ಕವಿಗಳು ಯಾರೇ ಆದರೂ ಸೊಗಸಾದ ಸಂಸ್ಕೃತಶಬ್ದಗಳನ್ನು ಬೆರಸದೆ ಕನ್ನಡದಲ್ಲಿ ಮನೋಹರವಾಗಿ ಕಾವ್ಯರಚನೆ ಮಾಡಲಾರರು! ಮಾಡಿಲ್ಲ. ಅಂತಹದೊಂದು ಕಾವ್ಯವನ್ನು ಮಾತನಾಡಿದ ಹಾಗೆ ಅಂದವಾಗಿ ರಚಿಸುವ ಸಾಮರ್ಥ್ಯವು ನೇರವಾಗಿ ಆಂಡಯ್ಯನಿಗೆ ಮಾತ್ರ ಪ್ರಾಪ್ತವಾಗಿದೆ. ಬೇರೆ ಯಾರಿಗೂ ಪ್ರಾಪ್ತವಾಗಿಲ್ಲ". ಹೀಗೆ ಹೇಳುತ್ತಿದ್ದವರ ಇಷ್ಟ ಪೂರ್ತಿಗಾಗಿ ತಾನು ಈ ಕಾವ್ಯವನ್ನು ರಚಿಸಿದುದಾಗಿ ಇಲ್ಲಿ ಕವಿ ಹೇಳಿಕೊಂಡಿದ್ದಾನೆ. ಈ ಕಾವ್ಯಕ್ಕೆ ಇನ್ನೊಂದು ಹೆಸರು 'ಕಾವನ ಗೆಲ್ಲ' ಅಂದರೆ ಮನ್ಮಥನ ವಿಜಯ ಎಂದು. ಹೀಗೆಂದಿರುವ ಕವಿ ತನ್ನ ಕಾವ್ಯದಲ್ಲಿ ತದ್ಭವಶಬ್ದಗಳನ್ನು ಸಾಕಷ್ಟು ಉಪಯೋಗಿಸಿಕೊಂಡಿದ್ದಾನೆ. ತದ್ಭವ ಎಂದೊಡನೆ, ಅದು ಸಂಸ್ಕೃತದಿಂದ ಬಂದುದಾದರೂ ಅಚ್ಚಗನ್ನಡವೇ ಆಯಿತೆಂದು ಕವಿಯ ಅಭಿಪ್ರಾಯ.

ಆಂಡಯ್ಯನ ಮಾರ್ಗವನ್ನೇ ಅನುಸರಿಸಿ, ಮುಳಿಯ ತಿಮ್ಮಪ್ಪಯ್ಯನವರು (೧೮೮೮-೧೯೫೦) 'ಸೊಬಗಿನ ಬಳ್ಳಿ' ಎಂಬ ಕಾವ್ಯವನ್ನು ಎಂಟು ಮುಗುಳು (ಸಂಧಿ)ಗಳಾಗಿ ರಚಿಸಿದ್ದಾರೆ. ಅನಂತರ, ಕೊಳಂಬೆ ಪುಟ್ಟಣ್ಣ ಗೌಡ ಎಂಬವರು ಅಚ್ಚಗನ್ನಡದಲ್ಲಿ 'ಕಾಲೂರ ಚೆಲುವೆ' ಎಂಬ ಕೃತಿಯನ್ನೂ ರಚಿಸಿರುತ್ತಾರೆ. ಈ ಮೂರು ರಚನೆಗಳೂ ಒಂದು ಬಗೆಯ ಪಂಥದಿಂದ ರಚಿತವಾದುವೆನ್ನಬಹುದು. ಹಾಗೆ ರಚಿಸುವಾಗ ಅದು ಅಚ್ಚಗನ್ನಡವಾಯಿತೇ ? ಇಲ್ಲವೇ? ಎಂಬ ಅರಿವು ಇರಬೇಕಾದರೆ, ಸಂಸ್ಕೃತ ಮತ್ತು ಕನ್ನಡ ಎಂಬೆರಡರ ಜ್ಞಾನವೂ ಕವಿಗೆ ಇರಲೇಬೇಕಾಗುತ್ತದೆ ಎಂಬುದನ್ನು ಮರೆವಂತಿಲ್ಲ.

ಸಂಸ್ಕೃತವನ್ನು ಕನ್ನಡದಲ್ಲಿ ಕಾವ್ಯರಚನೆಗೆ ಬಳಸಿಕೊಳ್ಳುವುದರಲ್ಲಿ ಆಧುನಿಕ ಕವಿಗಳೇನೂ ಹಿಂದೆ ಬಿದ್ದಿಲ್ಲ. ಮಹಾಕವಿ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯದ ಉದಾಹರಣೆ - (ಲಂಕಾಸಂಪುಟ, ಅಶ್ರುಗಂಗೋತ್ರಿ ಸಂಚಿಕೆ) -

ಜನಚರಣಚಲದ್ಧೂಳಿದೂರಂ ಮೃಗಖುರಾ
ಕ್ಷುಣ್ಣ ಶಾದ್ವಲಸುಂದರಂ ಜಲಪಾನಸಂತೃಪ್ತ
ಪಕ್ಷಿಪಾದಾಂಕಿತ ಶಿಲಾತಲಾ ಶೈವಾಲ
ಚಿತ್ರಿತಂ ವೃಕ್ಷ ಗುಲ್ಮವ್ರತತಿ ಸಂವೃತಂ
ಝುರಪತನ ಘೋಷ ಗದ್ಗದ ವಿಹಗಕೂಜಿತಂ
ಸಂಕ್ಷಿಪ್ತ ವಿಪಿನದೋಲಿರ್ದುದಾ ನಿಕುಂಜಭೂ

ಪಂಪ ಪ್ರಶಸ್ತಿ ವಿಜೇತೃ ಕವಿಯಾಗಿರುವ ಪು.ತಿ. ನರಸಿಂಹಾಚಾರ್ಯರ ಹರಿಚರಿತೆ ಎಂಬ ಆಧುನಿಕ ಕಾವ್ಯದಲ್ಲಿ ಸಂಸ್ಕೃತದ ಪ್ರಭಾವವು ಎದ್ದು ಕಾಣುವ ಸಂಗತಿಯೇ ಆಗಿದೆ. ಕಾವ್ಯ ಪ್ರಾರಂಭದ ಕೆಲವು ಸಾಲುಗಳಿವು -

ಶ್ರೀ ಪುರುಷನನುಪಮನುದಾರನಖಿಲಾರ್ತಿ ಪ್ರಶಮನಂ
ರಸಮೂರ್ಜಸ್ವಿ ತೇಜೋಮಯಂ ಓಂ ತತ್ ಸತ್ ವಾಚ್ಯಂ
ಪ್ರಾಚ್ಯಂ ಸೃಷ್ಟ್ಯಾದಿ ಮೂಲಂ ಸ್ಥಿತಿ ಭರಣಾದಿ ಲೋಲಂ
ಸ್ವಸ್ಥಂ ಶಿವಂ ಸುಂದರಂ ಸರ್ವಾಂತರ್ಬಹಿಶ್ಚರಂ
ಅವಾಙ್ಮನಸಗೋಚರಂ . . .

ಸಂಸ್ಕೃತವು ನಾನಾರ್ಥಗಳ ಶಬ್ದಗಳಿಂದಲೂ ಕೂಡಿ ಅರ್ಥಪುಷ್ಟಿಗೆ ಹೆಸರಾದುದು. ಭಾವ ರಸಗಳಿಗೆ ಹೆಚ್ಚು ಸಮಂಜಸವಾದುದು. ಅದಲ್ಲದೆ ಅಲಂಕಾರಗಳ ಅಭಿವ್ಯಕ್ತಿಗೂ ವಿಶೇಷಾಸ್ಪದವಾದುದು. ಆದುದರಿಂದಲೇ ಕನ್ನಡ ಕವಿಗಳು ಸಂಸ್ಕೃತಭಾಷಾಜ್ಞಾನಬಲದಿಂದ ಶ್ರೇಷ್ಠಕಾವ್ಯಗಳನ್ನು ರಚಿಸಿರುತ್ತಾರೆ. 'ಕರ್ಣಾಟ ಕವಿ ಚೂತವನಚೈತ್ರ' ಎಂಬ ಬಿರುದಿನ ಲಕ್ಷ್ಮೀಶ ಕವಿಯ ಕನ್ನಡ ಜೈಮಿನಿಭಾರತ ಕಾವ್ಯವು ಸಂಸ್ಕೃತ ಶಬ್ದಸಂಪತ್ತಿನಿಂದ ಅಲ್ಲಲ್ಲಿ ಕಂಗೊಳಿಸಿ ಮನಸ್ಸನ್ನು ರಂಜಿಸುತ್ತದೆ. ಧರ್ಮರಾಯನ ರಾಜ್ಯಭಾರದಲ್ಲಿ ಅವನ ಕೀರ್ತಿಯನ್ನು ಅಭಿವರ್ಣಿಸುವ ಪದ್ಯವಿದು - (ಆರೂ ಪಾದಗಳ ಪ್ರಾರಂಭದಲ್ಲಿ ನಾಗೇಂದ್ರ ಶಬ್ದ ಪ್ರಯೋಗದ ಅರ್ಥಚಮತ್ಕಾರವನ್ನಿಲ್ಲಿ ಕಾಣುತ್ತೇವೆ)

ನಾಗೇಂದ್ರನಂ ಬಿಡದೆ ತಲೆವಾಗಿಸಿತ್ತಮರ
ನಾಗೇಂದ್ರನಂ ಬುದ್ಧಿದೊರೆಸಿತ್ತು ಪುರಮರ್ದ
ನಾಗೇಂದ್ರನಂ ನಿಂದು ಬೆರಗಾಗಿಸಿತ್ತಮಲ ಧರ್ಮಜನ ಕೀರ್ತಿ ಬಳಿಕ
ನಾಗೇಂದ್ರ ಶಯನಾಲಯವ ಜಡಧಿಯೆನಿಸಿ ನುತ
ನಾಗೇಂದ್ರ ವರದಾಯುಧವ ಪೊಳ್ಳುಗಳೆದು ಮಥ
ನಾಗೇಂದ್ರಧರನ ಜಾತೆಯ ನಿಲವುಗೆಡಿಸಿ ನೆರೆ ರಾಜಿಸಿತು ಮೂಜಗದೊಳು

(೨-೧೨)

ಈ ಪದ್ಯದಲ್ಲಿ ಬರುವ ಮೊದಲನೆಯ ನಾಗೇಂದ್ರ ಎಂಬುದಕ್ಕೆ ಆದಿಶೇಷ ಎಂದರ್ಥ. ಅನಂತರ ಬರುವ ಅಮರನಾಗೇಂದ್ರನು ಐರಾವತನೆಂಬ ಆನೆ; ಆನೆಗೆ ಬುದ್ಧಿಮಂದವೆಂದು ಪ್ರಸಿದ್ಧಿ. ಪುರಮರ್ದನ (ಶಿವನ) ಅಗೇಂದ್ರವು ಕೈಲಾಸ ಪರ್ವತ. ಅದು ಬೆರಗಿನಿಂದ ಎಂಬಂತೆ ನಿಂತೇ ಇರುವುದು. ನಾಗೇಂದ್ರಶಯನನ (ವಿಷ್ಣುವಿನ) ಆಲಯ (ಮನೆ) ಕ್ಷೀರಸಾಗರ. ಅಮ

ಜಡಧಿ (ಜಡಕ್ಕೆ, ಆಶ್ರಯ; ಸಮುದ್ರ). ನಾಗೇಂದ್ರವರದ (ವಿಷ್ಣುವಿನ) ಆಯುಧ - ಶಂಖ. ಅದು ಪೊಳ್ಳಾಗಿರುತ್ತದೆ. ಮಥನ ಅಗೇಂದ್ರ (ಮಂದರಪರ್ವತ) ಅದನ್ನು ಧರಿಸಿದುದು ಸಮುದ್ರ. ಅಲ್ಲಿ ಹುಟ್ಟಿದಾಕೆ ಲಕ್ಷ್ಮಿ, ಆಕೆ ಅಸ್ಥಿರೆ. ಕಾವ್ಯಗಳಲ್ಲಿ ಇಂತಹ ವಾಕ್ಚಾತುರ್ಯದ ಪದ್ಯಗಳು ಎಷ್ಟೊ ಸಿಗುತ್ತವೆ.

ಕೆಲವರು ಕನ್ನಡ ಕವಿಗಳು ಸಂಸ್ಕೃತದ ಶಬ್ದಗಳನ್ನು ಮಾತ್ರವೇ ಅಲ್ಲ, ಸಂಸ್ಕೃತದ ಪದ್ಯಗಳನ್ನೇ ಕನ್ನಡ ಪದ್ಯಗಳಾಗಿ ಪರಿವರ್ತಿಸಿರುವುದೂ ಉಂಟು. ಹಾಗೆ ಪರಿವರ್ತಿಸುವಾಗ, ಒಂದಿಷ್ಟು ಸ್ವೋಪಜ್ಞತೆಯನ್ನು ಮೆರೆಸಿರುವುದು ಉಂಟು. ಶ್ರೀ ಕೃಷ್ಣನು ಚಿಕ್ಕವನಿದ್ದಾಗ, ಅವನನ್ನು ಸಂತೈಸಿ ನಿದ್ದೆಮಾಡಿಸುವುದಕ್ಕಾಗಿ ಅವನ ತಾಯಿ ಯಶೋದೆ ಕತೆ ಹೇಳುತ್ತಿದ್ದ ಪ್ರಸಂಗವಿದು. ಸಂಸ್ಕೃತದಲ್ಲಿ ಪದ್ಯ ಹೀಗಿದೆ -

ರಾಮೋ ನಾಮ ಬಭೂವ ಹುಂ, ತದಬಲಾ ಸೀತೇತಿ ಹುಂ, ತೌ ಪಿತುರ್
ವಾಚಾ ಪಂಚವಟೀತಟೇ ವಿಹರತಸ್ತಾಮಾಹರದ್ರಾವಣಃ
ನಿದ್ರಾರ್ಥಂ ಜನನೀಕಥಾಮಿತಿ ಹರೇಃ ಹುಂಕಾರ ತಚ್ಛೃಣ್ವತಃ
ಸೌಮಿತ್ರೇ ಕ್ವ ಧನುರ್ಧನುರ್ಧನುರಿತಿ ವ್ಯಗ್ರಾ ಗಿರಃ ಪಾಂತು ವಃ

ಇದೇ ಪದ್ಯದ ಭಾವನ ಇನ್ನಷ್ಟು ರಂಜಕವಾಗುವಂತೆ ಮಹಾಕವಿ ರುದ್ರಭಟ್ಟನು ಜಗನ್ನಾಥವಿಜಯದಲ್ಲಿ ಪ್ರಸ್ತಾವಿಸಿರುವುದನ್ನು ನೋಡಿ -

ಕತೆಯಂ ಕೇಳೆಲೆ ಕಂದ ಹುಂ. ರಘುಜನೆಂಬಂ ಹುಂ, ಸಕಾಂತಂ ವನ
ಸ್ಥಿತನಾದಂ ಗುರು ಪೇಳೆ ಹುಂ, ದಶಶಿರಂ ಕೊಂಡೊಯ್ದನಾ ರಾಮನಾ
ಸತಿಯಂ ತಾನೆನೆ ಪೂರ್ವಮಂ ನೆನೆದು ಹುಂ ಹುಂ ಕೊಳ್ಳದುತ್ಕೋಪ ಹೂಂ
ಕೃತಿಯಂ ಮಾಡುತುಮೌಂಡುಗರ್ಚಿ ಕಿಸುಗಿಸ್ ಬಿಟ್ಟಚ್ಯುತಂ ರಂಜಿಕುಂ

(೩-೬೧)

ಕನ್ನಡದ ಲಾಕ್ಷಣಿಕರು ಸಂಸ್ಕೃತದಲ್ಲಿ ಇರುವುದನ್ನೇ ಕನ್ನಡದಲ್ಲಿ ತಿಳಿಸುತ್ತಿರುವುದಾಗಿ ಹೇಳಿ ಕೊಂಡುದುಂಟು. ಕನ್ನಡದ ಛಂದೋಂಬುಧಿಕರ್ತೃವಾದ ಒಂದನೆಯ ನಾಗವರ್ಮನ ಹೇಳಿಕೆ ಹೀಗಿದೆ -

ಇಂದುಧರನುಮೆಗೆ ಪೇಳ್ದಾ
ಛಂದಂ ಪಿಂಗಳನಿನವನಿಯೊಳ್ ಪರೆಪಿದೊಡಾ
ಛಂದೋಂಬುರಾಶಿಯೊಳ್ ಮೊಗೆ
ತಂದದನಂಗನೆಗೆ ನಾಗವರ್ಮಂ ಪೇಳ್ದಂ

ಹೀಗೆ ಕನ್ನಡದ ಛಂದಶ್ಶಾಸ್ತ್ರವು ಸಂಸ್ಕೃತದಿಂದ ಕನ್ನಡಕ್ಕೆ ಬಂದಿದೆಯೆನ್ನಬಹುದು. ಇನ್ನು ಅಲಂಕಾರಶಾಸ್ತ್ರದಲ್ಲಿ ಪ್ರಸಿದ್ಧವಾದುದು ತಿರುಮಲಾರ್ಯನ 'ಅಪ್ರತಿಮ ವೀರಚರಿತೆ'. ಈ ಗ್ರಂಥದ ಅಲಂಕಾರಸೂತ್ರಗಳೆಲ್ಲವೂ ಅಪ್ಪಯದೀಕ್ಷಿತನವಾಗಿವೆ. ಸೂತ್ರಗಳ ಅರ್ಥವನ್ನು ಕನ್ನಡದಲ್ಲಿ ಕೊಟ್ಟು ಕನ್ನಡದಲ್ಲಿ ಉದಾಹರಣೆಗಳನ್ನು ಕೊಡಲಾಗಿದೆ. ಅಲಂಕಾರಗಳ ಎಲ್ಲ ಹೆಸರುಗಳೂ

ಸಂಸ್ಕೃತದಲ್ಲೇ ಇರುವುದರಿಂದ, ಈ ಶಾಸ್ತ್ರಕ್ಕೆ ಮೂಲ ಸಂಸ್ಕೃತವೇ ಆಗಿರುತ್ತದೆ. ಒಂದು ಉದಾಹರಣೆ : (ಇದು ಉಪಮಾಲಂಕಾರದ ಸೂತ್ರೋದಾಹರಣೆ)

ಉಪಮಾ ಯತ್ರ ಸಾದೃಶ್ಯಲಕ್ಷ್ಮೀರುಲ್ಲಸತಿ ದ್ವಯೋಃ
ಹಂಸೀವ ಕೃಷ್ಣ ತೇ ಕೀರ್ತಿಃ ಸ್ವರ್ಗಂಗಾಮವಗಾಹತೇ

ಅಪ್ರತಿಮವೀರಚರಿತೆಯಲ್ಲಿ ಇದರ ಪೂರ್ವಾರ್ಧದ ಸೂತ್ರವನ್ನು ಮಾತ್ರ ಹಾಗೆಯೇ ಕೊಟ್ಟು, ಕನ್ನಡದಲ್ಲಿ ಅರ್ಥವಿವರಣೆ ಮಾಡಿದೆ. ಉಪಮಾಲಂಕಾರಕ್ಕೆ ಉದಾಹರಣ ಪದ್ಯವಿದು -

ತಾಯಂತೆ ಪೊರೆದು ತಂದೆವೊ
ಲಾಯತಿಯೊಳ್ ಹಿತವನೆಣಿಸಿ ಚಿಕದೇವ ಮಹಾ
ರಾಯಂ ಪ್ರಜೆಯನಿತಂ ನಾ
ರಾಯಣನಂತೇಳ್ಗೆವಡಿಸಿಯಾಳ್ಗುಂ ಸೊಗದೊಳ್

ಕನ್ನಡ ವ್ಯಾಕರಣದಲ್ಲಿ ಸಂಸ್ಕೃತಕ್ಕಿಂತ ಭಿನ್ನವಾದ ಎಷ್ಟೇ ಅಂಶಗಳಿದ್ದರೂ ಪಾರಿಭಾಷಿಕಶಬ್ದಗಳೆಲ್ಲವೂ ಸಂಸ್ಕೃತದವೇ ಆಗಿರುತ್ತದೆ. ಉದಾ : ಅಕ್ಷರ, ಸ್ವರ, ವ್ಯಂಜನ, ಯೋಗವಾಹ, ದ್ವಿತ್ವ (ಇದಕ್ಕೆ ಮಾತ್ರ ಒತ್ತು ಎಂಬ ಶಬ್ದವೂ ಕನ್ನಡದಲ್ಲಿದೆ), ಧಾತು, ನಾಮ, ಸರ್ವನಾಮ, ತದ್ಧಿತ, ಕೃದಂತ, ಅವ್ಯಯ, ಕರ್ತೃ, ಕರ್ಮ, ಕ್ರಿಯೆ, ಪ್ರಕೃತಿ, ಪ್ರತ್ಯಯ, ವಿಭಕ್ತಿ, ಲಿಂಗ, ವಚನ, ಭೂತ ವರ್ತಮಾನ ಭವಿಷ್ಯತ್ಕಾಲಗಳು, ವಿಶೇಷ್ಯ, ವಿಶೇಷಣ, ಸಂಧಿ, ಸಮಾಸ ಇತ್ಯಾದಿಗಳೆಲ್ಲ ಸಂಸ್ಕೃತದವೇ ಪಾರಿಭಾಷಿಕಗಳಾಗಿರುತ್ತವೆ.

ಹೀಗೆ ಕನ್ನಡ ಭಾಷೆಯ ಮೇಲೆ, ಕನ್ನಡದ ಕಾವ್ಯ ಶಾಸ್ತ್ರಗಳ ಮೇಲೆ ಹಾಗೂ ಕಾವ್ಯಗಳ ಮೇಲೆ ಸಂಸ್ಕೃತವು ತನ್ನ ದಟ್ಟವಾದ ಪ್ರಭಾವವನ್ನೇ ಬೀರಿರುವುದು ವಾಸ್ತವ ಸಂಗತಿ. ಅವನ್ನೆಲ್ಲ ಕಿತ್ತುಹಾಕಿ ಸ್ವತಂತ್ರವಾಗಲು ಕನ್ನಡಕ್ಕೆ ಸಾಧ್ಯವೂ ಇಲ್ಲ. ಇಂತಹ ಆವಶ್ಯಕತೆಯೂ ಇಲ್ಲ. ಅಂತಹ ಪ್ರಭಾವವಿರುವುದರಿಂದಲೇ ಕನ್ನಡಕ್ಕೆ ಶಬ್ದಸಂಪತ್ತು, ಶಾಸ್ತ್ರಸಂಪತ್ತು, ಮಹತ್ವಗಳು ಮೈಗೂಡಿರುತ್ತವೆ. ಹಾಗಿದ್ದರೂ ಅದರೊಂದಿಗೆ ಕನ್ನಡವು ತನ್ನದೇ ಆದ ರೂಪವೈಶಿಷ್ಟ್ಯ, ಪ್ರಯೋಗವೈಶಿಷ್ಟ್ಯಗಳನ್ನು ತಾಳಿಕೊಂಡಿದೆ ಎಂಬುದನ್ನು ಮರೆವಂತಿಲ್ಲ. ಈ ಮರ್ಮವನ್ನು ಸರಿಯಾಗಿ ತಿಳಿಯಬೇಕಾದರೆ,ಕನ್ನಡಿಗರಿಗೆ ಸಂಸ್ಕೃತದಲ್ಲಿ ಮತ್ತು ಕನ್ನಡದಲ್ಲಿ ಹೆಚ್ಚಿನ ಪರಿಶ್ರಮದಿಂದ ಬಂದ ಪರಿಜ್ಞಾನವೂ ಇರಬೇಕಾಗುತ್ತದೆ.

□

೫

ಕನ್ನಡದಲ್ಲಿ ಸಾಹಿತ್ಯ ಸೃಷ್ಟಿ

ಸಾಹಿತ್ಯ ಎನ್ನುವಾಗ, ಅದರಲ್ಲಿ ಕಾವ್ಯ, ನಾಟಕ, ಪ್ರಬಂಧ, ಕಥೆ, ಕಾದಂಬರಿ ಮುಂತಾದ ವೈವಿಧ್ಯವೆಲ್ಲವೂ ಒಳಗೊಳ್ಳುತ್ತವೆ. ಅವುಗಳಲ್ಲಿ ಕಾವ್ಯಕ್ಕೆ ಹಿರಿಮೆ. ಏಕೆಂದರೆ - ಅದಕ್ಕೆ ಶಾಸ್ತ್ರಾನುಭವ, ಲೋಕಾನುಭವ, ರಚನಾಭ್ಯಾಸಗಳ ವಿಶೇಷದ ಹಿನ್ನೆಲೆ ಬೇಕು. ಅಂತಹುದನ್ನು ರಚಿಸುವಾತನು ಕವಿ. ಬ್ರಹ್ಮನು ಚತುರ್ಮುಖನಾಗಿದ್ದು ಸ್ಥಾವರ ಜಂಗಮಾತ್ಮಕ ಜಗತ್ತಿನ ಸೃಷ್ಟಿಕರ್ತನಾದರೆ, ಕವಿ ಕಾವ್ಯಸೃಷ್ಟಿಕರ್ತ. ಇವರಲ್ಲಿ ಯಾರು ಮೇಲು? ಭಾಸ್ಕರಕವಿ (೧೪೨೪) ತನ್ನ ಜೀವಂಧರಚರಿತೆಯಲ್ಲಿ ಹೀಗೆಂದಿದ್ದಾನೆ -

ಬಿಸಜಸಂಭವ ಷಡ್ರಸವ ನಿ
ರ್ಮಿಸೆ, ಕವೀಶ್ವರ ಧಾತ್ರಿಯೊಳು ನವ
ರಸವ ಸೃಜಿಸಿದೊಡಾ ಚತುರ್ಮುಖನಿಂದೆ ಕವಿವರರು
ವಸುಧೆಯೊಳು ಪರಿಮಿಗಿಲೆನಿಸಿ ಪಸ
ರಿಸಲು ಲೋಕತ್ರಯವು ಸತ್ಕವಿ
ಯೆಸಗಿದಂದದೊಳೊಪ್ಪಿಹುದು ತಿಳಿವರೆ ಧರಿತ್ರಿಯಲಿ

ಬ್ರಹ್ಮನು-ಉಪ್ಪು, ಹುಳಿ, ಖಾರ, ಕಹಿ, ಸಿಹಿ ಒಗರು-ಎಂಬ ಆರು ರಸಗಳನ್ನು ಸೃಷ್ಟಿಸಿದ್ದರೆ, ಕವಿಯು ಶೃಂಗಾರ, ಹಾಸ್ಯ, ಕರುಣ, ವೀರ, ರೌದ್ರ, ಅದ್ಭುತ, ಬೀಭತ್ಸ, ಭಯಾನಕ, ಶಾಂತ-ಎಂಬ ಒಂಬತ್ತು ಬಗೆಯ ರಸಗಳ ಸೃಷ್ಟಿಕರ್ತನಾಗಿದ್ದಾನೆ. ಷಡ್ರಸಗಳು ಕೇವಲ ಭೌತಿಕವಾಗಿ ಕ್ಷಣಿಕವಾದ ರುಚಿಯನ್ನು ನೀಡತಕ್ಕವು. ಅವುಗಳ ಬಳಕೆಗೆ ಪರಿಮಿತಿಯೂ ಉಂಟು. ನವರಸಗಳು ಮತ್ತು ಮತ್ತೂ ನೆನಸಿದಂತೆಲ್ಲ ರುಚಿಕರವಾಗಿ, ಆನಂದ ನೀಡುವವು. ಸಂಖ್ಯೆಯಲ್ಲಿ ಬ್ರಹ್ಮಸೃಷ್ಟಿಗಿಂತ ಒಂದೂವರೆಯಷ್ಟು ಹೆಚ್ಚಿಗಿವೆ. ಅಷ್ಟೇಅಲ್ಲ, ಮೂರು ಲೋಕವೂ ಕವಿ ತನ್ನ ಮಾತಿನಲ್ಲಿ ನಿರ್ಮಿಸಿದಂತಿರುವುದು ಎಂದಿಲ್ಲಿ ಹೇಳಿದೆ. ಬ್ರಹ್ಮನು ಲೋಕವನ್ನು ಸೃಷ್ಟಿಸಿದ್ದು ಹೌದು, ಹಾಗೆಯೇ ಕವಿಗಳನ್ನೂ ಸೃಷ್ಟಿಸಿದ್ದಾನೆ. ಹಾಗಾದರೆ ಈ ಕವಿಗಳ (ಸಾಹಿತಿಗಳ) ಕರ್ತವ್ಯವೇನು?

ಲೋಕದಲ್ಲಿ ಧರ್ಮನಿಷ್ಠನಾಗಿ ಸತ್ಯ, ನ್ಯಾಯ, ನೀತಿ, ಪರಹಿತ, ಸಂಸ್ಕೃತಿ-ಮುಂತಾದ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಕೃತಿರಚನೆ ಮಾಡುವುದೇ ಆಗಿರುತ್ತದೆ. ಅದಕ್ಕೆ ವಿರುದ್ಧವಾಗಿ ದ್ವೇಷ, ಮತ್ಸರ, ಲೋಭ, ಮೋಹ, ಪರಪೀಡೆ ಮುಂತಾದ ಅಸುರೀಭಾವಗಳನ್ನು ಕೆರಳಿಸುವುದಾಗಿದ್ದರೆ, ಅದು ಕವಿಯ ಕರ್ತವ್ಯಕ್ಕೆ ವಿರುದ್ಧವಾಗುವುದು. ಅವನ ಕಾವ್ಯದಲ್ಲಿ,

ಯಾವುದೇ ಪ್ರಕಾರದ ಸಾಹಿತ್ಯದಲ್ಲಿ ಓದುಗರಿಗೆ ಸಂತೋಷಕೊಡುತ್ತ, ಭಾವಪ್ರಚೋದನೆಯಿಂದ ಸಮಾಜಕ್ಕೆ, ರಾಷ್ಟ್ರಕ್ಕೆ, ಲೋಕಕ್ಕೆ ಹಿತವಾದುದನ್ನು ಸ್ವೀಕರಿಸುವಂತೆ, ಕೇಡೆನಿಸಿದುದನ್ನು ತ್ಯಜಿಸುವಂತೆ ಸರಿಯಾದ ಪ್ರೇರಣೆಯೂ ಇರಬೇಕು. ಕನ್ನಡದಲ್ಲಿ ಪೂರ್ವಕವಿಗಳ ಕಾವ್ಯಗಳು ಹಾಗೆ ಇದ್ದುವೆಂದು ಕವಿರಾಜಮಾರ್ಗ (ಕ್ರಿ.ಶ. ೮೭೦) ತಿಳಿಸುತ್ತದೆ -

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದರಿಪುಗು
ಮಾ ಪರಮಕವಿಪ್ರಧಾನರಾ ಕಾವ್ಯಂಗಳ್ (೧-೧೮)

ಈ ನಿರೂಪಣೆಯಲ್ಲಿ ಎಲ್ಲ ಕಾಲಕ್ಕೂ ಸೊಗಸುವ ಮತ್ತು ತಕ್ಕುದಾಗುವ, ಉಪಾದೇಯವಾದ ಸಾಹಿತ್ಯದ ವೈಚಾರಿಕ ಲಕ್ಷಣವನ್ನು ಹೇಳಲಾಗಿದೆ. ಇದನ್ನು ಲಕ್ಷ್ಯದಲ್ಲಿಟ್ಟಿದ್ದ ಪ್ರಾಚೀನ ಕವಿಗಳು ಮಾನವ ಜೀವನಕ್ಕೆ ಮಾರ್ಗದರ್ಶಕವಾಗತಕ್ಕ ಕಾವ್ಯಗಳನ್ನೇ ಸೃಷ್ಟಿಸಿದ್ದಾರೆ. ಪಂಪ, ರನ್ನ, ಪೊನ್ನ, ದುರ್ಗಸಿಂಹ, ರುದ್ರಭಟ್ಟ, ರಾಘವಾಂಕ, ಕುಮಾರವ್ಯಾಸ ಮುಂತಾದ ಕವಿಗಳ ಕಾವ್ಯಗಳು ಪೂರ್ವೋಕ್ತ ಗುಣಲಕ್ಷಣದಿಂದ ಶೋಭೆವಡೆದುದನ್ನು ನಾವು ಕಾಣುತ್ತೇವೆ. ಈ ಕಾವ್ಯಗಳನ್ನು ಓದುವ, ಕೇಳುವ, ಕಲಿಯುವ ವ್ಯಕ್ತಿಗಳು ಆತ್ಮೋದ್ಧಾರಕ್ಕೂ ಲೋಕೋದ್ಧಾರಕ್ಕೂ ಪ್ರೇರಕ-ಸ್ಫೂರ್ತಿ ಪಡೆಯುವರೆಂಬುದರಲ್ಲಿ ಸಂಶಯವಿಲ್ಲ. ಸಾಹಿತ್ಯಸೃಷ್ಟಿಕಾರ್ಯ ನಿರಂತರವಾದುದು. ಹಿಂದಿನ ಕವಿಗಳ ಸಾಹಿತ್ಯಗಳಿಂದ ಸ್ಫೂರ್ತಿ ಪಡೆದು, ಇಂದಿನ ಪರಿಸ್ಥಿತಿ ಲೋಕಸ್ಥಿತಿಗಳನ್ನು ಅನುಲಕ್ಷಿಸಿ, ಜೀವನಮಾರ್ಗದರ್ಶಕವಾಗುವ ಸಾಹಿತ್ಯಸೃಷ್ಟಿ ಆಗುತ್ತಲೇ ಇರಬೇಕಾದುದು.

ಆಧುನಿಕ ಸಾಹಿತಿಗಳಲ್ಲಿ ಅನೇಕರು ತಮ್ಮ ಕೃತಿರಚನೆಗಳ ಮೂಲಕ ಹಿರಿಮೆಯನ್ನು ಮೆರೆದಿದ್ದಾರೆ. ಪಂಜೆಯವರು, ಬಿ.ಎಂ.ಶ್ರೀ. ಮುಳಿಯ ತಿಮ್ಮಪ್ಪಯ್ಯ, ಕುವೆಂಪು, ಸೇಡಿಯಾಪು, ಬೇಂದ್ರೆ, ಮಾಸ್ತಿಯವರು, ಪು.ತಿ.ನ. ಮುಂತಾದವರು ತಮ್ಮವೇ ಆದ ಹೊಸ ಹೊಸ ರೀತಿಯಲ್ಲಿ ಕೃತಿರಚನೆ ಮಾಡಿ ತಾಯ್ನಾಡಿಗೂ ತಾಯ್ನುಡಿಗೂ ಕೀರ್ತಿಗೌರವಗಳನ್ನು ತಂದಿದ್ದಾರೆ. ಆದರೆ ಈಗೀಗಿನ ಕವಿಗಳಲ್ಲಿ ಉಚ್ಛೃಂಖಲ ಸ್ವಭಾವವೇ ಹೆಚ್ಚಾಗಿರುವಂತೆ ತೋರುತ್ತದೆ. ಅವರ ವಾದದ ಪ್ರಕಾರ, ಕನ್ನಡಕ್ಕೆ ವ್ಯಾಕರಣ ಅವಶ್ಯವಿಲ್ಲ; ಕನ್ನಡ ಪದ್ಯಗಳಿಗೆ ಛಂದಸ್ಸಿನ ಕಟ್ಟಳೆ ಇರಬಾರದು. ಪದ್ಯಕ್ಕೆ ಪಾದಗಳ ನಿಯಮವಾಗಲೀ ಪ್ರಾಸನಿಯಮವಾಗಲೀ ಅನಾವಶ್ಯಕ. ಕವಿಗೆ ತೋಚಿದಂತೆ ಗೀಚುವುದೇ ಛಂದಸ್ಸು. ಕಂದ ವೃತ್ತಗಳಲ್ಲಿ, ಷಟ್ಪದಿಗಳಲ್ಲಿ ಕವಿತೆ ಬರೆಯುವುದು ಅಪ್ರಸ್ತುತ! ಹೀಗಾದುದು ದುರದೃಷ್ಟವೇ ಸರಿ. ಈ ಕಾಲದಲ್ಲಿ ಯಾವನಾದರೂ ವ್ಯಾಕರಣಶುದ್ಧವಾಗಿ, ಛಂದೋಬದ್ಧವಾಗಿ ಹಿಂದಿನ ಕವಿಗಳ ಕಾವ್ಯಗಳಿಗೆ ಹೋಲಿಕೆಯಾಗುವ ಚಂಪೂಕಾವ್ಯ ರಚನೆಮಾಡಿದನೆಂದರೆ ಅಥವಾ ಷಟ್ಪದೀಕಾವ್ಯ ರಚಿಸಿದನೆಂದರೆ, ಅಲ್ಲಿಗೆ ವಿಮುಖರಾಗುವ ಪಂಡಿತಾಭಾಸರೇ ಎಲ್ಲೆಲ್ಲೂ! ಛಂದೋಬದ್ಧವಾಗಿ ಒಂದು ಸತ್ಕಾವ್ಯವನ್ನು ಬರೆದು, ಅದನ್ನು ಪತ್ರಿಕೆಯಲ್ಲಿ ವಿಮರ್ಶೆಗೆಂದು ಕೊಟ್ಟರೆ, ವಿಮರ್ಶೆಮಾಡದಿರುವುದೇ ಹೆಚ್ಚು.

ಅಷ್ಟರಮಟ್ಟಿಗೆ ಲಕ್ಷಣಬದ್ಧಕಾವ್ಯದ ತಿರಸ್ಕಾರ ಪ್ರವೃತ್ತಿ ಬಳೆದುಹೋಗಿದೆ' ಇದು ಕನ್ನಡ ಭಾಷೆಗಾಗಲೀ ಸಾಹಿತ್ಯಕ್ಕಾಗಲೀ ಒಪ್ಪುವ ಸಂಗತಿ ಹೇಗಾಗಬಲ್ಲದು?

ಇಂದಿನ ವಿದ್ಯಾಭ್ಯಾಸದಲ್ಲಿ ಶಾಲೆ ಕಾಲೇಜುಗಳ ಕನ್ನಡ ಪಠ್ಯಪುಸ್ತಕಗಳಲ್ಲಿ ನಮ್ಮ ಪ್ರಾಚೀನ ಕಾವ್ಯಗಳ ಬಗೆಗೆ - ಪಂಪ, ರನ್ನ, ರುದ್ರಭಟ್ಟ, ಷಡಕ್ಷರಿ, ಕುಮಾರವ್ಯಾಸ, ಲಕ್ಷ್ಮೀಶರಂತಹ ಕವಿಗಳಿಗೆ ಸಾಕಷ್ಟು ಪ್ರಾತಿನಿಧ್ಯವಿರುವುದಿಲ್ಲ. ಕನ್ನಡದಲ್ಲಿ ಅತ್ಯುನ್ನತ ಪದವಿಯೆನಿಸುವ ಎಂ.ಎ.ತರಗತಿಗೆ ಅತ್ಯವಶ್ಯ ಪಠ್ಯವಾಗಬೇಕಾಗಿದ್ದ "ಕರ್ಣಾಟಕ ಶಬ್ದಾನುಶಾಸನ"ವನ್ನು ಯಾವ ವಿಶ್ವವಿದ್ಯಾಲಯವೂ ಪಠ್ಯವಾಗಿ ಮಾಡುವುದೇ ಇಲ್ಲ! ಅದು ಸಂಸ್ಕೃತದಲ್ಲಿರುವುದು ಕಾರಣವಾಗಿದ್ದರೂ ಇರಬಹುದು. ಆದರೆ, ಕನ್ನಡದಲ್ಲಿರುವ ಶಬ್ದಮಣಿದರ್ಪಣವನ್ನು ಪೂರ್ತಿಯಾಗಿ ವ್ಯಾಕರಣಪಠ್ಯ ಮಾಡಬಹುದಲ್ಲವೆ? ಬಹುಶಃ ಅದನ್ನು ಬೋಧಿಸಲು ಸಮರ್ಥ ಅಧ್ಯಾಪಕರಿಲ್ಲದಿರುವುದು ಒಂದು ಕಾರಣವಿದ್ದರೂ ಇರಬಹುದು. ಆದರೆ ಹಾಗೆ ಒಪ್ಪಿಕೊಳ್ಳಲು ಯಾವ ವಿಶ್ವವಿದ್ಯಾಲಯದ ಕನ್ನಡವಿಭಾಗವೂ ಸಿದ್ಧವಿರದು. ಇನ್ನು ಕನ್ನಡ ಸಾಹಿತ್ಯದ ಒಳತಿರುಳಿನ ಸತ್ವವನ್ನು ಲಕ್ಷವಿಡೋಣ.

ಎಂತಹ ಸಾಹಿತ್ಯ ನಮಗೀಗ ಆವಶ್ಯಕ? ಕನ್ನಡ ಸಾಹಿತ್ಯ ಕ್ಷೇತ್ರವೀಗ ಸುವರ್ಣಯುಗದಲ್ಲಿದೆ ಎಂದುಕೊಂಡು, ಯದ್ವಾ ತದ್ವಾ ಸಾಹಿತ್ಯರಚನೆ ಮಾಡುತ್ತಾ ಅದರಲ್ಲಿಲ್ಲದ ಶ್ರೇಷ್ಠಗುಣಗಳನ್ನು ಆವಾಹಿಸುತ್ತ ಹೊಗಳುವ ಮತ್ತು ಹೊಗಳಿಸುವ ಅಭ್ಯಾಸವೇ ಹೆಚ್ಚಾಗಿ ಕಂಡುಬರುತ್ತಿದೆ. ಕಾವ್ಯವನ್ನೆ ಲಕ್ಷ್ಯದಲ್ಲಿಟ್ಟು ಸಾಹಿತ್ಯದ ಉದ್ದೇಶವೇನೆಂಬುದನ್ನು ಮಮ್ಮಟನೆಂಬ ಲಾಕ್ಷಣಿಕನು ಹೇಳಿರುವುದು ಲಕ್ಷ್ಯಾರ್ಹವಾಗಿದೆ -

ಕಾವ್ಯಂ ಯಶಸೇऽರ್ಥಕೃತೇ
ವ್ಯವಹಾರವಿದೇ ಶಿವೇತರ ಕ್ಷತಯೇ
ಸದ್ಯಃ ಪರನಿರ್ವೃತಯೇ
ಕಾಂತಾಸಮ್ಮಿತತಯೋಪದೇಶಯುಜೇ

ಇಲ್ಲಿ ಹೇಳಿದ ಆರು ಉದ್ದೇಶಗಳಲ್ಲಿ ಕೀರ್ತಿಲಾಭ, ಧನಾರ್ಜನೆ, ತಡವಿಲ್ಲದೆಯೇ ದೊರಕುವ ಆನಂದ-ಈ ಮೂರು ಮಾತ್ರವೇ ಆಧುನಿಕ ಸಾಹಿತ್ಯ ರಚನೆಯ ಉದ್ದೇಶ ವೆಂಬಂತಾಗಿದೆ. ಇನ್ನುಳಿದ ವ್ಯವಹಾರಜ್ಞಾನ, ಅಶುಭನಿವಾರಣೆ, ಕಾಂತಾಸಮ್ಮಿತವೆನಿಸುವ ಉಪದೇಶ ಎಂಬ ಅತ್ಯವಶ್ಯವಾದ ಈ ಮೂರನ್ನೂ ಅಲಕ್ಷ್ಯಗೊಳಿಸಿರುವುದು ಈಗೀಗ ಹೆಚ್ಚಾಗಿದೆ. ಅದು ಹೇಗೆಂಬುದನ್ನು ಇಂದಿನ ಸ್ಥಿತಿಗತಿಗಳಿಂದ ಅರ್ಥಮಾಡಿಕೊಳ್ಳಬಹುದು. ವ್ಯವಹಾರಜ್ಞಾನವೆಂದರೆ, ವ್ಯಾಪಾರ ವಹಿವಾಟುಗಳಲ್ಲ. ಮನುಷ್ಯರಾದ ನಾವು ಎಲ್ಲಿ ಹೇಗೆ ವರ್ತಿಸಬೇಕೆಂಬ ಅರಿವು. ಇದನ್ನೇ ವಿವೇಕವೆಂದೂ ಹೇಳಬಹುದು. ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕಾದ ಅತ್ಯವಶ್ಯಪ್ರಜ್ಞೆ ಇದು. ಸಮಾಜದಲ್ಲಿ ಸತಿ, ಪತಿ, ತಂದೆ, ತಾಯಿ, ಬಂಧು, ಮಿತ್ರ, ಮಗ, ಮಗಳು, ಗುರು, ಶಿಷ್ಯ, ಪಯಣಿಗ, ಉದ್ಯೋಗಿ, ವ್ಯಾಪಾರಿ, ಮಂತ್ರಿ, ರಾಜ್ಯಪಾಲ, ರಾಯಭಾರಿ, ಹೀಗೆ ವ್ಯಕ್ತಿಯು ತನ್ನ ಯಾವ ನೆಲೆಯಲ್ಲಿದ್ದರೂ ಅಲ್ಲಲ್ಲಿಗೆ ತಕ್ಕಂತೆ ಪ್ರಾಮಾಣಿಕವಾಗಿ ವರ್ತಿಸುವುದು ಕಂಡುಬರುತ್ತದೆಯೆ? ಅಂತಹ ಪ್ರಾಮಾಣಿಕತೆ

ಇರುತ್ತಿದ್ದರೆ, ಈ ದೇಶದಲ್ಲಿ ಇಷ್ಟೊಂದು ಅನೀತಿಯೇಕೆ? ಕಳವು, ಕೊಲೆ, ದರೋಡೆ, ಅಸಮಾನತೆ, ಪಕ್ಷಪಾತ, ಸುಳ್ಳು, ಹಗೆತನ, ಮತ್ಸರ, ಮೋಸ ಇವೆಲ್ಲ ಏಕೆ ಇಷ್ಟೊಂದು ಉಲ್ಬಣವಾಗಿವೆ? ಎರಡನೆಯದಾದ 'ಶಿವೇತರ ಕ್ಷತಿ' ಅಂದರೆ ಅಮಂಗಲ ಪರಿಹಾರವು ಸಾಹಿತ್ಯ ಲಕ್ಷಣವಾಗಿರುವಾಗ, ಜನರ ದುರಾಲೋಚನೆಗಳನ್ನು, ದುರ್ವತನೆಗಳನ್ನು ಖಂಡಿಸಿ ಸನ್ಮಾರ್ಗ ವನ್ನೂ ನೀತಿವಿಧಾನವನ್ನೂ ನಿರೂಪಿಸುವ ಸಾಹಿತ್ಯಸೃಷ್ಟಿ ಇಂದು ಅತ್ಯವಶ್ಯವಲ್ಲವೆ?

ನಮ್ಮ ದೇಶದ ಈಗಿನ ಪರಿಸ್ಥಿತಿ ನೋಡಿದರೆ - ಒಂದೆಡೆ ಪರಕೀಯರು, ಉಗ್ರಗಾಮಿಗಳು ದೇಶದೊಳಗೆ ನುಗ್ಗುತ್ತಿದ್ದಾರೆ. ರಾಷ್ಟ್ರದ ಭೂಭಾಗವನ್ನೆ ಹಪ್ಪಳದಂತೆ ಅಲ್ಲಿ ಇಲ್ಲಿ ಮುರಿದು ಮುಕ್ಕುತ್ತಿದ್ದಾರೆ'. ದೇಶವಿಭಜನೆ ಅಂತಹದರಲ್ಲಿ ಮೊದಲನೆಯದು. ಅದು ಅಲ್ಲಿಗೇ ನಿಲ್ಲದೆ ಮುಂದುವರಿಯುತ್ತಿರುವುದು ಕಂಡುಬರುವ ಸಂಗತಿ. ದೇಶದೊಳಗೆ ಏಕಾತ್ಮತೆ ಇಲ್ಲ. ಮಂತ್ರಿಮುಖ್ಯರೇ ಅಸತ್ಯವನ್ನು ನುಡಿಯುತ್ತಿರುವುದು, ಸ್ವಕುಟುಂಬದವರಿಗೆಲ್ಲ ಶೇಖರಿಸುವುದು ನಿತ್ಯ ಕಾಣುವ ಮತ್ತು ಕೇಳುವ ಸಂಗತಿಯಾಗಿದೆ. ಎಲ್ಲೆಲ್ಲೂ ಭ್ರಷ್ಟಾಚಾರ'. ಹೇಳುವುದೊಂದು ಮಾಡುವುದೊಂದು. ಒಂದು ಉದಾಹರಣೆ ಕೊಡುವುದಾದರೆ-ಹಿಂದುತ್ವ ಎಂಬ ರಾಷ್ಟ್ರೀಯ ಶಬ್ದವನ್ನು ಕೇಳಿದೊಡನೆ ಸಿಂಡರಿಸಿಕೊಂಡು, ಬಾಯ್ಗೆ ಬಂದಂತೆ ಅದನ್ನು ಖಂಡಿಸಿದ ಬಾಯಲ್ಲೇ ತಮ್ಮ ರಾಷ್ಟ್ರೀಯವೆನಿಸುವ (?) ಭಾಷಣದಲ್ಲಿ ಕೊನೆಗೆ ಜಯಹಿಂದ್ ಎಂದು ಉನ್ನತಧ್ವನಿಯಲ್ಲಿ ಘೋಷಿಸುವುದು ಎಲ್ಲ ಕಡೆ ಕಂಡುಬರುವ ಸಂಗತಿ. ಜಯಹಿಂದ್ ಎಂದರೆ ಹಿಂದುತ್ವಕ್ಕೆ ಜಯವಾಗಲಿ! ಎಂದೇ ಅರ್ಥವಲ್ಲದೆ ಮತ್ತೇನು? ಇಂತಹ ಭಾಷಿಕ ಮತ್ತು ಬೌದ್ಧಿಕ ಭ್ರಷ್ಟಾಚಾರದವರು ಈ ದೇಶದ ರಾಜನೀತಿಪಟುಗಳಾಗಿರುವರಲ್ಲವೆ? ನಾವು ಜಾತ್ಯತೀತರು, ಧರ್ಮಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲವೆನ್ನುವವರು ತಮ್ಮ ಅನ್ಯಾಯದ ಪಾಪದ ಶಾಂತಿಗೋ ಎಂಬಂತೆ ಮಹಾಯಜ್ಞಗಳನ್ನು ಮಹಾಪೂಜೆಗಳನ್ನು ದೇವಾಲಯಗಳಲ್ಲಿ ಮಸೀದಿಗಳಲ್ಲಿ ನಡೆಸಿ ಪ್ರಸಾದ ಸ್ವೀಕರಿಸಿ, ಮುಖಕ್ಕೆ ನಾಮ ಎಳೆದುಕೊಂಡು, ಸಭಾಪ್ರಾರಂಭದಲ್ಲಿ ಹಗಲಲ್ಲಿ ಕೂಡ ದೀಪಹಚ್ಚುವುದು, ರಾಜಕೀಯದ ಅಂಗವಾಗಿ ಪುಣ್ಯಕ್ಷೇತ್ರ ಸಂದರ್ಶಿಸುವುದು ಇಂತಹ ಭ್ರಷ್ಟಾಚಾರಗಳನ್ನು ಖಂಡಿಸುವ ಸಾಹಿತ್ಯ ಹೆಚ್ಚು ಹೆಚ್ಚಾಗಿ ಹೊರಬರಬೇಕಾದ ಕಾಲವಿದು.

ಪ್ರತಿಯೊಬ್ಬ ಪ್ರಜೆಯಲ್ಲಿಯೂ ರಾಷ್ಟ್ರಭಕ್ತಿಯನ್ನು ಮೂಡಿಸುವ ಸಾಹಿತ್ಯಸೃಷ್ಟಿ, ಅದರೊಂದಿಗೆ ಕಪಟದ ರಾಷ್ಟ್ರನಿಷ್ಠೆಯನ್ನು ಖಂಡಿಸಿ ಬಯಲುಮಾಡುವ ಸಾಹಿತ್ಯ ಈಗಿನ ಆವಶ್ಯಕತೆಯಾಗಿದೆ. ಸರ್ವಸಮಾನತೆಯ, ಜಾತಿತಾರತಮ್ಯವಿಲ್ಲದ, ಅರ್ಹತೆಯೇ ಮಾನ್ಯವಾಗುವ ಮೀಸಲಾತಿ ನೀತಿ ಬರಬೇಕಾಗಿದೆ. ಅದನ್ನು ಪ್ರೇರಿಸುವ ಕವನ, ಕಾವ್ಯ, ನಾಟಕ, ಪ್ರಬಂಧ, ಕತೆಕಾದಂಬರಿಗಳು ಬರಬೇಕು. ಅದರೊಂದಿಗೆ ರಸಭಾವಾತ್ಮಕ ಸನ್ನಿವೇಶಚಿತ್ರಣ, ಸೊಗಸಾದ ಶೈಲಿ, ಭಾಷಾಶುದ್ಧಿ ಇರಬೇಕಾದುದೂ ಅವಶ್ಯ.

□

೬

ಕನ್ನಡಕ್ಕೆ ವ್ಯಾಕರಣ - ಒಂದು ವಿಶ್ಲೇಷಣೆ

ಒಂದೆಡೆ ಆಡುಮಾತುಗಳಾಗಿ ವಿವಿಧ ಜಾನಪದರೂಪಗಳಲ್ಲಿ ನಮ್ಮ ಕನ್ನಡವಿದೆ. ಇನ್ನೊಂದೆಡೆ ನಿಶ್ಚಿತ ಶಿಷ್ಟಭಾಷೆಯಾಗಿ ಗ್ರಾಂಥಿಕರೂಪದಲ್ಲಿ ಬೆಳಗುತ್ತಿದೆ. ಕನ್ನಡಕ್ಕೆ ವ್ಯಾಕರಣವುಂಟೆ? ಅದು ಬೇಕೆ, ಬೇಡವೆ? ಎಂಬ ಆಧುನಿಕ ವಿಚಾರಧೋರಣೆ ಈಗೀಗ ಹೆಚ್ಚು ಮೇಲೆದ್ದಿರುವಂತೆ ಕಂಡುಬರುತ್ತದೆ. ಈ ವಿಷಯವನ್ನು ವಿಶ್ಲೇಷಿಸಬೇಕಾದರೆ, ಕನ್ನಡದ ಲಾಕ್ಷಣಿಕ ವೈಶಿಷ್ಟ್ಯ, ಹಿರಿಮೆ, ಬೆಳವಣಿಗೆ, ಮಾರ್ಪಾಡು, ಅನುಸರಣೆ ಮುಂತಾದುವೆಲ್ಲವನ್ನೂ ಅನುಲಕ್ಷಿಸಿ ಮುಂದುವರಿಯಬೇಕಾಗುತ್ತದೆ.

'ಕನ್ನಡ' ಎಂಬುದು ಅದೇ ಹೆಸರ ನಾಡು ನುಡಿಗಳೆರಡನ್ನೂ ದ್ಯೋತಿಸುವ ಅರ್ಥವತ್ತಾದ ಶಬ್ದ. ಪ್ರಕೃತ, ಈ ಲೇಖನ ನುಡಿಗೆ ಸೀಮಿತ. ಕನ್ನಡಕ್ಕೆ ಅಗ್ಗಳೆಯ ಗುಣವಿಶೇಷಣಗಳಿವೆ-'ಕನ್ನಡಂ ಕತ್ತುರಿಯಲ್ತೆ?' ಎಂಬುದು ಮುದ್ದಣಕವಿಯ ಮಾತು. ಡಿ. ಗೋವಿಂದ ಪೈಗಳು ಅದನ್ನೆ ಲಕ್ಷ್ಯವಿಟ್ಟು ತಮ್ಮದೊಂದು ಕವನದಲ್ಲಿ ಹೀಗೆಂದಿದ್ದಾರೆ -

ಕನ್ನಡ ಕಸ್ತೂರಿಯನ್ನ ಹೊಸತುಸಿರಿಂ ತೀಡದನ್ನ
ಸುರಭಿಯೆಲ್ಲಿ ನೀನದನ್ನ ನವಶಕ್ತಿಯಿನೆಬ್ಬಿಸು
ಹೊಸ ಸುಗಂಧದೊಸಗೆಯಿಂದ ಜಗದಿ ಪಸರ ಹಬ್ಬಿಸು

ತೆರೆದ ಕರಡಿಗೆಯ ಕಸ್ತೂರಿಯ ಸುವಾಸನೆಯಂತೆ, ಕನ್ನಡ ಸಾಹಿತ್ಯದ ಕಂಪು ಇರುವುದು. ಕನ್ನಡವು ಮಾತಾಡುವ ನಾಲಗೆಗೆ ಸವಿ! ಆದುದರಿಂದಲೇ 'ಎನಿತು ಇನಿದು ಈ ಕನ್ನಡ ನುಡಿಯು ಮನವನು ತಣಿಸುವ ಮೋಹನ ಸುಧೆಯು' ಎಂಬ ಆಧುನಿಕ ಕವಿವಾಣಿಯ ಉದ್ಗಾರವೂ ಪ್ರಚಲಿತ. ಕನ್ನಡವನ್ನು 'ಕಮ್ಮಿತು ನಾಡು' ಎಂಬುದರಿಂದ ನಿಷ್ಪತ್ತಿ ಮಾಡಿದ್ದಾರೆ. ಮಲಯಪರ್ವತದ ಗಂಧವೃಕ್ಷಗಳಿಂದ ಕಂಗೊಳಿಸುವ ನಾಡಾಗಿ ಈ ಅರ್ಥವನ್ನು ಸಾಧಿಸಿದ್ದಾರೆ. ಇದಲ್ಲದೆ ಕರುನಾಡು ಅಂದರೆ ವಿಸ್ತಾರವಾದ ನಾಡು (ಮಹಾರಾಷ್ಟ್ರ), ಎತ್ತರದ ನಾಡು, ಮೇಲ್ಮೆಯುಳ್ಳ ನಾಡು ಎಂತಲೂ ಈ ಶಬ್ದಕ್ಕೆ ಅರ್ಥ ಹೊಳೆದುಬರುತ್ತದೆ. ಕನ್ನಡ ಎಂಬುದರ ಸಂಸ್ಕೃತರೂಪ 'ಕರ್ಣಾಟ' ಇದನ್ನು 'ಕರ್ಣೇ+ಅಟತಿ' ಎಂದು ನಿಷ್ಪತ್ತಿಗೊಳಿಸಿ ತನ್ನದೇ ಆದ ಧ್ವನಿಮಾಧುರ್ಯ ಗಳಿಂದ ಕಿವಿಯಲ್ಲಿ ಸಂಚರಿಸುವ ನುಡಿ-ಎಂದು ಒಪ್ಪುವ ಅರ್ಥವನ್ನು ಹೇಳಿರುವುದೂ ಲಕ್ಷ್ಯಾರ್ಹ. ಈ ವಿವರಗಳೆಲ್ಲ ಗ್ರಾಹ್ಯವಾದುವೇ ಸರಿ. ಕನ್ನಡದ ಈ ಹಿರಿಮೆಗೆ ಭಾಷೆ ಮತ್ತು ಸಾಹಿತ್ಯ

ಮಾತ್ರವೇ ಕಾರಣವಲ್ಲ; ಭಾಷೆಯ ಅಭಿಜಾತ ಸ್ವರೂಪವನ್ನು ಉಳಿಸಿಕೊಂಡು ಬಂದಿರುವ ಕನ್ನಡ ವ್ಯಾಕರಣವೂ ಕಾರಣವಾಗಿದೆ.

ಭಟ್ಟಾಕಲಂಕನು (ಕ್ರಿ.ಶ. ೧೬೦೪) ತನ್ನ ಶಬ್ದಾನುಶಾಸನದಲ್ಲಿ ಕನ್ನಡವೇನೂ ಕೀಳಲ್ಲ, ಸಂಸ್ಕೃತಕ್ಕಿಂತಲೂ ಮೇಲು ಎಂದೇ ಅಭಿಪ್ರಾಯಪಟ್ಟಿದ್ದಾನೆ. ಅವನ ಮಾತಿನ ಅರ್ಥವಿದು-ಕನ್ನಡವು ಸಂಸ್ಕೃದಂತೆ ಸಕಲದೇಶ ಪ್ರಸಿದ್ಧವಾದುದಲ್ಲ, ಸಕಲಶಾಸ್ತ್ರೋಪಯೋಗಿಯೂ ಅಲ್ಲ, ಆದುದರಿಂದ ಸಕಲ ಮಹಾಜನ ಪರಿಗ್ರಾಹ್ಯವಲ್ಲ, ಕನ್ನಡವು ಪಾಮರರ ಭಾಷೆ. ಈ ಭಾಷೆಯಲ್ಲಿ ಪಾಮರರಿಗೇ ಅಧಿಕಾರ, ಪಂಡಿತರಿಗಲ್ಲ. ಆದುದರಿಂದ ಕನ್ನಡವು ವ್ಯಾಕರಣಶಾಸ್ತ್ರಕ್ಕೆ ಒಳಪಡುವುದಿಲ್ಲ ಎನ್ನುವ ಪಂಡಿತಂ ಮನ್ಯರ ಅನ್ಯಥಾಖ್ಯಾತಿಯು ಖಂಡತುಂಡವಾದುದು. ಅಷ್ಟೇ ಅಲ್ಲ, ಅವನದೇ ಆದ ಮಾತುಗಳಿವು-

'ಸರ್ವವಿದ್ಯಾನಾಂ ಪ್ರದೀಪಭೂತಂ ವಾಙ್ಮಲಾನಾಂ ಚಿಕಿತ್ಸಿತರೂಪಂ ಪದಸಿಧ್ಯರ್ಥನಿರ್ಣಯ ದ್ವಾರಾ ನಿಃಶ್ರೇಯಸ ಸಾಧನಂ ನಾಪರಂ ಲೋಕೇ ವ್ಯಾಕರಣಾತ್.... ಸರಸಪರಿಷತ್ ಪ್ರೌಢರೂಢ ವಿದ್ವತ್ಕವೀನಾಂ ಪೂರ್ಣಂ ಕರ್ಣಾಟನೇನ ತೂರ್ಣಂ ಚೇತಶ್ಚಮತ್ಕಾರಕಾರಿಣೀ ಕಾರ್ಣಾಟಿಕ್ಯೇವ ಗೀರ್ನಾನ್ಯಾ'

ಅಂದರೆ - ಎಲ್ಲ ವಿದ್ಯೆಗಳಿಗೆ ಬೆಳಕಿನಂತಿರುವ, ಮಾತಿನ ಕೊಳೆಯನ್ನು ಶುದ್ಧಪಡಿಸುವ ರೂಪವುಳ್ಳ, ಪದಸಿದ್ಧಿ, ಅರ್ಥನಿರ್ಣಯ, ತತ್ತ್ವಜ್ಞಾನಗಳ ಮೂಲಕ ಮೋಕ್ಷಕ್ಕೆ ಸಾಧನವೂ ಆದುದು ಈ ಲೋಕದಲ್ಲಿ ವ್ಯಾಕರಣವನ್ನು ಬಿಟ್ಟರೆ ಬೇರೆ ಯಾವುದೂ ಅಲ್ಲ.... ರಸಿಕರ ಸಭೆಗಳಲ್ಲಿರತಕ್ಕ ಪ್ರೌಢ ಮತ್ತು ಪ್ರಸಿದ್ಧ ವಿದ್ವಾಂಸರ ಮತ್ತು ಕವಿಗಳ ಕಿವಿಗಳಲ್ಲಿ ತುಂಬಿ ಸಂಚರಿಸುವುದರಿಂದ ಒಡನೆಯೇ ಮನಸ್ಸಿಗೆ ಚಮತ್ಕಾರವಾಗಿರುವ ಭಾಷೆ ಕನ್ನಡವೇ ಆಗಿದೆ. ಬೇರೆ ಯಾವುದೂ (ಸಂಸ್ಕೃತವೂ) ಅಲ್ಲ. ಕರ್ಣಾಟಕ ಸಂಸ್ಕೃತ ಉಭಯವಿಧ ಶಬ್ದಸಾಗರವನ್ನು ದಾಟಿದವನಾದ ಭಟ್ಟಾಕಲಂಕನು ಹೀಗೆನ್ನಬೇಕಾದರೆ, ಕನ್ನಡದ ಹಿರಿಮೆ ಕೇವಲ ಅಭಿಮಾನದ ಮಾತಾಗದೆ, ವಾಸ್ತವನಿರೂಪಣೆಯೇ ಆಗಿರುವುದು ಸ್ಪಷ್ಟವಲ್ಲವೆ?

ರಾಜಶೇಖರನೆಂಬ ಸಂಸ್ಕೃತ ಲಾಕ್ಷಣಿಕನು (೧೦ನೇ ಶತಮಾನ) ತನ್ನ ಕಾವ್ಯಮೀಮಾಂಸಾ ಗ್ರಂಥದಲ್ಲಿ ಕನ್ನಡವನ್ನೂ ಕನ್ನಡಿಗರನ್ನೂ ಪ್ರಶಂಸೆ ಮಾಡಿರುವುದು ಹೀಗೆ :

ರಸಃ ಕೋಽಪ್ಯಸ್ತು ಕಾಪ್ಯಸ್ತು ರೀತಿಃ ಕೋಽಪ್ಯಸ್ತು ವಾ ಗುಣಃ
ಸಗರ್ವಂ ಸರ್ವಕರ್ಣಾಟಾಃ ಟಂಕಾರೋತ್ತರಪಾಠಿನಃ

ಅಂದರೆ - 'ಕಾವ್ಯದಲ್ಲಿ ಬರುವ ರಸ, ರೀತಿ, ಗುಣಗಳು ಯಾವುದೇ ಇರಲಿ, ಅದಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಟಂಕಾರದಿಂದ (ಗಮಕ ಗತ್ತುಗಳಿಂದ) ಓದುವವರಾಗಿದ್ದಾರೆ. "ನನ್ನ ಭಾಷೆ ಕನ್ನಡ-ಕರ್ಣಾಟ" ಎಂದುಕೊಳ್ಳುವುದು ಇತರರಿಗೂ ಅಭಿಮಾನದ ಸಂಗತಿ. ಸುಮಾರು ೧೫ನೆಯ ಶತಮಾನದ ತೆಲುಗು ಕವಿ ಶ್ರೀನಾಥನು 'ನಾ ಕವಿತ್ವಂಬು ನಿಜಮು ಕರ್ಣಾಟ ಭಾಷ-ನನ್ನ ಕವಿತೆಯ ಭಾಷೆ ಕರ್ಣಾಟ (ಕನ್ನಡ) ಎಂದೇ ನುಡಿದ್ದಾನೆ. ಶ್ರುತಿಸುಭಗವಾಗಿ

ಅರ್ಥ, ಭಾವ, ರಸ ಪ್ರಕಟನಕ್ಕೆ ಹಾಗೂ ಬಾಯ ಉಚ್ಚಾರಣೆಗೆ ಒಪ್ಪುವ, ಶ್ರೇಷ್ಠ ಭಾಷೆ-ಎಂಬರ್ಥದಲ್ಲಿ ಹೀಗೆ ಹೇಳಿದುದಾಗಿ ಕಂಡುಬರುತ್ತದೆ. ಕನ್ನಡ ಶ್ರುತಿಸುಭಗತೆಗೆ ಕಾರಣಗಳಲ್ಲಿ ದ್ವಿತೀಯಾಕ್ಷರ ಪ್ರಾಸವೂ ಒಂದು. ಕನ್ನಡದ ಶಬ್ದಾಲಂಕಾರಗಳಲ್ಲಿ ಇದು ಅತಿಶಯವಾಗಿದ್ದು 'ಕನ್ನಡಕ್ಕೆ ಸತತಂ ಪ್ರಾಸಂ' ಎಂಬುದು ಕವಿರಾಜಮಾರ್ಗದ ಘೋಷಣೆ (೨-೩೮).

ಕನ್ನಡವು ಅರ್ಥಗರ್ಭಿತ; ಅರ್ಥಗ್ರಹಣೆಗೆ ತುಂಬ ಸುಲಭ ಎಂಬುದನ್ನು 'ಅನುಭವಾಮೃತ'ದಲ್ಲಿ ಹೀಗೆ ಹೇಳಿದೆ -

ಸುಲಿದ ಬಾಳೆಯ ಹಣ್ಣಿನಂದದಿ । ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರುವ
ಲಲಿತವಹ ಕನ್ನಡದ ನುಡಿಯಲಿ । ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು?

ತತ್ತ್ವಪ್ರತಿಪಾದನೆಯಲ್ಲಿ, ವೈಚಾರಿಕತೆಯಲ್ಲಿ ಸಂಸ್ಕೃದಂತೆಯೇ ಕನ್ನಡವಿದೆ. ಆದರೆ, ಸಂಸ್ಕೃತ ಅರ್ಥಕ್ಕೆ ಸುಲಭವಲ್ಲ. ಅಂತಹ ಸಂಸ್ಕೃತವನ್ನು ಕಲಿತು ಯಾವ ಆತ್ಮಜ್ಞಾನವನ್ನು ಪಡೆದು, ಮುಕ್ತಿಯನ್ನು ಗಳಿಸಬಹುದೋ ಅದನ್ನೆ ಸುಲಭವೂ ಚೆಲುವೂ ಆದ ಕನ್ನಡನುಡಿಯಿಂದ ಪಡೆಯಲು ಸಾಧ್ಯವೆಂದು ಇಲ್ಲಿ ಹೇಳಿದೆ.

ಭಾಷಾಸ್ವರೂಪದಲ್ಲಿ ಇತರ ಹಲವು ಭಾಷೆಗಳಲ್ಲಿಲ್ಲದ ವಿಶೇಷಲಕ್ಷಣ ಕನ್ನಡದಲ್ಲಿದೆ; ಇದು ಧ್ವನಿಯುಕ್ತ ಭಾಷೆ (PHONETIC). ಲಿಪಿರೂಪಕ್ಕೂ ಉಚ್ಚಾರಣೆಗೂ ಸಾಮ್ಯವಿದೆ. ಅದಕ್ಕಾಗಿ ಬೇಕಾಗುವ ಎಲ್ಲ ಅಕ್ಷರಗಳೂ (ಹ್ರಸ್ವ ಎಕಾರ ಒಕಾರ ಕೂಡ) ಕನ್ನಡದಲ್ಲಿವೆ. ಎಲ್ಲ ಸಾಹಿತ್ಯಶಾಸ್ತ್ರ ಗ್ರಂಥಗಳೂ-ವ್ಯಾಕರಣ, ಛಂದಸ್ಸು, ಅಲಂಕಾರ, ರಸಶಾಸ್ತ್ರಗಳು (ಇತ್ತೀಚೆಯ ಭಾಷಾಶಾಸ್ತ್ರ ಕೂಡ) ಕನ್ನಡದಲ್ಲಿ ಮೂಡಿ ಬಂದಿವೆ. ಇವನ್ನನುಸರಿಸಿದ ಕಾವ್ಯಗಳ ಸಮೃದ್ಧಿಯೂ ಕನ್ನಡದಲ್ಲಿದೆ. ಗಮಕಕ್ಕೆ ಅಳವಡಿಸುವ ರಗಳೆ, ಷಟ್ಪದಿ, ಸಾಂಗತ್ಯ, ಚೌಪದಿ ಕೃತಿಗಳೂ ಸಮೃದ್ಧವಾಗಿವೆ. ಕನ್ನಡದ ಲಾಕ್ಷಣಿಕ ವೈಶಿಷ್ಟ್ಯಗಳಾಗಿ ಕೇಶಿರಾಜನು ಹೇಳಿರುವ ಗಮಕಸಮಾಸ ಱ, ೞ, ಕುಳ, ಕ್ಷಳ, ಶ್ರುತಿಸಹ್ಯ ಸಂಧಿ, ಔಚಿತ್ಯಪೂರ್ಣ ಸತಿಸಪ್ತಮಿ, ಸಮಸಂಸ್ಕೃತೋಕ್ತಿ, ವ-ಮ-ಹ-ಪಗಳ ವ್ಯತ್ಯಾಸವಿಧಾನ, ಅವ್ಯಯವಲ್ಲದ ಸಂಸ್ಕೃತಶಬ್ದ ಮಾತ್ರ ನಾಮಪ್ರಾತಿಪದಿಕವಾಗುವಿಕೆ, ಶಿಥಿಲೋಚ್ಚಾರಣೆ, ಯತಿವಿಲಂಘನೆ-ಎಂಬಿವು ಲಕ್ಷ್ಯಾರ್ಹಸಂಗತಿಗಳು. ಇವಕ್ಕೆ ಸೇರಿಸಿ, ಅರಿಸಮಾಸ ತ್ಯಾಗವನ್ನೂ, ದ್ವಿತೀಯಾಕ್ಷರಪ್ರಾಸದ ಅನಿವಾರ್ಯತೆಯನ್ನೂ ಹೇಳಬಹುದಾಗಿದೆ. ಈ ವೈಶಿಷ್ಟ್ಯಗಳಲ್ಲಿ ಒಂದೆರಡನ್ನುಳಿದು ಇತರವು ಎಲ್ಲವೂ ಕನ್ನಡದ ವ್ಯಾಕರಣಕ್ಕೆ ಸಂಬಂಧಪಟ್ಟವುಗಳೇ ಆಗಿವೆ.

ಹಿಂದೆ ಹೇಳಿದಂತೆ ಕನ್ನಡಕ್ಕೆ ಜಾನಪದರೂಪವೂ ಗ್ರಾಂಥಿಕರೂಪವೂ ಇವೆ. ಜಾನಪದಕ್ಕೆ ಅನ್ವಯವಾಗುವ ವ್ಯಾಕರಣಾಂಶ ಪರಿಮಿತ. ಅಪರಿತರ ಆಡುಮಾತಾಗಿ ಅದರಲ್ಲಿ ಶುದ್ಧಾಶುದ್ಧತೆಯ ಚರ್ಚೆಗೆ ಇಂಬಿಲ್ಲ. ಒಂದು ಉದಾಹರಣೆ : 'ಹೇಳಿದರು' ಎಂಬುದನ್ನು 'ಯೇಳಿದರು, ಯೇಳಿದ್ರು, ಏಳಿದರು, ಏಳಿದ್ರು' ಎಂದರೂ ದಕ್ಕುವುದು. ಇದರಿಂದಾಗಿ ಜಾನಪದ

ಅಥವಾ ಈ ದೇಸಿಯ ರೂಪದಲ್ಲಿ ಬಹುವಿಧ. ಇದನ್ನು ಅನುಲಕ್ಷಿಸಿರುವ ಕವಿರಾಜಮಾರ್ಗಕಾರನು 'ವಾಸುಗಿಯುಮರಿಯಲಾರದೆ ಬೇಸರುಗುಂ ದೇಸಿ ಬೇರೆ ವೇರಪ್ಪುದರಿಂ' ಎಂದು ಉದ್ಗರಿಸಿದ್ದಾನೆ. ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ತುಳುವಿನಲ್ಲಿ - ಅದು ಜಾನಪದಭಾಷೆಯಾಗಿಯೇ ಇರುವುದರಿಂದ, ಶಬ್ದಗಳಿಗೆ ಸಿದ್ಧರೂಪವಿಲ್ಲ. ಉಚ್ಚಾರಣೆಯಲ್ಲಿ ತುಂಬಾ ವೈವಿಧ್ಯವಿದೆ. ಕನ್ನಡದ ಜಾನಪದ ರೂಪವೂ ಹಾಗೆಯೇ. ಆದರೆ, ಕನ್ನಡದ ಪರಿಷ್ಕೃತ (ಗ್ರಾಂಥಿಕ) ರೂಪವು ವ್ಯಾಕರಣನಿಯಮಗಳನ್ನು ತಾಳಿರುತ್ತದೆ. ಪ್ರಾಚೀನಕಾಲದಿಂದಲೇ ಕನ್ನಡ ಕವಿಗಳು, ಲಾಕ್ಷಣಿಕರು ವ್ಯಾಕರಣಕ್ಕೆ ಒಳಪಟ್ಟ ಶಿಷ್ಟಭಾಷೆಯನ್ನು ಕಲ್ಪಿಸಿಕೊಂಡು, ಅದಕ್ಕನುಗುಣವಾಗಿ ಕೃತಿರಚನೆ ಮಾಡುತ್ತ ಬಂದಿದ್ದಾರೆ. ಶಿಷ್ಟಭಾಷೆಯ ಸ್ವರೂಪಪರಿಜ್ಞಾನವನ್ನು ಉಳಿಸಲಿಕ್ಕಾಗಿ ವ್ಯಾಕರಣವನ್ನೂ ರಚಿಸಿರುತ್ತಾರೆ. ಕನ್ನಡದ ಯಾವುದೇ ಅಕ್ಷರ, ಪದಪ್ರಯೋಗ, ವಾಕ್ಯ ಹೇಗಿದ್ದರೆ ಸರಿ? ಹೇಗಾದರೆ ತಪ್ಪು? ಎಂಬುದನ್ನು ನಿಶ್ಚಯಪಡಿಸಿದ್ದಾರೆ. ಬಲುಮಟ್ಟಿಗೆ ಅವು ಇಂದೂ ಗ್ರಾಹ್ಯಗಳಾಗಿವೆ.

ಕನ್ನಡದಲ್ಲಿ ಮೊತ್ತಮೊದಲ ಉಪಲಬ್ಧ ಗ್ರಂಥ-ಲಕ್ಷಣಗ್ರಂಥ 'ಕವಿರಾಜಮಾರ್ಗ'. ಇದರಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಅಂಶಗಳು, ಮುಖ್ಯವಾಗಿ ಶುದ್ಧಾಶುದ್ಧ ಪದಪ್ರಯೋಗ ವಿಷಯಗಳು ಇವೆ. ಅನಂತರ, ಎರಡನೆಯ ನಾಗವರ್ಮನು (೧೪೦೩) ರಚಿಸಿದ 'ಕರ್ಣಾಟಕ ಭಾಷಾಭೂಷಣ' ಕನ್ನಡ ವ್ಯಾಕರಣವನ್ನು ಸಂಸ್ಕೃತಸೂತ್ರಗಳಲ್ಲಿ ಪ್ರತಿಪಾದಿಸುವ ಗ್ರಂಥ. ಇವನ 'ಕಾವ್ಯಾವಲೋಕನ'ದಲ್ಲಿ ಬರುವ 'ಶಬ್ದಸ್ಮೃತಿ' ಕಂದಪದ್ಯಾತ್ಮಕ ಸೂತ್ರಗಳಿಂದಲೂ ಕವಿಪ್ರಯೋಗದ ಉದಾಹರಣಗಳಿಂದಲೂ ಕೂಡಿ ವ್ಯಾಕರಣಕ್ಕೆ ಕೈಗನ್ನಡಿಯಂತಿದೆ. ಕೇಶಿರಾಜನ 'ಶಬ್ದಮಣಿದರ್ಪಣ'ವು ಕನ್ನಡಕ್ಕೆ ಅಷ್ಟಾಧ್ಯಾಯೀ ವ್ಯಾಕರಣಗ್ರಂಥವಾಗಿದೆ. ಭಟ್ಟಾಕಲಂಕದೇವನ (೧೬೦೪) 'ಕರ್ಣಾಟಕ ಶಬ್ದಾನುಶಾಸನ' ಎಂಬುದು ಸಂಸ್ಕೃತದ ಸೂತ್ರ ವೃತ್ತಿ ವ್ಯಾಖ್ಯಾನಗಳೊಂದಿಗೆ ಕನ್ನಡ ವ್ಯಾಕರಣವನ್ನು ವಿವರಿಸುತ್ತದೆ. ಈ ವ್ಯಾಕರಣಗ್ರಂಥಗಳಲ್ಲಿ ನಿರೂಪಿಸಲಾದುದು ಹಳಗನ್ನಡ ವ್ಯಾಕರಣವೆನಿಸಿದರೂ ಸುಮಾರು ೯೦ ಪ್ರತಿಶತ ಅಂಶಗಳು ಹೊಸಗನ್ನಡಕ್ಕೂ ಅನ್ವಯಿಸುವಂತಿವೆ. ಮಾತ್ರವಲ್ಲ; ಕನ್ನಡ ಭಾಷಾಭ್ಯಾಸಕ್ಕೆ ಅನಿವಾರ್ಯ ವೆನಿಸುವಂತಹ ಮಾರ್ಗದರ್ಶಿಗಳಾಗಿವೆ. ಆಧುನಿಕ ವಿದ್ವಾಂಸರನೇಕರು ಮುಖ್ಯವಾಗಿ, ವಿದ್ಯಾರ್ಥಿಗಳಿಗಾಗಿ ಆಗಾಗ ರಚನೆಮಾಡಿರುವ ವ್ಯಾಕರಣ ಪುಸ್ತಕಗಳು ಅನೇಕವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾದ 'ಕನ್ನಡ ಕೈಪಿಡಿ' ವಿದ್ಯಾರ್ಥಿಗಳಿಗಾಗಿ ರಚಿತವಾದ ಲಾಕ್ಷಣಿಕ ಕೃತಿ. ಇದು ವ್ಯಾಕರಣಭಾಗವನ್ನೂ ಒಳಗೊಂಡಿದೆ. ತೀ.ನಂ.ಶ್ರೀಯವರ ಮಧ್ಯಮ ವ್ಯಾಕರಣ (೧೯೪೭), ಟಿ.ಕೇಶವ ಭಟ್ಟರ ಭಾಷಾದೀಪಿಕೆ (೧೯೫೬), ಚನ್ನಪ್ಪ ಎರೆಸೀಮೆಯವರ ವ್ಯಾಕರಣ ದರ್ಪಣ, ವಿದ್ವಾನ್ ಎನ್.ರಂಗನಾಥ ಶರ್ಮರ ಹೊಸಗನ್ನಡ ವ್ಯಾಕರಣ (೧೯೭೭), ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿಯವರ 'ಹೊಸಗನ್ನಡದ ವ್ಯಾಕರಣ' (೧೯೯೦) ಇವು ಇತ್ತೀಚೆಯ ವ್ಯಾಕರಣ ರಚನೆಗಳಲ್ಲಿ ಕೆಲವಾಗಿ ಹೊಸಗನ್ನಡದ ಆವಶ್ಯಕತೆಯನ್ನು ಪೂರೈಸುವ ಉದ್ದೇಶದ ಕೃತಿಗಳಾಗಿವೆ. ಕನ್ನಡಕ್ಕೆ ವ್ಯಾಕರಣ ಎಷ್ಟು ಅವಶ್ಯವೆಂಬುದನ್ನು ಇವು ನಿರೂಪಿಸುವಂತಿರುವುದು ಅಭಿಮಾನದ ಸಂಗತಿ.

ಭಾಷೆಗೆ ವ್ಯಾಕರಣ ಅದೆಷ್ಟು ಮುಖ್ಯ, ಉಪಯುಕ್ತ ಮತ್ತು ಅವಶ್ಯವೆಂಬುದನ್ನು ರಸವತ್ತಾಗಿ ನಿರೂಪಿಸುವ ಕವಿಸೂಕ್ತಿಗಳು ವಿಪುಲವಾಗಿವೆ. ವಿದ್ಯಾರ್ಥಿಯಾದ ಮಗನಿಗೆ ಓರ್ವ ತಂದೆಯ ಹೃತ್ಪೂರ್ವಕವಾದ ಉಪದೇಶ ಹೀಗಿದೆ -

ಯದ್ಯಪಿ ಬಹು ನಾಧೀಷೇ ತಥಾಪಿ ಪಠ ಪುತ್ರ ವ್ಯಾಕರಣಂ
ಸ್ವಜನಃ ಶ್ವಜನೋ ಮಾಭೂತ್ ಸಕಲಂ ಶಕಲಂ ಸಕೃತ್ ಶಕೃತ್

'ಎಲೈ ಮಗನೇ, ನೀನು ನಿನ್ನ ವ್ಯಾಸಂಗವಿಷಯಗಳಲ್ಲಿ ಹೆಚ್ಚೇನೂ ಕಲಿಯದಿದ್ದರೆ ಬಾಧೆಯಿಲ್ಲ. ಆದರೆ, ವ್ಯಾಕರಣವನ್ನು ಕಲಿಯಲೇಬೇಕು. ವ್ಯಾಕರಣದಿಂದ ಉಚ್ಚಾರಣೆಯ ದೋಷವಿಲ್ಲವಾಗುವುದು. 'ಸ್ವಜನ' (ನಮ್ಮ ಜನ) ಎಂಬುದು 'ಶ್ವಜನ' ನಾಯಿ ಅಥವಾ ನಾಯಿಯಂತಹ ಜನ) ಎಂದಾಗದಿರಲಿ'. 'ಸಕಲ' (ಎಲ್ಲಾ) ಎಂಬುದು 'ಶಕಲ' (ತುಂಡು, ಚೂರು) ಎಂದಾಗದಿರಲಿ'. 'ಸಕೃತ್' (ಒಂದು ಬಾರಿ) ಎಂಬುದು 'ಶಕೃತ್' (ಮಲ, ಸೆಗಣಿ) ಆಗದಿರಲಿ.' ಉಚ್ಚಾರಣೆ ಸ್ವಲ್ಪ ವ್ಯತ್ಯಾಸವಾದರೆ ಅರ್ಥವೇ ಬೇರೆಯಾಗುವವೆಂಬುದಕ್ಕೆ ಇದು ಉದಾಹರಣೆ. ವೇದಮಂತ್ರದಲ್ಲಂತೂ ಸ್ವರ ಅಥವಾ ವರ್ಣದ ಉಚ್ಚಾರದೋಷದಿಂದ ಅನರ್ಥವಾಗುವುದೆಂಬುದಕ್ಕೆ 'ಇಂದ್ರಶತ್ರುರ್ವರ್ಧಸ್ವ' ಎಂಬ ಉಕ್ತಿಯನ್ನು ಹೇಳಲಾಗಿದೆ. ಇಂದ್ರನನ್ನು ಕೊಲ್ಲುವ ಮಗನಾಗಬೇಕೆಂಬ ಕಾಂಕ್ಷೆಯಿಂದ ತ್ವಷ್ಟೃಪ್ರಜಾಪತಿ ಉಚ್ಚರಿಸಿದ ಈ ಮಾತು ಇಂದ್ರನು ಕೊಲ್ಲುವ ಮಗನಾಗಬೇಕೆಂದಾಯಿತು. ಅದರಂತೆ ಹುಟ್ಟಿದ ವೃತ್ರನೆಂಬ ದುರುಳ ರಾಕ್ಷಸನು ಇಂದ್ರನಿಂದ ಹತನಾದನು-ಎಂಬ ಐತಿಹ್ಯವಿದೆ.

ವ್ಯಾಕರಣವನ್ನು ಕಲಿಯದೆ, ಇತರವನ್ನು ಕಲಿಯುವುದು ನಿಷ್ಪ್ರಯೋಜಕವೆಂದು ಹೇಳಲಾಗಿದೆ-

ಅವ್ಯಾಕರಣಮಧೀತಂ
ಭಿನ್ನದ್ರೋಣ್ಯಾ ತರಂಗಿಣೀತರಣಂ
ಔಷಧಮಪಥ್ಯಸಹಿತಂ
ತ್ರಯಮಿದಮಕೃತಂ ವರಂ ನ ಕೃತಂ

ಅಂದರೆ - ವ್ಯಾಕರಣ ಕಲಿಯದೆ ಮಾಡುವ ಅಧ್ಯಯನ, ಒಡೆದ ದೋಣಿಯಲ್ಲಿ ಹೊಳೆ ದಾಟುವುದು, ಅಪಥ್ಯಮಾಡಿಕೊಂಡು ಮದ್ದು ತೆಗೆದುಕೊಳ್ಳುವುದು-ಈ ಮೂರನ್ನೂ ಮಾಡದಿರುವುದು ಒಳ್ಳೆಯದು; ಮಾಡುವುದು ಒಳ್ಳೆಯದಲ್ಲ. ವ್ಯಾಕರಣವನ್ನು ಜ್ಞಾನನಿಧಿಯೆನಿಸುವ ವೇದದ ಮುಖವೆಂದೂ ವಿದ್ಯಾಮಾತೆಯ ಮನೆಯೆಂದೂ ಹೇಳಲಾಗಿದೆ-

ಯೋ ವೇದ ವೇದವದನಂ ಸದನಂ ಹಿ ಸಮ್ಯಕ್
ಬ್ರಾಹ್ಮ್ಯಾಃ ಸ ವೇದಮಪಿ ವೇದ ಕಿಮನ್ಯ ಶಾಸ್ತ್ರಂ
ಯಸ್ಮಾದತಃ ಪ್ರಥಮಮೇತದಧೀತ್ಯ ಧೀಮಾನ್
ಶಾಸ್ತ್ರಾಂತರೇಷು ಭವತಿ ಶ್ರವಣೇಽಧಿಕಾರೀ

ಅಂದರೆ - ವೇದದ ಮುಖವೂ ಸರಸ್ವತಿಗೆ ಸರಿಯಾದ ಮನೆಯೂ ಆಗಿರುವ ವ್ಯಾಕರಣವನ್ನು ಯಾವನು ತಿಳಿದಿರುವನೋ ಅವನು ವೇದವನ್ನರಿತವೇ ಸರಿ. ಹೀಗಿರುವಾಗ ಬೇರೆ ಶಾಸ್ತ್ರವಿಷಯವೇನಿದೆ? ಏಕೆಂದರೆ, ಅವನು ಮೊದಲು ವ್ಯಾಕರಣವನ್ನು ಕಲ್ತು ಬುದ್ಧಿವಂತನಾಗಿ ಬೇರೆ ಶಾಸ್ತ್ರಗಳನ್ನು ಕಲಿಯಲು ಅರ್ಹನಾಗುತ್ತಾನೆ. ಈ ಅಭಿಪ್ರಾಯವನ್ನು ಇನ್ನೊಂದೆಡೆ ಸರಳವಾಗಿ ಹೀಗೆ ಹೇಳಿದೆ -

ಸರ್ವೇಷಾಂ ವ್ಯವಹಾರಾಣಾಂ ಮೂಲಂ ಶಬ್ದಾರ್ಥನಿರ್ಣಯಃ
ಸ ಚ ವ್ಯಾಕರಣಾದೇವ ಮುನಿಭಿಃ ತೇನ ತತ್ಕೃತಂ

ಅಂದರೆ - ಮನುಷ್ಯನ ಎಲ್ಲ ವ್ಯವಹಾರಗಳಿಗೂ ಮೂಲವಾದುದು ಭಾಷೆಯ ಮುಖ್ಯಾಂಶವಾಗಿರುವ ಶಬ್ದ-ಅರ್ಥಗಳ ನಿರ್ಣಯ. ಆ ನಿರ್ಣಯವು ಆಗುವುದು ವ್ಯಾಕರಣದಿಂದಲೇ. ಆದುದರಿಂದ ಪಾಣಿನಿಯಂತಹ ಮುನಿಗಳು ಅದನ್ನು ರಚಿಸಿರುತ್ತಾರೆ. ವೈಯಾಕರಣರು ಇತರ ವಿದ್ವಾಂಸರಿಗಿಂತ ವಿಶೇಷ ಗೌರವಪಾತ್ರರು.

ತ್ರಿವಿಕ್ರಮಪಂಡಿತನು ತನ್ನ 'ವಿಶ್ವಗುಣಾದರ್ಶ' ಕಾವ್ಯದಲ್ಲಿ ವೈಯಾಕರಣರನ್ನು 'ಮಹ್ಯಾಭರಣರೆಂದೂ (ಜಗತ್ತಿಗೆ ಭೂಷಣಪ್ರಾಯರೆಂದೂ) ಪಂಡಿತ ಜನಗಣನೆಯಲ್ಲಿ ಪ್ರಥಮಸ್ಥಾನಾರ್ಹರೆಂದೂ ಹೇಳಿರುವುದು ಉಲ್ಲೇಖಾರ್ಹವಾಗಿದೆ -

ಕೃತದುರಿತ ನಿರಾಕರಣಂ
ವ್ಯಾಕರಣಂ ಚತುರಧೀರಧೀಯಾನಃ
ಬುಧಜನ ಗಣನಾವಸರೇ
ಕನಿಷ್ಠಿಕಾಯಾಂ ವರಂ ಜಯತಿ

ಅಂದರೆ - ವ್ಯಾಕರಣವು ಪಾಪವನ್ನು ದೂರಮಾಡುವಂತಹದು- ಸಾರಸ್ವತ ಪಾಪಗಳಿಂದ ಮುಕ್ತವಾದುದು. ಅಂತಹ ವ್ಯಾಕರಣವನ್ನು ಕಲ್ತ ಚಾತುರ್ಯಶೀಲ ಮತಿವಂತನು ವಿದ್ವಾಂಸರನ್ನು ಲೆಕ್ಕಮಾಡುವಾಗ ಕಿರುಬೆರಲಿನ (ಪ್ರಥಮ)ನಾಗುತ್ತಾನೆ - ಎಂದಿಲ್ಲಿ ಹೇಳಿದೆ. ಕನ್ನಡಕ್ಕೆ ವ್ಯಾಕರಣ ಬೇಡವೆನ್ನುವವರು ಲಕ್ಷಿಸಬೇಕಾದ ಅಂಶವಿದು.

ವ್ಯಾಕರಣಪರಿಜ್ಞಾನವೆಂಬುದು ಪಾಂಡಿತ್ಯ ಪ್ರತಿಭೆಗಳಿಗೆ ಜೀವಾತುವಾಗಿರುತ್ತದೆ. ಅದು ಇಲ್ಲದವನ ಬದುಕು ಬಡಕಲು; ನ್ಯೂನತರ. ಇದಕ್ಕೊಂದು ಇತಿಹಾಸಕಥನವಿದೆ-ಶಾಲಿವಾಹನನೆಂಬ ರಾಜನು ಹೊಸತಾಗಿ ವರಿಸಿದ ರಾಣಿಯೊಂದಿಗೆ ಜಲಕೇಳಿಯಾಡುತ್ತ ಆಕೆಯ ಮುಖಕ್ಕೆ ನೀರೆರಚಿದನು. ಆಗ ಆಕೆ ಸಂಸ್ಕೃತದಲ್ಲಿ 'ಮೋದಕಂ ದೇಹಿ ಮುಖೇ' (ಮುಖೇ ಉದಕಂ ಮಾ ದೇಹಿ) - ಮುಖಕ್ಕೆ ನೀರೆರಚಬೇಡಿ ಎಂದಳು. ಆ ಮಾತಿಗೆ ರಾಜನು 'ಮುಖೇ ಮೋದಕಂ ದೇಹಿ'- ಬಾಯಿಗೆ ಕಡುಬನ್ನು ಕೊಡಿ ಎಂದು ಅರ್ಥಮಾಡಿಕೊಂಡು ಕಡುಬನ್ನು ತರಿಸಿದನು.' ತನ್ನನ್ನು ವರಿಸಿದ ರಾಜನು ವ್ಯಾಕರಣವನ್ನರಿತು ಅರ್ಥಮಾಡಿಕೊಳ್ಳಲಾರದವನೆಂದು ಆಕೆಗೆ ತಿಳಿಯಿತು. ಮುಂದೆ, ಶರ್ವವರ್ಮನೆಂಬ ವೈಯಾಕರಣನು ಕಾತಂತ್ರ ವ್ಯಾಕರಣವನ್ನು ರಚಿಸಿ, ಶಾಲಿವಾಹನನಿಗೆ ಕಲಿಸಿ, ಅವನನ್ನು ಬುದ್ಧಿವಂತನನ್ನಾಗಿ ಮಾಡಿದನೆಂದು ತಿಳಿದು

ಬರುತ್ತದೆ. (ಕನ್ನಡದಲ್ಲಿ ಕಾವ್ಯಾವಲೋಕನವನ್ನೂ ಸಂಸ್ಕೃತದಲ್ಲಿ ಕರ್ಣಾಟಕ ಭಾಷಾಭೂಷಣವೆಂಬ ವ್ಯಾಕರಣ ಕೃತಿಯನ್ನೂ ರಚಿಸಿದ ನಾಗವರ್ಮನಿಗೆ 'ಅಭಿನವ (ಇದಾನೀಂತನ) ಶರ್ವವರ್ಮ' ಎಂಬ ಬಿರುದು ಬಂದುದು ಈ ಶರ್ವವರ್ಮನ ಹಿರಿಮೆಯ ದ್ಯೋತಕವೆನಿಸುವುದು.)

ವ್ಯಾಕರಣಜ್ಞಾನವು ಮನುಷ್ಯನಿಗೆ ಲೌಕಿಕೋನ್ನತಿಗೆ ಮಾತ್ರವೆ ಅಲ್ಲ, ಮೋಕ್ಷಕ್ಕೂ ಸಾಧನವಾದುದೆಂದು ಹೇಳಲಾಗಿವೆ. (ಮೋಕ್ಷಸಾಧಕವಾದ ಭಾರತೀಯ ದರ್ಶನ ಶಾಸ್ತ್ರಗಳಲ್ಲಿ ವ್ಯಾಕರಣವೂ ಒಂದು)

ವ್ಯಾಕರಣಾತ್ ಪದಸಿದ್ಧಿಃ
ಪದಸಿದ್ಧೇರರ್ಥನಿರ್ಣಯೋ ಭವತಿ
ಅರ್ಥೇ ತತ್ತ್ವಜ್ಞಾನಂ
ತತ್ವಜ್ಞಾನಾತ್ ಪರಂ ಶ್ರೇಯಃ

ಈ ಆರ್ಯಾಛ್ಛಂದಸ್ಸಿನ ಪದ್ಯದ ರೂಪವು ಶಬ್ದಮಣಿದರ್ಪಣದಲ್ಲಿ ಕಂದಪದ್ಯದಲ್ಲಿ ಹೀಗಿದೆ-

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ

ಆಧುನಿಕ ವಿದ್ವಾಂಸರ ಮತ

ಈ ವರೆಗಿನ ಪ್ರತಿಪಾದನೆಯಂತೆ, ಯಾವ ವಿದ್ಯಾಭ್ಯಾಸಕ್ಕೂ ಜೀವನೋತ್ಕರ್ಷ ಸಾಧನೆಗೂ ಭಾಷಾಭ್ಯಾಸವೇ ಮೂಲ. ಭಾಷಾಭ್ಯಾಸದ ನೆಲೆ ನಿಂತಿರುವುದು ಆಯಾ ಭಾಷೆಯ ವ್ಯಾಕರಣದಲ್ಲಿ. ಈ ಬಗೆಯ ಪರಿಜ್ಞಾನಪರಂಪರೆ ಹಿಂದಿನಿಂದಲೇ ಪ್ರಸ್ತುತವೆನಿಸಿ ಪ್ರಚಲಿತಗೊಂಡು ಬಂದಿದೆ. ವ್ಯಾಕರಣಕ್ಕೆ ಅನನ್ಯ ಪ್ರಾಶಸ್ತ್ಯ ಹಾಗೂ ಅನಿವಾರ್ಯತೆ ಸಂದಿದೆ. ಇದನ್ನರಿತ ವಿದ್ವಾಂಸರು ವಿಚಾರವುಕ್ಕಿ ವ್ಯಾಕರಣಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ; ವ್ಯಾಕರಣಸಮೀಕ್ಷೆಗಳೂ ನಡೆಯುತ್ತ ಬಂದಿವೆ. ಆದರೆ, ಆಧುನಿಕ ಕಾಲವು ಕನ್ನಡಕ್ಕೆ ಸಂಬಂಧಪಟ್ಟಂತೆ, ತನ್ನ ವೈಚಾರಿಕೆಯ ಸೋಗಿನ ಪರಚುಕೊಂಬೆಗಳನ್ನು ಹರಡುತ್ತ ಬಂದಂತೆಲ್ಲ ವ್ಯಾಕರಣಪ್ರಾಶಸ್ತ್ಯದ ಮೇಲೆ ನೆರಳುಗತ್ತಲೆಯನ್ನು ಬೀಳಿಸುತ್ತಿದೆ. ಕನ್ನಡ ವ್ಯಾಕರಣವನ್ನು ಮಸುಕುಗೊಳಿಸುತ್ತಿದೆ. ಭಾಷಾ ಶಾಸ್ತ್ರದ ಲಾಕ್ಷಣಿಕವಿಚಾರಗಳು ವ್ಯಾಕರಣವನ್ನು ತುಳಿದು ಹಾಕುತ್ತಿವೆ. ಭಾಷೆಯ ಬಳೆವಣಿಗೆ, ಮಾರ್ಪಾಡು, ಸಹಜತೆಗಳ ಹೆಸರಿನಲ್ಲಿ ವ್ಯಾಕರಣದೋಷಗಳು ಇದ್ದರೂ ಕಾಣದಾಗುತ್ತಿವೆ. ಕಂಡುಬಂದರೂ ಗಣನೆಗೆ ಬಾರದಾಗುತ್ತವೆ. ಭಾಷಾಶಾಸ್ತ್ರವು ಭಾಷಾಪ್ರಯೋಗದ ತಪ್ಪೊಪ್ಪುಗಳನ್ನು ಲಕ್ಷಿಸುವುದಿಲ್ಲ. ಪರಿವರ್ತನೆಯ ಮತ್ತು ಪ್ರಕಾರಗಳ ಲಾಕ್ಷಣಿಕತೆಯಲ್ಲಿ ತಪ್ಪುಗಳನ್ನು ಮುಚ್ಚಿಹಾಕುತ್ತದೆ. ಪ್ರಯೋಗವ್ಯತ್ಯಾಸವೆಂದು, ಸಹಜತೆಯೆಂದು ಸಮರ್ಥಿಸಿಕೊಳ್ಳುತ್ತದೆ. ಅದಕ್ಕಾಗಿ ಉದಾಹರಣೆಗಳನ್ನು ಕೊಡುತ್ತದೆ. ಇದರಿಂದ ಈ ಆಧುನಿಕ ಕಾಲದಲ್ಲಿ ವ್ಯಾಕರಣದ ಬಗೆಗೆ ಕನ್ನಡದಲ್ಲಿ ತೀರಾ ಅವಜ್ಞೆಯುಂಟಾಗಿ ಬಳೆದುಹೋಗಿದೆ' !

ಈ ತಿರಸ್ಕಾರಕ್ಕೆ ಹಾಗೂ ವ್ಯಾಕರಣದ ಅಲಕ್ಷ್ಯಕ್ಕೆ ಬೆಂಬಲಕೊಡುವ ಸೂಕ್ತಿಗಳು, ಕಥನಗಳು, ಕವಿವಾಣಿಗಳೂ ಇಂಥವರಿಗೆ ದೊರಕುತ್ತವೆ. ಸುಮಾರು ಏಳನೆಯ ಶತಮಾನದಲ್ಲಿದ್ದ ಶ್ರೀ ಶಂಕರಾಚಾರ್ಯರು ಭಕ್ತಿ ನೀತಿಬೋಧಕವಾದ ಮೋಹಮುದ್ಗರದಲ್ಲಿ ಹೀಗೆಂದಿದ್ದಾರೆ-

"ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕುರುಞ್ ಕರಣೇ ಭಜ ಗೋವಿದಂ"

ಈ ಮಾತಿಗೆ ಅರ್ಥಕೊಡುವ ಹೆಚ್ಚಿನವರೂ 'ಮರಣಕಾಲ ಸಮೀಪಿಸಿದಾಗ ವ್ಯಾಕರಣ ನಿನ್ನನ್ನು ರಕ್ಷಿಸುವುದಿಲ್ಲ' ಎಂದು ಅರ್ಥ ಹೇಳುವರು. ವ್ಯಾಕರಣವೆಂಬುದು ಬೇಡವಾದುದೆಂಬುದಕ್ಕೆ ಶಂಕರಾಚಾರ್ಯರಿಂದ ಸಮರ್ಥನೆ ಪಡೆಯುವರು. ಆಗ ಇಲ್ಲೊಂದು ಪ್ರಶ್ನೆ ಉದ್ಭವಿಸುತ್ತದೆ - ಭಾರತೀಯ ದರ್ಶನಶಾಸ್ತ್ರಗಳಲ್ಲಿ ಪಾಣಿನೀಯವೂ ಒಂದಾಗಿರುವಾಗ, ಅಲ್ಲಿಯ ವ್ಯಾಕರಣ ಪ್ರಕ್ರಿಯೆಯನ್ನು ಉಲ್ಲೇಖಿಸಿ, ಜ್ಞಾನಿಗಳಾದ ಶಂಕರರು ಈ ಅರ್ಥದಲ್ಲಿ ಈ ಮಾತನ್ನು ಹೇಳಿರಬಹುದೆ? ಎಂಬುದು. ವಾಸ್ತವವಾಗಿ ಇದರ ಅರ್ಥ 'ಡೂ ಕೃಞ್ ಕರಣೇ' ಎಂಬ ಶುದ್ಧ ಪಾಠವನ್ನು 'ಡುಕುರುಞ್ ಕರಣೇ' ಎಂಬ ಅಪಪಾಠವಾಗಿ ಉಚ್ಚರಿಸುವುದು ಸಲ್ಲದು ಎಂದೇ ಆಗಿರುತ್ತದೆ. ಹೊಳೆನರಸಿಪುರ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳು 'ವ್ಯಾಕರಣದ ಅಪಪಾಠ ನಿನ್ನನ್ನು ರಕ್ಷಿಸದು' ಎಂತಲೇ ವ್ಯಾಖ್ಯಾನ ಮಾಡಿರುತ್ತಾರೆ.

'ಪ್ರಯೋಗಶರಣಾ ವೈಯಾಕರಣಾ' ಎಂಬ ಸೂಕ್ತಿಯೂ ಪ್ರಸಿದ್ಧವಾದುದು. ಪ್ರಯೋಗವನ್ನು ಆಶ್ರಯಿಸಿಯೇ ವ್ಯಾಕರಣಸೂತ್ರ (ಲಕ್ಷಣನಿರೂಪಣೆ) ಇರುತ್ತದೆ. ಇದನ್ನು ಊರು ಗೋಲಾಗಿಟ್ಟು ಕೊಂಡಿರುವ ವ್ಯಾಕರಣವಿರೋಧಿಗಳು ಹೀಗೆನ್ನುವರು-ಭಾಷೆ ಮತ್ತು ಸಾಹಿತ್ಯರೂಪ ಇವೆರಡೂ ನಿಂತ ನೀರಲ್ಲ. ಬೆಳೆಯುತ್ತ ಮಾರ್ಪಡುತ್ತ ಮುಂದುವರಿಯುತ್ತವೆ. ಅದನ್ನು ವ್ಯಾಕರಣ ಮರ್ಯಾದೆಗೆ ಒಳಪಡಿಸುವುದೆಂದರೆ - ಬೆಳೆಯದಂತೆ ಮಾಡುವುದಾಗುತ್ತದೆ. ಭಾಷೆಯನ್ನೂ ಸಾಹಿತ್ಯವನ್ನೂ ಅವುಗಳಷ್ಟಕ್ಕೇ ಹೋಗಲು ಬಿಡಬೇಕು. ಶಾಸ್ತ್ರಬಂಧನದಲ್ಲಿ ಅವನ್ನಿಡಬಾರದು. ಯಾವುದೋ ಕಾಲದಲ್ಲಿ ಹುಟ್ಟಿಬಂದ ವ್ಯಾಕರಣವನ್ನು ಮುಂದೆ ತಂದು ತಡೆಯೊಡ್ಡಬಾರದು- ಎಂದು ವಾದಿಸುವವರೂ ಇದ್ದಾರೆ. ಈ ವಿಚಾರದಲ್ಲಿ ಇನ್ನೂ ಮುಂದುವರಿದು - ಕನ್ನಡಕ್ಕೆ ವ್ಯಾಕರಣ ಅನಾವಶ್ಯಕ. ಅದನ್ನು ಕಲಿಸಬೇಕಾಗಿಲ್ಲ. ವ್ಯಾಕರಣವನ್ನೇನೂ ಕಲಿಯದ ನಿರಕ್ಷರರು ಕೂಡ, ಮಾತನಾಡುವಾಗ ವ್ಯಾಕರಣ ಶುದ್ಧವಾಗಿಯೇ ಮಾತಾಡುತ್ತಾರೆ. ಯಾರೊಬ್ಬರೂ 'ರಾಮನು ಬಂದನು, ಸೀತೆ ಹೋದಳು' ಎನ್ನುತ್ತಾರಲ್ಲದೆ, 'ರಾಮನು ಬಂದಳು ಅಥವಾ ಬಂತು' ಎನ್ನುವುದಿಲ್ಲ; ಸೀತೆ ಹೋದನು ಎಂದೂ ಹೇಳುವುದಿಲ್ಲ. ಹಾಗೆ ಯಾರೂ ಬರೆಯುವುದೂ ಇಲ್ಲ. ಮಾತಿನಲ್ಲಿ, ಬರೆಹದಲ್ಲಿ ಅರ್ಥ ಸ್ಪಷ್ಟವಾದರೆ ಸಾಕು, ಅದೇ ವ್ಯಾಕರಣಶುದ್ಧ ಭಾಷೆ- ಹೀಗೆನ್ನುವವರಿದ್ದಾರೆ. ಇದೇ ವರ್ಗದಲ್ಲಿ ಇನ್ನು ಕೆಲವರು - 'ಹಳಗನ್ನಡಕ್ಕೆ ಆ ಹಳಗನ್ನಡ ವ್ಯಾಕರಣ ಬೇಕಾಗಬಹುದು. ಹೊಸಗನ್ನಡಕ್ಕೆ ವ್ಯಾಕರಣ ಬೇಡ; ಆ ಹಳಗನ್ನಡ ವ್ಯಾಕರಣ ಬೇಡವೇ ಬೇಡ' ಎನ್ನುವರು. ಹೊಸಗನ್ನಡ ವ್ಯಾಕರಣವೆಂಬುದು ಹಳಗನ್ನಡ ವ್ಯಾಕರಣಕ್ಕಿಂತ ಭಿನ್ನವಾಗಿರದೆ, ಅದರ ತಳಪಾಯದಲ್ಲಿಯೇ ಮೇಲೆದ್ದು, ಅವುಗಳ ಪಾರಿಭಾಷಿಕಗಳನ್ನು ಬಳಸಿಕೊಂಡು ಮೆರೆಯುತ್ತಿದೆಯೆಂಬುದನ್ನು ಇಂಥವರು ಲಕ್ಷಿಸುವುದಿಲ್ಲ.

ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡು ವಿಶೇಷಾಧ್ಯಯನ ಮಾಡಲು ವಿಶ್ವವಿದ್ಯಾಲಯಗಳು ಆಸ್ಪದಮಾಡುತ್ತಿರುವುದು ನಿಜ. ಹಿಂದೆ, ವಿಶೇಷಾಧ್ಯಯನಕ್ಕಾಗಿ ವ್ಯಾಕರಣ, ಛಂದಸ್ಸು, ಅಲಂಕಾರ, ರಸಾದಿ ಗ್ರಂಥಗಳ ಪೂರ್ಣಭಾಗವೇ ಪಠ್ಯವಾಗಿರುತ್ತಿತ್ತು. ಅವುಗಳೊಂದಿಗೆ ಪಂಪ, ರನ್ನ, ರುಧ್ರಭಟ್ಟ , ರಾಘವಾಂಕ ಮುಂತಾದ ಆಯ್ದ ಮಹಾಕವಿಗಳ ಕಾವ್ಯಗಳನ್ನು ಪೂರ್ಣವಾಗಿ ಅಧ್ಯಯನಕ್ಕೆ ಇಡಲಾಗುತ್ತಿತ್ತು. (ಉದಾ : ಮದ್ರಾಸು ವಿಶ್ವವಿದ್ಯಾಲಯದಲ್ಲಿ ವಿದ್ವಾನ್ ಮಾಡಿಕೊಂಡ ಈ ಲೇಖಕನಿಗೆ (೧೯೪೧-೧೯೪೨) ವಿದ್ವಾನ್ ಪ್ರಥಮಕ್ಕೆ ವ್ಯಾಕರಣವಾಗಿ ಶಬ್ದಮಣಿ ದರ್ಪಣ ಪೂರ್ತಿ, ಅಂತಿಮ ಪರೀಕ್ಷೆಗೆ ಶಬ್ದಾನುಶಾಸನ ಪೂರ್ತಿ ಪಠ್ಯಭಾಗವಾಗಿದ್ದವು.) ಆದರೆ ಈಗೀಗ ಕಾವ್ಯಗಳಿಂದ ಭಾಗಗಳನ್ನು ಮಾತ್ರ ಆರಿಸಲಾಗುತ್ತಿದೆ. ವ್ಯಾಕರಣ ಛಂದೋಲಂಕಾರಾದಿಗಳನ್ನು ರುಚಿಗೆ ತಕ್ಕಷ್ಟು ಮಾತ್ರ ಇಟ್ಟುಕೊಳ್ಳುವಂತೆ ತೋರುತ್ತದೆ. ಇದು ವಿದ್ಯಾರ್ಥಿಗಳಿಗೆ ಭಾರವಾಗಬಾರದೆಂಬ ಉದ್ದೇಶದಿಂದಲೇ ಇರಬಹುದು. ಎಂ.ಎ. ತರಗತಿಗೆ ಶಬ್ದಮಣಿದರ್ಪಣವೇ ಬೇಡವೆಂದು ತಿಳಿಯುವ ವಿಶ್ವವಿದ್ಯಾಲಯವೂ ನಮ್ಮ ರಾಜ್ಯದಲ್ಲಿದೆ. ವಾಸ್ತವವಾಗಿ ಶಬ್ದಮಣಿದರ್ಪಣವನ್ನು ಎಂ.ಎ. ಕನ್ನಡವಾಗಿ ಪ್ರಥಮ ಪರೀಕ್ಷೆಗೂ ಶಬ್ದಾನುಶಾಸನವನ್ನು ಅಂತಿಮ ಪರೀಕ್ಷೆಗೂ ಪಠ್ಯವಾಗಿ ಇಡಬೇಕಾಗಿತ್ತು ಎಂಬುದು ಈ ಲೇಖಕನ ಅಭಿಪ್ರಾಯ. ಹೀಗೆ ಕನ್ನಡದಲ್ಲಿ ಪಠ್ಯಾಂಶ ತೆಳುವಾಗಲು ಕಾರಣ ಸ್ಪಷ್ಟ - ವಿದ್ಯಾರ್ಥಿಗಳಿಗೆ ಕಷ್ಟವಾಗಬಾರದು, ಹೆಚ್ಚು ಮಂದಿ ತೇರ್ಗಡೆಗೊಳ್ಳಬೇಕು - ಎಂಬುದೇ.

ವ್ಯಾಕರಣದ ಬಗೆಗೆ ಅನೇಕ ರೀತಿಯ ಕಡೆನುಡಿಗಳನ್ನು ಆಡಲಾಗುತ್ತಿದೆ - ವ್ಯಾಕರಣ ಒಂದು ಶುಷ್ಕಶಾಸ್ತ್ರ, ಕಬ್ಬಿಣದ ಕಡಲೆ. ವ್ಯಾಕರಣವಿರುವುದು ಕಲ್ತು ಮರೆಯುವುದಕ್ಕೆ, ವ್ಯವಹಾರಕ್ಕಲ್ಲ, ಅದು ಭಾಷೆಗೆ ಕಾಲ್ತೊಡಕು, ಅದನ್ನಿಟ್ಟಿರುವುದು ಪರೀಕ್ಷೆಗಾಗಿ ಮಾತ್ರ, ಅನುಸರಣೆಗಲ್ಲ. ಆದುದರಿಂದ ಪರೀಕ್ಷೆಗಳಲ್ಲಿ ವ್ಯಾಕರಣದ ತಪ್ಪಿಗಾಗಿ, ಕಾಗುಣಿತ ಸರಿಯಲ್ಲದುದಕ್ಕಾಗಿ ಅಂಕಗಳನ್ನು ಕಳೆಯುವುದು ತಪ್ಪು. ವಿದ್ಯಾರ್ಥಿಗೆ ಉತ್ತರ ಗೊತ್ತಿದೆಯೋ ಎಂದು ನೋಡಿದರೆ ಸಾಕು, ಅಂಕಗಳನ್ನು ಧಾರಾಳ ಕೊಡಬಹುದು. ಹಿಂದೀ, ಸಂಸ್ಕೃತಗಳನ್ನು ತೆಗೆದುಕೊಂಡವರು ಹೆಚ್ಚು ಅಂಕಗಳನ್ನೂ ಪಡೆಯುತ್ತಾರೆ, ಹೆಚ್ಚು ಮಂದಿ ತೇರ್ಗಡೆಯೂ ಆಗುತ್ತಾರೆ. ಕನ್ನಡದಲ್ಲಿ ಹೆಚ್ಚು ಮಂದಿ ತೇರ್ಗಡೆಯಾಗುವಂತೆ ಮಾಡಬೇಕು. ಇಂತಹ ಅಭಿಪ್ರಾಯಗಳು ಈಗೀಗ ಶಿಕ್ಷಣ ಕ್ಷೇತ್ರದಲ್ಲಿ ವಿದ್ವಾಂ (ವಿಧ್ವಂ) ಸರ ಪರಿಭಾಷೆಗಳಲ್ಲಿ ಪ್ರಚಲಿತವಾಗಿರುವದು ಕನ್ನಡದ ದೌರ್ಭಾಗ್ಯವೇ ಸರಿ.

ವಿಚಾರಶೀಲರು ಸ್ವಲ್ಪ ಆಚೀಚೆಗೆ - ಇತರ ಭಾಷೆಗಳ ಕಡೆಗೆ, ಅವು ತಮ್ಮ ವ್ಯಾಕರಣವನ್ನು ಧಿಕ್ಕರಿಸಿವೆಯೇ ಎಂಬೆಡೆಗೆ ಏಕೆ ನೋಡುವುದಿಲ್ಲ ? ಸಂಸ್ಕೃತ, ಹಿಂದೀ, ಇಂಗ್ಲೀಷ್ ಇವನ್ನು ಕಲಿಯುವುದೆಂದರೆ, ಹಜ್ಜೆ ಹಜ್ಜೆಗೂ ವ್ಯಾಕರಣವೇ ಅವಕ್ಕೆ ಊರುಗೋಲಾಗಿರುತ್ತವೆ. ಸಂಸ್ಕೃತ ಕಲಿಯಬೇಕಾದರೆ ಪ್ರಾರಂಭದಲ್ಲಿಯೇ ಲಿಂಗ, ವಚನ, ವಿಭಕ್ತಿಗಳು ಬೇರೆಬೇರೆ ಅಂತ್ಯಾಕ್ಷರಗಳಿಗನುಗುಣವಾಗಿ ಮಾರ್ಪಡುವ ವ್ಯಾಕರಣವನ್ನೇ ಓದಬೇಕಾಗುತ್ತದೆ. ಓದಿದರೆ ಸಾಕೆ? ಕಂಠಪಾಠಮಾಡಬೇಕಾಗುತ್ತದೆ. ಇನ್ನು ಸಂಧಿ, ಸಮಾಸ, ಕೃದಂತ, ಕ್ರಿಯಾರೂಪಗಳ

ವೈವಿಧ್ಯವನ್ನು ತಿಳಿಯಲೇ ಬೇಕಾಗುತ್ತದೆ. ಸಂಸ್ಕೃತ ಕಲಿಯುವುದೆಂದರೆ, ಮೊದಲು ವ್ಯಾಕರಣ ಕಲಿಯುವುದೇ ಆಗಿರುತ್ತದೆ. ಇನ್ನು ಹಿಂದೀ ಭಾಷೆಯನ್ನು ನೋಡಿದರೆ ಆ ಭಾಷೆಯನ್ನು ವ್ಯಾಕರಣದೊಂದಿಗೇ ಕಲಿಯಬೇಕಾಗುತ್ತದೆ. ವಾಕ್ಯಗಳ ಕೊನೆಗೆ ಬರುವ ಹೈ, ಹೈಂ, ಹುಂ, ಹೋ ಎಂಬ ವಾಕ್ಯಪೂರ್ಣಕಗಳು, ಕೋ, ಸೇ, ಕಾ, ಕೀ, ಕೇ, ಪ್ರತ್ಯಯಗಳು, ನೇ ಪ್ರಯೋಗ, ಲಿಂಗನಿರ್ಣಯ ವಿಚಾರ (ಹಿಂದಿಯಲ್ಲಿ ನಪುಂಸಕಲಿಂಗವಿಲ್ಲ) ಇಂತಹ ವ್ಯಾಕರಣ ವಿಷಯಗಳು ಭಾಷಾಭ್ಯಾಸದೊಂದಿಗೇ ಅವಿನಾಭಾವದಿಂದ ಕೂಡಿರುತ್ತವೆ. ವ್ಯಾಕರಣವನ್ನು ಮೂಲೆಯಲ್ಲಿ ಕಟ್ಟಿಟ್ಟು ಹಿಂದೀಭಾಷೆಯನ್ನು ಕಲಿಸಲು ಅಥವಾ ಕಲಿಯಲು ಸಾಧ್ಯವೇಇಲ್ಲ. ಇನ್ನು ಇಂಗ್ಲೀಷ್ ಕಲಿಯಬೇಕಾದರೆ, ಇಂತಿಂತಹ ಶಬ್ದಕ್ಕೆ ಇಂತಿಂತಹ ಅಕ್ಷರಗಳು, ಇಂತಿಂತಹ ಉಚ್ಚಾರಣೆ ಎಂಬುದು ಪೂರ್ವನಿಶ್ಚಿತ ವ್ಯಾಕರಣವಿಷಯವಾಗಿದೆ. Put, But, Cycle, Psychology, Church, Charity, Character, See, Sea, I, eye., ear, year, write, right - ಇಂತಹ ಉಚ್ಚಾರಭೇದಗಳು ಇಂಗ್ಲೀಷಿನಲ್ಲಿ ಅಸಂಖ್ಯ. ಶಬ್ದರೂಪ, ವಾಕ್ಯರೂಪ, ಲಿಂಗ, ವಚನ, ವಿಭಕ್ತಿ, ಕಾಲ ಮುಂತಾದ ವ್ಯಾಕರಣವೇ ಇಂಗ್ಲೀಷಿನ ಜೀವಾಳವಾಗಿದೆ. ಕನ್ನಡಕ್ಕೆ ಮಾತ್ರ ವ್ಯಾಕರಣ ಬೇಡ!

ಕನ್ನಡಕ್ಕೆ ವ್ಯಾಕರಣವು ತ್ಯಾಜ್ಯವಲ್ಲ, ಉಪಾದೇಯ, ಅನಿವಾರ್ಯವೆಂಬುದು ಯೋಚಿಸಿದರೆ ಹೊಳೆಯದಿರದು. ಶಬ್ದಮಣಿ ದರ್ಪಣದ ಒಂದು ಕಂದಪದ್ಯದಲ್ಲಿ ವ್ಯಾಕರಣದ ಅನಿವಾರ್ಯತೆಯನ್ನು ಹೀಗೆ ತಿಳಿಸಲಾಗಿದೆ -

ಜನಮಂಗೀಕರಿಪುದು ನೆ
ಟ್ಟನೆ ಸಂಬಂಧಾಭೀಧೇಯ ಶಕ್ಯಾನುಷ್ಠಾ
ನ ನಿಜೇಷ್ಟಸಿದ್ಧಿಗಳ್ ನೆಲ
ಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ

(ಪೀಠಿಕೆ : ೭)

ಕನ್ನಡ ಭಾಷೆಗೆ ದಾರಿತೋರಿಸುವ ವ್ಯಾಕರಣದಲ್ಲಿ (ಶಬ್ದಮಣಿದರ್ಪಣದಲ್ಲಿ) ನೆಲೆನಿಂತಿರುವ ನಾಲ್ಕು ಅಂಶಗಳಿವು : (೧) **ಸಂಬಂಧ** - ಪ್ರಕೃತಿ ಪ್ರತ್ಯಯ ಸಂಬಂಧ, ವಿಶೇಷ್ಯ ವಿಶೇಷಣ ಸಂಬಂಧ, ಲಿಂಗ ವಚನ, ವಿಭಕ್ತಿ, ಸಂಬಂಧ, ಕಾಲಕ್ರಿಯಾ ಸಂಬಂಧ - ಇವುಗಳ ಪರಿಜ್ಞಾನವಿಲ್ಲದಿದ್ದರೆ ಭಾಷಾಪ್ರಯೋಗವೇ ಅಸಾಧ್ಯ. (೨) **ಅಭಿಧೇಯ** - ಎಂದರೆ ಅರ್ಥ. ಸಂಬಂಧವು ಸರಿಯಾದಾಗ ಅರ್ಥವು ಸ್ಫುಟವಾಗುವುದು. ಇದಲ್ಲದೆ ಇಂತಹ ಶಬ್ದಕ್ಕೆ ಇಂತಹದೇ ಅರ್ಥವೆಂಬ ನಿರ್ಣಯವೂ ಇದೆ - ಕಾಲು-ಕಾಳು, ದನ-ಧನ, ಬಲೆ-ಬಳೆ, ಕೊಲೆ-ಕೊಳೆ, ಹಾಲು-ಹಾಳು - ಅಕ್ಷರ ವ್ಯತ್ಯಾಸದಿಂದ ಅರ್ಥವ್ಯತ್ಯಾಸವಿದೆಯಲ್ಲವೆ? (೩) **ಶಕ್ಯಾನುಷ್ಠಾನ** - ಉದ್ದೇಶಿತವಾದ ಅರ್ಥ ಬರಬೇಕಾದರೆ, ಆ ಪದವಾಕ್ಯಸ್ವರೂಪ ಹೇಗಿರಬೇಕೋ ಹಾಗೆ ರೂಪಿಸಿಕೊಳ್ಳುವುದು ಶಕ್ಯಾನುಷ್ಠಾನವೆನಿಸುತ್ತದೆ. (೪) ಈ ಮೂರು ಅಂಶಗಳಿಂದ ವಾಕ್ಪ್ರಯೋಗದ **ಇಷ್ಟಸಿದ್ಧಿ** (ಕಾರ್ಯ ಈಡೇರಿಕೆ) ಯಾಗುವುದು. ಇಲ್ಲಿ ಹೇಳಲಾದ ನಾಲ್ಕು ವಿಷಯಗಳು ವ್ಯಾಕರಣ ವಿಷಯಗಳೇ ಆಗಿವೆ. ಕನ್ನಡಕ್ಕೆ ವ್ಯಾಕರಣವೇಕೆ, ನಾವು ಮಾತನಾಡುವ ಬರೆವ ಕನ್ನಡ ವ್ಯಾಕರಣ

ಬದ್ಧವಾಗಿಯೇ ಇದೆ ಎನ್ನುವವರು ಮೇಲಿನ ಸೂತ್ರಪದ್ಯವನ್ನು ಅರ್ಥಮಾಡಿಕೊಂಡು ತಂತಮ್ಮ ವಾಕ್ಪ್ರಯೋಗಗಳನ್ನು ಒರೆಹಚ್ಚಲು ಸಿದ್ಧರಿದ್ದರೆ ಸಾಕು. ವಾಸ್ತವವಾಗಿ ಅಂಥವರು ಪ್ರಯೋಗಿಸುವ ಶಬ್ದ, ಪದ, ವಾಕ್ಯಗಳಲ್ಲಿ ಅಪ್ರಾಮಾಣ್ಯಕ್ಕೆ (ವ್ಯಾಕರಣದೋಷಗಳಿಗೆ) ಮಿತಿಯುಂಟೆ? ಅವರ ಪ್ರಯೋಗಗಳಲ್ಲಿ ಕಂಡುಬರುವ ಕಾಗುಣಿತ ದೋಷ, ಸಂಧಿ-ಸಮಾಸ-ವಚನ-ವಿಭಕ್ತಿದೋಷಗಳಿಗೆ ಮಿತಿಯಿದೆಯೆ ? ವಿಶೇಷ್ಯ ವಿಶೇಷಣ ದೋಷಗಳು ಕಡಮೆಯೆ ? ಹೇಗೂ ದಕ್ಕುತ್ತದೆ. ಕನ್ನಡದಲ್ಲಿ ನಡೀತದೆ ಎಂಬುದೇ ಅವರ ಧೋರಣೆ ಎಂದರೆ ತಪ್ಪೇನು ? ಎಲ್ಲವಕ್ಕೂ ಅವರವರ ಕೃತಿಗಳಿಂದ ತಪ್ಪುಗಳನ್ನು ಆಯ್ದು ತೋರಿಸಿಕೊಡುವುದೆಂದರೆ ಅದೊಂದು ಪುಸ್ತಕವೇ ಆದೀತು. ಅಷ್ಟೇ ಅಲ್ಲ, ಮುಖಕೊರೆಯನಿಗೆ ಕನ್ನಡಿ ತೋರಿಸಿದಂತಾಗಿ ಅಂಥವರಿಂದ ಬಯ್ಯಿಸಿಕೊಳ್ಳುವುದಾದೀತು! ಆದುದರಿಂದ ಪಾತ್ರರನ್ನು ಯಾರನ್ನೂ ಉಲ್ಲೇಖಿಸದೆ ಕೆಲವು ಉದಾಹರಣೆಗಳನ್ನು ಮಾತ್ರ ಕೊಟ್ಟು ಈ ಬರೆಹವನ್ನು ಪೂರ್ತಿಗೊಳಿಸಲಾಗುವುದು.

೧. **ವ್ಯಾಕರಣವನ್ನು ಅಲಕ್ಷಿಸಿರುವ ಅಪಶಬ್ದಪ್ರಯೋಗಗಳು (ಕಂಸದೊಳಗೆ ಶುದ್ಧರೂಪವಿದೆ) :** ಕೈನ, ಕೈನಲ್ಲಿ, ಮೇನಲ್ಲಿ, ಮುಂಬಯಿನಲ್ಲಿ (ಕೈಯ, ಕೈಯಲ್ಲಿ, ಮೇಯಲ್ಲಿ, ಮುಂಬಯಿಯಲ್ಲಿ) ಪುಸ್ತಕಾನ (ಪುಸ್ತಕವನ್ನು), ಅಲ್ಲಿ ಅಂಗಡೀನೂ ಇಲ್ಲ (ಅಲ್ಲಿ ಅಂಗಡಿಯೂ ಇಲ್ಲ), ನೆಹರುರವರು, ಅರಸುರವರು (ನೆಹರು ಅವರು ಅರಸು ಅವರು - ಇವೆಲ್ಲ ಪದ ಮಧ್ಯ ಸಂಧಿ ದೋಷಗಳು.

ಕೆಳಗಿನವು ಅಪಶಬ್ದ ಪ್ರಯೋಗಗಳು : ದುಂಬಿ (ತುಂಬಿ), ಭುವಿ (ಬುವಿ, ಭೂಮಿ) ದಿಸೆ (ದೆಸೆ, ದಿಶೆ), ನನಸು, ಮನಸು, ತಪಸು (ನೆನಸು, ಮನಸ್ಸು-ಮನ, ತಪಸ್ಸು-ತಪ), ನನ (ನನ್ನ), ಮೊರೆಹೋಗು (ಮರೆಹೊಗು), ಆಳ್ವಿಕೆ (ಆಳಿಕೆ, ಆಳುವಿಕೆ), ದುರಾಸೆ, ನಿರಾಸೆ (ದುರಾಶೆ, ನಿರಾಶೆ). ನಿಮ್ಮಗಳ (ನಿಮ್ಮ), ಒಗ್ಗಟ್ಟು (ಒಕ್ಕಟ್ಟು) ಇತ್ಯಾದಿ.

೨. **ಕರ್ತೃ ಕ್ರಿಯಾ ಸಂಬಂಧದೋಷ (ವಚನದೋಷ) (ಕಂಸದಲ್ಲಿ ಶುದ್ಧರೂಪವಿದೆ) :** ಜನ ಬರುತ್ತಾರೆ (ಜನರು ಬರುತ್ತಾರೆ; ಜನ ಬರುತ್ತದೆ)
ಅಧ್ಯಕ್ಷರು ತನ್ನ ಮಾತನ್ನು ಮುಂದುವರೆಸಿದರು. (ಅಧ್ಯಕ್ಷರು ತಮ್ಮ ಮಾತನ್ನು ಮುಂದುವರಿಸಿದರು). ಸರಕಾರ ಅಜ್ಞೆ ಮಾಡಿದರು (ಸರಕಾರ ಅಜ್ಞೆ ಮಾಡಿತು, ಸರಕಾರದವರು ಆಜ್ಞೆ ಮಾಡಿದರು.)
ಭಾರತದಲ್ಲಿ ಈಗ ಪ್ರತಿಯೊಂದು ಜಾತಿಯೂ ಪ್ರತ್ಯೇಕತೆಗಾಗಿ ಹೋರಾಡುತ್ತಿದ್ದಾರೆ. (ಭಾರತದಲ್ಲಿ ಈಗ ಪ್ರತಿಯೊಂದು ಜಾತಿಯೂ ಪ್ರತ್ಯೇಕತೆಗಾಗಿ ಹೋರಾಡುತ್ತಿದೆ. ಜಾತಿಯವರು ಹೋರಾಡುತ್ತಿದ್ದಾರೆ - ಎನ್ನಬಹುದು.)

೩. **ವಿಶೇಷ್ಯ ವಿಶೇಷಣ ಸಂಬಂಧದ ದೋಷ :**

೧. ನಗರದಲ್ಲಿ ಅಕ್ರಮವಾಗಿ ಕಟ್ಟಿದ ಮನೆಗಳನ್ನು ಮಾನವೀಯ ದೃಷ್ಟಿಯಿಂದ ಕೆಡುವುತ್ತಿರುವುದನ್ನು ನಿಲ್ಲಿಸಲಾಯಿತು (ನಗರದಲ್ಲಿ ಅಕ್ರಮವಾಗಿ ಕಟ್ಟಿದ ಮನೆಗಳನ್ನು ಕೆಡವುತ್ತಿರುವುಗನ್ನು ಮಾನವೀಯದೃಷ್ಟಿಯಿಂದ ನಿಲ್ಲಿಸಲಾಯಿತು.)

೨. ಪರಕೀಯರ ದಾಳಿಗೆ ಒಳಗಾಗಿ ಸಮೃದ್ಧವಾಗಿದ್ದ ವಿಜಯನಗರ ಪತನಗೊಂಡಿತು (ಸಮೃದ್ಧವಾಗಿದ್ದ ವಿಜಯನಗರ ಪರಕೀಯರ ದಾಳಿಗೆ ಒಳಗಾಗಿ ಪತನಗೊಂಡಿತು).

೩. ನಾಲ್ಕನೆಯ ಮಕ್ಕಳ ಯೋಗಕ್ಷೇಮ ಶಿಬಿರ (ಮಕ್ಕಳ ನಾಲ್ಕನೆಯ ಯೋಗಕ್ಷೇಮ ಶಿಬಿರ)

೪. ತುಲಾಸಂಕ್ರಮಣಕಾಲದಲ್ಲಿ ತಲೆಕಾವೇರಿಯಲ್ಲಿ ಒಂದು ಕೊಳವಿದೆ. ಅದರಲ್ಲಿ ತೀರ್ಥ ಉದ್ಭವಿಸುತ್ತದೆ. (ತಲೆಕಾವೇರಿಯುಲ್ಲಿ ಒಂದು ಕೊಳವಿದೆ. ಅದರಲ್ಲಿ ತುಲಾಸಂಕ್ರಮಣಕಾಲದಲ್ಲಿ ತೀರ್ಥ ಉದ್ಭವಿಸುತ್ತದೆ)

ಸಾಂಕೇತಿಕವಾಗಿ ಕೆಲವೇ ಉದಾಹರಣೆಗಳನ್ನಿಲ್ಲಿ ಕೊಡಲಾಗಿದೆ. ಪ್ರಚಲಿತ ಕನ್ನಡ ಪುಸ್ತಕಗಳಲ್ಲಿ, ಪತ್ರಿಕೆಗಳಲ್ಲಿ, ಕತೆ ಕಾದಂಬರಿಗಳಲ್ಲಿ, ಇಂಥವು ಎಷ್ಟೂ ಇವೆ. ಕನ್ನಡ ವ್ಯಾಕರಣವನ್ನು ಕಡೆಗಣಿಸುತ್ತಿರುವ ಪರಿಣಾಮವಿದು. (ಇನ್ನಷ್ಟು ವಿವರಕ್ಕಾಗಿ ಇದೇ ಲೇಖಕನ ಭಾಷಾದೀಪಿಕೆ ೧೯೫೬, ಈಗ ಪುನರ್ಮುದ್ರಣಗೊಂಡಿದೆ, ಆಸಕ್ತರು ಅದರಲ್ಲಿ ಕಾಣಬಹುದು.)

ಅಕ್ಷರಗಳ ಜೋಡಣೆಯ ಘಟಕವಾಗಿ ಪದಗಳು ವಿವಿಧ ಪದಗಳ ಸಮಷ್ಟಿಯಾಗಿ ವಾಕ್ಯಗಳು ಇರುವುದೂ ವ್ಯಾಕರಣವಿಷಯವೇ ಆಗಿರುತ್ತದೆ. ಇದನ್ನು ಲೇಖಕರು, ಮುದ್ರಕರು, ಓದುಗರು ಸರಿಯಾಗಿ ತಿಳಿದಿದ್ದರೆ ಮಾತ್ರ ಕೇಶಿರಾಜನೆಂದಂತೆ 'ವ್ಯಾಕರಣದ ಪದದಿಂ ಅರ್ಥಂ' ಎಂಬ ಉಕ್ತಿ ಸಾರ್ಥಕವಾಗುವುದು. ಅದು ತಪ್ಪಿದರೆ, ಅನರ್ಥಕ! ಉದಾ: 'ಶ್ರೀವನಿತೆಯರಸನೆ' ಎಂಬುದನ್ನು 'ಶ್ರೀವನಿತೆಯ' ಎಂಬಲ್ಲಿ ಎಡೆಬಿಟ್ಟು ರಸನೆ ಎಂಬುದನ್ನು ಬೇರೆಯಾಗಿಟ್ಟು ಲಕ್ಷ್ಮೀದೇವಿಯ ನಾಲಗೆ ಎಂದು ಅರ್ಥಮಾಡಿದರೆ ಹೇಗಾದೀತು ? ಹಾಗೆಯೇ 'ಬಸವರಾಜ ರಗಳೆ' ಎಂಬುದನ್ನು 'ಬಸವರಾಜರ ಗಳೆ' ಎಂದು ಬರೆದರೆ, ಓದಿದರೆ ತಪ್ಪಾಗದೆ? ಇಂತಹ ವಿಷಯದಲ್ಲಿ ವಿವೇಕಜಾಗೃತಿಗೆ ವ್ಯಾಕರಣವೇ ಉತ್ತಮ ಸಾಧನ. ಕನ್ನಡಕ್ಕೆ, ಅದರಲ್ಲಿಯೂ ಹೊಸಗನ್ನಡಕ್ಕೆ ವ್ಯಾಕರಣ ಅವಶ್ಯವಿಲ್ಲವೆನ್ನುವುದು ಕನ್ನಡಕ್ಕೆ ದ್ರೋಹವಷ್ಟೇ ಅಲ್ಲ. ಕನ್ನಡದ ಕೊಲೆಗಡುಕತನವೆಂದರೆ ತಪ್ಪಲ್ಲ'. ಕನ್ನಡವನ್ನು ಜಾನಪದಗೊಳಿಸುವುದೂ ಹಾನಿಕರ.

ಕನ್ನಡದ ಜಾನಪದರೂಪ ಇಲ್ಲವೇ ವ್ಯಾವಹಾರಿಕರೂಪ ಪ್ರಚಲಿತವಾಗಿರುವುದು ತಪ್ಪಲ್ಲ. ಅದು ಹಾಗೆ ಇರಬೇಕಾದುದೇ ಸರಿ. ಆದರೆ, ಗ್ರಾಂಥಿಕ ರೂಪವನ್ನು ಕೆಡಿಸಿ, ಜಾನಪದಗೊಳಿಸುವುದು ಬೇಕಾಗಿಲ್ಲ. ಗ್ರಾಂಥಿಕ ಭಾಷೆ ಮಾರ್ಗಸಾಹಿತ್ಯಕ್ಕೆ ಅವಶ್ಯವಾಗಿ ಬೇಕು. ಜಾನಪದರು ಕೂಡ ಓದಿ ಕೇಳಿ ಕಲಿತು ತಿದ್ದಿಕೊಳ್ಳುವಂತೆ ಆಗಬೇಕು. ಹಾಗೆ ಆಗಬೇಕಾದರೆ, ಕನ್ನಡದ ವ್ಯಾಕರಣಸೂಕ್ಷ್ಮಗಳನ್ನು ಅನುಲಕ್ಷಿಸಲೇಬೇಕಾಗುತ್ತದೆ. ವ್ಯಾಕರಣ ಎಂದೊಡನೆ ಕನ್ನಡ ಭಾಷೆಗೆ ಎಲ್ಲಿಂದಲೋ ಹೊರಳಿಸಿ ಇಟ್ಟ ಬಂಡೆಗಲ್ಲೆಂದು ಭಾವಿಸುವುದು ಸರಿಯಲ್ಲ. ಕನ್ನಡದ ವ್ಯಾಕರಣ ಎನ್ನುವಾಗ, ಎಲ್ಲ ಅಕ್ಷರಗಳ ಸ್ಪಷ್ಟವಾದ ಉಚ್ಚಾರಣೆ, ನಿರ್ದಿಷ್ಟಲಿಪಿ ರೂಪದಲ್ಲಿ ಅವನ್ನು ಬರೆಯುವುದು, ಶಬ್ದರಚನೆ, ಪದಸ್ವರೂಪ, ವಾಕ್ಯರಚನೆ ಇವೆಲ್ಲ ವ್ಯಾಕರಣವಲ್ಲದೆ ಮತ್ತೇನು? ಕನ್ನಡದಲ್ಲಿ ಸಂಸ್ಕೃತವೂ ಇರುವುದರಿಂದ ಕನ್ನಡದ ಸಂಧಿಯೊಂದಿಗೆ ಸಂಸ್ಕೃತ ಸಂಧಿಗಳ ಪರಿಚಯ ಕನ್ನಡಕ್ಕೆ ಅನಿವಾರ್ಯ. ಸಮಾಸಗಳು, ಅವುಗಳಲ್ಲಿ ಅರಿಸಮಾಸ ಪರಿಚಯ, ಕೃತ್ತದ್ಧಿತ ಅವ್ಯಯಗಳು, ಕರ್ತೃ ಕರ್ಮ ಕ್ರಿಯಾರೂಪಗಳು, ನಾಮವಿಭಕ್ತಿ - ಆಖ್ಯಾತವಿಭಕ್ತಿಗಳು ಮತ್ತು ಇವನ್ನು ಪ್ರಯೋಗಿಸುವ ವಿಧಾನ, ಲಿಂಗ, ವಚನ ಪುರುಷ ಕಾಲ ಪ್ರಯೋಗ ಇವೆಲ್ಲ ಕನ್ನಡದಲ್ಲಿ ಪ್ರಾಥಮಿಕ ಪರಿಚಯಾಂಶಗಳಾಗಿವೆ.

ಇಂತಹ ಪ್ರಾಥಮಿಕ ವ್ಯಾಕರಣದಲ್ಲಿಯೇ ಆಧುನಿಕ ಲೇಖಕರ, ಅಧ್ಯಾಪಕರ, ಕವಿಗಳ ಪ್ರಯೋಗಗಳು ಕುಂಟುವುದನ್ನು ಹಲವೆಡೆ ಕಾಣುವಂತಾಗಿದೆ. ಪಠ್ಯಪುಸ್ತಕಗಳಲ್ಲಿ, ಕತೆಕಾದಂಬರಿಗಳಲ್ಲಿ, ಪತ್ರಿಕೆಗಳಲ್ಲಿ, ಪ್ರಬಂಧರಚನೆಗಳಲ್ಲಿ, ಧರ್ಮ ಸಂಸ್ಕೃತಿ ಸಾಹಿತ್ಯವಿಮರ್ಶೆಗಳಲ್ಲಿ ಹಾಗೂ ಭಾಷಣಗಳಲ್ಲಿ ಕನ್ನಡದ ವ್ಯಾಕರಣದೋಷಗಳು - ಕೆಲವರಲ್ಲಿ ಹೆಚ್ಚು, ಕೆಲವರಲ್ಲಿ ಕಡಮೆ, ಎದ್ದುಕಾಣುವುದು ಸ್ವಾಭಾವಿಕವೇ ಆಗಿದೆ. ಅನೇಕ ವ್ಯಾಕರಣದೋಷಗಳು ಅವೆಷ್ಟು ಪ್ರಚುರವಾಗಿವೆಯೆಂದರೆ, ಅವು ಸರಿಯಲ್ಲವೆಂಬ ಕಲ್ಪನೆಯೇ ಅವರಿಗಾಗದಷ್ಟು ಅವರ ರಕ್ತಗತವಾಗಿಹೋಗಿದೆ! ಈಗೀಗ ಎಷ್ಟೋ ಕಡೆ ಮಕ್ಕಳಿಗೆ ಕನ್ನಡ ಭಾಷಾಬೋಧನೆ ಮಾಡುವವರೂ ಶುದ್ಧವಾದ ಕನ್ನಡದಲ್ಲಿ ಪಾಠವಿವರಣೆಮಾಡುವುದಿಲ್ಲ, ಇದಕ್ಕೆ ಪರಿಹಾರವಿಲ್ಲವೆ? ಇದೆ.

ಅದಕ್ಕಾಗಿ ಪ್ರಾಥಮಿಕ ಹಂತದಿಂದಲೇ ಕನ್ನಡ ಭಾಷಾಭ್ಯಾಸದ ಒಟ್ಟೊಟ್ಟಿಗೆ ವ್ಯಾಕರಣದ ಅಭ್ಯಾಸವೂ ಇರಬೇಕು. ಸಾಹಿತ್ಯ ರಚನೆಗಳು ವ್ಯಾಕರಣಶುದ್ಧವಾಗುವಂತೆ ನೋಡಿಕೊಳ್ಳಬೇಕು. ಆದಕ್ಕಾಗಿ ಕವಿಗಳು, ಲೇಖಕರು ಸ್ವತಃ ಎಷ್ಟೇ ಪಾರಂಗತ, ಪರಿಣತರಾಗಿದ್ದರೂ ತಪ್ಪೆಸಗುವುದು ಮನುಷ್ಯ ಸ್ವಭಾವ ಎಂದರಿತುಕೊಂಡು, ಅಂತಹ ತಪ್ಪುಗಳನ್ನು ಹೋಗಲಾಡಿಸಲಿಕ್ಕಾಗಿ ಇತರ ವಿದ್ವಾಂಸರ ನೆರವುಪಡೆಯಬೇಕು. ತಿದ್ದಿಸಬೇಕು. ಯಾವುದೇ ಕೃತಿಯನ್ನು ಮುದ್ರಣಗೊಳ್ಳುವ ಮುಂಚೆ, ಇತರರಿಂದ ತಿದ್ದಿಸುವುದು ಯಾವ ತಪ್ಪೂ ಅಲ್ಲ. ಅಪಮಾನವಲ್ಲ ಮರ್ಯಾದೆ. ಪೂರ್ವಕವಿಗಳಲ್ಲಿ ರನ್ನ, ದುರ್ಗಸಿಂಹ, ರುದ್ರಭಟ್ಟ, ಆಂಡಯ್ಯ ಮುಂತಾದ ಮಾರ್ಗಕವಿಗಳು ತಮ್ಮ ಕಾವ್ಯಗಳನ್ನು ಇತರರಿಂದ ತಿದ್ದಿಸಿ ಕೊಂಡಿರುವುದಾಗಿ ಅಭಿಮಾನದಿಂದ ಹೇಳಿಕೊಂಡಿದ್ದಾರೆ.

ಮಾರ್ಗಕಾವ್ಯಗಳನ್ನು ಛಂದೋವ್ಯಾಕರಣ ಶುದ್ಧತೆಯಿಂದ, ದೇಸಿ ಒಡಂಬಡುವಂತೆ ರಚನೆ ಮಾಡುವುದು ಪ್ರಾಚೀನಪದ್ಧತಿ. ಆದಿಕವಿ ಪಂಪನು ತನ್ನ ಕಾವ್ಯಗಳಲ್ಲಿ ಅವೆರಡೂ 'ಪೊದಳ್ದಿಸೆವಂತೆ' ರಚಿಸಿದ್ದೇನೆಂದು ಹೇಳಿಕೊಂಡಿದ್ದಾನೆ. 'ದೇಸಿ' ಅಥವಾ 'ದೇಸೆ' ಎಂದರೆ ಇಲ್ಲಿ ಜಾನಪದ ಭಾಷೆ ಎಂದು ಅರ್ಥವಲ್ಲ, ಜಾನಪದದಲ್ಲಿ ಸಮೃದ್ಧವಾಗಿರುವ ಶಬ್ದಸಂಪತ್ತು, ಜೀವನಾನುಭವ, ನಡೆವಳಿ, ಸಂಸ್ಕೃತಿ ಇವನ್ನೇ ದೇಸಿ ಎಂದುದೆಂದು ತಿಳಿಯಬೇಕು. ವ್ಯಾಕರಣವನ್ನು ಮೀರದಿರುವ ದೇಸಿ ಮಾರ್ಗಕವಿಗಳದು. ಜಾನಪದ ಸಾಹಿತ್ಯವು ವ್ಯಾಪ್ತಿಯಲ್ಲಿ ಪರಿಮಿತ. ಬದುಕಿನ ಸುಖ ದುಃಖ, ಬೇನೆ, ಬೇಸರ, ಕಳೆ, ಹಗೆ, ನೋವು ನಲಿವುಗಳ ಚಿತ್ರಣಗಳು ಜಾನಪದ ಸಾಹಿತ್ಯದಲ್ಲಿ ಸಮೃದ್ಧವಾಗಿರುವುದು ನಿಜ. ಅಂತಹ ಜಾನಪದ ಸಾಹಿತ್ಯಕ್ಕೆ ಛಂದೋವ್ಯಾಪ್ತಿ ಮತ್ತು ವ್ಯಾಕರಣಾನುಸರಣೆ, ರಸಾಲಂಕಾರ ವರ್ಣನೆ, ಕಾವ್ಯಗುಣಗಳು ಸೀಮಿತ. ಮಾರ್ಗ ಸಾಹಿತ್ಯದಲ್ಲಿ ಇವೆಲ್ಲ ಸಮೃದ್ಧ. ಭಾಷೆಗೆ ಏಕರೂಪತೆ ಇರುವುದರಿಂದ ಸಮಾಜದ ಏಕತೆಗೆ ಮಾರ್ಗ ಸಾಹಿತ್ಯ ಹೆಚ್ಚು ಸಹಕಾರಿ. ಈ ಏಕರೂಪತೆಯ ಸಾಧನ ವ್ಯಾಕರಣ. ಕನ್ನಡ ನಾಡಿನ ವಿದ್ಯಾಲಯಗಳಲ್ಲಿ ಅಧ್ಯಯನ, ಅಧ್ಯಾಪನ, ಗ್ರಂಥರಚನೆ, ಭಾಷಣ ಇವೆಲ್ಲ ವ್ಯಾಕರಣಶುದ್ಧವಾಗಿರಬೇಕು. ಅದಕ್ಕಾಗಿ ಕನ್ನಡದ ವ್ಯಾಕರಣದ ಅನುಸರಣೆ ಅವಶ್ಯ ಮತ್ತು ಅನಿವಾರ್ಯ.

□

೭

ಕನ್ನಡದಲ್ಲಿ ಕಾವ್ಯದೋಷಗಳು

ಮಾನವನಲ್ಲಿ ಮಾನವತೆಯನ್ನು ನೆಲೆಗೊಳಿಸುವ ಕಲಾತ್ಮಕ ಸಾಧನವೇ ಸಾಹಿತ್ಯ. ಅದು ಹೇಗೆಂಬುದನ್ನು ತಿಳಿಯಲು ಮಾನವತೆಯ ಲಕ್ಷಣವನ್ನು ಲಕ್ಷಿಸಬೇಕಾಗುತ್ತದೆ. ಭರ್ತೃ ಹರಿಯ ನೀತಿ ಅದನ್ನು ಹೀಗೆನ್ನುತ್ತದೆ -

ಯೇಷಾಂ ನ ವಿದ್ಯಾ ನ ತಪೋ ನ ದಾನಂ
ಜ್ಞಾನಂ ನ ಶೀಲಂ ನ ಗುಣಂ ನ ಧರ್ಮಃ
ತೇ ಮರ್ತ್ಯಲೋಕೇ ಭುವಿ ಭಾರಭೂತಾಃ
ಮಾನುಷ್ಯರೂಪೇಣ ಮೃಗಾಶ್ಚರಂತಿ

ಅಂದರೆ - 'ಯಾರಲ್ಲಿ ವಿದ್ಯೆ, ತಪಸ್ಸು, ದಾನ , ಜ್ಞಾನ, ಶೀಲ, ಗುಣ, ಧರ್ಮ - ಎಂಬಿವು ಇಲ್ಲವೋ ಅವರು ಮನುಷ್ಯಲೋಕದಲ್ಲಿ ಭೂಭಾರಕರು ; ಮನುಷ್ಯರೂಪದಲ್ಲಿ ಮೃಗಗಳಾಗಿ ವರ್ತಿಸುತ್ತಾರೆ'. ಇಲ್ಲಿ ಹೇಳಿದ ಮಾನವೀಯ ಸದ್ಗುಣಗಳನ್ನು ಸಾಹಿತ್ಯ ಜ್ಞಾನದಿಂದ ಪಡೆಯಬಹುದು. ಇತರ ಶಾಸ್ತ್ರವಿದ್ಯೆಗಳನ್ನು ಎಷ್ಟೇ ಕಲ್ತಿರಲಿ, ಸಾಹಿತ್ಯ ವಿದ್ಯೆಯನ್ನು ಅರಿಯದ ಮಾನವರ ಸಮೂಹ ಸಮಾಜವೇ ಅಲ್ಲ - ಅದು ಸಮಜ (ಅಂದರೆ, ಪ್ರಾಣಿಸಮೂಹ) ಎಂತಲೂ ಒಂದು ಸುಭಾಷಿತವಿದೆ.

ಸಾಹಿತ್ಯ ವಿದ್ಯಾ ವಿಹೀನಾನಾಂ ಸರ್ವಶಾಸ್ತ್ರವಿದಾಮಪಿ
ಸಮಾಜಂ ಪರಿಪಶ್ಯಂತಿ ಸಮಜಂ ಬುದ್ಧಿಶಾಲಿನಃ

ಅಂತಹ ಸಾಹಿತ್ಯದಲ್ಲಿ ಮೇಲಾದುದು, ಪರಿಷ್ಕಾರವುಳ್ಳುದು, ಕವಿಕೌಶಲಪೂರ್ಣವಾಗಿ ಹೃದ್ಯವಾದುದು ಕಾವ್ಯ. ಅದರಲ್ಲಿಯೂ ಪದ್ಯಕಾವ್ಯ. ಪದ್ಯಕಾವ್ಯದಲ್ಲಿ ಮಹಾಕಾವ್ಯ, ಖಂಡಕಾವ್ಯ, ಮುಕ್ತಕ (ಬಿಡಿ ಪದ್ಯ), ಕವನ, ಪದ, ಹಾಡು-ಮುಂತಾದ ಪ್ರಭೇದಗಳಿವೆ. ಇನ್ನೊಂದೆಡೆ ಜಾನಪದ ಪ್ರಕಾರಗಳೂ ಇವೆ.

ಕಾವ್ಯಗಳು ನಮ್ಮ ದೇಶದಲ್ಲಿ ವೇದಕಾಲದಿಂದಲೇ ನಿರ್ಮಾಣವಾಗುತ್ತ ಬಂದಿವೆ. ಪ್ರಕೃತ ನಮಗಿಲ್ಲಿ ಕನ್ನಡ ಕಾವ್ಯ ಲಕ್ಷ್ಯಾರ್ಹ. ಅದು ಆದಿಕವಿ ಪಂಪನಿಂದ (೧೦ ನೆಯ ಶತಮಾನ) ಪ್ರಾರಂಭಗೊಂಡಿದೆ. ರೂಪಾಂತರವೇನೇ ಇರಲಿ, ಆಧುನಿಕ ಕಾಲದಲ್ಲಿಯೂ ಕಾವ್ಯರಚನೆಯಾಗುತ್ತಿದೆ.

ಯಾವ ಕಾಲದ ಕಾವ್ಯವೇ ಆಗಿರಲಿ, ಅದು ದೋಷರಹಿತವಾಗಿ, ಗುಣಾತಿಶಯದಿಂದ ಕೂಡಿ ಜೀವನದ ಪ್ರತಿಬಿಂಬವಾಗಿರುವುದರೊಂದಿಗೆ ಜೀವನಮಾರ್ಗದರ್ಶಕವಾಗಿ ಇರಬೇಕಾದುದು ಅಪೇಕ್ಷಣೀಯ. ದೋಷರಹಿತವಾಗಿ, ಎನ್ನುವಾಗ ಕಾವ್ಯ ದೋಷಗಳಾವುವು ಎಂಬ ಅರಿವು ಇರಬೇಕಲ್ಲವೆ? ಕಾವ್ಯದಲ್ಲಿ ಮುಖ್ಯವಾಗಿ ಅದರ ರಚನೆಯಲ್ಲಿ, ದೋಷವಿಲ್ಲದ ಮಾತ್ರಕ್ಕೆ ಗುಣಭೂಯಿಷ್ಠವಾಯ್ತೆಂದು ಭಾವಿಸುವಂತಿಲ್ಲ. ಕಾವ್ಯದಲ್ಲಿ ಶಬ್ದಗುಣ, ಅರ್ಥಗುಣ, ರೀತಿ, ರಸಾಲಂಕಾರಗಳುಳ್ಳ ಕಾವ್ಯ ಸ್ವರೂಪ ಎಂತಹುದೆಂಬುದನ್ನು ಸಂಸ್ಕೃತದಲ್ಲಿ, ಕನ್ನಡದಲ್ಲಿ ಲಾಕ್ಷಣಿಕರು ವಿವರವಾಗಿ ತಿಳಿಸಿರುತ್ತಾರೆ. ಕಾವ್ಯವು ಗುಣಯುಕ್ತವಾಗಿ ಕಂಗೊಳಿಸಬೇಕಾದರೆ ಅದರ ಪೂರ್ವಾವಶ್ಯಕತೆಯೇ ದೋಷರಾಹಿತ್ಯ. ಆದುದರಿಂದ ಕವಿತೆಗೆ ಕಾವ್ಯದೋಷ ಜ್ಞಾನವೇ ಮೊದಲ ಮೆಟ್ಟಿಲು. ಕಾವ್ಯದೋಷಪರಿಜ್ಞಾನಬೋಧನೆ ಕೂಡ ಅರೋಚಿಗಳಿಗಲ್ಲದೆ, ಸತೃಣಾಭ್ಯವಹಾರಿಗಳಿಗಲ್ಲ.(೧)

ವಾಸ್ತವವಾಗಿ ಕಾವ್ಯ ದೋಷಗಳಾವುವು? ಏಕೆ ಅವು ದೋಷಗಳು? ಎಂಬ ಅರಿವುಳ್ಳವನೇ ಕವಿ; ಪಂಡಿತನು. ಅಮರಕೋಶದಲ್ಲಿ 'ಪಂಡಿತ' ಎಂಬರ್ಥದಲ್ಲಿ ಇಪ್ಪತ್ತೈದು ಪರ್ಯಾಯಶಬ್ದಗಳಿವೆ. ಅವುಗಳಲ್ಲಿ 'ದೋಷಜ್ಞ' ಎಂಬುದೊಂದು. ಲೋಕದಲ್ಲಿ ಸಾಮಾನ್ಯವಾಗಿ ಕೃತಿದೋಷಗಳನ್ನು ಕಾಣುವ ಸಹೃದಯರನ್ನು ಅವಗಣಿಸಲಾಗುತ್ತಿದೆ. ಇಲ್ಲದ ಗುಣಗಳನ್ನೇ ಆರೋಪಿಸಿ 'ಭಲೇ' ಎಂದು ಮೆಚ್ಚಿ ಕೊಂಡಾಡುವವರನ್ನು ಮೆಚ್ಚಲಾಗುತ್ತಿದೆ! ಅಲ್ಲದೆ, ಹಾಗೆನ್ನುವಂತೆ ಪ್ರೇರಿಸಲಾಗುತ್ತಿದೆ. ಇದು ವಿವೇಕದ ಕೊರತೆಯ ಲಕ್ಷಣ.

ಪ್ರಕೃತ ಲೇಖನಕ್ಕೆ 'ಆಧುನಿಕ ಕಾವ್ಯ ದೋಷಗಳು' ಎಂಬುದೇ ವಿಷಯವಾದರೂ ಆಧುನಿಕವು ಪ್ರಾಚೀನದ ನೆಲಗಟ್ಟುಳ್ಳದಾದ್ದರಿಂದ ಪ್ರಾಚೀನ ಲಾಕ್ಷಣಿಕರು ಪ್ರತಿಪಾದಿಸಿದ ಕಾವ್ಯ ದೋಷಗಳೂ ಲಕ್ಷ್ಯಾರ್ಹವಾಗುತ್ತವೆ. ಗಣನೆಗೆ ಒಡಂಬಡುತ್ತವೆಯೆಂದು ತಿಳಿಯಬೇಕು. ಪ್ರಾಚೀನರಲ್ಲಿ ಕಾವ್ಯದೋಷ ದರ್ಶನದ ಬಗೆಗೆ ಇಂದಿನವರಷ್ಟು ಅಸಹನೆ ಅಥವಾ ತುಚ್ಛೀಕಾರವಿರಲಿಲ್ಲವೆಂಬುದು ಸ್ಪಷ್ಟವಿದೆ. ದೋಷಕ್ಕೆ 'ಅವಗುಣ' ಎಂಬುದು ಇನ್ನೊಂದು ಹೆಸರು. ಕಾವ್ಯದಲ್ಲಿ ಅವಗುಣ ಸ್ವಲ್ಪವೂ ಇರಕೂಡದು; ಅದು ಇದ್ದರೆ ಕಣ್ಣಿಗೆ ಕಸ ಬಿದ್ದ ಹಾಗೆ- ಎಂದಿರುವ ಕವಿರಾಜಮಾರ್ಗದ ಮಾತಿದು -

ಅವಗುಣಮಿನಿತಾದೊಡಮಾ
ಕವಿತಾಬಂಧಮನಶೇಷಮಂ ದೂಷಿಸುಗುಂ
ಸುವಿಳಾಸ ಲೋಲ ಲೋಚನ
ವಿವರಮನೆಡೆವೆತ್ತ ಕಸದವೋಲನವರತಂ (೧-೪೩)

---

(೧) ಉಣ್ಣುವ ಅನ್ನದಲ್ಲಿ ಹುಲ್ಲಿನ ತುಂಡು ಬಂದಿದ್ದರೆ, ಅಲಕ್ಷ್ಯದಿಂದ ಅದನ್ನೂ ಅನ್ನದೊಂದಿಗೆ ಉಂಬವರು ಸತೃಣಾಭ್ಯವಹಾರಿಗಳು ಅವಿವೇಕಿಗಳೆಂದು ಲಕ್ಷ್ಯಾರ್ಥ. ಅದನ್ನು ಆಕಡೆಗಿಟ್ಟು ಶುದ್ಧಾಹಾರಸೇವಿಸುವವರು ಆರೋಚಿಗಳು, ದೋಷವನ್ನು ಕಳೆದುಕೊಳ್ಳುವ ವಿವೇಕಿಗಳು ಎಂದು ಲಕ್ಷ್ಯಾರ್ಥ.

ಈ ಅಭಿಪ್ರಾಯವನ್ನೇ ಮನದಲ್ಲಿ ದೃಢಮಾಡಿಕೊಂಡ ಪ್ರಾಚೀನ ಕವಿಗಳು ಕಾವ್ಯರಚನೆ ಮಾಡಿ, ಅದನ್ನು ಸಮಕಾಲೀನ ಪರಿಣತ ಸಹೃದಯ ವಿದ್ವಾಂಸರಿಂದ ತಿದ್ದಿಸುತ್ತಿದ್ದರೆಂಬುದಕ್ಕೆ ಹಲವು ಕಾವ್ಯೋದಾಹರಣಗಳಿವೆ. ಕವಿ ರನ್ನನು (೧೦ ನೆಯ ಶತಮಾನ) ತನ್ನ 'ಸಾಹಸಭೀಮವಿಜಯ' ಕಾವ್ಯವನ್ನು ತಿದ್ದಿಸಿದ ಸಂಗತಿಯನ್ನು ಹೀಗೆಂದಿದ್ದಾನೆ -

ವನರುಹಭವನೆನಿಸಿದ ದಂ
ಡನಾಯಕಂ ಕೇಶಿ ತಿರ್ದೆ ಪೇಳ್ದಂ ಕವಿರ
ನ್ನನ ಪೇಳ್ದ ಕೃತಿ ಯಶಃ ಶ್ರೀ
ವನಿತೆಗಲಂಕೃತಿಯೆನಿಪ್ಪುದೊಂದಚ್ಚರಿಯೇ ? (ಆಶ್ವಾಸ ೧-೫೧)

ರನ್ನನ ಕಾಲದಲ್ಲಿ ಪ್ರತಿಭೆ ಪಾಂಡಿತ್ಯ ಕವಿತಾಪರಿಣತಿಗಳಲ್ಲಿ ಬ್ರಹ್ಮದೇವನಿಗೆ ಎಣೆಯಾಗಿಯೂ ಸೇನಾಪತಿಯಾಗಿಯೂ ಇದ್ದಂತಹ ಕೇಶಿ (ಕೇಶವ) ಎಂಬಾತನು ತಿದ್ದಿದುದಾಗಿ ರನ್ನನು ಅಭಿಮಾನದಿಂದಲೇ ಹೇಳಿಕೊಂಡಿದ್ದಾನಲ್ಲವೇ? ದುರ್ಗಸಿಂಹನು (೧೧೪೦) ತನ್ನ 'ಕರ್ಣಾಟಕ ಪಂಚತಂತ್ರ' ಕಾವ್ಯವನ್ನು ತಿದ್ದಿಸಿದ ಸಂಗತಿ ಹೀಗಿದೆ -

ಕವಿ ಗಮಕಿ ವಾದಿ ವಾಗ್ಮಿ
ಪ್ರವರರ್ ಶ್ರೀ ಮಾದಿರಾಜ ಮುನಿಪುಂಗವರು
ತ್ಸವದಿಂ ತಿರ್ದಿದರೆನೆ ಭೂ
ಭುವನದೊಳಿದನ್ನೆದೆ ಕೊಂಡು ಕೊನೆಯದರೊಳರೇ ?

(ಪದ್ಯ ೨೮)

ಉದ್ದಾಮ ಕವಿ ರುದ್ರಭಟ್ಟನು ತನ್ನ ಜಗನ್ನಾಥವಿಜಯ ಕಾವ್ಯವನ್ನು ರಸಿಕರಿಂದ ತಿದ್ದಿಸಿದನಂತೆ-

ಪೊಸತೆನೆ ಪೇಳ್ವ ತಿರ್ದುವರಿವೆನ್ನೊಳೆ ಸನ್ನಿದಮಾದೊಡಂ ಕರಂ
ರಸಿಕರಿನೆಯ್ದೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ತಮಂತೆ ತಿ
ರ್ದಿಸುವುದೆನಲ್ ನಯಂ, ಬೆಳಗೆ ಕನ್ನಡಿ ಸೋದಿಸೆ ಪೊನ್ ವಿರಾಜಿಪಂ
ತೆಸೆದು ಬಳಿಕ್ಕೆ ಮತ್ಕೃತಿ ಚಮತ್ಕೃತಿಯಂ ಧರೆಗುಂಟುಮಾಡುಗುಂ

(ಅಶ್ವಾಸ ೧-೧೫)

ಲೋಕಕ್ಕೆ ಹೊಸತೆನಿಸುವಂತೆ ಕಾವ್ಯರಚಿಸುವ, ತಿದ್ದುವಷ್ಟರ ಮಟ್ಟಿನ ಶಾಸ್ತ್ರಜ್ಞಾನ ತನಗಿದ್ದರೂ ಕಾವ್ಯರಸಿಕರಾದ ವಿದ್ವಾಂಸರಿಂದ ತಿದ್ದಿಸದಿದ್ದರೆ ತನಗೆ ನೆಮ್ಮದಿಯಿಲ್ಲ ವೆಂದಿರುವ ಕವಿಯ ಉದಾತ್ತಗುಣ ಸಾಮಾನ್ಯವೆ ? ತಿದ್ದಿಸುವುದೇ ತನ್ನ ನಯಗುಣವಾಗಿದ್ದು ಅದರ ಪರಿಣಾಮವಾಗಿ ಸ್ವಚ್ಛಗೊಳಿಸಿದಾಗ ಕನ್ನಡಿ, ಶುದ್ಧಪಡಿಸಿದಾಗ ಚಿನ್ನ, ಶೋಭಾಯಮಾನವಾಗುವಂತೆ ಶೋಭಿಸುತ್ತ ತನ್ನ ಕಾವ್ಯವು ಲೋಕಕ್ಕೆ ಚಮತ್ಕಾರವನ್ನುಂಟುಮಾಡುವುದೆಂದು ಹೇಳಿ ಎಲ್ಲ ಕಾಲದ ಕವಿಗಳಿಗೆ ಹೀಗೆ ಕಿವಿಮಾತನ್ನು ಆಡಿದ್ದಾನೆ. ಅಚ್ಚಗನ್ನಡದ ಕವಿ ಆಂಡಯ್ಯನು (೧೨೩೫) ತನ್ನ 'ಕಬ್ಬಿಗರ ಕಾವ'ವು 'ತಪ್ಪೊಂದುಂ ತಲೆದೋರದಂತೆ ಪಲರೆಲ್ಲರ್ ತಿರ್ದಿದೀ ಕಬ್ಬಂ ಎಂತಪ್ಪಂಗಂ ಪೊಸ ಮುತ್ತಿನ ಎಕ್ಕಸರದಂತೆ ಎಂದುಂ ಕೊರಲ್ಗೊಳ್ಳದೇ' (ಪದ್ಯ - ೫) ಎಂದಿದ್ದಾನೆ.

ಇಂತಹ ತಿದ್ದುಪಡಿ ಆಧುನಿಕ ಕಾವ್ಯಗಳಿಗೆ ಕೂಡ ಅವಶ್ಯವೆನಿಸುವುದಿಲ್ಲವೆ? ಅಂತಹ ತಿದ್ದುವಿಕೆ ಇಲ್ಲದಿರುವುದರಿಂದಲೇ ಆಧುನಿಕ ಕಾವ್ಯಗಳು, ಕವಿತೆಗಳು ದೋಷಬಾಹುಳ್ಯದಿಂದ ಕೊಳೆಮೆತ್ತಿಕೊಂಡಂತಿವೆ, ಎನಿಸುವುದಿಲ್ಲವೇ?

ಗ್ರಾಮ್ಯ ಇಲ್ಲವೆ ಜಾನಪದವೆನಿಸುವ ಸಾಹಿತ್ಯ ಹೇಗೇ ಇರಲಿ, ಮಾರ್ಗಸಾಹಿತ್ಯವಂತೂ ಶುದ್ಧ ಭಾಷೆಗೂ ನಿರ್ದೋಷರಚನೆಗೂ ಗುಣೋತ್ಕರ್ಷತೆಗೂ ನೆಲೆಯಾಗಿರಬೇಕಾದುದು ನಿಸ್ಸಂಶಯ. ಹಿಂದೆ ಉದಾಹರಿಸಿದ ಕವಿರಾಜಮಾರ್ಗೋಕ್ತಿಯಂತೆಯೇ ಸಂಸ್ಕೃತಲಾಕ್ಷಣಿಕರು ದೋಷರಹಿತ ರಚನೆಗೆ ಮಹತ್ವ ಕೊಟ್ಟಿರುತ್ತಾರೆ. ಭಾಮಹನ (೬ನೆಯ ಶತಮಾನ) 'ಕಾವ್ಯಾಲಂಕಾರ' ಎಂಬ ಲಾಕ್ಷಣಿಕ ಗ್ರಂಥದ ಉಲ್ಲೇಖವಿದು -

ಸರ್ವಥಾ ಪದಮಪ್ಯೇಕಂ ನ ನಿಗದ್ಯಮವದ್ಯವತ್
ವಿಲಕ್ಷಣಾ ಹೀ ಕಾವ್ಯೇನ ದುಃಸುತೇನೇವ ನಿಂದ್ಯತೇ

(ಅಧ್ಯಾಯ ೧-೧೧)

ಅಂದರೆ - ದೋಷಯುಕ್ತವಾಗಿ ಒಂದೇ ಒಂದು ಪದವನ್ನೂ ಹೇಳಬಾರದು. ಕೆಟ್ಟ ಮಗನಿಂದ ತಂದೆಗೆ ಅಪಕೀರ್ತಿ ಬರುವ ಹಾಗೆ ದೋಷಯುಕ್ತ ಕಾವ್ಯದಿಂದ ಹಾಗೆ ಬೈಗಳುಂಟಾಗುತ್ತದೆ. ಇದೇ ಅಭಿಪ್ರಾಯವನ್ನು ನಾಗವರ್ಮನು (೧೦೪೨) ಕಾವ್ಯಾವಲೋಕನ ಗ್ರಂಥದಲ್ಲಿ ಹೀಗೆಂದಿರುವನು -

ಕೃತಿಸತಿಯ ಮೆಯ್ಯೊಳೆಳ್ಳನಿ
ತು ತಾನದೊಂದರಿಯೆ ದೋಷಮಾಗೆ ತದಾವ
ರ್ಜಿತಮಪ್ಪ ಕೀರ್ತಿಯುಂ ನಿಂ
ದಿತಮಕ್ಕುಂ ದರ್ಪಣಾರ್ಪಿತ ಚ್ಛಾಯೆಯವೋಲ್

(ಅಧಿಕರಣ ೨-೫)

(ಅಂದರೆ, ಕಾವ್ಯಾಂಗನೆಯ ಮೈಯಲ್ಲಿ ಒಂದೆಳ್ಳಿನಷ್ಟು ದೋಷವಿದ್ದರೂ ಕನ್ನಡಿಗೆ ಸೇರಿಕೊಂಡ ಕೊಳೆಯಂತೆ, ಕೀರ್ತಿಗೆ ಹಾನಿಕರವಾಗುವುದು) ಹಾಗೆ ದೋಷ ಬಾರದಿರಬೇಕಾದರೆ ಕವಿಗೆ ಚೆನ್ನಾದ ಶಾಸ್ತ್ರಜ್ಞಾನವಿರಬೇಕು. ಅದನ್ನೇ ಭಾಮಹನು ಹೇಳಿರುವುದು -

ಶಬ್ದಶ್ಛಂದೋಭಿಧಾನಾರ್ಥಾ ಇತಿಹಾಸಾಶ್ರಯಾಃ ಕಥಾಃ
ಲೋಕೋ ಯುಕ್ತಿಃ ಕಲಾಶ್ಚೇತಿ ಮಂತವ್ಯಾಃ ಕಾವ್ಯಹೇತವಃ

(ಅ. ೧-೯)

ವ್ಯಾಕರಣ, ಛಂದಸ್ಸು, ಶಬ್ದಕೋಶಗಳು, ಇತಿಹಾಸ (ಪುರಾಣ) ಕಥೆಗಳು, ಲೋಕವ್ಯವಹಾರ ಜ್ಞಾನ, ತರ್ಕ, ಕಲೆಗಳು - ಇವು ಕಾವ್ಯ ರಚನೆಗೆ ಕಾರಣಗಳೆಂದು ತಿಳಿಯಬೇಕು - ಎಂದಿಲ್ಲಿ ಹೇಳಿದೆ. ಈ ಎಲ್ಲ ಶಾಸ್ತ್ರಜ್ಞಾನವಿದ್ದರೂ ಕವಿತಾಸಾಮರ್ಥ್ಯವಿಲ್ಲದಿರುವುದು ತುಂಬಲಾಗದ ಕೊರತೆಯೇ ಆಗಿದೆ. ನಾಗವರ್ಮನು ಕಾವ್ಯಾವಲೋಕನದಲ್ಲಿ ಅದನ್ನೇ ಎಂದಿರುವುದು ಹೀಗೆ -

ಮದವಿಲ್ಲದಿಭಂ ಮಧುವಿ । ಲ್ಲದ ಕುಸುಮಂ ಚಂದ್ರನಿಲ್ಲದೊಂದಿರುಳಾರ್ಪಿ
ಲ್ಲದ ನೃಪತಿ ಕವಿತೆಯಿಲ್ಲದ । ವಿದಗ್ಧತಾಗುಣಮದೇಂ ಮನಂಗೊಳಿಸುಗುಮೇ

(ಪದ್ಯ - ೪೨೬)

ಕಾವ್ಯಲಕ್ಷಣಗಳನ್ನು ನಿರೂಪಣೆ ಮಾಡಿರುವ ಸಂಸ್ಕೃತ-ಕನ್ನಡ ಕವಿಗಳು (ಲಾಕ್ಷಣಿಕರು) ಕಾವ್ಯ ಗುಣಗಳನ್ನು ನಿರೂಪಿಸುವುದರೊಳಗೆ ಕಾವ್ಯದೋಷಗಳನ್ನು ವಿವರಿಸಿರುವುದು ಕಂಡುಬರುತ್ತದೆ. ಅವು ಹಿಂದಿನ, ಇಂದಿನ ಹಾಗೂ ಮುಂದಿನ ಕಾಲಕ್ಕೂ ಅನ್ವಯಿಸುವಂಥವೇ ಆಗಿವೆ. ಆದುದರಿಂದ ಅವನ್ನು ಇಲ್ಲಿ ಮೊದಲಾಗಿ ಪ್ರಸ್ತಾವಿಸುವುದು ಸೂಕ್ತವೇ ಸರಿ.

ಸಂಸ್ಕೃತ ಲಾಕ್ಷಣಿಕರಲ್ಲಿ ಮೊದಲನೆಯನೆನಿಸಿದ ಭಾಮಹನು (೬ ನೆಯ ಶತಮಾನ) ತನ್ನ 'ಕಾವ್ಯಾಲಂಕಾರ' ಎಂಬ ಲಕ್ಷಣ ಗ್ರಂಥದಲ್ಲಿ ತಿಳಿಸಿರುವ ಕಾವ್ಯದೋಷಗಳಿವು - (ಅರ್ಥದೋಷಗಳು) ನೇಯಾರ್ಥ, ಕ್ಲಿಷ್ಟ, ಅನ್ಯಾರ್ಥ, ಅವಾಚಕ, ಅಯುಕ್ತಿಮತ್, ಗೂಢಶಬ್ದಾಭಿಧಾನ - ಎಂಬ ಆರು.

ಶಬ್ದದೋಷಗಳು : ಶ್ರುತಿದುಷ್ಟ , ಅರ್ಥದುಷ್ಟ, ಕಲ್ಪನಾದುಷ್ಟ, ಶ್ರುತಿಕಷ್ಟ - ಎಂಬೀ ನಾಲ್ಕು. ಕೆಲಮಟ್ಟಿಗೆ ಈ ಶಬ್ದದೋಷಗಳು ಆಶ್ರಯಸೌಂದರ್ಯದಿಂದ ದೋಷವಾಗದಿರುವುದುಂಟು ಎಂದು ಅಪವಾದವನ್ನೂ ಹೇಳಿರುತ್ತಾನೆ. ಮತ್ತೆ ನಾಲ್ಕನೆಯ ಅಧ್ಯಾಯದಲ್ಲಿ ಈ ಹದಿನೆಂಟು ಕಾವ್ಯದೋಷಗಳನ್ನು ನಿರೂಪಿಸಿದ್ದಾನೆ - ಅಪಾರ್ಥ, ವ್ಯರ್ಥ, ಏಕಾರ್ಥ, ಸಸಂಶಯ, ಅಪಕ್ರಮ, ಶಬ್ದಹೀನ, ಯತಿಭ್ರಷ್ಟ, ಭಿನ್ನವೃತ್ತ, ವಿಸಂಧಿ, ದೇಶವಿರುದ್ಧ, ಕಾಲವಿರುದ್ಧ, ಲೋಕವಿರುದ್ಧ, ನ್ಯಾಯವಿರುದ್ಧ, ಆಗಮವಿರುದ್ಧ, ಪ್ರತಿಜ್ಞಾಹೀನ, ಹೇತುಹೀನ ಮತ್ತು ದೃಷ್ಟಾಂತಹೀನ (ನೋಡಿ: ಕನ್ನಡ ಕಾವ್ಯಾಲಂಕಾರ, ಅನುವಾದಕರು : ಡಾ।। ಕೆ. ಕೃಷ್ಣಮೂರ್ತಿ).

ವಾಮನನೆಂಬ ಲಾಕ್ಷಣಿಕನು (೭ ನೆಯ ಶತಮಾನ) ತನ್ನ 'ಕಾವ್ಯಾಲಂಕಾರಸೂತ್ರಾಣಿ' ಎಂಬ ಗ್ರಂಥದಲ್ಲಿ ಕಾವ್ಯದೋಷಗಳನ್ನು-ಪದದೋಷ, ಅರ್ಥದೋಷ ಎಂದು ವಿಂಗಡಿಸಿದ್ದಾನೆ. ಅಲ್ಲಿ ಹೇಳಿದ ಐದು ಬಗೆಯ ಪದದೋಷಗಳು - ದುಷ್ಟ (ಅಸಾಧು, ವ್ಯಾಕರಣವಿರುದ್ಧ), ಕಷ್ಟ (ಶ್ರುತಿವಿರಸ, ಕಿವಿಗೆ ಕರ್ಕಶ), ಗ್ರಾಮ್ಯ (ಜಾನಪದರೂಪ), ಅಪ್ರತೀತ (ಶಾಸ್ತ್ರಕ್ಕೆ ಸರಿಯಾದರೂ ರೂಢಿಯಲ್ಲಿಲ್ಲದ), ಅನರ್ಥಕ (ಪೂರಣಾರ್ಥಂ ಅನರ್ಥಕಂ-ಅವಶ್ಯವಿಲ್ಲದ ಅವ್ಯಯಗಳ ಬಳಕೆ. ಆದರೂ ವಾಕ್ಯಕ್ಕೆ ಸೊಗಸು ಉಂಟಾಗುವಲ್ಲಿ ಇರಬಹುದು). ಅರ್ಥದೋಷಗಳಿವು - ಅನ್ಯಾರ್ಥ, ನೇಯಾರ್ಥ, ಗೂಢಾರ್ಥ, ಅಶ್ಲೀಲ. ಕ್ಲಿಷ್ಟ. ವಿವರ-ರೂಢಿಚ್ಯುತವಾದುದು ಅನ್ಯಾರ್ಥ. ಕಲ್ಪಿತಾರ್ಥವೇ ನೇಯಾರ್ಥ. ಅಪ್ರಸಿದ್ಧವಾದುದು ಗೂಢಾರ್ಥ. ಅಸಭ್ಯವಾದ ಅರ್ಥಾಂತರವುಳ್ಳುದು ಅಶ್ಲೀಲ. ಗುಪ್ತವಾಗಿ ಇಲ್ಲವೆ ಮುಚ್ಚಲ್ಪಟ್ಟು ಅಶ್ಲೀಲವಿದ್ದರೆ ಉದಾ: ಸುಭಗೆ, ಭಗಿನಿ, ಕುಮಾರಿ, ಅಭಿಪ್ರೇತ, ಶಿವಲಿಂಗ ಮುಂತಾದುವು ದೋಷಕರವಲ್ಲ.

ಮೇಲಿನ ಲಾಕ್ಷಣಿಕನು ಹೇಳಿರುವ ವಾಕ್ಯದೋಷಗಳಿವು - ಭಿನ್ನವೃತ್ತ (ತನ್ನ ಲಕ್ಷಣದಿಂದ ಚ್ಯುತವಾದುದು ಅಂದರೆ, ಛಂದೋದೋಷವುಳ್ಳುದು), ಯತಿ ಭ್ರಷ್ಟತೆ (ಕಿವಿಗೆ ಕರ್ಕಶವಾಗಿ ವಿರಾಮಸ್ಥಳವುಳ್ಳದು - ಇದು ಭಿನ್ನವೃತ್ತಾಂತರ್ಗತ), ವಿಸಂಧಿ (ವಿರೂಪವಾದ ಪದಸಂಧಿ-

ಇದು ವಿಶ್ಲೇಷ, ಅಶ್ಲೀಲ, ಕಷ್ಟ ಎಂದು ಮೂರು ವಿಧ), ವ್ಯರ್ಥ (ಹಿಂದಿನ ಮುಂದಿನ ವಾಕ್ಯಗಳಿಗೆ ತಡೆ), ಏಕಾರ್ಥ (ಹೇಳಿದುದನ್ನೆ ಹೇಳುವುದು, ಪುನರುಕ್ತಿ - ಪುನಃ ಹೇಳಿದುದರಲ್ಲಿ ವಿಶೇಷಾರ್ಥವಿಲ್ಲದಿದ್ದರ ಅಂತಹ ಏಕಾರ್ಥವು ದೋಷಕರ. ಉದಾ : ಕಳಭ ಎಂದರೆ ಆನೆಯ ಮರಿ; ಅದನ್ನು ಕರಿಕಳಭ ಎನ್ನಬಹುದು. ಇದರಂತೆ ನಿತಂಬಕಾಂಚಿ, ಕರ್ಣಕುಂಡಲ, ಕನ್ನಡದಲ್ಲಿ ಎಳ್+ ನೆಯ್ ಎಣ್ಣೆ ಆಗಿದ್ದರೂ ಎಳ್ಳೆಣ್ಣೆ ಎಂಬುದು ತಪ್ಪಲ್ಲ. ತಾದ್ರೂಪ್ಯಬೋಧನೆಗಾಗಿ ಹೀಗೆ ಪುನರುಕ್ತಿ ಮಾಡಬಹುದು), ಸಂದಿಗ್ಧ (ಸಂಶಯಕರ), ಅಪ್ರಯುಕ್ತ, ಅಪಕ್ರಮ (ಸಂಬಂಧಕ್ರಮವಿಲ್ಲದುದು), ಲೋಕವಿರುದ್ಧ (ದೇಶ ಕಾಲಸ್ವಭಾವವಿರುದ್ಧಾರ್ಥವುಳ್ಳದ್ದು), ವಿದ್ಯಾವಿರುದ್ಧ (ಕಲೆಗೆ ವಿರುದ್ಧ ಮತ್ತು ಚತುರ್ವರ್ಗ ಶಾಸ್ತ್ರಗಳಿಗೆ ವಿರೋಧವಾದುದು.

ಮಮ್ಮಟನು (೧೧ನೇಯ ಶತಮಾನ) ತನ್ನ ಕಾವ್ಯಪ್ರಕಾಶದ ಏಳನೆಯ ಸಮುಲ್ಲಾಸದಲ್ಲಿ ಕಾವ್ಯದೋಷಗಳನ್ನು ದುಷ್ಟ, ಕ್ಲಿಷ್ಟ ಎಂದು ವಿಂಗಡಿಸಿ ಹಿಂದಿನವರಂತೆಯೇ ವಿವರಿಸಿದ್ದಾನೆ. ಸುಮಾರು ಅದೇ ಶತಮಾನದ ಕ್ಷೇಮೇಂದ್ರನು ತನ್ನ 'ಕವಿಕಂಠಾಭರಣ' ಎಂಬ ಲಾಕ್ಷಣಿಕ ಕೃತಿಯಲ್ಲಿ ಕಾವ್ಯದೋಷಗಳನ್ನು ಶಬ್ದಕಾಲುಷ್ಯ, ಅರ್ಥಕಾಲುಷ್ಯ, ರಸಕಾಲುಷ್ಯ ಎಂದು ಮೂರು ವರ್ಗಗಳಾಗಿ ಮಾಡಿದ್ದಾನೆ. ಇವನ್ನು ಅನುಲಕ್ಷಿಸಿ ಕಾವ್ಯಸ್ವರೂಪವನ್ನು ಸಗುಣ, ನಿರ್ಗುಣ, ಸದೋಷ, ನಿರ್ದೋಷ, ಗುಣದೋಷಯುಕ್ತ-ಎಂದು ಐದು ಬಗೆಯಾಗಿ ತಿಳಿಸಿದ್ದಾನೆ. ಸತ್ಕವಿಯಾದವನು ಆಕರ್ಷಕ ವಿಷಯ, ಮನೋಹರ ಶಬ್ದ, ರಮಣೀಯ ಅರ್ಥ ಇವುಗಳಿಂದ ಕೂಡಿದ ಕಾವ್ಯ ರಚನೆಮಾಡುತ್ತಾನೆ ಎಂದಿದ್ದಾನೆ.

ಸಂಸ್ಕೃತ ಲಾಕ್ಷಣಿಕರ ಮಾರ್ಗವನ್ನೇ ಹಿಡಿದು ಕನ್ನಡ ಲಾಕ್ಷಣಿಕರೂ ಕಾವ್ಯದೋಷಗಳನ್ನು ಕನ್ನಡದ ಪ್ರಯೋಗಾಧಾರದಿಂದ ನಿರೂಪಣೆ ಮಾಡಿರುತ್ತಾರೆ. ಕನ್ನಡದಲ್ಲಿ ಮೊದಲ ಲಾಕ್ಷಣಿಕ ಗ್ರಂಥವಾಗಿರುವ ಕವಿರಾಜಮಾರ್ಗದಲ್ಲಿ (ಕಾಲ ಕ್ರಿ.ಶ ೮೬೦) ಪ್ರಥಮ ಪರಿಚ್ಛೇದವು 'ದೋಷಾದೋಷಾನು ವರ್ಣನನಿರ್ಣಯ' ಎಂದೇ ಹೆಸರಾಂತಿದೆ. ಕಣ್ಣುಗಳಿಗೆ ತಮ್ಮ ಕಾಡಿಗೆ ಹೇಗೆ ಕಾಣಿಸುವುದಿಲ್ಲವೋ ಹಾಗೆ, ಕಾವ್ಯರಚನೋದ್ಯುಕ್ತನು ತನ್ನ ರಚನಾದೋಷವನ್ನು ಕಾಣಲಾರನು. ಆದುದರಿಂದ ತನ್ನ ರಚನೆಯನ್ನು ಜಾಣರಿಂದ ಓದಿಸಿ, ತಿದ್ದಿಸಿ ಕಾವ್ಯರಚಿಸುತ್ತಿರಬೇಕು - ಎಂದು ಮಾರ್ಗಕಾರನು ಕವಿಗಳಿಗೆ ಕಿವಿಮಾತನ್ನು ಹೇಳಿದ್ದಾನೆ. (೧-೪೫) ಪೂರ್ವಕವಿಗಳ ಮಾರ್ಗದಲ್ಲಿ ಹೇಳಲಾದ ದೋಷಗಳನ್ನು ಮನನ ಮಾಡಿಕೊಂಡು, ತನಗೆ ತಿಳಿದಿರುವ ಅಂಶಗಳನ್ನು ನಿಶ್ಚಯಿಸಿಕೊಂಡು ಕೆಲವನ್ನು ಹೇಳುವೆನು - ಎಂದಿದ್ದಾನೆ. ಆಧುನಿಕ ಕವಿಗಳಿಗೂ ಅನ್ವಯವಾಗುವ ಮಹತ್ತ್ವವುಳ್ಳುದಾಗಿ ಅವನು ಹೇಳಿರುವ ದೋಷ ವಿಚಾರಗಳಿವು -

ಹಳಗನ್ನಡವನ್ನು ಹೊಲಗೆಡಿಸಿ ಅಸಂಗತವಾಗುವಂತೆ ಬಳಸುವುದು, ಅರಿಸಮಾಸ, ಸಂಸ್ಕೃತಾವ್ಯಯಗಳನ್ನು ಸಮಾಸಮಾಡಿಕೊಳ್ಳದೆ ಕನ್ನಡದಲ್ಲಿ ಪ್ರಯೋಗಿಸುವದು-ಇವು ದೋಷಗಳು. ಕವಿರಾಜಮಾರ್ಗದಲ್ಲಿ ಕಾವ್ಯದೋಷಗಳಾಗಿ ಶ್ರುತದುಷ್ಟ (ಅಶ್ಲೀಲ), ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪೋನೋಕ್ತಿ ಕಷ್ಟ ಎಂಬ ನಾಲ್ಕನ್ನು ಹೇಳಿ ಉದಾಹರಣೆಗಳನ್ನು ಕೊಡಲಾಗಿದೆ. (೧-೬೨) ಆದರೆ, ದುಷ್ಕರಕಾವ್ಯಗಳಲ್ಲಿ ಶ್ರುತಿಕಷ್ಟವು ದೋಷವೆನಿಸದೆಂದು ಹೇಳಿದೆ. ಇನ್ನುಳಿದ ಮೂರೂ, ಪಗರಣ ಎಂಬ ಗ್ರಾಮ್ಯನಾಟಕದಲ್ಲಿ ಹಾಸ್ಯರಸಕ್ಕೆ ಸಾಧನವಾಗುವುದರಿಂದ (೧-೬೮) ಅಲ್ಲಿ

ಅವು ದೋಷವೆನಿಸವೆಂದು ಹೇಳಿದೆ. ಅನಂತರ ಹೇಳಲಾದ ಹದಿನಾರು ಬಗೆಯ ದೋಷಗಳು ಹಾವಿನ ವಿಷದಂತೆ ಕೃತಿವಧುವನ್ನು ವಧೆಮಾಡುವವೆಂದು ಹೇಳಲಾಗಿದೆ. ಅವು ಯಾವುವೆಂದರೆ-ಯತಿಭಂಗ, ಅರ್ಥಶೂನ್ಯತೆ, ವಿರುದ್ಧಾರ್ಥ, ಉಕ್ತಪುನರುಕ್ತಾರ್ಥ, ಯಾಥಾಸಂಖ್ಯಚ್ಯುತಿ, ವ್ಯವಹಿತ, ಅಚ್ಛಂದ (ಛಂದೋಭಂಗ), ವಿಸಂಧಿ (ವಿರೂಪಸಂಧಿ), ನೇಯಾರ್ಥ, ಶಾಸ್ತ್ರವಿರುದ್ಧ ಸಮಯ ವಿರುದ್ಧ, ನ್ಯಾಯವಿರುದ್ಧ, ಕಳಾವಿರುದ್ಧ, ಕಾಲವಿರುದ್ಧ, ಲೋಕವಿರುದ್ಧ ಮತ್ತು ದೇಶವಿರುದ್ಧ. ಹೀಗೆ ಹೇಳಿ ಕನ್ನಡದಲ್ಲಿ ಖಂಡಪ್ರಾಸದ ಬಳಕೆಯಿರುವುದರಿಂದ ನಿಯತ ಸ್ಥಾನದ ಯತಿವಿಲಂಘನೆ ದೋಷಕರವಲ್ಲವೆಂದು ಹೇಳಿದೆ.

ಇಷ್ಟು ಸಂಗತಿಗಳನ್ನು ತಿಳಿಸಿದ ಮೇಲೆ, ದೋಷಪ್ರಭೇದ ಅನಂತವೆಂದೂ ಕವಿರಾಜ ಮಾರ್ಗದಲ್ಲಿ ಹೇಳಲಾಗಿದೆ (೧-೧೧೧). ವ್ಯಾಕರಣದೋಷಗಳಾಗಿ ಕಾರಕ (ವಿಭಕ್ತಿ), ವಚನ, ಗುರು, ಲಘು, ಉಚ್ಚಾರಣೆ, ಸಮುಚ್ಚಯ, ವಿಕಲ್ಪ, ಅವಧಾರಣೆ, ವಿಶಂಕೆಗಳ ದೋಷಗಳನ್ನು ತಿಳಿಸಲಾಗಿದೆ. ಇವು ಆಧುನಿಕ ಕಾವ್ಯದೋಷಗಳೂ ಆಗಿವೆ.

ಕನ್ನಡದಲ್ಲಿ ಕಾವ್ಯದೋಷಗಳನ್ನು ನಿರೂಪಿಸುವ ಇನ್ನೊಂದು ಪ್ರಮುಖ ಲಕ್ಷಣಗ್ರಂಥ ಎರಡನೆಯ ನಾಗವರ್ಮನ (೧೦೪೨) 'ಕಾವ್ಯಾವಲೋಕನ'. ಇದರಲ್ಲಿ 'ಕಾವ್ಯಮಲವ್ಯಾವೃತ್ತಿ' ಎಂಬ ಅಧಿಕರಣ (ಅಧ್ಯಾಯ) ಇದೆ. ವ್ಯಾವೃತ್ತಿ ಎಂದರೆ 'ಹೊರದೂಡುವುದು'. ಇದರಲ್ಲಿ ಹೇಳಿರುವ **ಪದದೋಷ ಸಂಧಿದೋಷಗಳಿವು** - ಅಸಮರ್ಥ, ಅಪ್ರತೀತ, ವಿಸಂಧಿ, ವಿರೂಪಸಂಧಿ, ವಿಪರೀತಕಲ್ಪನೆ, ನೀರಸ (ಗ್ರಾಮ್ಯ, ಅಸಭ್ಯ), ಕಷ್ಟ (ಶ್ರುತಿವಿರಸ) ವಿವರ - ಅರ್ಥವನ್ನು ತೆರೆದಂತೆ ತಿಳಿಸದುದು ಅಸಮರ್ಥ. ಅರ್ಥವೇ ಗೂಢವಾಗಿರುವುದು ಅಪ್ರತೀತ. ಉದಾ: 'ಅಸಿತರ್ಧಿವಯಸ್ಯಾಧ್ವದೊಳ್, ಅಸಿತರ್ಧಿ' ಎಂದರೆ ಅಗ್ನಿ ; ವಯಸ್ಯ ಅಂದರೆ ಸ್ನೇಹಿತ, ಅಧ್ವ ಎಂದರೆ ದಾರಿ. ಒಟ್ಟಿಗೆ ಅರ್ಥ : ಅಗ್ನಿಯ ಸಖನಾದ ವಾಯುವಿನ ದಾರಿ ಅಂದರೆ 'ಆಕಾಶ' ಎಂದಾಗುವುದು ಇಂತಹ ಮಾತಿಗೆ ಅರ್ಥತಿಳಿಯುವುದು ಅತಿ ಕಠಿನವಾದುದರಿಂದ 'ಅಪ್ರತೀತ' ಎನಿಸುವುದು.

ವಾಕ್ಯದೋಷ ವಾಕ್ಯಾರ್ಥದೋಷಗಳಿವು : ವ್ಯವಹಿತ (ವ್ಯತಿಕೀರ್ಣಪದಕ್ರಮ, ಅನ್ವಯವಿಲ್ಲದಿರುವುದು), ಏಕಾರ್ಥ (ಪುನರುಕ್ತಿದೋಷ ಇದು ಕೋಪ, ವಿಷಾದ, ಭಯ, ವಿಸ್ಮಯುಗಳಲ್ಲಿ ನಿರ್ದೋಷ. ಹಾಗೆಯೇ ಕರಿಕಳಭ, ಶಿರಶ್ಶೇಖರ, ಎಂದಾಗ ಪುನರುಕ್ತದೋಷವಾಗದು), ವ್ಯರ್ಥ (ಪೂರ್ವಾಪರ ವಿರುದ್ಧ), ಅನರ್ಥಕ, ಅಕ್ರಮ, ಕಾಲವಿರುದ್ಧ, ಸ್ವಭಾವವಿರುದ್ಧ (ಈ ಮೂರು ಕವಿಕೌಶಲದಿಂದ ಗುಣಗಳೆನಿಸುತ್ತವೆ. ಪದ್ಯ ೪೭೫), ಶಾಸ್ತ್ರ ವಿರುದ್ಧ (ಅಂದರೆ ನ್ಯಾಯ, ಆಗಮ, ರಾಜನೀತಿ, ವೇದ, ಕಲೆ, ಕಾಮ ತಂತ್ರ ವಿಷಯಗಳಿಗೆ ವಿರುದ್ಧ, ಆದರೂ ಉಕ್ತಿಕ್ರಮದಿಂದ ದೋಷರಹಿತವಾಗುವುದು.), ಯತಿಭಂಗ, ಭಿನ್ನವೃತ್ತ (ಲಘು, ಗುರು, ಗಣದೋಷ) ಅನರ್ಥಕ (ಅನವಶ್ಯವಾಗಿ ಮಿಗೆ, ದಲ್, ವಲಂ ಮುಂತಾದ ಅವ್ಯಯಗಳ ಅತಿರೇಕದ ಬಳಕೆ. ಆದರೆ ಇವನ್ನು ವಾಕ್ಯಕ್ಕೆ ಅಲಂಕಾರ ಬರುವಲ್ಲಿ ಪ್ರಯೋಗಿಸಬಹುದು.)

ಹಿಂದಿನ ಕನ್ನಡ ಕವಿಗಳು ಸಂಸ್ಕೃತವನ್ನು (ಶಾಸ್ತ್ರ, ಕಾವ್ಯ, ಎರಡನ್ನೂ) ಚೆನ್ನಾಗಿ ಅಭ್ಯಾಸಮಾಡಿದವರಾಗಿದ್ದರು. ಸಂಸ್ಕೃತ ಲಾಕ್ಷಣಿಕರ ವಿವೇಕಪ್ರಭಾವಕ್ಕೆ ಒಳಗಾಗಿ ಸಂಸ್ಕೃತ ಕಾವ್ಯಗಳ ನೆಲೆ ಬೆಲೆಗಳನ್ನರಿತು ದೋಷರಹಿತವಾಗಿ ಕನ್ನಡದಲ್ಲಿ ಕಾವ್ಯರಚನೆಮಾಡುತ್ತಿದ್ದರು. ಮುಖ್ಯವಾಗಿ ಕನ್ನಡ ಚಂಪೂಕಾವ್ಯಗಳು ಈ ಹೇಳಿಕೆಗೆ ಸಾಕ್ಷಿಗಳಾಗಿವೆ. ಪ್ರಾಚೀನ ಲಾಕ್ಷಣಿಕರಿಂದ ಉಕ್ತವಾದ ಕಾವ್ಯಗುಣಗಳು ಕಾವ್ಯಸೌಂದರ್ಯ ರೀತಿ, ರಸ ಪ್ರತಿಪಾದನೆಗಳು ಇಂಥವು ಅನುಸರಣೀಯವೇ ಆಗಿವೆ. ಕಾವ್ಯದೋಷಗಳು, ಯಾವುವೆಂದರಿತು, ಅವು ತಮ್ಮ ರಚನೆಗಳಲ್ಲಿ ಎಡೆಹಾಯದಂತೆ ಕೃತಿರಚನೆಮಾಡಬೇಕಾದುದು ಆಧುನಿಕ ಕವಿಧರ್ಮವೇ ಆಗಿದೆ. ಆದರೆ ಇಂದಿನ ಕವಿಗಳಲ್ಲಿ ಶಾಸ್ತ್ರಕ್ಕೆ ನಿರಾಕರಣೆಯಿರುವುದರಿಂದ ದೋಷಸಮೃದ್ಧಿಯೇ ಕಾವ್ಯಸಂಪದವಾಗಿದೆ ! ಎಂದರೆ ಹೆಚ್ಚಲ್ಲ. ಇದು ಪರಿಹಾರವಾಗಬೇಕಾದುದು. ಈ ದೃಷ್ಟಿಯಿಂದ ಆಧುನಿಕ ಕವಿಗಳ ಹಾಗೂ ಕಾವ್ಯವಿಮರ್ಶಕರ ಕಣ್ದೆರೆಯಿಸುವ ಕಾರ್ಯವಾಗಬೇಕಾಗಿದೆ.

ಕನ್ನಡದ ಪ್ರಾಚೀನ ಕವಿಗಳು ಗಾತ್ರ ಪಾತ್ರಗಳೆರಡನ್ನೂ ಲಕ್ಷ್ಯದಲ್ಲಿಟ್ಟು ಕಾವ್ಯ ಮಹಾಕಾವ್ಯಗಳನ್ನು ರಚಿಸಿರುತ್ತಾರೆ. ತುಂಡುಗವಿತೆಗಳನ್ನು - ಸಾಂಪ್ರತ ಪ್ರಚಲಿತವಿರುವ ಭಾವಗೀತಗಳನ್ನು ಕಾವ್ಯವನ್ನುತ್ತಿದ್ದ ಉದಾಹರಣೆಯಿಲ್ಲ. 'ವಾಕ್ಯಂ ರಸಾತ್ಮಕಂ ಕಾವ್ಯಂ'. ಎಂಬಲ್ಲಿ ರಸಾತ್ಮಕವಾಗಿ ಒಂದೇ ಒಂದು ವಾಕ್ಯ ಬರೆದರೆ ಸಾಕು, ಅದೇ ಕಾವ್ಯ ಎಂದರ್ಥವಲ್ಲ. ಅಂತಹ ವಾಕ್ಯಗಳ ಸಮುದಾಯವುಳ್ಳ ರಚನೆ ಕಾವ್ಯವೆನಿಸುವುದೆಂದು ತಾತ್ಪರ್ಯ. ಆಧುನಿಕ ಕಾಲದಲ್ಲಿ ಎರಡೇ ಸಾಲಿನ ಚುಟಕದ ಕವನಗಳನ್ನು ಒಂದೊಂದು ಕಾವ್ಯವೆನ್ನಲಾಗುತ್ತಿದೆ. ಹೀಗೆ ಹೇಳುವುದು. ತಿಳಿಯುವುದು ಕೂಡ ಒಂದು ದೋಷವೇ ಸರಿ.

ಕವನಗಳನ್ನೂ ಒಳಗೊಂಡಂತೆ ಆಧುನಿಕ ಕಾವ್ಯಗಳನ್ನು ಅನುಲಕ್ಷಿಸಿ, ಕಾವ್ಯದೋಷಗಳನ್ನು ಬಾಹ್ಯ ಮತ್ತು ಆಂತರಿಕ ಎಂದು ವರ್ಗೀಕರಿಸಬಹುದು. ಬಾಹ್ಯದೋಷಗಳಲ್ಲಿ ಮುಖ್ಯವಾದುದು ಎರಡು - ಪ್ರಕಟನೆಗೆ ಮೊದಲು ಪರಿಣತರಿಂದ ತಿದ್ದಿಸದಿರುವುದು ಮತ್ತು ಮುದ್ರಣದೋಷಗಳು. ಪ್ರಾಚೀನಕವಿಗಳು ಕಾವ್ಯ ರಚಿಸಿದರೆ, ಜನತೆಯ ಮುಂದಿಡುವ ಮೊದಲು ಜಾಣರಿಂದ ತಿದ್ದಿಸುತ್ತಿದ್ದರೆಂಬುದನ್ನು ಇದೇ ಲೇಖನದಲ್ಲಿ ತಿಳಿಸಿ ಆಗಿದೆ. ಆದರೆ ಆಧುನಿಕರಿಗೆ ಸಾಮಾನ್ಯವಾಗಿ

ಪದಗಳ ವಿಶ್ಲೇಷಣೆ ಪದ್ಯಗಳಲ್ಲಿ ಅತಿಮುಖ್ಯ. ಪದ ಎಂದರೆ, ಪ್ರಕೃತಿ ಪ್ರತ್ಯಯಗಳೆರಡೂ ಸೇರಿಕೊಂಡ ರೂಪ. ಅದನ್ನೆಂದಿಗೂ ಬಿಡಿಸಿ ಇಡಬಾರದು. ರಾಮನಿಂದ, ಮನೆಯನ್ನು - ಎಂಬಿವನ್ನು ರಾಮನ ಇಂದ, ಮನೆ ಅನ್ನು - ಎಂಬ ರೂಪದಲ್ಲಿ ಕಾಣಿಸಬಾರದು. ಪೇಳ್ದಂ ಎಂಬುದನ್ನು ಪೇಳ್ ದಂ ಎಂದು ವಿಂಗಡಿಸಿ ಇಡಬಾರದು. ಸಮಾಸಪದವನ್ನೂ ಒಂದೇ ಪದವಾಗಿ ಗಣಿಸಬೇಕು. ದೀರ್ಘಸಮಾಸಪದವನ್ನು ಮಾತ್ರ ಅರ್ಥಕ್ಕೆ ಬಾಧೆ ಬಾರದಂತೆ ಅಲ್ಲಲ್ಲಿ ಒಂದಕ್ಷರದ ಎಡೆಬಿಟ್ಟು ಕಾಣಿಸುವ ಪದ್ಧತಿ ಕನ್ನಡದ ಜಾಯಮಾನಗಳಲ್ಲಿ ಒಂದು. ಉದಾ: ಶ್ರೀಮನ್ನಾಗೇಂದ್ರಭೋಗ ಸ್ಫುರದರುಣಮಣಿದ್ಯೋತಿ ಸಂಧ್ಯಾನಿಬದ್ಧಪ್ರೇಮಂ - ಎಂಬ ಸಮಾಸಪದವನ್ನು ಶ್ರೀ ಮನ್ನಾಗೇಂದ್ರಭೋಗ ಸ್ಫುರದರುಣ ಮಣಿ ದ್ಯೋತಿಸಂಧ್ಯಾ ನಿಬದ್ಧ ಪ್ರೇಮಂ ಎಂದು ಎಡೆಕೊಟ್ಟು ಕಾಣಿಸುವುದು 'ಸಂಧಿರೇಕಪದೇ ನಿತ್ಯಾ ನಿತ್ಯಾ ಧಾತೂಪಸರ್ಗಯೋಃ' ದೋಷವಲ್ಲ. ಇದಕ್ಕೆ ಸಮರ್ಥತೆಯೂ ಇದೆ. ನಿತ್ಯಾ ಸಮಾಸೇ ವಾಕ್ಯೇ ತು ಸಾ ವಿವಕ್ಷಾಮಪೇಕ್ಷತೇ. ದೀರ್ಘಸಮಾಸವನ್ನು ವಾಕ್ಯವಾಗಿ ವಿಕಲ್ಪವೆಂದು ತಿಳಿಯಬಹುದು.

ಇತರರ ತಿದ್ದುಪಡಿ ಬೇಕಾಗಿಲ್ಲ. ಸ್ವತಃ ನಿಷ್ಕಲ್ಮಷರು, ಪರಿಣತರು, ಪ್ರಮಾದಾತೀತರು, ತಾವು ಬರೆದುದೆಲ್ಲ ಸರಿ, ಪರಿಷ್ಕೃತ ಮತ್ತು ಉತ್ಕೃಷ್ಟ ಎಂಬ ಹಮ್ಮು. ತಮ್ಮ ರಚನೆಗೆ ಒಂದೆರಡು ಕಡೆಯಿಂದ ಹೊಗಳಿಕೆ ಬಂದರೆ, ಹೊಗಳಿಕೆಯ ಪರಿಣಾಮವಾಗಿ ಬಹುಮಾನ ಬಂದರೆ, ಹಿರಿಮೆಯ ಗರಿಮೆಯ ರಾಶಿಗೆ ವಾರಾಶಿಯೇ ಕಿರಿದಾಗುವುದು! ಕೆಲವರು ಕವಿಗಳು ತಿದ್ದಿಸಿಕೊಂಡಿದ್ದರೂ ಅದನ್ನು ಹೇಳಿಕೊಳ್ಳುವುದು ಅವರಿಗೆ ಅಗೌರವ!

ಬಾಹ್ಯದೋಷಗಳಲ್ಲಿ ಎರಡನೆಯದು ಮುದ್ರಣದೋಷ. ಇದಕ್ಕೆ ಕಾರಣ - ಮುದ್ರಣಕ್ಕಾಗಿ ಶುದ್ಧ ಪ್ರತಿಯನ್ನು ಒದಗಿಸದಿರುವುದು. ಕರಡನ್ನು ಪರಿಣತರಿಂದ ತಿದ್ದಿಸದಿರುವುದು. ತಿದ್ದುವಿಕೆಯಲ್ಲಿ ಪದಗಳ ವಿಶ್ಲೇಷಣೆ ಅಲಕ್ಷಿತವಾಗಿರುವುದು.

ಆಂತರಿಕ ದೋಷಗಳು

ಕಾವ್ಯಸೌಂದರ್ಯವಿರುವುದು ಪ್ರಧಾನವಾಗಿ ಅದರ ಆಂತರಿಕಶೋಭೆಯಲ್ಲಿ. ಆಧುನಿಕ ಕನ್ನಡ ಕಾವ್ಯಗಳಲ್ಲಿ ಆಂತರಿಕಶೋಭೆಗೆ ಬಾಧಕವಾಗುವ ಕಾವ್ಯ ದೋಷಗಳನ್ನು ಈಗ ನೋಡೋಣ. ಹತ್ತು ಬಗೆಯ ಕಾವ್ಯದೋಷಗಳನ್ನಿಲ್ಲಿ ಕಾಣಿಸಿರುತ್ತೇನೆ -

೧. ಛಂದೋಲ್ಲಂಘನೆ

೨. ಪ್ರಾಸ ಪಾದನಿಯಮತ್ಯಾಗ

೩. ಸಂಧಿದೋಷ

೪. ದ್ವಿತ್ವದೋಷ

೫. ಶಬ್ದದೋಷ (ಅಶುದ್ಧ ಶಬ್ದಗಳ ಬಳಕೆ)

೬. ಅನ್ವಯದೋಷ

೭. ಪದದೋಷ (ವಿಭಕ್ತಿ, ಲಿಂಗ, ವಚನ, ಸರ್ವನಾಮದೋಷ)

೮. ಅರಿಸಮಾಸದೋಷ

೯. ಅನ್ಯದೇಶೀ ಮಿಶ್ರಣದೋಷ

೧೦. ನೇಯಾರ್ಥದೋಷ

ಈ ಆಧುನಿಕ ಕಾವ್ಯದೋಷಗಳು ಯಾವ ಯಾವ ಕವಿಗಳ ಯಾವ ಯಾವ ಕಾವ್ಯ ಕವನಗಳಲ್ಲಿ ಎಲ್ಲಿ ಕಾಣಿಸಿವೆ? ಎಂಬ ತೋರುಬೆರಲ ಪ್ರಯೋಗಕ್ಕೆ ಈ ಲೇಖನವನ್ನು ನಾನು ಬದ್ಧಗೊಳಿಸಲು ಇಚ್ಛಿಸುವುದಿಲ್ಲ. ಸಹೃದಯರು ಇವು ಎಲ್ಲಿಗೆ ಹೊದ್ದುಗಯಾಗುತ್ತವೆಂಬುದನ್ನು ಪರಿಶೀಲಿಸಿಕೊಳ್ಳಬಹುದಾಗಿದೆ. ಹಲವನ್ನು ಮಾತುಗಳಲ್ಲಿ ಹಾಗೂ ಗದ್ಯದಲ್ಲಿ ಕಾಣಬಹುದಾಗಿದೆ.

ಛಂದೋಲ್ಲಂಘನೆ : ಛಂದಸ್ಸು ಪದ್ಯರಚನೆಯ ಶಾಸ್ತ್ರವಾದರೂ ಅದರ ವ್ಯಾಪ್ತಿ ದೊಡ್ಡದು. ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ ಹೀಗೆಂದಿದ್ದಾನೆ -

ಛಂದಶ್ಶಾಸ್ತ್ರಂ ಬಹಿತ್ರಂ ತದ್ವಿದಿಕ್ಷೋಃ ಕಾವ್ಯಸಾಗರಂ
ಛಂದೋಭಾಗ್ ವಾಙ್ಮಯಂ ಸರ್ವಂ ನ ಕಿಂಚಿತ್ ಛಂದಸಾ ವಿನಾ

ಅಂದರೆ - ಕಾವ್ಯವೆಂಬ ಸಾಗರವನ್ನು ದಾಟಲು ಪ್ರವೇಶಿಸುವವನಿಗೆ ಛಂದಸ್ಸೆಂಬುದು ಹಡಗು. ಎಲ್ಲ ವಾಙ್ಮಯವೂ ಛಂದಸ್ಸಿನಿಂದ ಕೂಡಿದೆ. ಛಂದಸ್ಸನ್ನು ಬಿಟ್ಟಿರುವುದು ಯಾವುದೂ ಇಲ್ಲ. ಹೀಗೆನ್ನುವಾಗ ನವ್ಯಕವನ ಮಾತ್ರವಲ್ಲ, ಗದ್ಯಸಹಿತ ಛಂದೋಬದ್ಧ ರಚನೆಯೇ ಆಗುತ್ತದೆ. ಆದರೆ, ಈ ಉಕ್ತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಛಂದಸ್ಸಿಗೆ ಮೂಲ - ಅಕ್ಷರಗಳ ಲಘು - ಗುರು. ಭಾಷೆಯ ಎಲ್ಲ ಅಕ್ಷರಗಳೂ ಲಘು ಗುರು ಬಿಟ್ಟರೆ ಬೇರೆ ಇಲ್ಲ. ಆದುದರಿಂದ ಜಯಕೀರ್ತಿ ಹಾಗೆಂದಿರುವುದೆಂದು ತಿಳಿಯಬೇಕು. ಛಂದಸ್ಸು ಪದ್ಯರಚನೆಯ ಶಾಸ್ತ್ರ ಎಂಬುದರಿಂದಲೇ ಅದರ ಉಪಯೋಗ. ನಮ್ಮ ಲಕ್ಷ್ಯ ಅದು. ನಾಗವರ್ಮನು ಛಂದೋಂಬುಧಿಯಲ್ಲಿ ಹೀಗೆಂದಿದ್ದಾನೆ.

ಛಂದಮನರಿಯದೆ ಕವಿತೆಯ
ದಂದುಗದೊಳ್ ತೊಳಲಿ ಸುಳಿವ ಕುಕವಿಯೆ ಕುರುಡಂ

(ಪೀಠಿಕೆ - ಪದ್ಯ ೧೭)

ಹೀಗಿರುವಾಗ ಛಂದಸ್ಸನ್ನು ಹೇಯವೆಂದು ತೊರೆದು ಸ್ವಚ್ಛಂದಸ್ಸಿಗೆ ಹೊಸ ಹೆಸರನ್ನು ಇಟ್ಟು ಕಾವ್ಯರಚನೆ ಮಾಡುವುದೆಂದರೆ, ಅದು ಛಂದಸ್ತ್ಯಾಗವೇ ಆಗುತ್ತದೆ-ಎಂದು ನನ್ನ ಅಭಿಪ್ರಾಯ. ಏಕೆಂದರೆ, ಅಂತಹ ರಚನೆಗಳಲ್ಲಿ ನಿಶ್ಚಿತ ಲಘುಗುರುವಿನ್ಯಾಸವಿರುವುದಿಲ್ಲ. ಪ್ರಾಸವಿರುವುದಿಲ್ಲ. ಪಾದನಿಯಮವೂ ಅಲಕ್ಷಿತ. ಪಾದಗಳು ಸರಿಯಾಗಿ ಗಣವಿಭಜನೆಗೆ ಅಳವಡುವುದಿಲ್ಲ. ಹೀಗಿದ್ದರೂ ಅಭಿಮಾನಕ್ಕೆ ಬದ್ಧರಾದವರು ಅಂಥವರನ್ನು ಪ್ರಶಂಸಾಪೂಜೆ ಮಾಡದಿರುವುದಿಲ್ಲ. ಇದು ಕನ್ನಡ ಕಾವ್ಯ ಕಲೆಗೆ ಕೇಡು ಎಂದರೆ ತಪ್ಪಲ್ಲ. ಆದುದರಿಂದ ಛಂದೋಲ್ಲಂಘನೆಯನ್ನು ಆಧುನಿಕ ಕಾವ್ಯದೋಷವನ್ನಾಗಿ ಗಣಿಸಬಹುದು.

ಪ್ರಾಸ ಪಾದನಿಯಮತ್ಯಾಗ : ಇದು ಛಂದಸ್ಸಿಗೆ ಒಳಪಟ್ಟುದಾದರೂ ಪ್ರಾಸವು ಶಬ್ದಾಲಂಕಾರ ವಿಷಯವಾದುದರಿಂದ ಪ್ರತ್ಯೇಕ ವಿವರವಿಷಯವೆನಿಸಿದೆ. 'ಪ್ರಾಸ' ಎಂಬುದು ಪದ್ಯ ಪಾದಗಳಲ್ಲಿ ಬರಬೇಕಾದ ದ್ವಿತೀಯಾಕ್ಷರಪ್ರಾಸವೆಂದು ತಿಳಿಯಬೇಕು. ಕನ್ನಡದಲ್ಲಿ ಕವಿತಾರಚನೆಯ ವೈಶಿಷ್ಟವೇನು? ಎಂಬ ಪ್ರಶ್ನೆಗೆ ಮುಖ್ಯೋತ್ತರವಾಗಿ ಕನ್ನಡದಲ್ಲಿ ದ್ವಿತೀಯಾಕ್ಷರ ಪ್ರಾಸವಿದೆ ಎಂದು ಅಭಿಮಾನದಿಂದ ಹೇಳಿಕೊಳ್ಳುವ ಕಾಲ ಇತ್ತು. ಇಂದು ಇಲ್ಲ. ದ್ವಿತೀಯಾಕ್ಷರ ಪ್ರಾಸವನ್ನು ಕನ್ನಡದಲ್ಲಿ ಎಂದೆಂದೂ ಇರತಕ್ಕ ವೈಶಿಷ್ಟ್ಯವೆಂದು ಕವಿರಾಜಮಾರ್ಗ ಸಾರಿ ಹೇಳಿದೆ -

ನುತಶಬ್ದಾಲಂಕಾರದೊ
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ

ಕೃತಕೃತ್ಯಮಪ್ಪುದೆಲ್ಲರ
ಮತದಿಂದದು ತಪ್ಪೆ ಕಾವ್ಯಮೇಂ ಶೋಭಿಪುದೇ (೨-೩೦)

ಕವಿಜಿಹ್ವಾಬಂಧನ ಎಂಬ ಛಂದೋಗ್ರಂಥದ ಸೂಕ್ತಿಯಿದು -

ಉಸಿರಳಿದ ತನುವವೋಲ್ ಭಾ
ವಿಸಲುಂ ಪ್ರಾಸಿಲ್ಲದಿರ್ಪ ಪದ ಪದ್ಯಂಗಳ್
ಒಸೆದದನು ಪೇಳೆ ಕೇಳಿದ
ರಸಿಕರ್ಗಾಯುಷ್ಯ ಮಾನ ಹಾನಿಗಳಕ್ಕುಂ

ಸರ್ವಜ್ಞಕವಿಯ ವಚನರತ್ನವಿದು - **ಪ್ರಾಸಿಲ್ಲದಕ್ಕರವ । ತಾಸು ಹಾಡಿದರೇನು**
ಸಾಸವೆ ಸುಣ್ಣ ಹದಮಾಡಿ-ಕಣ್ಣಿಂಗೆ
ಪೂಸಿಕೊಂಡಂತೆ - ಸರ್ವಜ್ಞ

ಕನ್ನಡದಲ್ಲಿ ಕವಿತೆಗೆ ವೈಶಿಷ್ಟಪೂರ್ಣವಾದ ಕಳೆಯನ್ನು ತಂದಿರುವ, ತರಬಲ್ಲ, ಪ್ರಾಸವನ್ನು ಕೊಳೆಯಾಗಿ ಕಾಣುವುದು ವಿವೇಕವೆ? ಪ್ರಾಸವನ್ನು ತೊರೆದ ಕವಿಗಳು ಸಾಧಿಸಿದ ಮಹತ್ವವೇನು? ದೇವರೇ ಬಲ್ಲ! ಆದರೆ ಅಂಥವರು ಇಂದಿನವರ ಪ್ರಶಂಸೆಗೆ ಪಾತ್ರರಾಗಿದ್ದಾರೆಂದರೆ ಕಾವ್ಯದೋಷವನ್ನೇ ಗುಣವೆಂದ ಹಾಗಾಯಿತಲ್ಲವೆ? ಹೀಗಾಗಲು ಕಾರಣವೆಂದರೆ, ಅಧುನಿಕ ಕವಿಗಳು ವರಿಸಿಕೊಂಡಿರುವ ಪಾಶ್ಚಾತ್ಯ ಕವಿಮಾರ್ಗದ ಅಂಧಪ್ರೇಮವೇ ಸರಿ. ನನ್ನ 'ಸತ್ಯಾಲೋಕನಂ' ಎಂಬ ಚಂಪೂಕಾವ್ಯಕ್ಕೆ ಡಾ.ಕೆ. ಕೃಷ್ಣಮೂರ್ತಿಯವರು ೧೯೫೯ ರಲ್ಲಿ ಬರೆದ ಅಭಿಪ್ರಾಯಕವಿತೆಯಲ್ಲಿರುವ ಒಂದು ಕಂದಪದ್ಯ ಪ್ರಸ್ತುತವಾಗಿದೆ -

ರುಚಿಚಕ್ರದ ಪರಿವರ್ತಂ
ಪ್ರಚಲಿತ ಪಾಶ್ಚಾತ್ಯಮಾರ್ಗದಂಧಪ್ರೇಮಂ
ಸುಚರಿತ ಕವಿಪದ್ಧತಿಯಂ
ವಿಚಲಿತಗೊಳಿಸಲ್ಕೆ ಸಾಲ್ದುದೆಂತೀ ಧರೆಯೊಳ್?

ಕಾಲದ ಗಾಲಿಯ ಸುತ್ತಿನಂತೆ ಬಂದಿರುವ ಪಾಶ್ಚಾತ್ಯ ಕಾವ್ಯಮಾರ್ಗದ ಕುರುಡೊಲವು ತೊಲಗುವ ಕಾಲ ಬಂದಿದೆಯೆಂಬ ಸೂಚನೆ ಮೇಲಿನ ಉದಾಹೃತಪದ್ಯದಲ್ಲಿದೆ. ಪ್ರಾಸದಂತೆಯೇ ಪಾದನಿಯಮವನ್ನು ತೊರೆದಿರುವುದೂ ಆಧುನಿಕ ಕಾವ್ಯದೋಷವೆನಿಸುತ್ತದೆ.

ಸಂಧಿದೋಷ : ಕನ್ನಡ ಕಾವ್ಯರಚನೆಗೆ ತೊಡಗುವವರಿಗೆ ಕನ್ನಡ ಸಂಸ್ಕೃತ ಎಂಬ ಎರಡೂ ಭಾಷೆಗಳ ಸಂಧಿನಿಯಮಗಳ ಪರಿಜ್ಞಾನ ಅನಿವಾರ್ಯ. ಅಂತಹ ನಿಯಮಗಳನ್ನು ಮೀರಿದುದರಿಂದ ಕಂಡುಬರುವ ಅಸಾಧು ಪ್ರಯೋಗಗಳಲ್ಲಿ ಕೆಲವಿವು - (ಕಂಸದೊಳಗೆ ಶುದ್ಧರೂಪವಿದೆ)

ಜಾತ್ಯಾತೀತ (ಜಾತ್ಯತೀತ), ಕೋಟ್ಯಾಂತರ (ಕೋಟ್ಯಂತರ) ಮನರಂಜನೆ (ಮನೋರಂಜನೆ) ಮನೋಸಾಕ್ಷಿ (ಮನಸ್ಸಾಕ್ಷಿ), ಹೇಳಲೆತ್ನಿಸು (ಹೇಳಲು ಯತ್ನಿಸು), ಕೈನಲ್ಲಿ (ಕೈಯಲ್ಲಿ), ದುಃಖನೇ ಇಲ್ಲ (ದುಃಖವೇ ಇಲ್ಲ), ಒಗ್ಗಟ್ಟು (ಒಕ್ಕಟ್ಟು)....ಇತ್ಯಾದಿ.

ಸಂಧಿದೋಷದಲ್ಲಿ ವಿಸಂಧಿದೋಷವೂ ಒಂದು. ಪದ್ಯದಲ್ಲಿ ಮೊದಲ ಅಕ್ಷರವಾಗಿ ಸ್ವರವಿರಬಹುದು. ಪದ್ಯಾರ್ಧದ ಪ್ರಾರಂಭದಲ್ಲಿಯೂ ಇರಬಹುದು. ಹಾಗೆಯೇ ನಿಪಾತ, ಅವಧಾರಣೆ, ವಿಶಂಕೆ, ಪ್ಲುತ, ಮೆಚ್ಚಿಕೆಯ ಮತ್ತು ಆಕ್ಷೇಪದ ಸೂಚಕವಾದ ಓಕಾರ, ಅಂಗೀಕಾರಾರ್ಥದ 'ಎಮ' (ಸಿಂಹ ಮಕ್ಕೆಮ ಅಂಜೆಂ), ವಾಕ್ಯವೇಷ್ಟನ ಇರುವಲ್ಲಿ ವಿಸಂಧಿ ನಿರ್ದೋಷ. ಉಳಿದೆಡೆಗಳಲ್ಲಿ ಸ್ವರಾಕ್ಷರ (ವ್ಯಂಜನ ಸೇರದುದು) ಇದ್ದರೆ, ವಿಸಂಧಿ ದೋಷವೆನಿಸುತ್ತದೆ. ಇದು ಕಾವ್ಯದೋಷ, ಆಧುನಿಕ ಕಾವ್ಯಗಳಲ್ಲಿ ಕವಿತೆಗಳಲ್ಲಿ ವಿಸಂಧಿದೋಷವನ್ನು ಕಡೆಗಣಿಸಲಾಗಿದೆ. ಒಂದು ಉದಾಹರಣೆ - ಇದು ಡಾ.ಕೆ. ಎಸ್. ನರಸಿಂಹಸ್ವಾಮಿಯವರ ಕವನ ಬೆಳಗಿನ ದಿನ (ಉದಯವಾಣಿ ३-೧-೧೯೯३) ಪ್ರಕಟಿತ, ಏಳು ನುಡಿಗಳಲ್ಲಿ ಐದನೆಯದು -

ಬೆಳಗಾಯಿತು ಹಗಲೇರಿತು ಆಗಸದಲಿ ಉರಿದು
ಹೊಸ ಹೆಜ್ಜೆಯನಿಡಲೆದ್ದಿತು ಸಂತಸದಲಿ ಸುರಿದು

ಇದರ ಮೊದಲ ಪಾದದಲ್ಲಿ ಎರಡು ಕಡೆ ವಿಸಂಧಿಯಿದೆ. ಆಧುನಿಕ ಭಾವಗೀತಗಳಲ್ಲಿ, ಚಿತ್ರಗೀತಗಳಲ್ಲಿ, ಬಾಲಕರ ಗೀತಗಳಲ್ಲಿ ಮಾತ್ರವಲ್ಲದೆ ಆಧುನಿಕ ಮಹಾಕಾವ್ಯಗಳಲ್ಲಿಯೂ ಇಂತಹ ವಿಸಂಧಿದೋಷಗಳು ಎಷ್ಟೂ ಇರುವುದರಿಂದ, ಇದು ಕಾವ್ಯದೋಷವೆಂಬ ಕಲ್ಪವೆಯೇ ಜನಮನದಿಂದ ಅಳಿಸಿಹೋಗುವ ಪರಿಸ್ಥಿತಿಯೊದಗಿದೆ!

ದ್ವಿತ್ವದೋಷ : ದ್ವಿತ್ವ ಎಂದರೆ, ಒತ್ತಿನಿಂದ ಕೂಡಿದ ಅಕ್ಷರ, ಅದನ್ನು ಒತ್ತಿ ಉಚ್ಚರಿಸಬೇಕು. ಕನ್ನಡದಲ್ಲಿ ಅದು ಮೂರು ವಿಧ: ಸಜಾತೀಯ ದ್ವಿತ್ವ, ವಿಜಾತೀಯದ್ವಿತ್ವ ಮತ್ತು ಶಿಥಿಲದ್ವಿತ್ವ. ಒಂದು ವ್ಯಂಜನಕ್ಕೆ ಅದೇ ವ್ಯಂಜನ ಒತ್ತಾಗಿದ್ದರೆ ಅದು ಸಜಾತೀಯದ್ವಿತ್ವ, ಬೇರೊಂದು ವ್ಯಂಜನವಾಗಿದ್ದರೆ ಅದು ವಿಜಾತೀಯ ದ್ವಿತ್ವ. ಒತ್ತಿದ್ದರೂ ಒತ್ತದೆ ಉಚ್ಚಾರಣೆಯುಳ್ಳುದು ಶಿಥಿಲದ್ವಿತ್ವ. ದ್ವಿತ್ವಾಕ್ಷರದ ಹಿಂದಿನ ಹ್ರಸ್ವವು (ಶಿಥಿಲದ್ವಿತ್ವ ಹೊರತು) ಗುರುವೆನಿಸುವುದು. ಆಗ ಅದಕ್ಕೆ ಮಾತ್ರೆಗಳು ಎರಡು. ಪದ್ಯರಚನೆಮಾಡುವವರು ದ್ವಿತ್ವ ಶಿಥಿಲದ್ವಿತ್ವಗಳ ಮರ್ಮವನ್ನು ಅರಿತಿರಬೇಕು. ಇಲ್ಲವಾದರೆ ದ್ವಿತ್ವದೋಷವುಂಟಾಗುವುದು. ಇನ್ನೊಂದು ಬಗೆಯ ದ್ವಿತ್ವದೋಷವಿದಂ - ಪದ್ಯದಲ್ಲಿ ಎರಡು ಪದಗಳು ಹತ್ತಿರ ಬಂದಾಗ ಪರಪದದ ಪೂರ್ವಾಕ್ಷರ ದ್ವಿತ್ವವಾಗಿ ಪೂರ್ವಪದದ ಅಂತ್ಯಾಕ್ಷರ ಹ್ರಸ್ವವಾಗುವುದು. ಇದನ್ನು ಸಂಧಿದೋಷವೆಂದು ಹೇಳಲಾಗಿದೆ. (ಶ.ದ..ಸಂಧಿಪ್ರಕರಣ, ಸೂತ್ರ ೬೯) ದ್ವಿತ್ವಾಕ್ಷರವನ್ನು ಶಿಥಿಲದ್ವಿತ್ವವಾಗಿ ಉಚ್ಚರಿಸುವುದು ತಪ್ಪು. ಕುಮಾರವ್ಯಾಸನ ರಚನೆಯಲ್ಲಿ, ದಾಸರ ಪದಗಳಲ್ಲಿ ಒಮ್ಮೊಮ್ಮೆ ಕಾಣಿಸಿಕೊಳ್ಳುವ ಈ ದ್ವಿತ್ವದೋಷ ಆಧುನಿಕ ರವಿರಚನೆಗಳಲ್ಲೆಲ್ಲ ಸಮೃದ್ಧವಾಗಿಯೇ ಕಂಡುಬರುತ್ತದೆ. ಕುಮಾರವ್ಯಾಸನ ಉದಾಹರಣೆ :

ಚೋರ ನಿಂದಿಸಿ ಶಶಿಯ ಬೈದಡೆ
ಕ್ಷೀರವನು ಕ್ಷಯರೋಗಿ ಹಳಿದಡೆ
ವಾರಣಾಸಿಯ ಹೆಳವ ನಿಂದಿಸಿ ನಕ್ಕಡೇನಹುದು (೧-೨೨)

ಈ ಪದ್ಯದಲ್ಲಿ ಕ್ಷೀ ಮತ್ತು ಕ್ಷ ಎಂಬವು ದ್ವಿತ್ವಗಳು. ಆದರೆ, ದ್ವಿತ್ವವಾಗಿ ಉಚ್ಚರಿಸಿದರೆ ಹಿಂದಿನ ಅಕ್ಷರ ಗುರುವಾಗುವುದರಿಂದ ಛಂದಸ್ಸು ಕೆಡುವುದು. ಶಿಥಿಲವಾಗಿ ಉಚ್ಚರಿಸುವುದು ಉಚ್ಚಾರಣದೋಷವಾಗುವುದು. ಆಧುನಿಕ ಕವಿಗಳ ರಚನೆಗಳಲ್ಲಿ ಇಂತಹ ದ್ವಿತ್ವದೋಷ ಅಸಂಖ್ಯವಾಗಿರುತ್ತದೆ. ಹಿಂದೆ ಉದಾಹರಿಸಿದ ಡಾ. ಕೆ. ಎಸ್. ನರಸಿಂಹ ಸ್ವಾಮಿಯವರ ಕವನದ ಇನ್ನೊಂದು ನುಡಿ ನೋಡಿ

ಬೆಳಗಿನ ದನಿ ಬೆಳಗಿನ ಹನಿ ತೆಳುಗರಿಕೆಯ ಮೇಲೆ
ಬಾನ್ನೆಲಗಳ ಚುಂಬನದಲಿ ಸೌಂದರ್ಯದ ಜ್ವಾಲೆ

ಮಾತ್ರೆಯ ಗಣಗಳಿಂದ ಕೂಡಿದ ಪಾದಗಳ ಕೊನೆಯದು ಮೂರು ಮಾತ್ರೆಯದು. ಎರಡನೆಯ ಪಾದದಲ್ಲಿ ಜ್ವಾ ಎಂಬ ದ್ವಿತ್ವವನ್ನು ಉಚ್ಚರಿಸಿದಾಗ ಅದರ ಹಿಂದಿನ ಹ್ರಸ್ವವು ಗುರುವಾಗುತ್ತದೆ. ಆಗ ಆ ಹಿಂದಿನದು ಏಳು ಮಾತ್ರೆಗಳ ಗಣವಾಗುವುದು ಛಂದೋದೋಷ. ಜ್ವಾ ವನ್ನು ಶಿಥಿಲವಾಗಿ ಉಚ್ಚಾರಣೆ ಮಾಡುವುದು ವ್ಯಾಕರಣದೋಷ. ದ್ವಿತ್ವ ದೋಷದ ಕೆಡುಕು ಸಾಮಾನ್ಯವೇ? ಆದರೆ ಆಧುನಿಕರು ಇವನ್ನೆಲ್ಲಾ ಲಕ್ಷಿಸುವರೆ? ಇಂತಹ ದೋಷಗಳಿಲ್ಲದ ಆಧುನಿಕ ರಚನೆಗಳು ವಿರಳವೇ ಸರಿ.

ಶಬ್ದದೋಷಗಳು : ಕನ್ನಡ ಕಾವ್ಯಗಳಲ್ಲಿ ಅಚ್ಚಗನ್ನಡ, ಸಂಸ್ಕೃತ (ಸಮಸಂಸ್ಕೃತ), ತದ್ಭವ ಶಬ್ದಗಳ ಪ್ರಯೋಗವಿರುತ್ತದೆ. ಅನ್ಯದೇಶೀಶಬ್ದಗಳೂ ಈಗೀಗ ನುಸುಳಿಬರುತ್ತಿವೆ. ಆಧುನಿಕರು ಅನೇಕರು ಅವನ್ನು ತಪ್ಪಾಗಿ ಬಳಸುತ್ತಿದ್ದಾರೆ. ಕೆಲವು ಉದಾಹರಣೆಗಳು - (ಆವರಣದಲ್ಲಿ ಶುದ್ಧರೂಪವಾಗಿದೆ)

ದುಂಬಿ (ತುಂಬಿ), ಮೊರೆಹೋಗು (ಮರೆಹೊಗು), ಮುಂದುವರೆ (ಮುಂದುವರಿ, ಮುಂಬರಿ), ಆಳ್ವಿಕೆ (ಆಳುವಿಕೆ, ಆಳಿಕೆ), ನೆಲೆಸು (ನೆಲಸು) ನಂತರ (ಅನಂತರ), ಗಾಯಿತ್ರಿ (ಗಾಯತ್ರಿ). ಭುವಿ (ಬುವಿ, ಭೂಮಿ) ಲೆಖ್ಖ (ಲೆಕ್ಕ), ಇಂತಹ ಉದಾಹರಣೆಗಳು ಎಷ್ಟೊ ಇವೆ. ಕಾವ್ಯರಚನೆಯಲ್ಲಿ ಶಬ್ದ ಶುದ್ಧಿ ಅತಿಮುಖ್ಯ.

ಅನ್ವಯದೋಷ : ಯಾವುದೇ ಪದ್ಯರಚನೆ ಮಾತಿನ ಗೇಯಾತ್ಮಕ ಕಲಾತ್ಮಕ ಅಭಿವ್ಯಕ್ತಿಯಾದುದರಿಂದ ಅನ್ವಯದೋಷವಿಲ್ಲದಿರಬೇಕು. 'ಅನ್ವಯ' ಎಂದರೆ, ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯೆ, ಲಿಂಗ, ವಚನ, ವಿಭಕ್ತಿ, ವಿಶೇಷಣ, ಸರ್ವನಾಮ ಮುಂತಾದ ವಾಕ್ಯಾಂಶಗಳು ಸರಿಯಾದ ಸ್ಥಾನದಲ್ಲಿರುವಿಕೆ. ಪದ್ಯದಲ್ಲಿ ಅವುಗಳಿಗೆ ಸ್ಥಾನಪಲ್ಲಟವಿರುತ್ತದೆ. ಅರ್ಥಬೋಧೆ ಅವನ್ನು ಅನ್ವಯಮಾಡಲು ಸಾಧ್ಯವಿರಬೇಕು. ಆಧುನಿಕ ಕಾವ್ಯಗಳಲ್ಲಿ ಹಲವೆಡೆ ಪದ್ಯಗಳಿಗೆ ಅನ್ವಯವಿರುವುದಿಲ್ಲ. ಹಲವು ಅಧ್ಯಾಹಾರಗಳನ್ನು ಮಾಡಿಕೊಂಡು ಅರ್ಥವನ್ನು ಊಹೆಯಿಂದ ಹೊರಗೆಡಹಬೇಕಾಗುತ್ತದೆ. ಇದನ್ನು ಅನ್ವಯದೋಷವೆಂದು ಹೇಳಬಹುದು.

ಪದದೋಷ : ಪದದೋಷದಲ್ಲಿ ವಿಭಕ್ತಿ, ಲಿಂಗ, ವಚನ, ಸರ್ವನಾಮ ಸಂಬಂಧದೋಷಗಳು ಅಂತರ್ಗತವಾಗುತ್ತವೆ. ಪ್ರಕೃತಿಗೆ ಪ್ರತ್ಯಯ ಸೇರಿ ಪದವಾಗುತ್ತದೆ. ಪರಸ್ಪರ ಸಂಬಂಧವುಳ್ಳ

ಪದಗಳು ಸೇರಿದಾಗ ವಾಕ್ಯವಾಗುತ್ತದೆ. ಅಂತಹ ಸಂಬಂಧವುಳ್ಳ ಪದಗಳು ಕೂಡ, ಕ್ಲಪ್ತ ಸ್ಥಾನದಲ್ಲಿರಬೇಕಾಗುತ್ತದೆ. ಇಲ್ಲಿ ಉದಾಹರಣೆಯಾಗಿ ಯಾವ ಆಧುನಿಕ ಕಾವ್ಯವನ್ನೂ ಉಲ್ಲೇಖಿಸದೆ, ವಾಕ್ಯಗಳನ್ನು ಕೊಡುತ್ತಿದ್ದೇನೆ. ಅವನ್ನು ಹೋಲುವ ಪದವಾಕ್ಯಗಳಿರುತ್ತವೆಯೆಂದು ತಿಳಿಯಬೇಕು.-

'ಸಚಿವಸಂಪುಟ ವಿಸ್ತರಿಸಿದ ಮುಖ್ಯಮಂತ್ರಿ' ಎಂದಾಗ, ಕರ್ತೃಪದ ಯಾವುದೆಂಬುದು ಅಸ್ಪಷ್ಟ. 'ಸಚಿವ ಸಂಪುಟವನ್ನು' ಎಂಬುದಾಗಿ ವಿಭಕ್ತಿ ಪ್ರತ್ಯಯ ಹಚ್ಚಿದರೆ ದೋಷ ಪರಿಹಾರವಾಗುವುದು. ಒಂದು ವಾಕ್ಯ ಹೀಗಿದೆ - 'ಕಾಮುಕನಾದ ವಿಭೀಷಣನ ಅಣ್ಣನಾದ ರಾವಣನನ್ನು ಸೀತೆ ಕಂಡಳು' ಇಲ್ಲಿ ವಿಶೇಷಣದ ಸ್ಥಾನ ತಪ್ಪಿದೆ. 'ರಾವಣನನ್ನು' ಎಂಬ ವಿಶೇಷ್ಯದ ಹಿಂದೆ ವಿಶೇಷಣವಿರಬೇಕು. 'ಜನ' ಹೇಳುತ್ತಾರೆ ಎಂದು ಪ್ರಯೋಗಿಸುವವರಿದ್ದಾರೆ. 'ಜನ' ಶಬ್ದ ಬಹುವಚನರೂಪವಲ್ಲ ; ಅದು ನಪುಂಸಕಲಿಂಗದ ಏಕವಚನವಾಗಿರುತ್ತದೆ. ಮನಸಲಿ, ಕನಸಲಿ - ಎಂಬ ಸಪ್ತಮೀವಿಭಕ್ತಿ ರೂಪವೂ ಸರಿಯಲ್ಲ. ಮನದಲಿ, ಮನದಲ್ಲಿ, ಮನಸ್ಸಿನಲ್ಲಿ, ಕನಸಿನಲ್ಲಿ - ಎಂಬವು ಶುದ್ಧರೂಪಗಳು. ಪದದೋಷವಿಲ್ಲದ ರಚನೆಯ ವಾಕ್ಯಗಳು ಆಧುನಿಕ ಕಾವ್ಯಗಳನ್ನು ಅಲಂಕರಿಸಬೇಕು.

ಅರಿಸಮಾಸದೋಷ : ಸಂಸ್ಕೃತವನ್ನೂ ಕನ್ನಡವನ್ನೂ ಬೆರಸಿ ಸಮಾಸಮಾಡಬಾರದು. ಅದು ಅರಿಸಮಾಸವೆನಿಸುವುದಾಗಿ ತ್ಯಾಜ್ಯ. ಆದರೆ, ಗಮಕಸಮಾಸದಲ್ಲಿ, ಕ್ರಿಯಾ ಸಮಾಸದಲ್ಲಿ, ಬಿರುದಾವಳಿಯಲ್ಲಿ ದೋಷವಲ್ಲವೆಂದು ವೈಯಾಕರಣನು ತಿಳಿಸಿದ್ದಾರೆ. (ಶ.ದ. ಸೂತ್ರ : ೧೮೫), ಪೂರ್ವ ಕವಿಪ್ರಯೋಗದ ಅರಿಸಮಾಸಕ್ಕೂ ಮಾನ್ಯತೆಯಿದೆ. ಆಧುನಿಕ ಕವಿಗಳು ಈ ದೋಷವನ್ನೇ ಗುಣವೆಂದು ಭಾವಿಸಿದಂತಿದೆ. ಅರಿಸಮಾಸವನ್ನು ಪರಿಹರಿಸಬಹುದಾದ ಕಡೆಯೂ ಅಲಕ್ಷ್ಯಮಾಡುತ್ತಿದ್ದಾರೆ. ಸಹಬಾಳ್ವೆ, ತಡೆರಹಿತ, ಭಾಷಾಬಳಕೆ - ಇವನ್ನು ಸಹಜೀವನ, ತಡೆಯಿಲ್ಲದ, ಭಾಷಾಪ್ರಯೋಗ ಎಂದು ಸಮಾಸದೋಷ ಬಾರದಂತೆ ಪ್ರಯೋಗಿಸಬಹುದಾದರೂ ಹಾಗೆ ಮಾಡುತ್ತಿಲ್ಲ. ದೋಷಪ್ರಜ್ಞೆ ಇಲ್ಲದುದೇ ಇದಕ್ಕೆ ಕಾರಣ.

ಅನ್ಯದೇಶೀಮಿಶ್ರಣ ದೋಷ : ಇಂಗ್ಲೀಷ್, ಹಿಂದೀ, ಉರ್ದು ಮುಂತಾದ ಭಾಷೆಗಳ ಶಬ್ದಗಳನ್ನು ಕವಿತೆಗಳಲ್ಲಿಯೂ ಬಳಸುವ ಪ್ರವೃತ್ತಿ ಈಗೀಗ ಕಂಡುಬರುತ್ತದೆ. ಅನಿವಾರ್ಯವಾದ ಕಡೆಯಲ್ಲಿ ಒಂದು ವೇಳೆ ಇದು ಕ್ಷಮ್ಯವೆನಿಸಬಹುದು. ಬೇಕುಬೇಕೆಂದೇ ಪ್ರಯೋಗಿಸುವುದು ಕಾವ್ಯ ದೋಷವಾದೀತು.

ನೇಯಾರ್ಥದೋಷ : ಸಂಸ್ಕೃತದ ಕನ್ನಡದ ಲಾಕ್ಷಣಿಕರು ಈ ದೋಷವನ್ನು ಉದಾಹರಣೆಯೊಂದಿಗೆ ವಿವರಿಸಿದ್ದಾರೆ. ಆಧುನಿಕ ರಚನೆಗಳಲ್ಲಿ ಇದು ಮಿತಿಮೀರುತ್ತಿದೆ 'ನೇಯ' ಎಂದರೆ ಎಳೆದು ತರುವುದು. ಕವಿ ಕಲ್ಪಿಸಿಕೊಂಡ ಅರ್ಥವನ್ನು ಎಳೆದು ತರಬೇಕಾಗುವುದು- 'ನೇಯಾರ್ಥ'. 'ಕಲ್ಪಿತಾರ್ಥಂ ನೇಯಾರ್ಥಂ'. ಆಧುನಿಕ ರಚನೆಗಳಲ್ಲಿ ಒಂದಾದ 'ಲಿಂಗಾಷ್ಟಕ' ದಲ್ಲಿ ಒಂದು ನುಡಿಯಿದು. ಛಂದಃ ಶಾಸ್ತ್ರದಲ್ಲಿ ಅತಿನಿಪುಣ ಆಧುನಿಕ ಕವಿ ಶ್ರೀ ಪಿ. ಬಸವಣ್ಣ ಇದರ ಕರ್ತೃ.

ರೂಢಿಯ ಸೃಷ್ಟಿಗೆ ಕಾರಣ ಲಿಂಗಂ
ಕಾಡುವ ಪಾಪವ ದೂಡುವ ಲಿಂಗಂ
ಬೇಡಿದ ಭಾಗ್ಯವ ನೀಡುವ ಲಿಂಗಂ
ಬೇಡುವೆ ನಾಂ ಮನಸಾ ಶಿವಲಿಂಗಂ

(ಕರ್ನಾಟಕ ಲೋಚನ, ಜೂನ್, ೧೯೯೨)

ಈ ಪದ್ಯದಲ್ಲಿ 'ಶಿವಲಿಂಗಂ' ಎಂಬುದು ಮತ್ತು ಅದಕ್ಕೆ ವಿಶೇಷಣಗಳಾದ ಪಾದಗಳ ಅಂತ್ಯದ ಲಿಂಗಂ ಎಂಬವು ಸ್ಪಷ್ಟವಾಗಿ ಪ್ರಥಮಾವಿಭಕ್ತಿಯಲ್ಲಿವೆ. ಆದುದರಿಂದ 'ಶಿವಲಿಂಗ ಸ್ವರೂಪನಾಗಿರುವ ನಾನು ಮನಸ್ಸಿನಿಂದ ಬೇಡುತ್ತೇನೆ.' ಎಂದೇ ಅರ್ಥ ಹೊರಡುವುದು. ಆದರೆ, ಕವಿ ಇಲ್ಲಿ, 'ಶಿವಲಿಂಗವನ್ನು' ಅರ್ಥಾತ್ ಲಿಂಗಸ್ವರೂಪವಾದ ಶಿವನನ್ನು ಎಂಬ ಅರ್ಥವನ್ನು ಭಾವಿಸಿಯೇ ಇದನ್ನು ರಚಿಸಿರುವುದು ಸ್ಪಷ್ಟವಿದೆ. ಇಲ್ಲಿ ಪ್ರಥಮಾವಿಭಕ್ತ್ಯರ್ಥಕ್ಕೆ ದ್ವಿತೀಯಾವಿಭಕ್ತ್ಯರ್ಥವನ್ನು ಎಳೆದು ತರಬೇಕಾಗುತ್ತದೆ. ಆದುದರಿಂದ ಇದು 'ನೇಯಾರ್ಥ' ಎಂಬ ಕಾವ್ಯದೋಷವಾಗುತ್ತದೆ. ಇದರಂತೆ, 'ಬ್ರಹ್ಮವಿದ್ಯೆ' ಎಂಬ ಅರ್ಥದಲ್ಲಿ ಅಜವಿದ್ಯೆ, ವಿಧಿವಿದ್ಯೆ, ಬಿದಿಬಿಜ್ಜೆ ಎಂದು ಪ್ರಯೋಗಿಸಿದಾಗ ನೇಯಾರ್ಥವಾಗುತ್ತದೆ. ಆಧುನಿಕ ಕಾವ್ಯಗಳಲ್ಲಿ ಬರುವ ನೇಯಾರ್ಥದೋಷಕ್ಕೆ ಇವು ಉದಾಹರಣೆಗಳು.

ಇಂತಹ ಕೆಲವು ಆಧುನಿಕ ಕಾವ್ಯದೋಷಗಳನ್ನು ಪ್ರಸ್ತಾವಿಸಿರುವುದು ಯಾವುದೇ ಇತರ ಉದ್ದೇಶದಿಂದಲ್ಲ, ಪ್ರಾಚೀನಕವಿಗಳಿಂದ ಉತ್ತಮ ಕಾವ್ಯಗಳು ರಚಿತವಾದಂತೆ ಆಧುನಿಕ ಕವಿಗಳೂ ಕಾವ್ಯದ ಗುಣದೋಷವನ್ನು ಅನುಲಕ್ಷಿಸಿ ಉತ್ತಮಕಾವ್ಯಗಳನ್ನೇ ರಚಿಸಿದ ಕೀರ್ತಿಗೆ ಭಾಜನರಾಗಲಿ! ಎಂಬುದೇ ಆಗಿದೆ. ಪಾಶ್ಚಾತ್ಯರ ಅಂಧಾನುಸರಣೆಯಿಂದ ಸ್ವದೇಶೀಯ ಸ್ವಭಾಷೀಯ ಕಾವ್ಯದ ಶ್ರೇಷ್ಠತೆಗೆ ಕುಂದು ಬರುವಂತೆ ಆಗುವುದು ಬೇಡವೆಂಬ ಸದುದ್ದೇಶದಿಂದಲೇ ಆಗಿದೆ. ಛಂದಸ್ಸು , ವ್ಯಾಕರಣ, ಅಲಂಕಾರ, ರೀತಿ ರಸಗಳನ್ನು ಅನುಸರಿಸಿದ ನೀತಿಬದ್ಧ ಚಮತ್ಕಾರಯುತ ನವೀನ ಕೃತಿಗಳನ್ನು ಕನ್ನಡಿಗರು ಈಗಲೂ ಕಾಣುವಂತಾಗಲಿ! ಎಂಬ ಧ್ಯೇಯದಿಂದಲೇ ಆಗಿದೆ.

ಆಧುನಿಕ ಕಾವ್ಯಗಳನ್ನು ಹಿಂದಿನವರಂತೆಯೇ ಮೂರು ವಿಭಾಗ ಮಾಡುವುದು ಸೂಕ್ತ. ಪ್ರಾಚೀನ ಸಂಸ್ಕೃತ ಲಾಕ್ಷಣಿಕ ಮಮ್ಮಟನು 'ದೋಷಗಳಿಲ್ಲದ, ಗುಣಗಳಿಂದ ತುಂಬಿದ, ಎಲ್ಲಾದರೂ ಒಂದೊಂದೆಡೆ ಅಲಂಕಾರವಿಲ್ಲದ ಶಬ್ದಾರ್ಥಗಳ ರಚನೆಯನ್ನು 'ಕಾವ್ಯ' ಎಂದಿರುವನು. ಅಲ್ಲದೆ, ವಾಚ್ಯಾರ್ಥಕ್ಕಿಂತ ಅಧಿಕವಾಗಿ ವ್ಯಂಗ್ಯಾರ್ಥವಿದ್ದರೆ ಅದು 'ಧ್ವನಿಕಾವ್ಯ' ವೆಂದೂ ಅದು ಉತ್ತಮಕಾವ್ಯವೆಂದೂ ಹೇಳಿದ್ದಾನೆ. ಹಾಗಿಲ್ಲದುದು ಮಧ್ಯಮ ಕಾವ್ಯವೆಂದೂ ವ್ಯಂಗ್ಯವೇನೂ ಇಲ್ಲದೆ ಶಬ್ದಚಿತ್ರ ಅರ್ಥಚಿತ್ರ ಮಾತ್ರವುಳ್ಳುದು ಅಧಮ (ಕೆಳಮಟ್ಟದ) ಕಾವ್ಯವೆಂದೂ ತಿಳಿಸಿದ್ದಾನೆ. ಆಧುನಿಕ ಕಾವ್ಯಗಳ ವರ್ಗೀಕರಣದಲ್ಲಿ ಯಾವುದನ್ನಾದರೂ ನಾವು ಅಧಮ ಎನ್ನುವುದು ಅತಿರೇಕದ ಮಾತಾಗಬಹುದು. ಆದುದರಿಂದ ಉತ್ತಮ, ಮಧ್ಯಮ, ಪ್ರಥಮ ಎಂದು ವರ್ಗೀಕರಿಸುವುದು ಸೂಕ್ತವಾಗಬಹುದು. ಹಾಗಾದರೆ, ಉತ್ತಮಕಾವ್ಯದ ಲಕ್ಷಣವೇನು?

ಸಮಾಜಚಿತ್ರಣ, ಜೀವನಮಾರ್ಗದರ್ಶನಯುಕ್ತವಾಗಿ, ರಸಸ್ಯಂದಿಯಾಗಿ, ಚಿತ್ತಾಕರ್ಷಕವಾಗಿ, ಕಾವ್ಯಾನಂದಪ್ರದವಾಗಿ, ವ್ಯಾಕರಣಶುದ್ಧತೆಯುಳ್ಳದು, ಛಂದೋಬದ್ಧವಾದುದು ಉತ್ತಮ ಕಾವ್ಯವೆನ್ನಬಹುದು. ಶಾಸ್ತ್ರೀಯ ಛಂದಸ್ಸನ್ನು ತೊರೆದರೂ ಕೃತಕಶಾಸ್ತ್ರಾನುಸಾರಿಯಾದ ಯಾವುದೋ ಛಂದಸ್ಸನ್ನು ಅವಲಂಬಿಸಿ, ಕಾವ್ಯದೋಷವನ್ನು ಪರಿಮಿತಿಗಿಟ್ಟಿರುವ ರಚನೆಯನ್ನು ಮಧ್ಯಮಕಾವ್ಯ ಎಂದು ಹೇಳಿಕೊಳ್ಳಬಹುದು. ಇಂತಹ ಶುದ್ಧತೆಯ ಕಡೆಗಾಗಲಿ, ಛಂದಸ್ಸಿನ ಅನುಸರಣೆಗಾಗಲಿ ಲಕ್ಷ್ಯವಿಡದೆ, ಮೂಡಿದ ಅಪಕ್ವ ಭಾವನೆಗಳಿಗೆ ಪದಗಳನ್ನೂ ವಾಕ್ಯಗಳನ್ನೂ ಜೋಡಿಸಿ ರಚಿಸಲಾದುವು, ಭಾವಗೀತಗಳು, ಚಿತ್ರಗೀತಗಳು, ಜಾನಪದಗೀತಗಳು, ನವ್ಯಕವನಗಳು, ರೂಪರೇಖೆಗಳಲ್ಲಿ ಇವುಗಳಂತೆಯೇ ಇರುವ ಇನ್ನೆಷ್ಟೋ ಅಭ್ಯಾಸಕವಿತೆಗಳು- ಇವನ್ನೆಲ್ಲ ಪ್ರಥಮವರ್ಗದವಾಗಿ ನಾವು ಪರಿಗಣಿಸಬಹುದು. ಇವುಗಳಲ್ಲಿ ನಾವು ದೋಷಜ್ಞತೆಯಿಂದ ವರ್ತಿಸುವುದು ತಕ್ಕುದಾಗದು. ಕವಿಯ ಗುರಿ ಮಾತ್ರ ಪ್ರಥಮದಿಂದ ಮಧ್ಯಮಕ್ಕೆ, ಮಧ್ಯಮದಿಂದ ಉತ್ತಮಕ್ಕೆ ಏರುವುದೇ ಆಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಅದಕ್ಕಾಗಿ ಕಾವ್ಯರಚನೆಯೊಂದಿಗೆ ಕಾವ್ಯದೋಷಜ್ಞತೆ ಮತ್ತು ದೋಷದೂರೀಕರಣ ಪ್ರಯತ್ನ ನಡೆಯುತ್ತಿರಬೇಕೆಂಬುದೇ ಪ್ರಸ್ತುತ ಲೇಖನದ ಸಂದೇಶ.

□

೮

ಕನ್ನಡ ಸಂಶೋಧನೆಗೆ ಕಿಟ್ಟೆಲರ ಕೊಡುಗೆ

'ಸಂಶೋಧನೆ' ಎಂಬುದು ಸಮ್ಯಕ್ + ಶೋಧನೆ - ಸರಿಯಾಗಿ ಶೋಧನೆ ಮಾಡುವುದು, ಅನ್ವೇಷಿಸುವುದು ಎಂಬ ಅರ್ಥವನ್ನು ಕೊಡುತ್ತದೆ. ಮಾತ್ರವಲ್ಲದೆ. ಶುದ್ಧಪಡಿಸುವದು ಎಂದೂ ಅರ್ಥವುಳ್ಳದಾಗಿದೆ. ಮೊದಲೇ ಇರುವಂತಹ, ಆದರೆ, ಅಜ್ಞಾತವಾದ ಮತ್ತು ಹೊರಗೆ ಕಾಣಿಸದುದನ್ನು ಪ್ರಯತ್ನದಿಂದ ಹುಡುಕಿ ಹಿಡಿದು, ಅದನ್ನು ಸರಿಯಾಗಿ ಇತರರಿಗೂ ಗೊತ್ತುಪಡಿಸುವ ಕಾರ್‍ಯವೆಂದು ಹೇಳಬಹುದು. ಇದರಿಂದ, ಜ್ಞಾನಾರ್ಜನೆಯ ಎಲ್ಲಾ ಕ್ಷೇತ್ರಗಳಲ್ಲೂ ಸಂಶೋಧನೆ ವ್ಯಾಪಿಸಿರುವುದೆಂಬುದು ನಿಶ್ಚಯ. ಅನ್ವೇಷಣೆ, ಶುದ್ಧೀಕರಣ, ಆವಿಷ್ಕಾರ - ಇವು ಮೂರು ಸಂಶೋಧನೆಯ ಕಾರ್ಯಗಳಾಗಿವೆ. ಅಂತಹ ಸಂಶೋಧನೆಯ ಕ್ಷೇತ್ರವು ವೇದಾಂತ, ತತ್ತ್ವ, ಜ್ಯೋತಿಷ್ಯ, ವೈದ್ಯ, ಕಲೆ, ಸಾಹಿತ್ಯ, ಸಂಗೀತ - ಮುಂತಾದ ಯಾವುದನ್ನೂ ಹೊರಗೊಳಿಸುವುದಿಲ್ಲ. ಆದರೆ ಪ್ರಕೃತ, ಕನ್ನಡಕ್ಕೆ ಅಂದರೆ, ಕನ್ನಡ ಭಾಷೆಗೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಿಟ್ಟೆಲರ ಸಂಶೋಧನೆಯ ಕೊಡುಗೆ ಎಂತಹದೆಂಬುದು ಮಾತ್ರ ಇಲ್ಲಿ ವಿಚಾರಣೀಯವಾಗಿದೆ.

ಕಿಟ್ಟೆಲರ ಕೃತಿಗಳಲ್ಲಿ ಸಂಶೋಧನಮೌಲ್ಯದಿಂದ ಕೂಡಿರುವ ನಾಲ್ಕನ್ನು ನಾವಿಲ್ಲಿ ಲಕ್ಷಿಸಬಹುದಾಗಿದೆ. ಅವು ಯಾವುವೆಂದರೆ - ೧. ಶಬ್ದಮಣಿದರ್ಪಣ (೧೮೭೨), ೨. ನಾಗವರ್ಮನ ಕನ್ನಡ ಛಂದೋಬುಧಿ (೧೮೭೫), ೩. ಇಂಗ್ಲಿಷಿನಲ್ಲಿ ಕನ್ನಡ ವ್ಯಾಕರಣ, (A Grammar of the Kannada Language ೧೯೦೩) ಮತ್ತು ಕನ್ನಡ - ಇಂಗ್ಲೀಷ್ ನಿಘಂಟು (೧೮೯೪). ಇವುಗಳಲ್ಲಿ ಶಬ್ದಮಣಿದರ್ಪಣ ಮತ್ತು ಛಂದೋಂಬುಧಿ ಎಂಬಿವು ಗ್ರಂಥಸಂಪಾದನಾತ್ಮಕ ಸಂಶೋಧನ ಮೌಲ್ಯವುಳ್ಳವೂ ಆಗಿರುತ್ತವೆ. ಇಂಗ್ಲೀಷಿನಲ್ಲಿ ವಿವರಿಸಲಾದ ಕನ್ನಡ ವ್ಯಾಕರಣವಂತೂ ಸಂಶೋಧಾತ್ಮಕವೇ ಆಗಿದೆ. ಕಿಟ್ಟೆಲರ ಕನ್ನಡ ನಿಘಂಟು, ಅದಕ್ಕೆ ಅದೇ ಸಾಟಿಯಾಗಿ ಶಬ್ದಕೋಶ ಹೇಗಿರಬೇಕೆಂಬುದಕ್ಕೆ ಮಾದರಿಯಾಗಿ, ಕನ್ನಡಕ್ಕೆ ಅಮೂಲ್ಯವಾದ ಕೊಡುಗೆಯಾಗಿದೆ.

ಶಬ್ದ ಮಣಿದರ್ಪಣ (೧೮೭೨)

ಕಿಟ್ಟೆಲರು ತಮ್ಮ ನಿಘಂಟುರಚನೆಗಿಂತ ಮೊದಲು ಕನ್ನಡಕ್ಕೆ ಅತ್ಯವಶ್ಯವಾದ ವ್ಯಾಕರಣ ಗ್ರಂಥ ಸಂಪಾದನೆಗೆ ಪ್ರಥಮ ಮಹತ್ವವನ್ನು ಕೊಟ್ಟಿರುವುದೂ ಸಂಶೋಧನೆಯ ವ್ಯಾಪ್ತಿಗೆ

ಒಳಪಡುವುದು. ಯಾವುದೇ ಭಾಷೆಗೆ ಹಾಗೂ ಆ ಭಾಷೆಯ ಸಾಹಿತ್ಯಕ್ಕೆ ವ್ಯಾಕರಣವು ನೆಲಗಟ್ಟಾಗಿರುತ್ತದೆ. ಅಷ್ಟೇ ಅಲ್ಲ. ಮಾನವನ ಎಲ್ಲ ವ್ಯವಹಾರಕ್ಕೂ ವ್ಯಾಕರಣವೇ ಮೂಲ ವಾಗಿದೆ -

ಸರ್ವೇಷಾಂ ವ್ಯವಹಾರಾಣಾಂ ಮೂಲಂ ಶಬ್ದಾರ್ಥನಿರ್ಣಯಃ
ಸ ಚ ವ್ಯಾಕರಣಾದೇವ ಮುನಿಭಿಸ್ತೇನ ತತ್ಕೃತಂ

ಮನುಷ್ಯನ ಲೋಕವ್ಯವಹಾರ ನಡೆಯುವುದು ಭಾಷೆಯ ಮೂಲಕವಷ್ಟೆ? ಅಂತಹ ಭಾಷೆಗೆ ಶಬ್ದಾರ್ಥ ನಿರ್ಣಯವೇ ಮೂಲ. ಅದು ವ್ಯಾಕರಣದಿಂದ ಮತ್ತು ಶಬ್ದಕೋಶದಿಂದ ಆಗುವುದು ಈ ಅಭಿಮತದಂತೆ, ಕಿಟ್ಟೆಲರು ಶಬ್ದಾರ್ಥನಿರ್ಣಯಕ್ಕೆ ಶಬ್ದಮಣಿದರ್ಪಣ ಅತ್ಯಂತ ಆವಶ್ಯಕವೆಂದು ಮನಗಂಡು, ಅದನ್ನು ಮೊದಲು ಸಂಪಾದಿಸಿ, ಆ ಮೇಲೆ ಕನ್ನಡ ಇಂಗ್ಲೀಷ್ ನಿಘಂಟು ರಚನೆಯನ್ನು ಮಾಡಿರುವುದು ಅವರ ಸಂಶೋಧನ ಪ್ರಜ್ಞೆಗೆ ನಿದರ್ಶನವಾಗಿದೆ. ಕನ್ನಡಕ್ಕೆ ಸಂಬಂಧಿಸಿದಂತೆ ಬೇರೆ ಕೆಲವು ವ್ಯಾಕರಣ ಪುಸ್ತಕಗಳನ್ನೂ ಅವರು ರಚಿಸಿರುತ್ತಾರೆ - ಸಂಕ್ಷೇಪ ವ್ಯಾಕರಣ ಸೂತ್ರಗಳು (೧೮೬೦), ಹಳಗನ್ನಡ ವ್ಯಾಕರಣ ಸೂತ್ರಗಳು (೧೮೮೯) ಇವೆರಡೂ ಅವರ ಕೃತಿಗಳ ಸಮೂಹದಲ್ಲಿವೆ. ಇವಕ್ಕಿಂತ ಮುಖ್ಯಮಾದುದೆಂದರೆ - ಕನ್ನಡ ಇರುವಷ್ಟು ಕಾಲವೂ ಅದಕ್ಕೆ ರೂಪದರ್ಶಿ ಶಾಸ್ತ್ರಸಾಹಿತ್ಯವಾಗಿರುವ ಶಬ್ದಮಣಿದರ್ಪಣದ ಶಾಸ್ತ್ರೀಯ ಗ್ರಂಥಸಂಪಾದನೆ ಮತ್ತು ಇನ್ನೊಂದು ಶಾಸ್ತ್ರಕೃತಿಯಾಗಿ ಇಂಗ್ಲೀಷಿನಲ್ಲಿ ಅವರು ರಚಿಸಿರುವ ಕನ್ನಡ ಭಾಷೆಯ ವ್ಯಾಕರಣ (A Grammar of the Kannada language).

ಕಿಟ್ಟೆಲ್ ಆವೃತ್ತಿಯ ಶಬ್ದಮಣಿದರ್ಪಣ ಕೃತಿ ವ್ಯಾಕರಣ ವಿವರಣ ಕೃತಿಯೂ ಹೌದು, ಸಂಶೋಧನಗಳನ್ನು ಒಳಗೊಂಡ ಕೃತಿಯೂ ಹೌದು. ಇದರ ಪಾಠಪರಿಷ್ಕರಣಕ್ಕಾಗಿ ಅವರು ಐದು ಓಲೆ ಪ್ರತಿಗಳೊಂದಿಗೆ ಹತ್ತು ಹಸ್ತಲಿಖಿತ ಪ್ರತಿಗಳನ್ನೂ ಬಳಸಿರುತ್ತಾರೆ. ಇವುಗಳಲ್ಲಿ ಐದು ಮೈಸೂರಿನ ಕಡೆಯವು. ಮೂರು ಉತ್ತರ ಕರ್ನಾಟಕದವು, ಒಂದು ಮಡಿಕೇರಿಯದು ಮತ್ತು ಇನ್ನೊಂದು ಮಂಗಳೂರಿನ ಕಡೆಯದು. ಹೀಗೆ, ಒಂದು ಗ್ರಂಥವನ್ನು ಸಂಪಾದಿಸಬೇಕಾದರೆ, ನಾಡಿನ ಬೇರೆ ಬೇರೆ ಕಡೆಯ ಮೂಲ ಪ್ರತಿಗಳನ್ನು ಸಂಗ್ರಹಿಸುವ ಆವಶ್ಯಕತೆಯನ್ನು ಅವರು ಲಕ್ಷಿಸಿರುವುದು, ಗ್ರಂಥ ಸಂಪಾದನೆಯಲ್ಲಿ ಆಸಕ್ತರಾದವರಿಗೆಲ್ಲ ಆದರ್ಶವಾಗಿದೆ. ಈ ಹತ್ತು ಪ್ರತಿಗಳ ಪಾಠಭೇದಗಳನ್ನು ಅನುಲಕ್ಷಿಸಿ ಅವರು ಪಾಠನಿರ್ಣಯವನ್ನು ಮಾಡಿರುತ್ತಾರೆ. ೧೮೭೨ ರಲ್ಲಿ ಮೊದಲ ಆವೃತ್ತಿ ಹೊರಬಂದು ೨೭ ವರ್ಷಗಳ ಅನಂತರ, ೧೮೯೯ರಲ್ಲಿ ಅದರ ಪರಿಷ್ಕೃತ ಆವೃತ್ತಿ ಹೊರಬಂದಿದೆ. ೧೯೨೦ರಲ್ಲಿ ಪಂಜೆ ಮಂಗೇಶ ರಾಯರು ಕಿಟ್ಟೆಲ್ ಆವೃತ್ತಿಯನ್ನು ಪ್ರಕಟಿಸಿದ್ದು, ೧೯೬೪ರಲ್ಲಿ ಸುಧಾರಿಸಲ್ಪಟ್ಟ ನಾಲ್ಕನೆಯ ಆವೃತ್ತಿಯಾಗಿ ಶಂ.ಶಿ. ಕುಲಕರ್ಣಿಯವರು ಧಾರವಾಡದಲ್ಲಿ ಇದನ್ನು ಪ್ರಕಟಿಸಿರುತ್ತಾರೆ.

ಈ ಶಬ್ದಮಣಿದರ್ಪಣದಲ್ಲಿ ಅಲ್ಲಲ್ಲಿ ಇಂಗ್ಲೀಷಿನಲ್ಲಿಯೂ ಶಿರೋನಾಮಗಳು, ಸೂತ್ರಾರ್ಥಗಳು, ಅಡಿ ಪಟ್ಟಿಗಳೂ ಇದ್ದು ವ್ಯಾಸಂಗ ಮಾಡುವವರಿಗೆ ವಿಶೇಷ ಸೌಲಭ್ಯ ಕಲ್ಪಿಸಿರುವುದು ಇದರ ವಿಶೇಷತೆಯಾಗಿದೆ. ಇದು ನಿಷ್ಠೂರ ಸಂಜಯ್ಯ ಅಥವಾ ನಂಜಯ್ಯನ ಟೀಕನ್ನೂ ಒಳಗೊಂಡಿದೆ. ಪ್ರತಿಯೊಂದು ಸೂತ್ರಕ್ಕೂ ಪದಚ್ಛೇದವಿದೆ, ಅನ್ವಯವಿದೆ. ಟೀಕು

(ಪ್ರತಿಪದಾರ್ಥರೂಪದಲ್ಲಿ) ಕೊಟ್ಟ ಮೇಲೆ, ಸೂತ್ರದ ವೃತ್ತಿಯನ್ನು ಕೊಡಲಾಗಿದೆ. ಹೀಗೆ ಕೊಡುವುದರಿಂದಲೇ ವಿದ್ಯಾರ್ಥಿಗಳಿಗೆ ಮತ್ತು ಸ್ವಾಧ್ಯಯನ ಮಾಡುವವರಿಗೆ ಉಪಯೋಗವಾಗುವುದೆಂದು ಕಂಡುಕೊಂಡುದು ಕೂಡ, ಕಿಟ್ಟೆಲರ ಸಂಶೋಧನೆಯ ಅಂಶವಾಗಿರುತ್ತದೆ. ಗುರೂಪದೇಶವಿಲ್ಲದೆಯೆ ಕಲಿಯಲೂ ಸಾಕಾಗುವಂತೆ ಕಿಟ್ಟೆಲರ ಈ ಗ್ರಂಥದ ಸಂಪಾದನೆಯಿದೆಯೆಂಬುದು ಈ ಲೇಖಕನ ಸ್ವಾನುಭವವಾಗಿದೆ. ಪೀಠಿಕೆಯ ಭಾಗದ ಕಂದಪದ್ಯಗಳಿಗೆ ಮೂಲಂ ಎಂಬ ಶಿರೋನಾಮವಿದೆ. ಅವಶ್ಯವೆನಿಸಿದಲ್ಲಿ ವಿಶೇಷ ಶಬ್ದಗಳ ಬಗೆಗೆ ಅಡಿಟಿಪ್ಪಣಿಯಾಗಿ ಹೆಚ್ಚಿನ ವಿವರಣೆಯೂ ಕಂಡುಬರುತ್ತದೆ.

ಉದಾ: **ಮೂಲಂ ॥ ಕವಿಸುಮನೋಬಾಣನ ಯಾ**
ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ
ಕವಿಕೇಶವನೆಂ ಯೋಗಿ
ಪ್ರವರಚಿದಾನಂದ ಮಲ್ಲಿಕಾರ್ಜುನಸುತನೆಂ ॥ ೨ ॥

ಈ ಕಂದಪದ್ಯದಲ್ಲಿ ಬಂದಿರುವ ಕಟಕಾಚಾರ್ಯ ಎಂಬುದಕ್ಕೆ ಅಡಿಟಿಪ್ಪಣಿಯಿದೆ. ಅದರ ಅರ್ಥ ಸ್ಪಷ್ಟವಿಲ್ಲವೆಂದು ತಿಳಿಸಿ, ಅರ್ಥವನ್ನು ತಿಳಿಸುವ ಪ್ರಯತ್ನಮಾಡಿರುವುದು ಕಂಡುಬರುತ್ತದೆ. ಕಟಕ ಎಂಬ ಶಬ್ದಕ್ಕೆ-ರಾಜಧಾನಿ, ಸೈನ್ಯ, ಶಿಬಿರ, ಚಿನ್ನದ ಕೈಬಳೆ ಎಂಬ ಅರ್ಥಗಳನ್ನು ಕೊಟ್ಟು ರಾಜಧಾನಿಯಲ್ಲಿ ಗೌರವಾರ್ಹವಾದ ಏಕೈಕ ಆಚಾರ್ಯ ಪದವಿಯನ್ನು ಹೊಂದಿದವನು ಆಗಿರಬಹುದು ಎಂದೂ ನಿರೂಪಿಸಲಾಗಿದೆ.

ವ್ಯಾಕರಣಸೂತ್ರಗಳಿಗೆಲ್ಲ ಟೀಕು, ವೃತ್ತಿ, ಪ್ರಯೋಗಗಳನ್ನು ಕೊಟ್ಟಿದ್ದರೂ ಸಂದೇಹ ತಲೆದೋರಬಹುದಾದ ಕಡೆ ಅಥವಾ ವಿವರಣ ತೃಪ್ತಿಯಾಗದೆಡೆ ಒಂದಿಷ್ಟು ಪೂರ್ವಸಿದ್ದತೆಯ ಹಾಗೂ ವಿಶೇಷಾವಲೋಕನದ ವ್ಯಾಖ್ಯಾನವನ್ನು ಒದಗಿಸಿರುವುದು ಕಿಟ್ಟೆಲರ ಸಂಶೋಧನ ಪ್ರಜ್ಞೆಗೆ ಸಾಕ್ಷ್ಯವಾಗಿದೆ. ಸೂತ್ರ ೮ ರಲ್ಲಿ 'ಅವರ್ಣಂ ಪಿಂಗಿದಾ ಸ್ವರಂ ನಾಮಿಯೆಂದು ಪೇಟಲ್ಪಡೆಗುಂ' ಎಂಬುದಕ್ಕೆ ಅಡಿಟಿಪ್ಪಣಿಯಲ್ಲಿ ಹೀಗೆ ವಿವರವಿದೆ -

Nami means bending as, according to Boethlingk and Roth's Dictionary. The Nami vowels bend or change a Dental into a cerebral. The author does not make use of the word again.

'ನಾಮಿ' ಎಂಬ ಶಬ್ದಕ್ಕೆ (ನಮತಿ, ನಮಯತಿ) ಬಾಗುತ್ತದೆ. ಬಾಗಿಸುತ್ತದೆ - ಎಂದು ನಿಷ್ಪನ್ನಾರ್ಥವನ್ನು ಹೇಳುತ್ತಾರೆ. ಅದರಂತೆ, ನಾಮಿಸ್ವರಗಳು (ಅಂದರೆ, ಅವರ್ಣ ಹೊರತು) ದಂತ್ಯಾಕ್ಷರವನ್ನು ಮೂರ್ಧನ್ಯವನ್ನಾಗಿ ಮಾಡುತ್ತವೆ - ಎಂಬುದನ್ನು ಪ್ರಾಚೀನ ಸಂಸ್ಕೃತ ಲಾಕ್ಷಣಿಕರು ಹೇಳಿರುವುದನ್ನು ಕಿಟ್ಟೆಲರೂ ಹೇಳಿದಲ್ಲಿಗೇ ಅದರ ಸಂಶೋಧನೆ ನಿಂತುಹೋಗಿದೆ. ದಂತ್ಯಾಕ್ಷರವು ಮೂರ್ಧನ್ಯವಾಗುವುದಕ್ಕೆ ಉದಾಹರಣೆಗಳು ಮತ್ತು ವಿವರಣೆಗಳು ಹೀಗಿವೆ- ಸಂಸ್ಕೃತದಲ್ಲಿ ಸಪ್ತಮೀ ವಿಭಕ್ತಿಯ ಬಹುವಚನ ಕೊನೆಯ ಅಕ್ಷರವು, ಅದರ ಹಿಂದಿನದು ಅವರ್ಣವಾಗಿದ್ದಲ್ಲಿ 'ಸು' ಎಂಬುದಾಗಿರುತ್ತದೆ. ಉದಾ : ರಾಜಸು, ರಮಾಸು. ಆದರೆ, ಹಿಂದಿನದು ನಾಮ್ಯಕ್ಷರವಾಗಿದ್ದಲ್ಲಿ 'ಷು' ಎಂಬುದಾಗಿರುತ್ತದೆ.. ಉದಾ : ಹರಿಷು, ಗುರುಷು, ಧಾತೃಷು, ಗೋಷು... ಇತ್ಯಾದಿ. ಇದಲ್ಲದೆ, ಪದಮಧ್ಯದ ಸಕಾರದ ಹಿಂದೆ ನಾಮಿ ಇದ್ದರೆ, ಆ ಸಕಾರವು

ಷಕಾರವಾಗುತ್ತದೆ ಎಂದು ಹೇಳಲಾಗಿದೆ. ಇದಕ್ಕೆ ವಿ + ಸಮ - ವಿಷಮ, ಅಭಿ + ಸೇಕ - ಅಭಿಷೇಕ. ಯುಧಿ + ಸ್ಥಿರ - ಯುಧಿಷ್ಠಿರ ಮುಂತಾದ ಉದಾಹರಣೆಗಳು ಸಿಗುತ್ತವೆ. ಆದರೆ ಇಲ್ಲೆಲ್ಲ ವಿದ್ವಾಂಸರ ಈ ವರೆಗಣ ಸಂಶೋಧನೆಗಳು ಸರಿದಾರಿ ಹಿಡಿದಿಲ್ಲವೆಂದು ನನಗೆ ಅನಿಸಿದೆ. ಹರಿಸೇವೆ, ಗುರುಸನ್ನಿಧಿ, ಭ್ರಾತೃಸೌಹಾರ್ದ - ಎಂಬಲ್ಲಿರತಕ್ಕ ಸಕಾರವು ಷಕಾರವಾಗಿಲ್ಲ. ಅದಲ್ಲದೆ, ಕೇಶಿರಾಜನು ಕನ್ನಡಕ್ಕಾಗಿಯೆ ಶಬ್ದಮಣಿದರ್ಪಣವನ್ನು ರಚಿಸಿರುವಾಗ, ನಾಮಿ ವಿಚಾರ ಕನ್ನಡಕ್ಕೆ ಸಂಬಂಧಿಸಿದುದಲ್ಲ ಎಂದರೆ ಹೇಗಾದೀತು? ನಾವು ಅರ್ಥಮಾಡಿ ಕೊಂಡಿಲ್ಲವೆಂದು ಭಾವಿಸಬೇಕಲ್ಲವೇ? ಅದಲ್ಲದೆ, ಸಕಾರವು ಷಕಾರವಾಗುವುದನ್ನು ಬಾಗುವುದು, ಬಾಗಿಸುವುದು ಎಂಬುದು ಸರಿಯೆ? ಕಿಟ್ಟೆಲರು ಇದನ್ನು ಪರಿಭಾವಿಸಿ ಬಾಗುವುದು ಅಥವಾ ಮಾರ್ಪಾಡಾಗುವುದು (Bend or Change) ಎಂದು ಅರ್ಥ ಕೊಟ್ಟಿರುತ್ತಾರೆ. ಬಾಗಿಸುವುದೇನುಂಟು? ಮಾರ್ಪಾಡು ಆಗುವುದು ಅಲ್ಲವೇ?

ಈ ವಿಷಯದಲ್ಲಿ ಸುಮಾರು ೪೦ ವರ್ಷಗಳ ಹಿಂದೆಯೇ ನಾನು ಮಾಡಿರುವ ನನ್ನ ಸಂಶೋಧನೆಯನ್ನು ಇಲ್ಲಿ ಸೇರಿಸಿಕೊಳ್ಳುವುದು ಅನುಚಿತವಾಗಲಾರದು. ಏಕೆಂದರೆ - ಯಾವುದೇ ಸಂಶೋಧನೆ ತೃಪ್ತಿಕರವೆನಿಸದಿದ್ದರೆ, ಮುಂದಿನವರು ಅದನ್ನು ಮುಂದುವರಿಸಬೇಕಾದುದು ಅವರ ಕರ್ತವ್ಯ. ೧೯೪೨ರಲ್ಲಿ ವಿದ್ವಾನ್ ಪರೀಕ್ಷೆಗಾಗಿ ಶಬ್ದಮಣಿದರ್ಪಣವನ್ನು (ಕಿಟ್ಟೆಲರ ಪ್ರತಿಯನ್ನು) ಅಭ್ಯಸಿಸಿದ್ದ ನನಗೆ ಅವೇಕೆ ನಾಮಿಗಳೆಂಬುದಕ್ಕೆ ಸಮರ್ಪಕವಾದ ಉತ್ತರ ದೊರಕಿದ್ದಿಲ್ಲ. ಯಾರಲ್ಲಿ ಕೇಳಿಯೂ ತೃಪ್ತಿಕರವಾದ ಬೋಧೆಯಾಗಿದ್ದಿಲ್ಲ. ನಾನೇ ಒಂದು ನಿರ್ಣಯಕ್ಕೆ ಬಂದು, ಅದನ್ನು ೧೯೬೯ರಲ್ಲಿ ಹೊರಬಂದ ನನ್ನ 'ಸಂಶೋಧನ ರತ್ನಮಾಲಿಕೆ' ಎಂಬ (ಮೈಸೂರು ವಿಶ್ವವಿದ್ಯಾನಿಲಯದ ಹೊನ್ನ ಹಬ್ಬದ ಬಹುಮಾನ ಪಡೆದ) ಗ್ರಂಥದಲ್ಲಿ ಹೇಳಿರುತ್ತೇನೆ. ಅದು ಹೀಗಿದೆ -

'ನಾಮಿ' ಎಂಬುದಕ್ಕೆ ನಮತಿ (ಬಾಗುತ್ತದೆ), ನಮಯತಿ (ಬಾಗಿಸುತ್ತದೆ) ಎಂಬರ್ಥವೂ ಸರಿ. ಅವರ್ಣವು ನಾಮಿಯಲ್ಲ. ಅಂದರೆ, ನಿರಾಳವಾಗಿ ಬಾಯ್ದೆರೆದು ಹೊರಡಿಸಿದ ಧ್ವನಿ ಹ್ರಸ್ವವಾಗಿದ್ದರೆ ಅದು 'ಅ' (ಅಕಾರ) ದೀರ್ಘವಾದರೆ 'ಆ' (ಆಕಾರ). ಇವೆರಡೂ ನಾಮಿಯಲ್ಲದವು. ಇನ್ನುಳಿದ ಇ, ಉ, ಋ ಮುಂತಾದ ಸ್ವರಗಳನ್ನು ಉಚ್ಚರಿಸುವಾಗ ಬಾಯೊಳಗಣ ವಾಗಯವಗಳನ್ನು ಅತ್ತಿತ್ತ ಬಾಗಿಸಬೇಕಾಗುವುದು ಯಾರಿಗೂ ಅನುಭವಕ್ಕೆ ಬರುವ ಸಂಗತಿಯಾಗಿದೆ. ಆದುದರಿಂದ ಅವು ನಾಮಿಗಳಾಗಿವೆ. 'ಬಡವನ ಮಾತು ಎಡೆಯಲ್ಲೇ ಹೋಯಿತು' ಎಂಬಂತೆ ನನ್ನ ಈ ಸಂಶೋಧನೆ ಯಾರ ಲಕ್ಷ್ಯಕ್ಕೂ ಬಂದಿಲ್ಲ. ಈ ಸಂಶೋಧನೆಗೆ ಪೀಠಿಕೆ ಹಾಕಿದವರು ಕಿಟ್ಟೆಲರೆಂಬುದು ಮರೆಯತಕ್ಕುದಲ್ಲ. ಕಿಟ್ಟೆಲರ ಶಬ್ದಮಣಿದರ್ಪಣದಲ್ಲಿ ಭಾಷಾಭೂಷಣ, ಶಬ್ದಸ್ಮೃತಿ, ಶಬ್ದಾನುಶಾಸನಗಳ ಪರಿಶೀಲನೆಯೂ ಅಲ್ಲಲ್ಲಿ ಕಂಡುಬರುತ್ತದೆ.

ಕನ್ನಡ ಭಾಷಾವ್ಯಾಕರಣ (೧೯೦೩)

ಕಿಟ್ಟೆಲರ ಈ ವ್ಯಾಕರಣ ಕೃತಿ ಡಿಮ್ಮೈ ಆಕೃತಿಯ ೪೯೦ ಪುಟಗಳುಳ್ಳುದಾಗಿ ಸಂಶೋಧನ ಮೌಲ್ಯವುಳ್ಳ ಗ್ರಂಥವಾಗಿದೆ. ಇದರ ರಚನೆ ಭಾಷಾಭೂಷಣ, ಶಬ್ದಮಣಿದರ್ಪಣ,

ಶಬ್ದಾನುಶಾಸನಗಳನ್ನು ಮಾತ್ರವಲ್ಲದೆ ಸಂಸ್ಕೃತವ್ಯಾಕರಣವನ್ನೂ ಸರಿಯಾಗಿ ಅನುಲಕ್ಷಿಸಿರುವುದು ಕಂಡುಬರುತ್ತದೆ. ಇದರ ಪ್ರಾರಂಭದಲ್ಲಿ ಕನ್ನಡ ಶಬ್ದದ ವ್ಯುತ್ಪತ್ತಿಯ ಸಂಶೋಧಾತ್ಮಕ ವಿವರವಿದೆ. ಕರ್ + ನಾಡು ಅಂದರೆ ಕರಿಮಣ್ಣಿನ ನಾಡು ಎಂಬುದಾಗಿ ಈ ನಾಡಿನ ನೆಲದ ಲಕ್ಷಣವನ್ನು ಸೂಚಿಸಿ, ಅದು ನಾಡಿನ ಮತ್ತು ನುಡಿಯ ಹೆಸರೆಂದು ತಿಳಿಸಲಾಗಿದೆ. ಕಿಟ್ಟೆಲರಿಂದೀಚೆಯ ವಿದ್ವಾಂಸರಿಂದ ಈ ಸಂಶೋಧನೆ ಮುಂದುವರಿದಿದೆ. ಕಮ್ಮಿತು + ನಾಡು ಅಂದರೆ ಗಂಧದ ಮರಗಳಿಂದ ಸುವಾಸಿತವಾದ ನಾಡು, ಕರು + ನಾಡು ಅಂದರೆ ಎತ್ತರವಾದ, ಅನೇಕ ಹಿರಿಮೆ ಗಳಿಗೆ ಆಸರೆಯಾದ - ಮುಂತಾಗಿ ಇದರ ಶಬ್ದ ಸಂಶೋಧನೆ ಮುಂದುವರಿದಿರುತ್ತದೆ. ಈ ಭಾಷೆ ದ್ರಾವಿಡ ಭಾಷಾವರ್ಗಕ್ಕೆ ಸೇರಿದುದೆಂದು ಭಾಷಾಶಾಸ್ತ್ರದ ದೃಷ್ಟಿಯಿಂದ ಇದರಲ್ಲಿ ಹೇಳಲಾಗಿದೆ.

ಕನ್ನಡವೂ ಅವುಗಳಲ್ಲಿ ಒಂದಾಗಿರುವ ದ್ರಾವಿಡ ಭಾಷೆಗಳು ಸಂಸ್ಕೃತದಿಂದ ಧಾರಾಳವಾಗಿ ಶಬ್ದಗಳನ್ನು ಸ್ವೀಕರಿಸಿಕೊಂಡಿದ್ದರೂ ಸಂಸ್ಕೃತ ಭಾಷಾವರ್ಗದಿಂದ ಬೇರೆಯಾದುವೆಂಬುದನ್ನು ಇದರಲ್ಲಿ ದೃಢಪಡಿಸಲಾಗಿದೆ. ಲಿಪಿಯ ವಿಷಯವಾಗಿ ಹೇಳುತ್ತಾ ಹೊಸಗನ್ನಡದ ಲಿಪಿಗಿಂತ ಭಿನ್ನವಾದ ಪ್ರಾಚೀನ ಕನ್ನಡದ ಲಿಪಿಯೊಂದು ಇದ್ದಿತೆಂದು ಹೇಳಲಾಗಿದೆ. ಹಳಗನ್ನಡವು ಕ್ರಿ. ಶ. ೬೦೦ ರಿಂದ ೧೩ ನೆಯ ಶತಮಾನದ ವರೆಗೆ ವಿಶೇಷವಾಗಿ ಪ್ರಚಲಿತವಾಗಿದ್ದಿತು. ಹಳಗನ್ನಡವೆಂಬುದು ಪರಿಮಾರ್ಜಿತ ಭಾಷೆ. ಅದು ಅಸಾಮಾನ್ಯವಾಗಿ ಪರಿಷ್ಕೃತವಾದುದು. ಲಕ್ಷಣಬದ್ಧವಾದುದು ಮತ್ತು ಏಕರೂಪವಾದುದು. ಆದುದರಿಂದ ಕಾವ್ಯರಚನೆಗೆ ತಕ್ಕುದಾದುದು- ಹೀಗೆ ಹೇಳುವ ಮೂಲಕ, ಭಾಷೆಯನ್ನು ಮಿತಿಮೀರಿ ಜಾನಪದೀಕರಣ ಒಳ್ಳೆಯದಲ್ಲ ಎಂಬ ಭಾವನೆ ವ್ಯಕ್ತವಾಗುತ್ತದೆ. ಶಿಷ್ಟ ಭಾಷೆಯ ಪ್ರಯೋಗಾವಶ್ಯಕತೆ ವೇದ್ಯವಾಗುತ್ತದೆ. ಕನ್ನಡ ಅಕ್ಷರಮಾಲೆಯ ೫೭ ಅಕ್ಷರಗಳಲ್ಲಿ ಪ್ರತಿಯೊಂದರ ಉಚ್ಚಾರಣೆಯನ್ನು, ಇಂಗ್ಲೀಷಿನಲ್ಲಿ ವಿವರಣೆಮಾಡಿರುವುದು ಸೊಗಸಾಗಿದೆಯಲ್ಲದೆ, ಸುಬೋಧಕವಾಗಿಯೂ ಇದೆ. ಅಕ್ಷರಮಾಲೆಯ ತೌಲನಿಕ ವಿವರಣೆಯೂ ಇದರಲ್ಲಿದೆ.

ಅಕ್ಷರಮಾಲೆಯ ವಿಚಾರವಾಗಿ ಇದರಲ್ಲಿ ಲಕ್ಷ್ಯಾರ್ಹವಾದ ಅನೇಕ ಸಂಗತಿಗಳಿವೆ. ಹಸ್ತಲಿಪಿಗಳ ರೂಪ ವೈಶಿಷ್ಟ್ಯವನ್ನು ತಿಳಿಸಲಾಗಿದೆ. ೧೮ನೆಯ ಶತಮಾನದ ಹಸ್ತಪ್ರತಿಗಳಲ್ಲಿ 'ಎ' ಎಂಬುದು 'ಯೆ' ಎಂದು ಕಾಣಿಸಿರುವುದನ್ನು 'ೀ' ಈ ದೀರ್ಘಚಿಹ್ನೆಯಿಲ್ಲದಿರುವುದನ್ನು ಹೇಳಲಾಗಿದೆ. 'ಏಕಾಂತ' ಎಂಬುದನ್ನು 'ಯೇಕಾಂತ' ಎಂದು ಬರೆದಿರುವ ರೂಢಿವೈಶಿಷ್ಟ್ಯವನ್ನು ತಿಳಿಸಲಾಗಿದೆ. ಕನ್ನಡದ ಕಾಗುಣಿತದ ವಿಷಯವಾಗಿ ಇಲ್ಲೊಂದು ಮಹತ್ವದ ನಿರೂಪಣೆ ಕಂಡು ಬರುತ್ತದೆ. 'ಮೀರು' ಎಂಬುದನ್ನು 'ಮೊರು' ಎಂದು ಬರೆಯುತ್ತಿದ್ದುದಾಗಿ ಹೇಳಲಾಗಿದೆ. ಇದರಿಂದ ಮಕಾರದ ಈತ್ವದ ಸ್ಪಷ್ಟರೂಪವನ್ನಿಲ್ಲಿ ನಿರೂಪಿಸಲಾಗಿದೆ-ಎನ್ನಲು ಅಡ್ಡಿಯಿಲ್ಲ. ಆದರೆ, ಇತರ ಕಡೆ ಇದನ್ನು ಕಿಟ್ಟೆಲರು ಸರಿಯಾಗಿ ಅನುಸರಿಸಿರುವುದು ಕಂಡುಬರುವುದಿಲ್ಲ. ದೀರ್ಘಾಕ್ಷರವನ್ನು ಹ್ರಸ್ವವಾಗಿ ಕೈಬರೆಹ ಬರೆವ ಸಂಪ್ರದಾಯದ ಉಲ್ಲೇಖವಾಗಿ-ತೊರುವ (ತೋರುವ) ದೆವತೆ, (ದೇವತೆ), ನಿತಿ (ನೀತಿ), ಪಿಠ (ಪೀಠ) ಇಂತಹ ಉದಾಹರಣೆಗಳಿವೆ.

ಹಳಗನ್ನಡವು ಹೊಸಗನ್ನಡವಾಗುತ್ತ ಬಂದ ವಿವರ ಇದರಲ್ಲಿದೆ. ಅದರೊಂದಿಗೆ ಕನ್ನಡದಲ್ಲಿ ಸಂಸ್ಕೃತ ಶಬ್ದಗಳು ಬಿಡಿಯಾಗಿಯೂ ಸಂಧಿ-ಸಮಾಸರೂಪ ತಾಳಿಯೂ ಬಹಳವಾಗಿ ಪ್ರಯೋಗಗೊಳ್ಳುತ್ತಿರುವುದರಿಂದ ಸಂಸ್ಕೃತದ ಸಂಧಿ - ಸಮಾಸಗಳ ಪರಿಜ್ಞಾನವೂ ಕನ್ನಡಕ್ಕೆ ಅನಿವಾರ್ಯವೆಂಬುದನ್ನು ಕಿಟ್ಟೆಲರು ಮನಗಂಡುದು ಈ ಗ್ರಂಥದಲ್ಲಿ ಸ್ಪಷ್ಟವಾಗಿದೆ. ಆದುದರಿಂದಲೇ ಅವುಗಳನ್ನಿಲ್ಲಿ ಸೋದಾಹರಣವಾಗಿ ವಿವರಿಸಲಾಗಿದೆ. ಬರೆವಣಿಗೆಯಲ್ಲಿ ಅಥವಾ ಮುದ್ರಣದಲ್ಲಿ ಕಯ್ವಾರ - ಕೈವಾರ, ನಿರ್ಣೈಸು - ನಿರ್ಣಯಿಸು, ಎಂಬೆರಡು ವಿಧಗಳನ್ನೂ ಮಾನ್ಯಮಾಡಿರುವುದು ಶಬ್ದಮಣಿದರ್ಪಣದ ನಿರೂಪಕ್ಕೆ ಸರಿಯಾಗಿದೆ. ಹಾಗೆಯೇ ಕವುಂಗು - ಕೌಂಗು, ಕವುಂಕುಳ್, ಕೌಂಕುಳ್, ಸವಳು - ಸೌಳು , ಚವಳು - ಚೌಳು ಎಂಬ ಉಭಯಗ್ರಾಹ್ಯ ಶಬ್ದರೂಪಗಳನ್ನು ಕೊಡಲಾಗಿದೆ. ತತ್ಸಮ ಶಬ್ದಗಳ ಬಗೆಗೆ ಶಬ್ದ ಮಣಿದರ್ಪಣವನ್ನೇ ಅನುಸರಿಸಿರುವ ನಿರ್ಣಯವನ್ನು ಈ ವ್ಯಾಕರಣ ಗ್ರಂಥದಲ್ಲಿ ಕಾಣುತ್ತೇವೆ. ಆದರೆ, ಈಗ ಪ್ರಚಲಿತವಾಗಿ ಸಮಸಂಸ್ಕೃತವನ್ನು 'ತತ್ಸಮ ಎಂದು ತಪ್ಪಾಗಿ ವಿದ್ಯಾಲಯಗಳಲ್ಲಿ ಕಲಿಸಲಾಗುತ್ತಿದೆ. ಇದನ್ನು ತಿದ್ದಿಕೊಳ್ಳಬೇಕಾದುದು' ಆವಶ್ಯಕ. ಈ ವಿಚಾರಗಳೆಲ್ಲವೂ ಕನ್ನಡದಲ್ಲಿ ಸಂಶೋದನೆಗೆ ಕಿಟ್ಟೆಲರ ಕೊಡುಗೆಗಳ ವರ್ಗಕ್ಕೆ ಸೇರುತ್ತವೆ.

ಛಂದೋಂಬುಧಿ (೧೮೭೫)

ಸಾಹಿತ್ಯವು ಪದ್ಯಾತ್ಮಕವಾಗಿಯೂ ಇರುವುದರಿಂದ, ಕನ್ನಡ ಕಲಿವವರಿಗೆ ಮತ್ತು ಕನ್ನಡದಲ್ಲಿ ಕಾವ್ಯರಚನೆ ಮಾಡುವವರಿಗೆ ಪದ್ಯ ಲಕ್ಷಣದ ಅರಿವು ಅವಶ್ಯವೆಂದು ಮನಗಂಡುದರ ಪರಿಣಾಮವಾಗಿ ಕಿಟ್ಟೆಲರು ಛಂದೋಲಕ್ಷಣವನ್ನು ನಿರೂಪಿಸತಕ್ಕ ನಾಗವರ್ಮನ ಛಂದೋಂಬುಧಿಯನ್ನು ಶಾಸ್ತ್ರೀಯ ವಾಗಿ ಸಂಪಾದಿಸಿರುತ್ತಾರೆ. ಇದರಲ್ಲಿ ಕನ್ನಡ ಸಾಹಿತ್ಯಚರಿತ್ರೆಯ ಸುದೀರ್ಘಪ್ರಬಂಧವನ್ನೂ ಕೊಟ್ಟಿರುತ್ತಾರೆ. ಇದರಲ್ಲಿ ಕೂಡ, ಇಂಗ್ಲೀಷಿನಲ್ಲಿ ವಿವರಣೆಗಳಿವೆ. ಛಂದಶ್ಶಾಸ್ತ್ರ ಪ್ರಕಾರ, ಲಘು ಗುರು ಚಿಹ್ನೆ ಯಾವುದಿರಬೇಕು? ಎಂಬುದರ ಬಗೆಗೆ ಛಂದೋಂಬುಧಿಯಲ್ಲಿ ಹೀಗೆ ಹೇಳಿದೆ-

ಬರೆದೆಯ್ದರ ಲೆಕ್ಕವನಾ
ದರದಿಂ ಗುರು ಲಘು ವಿಭೇದಮಂ ಭಾವಿಸು ನೀಂ
ಗುರು ಪಿಂತೆ ಕೊಂಕೆ ತೋರುವ
ಗೆರೆ ಮುಂತಣ ನೈತುಮಪ್ಪ ಗೆರೆ ಲಘು ಕೆಳದೀ

ಈ ಸೂತ್ರದ ಪ್ರಕಾರ, ಕೆಳಮೊಗವಾದ ಅರ್ಧಬಿಂದು ಗುರುಚಿಹ್ನೆಯಾಗುವದು. ಮೇಲೆತ್ತಿದ ಬೆರಲಿನಂತೆ ನೇರವಾದ ಗೆರೆ ಲಘುಚಿಹ್ನೆಯೆನಿಸುವುದು. ಆದರೆ ನಾವೀಗ ಈ ಬಗೆಯ ಬಳಕೆಯನ್ನು ಕಾಣುವುದಿಲ್ಲ. ಈ ಹೊಸ ಬಗೆಯ ಗುರು ಲಘು ಚಿಹ್ನೆಗಳ ಬಳಕೆಯ ವಿಚಾರವಾಗಿ ಕಿಟ್ಟೆಲರು ಹೇಳಿರುವುದು ಅವರ ಛಂದೋಬುಧಿಯಲ್ಲಿ ಹೀಗಿದೆ -

Instead of the above first mentioned sign Europeans use a horizontal line (—) and instead of the other a turned up half bindu (U). The European signs have been adopted for this edition.

ಈ ವಿಷಯದಲ್ಲಿ ಹೆಚ್ಚಿನ ಸಂಶೋಧಾತ್ಮಕ ವಿವರವನ್ನು ನನ್ನ 'ಸಂಶೋಧನ ರತ್ನಮಾಲಿಕೆ' ಯಲ್ಲಿ 'ಛಂದಸ್ಸು ಮತ್ತು ಗುರು ಲಘುಗಳ ರಹಸ್ಯ' ಎಂಬ ಪ್ರಬಂಧದಲ್ಲಿ ಕಾಣಬಹುದು. ಆದರೆ, ತಮ್ಮ ಹೊಸ ಬಳಕೆಗೆ ಕಿಟ್ಟೆಲರು ಕಾರಣಕೊಟ್ಟಿರುವದು ಲಕ್ಷ್ಯಾರ್ಹವಾಗಿದೆ. ಕಿಟ್ಟೆಲರ ಛಂದೋಂಬುಧಿಯಲ್ಲಿ ಪಟ್ಪದಿಗಳ ಲಕ್ಷಣೋದಾಹರಣೆಗಳನ್ನೆಲ್ಲ ಕೊಡಲಾಗಿದೆ. ಆದರೆ ಪ್ರಸ್ತಾವನೆಯಲ್ಲಿ ಅವು ನಾಗವರ್ಮಕೃತವಲ್ಲವೆಂದು ಹೇಳಲಾಗಿದೆ. ಅಂಶಗಣಬದ್ಧವಾದ ಶರಪಟ್ಪದಿ ಮಾತ್ರ ನಾಗವರ್ಮಪ್ರಣೀತವೆಂದು ತಿಳಿಸಿರುತ್ತಾರೆ. ಇದಲ್ಲದೆ, ಷಟ್ ಪ್ರತ್ಯಯ ವಿಚಾರವೂ ನಾಗವರ್ಮಕೃತವಲ್ಲವೆಂದೂ ಅದು ಕೇದಾರ ಭಟ್ಟನಿಂದ ಪಡೆದುಕೊಂಡುದೆಂದೂ ಕಿಟ್ಟೆಲರು ಸಂಶೋಧಿಸಿ ಹೇಳಿರುತ್ತಾರೆ.

೧೮೭೨ ರಲ್ಲಿ ಪ್ರಾರಂಭವಾದ ಇಂಡಿಯನ್ ಎಂಟಿಕ್ವೆರಿಯಲ್ಲಿ ಕಿಟ್ಟೆಲರು ಕನ್ನಡ ಸಾಹಿತ್ಯ, ವಚನಸಾಹಿತ್ಯ, ಶಾಸನಸಾಹಿತ್ಯಗಳನ್ನು ಕುರಿತಾಗಿ, ಹದಿನೆಂಟು ಪ್ರೌಢ ಸಂಶೋಧನ ಲೇಖನಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಇವೂ ಅವರಿಂದ ಕನ್ನಡಕ್ಕಾದ ಸಂಶೋಧನೆಯ ಕೊಡುಗೆಗಾಳಗಿವೆ.

ಕನ್ನಡ ಇಂಗ್ಲೀಷ್ ನಿಘಂಟು (Kannada English Dictionary, 1894)

ಕಿಟ್ಟೆಲರ ಸಾಹಿತ್ಯಸೇವೆಗೆ ಕಳಶಪ್ರಾಯವಾದುದು ಅವರ ಕನ್ನಡ ಇಂಗ್ಲೀಷ್ ನಿಘಂಟು. ಸಂಪತ್ತುಗಳಲ್ಲಿ ಶಬ್ದಸಂಪತ್ತಿಗೆ ಇತರವಕ್ಕಿಂತ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದ ವಿವೇಕಮನಸ್ಸಿನ ಕಿಟ್ಟೆಲರು ಹೊಸ ಶಬ್ದ ಸಿಕ್ಕಿದಾಗಲೆಲ್ಲಾ ಅದರ ನಿಷ್ಪತ್ತಿಯ ಕಡೆಗೆ ಲಕ್ಷ್ಯ ಹರಿಸುತ್ತಿದ್ದರು. ೧೮೭೩ ರಲ್ಲಿ ಬಾಸೆಲ್ ಮಿಶನ್ನಿನವರು ಒಂದು ಅಧಿಕೃತ ಕನ್ನಡ ಇಂಗ್ಲಿಷ್ ಕೋಶವನ್ನು ಸಿದ್ಧಪಡಿಸಲು ಅವರಿಗೆ ಕರೆ ನೀಡಿದರು. ರೆವರೆಂಡ್ ಮೋಗ್ಲಿಂಗ್ ಅವರು ಇದಕ್ಕೆ ಪ್ರೇರಕರು. ಆಗಿನ ಆಂಗ್ಲಸರಕಾರದವರು ಇದರಲ್ಲಿ ಸಕ್ರಿಯವಾಗಿ ಆಸಕ್ತಿ ವಹಿಸಿದರು. ಮುದ್ರಣಕ್ಕೆ ಅರ್ಥಿಕಸಹಾಯ ನೀಡಿದರು. ಆಗಲೇ ಪ್ರಚಲಿತವಾಗಿದ್ದ ರೀವ್ ಅವರ ಕನ್ನಡ - ಇಂಗ್ಲೀಷ್ ನಿಘಂಟು, ತೆಲುಗು- ಇಂಗ್ಲೀಷ್, ತಮಿಳು - ಇಂಗ್ಲೀಷ್, ತುಳು - ಇಂಗ್ಲೀಷ್ ನಿಘಂಟುಗಳ ಸಹಾಯವನ್ನೂ ಪಡೆದು, ತಾವು ಸಂಗ್ರಹಿಸಿದ್ದ ಶಬ್ದರಾಶಿಯನ್ನು ಮತ್ತು ಅವರಿಗೆ ಸಹಾಯಕರಾಗಿದ್ದ ಜಿಗ್ಲರ್ ಮತ್ತು ವಸ್ತ್ರದ ಶಿವಲಿಂಗಯ್ಯನವರೂ ಕೂಡಿಸಿದ್ದ ಶಬ್ದಗಳನ್ನೂ ಸೇರಿಸಿಕೊಂಡರು. ಅಂತೂ ೧೫ ವರ್ಷಗಳ ಶ್ರಮದಿಂದ (೧೧೭೩-೧೮೮೮) ತಮ್ಮ ಈ ಶಬ್ದಕೋಶವನ್ನು ಸಿದ್ಧಮಾಡಿದರು. ಶಬ್ದಗಳೊಂದಿಗೆ ಅಯಾ ಶಬ್ದರೂಪನಿರ್ಣಯ, ಅರ್ಥನಿರ್ಣಯ, ಪ್ರಯೋಗ, ವ್ಯುತ್ಪತ್ತಿ ಮತ್ತು ಇತರ ದ್ರಾವಿಡ ಸಮಾನ ಶಬ್ದಗಳ ಅನ್ವೇಷಣೆಗಳೊಂದಿಗೆ ಬೃಹತ್ ನಿಘಂಟನ್ನು ಸಿದ್ಧಪಡಿಸಲು ೧೮ ಹಳಗನ್ನಡ ಕಾವ್ಯಗಳನ್ನೂ, ೧೮ ನಡುಗನ್ನಡ ಕೃತಿಗಳನ್ನೂ ೪ ಹೊಸಗನ್ನಡ ಗದ್ಯಕೃತಿಗಳನ್ನೂ ಅಸಂಖ್ಯಾತ ಗಾದೆಗಳನ್ನೂ, ನುಡಿಗಟ್ಟುಗಳನ್ನೂ, ಜಾನಪದ ಶಬ್ದಗಳನ್ನೂ ಬಳಸಿಕೊಂಡರು. ಸಂಸ್ಕೃತ ನಿಘಂಟುಗಳನ್ನೂ ಅನುಲಕ್ಷಿಸಿಕೊಂಡರು.

ಈ ನಡುವೆ, ಅನಾರೋಗ್ಯದಿಂದ ಸ್ವದೇಶಕ್ಕೆ ಹೋಗಿ ಅಲ್ಲಿ ೧೮೮೩ ರ ವರೆಗೆ ಇದ್ದಾಗಲೂ ಇದೇ ಕೋಶದ ಕಾರ್ಯವನ್ನು ಮುಂದುವರಿಸಿದರು. ಆ ಮೇಲೆ ಧಾರವಾಡಕ್ಕೆ

ಬಂದು, ಅಲ್ಲಿ ೧೮೯೨ ರಲ್ಲಿ ಸುಮಾರು ೭೦ ಸಾವಿರ ಶಬ್ದಗಳ ಹಸ್ತಪ್ರತಿಯನ್ನು ಸಿದ್ಧಪಡಿಸಿ, ಬಾಸೆಲ್ ಮಿಶನ್ ಅಧಿಕಾರಿಗಳಿಗೆ ಒಪ್ಪಿಸಿದರು. ಅಂತೂ ಅದು ೧೮೯೪ ರಲ್ಲಿ ಪ್ರಕಟವಾಯಿತು. ಮುದ್ರಣ ವೆಚ್ಚದ ಸ್ವಲ್ಪಭಾಗವನ್ನು ಆಗಿನ ಮೈಸೂರು ಸಂಸ್ಥಾನವೂ ನೀಡಿತು. ಇಂಡಿಯಾ ಸರಕಾರವು ಮುಂಬಯಿ, ಮದ್ರಾಸ್ ಸರಕಾರಗಳಿಗೂ ಹೈದರಾಬಾದ್ ಸಂಸ್ಥಾನಕ್ಕೂ ನಿಘಂಟಿನ ಪ್ರತಿಗಳನ್ನು ಕೊಳ್ಳುವಂತೆ ಆದೇಶ ನೀಡಿತು. ಮುಂದೆ, ಇದೇ ನಿಘಂಟನ್ನು (೧೯೬೮-೭೧) ಪ್ರೊ. ಎಂ. ಮರಿಯಪ್ಪ ಭಟ್ಟರು ಪರಿಷ್ಕೃತ ಮತ್ತು ವಿಸ್ತೃತ ಪ್ರತಿಯಾಗಿ ನಾಲ್ಕು ಸಂಪುಟಗಳಲ್ಲಿ ಸಿದ್ಧಪಡಿಸಿದುದನ್ನು ಮದ್ರಾಸ್ ವಿಶ್ವವಿದ್ಯಾಲಯವು ಪ್ರಕಟಿಸಿರುತ್ತದೆ.

ಕನ್ನಡ ನಿಘಂಟು ಜಗತ್ತಿನಲ್ಲಿ ಕಿಟ್ಟೆಲರ ಹೆಸರನ್ನು ಅಜರಾಮರಗೊಳಿಸಿರುವ ಈ ಭವ್ಯ ಸ್ಮಾರಕ ನಿಘಂಟನ್ನು ಕನ್ನಡ ಸಾಹಿತ್ಯದ ಅಥವಾ ದ್ರಾವಿಡ ಭಾಷಾಶಾಸ್ತ್ರದ ಯಾವ ವಿದ್ಯಾರ್ಥಿಯೂ ಮರೆಯಲು ಸಾಧ್ಯವಿಲ್ಲವೆಂದು ಇದರ ಸಂಪಾದಕರು ಹೇಳಿರುತ್ತಾರೆ. ಕನ್ನಡ ಭಾಷಾಶಾಸ್ತ್ರದಲ್ಲಿ, ಶಬ್ದ ಸಂಶೋಧನೆಯಲ್ಲಿ, ಶಬ್ದಗಳ ಅರ್ಥಾನ್ವೇಷಣೆಯಲ್ಲಿ ಹಾಗೂ ಕಾವ್ಯಸಾಹಿತ್ಯಗಳ ಅಧ್ಯಯನದಲ್ಲಿ ನಿರತರಾಗತಕ್ಕವರಿಗೆ ಕಿಟ್ಟೆಲರ ಕೋಶ ಒಂದು ಶಬ್ದಾರ್ಥ ಚಿಂತಾಮಣಿಯೇ ಸರಿ!

ಕನ್ನಡದ ಕಾಲಾನುಗುಣವಾದ ರೂಪವ್ಯತ್ಯಾಸಗಳನ್ನು ಪರಿಗಣಿಸುವವರಿಗೆ ಕಿಟ್ಟೆಲರ ಕಿವಿಮಾತುಗಳಿವೆ. ಸಾಮಾನ್ಯವಾಗಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ವಿಭಾಗಿಸಿಕೊಳ್ಳುವ ಕ್ರಮ ಪ್ರಚಲಿತವಾದುದು. ಅಷ್ಟೇ ಅಲ್ಲ, ಹೊಸಗನ್ನಡವನ್ನೆತ್ತಿ ಮಾತಾಡುವವರು ಹಳಗನ್ನಡ ನಮಗೆ ಬೇಕಾಗಿಲ್ಲ ಎಂಬವರೂ ಇದ್ದಾರೆ. ಅಂಥವರು ಕಿಟ್ಟೆಲರ ಮಾತುಗಳನ್ನು ಈ ನಿಘಂಟಿನಲ್ಲಿ ಓದಿಕೊಳ್ಳಬೇಕು. ಕಿಟ್ಟೆಲರು ಕಾಲ್ಡ್‌ವೆಲ್ಲರ ಹೇಳಿಕೆಯನ್ನು ಉದಾಹರಿಸಿ ಅದಕ್ಕೆ ಒತ್ತುಕೊಟ್ಟು ಹಳಗನ್ನಡದ ವಿಷಯವಾಗಿ ನಾವು ದಾರಿತಪ್ಪಬಾರದು. ಅದು ಈ ಕಾಲಕ್ಕೆ ಬೇಡ ಎಂದು ತಿಳಿಯಬಾರದು ಎನ್ನುತ್ತಾ ಹೀಗೆಂದಿದ್ದಾರೆ - "Classical Canarese is usually called Old canarese, But it may properly be regarded neither as new nor as old, but simply as the language of Canarese Literature, seeing that it is the language in which literacy compositonss seem always have been written" ಅಂದರೆ, ಅದು ಸಾಹಿತ್ಯ ಭಾಷೆ, ಲಕ್ಷಣಬದ್ಧವಾದ ಭಾಷೆ, ಮಾರ್ಗೀಯ ಭಾಷೆ ಎಂದು ನಾವು ಹಳಗನ್ನಡವನ್ನು ತಿಳಿದುಕೊಳ್ಳಬೇಕು ಎಂದಿರುವುದು ಸರಿಯಾದ ತಿಳಿವಳಿಕೆಯಾಗಿದೆ.

ಕಿಟ್ಟೆಲರ ನಿಘಂಟಿನ ಪ್ರಸ್ತಾವನೆ ಪರಿಪೂರ್ಣವಾಗಿ ಸಂಶೋಧನಸಂಪತ್ತಿನಿಂದ ತುಂಬಿದೆ; ಅಲ್ಲಿ ಬಂದಿರುವ ಮುಖ್ಯಾಂಶಗಳಿವು : ಕನ್ನಡ ಭಾಷೆಯನ್ನು ಕುರಿತು ಕೆಲವು ವಿವರಗಳು, ಈ ಶಬ್ದಕೋಶ ರಚನೆಗೆ ಆಕರಗಳು, ಈ ಕೋಶದ ರಚನಾವಿಧಾನ, ಅಕ್ಷರಮಾಲೆ ಮತ್ತು ಲಿಪ್ಯಂತರ ವಿಧಾನ, ಸಂಸ್ಕೃತಕೋಶಗಳಲ್ಲಿ ದ್ರಾವಿಡ ಶಬ್ದಗಳು (ಇಲ್ಲಿ ೪೨೦ ಶಬ್ದಗಳನ್ನು ಉದಾಹರಿಸಿ, ಅವು ದ್ರಾವಿಡ ಮೂಲದವೆಂದು ಶಬ್ದಶೋಧನೆಯನ್ನು ಮಾಡಲಾಗಿದೆ.) ದೊರೆತ ಪ್ರೋತ್ಸಾಹಗಳು

ಮತ್ತು ಸಹಾಯಗಳು, ಈ ಗ್ರಂಥದಲ್ಲಿ ತಪ್ಪುಗಳಿರಬಹುದೆಂಬ ಒಪ್ಪಿಗೆಯ ಮೂಲಕ ವಿನಯಾಭಿವ್ಯಕ್ತಿ.

ಕನ್ನಡದಲ್ಲಿ ಶಬ್ದಕೋಶರಚನೆ ಅಷ್ಟು ಸುಲಭವೇನೂ ಅಲ್ಲ. ಏಕೆಂದರೆ - ಕನ್ನಡದಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಎಂಬ ರೂಪಭೇದಗಳಲ್ಲದೆ, ಜಾನಪದ ಶಬ್ದಗಳೂ ಇವೆ. ಅವನ್ನೆಲ್ಲ ಕಲೆಹಾಕುವುದು ಸಾಮಾನ್ಯ ಸಂಗತಿಯಲ್ಲ. ಜಾನಪದದಲ್ಲಿರುವ ಗ್ರಾಮ್ಯವನ್ನು ಕೆಲಮಟ್ಟಿಗೆ ಸರಿಗನ್ನಡವಾಗಿ ಮಾಡಬೇಕಾಗಬಹುದು. ಉದಾ : ಯೇಳು, ವೋಗು, ತ್ವಾಟ, ವಸ್ತುಲು - ಇಂತಹವನ್ನು ಹೇಳು, ಹೋಗು, ತೋಟ, ಹೊಸ್ತಿಲು ಎಂದು ಸರಿಗೊಳಿಸ ಬೇಕಾಗುತ್ತದೆ. ಹಾಗೆಯೇ ಕನ್ನಡದಲ್ಲಿರುವ ಶಬ್ದಗಳೆಲ್ಲವೂ ಕನ್ನಡವಲ್ಲ. ಹಾಗೆಂದು ಅವನ್ನು ಕೈಬಿಟ್ಟರೆ, ಭಾಷಾ ಜ್ಞಾನವೂ ಆಗದು, ಸಾಹಿತ್ಯ ಜ್ಞಾನವೂ ಉಂಟಾಗದು. ಕನ್ನಡದಲ್ಲಿ ಅಚ್ಚಗನ್ನಡ ಮಾತ್ರವಲ್ಲದೆ, ಸಮಸಂಸ್ಕೃತ, ತದ್ಭವ, ಅನ್ಯದೇಶಿಶಬ್ದಗಳೂ ಇರುತ್ತವೆ. ಅವೂ ಕೋಶದಲ್ಲಿ ಇರಬೇಕಾದವೇ ಆಗಿವೆ. ಆದರೆ, ಈ ಬಗೆಯ ಶಬ್ದಜಾತಿಪರಿಜ್ಞಾನವೂ ನಿಘಂಟುವಿನ ಮೂಲಕ ಆಗುವಂತಿದ್ದರೆ, ಅದು ಉತ್ತಮ ನಿಘಂಟುವೆನಿಸುವುದು.

ಕಿಟ್ಟೆಲರು ಇದನ್ನು ಕೂಡ, ಲಕ್ಷಿಸಿರುವುದು ಕಂಡುಬರುತ್ತದೆ. ಈ ಕನ್ನಡ - ಇಂಗ್ಲೀಷ್ ನಿಘಂಟಿನಲ್ಲಿ ಅಚ್ಚಗನ್ನಡದ ಶಬ್ದಗಳನ್ನು ದಪ್ಪದ ಅಕ್ಷರಗಳಲ್ಲಿ ಕಾಣಿಸಿರುವದು ಕಂಡುಬರುತ್ತದೆ. ಉಳಿದುವಕ್ಕೆ ಸಾಮಾನ್ಯ ಮಾದರಿಯ ಅಕ್ಷರಗಳಿವೆ. ಕನ್ನಡದಲ್ಲಿ ವಿಶೇಷಾಧ್ಯಯನ ಮಾಡಬೇಕೆನ್ನುವವರಿಗೆ ಇದು ವಿಶೇಷ ಸಹಕಾರಿ. ಈ ಒಂದು ಸೌಲಭ್ಯವನ್ನು ಒದಗಿಸಿದ ವಿಧಾನವನ್ನು ಮದ್ರಾಸಿನ ಪರಿಷ್ಕೃತ ಆವೃತ್ತಿಯ ಕಿಟ್ಟೆಲ್ ನಿಘಂಟಿನಲ್ಲಿ ಏಕೆ ಕೈಬಿಟ್ಟರೋ ತಿಳಿಯದು! ಅದಕ್ಕೆ ಕಾರಣವನ್ನು ಅದರ ಸಂಪಾದಕರು ಹೇಳಿದಂತಿಲ್ಲ. ಈಚೆಗೆ ಹೊರಬಂದಿರುವ (ನಾನು ತಿಳಿದಂತೆ) ಯಾವ ಕನ್ನಡಕೋಶವೂ ಅಚ್ಚಗನ್ನಡ ಶಬ್ದಗಳಾವುವು? ಸಮಸಂಸ್ಕೃತ ಶಬ್ದಗಳಾವುವು? ಎಂಬ ಅರಿವನ್ನು ಕೋಶಾವಲೋಕನ ಮಾಡುವವರಗೆ ನೀಡುವುದರಲ್ಲಿ ಅಸಮರ್ಥವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟಿನ ಎಂಟು ಸಂಪುಟಗಳೂ ಇದಕ್ಕೆ ಅಪವಾದವಾಗಿಲ್ಲ. ಕಿಟ್ಟೆಲರು ತಮ್ಮ ಕನ್ನಡ - ಇಂಗ್ಲೀಷ್ ಕೋಶ ರಚನೆಯಲ್ಲಿ ತೊಡಗಿಸಿಕೊಂಡಿದ್ದ ಸಂಶೋಧನ ಪ್ರಜ್ಞೆ ಅಸಾಮಾನ್ಯವಾದುದೆಂದು ಇದರಿಂದ ವಿದಿತವಾಗುವುದು.

☐

೬

ಕನ್ನಡ ಕವಿಗಳು ಕಂಡ ಶ್ರೀಕೃಷ್ಣಜನ್ಮ

ಶ್ರೀ ಕೃಷ್ಣ ಚಾರಿತ್ರವನ್ನು ವಸ್ತುವಾಗಿಟ್ಟು ಕಾವ್ಯಗಳನ್ನು ರಚಿಸಿದ ಕನ್ನಡ ಕವಿಗಳಲ್ಲಿ ಎರಡು ಪಂಗಡಗಳಿವೆ. ಅವುಗಳಲ್ಲಿ ಮೊದಲಿಗರು ಜೈನರು. ಮತ್ತಿನವರು ವೈಷ್ಣವರು. ಜೈನ ಕೃಷ್ಣ ಚಾರಿತ್ರಕ್ಕೆ ಮೂಲ-ಜಿನಸೇನರ ಹರಿವಂಶ ಪುರಾಣ ಮತ್ತು ಗುಣಭದ್ರಾಚಾರ್ಯರ ಉತ್ತರ ಪುರಾಣದಲ್ಲಿ ಬರುವ ನೇಮಿನಾಥ ಚರಿತ್ರೆ. ಈ ಗ್ರಂಥಗಳು ಕ್ರಿ.ಶಕ ಎಂಟನೆಯ ಮತ್ತು ಒಂಬತ್ತನೆಯ ಶತಮಾನದಲ್ಲಿ ರಚಿತವಾದುವು. ವೈಷ್ಣವ ಕವಿಗಳ ಕಾವ್ಯವಸ್ತು ವಿಷ್ಣುಪುರಾಣ, ಭಾಗವತ ಪುರಾಣಗಳಿಂದ ಆಯ್ದುದು. ಜೈನ ಕಾವ್ಯಗಳ ಕೃಷ್ಣಕಥೆ ನೇಮಿನಾಥನ ಕಥೆಯ ಭಾಗ. ಪರಮಪುರುಷನಾದ ನೇಮಿನಾಥನೇ ಅಲ್ಲಿ ಕಾವ್ಯನಾಯಕ. ನೇಮಿನಾಥನ ಕಕ್ಕನ ಮಗ ಕೃಷ್ಣ. ಕೃಷ್ಣನು ಏಳನೆಯ ಜನ್ಮದಲ್ಲಿ ಬಂದ ವಾಸುದೇವನು. ಪ್ರತಿವಾಸುದೇವನಾದ ಜರಾಸಂಧನನ್ನು ಕೊಲುವಾತನು ಅವನೇ. ಹಿಂಸಾಪ್ರವೃತ್ತನೆಂಬ ದೃಷ್ಟಿಯಿಂದಲೇ ಇರಬಹುದು. ಕೃಷ್ಣ ಚರಿತ್ರೆಗೆ ಇಲ್ಲಿ ಅಷ್ಟೊಂದು ಪಾವಿತ್ರ್ಯವೂ ಇಲ್ಲ. ಪೂಜ್ಯತೆಯೂ ಇಲ್ಲ. ಆದರೆ ವಿಷ್ಣುಪಾರಮ್ಯವನ್ನೇ ಒಪ್ಪುವ ವೈಷ್ಣವ ದೃಷ್ಟಿಗೆ ಕೃಷ್ಣನು ಮಹಾವಿಷ್ಣುವಿನ ಎಂಟನೆಯ ಅವತಾರಿ. ದುಷ್ಟನಿಗ್ರಹ, ಶಿಷ್ಟಾನುಗ್ರಹ, ಧರ್ಮಸ್ಥಾಪನೆಗಳಿಗಾಗಿ ನರಜನ್ಮವೆತ್ತಿ ಬಂದವನು, ಪುರುಷೋತ್ತಮನು. ಭೂಭಾರಚ್ಛೇದಕನು. ಈ ಹಿನ್ನೆಲೆಯಿಂದ ಜೈನೇತರ ಕವಿಗಳು ಕೃಷ್ಣ ಕಥೆಯನ್ನು ಕಾವ್ಯವಾಗಿ ಬರೆದಿದ್ದಾರೆ.

ಜೈನಕವಿ ಪ್ರಣೀತವಾಗಿ ಕೃಷ್ಣ ಚರಿತ್ರೆಯಿಂದ ಕೂಡಿದ ನೇಮಿನಾಥಪುರಾಣ, ಹರಿವಂಶ, ಭಾರತ ಮುಂತಾದ ಗ್ರಂಥಗಳು ಕನ್ನಡದಲ್ಲಿ ಸುಮಾರು ಹತ್ತರಷ್ಟಿವೆ. ಅವುಗಳಲ್ಲಿ ನೇಮಿಚಂದ್ರನ (೧೧೭೦) ಅರ್ಧನೇಮಿಪುರಾಣವನ್ನು ಇಲ್ಲಿ ಲಕ್ಷ್ಯವಾಗಿಟ್ಟುಕೊಂಡಿದೆ. ವೈಷ್ಣವ ಕಾವ್ಯಗಳಲ್ಲಿ ರುದ್ರಭಟ್ಟನ (೧೧೮೦) ಜಗನ್ನಾಥವಿಜಯ (ಚಂಪು) ಮತ್ತು ಸದಾನಂದಮುನಿವರನ (ನಿತ್ಯಾತ್ಮಶುಕಯೋಗಿಯ) ಭಾಗವತ ದಶಮಸ್ಕಂಧ ಇವು ಮುಖ್ಯವಾದುವು. ಕೃಷ್ಣಜನ್ಮವನ್ನು ವರ್ಣಿಸಿರುವ ಬಗೆಯಲ್ಲಿ ಈ ಎರಡು ಸಂಪ್ರದಾಯಗಳೊಳಗೆ ಹೆಚ್ಚು ಹೋಲಿಕೆಗಳೂ ಕೆಲವು ವ್ಯತ್ಯಾಸಗಳೂ ಕಾಣಿಸುತ್ತವೆ.

ಜೈನ ಕೃಷ್ಣಜನ್ಮ ವೃತ್ತಾಂತ

ನೇಮಿ ಪುರಾಣದಲ್ಲಿ ಹೇಳುವಂತೆ ಮಧುರೆಯ ರಾಜನಾದ ಉಗ್ರಸೇನನ ಅಣ್ಣನಾದ

ದೇವಸೇನನ ಮಗ ಕಂಸ. ಕಂಸನ ತಂಗಿ ದೇವಕಿ. ದುಷ್ಟ ಕಂಸನು ಉಗ್ರಸೇನನನ್ನು ಸೆರೆಯಲ್ಲಿಟ್ಟು ಆಳುತ್ತಿದ್ದ. ತಂಗಿಯನ್ನು ವಸುದೇವನಿಗಿತ್ತು ಮದುವೆ ಮಾಡಿಸಿದ. ಒಮ್ಮೆ ಅತಿಮುಕ್ತಕರೆಂಬ ಮುನಿಗಳು ಚರಿಗೆಗೆ ಬಂದಾಗ ಕಂಸನ ಹೆಂಡತಿ ಜೀವಂಜಸೆ (ಜರಾಸಂಧನ ಮಗಳು) ಎಂಬವಳು ಅವರನ್ನು ಹೀಯಾಳಿಸಿದುದರಿಂದ ರೇಗಿ ಅವರು ಹೀಗೆ ಶಾಪ ಕೊಡುವರು -

"ಜೀವಂಜಸೆ, ದುರ್ಧರಯು
ದ್ಧಾವನಿಯೊಳ್ ನಿನ್ನ ಗಂಡನಂ ತಂದೆಯುಮಂ
ದೇವಕಿಗೆ ಪುಟ್ಟದಾತನೆ
ದೇವರ್ ಕಾದೊಡಮಳುರ್ತು ಕೊಲ್ಲದೆ ಮಾಣಂ" ॥

ಕಂಸನು ಈ ಶಾಪವನ್ನು ಬಂಜೆಯೆಸಗುವುದಕ್ಕಾಗಿ ವಸುದೇವ ದೇವಕಿಯರನ್ನು ಸೆರೆಯಲ್ಲಿಟ್ಟು ಆಕೆ ಪಡೆದ ಮಕ್ಕಳನ್ನು ಒಂದೊಂದಾಗಿ ಕೊಲ್ಲುವನು. ಆದರೆ, ನೈಗಮದೇವನು ಆ ಮಕ್ಕಳನ್ನು ಮೊದಲಾಗಿ ಕೊಂಡೊಯ್ದು, ಮಾಯಾಶಿಶುಗಳನ್ನು ತಂದಿಡುತ್ತಿದ್ದುದರಿಂದ ಕಂಸನು ಕೊಲ್ಲುವ ಶಿಶುಗಳು ನಿಜವಾದ ಶಿಶುಗಳಲ್ಲ. ಮುಂದೆ ಕಂಸನಿಗೆ ಮೃತ್ಯು ಮೂಡುವಂತೆ ದೇವಕಿಗೆ ಗರ್ಭಚಿಹ್ನ ಮೂಡಿ, ಭಾದ್ರಪದ ಮಾಸದ ಕೃಷ್ಣ ಪಕ್ಷದ ಅಷ್ಟಮಿಯ ಅರ್ಧರಾತ್ರಿಯಲ್ಲಿ ಕೃಷ್ಣಜನ್ಮವಾಗುವುದು. ಆ ಶಿಶುವನ್ನು ಉಳಿಸುವುದಕ್ಕಾಗಿ ವಸುದೇವನು ಕೊಂಡೊಯ್ಯಲು ಅಣಿಯಾದಾಗ, ನಾಗೇಂದ್ರನು (ಬಲರಾಮನು) ಓಲೆಯ ಕೊಡೆ ಹಿಡಿದುಕೊಂಡು ಜತೆಗೆ ಬರುವನು. ಕೃಷ್ಣನ ಪಾದದ ಬೆರಲಿನ ಸ್ಪರ್ಶದಿಂದ ಸೆರೆಮನೆಯ ಕದಗಳು ತೆರೆಯುವವು. ಹೊರಗಿನಿಂದ ಒಂದು ವೃಷಭವು ತನ್ನ ಎರಡು ಕೋಡುಗಳಲ್ಲಿ ಸೊಡರನ್ನು ಹೊತ್ತುಕೊಂಡು ಕೆಲೆಯುತ್ತ , ದಾರಿ ತೋರುವವನಂತೆ ಮುಂದುವರಿಯುವುದು. ತುಂಬಿ ಹರಿಯುವ ಯಮುನೆಯ ನೀರ ಮೇಲೆ, ನಡೆದುಕೊಂಡೇ ಇವರು ದಾಟುವರು. ದಡದಾಚೆ ಗೋಕುಲವನ್ನು ತೋರಿಸಿ ಎತ್ತು ಅದೃಶ್ಯವಾಗುವುದು. ವಸುದೇವ ಬಲರಾಮರು ಶಿಶುಸಮೇತ ಅಲ್ಲಿನ ದೇವತೆಯ ಗುಡಿಗೆ ಹೋಗುವರು. ಅದೇ ಹೊತ್ತಿಗೆ ಗೋಕುಲದ ಕಡೆಯಿಂದ ನಂದನು ಒಂದು ಹೆಣ್ಣು ಶಿಶುವನ್ನು ತಂದು ದೇವತೆಯೊಡನೆ ಹೀಗೆನ್ನುವನು - "ಗಂಡುಮಗುವನ್ನು ಬಯಸಿದ ನನ್ನ ಮಡದಿಗೆ ಹೆಣ್ಣುಮಗುವನ್ನೇಕೆ ಕೊಟ್ಟೆ? ಇದು ನಿನಗೇ ಇರಲಿ. ನೀನು ಹೆಣ್ಣಾಗಿರುವುದರಿಂದ ಹೆಣ್ಣನ್ನೇ ಕೊಡುವೆ. ಗಂಡನ್ನು ಕದ್ದು ತರುವ ಹೆಣ್ಣು ನಿನಗೇ ಇರಲಿ. ನನ್ನ ಹೆಂಡತಿ ಕೊಟ್ಟಿರುವ ಹರಕೆಯನ್ನು ಹಿಂದಕ್ಕೆ ಕೊಡು. ಕೊಡದಿದ್ದರೆ ಕಲ್ಲಿನಿಂದ ನಿನ್ನ ನೆತ್ತಿಗೆ ಹೊಡೆಯುವೆನು. ತುರುಗಾರ್ತಿಯರಿಂದ ಸುಲಿಗೆಮಾಡಿ ನುಂಗಿದುದನ್ನೆಲ್ಲ ಮೂಗು ಬಾಯಿಗಳಿಂದ ಕಾರಿಸುವೆನು" ಎಂದು ಮೀಸೆಕಡಿದು ನಂದನು ತಾನು ತಂದ ಹೆಣ್ಣುಮಗುವನ್ನು ಕೆಳಗಿರಿಸುವನು. ವಸುದೇವನು ಅವನಿಗೆ ಗಂಡುಮಗುವನ್ನು ಕೊಡಲು, ನಂದನು ದೇವತೆಯೇ ಹೆದರಿ ಕೊಟ್ಟುದೆಂದು ತಿಳಿದು ಸಂತೋಷದಿಂದ ಆ ಮಗುವನ್ನು ಒಯ್ದು ಯಶೋದೆಗೆ ಕೊಡುವನು. ವಸುದೇವ ಬಲರಾಮರು ಆ ಹೆಣ್ಣುಮಗುವನ್ನು ತಂದು ದೇವಕಿಯ ಮುಂದಿಕ್ಕಲು ಅದು ಅಳತೊಡಗುವುದು. ದೇವಕಿ ಹೆಣ್ಣು ಹೆತ್ತಳೆಂಬುದನ್ನು ಕೇಳಿದ ಕಂಸನು ಅಲ್ಲಿಗೆ ಬಂದು, ಈಕೆಯಿಂದ ತನಗೆ ವಿಪತ್ತು ಇಲ್ಲವೆಂದು ಆಕೆಯ ಮೂಗನ್ನೊತ್ತಿ ತೆರಳುವನು. ಆ ಹೆಣ್ಣು ಶಿಶು ತನ್ನನ್ನು ತಾನರಿತು, ವಿಂಧ್ಯೆಯನ್ನು ಹೊಕ್ಕು ವಿಂಧ್ಯಮಾನುಸ ಎಂಬ ದೇವತೆಯಾಗುವಳು. ಕೃಷ್ಣನು ನಂದಗೋಕುಲದಲ್ಲಿ ಬಳೆಯುವನು.

ವೈಷ್ಣವ ಕವಿಗಳ ಪ್ರಭೇದ :

ವೈಷ್ಣವ ಕವಿಸೃಷ್ಟಿಯಲ್ಲಿ ಶ್ರೀಮನ್ನಾರಾಯಣನ ಹತ್ತು ಅವತಾರಗಳಲ್ಲಿ ಎಂಟನೆಯದು ಕೃಷ್ಣಾವತಾರ. ದುರುಳರ ನಾಶ, ಸಜ್ಜನರ ರಕ್ಷಣೆ-ಇವು ಜನ್ಮೋದ್ದೇಶಗಳು. ಕಂಸ, ಜರಾಸಂಧ, ಶಿಶುಪಾಲ, ಕೌರವಾದಿ ದುಷ್ಟರಾಜರ ಭಾರವನ್ನು ಸಹಿಸದೆ, ಭೂದೇವಿ ಬ್ರಹ್ಮದೇವನಿಗೆ ಮೊರೆಯಿಟ್ಟುದು, ಬ್ರಹ್ಮನು ಪಾಲನಕರ್ತೃವಾದ ವಿಷ್ಣುವನ್ನು ಪ್ರಾರ್ಥಿಸಿದುದು—ಇವು ಕೃಷ್ಣಾವತಾರಕ್ಕೆ ಪ್ರೇರಣೆಗಳು. ಮಹಾವಿಷ್ಣುವಿನ ಆಜ್ಞೆಯಂತೆ ಶೇಷನು ಬಲಭದ್ರನಾಗಿಯೂ ದೇವದೇವತೆಗಳು ಗೋಪಗೋಪಿಯರಾಗಿಯೂ ಭೂಲೋಕದಲ್ಲಿ ಜನಿಸುವರು. ವೇದ, ಉಪನಿಷತ್ತುಗಳು ಗೋವೃಂದವಾಗುವುವು. ಅವನ್ನು ಕಾವ ಉದ್ಯೋಗಕ್ಕಾಗಿ ಹರಿ ಅವತರಿಸುವನು.

ಯದುವಂಶಾಭರಣನಾದ ಉಗ್ರಸೇನನ ದುಷ್ಪುತ್ರ ಕಂಸ. ಅವನ ಹೆಂಡಿರು ಅಸ್ತಿ ಪ್ರಾಸ್ತಿಯರೆಂಬ ಜರಾಸಂಧ ಪುತ್ರಿಯರಿಬ್ಬರು. ಅವನ ತಂಗಿ ದೇವಕಿ. ಆಕೆ ವಸುದೇವನ ಮಡದಿ. ಆಕೆಯ ಗರ್ಭಸಂಜಾತನಿಂದ ತನಗೆ ಮರಣವಾಗುವುದೆಂಬುದನ್ನು ಅಶರೀರವಾಣಿಯಿಂದ ತಿಳಿದ ಕಂಸನು ದೇವಕಿ ವಸುದೇವರಿಬ್ಬರನ್ನೂ ಸೆರೆಯಲ್ಲಿಡುವನು. ಆಕೆ ಹೆತ್ತ ಮಕ್ಕಳನ್ನು ಶಿಲೆಗೆ ಅಪ್ಪಳಿಸಿ ಕೊಲ್ಲುವನು. ಏಳನೆಯ ಶಿಶು ಗರ್ಭದಲ್ಲಿ ಆದಿಶೇಷನು ಬರಲು, ವಿಷ್ಣುಮಾಯೆಯು ಅವನ್ನು ನಂದ ಗೋಕುಲದಲ್ಲಿದ್ದ ರೋಹಿಣಿಯ ಗರ್ಭಕ್ಕೆ ಸ್ಥಾನಾಂತರಗೊಳಿಸುವಳು. ಅಲ್ಲಿ ಬಲರಾಮನು ಜನಿಸುವನು. ಇಲ್ಲಿ ದೇವಕಿ ಪುನಃ ಗರ್ಭಿಣಿಯಾಗಿ ಕೃಷ್ಣನನ್ನು ಪ್ರಸವಿಸುವಳು-

ನಿರುಪಮ ಶ್ರಾವಣಬಹುಳ ಬಂ
ಧುರ ಗುಣಾಷ್ಟಮಿ ರೋಹಿಣಿಯಲವ
ತರಿಸಿದನು ಸುರನಿಕರವಂಬರದೊಳಗೆ ನಲಿದಾಡೆ ॥

ಕೃಷ್ಣನು ಜನಿಸಿದಾಗ ಪೀತಾಂಬರ, ಕಿರೀಟ, ಕುಂಡಲಗಳಿಂದಲೂ ಶಂಖಗದಾ ಪದ್ಮಗಳುಳ್ಳ ಚತುರ್ಭುಜಗಳಿಂದಲೂ ಕಾಣಿಸುವನು. ಬ್ರಹ್ಮಾದಿ ದೇವತೆಗಳು ಅವನನ್ನು ಸ್ತುತಿಸುವರು. ತನ್ನನ್ನು ಗೋಕುಲಕ್ಕೆ ಆಗಲೇ ಒಯ್ದು ಅಲ್ಲಿ ನಂದ ಪತ್ನಿ ಯಶೋದೆ ಆಗ ತಾನೇ ಹೆತ್ತಿರುವ ಮಾಯೆಯನ್ನು ತರುವಂತೆ ವಸುದೇವನಿಗೆ ಸೂಚಿಸುವನು, ಆ ಮೇಲೆ ಸಾಮಾನ್ಯ ಶಿಶುರೂಪ ತಾಳುವನು.

ಸೆರೆಮನೆಯ ಕಾವಲುಗಾರರು ಗಾಢನಿದ್ರೆಯಲ್ಲಿ ಮುಳುಗಿರುವರು. ಚಂದ್ರೋದಯವಾದರೂ ಮೇಘಗಳಿಂದ ಆಕಾಶವು ಆವೃತವಾಗಿದೆ! ಮುಸಲ ಧಾರೆಯ ಮಳೆ ಸುರಿಯುತ್ತಿದೆ. ಹೇಗೆ ತೆರಳುವುದೆಂದು ಯೋಚಿಸುತ್ತ ಕೃಷ್ಣನನ್ನು ಎತ್ತಿಕೊಂಡೊಡನೆ ಬೀಗಗಳು ಬಾಗಿಲುಗಳು ತಾನಾಗಿ ತೆರೆಯುವವು. ಆದಿಶೇಷನು ಬಂದು ಫಣಾಮಣಿಯಿಂದ ಬೆಳಕುನೀಡುವನು, ಹೆಡೆಯನ್ನೇ ಕೊಡೆ ಹಿಡಿವನು. ಕಾಳಿಂದೀನದಿ ಹರಿವನ್ನೇ ನಿಲ್ಲಿಸಿ ದಾರಿಕೊಡುವುದು. "ದುರ್ವಾರ ಸಂಸಾರಸಾಗರಮಂ ದಾಂಟಿಸುವ ಮಹಾಮಹಿಮನಂ ಪೆತ್ತಂಗಿದೇಂ ಚಿತ್ರಮೇ?" ಎಂದು ಕವಿ ರುದ್ರಭಟ್ಟನು ಈ ಸನ್ನಿವೇಶವನ್ನು ಸುಂದರವಾಗಿ ಚಿತ್ರಿಸಿದ್ದಾನೆ.

ವಸುದೇವನು ಕೃಷ್ಣನನ್ನು ಎತ್ತಿಕೊಂಡು ಹೊರಟಾಗ, ದೈವಘಟಿತ ಘಟನೆಗಳನ್ನು ಭಾಗವತದಲ್ಲಿ ಹೀಗೆ ವಿವರಿಸಿದೆ -

ಕಾಲಲಿಕ್ಕಿದ ಬಿಗಿದ ಸಂಕಲೆ
ಬೀಳುಕೊಂಡುದು, ಮರೆದು ತತ್ಪುರ
ಪಾಲಕರು ನಿದ್ರೆಯಲಿ ಪರವಶರಾದರಾ ಕ್ಷಣಕೆ
ಕೀಲು ಸಡಿಲಿದ ಪೋರಣದ ಹೇ
ರಾಳ ವಜ್ರಕವಾಟ ನಿಕರದ
ಲಾಳ ಮಂಡಿಗೆಯಗುಳಿ ಸಂಕಲೆ ಕೀಲುಗಳು ಕಳೆಯೆ

ವಸುದೇವನು ಕೃಷ್ಣನನ್ನು ನಂದ ಗೋಕುಲದಲ್ಲಿಟ್ಟು, ಯಶೋದೆ ಪಡೆದ ಹೆಣ್ಣುಮಗುವನ್ನು ತಂದನಂತರ, ಬಾಗಿಲುಗಳು ಬೀಗಗಳು ತಾನಾಗಿ ಸೇರಿದುವಂತೆ. ಶಿಶುವು ಅಳುವುದನ್ನು ಕೇಳಿದ ಕಂಸನು ಅರೆನಿದ್ದೆಯಿಂದೆದ್ದು ಬಂದು ಅದರ ಹಿಂಗಾಲನ್ನು ಹಿಡಿದು ಅಪ್ಪಳಿಸುವುದರೊಳಗೆ ಅದು ಆಕಾಶಕ್ಕೆ ನೆಗೆದು ದುರ್ಗಾಸ್ವರೂಪಿಣಿಯಾಗಿ "ಎಲೋ ಕಂಸ, ನಿನ್ನನ್ನೀಗ ನಾನೇ ಕೊಲ್ಲುತ್ತಿದ್ದೆನಾದರೂ ಬಿಟ್ಟಿದ್ದೇನೆ. ನಿನ್ನನ್ನು ಕೊಲ್ಲುವುದಕ್ಕಾಗಿಯೇ ನನ್ನಣ್ಣನು ಒಂದೆಡೆ ಇದ್ದಾನೆ." ಎಂದು ಹೇಳಿ ಅದೃಶ್ಯಳಾಗುವಳು.

ಕೃಷ್ಣಜನ್ಮವೃತ್ತಾಂತದಲ್ಲಿ ಹೀಗೆ ಸ್ವಲ್ಪ ವ್ಯತ್ಯಾಸಗಳಿದ್ದರೂ ಈ ಎರಡೂ ಪ್ರಭೇದಗಳಲ್ಲಿ ಅದ್ಭುತರಮ್ಯತೆಯಿದೆ, ಆಶ್ಚರ್ಯದ ಘಟನೆಯಿದೆ, ಪವಾಡವಿದೆ. ವೈಷ್ಣವ ಕವಿಗಳು ಕೃಷ್ಣನನ್ನೇ ಕೇಂದ್ರದಲ್ಲಿಟ್ಟು ಅವನನ್ನೇ ಕಾವ್ಯನಾಯಕನನ್ನಾಗಿ ಮಾಡಿ ಭಗವಂತನ ದಿವ್ಯಮಾನುಷಲೀಲೆಯೆಂದು ಆತನ ಚರಿತ್ರೆಯನ್ನು ಕೊಂಡಾಡಿದ್ದಾರೆ. ಭಕ್ತಿಯಿಂದ ಸ್ತುತಿಸಿದ್ದಾರೆ. ಪೂಜ್ಯನನ್ನಾಗಿ ಪವಿತ್ರನನ್ನಾಗಿ ದೇವರನ್ನಾಗಿ ಕಂಡಿದ್ದಾರೆ. ಜೈನಕವಿಗಳು ಮಾತ್ರ ಕೃಷ್ಣನನ್ನು ಒಬ್ಬ ರಾಜನೆಂದು ಕಂಡರು. ಅವನಿಗೆ ಕಾವ್ಯನಾಯಕತ್ವವನ್ನು ಕೊಟ್ಟಿಲ್ಲ. ಆದುದರಿಂದಲೇ ಇರಬಹುದು - ಜೈನರ ಕೃಷ್ಣ ಚರಿತ್ರೆ ಅಷ್ಟೇನೂ ಜನಾದರವನ್ನು ಗಳಿಸಿಲ್ಲ. ಹಲವರಿಗೆ ಅದು ವಿನೂತನವೂ ಅಗ್ರಾಹ್ಯವೂ ಎನಿಸಿರುವುದುಂಟು.

□

೧೦

ಕನ್ನಡ ಮಹಾಭಾರತಗಳು

ರಾಷ್ಟ್ರೀಯವೂ ಐತಿಹಾಸಿಕವೂ ಆಗಿರುವ ಭಾರತೀಯ ಮಹಾಕಾವ್ಯಗಳಲ್ಲಿ ವಾಲ್ಮೀಕಿರಾಮಾಯಣದಂತೆಯೇ ಪ್ರಸಿದ್ಧವೂ ಲೋಕಪೂಜ್ಯವೂ ಆಗಿರುವುದು ವೇದವ್ಯಾಸರ ಮಹಾಭಾರತ. ಒಂದು ಲಕ್ಷಕ್ಕೆ ಮಿಕ್ಕಿದ ಶ್ಲೋಕಸಂಖ್ಯೆಯ ಈ ಗ್ರಂಥ ವಿಶ್ವಸಾಹಿತ್ಯದಲ್ಲೇ ಮಹೋನ್ನತವಾದ ಮೇರುಕೃತಿ. ವೇದದಲ್ಲಿ ಇಲ್ಲದುದಿಲ್ಲ, ಅದರಂತೆ ಮಹಾಭಾರತದಲ್ಲಿಯೂ ಇಲ್ಲದುದಿಲ್ಲ. ಆದುದರಿಂದಲೇ "ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ" ಎಂಬುದೂ "ಭಾರತಃ ಪಂಚಮೋ ವೇದಃ" ಎಂಬುದೂ ನಾಣ್ಣುಡಿಗಳಾಗಿ ಜನಮನದಲ್ಲಿ ಮನೆಮಾಡಿದುವು.

ಪ್ರಾಚೀನ ಜೈನಾಚಾರ್ಯರು ಮಹಾಭಾರತವನ್ನು ಬೇರೊಂದು ಕಥಾಸಂಪ್ರದಾಯದಲ್ಲಿ ರಚಿಸಿದ್ದಾರೆ. ಅವರಲ್ಲಿ ಹರಿವಂಶ ಪುರಾಣವನ್ನು ಬರೆದ (ಕ್ರಿ.ಶ.೭೮೩) ಜಿನಸೇನಾಚಾರ್ಯರೇ ಮೊದಲಿಗರು. ಇವರ ಶಿಷ್ಯರಾದ ಗುಣಭದ್ರಾಚಾರ್ಯರು (ಕ್ರಿ.ಶ. ೮೯೮) ಬರೆದ ಉತ್ತರಪುರಾಣದಲ್ಲಿ ೭೦, ೭೧,೭೨ನೆಯ ಪರ್ವಗಳಲ್ಲಿ ನೇಮಿ ತೀರ್ಥಂಕರ ಚರಿತದಲ್ಲಿ ಕೌರವ ಪಾಂಡವ ಚರಿತ್ರೆಯನ್ನು ಸಮಾವೇಶಗೊಳಿಸಿದ್ದಾರೆ. ವ್ಯಾಸರ ಮತ್ತು ಈ ಜೈನಧರ್ಮಾಚಾರ್ಯರ ಕಾವ್ಯ ವಸ್ತುಗಳಿಂದ ಕನ್ನಡದಲ್ಲಿ ಬೇರೆ ಬೇರೆ ಕಾಲದ ಮಹಾಕವಿಗಳು ಗ್ರಂಥ ರಚನೆಮಾಡಿದ್ದಾರೆ. ಹಾಗೆ ಮಾಡುವಾಗ ಕೆಲವರು ಮಹಾಭಾರತದ ಸಾಕಲ್ಯವನ್ನೂ ಇನ್ನು ಕೆಲವರು ಶಾಕಲ್ಯ (ಅಂಶ)ವನ್ನೂ ತಮ್ಮ ಕಾವ್ಯಕಥೆಯಾಗಿ ಆರಿಸಿಕೊಂಡಿದ್ದಾರೆ.

ಕನ್ನಡದ ಉಪಲಬ್ಧ ಮಹಾಕಾವ್ಯಜಗತ್ತಿನ ಮೊದಲ ಸೂರ್ಯೋದಯವು "ಪಂಪಭಾರತ". ಇದು ಆದಿಕವಿ ನಾಡೋಜ ಪಂಪನಿಂದ (ಕ್ರಿ.ಶ. ೯೪೧) ರಚಿತವಾದುದು. ಕವಿ ತಾನು ಜೈನನಾದರೂ ಜಿನಕಾವ್ಯವಾಗಿ ಇದನ್ನು ರಚಿಸದೆ ಸಕಲಾವನೀತಳ ಮೆಚ್ಚುವಂತೆ ಲೌಕಿಕಕಾವ್ಯವಾಗಿ-ಚಂಪೂಪ್ರಬಂಧವಾಗಿ ಬರೆದು ಮಾನ್ಯನಾಗಿದ್ದಾನೆ. ತನ್ನೊಡೆಯನಾದ ಅರಿಕೇಸರಿಯ ಶೌರ್ಯಸಾಹಸ ಗಳನ್ನು ವರ್ಣಿಸುವ ಉದ್ದೇಶದಿಂದ 'ವಿಕ್ರಮಾರ್ಜುನವಿಜಯ' ವೆಂದು ಪ್ರಸ್ತುತವಾದ ಅರಿಕೇಸರಿಯ ಚರಿತ್ರೆಯಲ್ಲಿ ಅಪ್ರಸ್ತುತವಾಗಿ ಅರ್ಜುನನ (ಮಹಾಭಾರತದ) ಕಥನವನ್ನು ಅನ್ವಯಿಸಿ ಬರೆದಿರುವುದರಿಂದ 'ಸಮಸ್ತಭಾರತ'ವೆಂದೂ ಈ ಕಾವ್ಯಕ್ಕೆ ಹೆಸರುಗಳಾಗಿವೆ. ಸಮಸ್ತಭಾರತವಾಗಿ ತನಗಿಂತ ಹಿಂದೆ ಯಾರೂ ಗ್ರಂಥ ರಚನೆ ಮಾಡಿಲ್ಲವೆಂದು ಪಂಡಿತರು ಆಡುತ್ತಿದ್ದಂತೆ ಪಂಪನು ಹೇಳಿರುವುದನ್ನು ನೋಡಿದರೆ ಅವನಿಗಿಂತ ಹಿಂದೆ ಹಲವರು ಕನ್ನಡ ಕವಿಗಳು ಭಾರತವನ್ನೇನೋ

ಬರೆದಿರಲೇ ಬೇಕೆಂದು ತೋರುತ್ತದೆ. ಅಂಥವರಲ್ಲಿ ನಮಗೆ ತಿಳಿದು ಬರುವುದು ಹರಿವಂಶ ಪುರಾಣವನ್ನು ಕನ್ನಡದಲ್ಲಿ ಬರೆದ ಮೊದಲನೆಯ ಗುಣವರ್ಮನು (ಕ್ರಿ.ಶ. ೯೦೦) ಒಬ್ಬನೆ. ಇವನ ಗ್ರಂಥ ಸಿಕ್ಕಿಲ್ಲ. ಇವನನ್ನೂ ಇವನ ಗ್ರಂಥವನ್ನೂ ನಾಗವರ್ಮ (೧೧೪೫), ಪಾರ್ಶ್ವಪಂಡಿತ (೧೨೦೫), ಕೇಶಿರಾಜ (೧೨೬೫) - ಇತ್ಯಾದಿ ಕವಿಗಳು ಸ್ಮರಿಸಿದ್ದಾರೆ.

ಪಂಪನ ಕಾಲದಿಂದೀಚೆಗಿನ ಮಹಾಭಾರತಗಳನ್ನೆಲ್ಲ ರಚನಾದೃಷ್ಟಿಯಿಂದ ವಸ್ತುಕ (ಚಂಪು), ಗದ್ಯ, ವರ್ಣಕ (ಹಾಡುಗಬ್ಬ) ಎಂದು ಮೂರು ವಿಧವಾಗಿ ಎಣಿಸಬಹುದು. ಕಥಾಸ್ವರೂಪ ವಿವೇಚನೆಯಿಂದ (೧) ಜೈನಧರ್ಮ ಕಾವ್ಯಗಳು (೨) ಜೈನಕವಿಕೃತ ಲೌಕಿಕ ಕಾವ್ಯಗಳು (೩) ಇತರ ಕಾವ್ಯಗಳು ಎಂದು ತ್ರಿಧಾ ವಿಭಾಗ ಮಾಡಬಹುದು. ಇವುಗಳಲ್ಲಿ ಜೈನಧರ್ಮಕಾವ್ಯಗಳೆಲ್ಲವೂ ಜಿನಸೇನ ಗುಣಭದ್ರರ ಗ್ರಂಥಗಳ 'ಉಪಜೀವಿಕೆ'ಗಳು. ಎರಡನೆಯ ವರ್ಗದ 'ಲೌಕಿಕ' ಕಾವ್ಯಗಳು ಹೆಚ್ಚಿನ ಮಟ್ಟಿಗೆ ವ್ಯಾಸಭಾರತವನ್ನೇ ಅವಲಂಬಿಸಿದ್ದರೂ ಅಲ್ಲಲ್ಲಿ ಜೈನಧರ್ಮೋಚಿತ ಮತ್ತು ಅನ್ಯ ಸಂಕಲ್ಪಿತ ಎನಿಸುವ ಪರಿಚ್ಛಾಯೆಗಳು ಇವುಗಳಲ್ಲಿರುತ್ತವೆ. ಪಂಪಭಾರತ ಮತ್ತು ಮಹಾಕವಿರನ್ನನ (ಕ್ರಿ.ಶ. ೯೯೩) ಗದಾಯುದ್ಧ (ಚಂಪು) ಕಾವ್ಯಗಳು ಈ ವರ್ಗದವು. ಇತರ ಕಾವ್ಯಗಳು ವ್ಯಾಸಭಾರತದ ಕಥಾನುವಾದವುಳ್ಳ 'ಉಪಜೀವಿಕೆ'ಗಳು.

ಜೈನಕವಿಗಳಲ್ಲಿ ಗದ್ಯಕವಿಯಾಗಿ ಪ್ರಸಿದ್ಧನಾದ ಚಾಮುಂಡರಾಯನ (ಕ್ರಿ.ಶ. ೯೭೮) "ಚಾಮುಂಡರಾಯ ಪುರಾಣ"ದ ಅಂತರ್ಗತವಾಗಿರುವ ನೇಮಿನಾಥ ಚಾರಿತ್ರವನ್ನುಳಿದರೆ, ಆ ಮೇಲೆ ಹದಿಮೂರನೆಯ ಶತಮಾನದ ವರೆಗಣ ಜೈನ ಕವಿಗಳ ಉಪಲಬ್ಧಕಾವ್ಯಗಳು ಚಂಪುರೂಪದಲ್ಲೇ ಇವೆ. ಕರ್ಣಪಾರ್ಯನ (೧೧೪೦) ನೇಮಿನಾಥ ಪುರಾಣ, ನೇಮಿ ಚಂದ್ರನ (೧೧೭೦) ಅರ್ಧನೇಮಿಪುರಾಣ, ಬಂಧುವರ್ಮನ (೧೨೦೦) ಹರಿವಂಶಾಭ್ಯುದಯ, ಮಹಾಬಲಕವಿಯ (೧೨೫೪) ನೇಮಿನಾಥಪುರಾಣ - ಇವೆಲ್ಲ ಚಂಪೂಕಾವ್ಯಗಳು. ಮೂರನೆಯ ಮಂಗರಸನ (೧೫೦೮) 'ನೇಮಿಜಿನೇಶಸಂಗತಿ' ಸಾಂಗತ್ಯದಲ್ಲಿದೆ. ಸಾಳ್ವಕವಿಯ (೧೫೫೦) ಭಾರತವೂ ಬ್ರಹ್ಮಣಾಂಕನ (೧೮೦೦) ಜಿನಭಾರತವೆಂಬ ಪಾಂಡವ - ಕೌರವ ಚಾರಿತ್ರ್ಯವೂ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿವೆ. ಇವರಲ್ಲಿ ಬ್ರಹ್ಮಣಾಂಕನು ನೇಮಿನಾಥಚರಿತ್ರವನ್ನು ಬಿಟ್ಟು, ಮಹಾಭಾರತದ ಅಖ್ಯಾನವನ್ನಷ್ಟೆ ಜೈನಸಂಪ್ರದಾಯಕ್ಕೆ ಅನುಗುಣವಾಗಿ ಹೇಳಿರುವುದೊಂದು ವೈಶಿಷ್ಟ್ಯ.

ಜೈನ ಪೌರಾಣಿಕರ ದೃಷ್ಟಿಯಿಂದ ನೇಮಿನಾಥ ಚರಿತ್ರೆಗೂ ಭಾರತದ ಚರಿತ್ರೆಗೂ ಸಂಬಂಧವಿದೆ. ಕೃಷ್ಣನು ನೇಮಿನಾಥನ ಕಕ್ಕನ ಮಗನು. ತನ್ನ ತಂಗಿ ಸುಭದ್ರೆಯನ್ನು ಅರ್ಜುನನಿಗೂ ಮಗಳನ್ನು ಅಭಿಮನ್ಯುವಿಗೂ ಕೊಡುತ್ತಾನೆ. ನೇಮಿನಾಥನದು ಹರಿವಂಶ, ಈ ಹರಿವಂಶದವರು ಕುರುವಂಶದ ಧೃತರಾಷ್ಟ್ರ-ಪಾಂಡುರಾಜರಿಗೆ ಕನ್ಯೆಯರನ್ನು ಕೊಡುತ್ತಾರೆ. ಆದುದರಿಂದ ಕೃಷ್ಣನ ಚರಿತ್ರೆ, ನೇಮಿಸ್ವಾಮಿ ಚರಿತ್ರೆ ಮತ್ತು ಪಾಂಡವ-ಕೌರವ ಚರಿತ್ರೆ - ಈ ಮೂರು ಜೈನಭಾರತಗಳಲ್ಲಿ ಸಹಜವಾಗಿ ಬರುತ್ತವೆ. ಜೈನ ಮಹಾಭಾರತದ ವೈಶಿಷ್ಟ್ಯವನ್ನು ಸಾರುವ ಕವಿಸಾಳ್ವನ ವಾಣಿಯಿದು -

ಕೊಲಿಸಿದಾತನೆ ದೇವ, ಕೊಂದ
ಗ್ಗಳಿಕೆಯಿಂದವೆ ಪುಣ್ಯಪುರುಷರು,

ಪಲವು ಮಾತೇನ್ನೈವರೊಡವುಟ್ಟಿದರು ಸನ್ನುತರು ॥
ಲಲನೆಯೋರ್ವಳನಾಳ್ದರೆಂಬೀ
ಪೊಲೆನುಡಿಗೆ ಕಿವಿಗುಡದೆ ಸಜ್ಜನ
ರೊಲಿದು ಚಿತ್ತೈಸುವದು ಜಿನಪಾವನ ಚರಿತ್ರೆಯನು ॥

ಜೈನಕಥಾಕಾರರಿಗೆ ಒಪ್ಪಿಗೆಯಾಗದ ಮೇಲಿನ ಘಟನೆಗಳನ್ನು ಅವರು ಅಲ್ಲಗಳೆದೇ ಭಾರತದ ರಚನೆ ಮಾಡಿದ್ದಾರೆ. ಕೃಷ್ಣನು ದೇವನಲ್ಲ ಒಬ್ಬರಾಜ, ನೇಮಿನಾಥನ ಕಾಲದ ವಾಸುದೇವ. ಜರಾಸಂಧನು ಪ್ರತಿವಾಸುದೇವ. ಜರಾಸಂಧನೊಡನೆ ಕಾದಾಡಲು ಪಾಂಡವರ ಸಹಾಯ ಪಡೆಯುತ್ತಾನೆ ಕೃಷ್ಣ. ಜರಾಸಂಧನಿಗೆ ಕೌರವರು ಸಹಾಯಕರು. ಕೃಷ್ಣನು ಜರಾಸಂಧನನ್ನು ವಧಿಸುತ್ತಾನೆ. ಪಾಂಡವರು ಕೌರವರನ್ನು ಸಂಹರಿಸುತ್ತಾರೆ. ಸಂಹರಣ ಪಾಪ ಫಲದಿಂದ ಕೃಷ್ಣನು ನರಕಕ್ಕೆ ಹೋಗುತ್ತಾನೆ. ಜೈನ ಭಾರತದ ಕೃಷ್ಣ ಪಾರ್ಥಸಾರಥಿಯಲ್ಲ. ಶಂತನು ವರಿಸಿದ ಗಂಗೆ ಓರ್ವ ಗಂಧರ್ವಕನ್ಯೆ, ಬಾಲವಧೆ ಮಾಡುತ್ತಿದ್ದಿಲ್ಲ. ತನ್ನ ಮಕ್ಕಳನ್ನು ತನ್ನ ತಂದೆಗೆ ಒಪ್ಪಿಸುತ್ತಿದ್ದಳು. ಹರಿವಂಶದ ಅಂಧಕವೃಷ್ಣಿಯ ಮಗಳು ಗಾಂಧಾರಿ. ಮಥುರೆಯ ರಾಜತನೂಜೆ ಕುಂತಿ. ಕುಂತಿಗೆ ಪಾಂಡುವಿನಲ್ಲಿ ಜನಿಸಿದವ ಕರ್ಣ. ಕುಂತಿಯಿಂದ ಪರಿತ್ಯಕ್ತನಾಗಿ ಚಂಪಾನಗರದ ಸೂರ್ಯನೆಂಬ ರಾಜನು ಆತನನ್ನು ಸಲಹಿದುದರಿಂದ ಸೂರ್ಯಪುತ್ರನೆನಿಸಿದ. ಈ ಸೂರ್ಯನ ಪತ್ನಿ ರಾಧೆ. ಆದುದರಿಂದ ಕರ್ಣನು ರಾಧೇಯ. ಇವನು ಕೌರವನನ್ನು ಸನ್ಮಾರ್ಗಕ್ಕೆ ತರಲು ಯತ್ನಿಸಿದವ. ಪಾಂಡವರ ಪಕ್ಷದಿಂದ ಕೌರವನಲ್ಲಿಗೆ ಸಂಧಾನಕ್ಕೆ ಹೋದವನು ವಿಷ್ಣು, ಕೃಷ್ಣನಲ್ಲ. ದ್ರೌಪದಿಯನ್ನು ವರಿಸಿದವ ಅರ್ಜುನ. ಹೀಗೆ ಜೈನ ಭಾರತದ ಕಥಾವ್ಯತ್ಯಾಸಗಳು ವಿಪುಲ. ಆದರೆ ಧರ್ಮ, ನೀತಿ, ಸದ್ಗುಣಗಳ ಪ್ರತಿಪಾದನೆಯಲ್ಲಿ ಕಾವ್ಯಗುಣದಲ್ಲಿ ಉದಾತ್ತವಾಗಿ ಮೆರೆವವು.

ಆದಿಪಂಪನು ವ್ಯಾಸ ಮುನೀಂದ್ರನ ಭಾರತವನ್ನೇ ಅನುಸರಿಸಿ ಲೌಕಿಕಕಾವ್ಯವನ್ನು ಬರೆದೆನೆಂದರೂ ತನ್ನ ಜೈನಧರ್ಮದ ಪ್ರಭಾವ ಅದರಲ್ಲಿ ಕೆಲವೆಡೆ ಬಿದ್ದಿದೆ - ದ್ರೌಪದಿಯನ್ನು ಅರ್ಜುನನು ಮಾತ್ರ ವರಿಸಿಕೊಂಡನೆಂದು ಹೇಳಿ, ತನ್ನ ಹೇಳಿಕೆಯನ್ನು ಉಳಿಸಲು ಯತ್ನಿಸಿದ್ದಾನೆ. ಆದರೆ, ಮುಂದೆ ಕೀಚಕನ ವಧೆಯಲ್ಲಿ ದ್ರೌಪದಿಯನ್ನು ಭೀಮನ ಮಡದಿಯೆಂಬಂತೆ ಚಿತ್ರಿಸಬೇಕಾಗಿ ಬಂದಿದೆ ಅವನಿಗೆ. ಜೈನಪುರಾಣಗಳಲ್ಲಿ ಇರುವಂತೆ ಕರ್ಣನನ್ನು ಉದಾತ್ತಗೊಳಿಸಿ 'ಕರ್ಣರಸಾಯನಮಲ್ತೆ ಭಾರತಂ'. ಎಂದಿದ್ದಾನೆ. 'ಚಲದೊಳ್ದುರ್ಯೋಧನಂ...' ಇತ್ಯಾದಿಯಾಗಿ ಭಾರತದಲ್ಲಿ ಮಿಗಿಲೆನಿಸಿದವರನ್ನು ಹೇಳುವಾಗ, ಕೃಷ್ಣನಿಗೆ ಸ್ಥಾನವನ್ನೇ ಕೊಟ್ಟಿಲ್ಲ. ಪಂಪನ ಮಾರ್ಗವನ್ನೇ ಹಿಡಿದು 'ಸಾಹಸಭೀಮವಿಜಯ' ಎಂಬ 'ಗದಾಯುದ್ಧ' ಕಾವ್ಯವನ್ನು ಬರೆದ ಮಹಾಕವಿ ರನ್ನನು ಕೌರವನನ್ನು ಮೆಚ್ಚಿ ಹೊಗಳಿದ್ದಾನೆ. ಅವನ ಮೂಲಕ ಕರ್ಣನ ಗುಣಗಾನಮಾಡಿದ್ದಾನೆ. ತನ್ನ ಆಶ್ರಯದಾತನಾದ ಸತ್ಯಾಶ್ರಯ ಇರಿವ ಬೆಡಂಗನನ್ನು ಅನಿಲಜನಿಗೆ ಹೋಲಿಸಿ ಬರೆದು, ಕೊನೆಗೆ ಭೀಮನಿಗೇ ಪಟ್ಟಬಂಧವನ್ನು ಮಾಡಿದ್ದಾನೆ. ಸಿಂಹಾವಲೋಕನ ಕ್ರಮದಿಂದ ಭಾರತದ ಕಥೆಯೆಲ್ಲವನ್ನೂ ಹೇಳಿದ್ದಾನೆ.

ವ್ಯಾಸಭಾರತವನ್ನೇ ಅನುಸರಿಸಿ ಕನ್ನಡದಲ್ಲಿ ಮಹಾಭಾರತ ಬರೆದವರಲ್ಲಿ, ಶ್ರೀ ಕೃಷ್ಣನಿಗೇ ಪಾರಮ್ಯವನ್ನು ಇತ್ತವರಲ್ಲಿ, ಈಗ ತಿಳಿದಿರುವಂತೆ ಮೊದಲಿಗನು ಕುಮಾರವ್ಯಾಸನೆಂಬ ಬಿರುದನ್ನು ತಾಳಿದ ಗದುಗಿನ ನಾರಣಪ್ಪನು (ಕ್ರಿ.ಶ. ೧೪೩೫). ಇವನು ಗದುಗಿನ ವೀರನಾರಾಯಣನ ಭಕ್ತ ಕವಿ. ಇವನ ಗ್ರಂಥಕ್ಕೆ ಭಾರತ ಕಥಾಮಂಜರಿ, ಕುಮಾರವ್ಯಾಸ ಭಾರತ, ಗದುಗಿನ ಭಾರತ, ದಶಪರ್ವಭಾರತ - ಎಂಬ ಹೆಸರುಗಳಾಗಿವೆ. ಅತ್ಯಂತ ಜನಪ್ರಿಯವಾದ ಮಹಾಭಾರತವಿದು. ಕವಿ ತನ್ನ ಕಾವ್ಯ ಪೀಠಿಕೆಯಲ್ಲಿ ತಿಂತಿಣಿಯ 'ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ'. ಎಂದಿದ್ದಾನೆ. ಇದರಿಂದ ಅವನ ಕಾಲದಲ್ಲಿ ರಾಮಾಯಣಗಳು ಹಲವಾರಿದ್ದುವೆಂದೂ ಮಹಾಭಾರತಗಳು ಮಾತ್ರ (ವ್ಯಾಸಭಾರತವನ್ನು ನೇರವಾಗಿ ಅನುಸರಿಸಿದವು) ಇರಲಿಲ್ಲವೇನೋ ಎಂದು ತೋರುತ್ತದೆ. ಆದುದರಿಂದಲೇ ಇವನು ಮೊದಲ ಕವಿಯಿರಬಹುದು. ತನ್ನ ಕಾವ್ಯವನ್ನು ಇವನು 'ಕೃಷ್ಣಕಥೆ' ಎಂದಿದ್ದಾನೆ.

ಕುಮಾರವ್ಯಾಸನು ಹತ್ತುಪರ್ವಗಳನ್ನು ಮಾತ್ರ ಬರೆದುದರಿಂದ ಉಳಿದ ಎಂಟು ಪರ್ವಗಳನ್ನು ವಿಜಯನಗರದ ಕೃಷ್ಣದೇವರಾಯನ ಅಪ್ಪಣೆಯಂತೆ ತಿಮ್ಮಣ್ಣಕವಿ (೧೫೧೫) ಭಾಮಿನಿಷಟ್ಪದಿಯಲ್ಲಿ ಬರೆದಿದ್ದಾನೆ. ಈ ಗ್ರಂಥಕ್ಕೆ ಕೃಷ್ಣರಾಜ ಭಾರತವೆಂದೂ ಅಷ್ಟ ಪರ್ವ ಭಾರತವೆಂದೂ ಹೆಸರು. ಕ್ರಿ.ಶ. ೧೫೩೦ರಲ್ಲಿದ್ದ ಚಾಟುವಿಠಲನಾಥನು (ಭಾಗವತಕವಿ) ಒಂದು ಭಾರತವನ್ನು ಬರೆದನೆಂಬ ಹೇಳಿಕೆಯಿದೆ. ಆ ಭಾರತದಲ್ಲಿ ಈಗ ಪೌಲೋಮ, ಆಸ್ತಿಕ ಎಂಬೆರಡು ಪರ್ವಗಳು ಮಾತ್ರ (ಭಾಮಿನಿಷಟ್ಪದಿಯಲ್ಲಿ) ದೊರೆಯುತ್ತವೆ. ಚನ್ನಬಸವ ದೇವನೆಂಬ ಕವಿ (೧೪೬೦) ಬರೆದ ರುದ್ರಭಾರತದ ಹಸ್ತಪ್ರತಿ ಮೈಸೂರಿನ ಪ್ರಾಕ್ತನ ಸಂಶೋಧನ ಸಂಸ್ಥೆಯಲ್ಲಿದೆಯಂತೆ. ಇನ್ನಿತರ ಮಹಾಭಾರತ ಕವಿಕಾವ್ಯಗಳನ್ನು ಹೇಳುವುದಾದರೆ, ಶ್ರೀನಿವಾಸ ಕವಿ (೧೭೦೦) ಭಾರತದ ಸ್ತ್ರೀ ಪರ್ವವನ್ನೂ ಲಕ್ಷ್ಮಕವಿ (೧೭೪೩) ವಾರ್ಧಕಷಟ್ಪದಿಯಲ್ಲಿ ಭಾರತದ ಎಂಟು ಪರ್ವಗಳನ್ನೂ ಕಳಲೆನಂಜರಾಜನು (೧೭೮೦) ಭಾರತವನ್ನೂ ಸುಕುಮಾರ ಭಾರತಿಕವಿ (೧೫೫೦) ಛಾಯಣ ಭಾರತವನ್ನೂ ಗೋಪಕವಿ ಚಿತ್ರಭಾರತವನ್ನೂ ಪರಮದೇವಾಂಕನು (೧೭೭೭) ವಾರ್ಧಕಷಟ್ಪದಿಯಲ್ಲಿ ಹದಿನೆಂಟು ಪರ್ವಗಳಾಗಿ ತುರಂಗ ಭಾರತವನ್ನೂ ರಚಿಸಿರುವುದು ಕಂಡುಬರುತ್ತದೆ.

ಭಾರತದ ಕಥಾಂಶಗಳನ್ನೊಳಗೊಂಡ ಕಾವ್ಯಗಳಾಗಿ, ಧರ್ಮರಾಯನ ರಾಜಸೂಯ ಯಾಗದ ಘಟನೆಯನ್ನೊಳಗೊಂಡ ಜಗನ್ನಾಥವಿಜಯ ಚಂಪೂಕಾವ್ಯ (ರುದ್ರಭಟ್ಟಕೃತ - ೧೧೮೦), ಲಕ್ಷ್ಮೀಶನ ಜೈಮಿನಿಭಾರತ, ಕೋಸುಯ್ಯಕವಿಯ (೧೬೭೦) ಗಯಚರಿತ್ರೆ (ಭಾಮಿನಿ ಷಟ್ಪದಿ), ಲಿಂಗರಾಜ ಅರಸರ ಗಯೋಪಾಖ್ಯಾನ (ಚಂಪು), ಷಡಕ್ಷರದೇವನ (೧೬೫೫) ಶಬರಶಂಕರ ವಿಳಾಸ (ಚಂಪು). ಪಂಡಿತ ಜಯರಾಯಾಚಾರ್ಯರ ವೇಣೀಸಂಹಾರನಾಟಕ (ಸಂಸ್ಕೃತದ ಅನುವಾದ), ಕೆ.ಪಿ. ಕೃಷ್ಣಭಟ್ಟರ (೧೯೫೩) 'ಕರ್ಣರಸಾಯನಂ' ಎಂಬ ಪಂಪಭಾರತದ ಕರ್ಣಚರಿತ್ರೆಯನ್ನು ಪರಿಶೋಧಿಸಿ ಸವಗ್ರಾಸವನ್ನಾಗಿ ವಿಭಾಗಿಸಿ ಬರೆದಿರುವ "ಯಥಾರ್ಥಬೋಧಿನಿ" ಎಂಬ ವ್ಯಾಖ್ಯಾನ, ಟಿ. ಕೇಶವಭಟ್ಟರ 'ಸತ್ತ್ವಾಲೋಕನಂ' ಎಂಬ

ಚಂಪೂಕಾವ್ಯ (೧೯೫೯) ಇವಲ್ಲದೆ ಹಲವಾರು ಯಕ್ಷಗಾನ ಪ್ರಸಂಗಗಳೂ ಗಣನೀಯವಾಗಿವೆ. ಇವೆಲ್ಲವೂ ಗದ್ಯೇತರ (ಪದ್ಯ, ಚಂಪು, ನಾಟಕ) ಗ್ರಂಥಗಳು. ಗದ್ಯಗ್ರಂಥಗಳೂ ಹಲವಿವೆ- ಚಿಕ್ಕದೇವ ರಾಜಭಾರತವೆಂಬ (೧೭ನೆಯ ಶತಮಾನ) ಉತ್ತರ ಪರ್ವಗಳ ಟೀಕೆಯನ್ನೊಳಗೊಂಡ ಭಾರತ, ಮಧ್ವಾಚಾರ್ಯಕೃತ ಭಾರತತಾತ್ಪರ್ಯ ನಿರ್ಣಯಕ್ಕೆ ವಾದಿರಾಜರು (೧೫೭೦) ಬರೆದಿರುವ ಕನ್ನಡ ವ್ಯಾಖ್ಯಾನ, ಜಕ್ಕಭೂಪಾಲನ (೧೬೨೦) ಭಾರತ ಕಥಾಸಂಗ್ರಹ, ಮುಮ್ಮಡಿ ಕೃಷ್ಣರಾಜರ (೧೮೬೮) 'ಕೃಷ್ಣರಾಜ ವಾಣೀವಿಲಾಸ ಭಾರತ', ಅಳಸಿಂಗಾಚಾರ್ಯರ 'ಶ್ರೀಮನ್ಮಹಾಭಾರತವೂ ಕರ್ಣಾಟಕ ವಚನವೂ', ಗಳಗನಾಥರ (೧೯೩೩) 'ಮಹಾಭಾರತಾಮೃತ', ಎ.ಆರ್. ಕೃಷ್ಣಶಾಸ್ತ್ರಿಗಳ (೧೯೫೦) 'ವಚನಭಾರತ', ಎಲ್. ಗುಂಡಪ್ಪನವರು ಕನ್ನಡಿಸಿರುವ (೧೯೫೧) 'ವ್ಯಾಸರ ಔತಣ' (ಮೂಲಕರ್ತೃ - ಸಿ. ರಾಜಗೋಪಾಲಾಚಾರಿಯವರು), ಮಾಸ್ತಿಯವರ 'ಭಾರತತೀರ್ಥ', ಭಾರತ ಬಿಂದೂರಾಯರ 'ಭಾರತ ಸಾರೋದ್ಧಾರ' (೧೯೫೪) - ಇವೆಲ್ಲವೂ ವ್ಯಾಸಭಾರತವನ್ನೋ ಕುಮಾರವ್ಯಾಸ ಭಾರತವನ್ನೋ ಅನುಸರಿಸಿ ರಚಿತವಾದುವು. ಇವಲ್ಲದೆ ಬಾಲಕರಿಗಾಗಿಯೂ ಮಹಾಭಾರತದ ರಚನೆಗಳಾಗಿವೆ.

ಹೀಗೆ ಸುಮಾರು ನಲುವತ್ತರಷ್ಟು ಮಹಾಭಾರತದ ಗದ್ಯ, ಪದ್ಯ, ಚಂಪು, ನಾಟಕ ಗ್ರಂಥಗಳು ಇಂದಿಗೆ ಕನ್ನಡದಲ್ಲಿವೆ. ಇವುಗಳಲ್ಲೆಲ್ಲ ಪಂಪಭಾರತವು ಪ್ರೌಢವಾಗಿ ಅದ್ವಿತೀಯವಾಗಿ ವಿದ್ವಜ್ಜನಮಾನ್ಯವಾಗಿದೆ. ಕುಮಾರವ್ಯಾಸ ಭಾರತವು ಜನಸಾಮಾನ್ಯರ ಮೆಚ್ಚುಗೆಯನ್ನು ಗಳಿಸಿದೆ. ಪದ್ಯವನ್ನೋದಿ ತಿಳಿಯಲಾರದ ಇತರರಿಗೆ ಹೊಸಗನ್ನಡದ ಗದ್ಯದಲ್ಲಿರುವ ಮಹಾಭಾರತಗಳು ಹಿಡಿಸುತ್ತವೆ. ಪಂಪ ನಾರಣಪ್ಪರಿಬ್ಬರು ಮಾತ್ರ ಭಾರತ ಕಾವ್ಯಗಳ ಸೂರ್ಯಚಂದ್ರರಾಗಿ ಸಾಹಿತ್ಯ ಜಗತ್ತಿಗೆ ಬೆಳಕು ಕೊಡುತ್ತಿದ್ದಾರೆ. ಧರ್ಮ, ರಾಷ್ಟ್ರಸಂಸ್ಕೃತಿ, ಉನ್ನತ ಸಾಮಾಜಿಕ ಗುಣಗಳು, ಸದಸದ್ವಿವೇಕ—ಇವನ್ನು ಪ್ರಚೋದಿಸುವ ರಸೋತ್ಪಾದಕ ಸನ್ನಿವೇಶಗಳು, ಪಂಡಿತ ಪಾಮರರನ್ನು ರಂಜಿಸುವ ಉದಾತ್ತವರ್ಣನೆಗಳು, ಇವುಗಳಿಂದ ಕೂಡಿದ ಈ ಭಾರತ ಗ್ರಂಥಗಳು ಚಿರಂತನ ಸಾಹಿತ್ಯಸಂಪತ್ತುಗಳು. ಇವುಗಳ ಪಠನ - ಪಾಠನಗಳಿಂದ ಜನಜೀವನವೂ ಸುಧಾರಿಸಿ, ಸಂಸ್ಕೃತಿ ಸ್ರೋತವು ನಿರಂತರ ಪ್ರವಹಿಸುವುದರಲ್ಲಿ ಸಂದೇಹವಿರದು.

□

೧೧

ಕನ್ನಡಕ್ಕೆ ಅತಿಶಯದ ಕಲೆ - ಗಮಕ

ಭಾಗ - ೧

ಭಾಷೆ ಮತ್ತು ಸಾಹಿತ್ಯ ಎಂಬಿವು ಮಾನವನ ಸರ್ವೋನ್ನತಿ ಸಾಧಕಗಳಾದ ಐಹಿಕ ಸಂಪತ್ತುಗಳು. ಇವಕ್ಕೆ ಅನ್ಯೋನ್ಯಾಶ್ರಯವಿದೆ. ಇವುಗಳಲ್ಲಿ ಸಾಹಿತ್ಯವು ಶ್ರೇಷ್ಠವಾದ ಮಾನಸಿಕ ಬೌದ್ಧಿಕ ಕಲೆ. ಇವುಗಳೊಂದಿಗೆ ಸೇರಿಕೊಂಡಿರುವ ಅಥವಾ ಇವುಗಳಿಂದಲೇ ಅರಳಿರುವ ಇನ್ನೊಂದು ಪ್ರಸಿದ್ಧ ಹಾಗೂ ರಂಜಕ ಕಲೆ ಸಂಗೀತ. ಸಂಗೀತವು ಕನ್ನಡಕ್ಕೆ ಹೆಚ್ಚು ಒಲಿದು ಎರಕಗೊಂಡು ಮೆರೆವ ಕಲೆಯಾಗಿದೆ. ಅದು ಇತರ ಭಾಷಾ ಸಾಹಿತ್ಯಗಳಿಗೆ ಕೂಡ ಒಲಿಯುವುದಾದರೂ ಅದರ ಒಲವು, ನಂಟು ಕನ್ನಡಕ್ಕೆ ಹೆಚ್ಚು ಸಹಜ. ಆದುದರಿಂದಲೇ ಸಂಗೀತದಲ್ಲಿ ದಕ್ಷಿಣಾದಿ ಪ್ರಭೇದವನ್ನು 'ಕರ್ಣಾಟಕ ಸಂಗೀತ' ಎಂದೇ ಕರೆಯುವರು. ಗಾನ, ವಾದನ, ನೃತ್ಯಗಳನ್ನೊಳಗೊಂಡ ಸಂಗೀತದ ಪ್ರಯೋಗ ಇತರ ಭಾಷಾ ಸಾಹಿತ್ಯಗಳೊಂದಿಗೆ ಮಿಳಿತವಾದಾಗಲೂ ಅದರ ಹೆಸರು 'ಕರ್ಣಾಟಕ ಸಂಗೀತ' ಎಂದೇ ಆಗಿರುತ್ತದೆ. ಅದರಂತೆ, ಗಮಕ ಕಲೆ ಕೂಡ ಕನ್ನಡ ಪದ್ಯಸಾಹಿತ್ಯವನ್ನು ತೆಕ್ಕೆಗೆ ಆಯ್ದುಕೊಂಡಿರುವಷ್ಟು ಇತರ ಭಾಷೆಯ ಸಾಹಿತ್ಯವನ್ನು ಸ್ವೀಕರಿಸಿಲ್ಲ. ಆದುದರಿಂದ ಗಮಕವು ಕನ್ನಡಕ್ಕೆ ಅತಿಶಯದ ಕಲೆ ಎಂದೆನಿಸಿದೆ.

'ಅತಿಶಯ' ಎಂಬುದಕ್ಕೆ ಹೆಚ್ಚು, ಹೆಚ್ಚಳ, ಶ್ರೇಷ್ಠ, ವೈಶಿಷ್ಟ್ಯ ಎಂಬ ಅರ್ಥಗಳೊಂದಿಗೆ 'ಅಸಾಧಾರಣ ಮಹತ್ವ' ಎಂಬ ಅರ್ಥವೂ ಇದೆ. ಕವಿರಾಜಮಾರ್ಗದಲ್ಲಿ (ಕ್ರಿ.ಶ. ೮೬೦) ಕನ್ನಡದ ಪದ್ಯರಚನೆಗೆ ವಿಶಿಷ್ಟವಾಗಿ ದ್ವಿತೀಯಾಕ್ಷರ ಪ್ರಾಸವನ್ನು ಹೇಳುವಲ್ಲಿ ಹೀಗೆನ್ನಲಾಗಿದೆ-

ನುತ ಶಬ್ದಾಲಂಕಾರದೊ
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ (೨-೩೦)

ಈ ಹೇಳಿಕೆಯ ಪ್ರಕಾರ, ಕನ್ನಡಕ್ಕೆ - ಅಂದರೆ ಕನ್ನಡದ ಯಾವುದೇ ಛಂದೋರೂಪದ ಪದ್ಯಕ್ಕೆ ದ್ವಿತೀಯಾಕ್ಷರ ಪ್ರಾಸ 'ಸತತ' - ಅಂದರೆ ಎಂದೆಂದೂ ಇರತಕ್ಕುದು, ಕಡ್ಡಾಯವಾದುದು. ಸರ್ವಥಾ ತ್ಯಾಜ್ಯವಲ್ಲ. ಹೀಗಿದ್ದರೂ ಆಧುನಿಕರು ದ್ವಿತೀಯಾಕ್ಷರಪ್ರಾಸವನ್ನೇ ಹೇಯವಾಗಿ ಎಣಿಸಿ, ಅದನ್ನು ತ್ಯಜಿಸುತ್ತಿರುವರಲ್ಲ ಎಂಬ ಆಕ್ಷೇಪ ಉದ್ಭವಿಸಬಹುದು. ಹೌದು, ಪ್ರಾಸತ್ಯಾಗವೆಂಬ ರೋಗವನ್ನೆ ಆರೋಗ್ಯವೆಂದು, ದೋಷವನ್ನೇ ಗುಣವೆಂದು

ಪರಿಭಾವಿಸುತ್ತಿರುವುದನ್ನು ಕನ್ನಡದ ದುರ್ದೈವವೆಂದು ಅಥವಾ ಕನ್ನಡ ಕವಿಗಳ ಆತ್ಮಘಾತಕ ಬುದ್ಧಿಯ ಪ್ರದರ್ಶನವೆಂದು ಹೇಳದೆ ವಿಧಿಯಿಲ್ಲ !

'ಗಮಕ' ಎಂಬುದು ಹಲವು ಬಗೆಯ ಅರ್ಥವುಳ್ಳುದಾಗಿದೆ. ಸಂಗೀತ ಶಾಸ್ತ್ರದಲ್ಲಿ ಹೇಳಿರುವಂತೆ ಗಾಯಕನ ಬಗೆ ಬಗೆಯ ಸ್ವರಸಂಚಾರವೇ ಗಮಕ. ಅದು ಹತ್ತು ವಿಧ -

ಆರೋಹಮವರೋಹಂ ಚ ಢಾಲು ಸ್ಫುರಿತ ಕಂಪಿತಾಃ
ಆಹತಃ ಪ್ರತ್ಯಾಹತಶ್ಚ ತ್ರಿಪುಚ್ಛಾಂದೋಲ ಮೂರ್ಛನಾಃ

(ಅಭಿನವ ಭರತಾರ್ಥ ಸಂಗ್ರಹದಲ್ಲಿ ಹೇಳಿರುವಂತೆ, ಸಂಗೀತದ ಗಮಕ ಏಳು ವಿಧ. ಸಂಗೀತ ರತ್ನಾಕರದ ಪ್ರಕಾರ, ಅದು ಹದಿನೈದು ವಿಧ.)

ಈ ವಿವರದಿಂದ ಸಂಗೀತಶಾಸ್ತ್ರದ ಗಮಕ ಕಾವ್ಯವಾಚನಕಲೆಯಲ್ಲ. ಅದು ಗಾನಕಲೆ; ರಾಗಾಲಾಪನೆಗೆ ಸಂಬಂಧಿಸಿದುದು. ಗಮಕ ಎಂಬುದಕ್ಕೆ ಸಂದರ್ಭಾನುಗುಣವಾಗಿ ಹಲವು ಅರ್ಥಗಳಿವೆ - ಬೋಧಿಸುವ, ನಡೆಯಿಸುವ, ತಿಳಿಸುವ - ಎಂಬರ್ಥಗಳಲ್ಲದೆ, ಗತ್ತು, ಠೀವಿ, ಎಂಬ ಅರ್ಥಗಳೂ ಇವೆ. ಭವಭೂತಿಯ ಮಾಲತೀ ಮಾಧವದಲ್ಲಿ ವಾಕ್‌ಪ್ರೌಢಿಮೆ, ಉದಾರತೆ (ಪದಗಳು ನರ್ತಿಸುವಂತಿರುವ ಪ್ರೌಢರಚನೆ) ಹಾಗೂ ಅರ್ಥಗೌರವವನ್ನು 'ಗಮಕ' ಎನ್ನಲಾಗಿದೆ. ನಮಗಿಲ್ಲಿ ಪ್ರಸ್ತುತವಾದುದು ವಾಚನಕಲೆಯಾಗಿ. ಅದರಲ್ಲಿಯೂ ಪದ್ಯವಾಚನಕಲೆಯಾಗಿ. ಇಂತಹ ಗಮಕಕ್ಕೆ ಆಂಗ್ಲಭಾಷೆಯ ಪದ್ಯ ಎಂದೂ ಒಪ್ಪಲಾರದು. ಸಂಸ್ಕೃತ, ಹಿಂದೀಭಾಷೆಗಳು ಕೆಲಮಟ್ಟಿಗೆ ಮಾತ್ರ ಅಳವಡಬಹುದು. ಸುವ್ಯಕ್ತವಾಗಿ, ಸುಭಗವಾಗಿ ಗಮಕಕ್ಕೆ ಅಳವಡುವ ಭಾಷಾಸಾಹಿತ್ಯ ಕನ್ನಡವೇ ಸರಿ. ಇದಕ್ಕೆ ಕಾರಣವೇನು ? ಎಂಬುದು ಸಮೀಕ್ಷಿಸತಕ್ಕ ಸಂಗತಿಯಾಗಿದೆ.

ಕನ್ನಡಕ್ಕೆ ಹಲವಾರು ಅತಿಶಯಗಳು (ಅಸಾಧಾರಣ ಲಕ್ಷಣಗಳು) ಇವೆ. ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಕನ್ನಡದ ಒಂಬತ್ತು ಅಸಾಧಾರಣ ಲಕ್ಷಣಗಳನ್ನು ಹೇಳಿದ್ದಾನೆ -

ಗಮಕಸಮಾಸದಿಂ. ರಳಕುಳ ಕ್ಷಳದಿಂ, ಶ್ರುತಿಸಹ್ಯ ಸಂಧಿಯಿಂ,
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ, ಸಮಸಂಸ್ಕೃತೋಕ್ತಿಯಿಂ
ವ ಮ ಹ ಪ ಭೇದದಿಂ, ವಿರಹಿತಾವ್ಯಯ ಸಂಸ್ಕೃತಲಿಂಗದಿಂ, ಪದೋ
ತ್ತಮಶಿಥಿಲತ್ವದಿಂ, ಯತಿವಿಲಂಘನದಿಂದರಿದಲ್ತೆ ಕನ್ನಡಂ

ಈ ಒಂಬತ್ತು ವಿಶೇಷ ಲಕ್ಷಣಗಳಲ್ಲಿ ಗಮಕ ಕಲೆಗೆ ಮೆರುಗನ್ನು ಕೊಡುವುವಾಗಿ ಮೂರನ್ನು ತೆಗೆದುಕೊಳ್ಳಬಹುದು - ಗಮಕಸಮಾಸ, ಶ್ರುತಿಸಹ್ಯಸಂಧಿ, ಮತ್ತು ಯತಿವಿಲಂಘನ ಇವೇ ಆ ಮೂರು. ಗಮಕಸಮಾಸವನ್ನುಳಿದ ಸಮಾಸಗಳು ಸಾಮಾನ್ಯವಾಗಿ ಪದವೈರೂಪ್ಯವನ್ನು ತಾಳುತ್ತವೆ. ಇದರಿಂದ ಅರ್ಥಬೋಧೆಗೆ ತೊಡಕಾಗುವುದು. ಆದರೆ ಗಮಕಸಮಾಸದಲ್ಲಿ ಇಂತಹ ತೊಡಕಿಲ್ಲ. ಸಂಖ್ಯೆ, ಸರ್ವನಾಮ, ಕೃತ್ತು, ಗುಣವಚನಗಳು ಪೂರ್ವ ಪದವಾಗಿದ್ದರೂ ಸಮಾಸವಾಗುವಾಗ ಮಾರ್ಪಾಡಿಲ್ಲದಿರುವುದರಿಂದ ಅರ್ಥ ಸುಲಭವಾಗಿರುತ್ತದೆ. ಆದುದರಿಂದ ಗಮಕಸಮಾಸವು

ಗಮಕ ಕಲೆಗೆ ಪೋಷಕವಾಗುತ್ತದೆ. ಕನ್ನಡದಲ್ಲಿ ಸಂಧಿಯು ಶ್ರುತಿಸಹ್ಯವಾಗಿರಬೇಕೆಂಬ ನಿಯಮವು ಗಮಕ ಕಲೆಗೆ ಅನುಗುಣವಾದ ವಿಚಾರವೇ ಆಗುತ್ತದೆ. ಯತಿವಿಲಂಘನೆಯೆಂಬುದು ಸಂಸ್ಕೃತದಲ್ಲಿ ದೋಷಕರ. ಆದರೆ, ಕನ್ನಡದಲ್ಲಿ ಖಂಡಪ್ರಾಸವೆಂಬುದು ದೇಸಿಯಾಗಿದ್ದು, ಅದನ್ನು ಬಳಸುತ್ತಾ ಯತಿಯನ್ನು ಮೀರಲಾಗಿದೆ. ಅರ್ಥಯತಿಯನ್ನು ಅನುಸರಿಸಲಾಗಿದೆ. ಇದರಿಂದ ಕನ್ನಡ ಪದ-ಪದ್ಯಗಳ ಸೊಬಗು ಹೆಚ್ಚಾಗಿದೆ. ಸಾಮಾನ್ಯವಾಗಿ ಪದ್ಯಗಳಿಗೆಲ್ಲ ಪಾದಾಂತವು ಯತಿಸ್ಥಾನ. ಆದರೆ, ಕನ್ನಡ ಪದ್ಯಗಳ ಪಾದಾಂತ್ಯದಲ್ಲೆಲ್ಲ ಯತಿಯಿದೆಯೆಂದು ನಿಲ್ಲಿಸಿದರೆ, ಸಾಹಿತ್ಯವೇ ಕೆಟ್ಟು ಗಮಕಕ್ಕೆ ಭಂಗವುಂಟಾಗುವುದು. ಉದಾಹರಣೆಗಾಗಿ ಕುಮಾರವ್ಯಾಸ ಭಾರತದ ಮೊದಲ ಪದ್ಯವನ್ನು ನೋಡಿ -

ಶ್ರೀ ವನಿತೆಯರಸನೆ ವಿಮಲರಾ
ಜೀವಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರ

ಇದನ್ನೋದುವಾಗ, ಇಲ್ಲವೆ ಗಮಕದಲ್ಲಿ ಹಾಡುವಾಗ, ಪಾದಾಂತ್ಯಗಳಲ್ಲಿ ನಿಲ್ಲಿಸಕೂಡದು. ಅರ್ಥಾನುಗುಣವಾಗಿ - ಶ್ರೀ ವನಿತೆಯರಸನೆ, ವಿಮಲ ರಾಜೀವಪೀಠನ ಪಿತನೆ, ಜಗಕತಿ ಪಾವನನೆ, ಸನಕಾದಿ ಸಜ್ಜನನಿಕರದಾತಾರ - ಎಂದು ನಿಲ್ಲಿಸಿಕೊಂಡು ಉಚ್ಚಾರಣೆ ಮಾಡಬೇಕು. ಇದರಿಂದ ಯತಿವಿಲಂಘನೆಯಾಗುವುದಾದರೂ ಅದು ದೋಷಹೀನ, ಗುಣಯುಕ್ತವೆನಿಸುವುದು.

ಕನ್ನಡದಲ್ಲಿ ದ್ವಿತೀಯಾಕ್ಷರ ಪ್ರಾಸದ ಅನುಸರಣೆ ಗಮಕಕ್ಕೆ ಪೋಷಕವೆಂಬುದನ್ನು ಹಿಂದೆ ತಿಳಿಸಲಾಗಿದೆ. ಆದುದರಿಂದಲೇ ಇರಬಹುದು ಹಿಂದಿನ ಕವಿಗಳೂ ಲಾಕ್ಷಣಿಕರೂ ಪ್ರಾಸವನ್ನು ಅನಿವಾರ್ಯವೆಂದೇ ಹೇಳಿದ್ದಾರೆ - 'ಕವಿಜಿಹ್ವಾಬಂಧನ' ದಲ್ಲಿ ಉಕ್ತವಾಗಿರುವುದಿದು -

ಉಸಿರಳಿದ ತನುವವೊಲ್ ಭಾ
ವಿಸಲುಂ ಪ್ರಾಸಿಲ್ಲದಿರ್ಪ ಪದ ಪದ್ಯಂಗಳ್
ಒಸೆದದನು ಪೇಳೆ ಕೇಳಿದ
ರಸಿಕರ್ಗಾಯುಷ್ಯ ಮಾನ ಹಾನಿಗಳಕ್ಕುಂ

ಪ್ರಾಸಿಲ್ಲದ ಪದ - ಪದ್ಯ ಸತ್ತ ಹಾಗೆಯೇ ಸರಿ ಎಂದು ಅಭಿಪ್ರಾಯ. ಜಾನಪದ ಕವಿ ಸರ್ವಜ್ಞನ ಅಭಿಪ್ರಾಯ ಹೀಗಿದೆ -

ಪ್ರಾಸಿಲ್ಲದಕ್ಕರವ । ತಾಸು ಹಾಡಿದರೇನು
ಸಾಸಿವೆ ಸುಣ್ಣ ಹದಮಾಡಿ - ಕಣ್ಣಿಂಗೆ
ಪೂಸಿಕೊಂಡಂತೆ - ಸರ್ವಜ್ಞ

ಕನ್ನಡಕ್ಕೆ ಅಸಾಧಾರಣ ಲಕ್ಷಣವೆನಿಸುವ ದ್ವಿತೀಯಾಕ್ಷರ ಪ್ರಾಸವುಳ್ಳ ಪದ್ಯಗಳು ಗಮಕ ಕಲೆಯನ್ನು ಹೆಚ್ಚಿನ ಮಟ್ಟಿಗೆ ಆಕರ್ಷಿಸುತ್ತವೆ ಎಂಬುದು ನಿರ್ವಿವಾದ.

ಆದಿಕವಿ ವಾಲ್ಮೀಕಿ ಪ್ರಣೀತವಾದ ರಾಮಾಯಣವನ್ನು ಕುಶೀಲವರಾದ (ಒಳ್ಳೆಯ ಗಾಯಕರಾದ) ಕುಶಲವರು ವಾಚೋವಿಧೇಯವಾಗಿ ಮಾಡಿಕೊಂಡು ವಾಲ್ಮೀಕಿ ಮಹರ್ಷಿ

ಹೇಳಿಕೊಟ್ಟಂತೆ (ಗಮಕ ಕಲೆಗನುಗುಣವಾಗಿ) ಹಾಡಿದರು - ಎಂಬ ವಿವರವು ಉತ್ತರಕಾಂಡದಲ್ಲಿ ಬರುತ್ತದೆ. ರಾಮಾಯಣ ಸಮಗ್ರವಾಗಿ ಇರುವುದು ಅನುಷ್ಟುಪ್ ಶ್ಲೋಕರೂಪದಲ್ಲಿ. ಇದೇ ಕಾವ್ಯ, ವಿವಿಧ ಛಂದಸ್ಸುಗಳಲ್ಲಿರುತ್ತಿದ್ದರೆ, ಶ್ರೋತೃರಂಜನೆ ಇನ್ನೂ ಹೆಚ್ಚುತ್ತಿತ್ತಲ್ಲವೆ? ಇಂತಹ ಯೋಗ್ಯತೆ ಕನ್ನಡ ಸಾಹಿತ್ಯಕ್ಕಿದೆ. ಕನ್ನಡದಲ್ಲಿ ಶ್ಲೋಕಕಾವ್ಯಗಳಿಲ್ಲ. ವೃತ್ತ, ಕಂದ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ ಮುಂತಾದ ಬಗೆಬಗೆಯ ಛಂದೋಬಂಧಗಳಿವೆ. ಇವಲ್ಲದೆ, ತಾಳಬದ್ಧವಾದ ಛಂದಸ್ಸಿನ ದಾಸರ ಪದಗಳು, ಯಕ್ಷಗಾನ ಪದಗಳು ಸಮೃದ್ಧವಾಗಿಯೇ ಇವೆ.ಕನ್ನಡ ಕಾವ್ಯಗಳ ವಾಚನದೊಂದಿಗೆ ವ್ಯಾಖ್ಯಾನಮಾಡುವುದೂ ರೂಢಿವಡೆದಿದೆ. ಕನ್ನಡಕ್ಕೆ ಅಸಾಮಾನ್ಯ ಲಕ್ಷಣವನ್ನು ಉಂಟುಮಾಡುವಲ್ಲಿ ಗಮಕ ಕಲೆಯ ವಿಶೇಷ ಪಾತ್ರವಿದೆ ಎಂಬುದು ವಿದಿತವಾಗುವುದು.

ಕನ್ನಡದ ಭಾಷಾಲಕ್ಷಣವೇ ವೈಶಿಷ್ಟಪೂರ್ಣವಾಗಿದ್ದು ಇದು ಗಮಕ ಕಲೆಯನ್ನು ಬರಸೆಳೆಯುವಂತಿದೆ. 'ಕನ್ನಡಂ ಕತ್ತುರಿಯಲ್ತೆ ' ಎಂಬ ಮಾತು ಕವಿ ಮುದ್ದಣನದು. ಕಸ್ತೂರಿಯ ಕರಡಿಗೆ ಸ್ವಲ್ಪ ತೆರೆದಿದ್ದರೆ ಸಾಕು, ಅದರ ಸುವಾಸನೆ ಸುತ್ತಲೂ ಹರಡಿ ಚೇತೋಹಾರಿಯಾಗುವುದು. ಕನ್ನಡ ಎಂಬುದನ್ನು 'ಕಮ್ಮಿತು + ನಾಡು' ಅಂದರೆ ಗಂಧವೃಕ್ಷಗಳಿಂದ ಪರಿಮಳಿಸುವ ನಾಡು ಎಂಬ ಅರ್ಥದಿಂದ ಬಂದಿದೆ ಎಂತಲೂ ಹೇಳುತ್ತಾರೆ. ಇದು ಸುವಾಸನೆಯ ಅರ್ಥವುಳ್ಳದೇ ಆಗಿದೆ. 'ಕರು + ನಾಡು' ಎಂದೂ ವಿಂಗಡಿಸಿ, ಎತ್ತರವಾದ ನಾಡು, ಹಿರಿಮೆಯುಳ್ಳ ನಾಡು ಎಂದೂ ಕನ್ನಡದ ಹಾಗೂ ಕನ್ನಡ ಸಾಹಿತ್ಯದ ಮತ್ತು ಕನ್ನಡಿಗರ ಹೆಚ್ಚಳವನ್ನು ವಿವರಿಸುತ್ತಾರೆ. ಕನ್ನಡ ಎಂಬುದರ ಸಂಸ್ಕೃತ ರೂಪ ಕರ್ಣಾಟ ಅಥವಾ ಕರ್ಣಾಟಕ. ಇದರ ವ್ಯುತ್ಪತ್ತಿಯನ್ನು ಕರ್ಣೇ + ಅಟತಿ ಅಂದರೆ ನಾದಮಾಧುರ್ಯದಿಂದ ಕಿವಿಯಲ್ಲಿ ಸಂಚರಿಸುವಂತಹದು. ಅರ್ಥಾತ್, ಕಿವಿಗೆ ಇಂಪಾದುದು ಎಂದು ವಿದ್ವಾಂಸರು ವಿವರಿಸಿರುತ್ತಾರೆ. ಕನ್ನಡ ಎಂಬುದು ಒಂದು ಮಹಾಭಾಷೆಯೆಂದೂ ಅಷ್ಟಾದಶ ಮಹಾಭಾಷೆಗಳಲ್ಲಿ ಒಂದೆಂದೂ ಭಟ್ಟಾಕಲಂಕನು ತನ್ನ ಶಬ್ದಾನುಶಾಸನ ಎಂಬ ವ್ಯಾಕರಣ ಗ್ರಂಥದಲ್ಲಿ ಹೇಳಿರುತ್ತಾನೆ. ಕರ್ಣಾಟಕ ಮತ್ತು ಸಂಸ್ಕೃತ ಎಂಬ ಉಭಯಭಾಷೆಗಳ ಶಬ್ದ ಸಾಗರವನ್ನೇ ದಾಟಿದವನಾದ ಈತನು ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ರಚಿಸಿದುದು ಮಾತ್ರವಲ್ಲದೆ, ಕನ್ನಡವು ಸಂಸ್ಕೃತಕ್ಕಿಂತಲೂ ಶ್ರೇಷ್ಠವೆಂದು ಹೀಗೆ ತಿಳಿಸಿರುತ್ತಾನೆ -

'ಸರಸ ಪರಿಷತ್ ಪ್ರೌಢ ರೂಢ ವಿದ್ವತ್ಕವೀನಾಂ ಪೂರ್ಣಂ ಕರ್ಣಾಟನೇನ ತೂರ್ಣಂ ಚೇತಶ್ಚಮ ತ್ಕಾರಕಾರಿಣೀ ಕಾರ್ಣಾಟಕ್ಯೇವ ಗೀರ್ನಾನ್ಯಾ'. ಅಂದರೆ ರಸಿಕರ ಸಭೆಯಲ್ಲಿ ಪ್ರೌಢರಾಗಿ ಪ್ರಖ್ಯಾತರಾದ ವಿದ್ವತ್ಕವಿಗಳ ಕಿವಿಗಳಲ್ಲಿ ಪೂರ್ಣವಾಗಿ ತುಂಬಿ ಸಂಚರಿಸುತ್ತ ಮನಸ್ಸಿಗೆ ಚಮತ್ಕಾರವನ್ನು ಬೀರುವ ಭಾಷೆ ಕನ್ನಡವೇ. ಬೇರೆ ಯಾವುದೂ (ಸಂಸ್ಕೃತ ಕೂಡ) ಅಲ್ಲ - ಎಂದು ಹೇಳಿರುವುದು ಲಕ್ಷ್ಯಾರ್ಹವಾಗಿದೆ. ಶ್ರೀನಾಥನೆಂಬ ತೆಲುಗು ಕವಿ - 'ನಾ ಕವಿತ್ವಂಬು ನಿಜಮು ಕರ್ಣಾಟ ಭಾಷ' ಅಂದರೆ, ನನ್ನ ಕವಿತೆಯ ಭಾಷೆ ಕನ್ನಡ - ಎಂದಿದ್ದಾನೆ. ಅವನು ಬರೆದಿರುವುದು ತೆಲುಗಿನಲ್ಲಿ; ಕನ್ನಡದಲ್ಲಲ್ಲ. ತನ್ನ ಕಾವ್ಯವು ಶಬ್ದ, ಅರ್ಥ, ರಸ, ಭಾವಗಳಲ್ಲಿ ಸಮುನ್ನತವಾದುದು ಎಂಬ ಅರ್ಥದಲ್ಲಿ ಅವನು ಈ ಮಾತನ್ನು ಹೇಳಿದುದಾಗಿರುತ್ತದೆ. ಕನ್ನಡದ

ಈ ಶ್ರೇಷ್ಠತೆಗಳು ಗಮಕ ಕಲೆಯನ್ನು ತನ್ನಲ್ಲಿ ಅಳವಡಿಸಿಕೊಳ್ಳಲು ಕಾರಣಗಳಾಗುತ್ತವೆ ಭಾಷಾಲಕ್ಷಣದ ದೃಷ್ಟಿಯಿಂದ ಇನ್ನೊಂದು ಪ್ರಮುಖಲಕ್ಷಣವೂ ಕನ್ನಡಕ್ಕಿದೆ -

ಕನ್ನಡವು ಸಂಸ್ಕೃತದಂತೆ ಧ್ವನಿಯುಕ್ತ ಭಾಷೆಯಾಗಿದೆ. (Phonetic Language) ಅಂದರೆ ಇದು ಬರೆದಂತೆಯೇ ಅಕ್ಷರೋಚ್ಚಾರಣೆ ಮಾಡಿ ಓದಿಕೊಳ್ಳುವ ಭಾಷೆಯಾಗಿದೆ. ಇತರ ಹಲವಾರು ಭಾಷೆಗಳಿಗೆ ಬರೆಹಕ್ಕೆ ತಕ್ಕಂತೆ ಉಚ್ಚಾರಣೆ ಇರುವುದಿಲ್ಲ. ಇಂಗ್ಲಿಷಿನಲ್ಲಂತೂ ಶಬ್ದೋಚ್ಚಾರಕ್ಕೆ ಯಾವ ನಿಯಮವೂ ಕಾಣುವುದಿಲ್ಲ. ಉದಾ : ವರ್ಷ ಎಂಬ ಅರ್ಥದ ಈಯರ್ (Year) ಕಿವಿ ಎಂಬರ್ಥದ ಈಯರ್ (Ear) ಶಬ್ದಾಕ್ಷರವ್ಯತ್ಯಾಸವುಳ್ಳುದು. ಪಿಯುಟಿ (Put) ಇದನ್ನು ಪುಟ್ ಎಂದು ಉಚ್ಚರಿಸಬೇಕು. ಆದರೆ ಸಿಯುಟಿ (Cut) ಕುಟ್ ಎನ್ನುವಂತಿಲ್ಲ. ಇದನ್ನು ಕಟ್ ಎಂದು ಉಚ್ಚರಿಸತಕ್ಕದ್ದು. ಇಂತಹ ಉದಾಹರಣೆಗಳು ಎಷ್ಟೂ ಇವೆ. ಆದುದರಿಂದಲೇ ಇಂಗ್ಲಿಷ್ ಪದ್ಯಕ್ಕೆ ಗಮಕಕಲೆಯನ್ನು ಬಳಸಲು ಸಾಧ್ಯವಿಲ್ಲ. ಹಿಂದೀ ಭಾಷೆ ಕೂಡ ಇಂತಹ ಉಚ್ಚಾರಣೆಯ ತೊಡಕಿನಿಂದ ಕೂಡಿದೆ : ಪಢನಾ (ಓದುವಿಕೆ) ಇದರ ಉಚ್ಚಾರಣೆ ಪಢ್ನಾ ಎಂದಿರುತ್ತದೆ. ಪುಸ್ತಕ ಎಂದು ಬರೆದಿದ್ದರೆ ಅದರ ಉಚ್ಚಾರಣೆ 'ಪುಸ್ತಕ್' ಎಂದು. 'ಸತ್ಯವಾಗಿ' ಎಂಬ ಅರ್ಥದಲ್ಲಿರುವ 'ಸಚಮುಚ' ಎಂಬುದನ್ನು 'ಸಚ್‌ಮುಚ್' ಎನ್ನಬೇಕು. ಇಂತಹ ಎಷ್ಟು ಉದಾಹರಣೆಗಳೂ ಇವೆ. ಅಂತೂ ಇಂತಹ ಭಾಷೆಗಳಲ್ಲಿ ಬರೆಯುವುದೊಂದು, ಓದುವುದೊಂದು. ಕನ್ನಡದಂತೆಯೇ ದ್ರಾವಿಡಭಾಷಾವರ್ಗದ ತಮಿಳಿನಲ್ಲಿ ವರ್ಗಾಕ್ಷರಗಳಲ್ಲಿ ಆದಿಯ ಮತ್ತು ಅಂತ್ಯದ ಅಕ್ಷರಗಳು ಮಾತ್ರವಿರುವುದರಿಂದ ಗಾಂಧಿ ಎಂಬುದನ್ನು ಕಾಣಿಸುವ ಅಕ್ಷರಗಳು 'ಕಾಂತಿ' ಎಂಬಿವು. ಕನ್ನಡದಲ್ಲಿ ಇಂತಹ ತೊಡಕಿಲ್ಲದುದರಿಂದ ಅಕ್ಷರಾಭ್ಯಾಸವಾದರೆ ಸಾಕು, ಯಾವುದನ್ನೂ ಓದಬಹುದು. ಹೀಗೆ ಧ್ವನಿಯುಕ್ತಭಾಷೆಯಾಗಿರುವುದು ಕನ್ನಡದ ಹಿರಿಮೆಯ ಗುಣವಾಗಿದೆ. ಈ ಗುಣವು ಗಮಕಕ್ಕೆ ನಿರಾತಂಕವಾಗುವುದಲ್ಲದೆ ಹಾಡಲು ಸೊಗಸಾಗುವುದು. ಮೇಲಿನ ಕಾರಣದಿಂದಲೇ ಹಿಂದೀಪದ್ಯಗಳಿಗೆ ಗಮಕವನ್ನು ಆಳವಡಿಸಬಹುದಾದರೂ ಅಲ್ಲಿ ಮೆರೆತಕ್ಕೆ ಸಾಧ್ಯವಾಗಿಲ್ಲ.

ಕನ್ನಡದಲ್ಲಿ ಈಗಿನ ನವ್ಯವೆಂದು ಕರೆಯಿಸಿಕೊಳ್ಳುವ ಕವಿತೆಗಳನ್ನು ಬಿಟ್ಟರೆ, ಉಳಿದವಕ್ಕೆಲ್ಲ ಗತಿ, ಲಯವಿನ್ಯಾಸಗಳಿರುವುದರಿಂದ ಗಮಕಕ್ಕೆ ಅವು ಅಳವಡಲು ಸಾಧ್ಯವಿದೆ. ಕನ್ನಡದ ಸಾಹಿತ್ಯವರ್ಗದಲ್ಲಿ ಬರುವ ದಾಸ ಸಾಹಿತ್ಯ ಮತ್ತು ಯಕ್ಷಗಾನ ಸಾಹಿತ್ಯ - ಇವು ತಾಳಗತಿಗೆ ಅನುಗುಣವಾಗಿ ರಚಿತವಾಗಿರುವುದರಿಂದ ಒಂದೆಡೆ ಅರ್ಥಕ್ಕೆ ಬಾಧಕವಾಗದಂತೆ ಇನ್ನೊಂದೆಡೆ ತಾಳಲಯ ಕೆಡದಂತೆ ಗಮಕವನ್ನು ಅಳವಡಿಸುವುದೆಲ್ಲವೂ ಇವನ್ನು ಹಾಡುವವರ ಜಾಣ್ಮೆಯ ಲಕ್ಷಣವಾಗಿದೆ. ಪ್ರಯತ್ನದಿಂದ ಇದು ಸಾಧ್ಯವೆಂಬುದು ನಿಸ್ಸಂಶಯ. ಇತ್ತೀಚೆ ನಮ್ಮ ಗಮಕ ಕಲಾಪರಿಷತ್ತು ದೇವರ ನಾಮ ತರಗತಿಗಳನ್ನು ನಡೆಯಿಸುವುದು ಈ ದಿಶೆಯಲ್ಲಿ ಆವಶ್ಯಕವಾದ ಕ್ರಮವಾಗಿದೆ. ಈ ಕಾರ್ಯವನ್ನು ಯಕ್ಷಗಾನದ ಕಡೆಗೂ ಚಾಚುವುದು ಆವಶ್ಯಕ. ಇದೂ ಅಲ್ಲದೆ, ಜನಪದ ಗೀತಗಳನ್ನು ಮತ್ತು ಶೋಭನಗೀತಗಳನ್ನು (ಶೋಭಾನೆ ಹಾಡುಗಳನ್ನು) ಗಮಕದಿಂದ ಹಾಡುವ ಅಭ್ಯಾಸವೂ ಆಗಬೇಕಾಗಿದೆ. ಇದರಿಂದ ಗಮಕ ಕಲೆಯೊಂದಿಗೆ ಕನ್ನಡದ ಸಾಹಿತ್ಯ ಜ್ಞಾನಾಭಿವೃದ್ಧಿಯೂ ಆಗಿ ಮಾನವ ಕಲ್ಯಾಣವಾಗುವುದು.

ಭಾಗ - ೨

ಆಧುನಿಕ ಸಾಹಿತ್ಯ ಮತ್ತು ಗಮಕ

'ಗಮಕ' ಎಂದಾಗ, ಭಾವ- ರಸಾನುಗುಣವಾಗಿ ರಾಗಗಳನ್ನು ಅಳವಡಿಸಿ ಅರ್ಥವ್ಯಕ್ತಿಯನ್ನು ಲಕ್ಷಿಸಿ, ಶ್ರುತಿಬದ್ಧವಾಗಿ ಪದ್ಯಕಾವ್ಯವನ್ನು ವಾಚನ ಮಾಡುವುದು ಎಂಬುದು ರೂಢಾರ್ಥವಾಗಿ ಹೋಗಿದೆ. ಆದುದರಿಂದ ಅದು 'ಪದ್ಯಕಾವ್ಯ ವಾಚನ ಕಲೆ' ಅಥವಾ 'ಪದ್ಯವಾಚನ ಕಲೆ' ಎಂಬ ಅರ್ಥನಿರ್ಣಯಕ್ಕೆ ಬಂದು ಮುಟ್ಟುವಂತಾಗಿದೆ. 'ಗಮಕ' ದ ಅರ್ಥ ಇನ್ನೂ ವ್ಯಾಪಕವಾಗಿದೆ. 'ಗೊತ್ತುಪಡಿಸುವುದು' ಎಂದು ಅದರ ಅರ್ಥ. ಅದು ಓದುಗನು ತನಗಾಗಿ ಓದುವ ಓದಲ್ಲ. ಇತರರಿಗಾಗಿ, ಇತರರು ಕೇಳಬೇಕೆಂದು, ಕೇಳಿ ತಿಳಿದುಕೊಳ್ಳಬೇಕೆಂದು 'ಬಾಯ್ದೆರೆ ಓದುವ' ವಾಚನ. ಅದು 'ಕಾವ್ಯವಾಚನ ಕಲೆ' ಅಥವಾ 'ಪುಸ್ತಕವಾಚನ ಕಲೆ'. ಕಾವ್ಯ ಎಂದಾಗ ಅದರಲ್ಲಿ ಗದ್ಯ-ಪದ್ಯ-ನಾಟಕಗಳೂ ಸೇರುತ್ತವೆ. ಆದುದರಿಂದ 'ಗಮಕ' ಎಂಬುದು ಸಾಹಿತ್ಯವನ್ನು - ಅದು ಯಾವ ರೂಪದಲ್ಲೇ ಇರಲಿ, ಸಮರ್ಪಕವಾಗಿ, ಸರಿಯಾಗಿ ಓದುವ ಕಲೆ ಎಂಬುದು ಸ್ಪಷ್ಟ. ಗಮಕ ಓದಿನ ಲಕ್ಷಣದ ಕುರಿತ ಸುಭಾಷಿತವಿದು :

ಎಡರದೆ ತೊಡರದೆ ತಲೆಯಂ
ಕೊಡಹದೆ ಕಡುವಹಿಲ ಜಾಡ್ಯವೆನಿಸದೆ ರಸಮಂ
ಕೆಡಿಸದೆ ಸರ್ವರ ಚಿತ್ತ
ಕ್ಕೊಡಬಡಲೋದುವನೆ ಗಮಕಿ ಚೂಡಾರತ್ನಾ

ಓದುವಾಗ ಎಡವಿದಂತೆ ಕಾಣಬಾರದು, ಸಾಹಿತ್ಯದ ಅರ್ಥ ತಿಳಿಯದೆ ತೊಡಕಾದುಂತೆಯೂ ಕಾಣಬಾರದು. ತಲೆಯನ್ನು ಹೆಚ್ಚಾಗಿ ಅಲುಗಿಸಬಾರದು. ಅತಿವೇಗವಾಗಲೀ ಅತಿನಿಧಾನವಾಗಲೀ ಸಲ್ಲದು. ರಸವನ್ನು ಕೆಡಿಸಬಾರದು. ಶ್ರೋತೃಗಳೆಲ್ಲರ ಮನಸ್ಸಿಗೂ ಹಿಡಿಸಬೇಕು. ಹಾಗೆ ಓದುವವನೆ ಗಮಕಿ. ಇಲ್ಲಿ 'ಓದುವನೆ ಗಮಕಿ' ಎಂಬುದೇ ಪ್ರಧಾನ ವಾಕ್ಯ. 'ಹಾಡುವನೆ ಗಮಕಿ'ಎಂದು ಇಲ್ಲಿ ಹೇಳಿಲ್ಲ - ಇದರಿಂದ ಭಾವ ರಸಗರ್ಭಿತವಾಗಿ, ಅಲ್ಲಲ್ಲಿಗೆ ತಕ್ಕ ಸ್ವರಭಾರದಿಂದ ಸ್ಪಷ್ಟೋಚ್ಚಾರಣೆಯಿಂದ, ಪದಸಂದರ್ಭದ ಅರ್ಥಸೌಂದರ್ಯ ಪ್ರಕಟವಾಗುವಂತೆ, ಶ್ರುತಿ ಹಾಗೂ ರಾಗಚ್ಛಾಯೆಗಳಿಲ್ಲದೆಯೂ ಓದುವುದು ಗಮಕವೆನಿಸುವುದು. ಆದುದರಿಂದ, ಗದ್ಯವೇ ಪ್ರಧಾನವಾಗಿರುವ ಆಧುನಿಕ ಕನ್ನಡ ಸಾಹಿತ್ಯವನ್ನು ಸರಿಯಾಗಿ ಓದುವುದೂ 'ಗಮಕ' ಎನಿಸುವುದೆಂದರೆ ತಪ್ಪಲ್ಲ. ಹೀಗೆಂದಮಾತ್ರಕ್ಕೆ ಆಧುನಿಕ ಪದ್ಯಸಾಹಿತ್ಯವನ್ನು, ಲಯಬದ್ಧವಾದುವನ್ನು, ರಾಗ-ಸ್ವರ ಸಂಯೋಜನೆಯೊಂದಿಗೆ ಹಾಡಲು ಅರ್ಹವಾದುದನ್ನು, ವಿರೂಪಗೊಳಿಸಿ ಗದ್ಯದಂತೆ ಓದುವುದು ಗಮಕದ ಪೂರ್ಣಲಕ್ಷಣವಾಗದು. ಆದರೆ, ಕಥೆ, ಕಾದಂಬರಿ, ಸಂವಾದ, ಪ್ರಬಂಧ ರೂಪದ ಗದ್ಯ ಹಾಡಿದಂತಿರದೆ, ಮಾತಾಡಿದಂತೆ ಇರಬೇಕಾದುದೇ ಸರಿ.

ಆಧುನಿಕ ಪದ್ಯಗಳ ವಾಚನ

ಗಮಕಿಗಳ ಕೈಪೊಕ್ಕನಿಧಿಯೆನಿಸುವ ಹಿಂದಿನ ಚಂಪೂ, ಷಟ್ಪದಿ, ಸಾಂಗತ್ಯ ಬಂಧಗಳ ಕೃತಿಗಳು ಈ ಕಾಲದಲ್ಲಿ ರಚಿತವಾಗಿರುವುದು ತೀರಾ ಕಡಮೆ. ಹಾಗೆ ರಚಿತವಾದುವನ್ನು ಗಮಕಿಗಳು ಹಾಡಿಯೇ ಸಹೃದಯರ ಹೃದಯಕ್ಕೆ ಮುಟ್ಟಿಸಬಲ್ಲರು. ಇಂದಿನ ಪದ್ಯ ಸಾಹಿತ್ಯವನ್ನು ಕಾವ್ಯ - ಕವನ ಎಂದು ಸ್ಥೂಲವಾಗಿ ಎರಡು ವಿಧವೆನ್ನಬಹುದು. (ಈಚೆಗಂತೂ ಕವನ, ಭಾವಗೀತ ಎನ್ನಬಹುದಾದ ಪದ್ಯದ ಅಥವಾ ಪದ್ಯಗಂಧಿಯಾದ ರಚನೆಯ ತುಣುಕನ್ನು ಕೂಡ 'ಕಾವ್ಯ' ಎನ್ನುವ ಪರಿಪಾಠ ರೂಢಿಗೆ ಬರತೊಡಗಿದೆ.) ಕಾವ್ಯರಚನೆ ಕೂಡ ಈ ಕಾಲದಲ್ಲಿ ಹೊಸ ಜಾಡನ್ನು ಹಿಡಿದಿರುವುದಕ್ಕೆ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವೇ ಒಂದು ಸಾಕ್ಷಿ. ಇದಂತೂ ಶ್ರುತಿ - ರಾಗಯುಕ್ತವಾಗಿ ಪರಿಪೂರ್ಣ ಗಮಕಕ್ಕೆ ಅಳವಡುವ ರಚನೆಯೇ ಆಗಿದೆ. ಇಂತಹ ರಚನೆಯನ್ನು ಸಂಪೂರ್ಣ ಗಮಕಯುಕ್ತವಾಗಿ ವಾಚನಮಾಡುವುದು ಪರಿಣಾಮಕರವಾಗುವುದು. ಹೀಗೆ ಕಾವ್ಯ - ಮಹಾಕಾವ್ಯಗಳ ಪಂಕ್ತಿಗೆ ಸೇರುವ ಕೃತಿಗಳನ್ನು ಬಿಟ್ಟರೆ ಉಳಿದವೆಲ್ಲ 'ಕವನ' ಎಂಬ ಒಂದೇ ಹೆಸರೊಳಗೆ ಅಳವಡಬಲ್ಲವು. ರಚನಾದೃಷ್ಟಿಯಿಂದ ಆಧುನಿಕ ಕವನವನ್ನು ಲಯ ವಿನ್ಯಾಸವುಳ್ಳವು ಮತ್ತು 'ಲಯವಿನ್ಯಾಸವಿಲ್ಲದವು' ಎಂದು ವಿಂಗಡಿಸಬಹುದು. ಲಯವಿನ್ಯಾಸವುಳ್ಳವು ಶ್ರುತಿ - ರಾಗಬದ್ಧವಾಗಿ ಮಾತ್ರವಲ್ಲದೆ ತಾಳ - ವಾದನ ಯುಕ್ತವಾಗಿಯೂ ವಾಚನಕ್ಕೆ ಒಗ್ಗಿಬರುತ್ತವೆ. ಲಯವಿನ್ಯಾಸವುಳ್ಳ ಕೆಲವು ಆಯ್ದ ಪದ್ಯಗಳ ಗಮಕ ಲಕ್ಷಣವನ್ನು ಈಗ ಅವಲೋಕಿಸೋಣ-

ಭಾಮಿನಿ ಷಟ್ಪದಿಯ ಲಯ ವಿನ್ಯಾಸದಲ್ಲಿ ರಚಿತವಾದುದು ಗೋವಿನ ಕತೆ ಹಾಡು. ಇದರ ಖಂಡರೂಪವಾಗಿ ಎಷ್ಟೋ ಕವನಗಳು ರಚಿತವಾಗಿವೆ, ರಚಿತವಾಗುತ್ತಲೂ ಇವೆ. ಪಂಜೆಯವರ 'ನಾಗಣ್ಣನ ಕನ್ನಡಕ' ಎಂಬ ಕಥನ ಕವನ ಅವುಗಳಲ್ಲೊಂದು. ಅದು ಹೀಗಿದೆ.

ಓಡಿ ಬನ್ನಿರಿ ಕೂಡಿ ಬನ್ನಿರಿ ನೋಡಿರಿ ಬನ್ನಿರಿ ಗೆಳೆಯರೇ
ನೋಡಿ ನಮ್ಮಯ ಕನ್ನಡಕಗಳ ಹಾಡಿ ಹೊಗಳಿರಿ, ಗೆಳೆಯರೇ
ಹಣ್ಣು ಮುದುಕಗೆ ಚಣ್ಣ ಮಕ್ಕಳ
ಕಣ್ಣು ಕೊಡುವಾ ಕನ್ನಡಿ
ಬಣ್ಣ ಬಣ್ಣದ ಕನ್ನಡಕಗಳು
ಬೆಣ್ಣೆಯಂದದಿ ತಣ್ಣಗೆ

ಈ ಪದ್ಯಗಳು ಲಯವಿನ್ಯಾಸದಿಂದಲೂ ಅರ್ಥಪುಷ್ಟಿಯಿಂದಲೂ ಕೂಡಿ ಅಭಿನಯಗೀತ ಗಳಾಗಿವೆ. ಇಂಥವನ್ನು ಓದುವಾಗ ಅಭಿನಯವನ್ನು ಬಳಸಿದರೆ ತಪ್ಪಲ್ಲ. ಪಂಜೆಯವರ 'ಸಂಜೆಯ ಹಾಡು' ಗಮಕದ ಮಹತ್ವವುಳ್ಳದ್ದು. ಚತುರ್ಮಾತ್ರಾಗಣದ ಪದ್ಯ. ಆದರೆ ಎರಡನೆಯ ಗಣದ ಪ್ಲುತ ಸ್ವರಿತ ರೂಪಗಳನ್ನು ಲಕ್ಷಿಸಬೇಕು—

ಹಗಲೆ । ಲ್ಲಾಽಽ । ಕಳೆಯಿತು । ಸೂರ್ಯನು । ಮುಳುಗೆ
ಖಗಹಾ । ರಿತುಗೂ । ಡಿನ ಒಳ । ಗೆ

ಜಗವೆ। ಲ್ಲಾ೯೯೯। ಬೆಳಗಿತು। ದೀಪವು। ಬೆಳಗೆ
ಗಗನಾಂ। ಗಣದಲಿ। ಉಡುತೊಳ। ಗೆ
ಮೃಗವೆ। ಲ್ಲಾ೯೯। ಅಲೆದವು। ಬೆಟ್ಟದ। ಕೆಳಗೆ
ಹೊಗುತಿರು। ವುದು ಕ। ತ್ತಲೆ ಇಳೆ। ಗೆ.......
ವುದು..... । ......ಕ । ತ್ತಲೆ ಇಳೆ । ಗೆ......

ಈ ಪದ್ಯದಲ್ಲಿ ಲುಪ್ತಮಾತ್ರೆಗಳನ್ನು ಕಾಣಿಸಿದೆ. ಅಲ್ಲಿ ಹಿಂದಿನ ಅಕ್ಷರದ ದೀರ್ಘಸ್ವರವನ್ನು ಎಳೆದುಕೊಂಡು ಭರ್ತಿಮಾಡಬೇಕಾಗುತ್ತದೆ. ಹಾಗೆ ಭರ್ತಿಮಾಡಿದಾಗಲೇ ಭಾವಪುಷ್ಟಿಯುಂಟಾಗು ತ್ತದೆ. ಕೊನೆಯ ಪಾದದ ಲುಪ್ತಮಾತ್ರೆಗಳನ್ನು ಮೌನದಿಂದ ತುಂಬುವುದೇ ಲೇಸು. ಏಕೆಂದರೆ, ಅಲ್ಲಿ ದೀರ್ಘವಿಲ್ಲ. ಬಿಂದುವೂ ಇಲ್ಲ.

ಬಿ.ಎಂ.ಶ್ರೀ. ಯವರ ರಚನೆಗಳಲ್ಲಿ ಒಂದಾಗಿರುವ 'ಕಾಣಿಕೆ' ಎಂಬ ಕವನ ಮೂರು ಮಾತ್ರೆಗಳ ಲಯವನ್ನುಳ್ಳುದು. ವಾಚನದಲ್ಲಿ ಅರ್ಥಕ್ಕೆ ಭಂಗಬಾರದಂತೆ ಲಯವನ್ನುಳಿಸಿಕೊಂಡು ಓದುವುದೇ ಚೆನ್ನ.

ಕನ್ನಡ ನುಡಿ ನಮ್ಮ ಹೆಣ್ಣು
ನಮ್ಮ ತೋಟದಿನಿಯ ಹಣ್ಣು
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು
ಹೊಸದು ರಸದ ಬಳ್ಳಿ ಹಣ್ಣು ಒಳಗೆ ಸುಳಿದಳು

ಇಲ್ಲಿ "ಕನ್ನ । ಡ ನುಡಿ । ನಮ್ಮ ಹೆಣ್ಣು "- ಎಂದು ಗಣವಿಭಾಗವಿದ್ದರೂ ತಾಳದ ಗತಿಯಿದ್ದರೂ "ಕನ್ನಡ ನುಡಿ" ಎಂಬುದನ್ನು ಕೂಡಿಸಿಯೇ ಓದಬೇಕು.

ರಾಘವ ಅವರ 'ಸ್ವಾತಂತ್ರ್ಯ ಸಿದ್ಧಿ 'ಎಂಬ ಕವನದ ಪಂಕ್ತಿಗಳು ಹೀಗಿವೆ -

ಬಂತು ಬಂತು ಸ್ವಾತಂತ್ರ್ಯವೆಂಬ ಸವಿ
ಮಾತಿನ ಮಳೆಯಾಯ್ತು
ಎಂತದನುಳಿಸುವುದೆನ್ನುವನಿತರೊಳೆ
ನಾಡೇ ಹೋಳಾಯ್ತು ('ಗೀತ ಭಾರತಿ' ಯಿಂದ)

ಈ ಪದ್ಯ ನಾಲ್ಕು ಮಾತ್ರೆಗಳ ಲಯ ವಿನ್ಯಾಸವುಳ್ಳದ್ದಾದರೂ ಅಲ್ಲಲ್ಲಿ ಎಂಟು ಮಾತ್ರೆ ಗಳ (೩ ೩ ೨) ಒಟ್ಟು ಘಟಕದ ಜೋಡಣೆಯಿಂದ ಓದಿದರೆ ಸೊಗಸಾಗುತ್ತದೆ. ಭಾವವಾಹಕವಾಗುತ್ತದೆ.

ಕವಿ ಬೇಂದ್ರೆಯವರ 'ನಗೀ ನವಿಲು' ಪದ್ಯೋದಾಹರಣೆ ನೋಡಿ -

ನಾರೀ ನಿನ್ನ ಮಾರೀ ಮ್ಯಾಗ
ನಗೀ ನವಿಲು ಆಡತಿತ್ತ

ಆಡತಿತ್ತ ಓಡತಿತ್ತ
ಮುಗಿಲ ಕಡೆಗೆ ನೋಡತಿತ್ತ.
ಮಿನ ಮಿನ ಮಿನ ಮಿಂಚತಿತ್ತ
ಮೂಡುತಿತ್ತ ಮುಳುಗತಿತ್ತ
ಮುಳುಗತಿತ್ತ ತೊಳಗತಿತ್ತ
ನೆಲಾಜಲ ಬೆಳಗತಿತ್ತ.

ಇದರ ದೀರ್ಘಾಕ್ಷರಗಳನ್ನು ಎಳೆದು ಲಯಬದ್ಧವಾಗಿ ಓದಿದರೇ ಗಮಕದ ಸೊಗಸು.

ಕುವೆಂಪು ಅವರು ಬರೆದ ಕುಮಾರವ್ಯಾಸ ಎಂಬ ಕವನ ಚತುರ್ಮಾತ್ರಾಘಟಿತ. ಅದರ ಆದ್ಯಕ್ಷರಕ್ಕೆ ಸ್ಥಾನ ಕಲ್ಪನೆ ಹೇಗೆ? ಎಂಬುದು ಗಮಕದಲ್ಲಿ ಲಕ್ಷಿಸತಕ್ಕ ಸಂಗತಿ -

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು
ಭಾರತ ಕಣ್ಣಲಿ' ಕುಣಿವುದು ಮೈಯಲಿ
ಮಿಂಚಿನ ಹೊಳೆ ತುಳುಕಾಡುವುದು

ಇಲ್ಲಿ 'ಕು' ಎಂಬುದನ್ನು ಆದಿಯ ಉಪಾಕ್ಷರವಾಗಿಟ್ಟುಕೊಂಡು ಅದರ ಮುಂದಿನವನ್ನು ಗಣಾಕ್ಷರಗಳಾಗಿ ಕಲ್ಪಿಸಬೇಕಾಗುತ್ತದೆ. ಭಾವಗೀತಗಳಲ್ಲಿ ಇಂತಹ ಪ್ರಯೋಗ ಹೊಸತು. ಆದರೆ ಕವಿ ಮುದ್ದಣನು ಕುಮಾರ ವಿಜಯ ಯಕ್ಷಗಾನ ಕೃತಿಯಲ್ಲಿ ಈ ರೀತಿಯನ್ನು ಬಳಸಿದ್ದಾನೆ - ನೋಡಿ.

ಆ। ನಂದ ಮುಖೀ ಸುಂದರಾಂಗಿ ಮಂದಗಾಮಿನಿ
ಬಂದ ಬವಣೆ ಪೇಳ್ವೆನಾದಿಯಿಂದ ಕಾಮಿನಿ

ಆಧುನಿಕ ಪದ್ಯ ಸಾಹಿತ್ಯದಲ್ಲಿ ತ್ರಿಪದಿ ಸಾಂಗತ್ಯಗಳೂ ರಚಿತವಾಗಿವೆ. ಅವನ್ನು ಅಷ್ಟತಾಳದ ಗತಿಯಲ್ಲಿ ವಾಚನ ಮಾಡುತ್ತಾರೆ. ರೂಪಕ, ಝಂಪೆ, ತ್ರಿವುಡೆ, ಏಕತಾಳಗಳ ಗತಿಯಲ್ಲಿಯೂ ಗಮಕ ಆಳವಡುವಂತೆ ಇದನ್ನು ಓದಲೂ ಹಾಡಲೂ ಸಾಧ್ಯವಾಗುತ್ತದೆ. ಅದಕ್ಕಾಗಿ ವಾಚನ ಕ್ರಮವನ್ನು ಅಭ್ಯಾಸಮಾಡಿರಬೇಕಾಗುತ್ತದೆ. ಇತರ ಗದ್ಯ - ಪದ್ಯಗಳನ್ನು ಮಾತ್ರ ಓದತಕ್ಕವರು ತ್ರಿಪದಿ ಸಾಂಗತ್ಯಗಳನ್ನು ಲೀಲಾಜಾಲವಾಗಿ ಓದಲಾರರು.

ಆಧುನಿಕ ರಚನೆಯಲ್ಲಿ ಪ್ರಸಿದ್ಧವಾದ 'ನವ್ಯ' ಕವನಗಳು ಓದತಕ್ಕವುಗಳಲ್ಲದೆ, ಹಾಡತಕ್ಕವು ಗಳಲ್ಲ. ಅಡಿಗರ ಕವನಗಳಲ್ಲೊಂದಾಗಿರುವ 'ಏನಾದರೂ ಮಾಡುತ್ತಿರು ತಮ್ಮ' ಎಂಬುದರ ಕೆಲವು ಸಾಲುಗಳು ಇವು -

ಏನಾದರೂ ಮಾಡುತ್ತಿರು ತಮ್ಮ
ನೀ ಸುಮ್ಮನಿರಬ್ಯಾಡ
ಆ ಸಸಿಯ ಕೀಳು, ಚಿವುಟೀ ಚಿಗುರ
ಹೂ ಕಂಡರೆ ಹಿಸುಕಿ ಬಿಸುಡು, ಹುಲ್ಲೆಲ್ಲೆಲ್ಲಿ

ಅಲ್ಲಲ್ಲಿ ಕೊಳ್ಳಿ ಹಿಡಿದಾಡು ಲಂಕಾದಹನ
ಮರಿಚಟ್ಟೆ, ಗಿಳಿ, ಗುಬ್ಬಿ - ಎಲ್ಲಿ ಕಂಡರೆ ಅಲ್ಲಿ
ಅಟ್ಟು, ಹಿಡಿ, ಕುಟ್ಟು, ಕಿತ್ತೆಸೆ, ಪಕ್ಕ ಪುಕ್ಕಗಳ

ಭಾವಪೂರ್ಣವಾಗಿ, ಅರ್ಥಕ್ಕೆ ಅನುಗುಣವಾಗಿ, ಓದುಗನದೇ ರಚನೆಯೆಂಬ ಹಾಗೆ ಓದುವುದೇ ಇದರ ಗಮಕವೆನಿಸುವುದು. ಆಧುನಿಕ ಸಾಹಿತ್ಯವಾಗಿ ಮೂಡಿಬಂದ ವಚನಗಳನ್ನೂ ಇದೇ ರೀತಿ ಓದಬಹುದು.

ಗದ್ಯವಾಚನ

ಆಧುನಿಕ ಸಾಹಿತ್ಯದ ಮುಖ್ಯರೂಪವೇ ಗದ್ಯ. ಅದು ಮಾತಾಡಿದಂತೆಯೇ ಇರುವ ವಾಕ್ಯಗಳ ಸಮುಚ್ಚಯ. ಈ ಗದ್ಯವು ಕಥೆ, ಕಾದಂಬರಿ, ಜೀವನಚರಿತ್ರೆ, ಆತ್ಮಕಥೆ, ಪತ್ರ, ಪ್ರಬಂಧ, ಸಂವಾದ-ಮುಂತಾದ ವಿವಿಧ ರೂಪಗಳಲ್ಲಿದೆ. ಓದುಗನು ಸ್ವತಃ ತಿಳಿಯುವಂತೆಯೂ ಸಹೃದಯರ ಚೇತೋಹಾರಿಯಾಗುವಂತೆಯೂ ಓದುವುದೇ ಗದ್ಯದ ಗಮಕ. ಹಾಗೆ ಓದುವುದರಲ್ಲಿ ಕೆಲವು ಲಕ್ಷಣಗಳನ್ನಿಲ್ಲಿ ನಿರೂಪಿಸಬಹುದು-

೧. ಸ್ಪಷ್ಟವಾದ ಉಚ್ಚಾರಣೆ-ಸ್ವರ ವ್ಯಂಜನಗಳು, ಹ್ರಸ್ವದೀರ್ಘಗಳು, ಒತ್ತುಗಳು, ಅಲ್ಪಪ್ರಾಣ ಮಹಾಪ್ರಾಣಗಳು, ಲ-ಳ, ನ-ಣ, ಹ ಕಾರಗಳು, ಕೃ-ತ್ರಿ-ಇತ್ಯಾದಿ ಉಚ್ಚಾರಣ ಭೇದಗಳನ್ನು ಸರಿಯಾಗಿ ತಿಳಿದಿರುವುದು.
೨. ವಿರಾಮಸ್ಥಳಗಳನ್ನು ಲಕ್ಷಿಸುವುದು-ಲೇಖನ ಚಿಹ್ನೆಗಳ ಬಳಕೆಗನುಗುಣವಾಗಿ ಓದುವುದು.
೩. ವಾಕ್ಯ ರಚನೆಗಳನ್ನು, ಭಾವ-ಅರ್ಥ ವೈಶಿಷ್ಟ್ಯವನ್ನು ಸ್ವತಃ ಅರ್ಥಮಾಡಿಕೊಂಡೇ ವಾಚನ ಮಾಡುವುದು.
೪. ಶ್ರೋತೃಗಳಿಗೆ ತಿಳಿಯಿತೇ? ಇಲ್ಲವೇ? ಎಂಬುದನ್ನು ಲಕ್ಷ್ಯವಿಟ್ಟು ಆವಶ್ಯಕವಾದ ಕಡೆ ಶಬ್ದವನ್ನು, ಶಬ್ದ ಸಮುದಾಯವನ್ನು, ವಾಕ್ಯಗಳನ್ನು ಪುನರುಚ್ಚಾರ ಮಾಡುವುದು.
೫. ಗದ್ಯದಲ್ಲಿ (ಸಂವಾದದಲ್ಲಿ, ಉಲ್ಲೇಖಗಳಲ್ಲಿ) ಬರುವ ಮಾತಿನ ಭಾವಕ್ಕೆ ಅನುಗುಣವಾಗಿ ಸಂದರ್ಭೋಚಿತ ಕಾಕುವಿನೊಂದಿಗೆ, ಧ್ವನಿಯ ಏರಿಳಿತಗಳು ಹಾಗೂ ಮುಖ ಭಾವ-ಇವುಗಳಿಂದ ಓದುವುದು.

ಈ ಬಗೆಯ ಓದುವಿಕೆಯೇ ಒಂದು ಕಲೆಯಾಗುವುದು. ಇಂತಹ ಓದನ್ನು ನೋಡಿದವರು, ಕೇಳಿದವರು ಸಾಮಾನ್ಯಜನರು ಕೂಡ-ಮೆಚ್ಚಿ ತಲೆದೂಗುವರು; ಸಾಹಿತ್ಯದಿಂದ ಪ್ರಭಾವಿತರಾಗುವರು.

□

(ಭಾಗ ೨ ಕೌಸ್ತುಭ, ಕ.ಸಾ.ಪ. ೧೯೭೭)

೧೨

ಕನ್ನಡ ಕಾವ್ಯಗಳಲ್ಲಿ ದೇಶಭಕ್ತಿ

ಮಾನವನು ತನ್ನ ಜೀವನದಲ್ಲಿ ಸಾಧಿಸಬೇಕಾದುದು ಏನನ್ನು? ಎಂಬ ಪ್ರಶ್ನೆಗೆ ಭಾರತೀಯ ದಾರ್ಶನಿಕರು ಅತಿ ಪ್ರಾಚೀನಕಾಲದಲ್ಲೇ 'ಅಭ್ಯುದಯವನ್ನು ಮತ್ತು ನಿಃಶ್ರೇಯಸವನ್ನು' ಎಂದು ಉತ್ತರಕೊಟ್ಟಿದ್ದಾರೆ. ಮತ್ತು ಅವೆರಡೂ ಧರ್ಮದ ಲಕ್ಷಣಗಳೆಂದೂ ಹೇಳಿದ್ದಾರೆ. ಅಭ್ಯುದಯವೆಂದರೆ ಲೌಕಿಕ ಸಮುನ್ನತಿ; ನಿಃಶ್ರೇಯಸವೆಂದರೆ ಮೋಕ್ಷ. ಇದು ಕೊನೆಯ ಉದ್ದೇಶ. ಅಭ್ಯುದಯವು ಬದುಕಿನ ಉದ್ದಕ್ಕೂ ಸಾಧಿಸುವಂತಹದು. ಅದು ವೈಯಕ್ತಿಕವೂ ಸಾಮಾಜಿಕವೂ ಆಗಿದ್ದು ದೇಶಭಕ್ತಿಯೂ ಅದರ ಒಂದು ಸಾಧನಮಾರ್ಗವಾಗಿದೆ. ದೇಶಭಕ್ತಿ ಎನ್ನುವಾಗ, ದೇಶವನ್ನು ಭೌಗೋಲಿಕವಾಗಿ ಮಾತ್ರ ಪ್ರೀತಿಸುವುದಲ್ಲ. ಅವರೊಂದಿಗೆ ದೇಶದ ಧರ್ಮ, ಸಂಸ್ಕೃತಿ, ನೀತಿ, ಭಾಷೆ, ಸಾಹಿತ್ಯ, ಜನತೆ ಇವೆಲ್ಲವನ್ನೂ ಒಂದಕ್ಕೊಂದು ಪೋಷಕವಾಗುವಂತೆ ಪ್ರೀತಿಸುವುದೆಂದು ತಿಳಿಯಬೇಕು.

ಆದರೆ, ಇಂದಿನ ವಿಚಾರಶೀಲರೆನಿಸಿದವರಲ್ಲಿ ಅನೇಕರು ದೇಶವನ್ನು ಭೌಗೋಲಿಕವಾಗಿ ಮಾತ್ರ ಪರಿಗಣಿಸಿಕೊಂಡು, ಅಂತಹ ದೇಶಭಕ್ತಿ ಕೂಡ ನಮ್ಮ ಪ್ರಾಚೀನರಲ್ಲಿ ಇದ್ದಿತೆ? ಇಲ್ಲವೆ? ಎಂಬುದನ್ನರಿವ ವ್ಯವಧಾನವಿಲ್ಲದೆ 'ನಮ್ಮ ಪೂರ್ವಿಕರಿಗೆ ದೇಶಭಕ್ತಿಯೇ ಗೊತ್ತಿದ್ದಿಲ್ಲ ವೆಂದು, ರಾಷ್ಟ್ರಭಾವನೆಯೇ ನಮಗೆ ಹೊಸತೆಂದು ಮತ್ತು ನಾವು ಅದನ್ನು ಪರಕೀಯರಿಂದ ಕಲಿತುಕೊಂಡುದೆಂದು ಹೇಳುತ್ತಾರೆ. ಮಾತ್ರವಲ್ಲ, ಹಾಗೆ ಇತರರಿಗೂ ಬೋಧಿಸುತ್ತಾರೆ. ಈ ಪರಿಸ್ಥಿತಿಯಲ್ಲಿ ನಿಜಸ್ಥಿತಿಯನ್ನು ತಿಳಿಯಪಡಿಸುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ. ಹಾಗೆ ತಿಳಿಸಿ, ಕನ್ನಡ ಕಾವ್ಯಗಳಲ್ಲಿ ಅದನ್ನು ಕಾಣುವುದಿಲ್ಲಿ ಪ್ರಯತ್ನವಾಗಿದೆ.'

ಭಾರತದಲ್ಲಿ ರಾಷ್ಟ್ರಭಾವನೆ ಹಾಗೂ ದೇಶಭಕ್ತಿ ಎಂಬುದು ವೇದದಷ್ಟೇ ಪ್ರಾಚೀನವಾಗಿದೆ. ವೇದಗಳಲ್ಲಿ ಪ್ರಾಚೀನತಮವೆನ್ನಲಾದ ಋಗ್ವೇದದಲ್ಲಿ ಬರುವ ಶ್ರೀಸೂಕ್ತದ ಏಳನೆಯ ಮಂತ್ರದಲ್ಲಿ ಈ ವಾಕ್ಯವಿದೆ-'ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ' ಅಂದರೆ- 'ಎಲೈ ಲಕ್ಷ್ಮಿಯೇ, ಇದೋ ನಾನು ಈ ರಾಷ್ಟ್ರದಲ್ಲಿ ಜನಿಸಿರುತ್ತೇನೆ. ನಿನ್ನ ಉಪಾಸಕನಾದ ನನಗೆ ನಿನ್ನ ಆಜ್ಞೆಯಂತೆ ಆ ಕುಬೇರನು ಕೀರ್ತಿಯನ್ನೂ ಸಮೃದ್ಧಿಯನ್ನೂ ದಯೆಪಾಲಿಸಲಿ' ಎಂದಿಲ್ಲಿ ಹೇಳಲಾಗಿದೆ. ಹೀಗೆ ರಾಷ್ಟ್ರದ ಉಲ್ಲೇಖವಿರುವ ಮಂತ್ರಗಳು ವೇದದಲ್ಲಿ ಅನೇಕ ಕಡೆ ಇವೆ. ಇನ್ನು ದೇಶಭಕ್ತಿಯ ಬಗೆಗೆ ಹೇಳುವುದಾದರೆ, ಅಥರ್ವವೇದದಲ್ಲಿ ಹನ್ನೆರಡನೆಯ

ಕಾಂಡದಲ್ಲಿ ಪ್ರಥಮವಾಗಿ ಅರುವತ್ತುಮೂರು ಮಂತ್ರಗಳಿಂದೊಪ್ಪುವ ಪೃಥ್ವೀಸೂಕ್ತವನ್ನು ಕಾಣಬಹುದು. ನಮ್ಮ ಪೂರ್ವಿಕರಿಗೆ ಮಾತೃಭೂಮಿಯ ಮೇಲಿದ್ದ ಗಾಢವಾದ ಭಕ್ತಿಗೆ ಇದು ಉದಾಹರಣೆಯಾಗಿರುತ್ತದೆ. ಈ ಸೂಕ್ತದಲ್ಲಿ ಆಧಿಭೌತಿಕ ಮತ್ತು ಆಧಿದೈವಿಕ ಎಂಬೆರಡೂ ರೂಪಗಳ ದೃಷ್ಟಿಯಿಂದ ಮಾತೃಭೂಮಿಯನ್ನು ಕುರಿತು ಮಾಡಿರುವ ಸ್ತುತಿಯಿದೆ. ಇದನ್ನು ನೋಡಿದರೆ, ಬಂಕಿಂಚಂದ್ರರಿಗೆ ವಂದೇ ಮಾತರಂ ಎಂಬ ರಾಷ್ಟ್ರಗೀತೆಯನ್ನು ರಚಿಸಲು ಇದರಿಂದಲೇ ಭಾವವಸ್ತು ದೊರಕಿರಬೇಕೆಂದೆನಿಸುವುದು.

ಭಗವದ್ಗೀತೆಯಲ್ಲಿ ಬರುವ 'ಯದಾ ಯದಾ ಹಿ ಧರ್ಮಸ್ಯ' ಎಂದು ಪ್ರಾರಂಭವಾಗುವ ಎರಡು ಶ್ಲೋಕಗಳ ಅರ್ಥವನ್ನು ಶ್ರೀಕೃಷ್ಣನಿಗಿದ್ದ ದೇಶಭಕ್ತಿಯ ದೃಷ್ಟಿಯಿಂದ ಲಕ್ಷಿಸುವುದು ಉಚಿತವಾಗಿದೆ. ಧರ್ಮಕ್ಕೆ ಗ್ಲಾನಿಯುಂಟಾದಾಗ, ಅಧರ್ಮವು ತಲೆಯೆತ್ತಿದಾಗ ನಾನು ಅವತರಿಸಿ ಬರುತ್ತೇನೆ. ಸಾಧುಗಳ ರಕ್ಷಣೆಗಾಗಿ, ದುಷ್ಟರನ್ನು ನಾಶಮಾಡುವುದಕ್ಕಾಗಿ ಮತ್ತು ಧರ್ಮಸ್ಥಾಪನೆಗಾಗಿ ಯುಗ-ಯುಗಗಳಲ್ಲಿಯೂ ನಾನು ಜನ್ಮ ತಾಳುತ್ತೇನೆ (೪-೭, ೮). ಈ ಮಾತುಗಳು ದೇಶಭಕ್ತಿ ಪ್ರೇರಿತಗಳಲ್ಲದೆ ಮತ್ತೇನು?

ತ್ರೇತಾಯುಗದಲ್ಲಿದ್ದ ಶ್ರೀರಾಮನು ಉನ್ನತ ದೇಶಭಕ್ತನಾಗಿದ್ದನೆಂಬುದಕ್ಕೆ ರಾಮಾಯಣದ ಶ್ಲೋಕಾಧಾರವಿದೆ. ರಾವಣನ ವಧೆಯಾಗಿ, ಅವನ ಸ್ವರ್ಣಮಯವಾದ ಲಂಕಾರಾಜ್ಯವು ವಶವಾದ ಸಂದರ್ಭದಲ್ಲಿ ಲಕ್ಷ್ಮಣನು ಅಂತಹ ಲಂಕೆಯನ್ನೆ ರಾಜಧಾನಿಯಾಗಿ ಮಾಡಿಕೊಂಡು ಭೂಮಂಡಲವನ್ನು ಆಳಬಹುದೆಂಬ ಸೂಚನೆಯನ್ನು ಕೊಟ್ಟಿರಬೇಕು. ಆ ಸಂದರ್ಭದಲ್ಲಿ ಶ್ರೀರಾಮನ ಮಾತು ಹೀಗಿದೆ -

ಅಪಿ ಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೇ
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ

ಅಂದರೆ- "ಎಲೈ ಲಕ್ಷ್ಮಣಾ, ಈ ಲಂಕೆ ಸ್ವರ್ಣಮಯವಾಗಿದ್ದರೂ ನನಗೆ ರುಚಿಸುವದಿಲ್ಲ. ಜನ್ಮ ಕೊಟ್ಟಂತಹ ತಾಯಿ ಮತ್ತು ಜನ್ಮಕೊಟ್ಟ ಭೂಮಿ ಎಂಬಿವೆರಡೂ ಸ್ವರ್ಗಕ್ಕಿಂತ ಮಿಗಿಲಾದುವು." ಎಂತಹ ಒಂದು ನಿಃಸ್ವಾರ್ಥದ ಮತ್ತು ದೇಶಭಕ್ತಿಪೂರ್ಣವಾದ ಮಾತಿದು! ರಾಮನು ಅಂತಹ ಲಂಕೆಯನ್ನು ವಿಭೀಷಣನಿಗೆ ಆಳಲು ಬಿಟ್ಟು ತಾನು ತನ್ನ ಜನ್ಮಭೂಮಿಯಾದ ಅಯೋಧ್ಯೆಗೆ ಹೋಗಿ ಆದರ್ಶರೀತಿಯಲ್ಲಿ ರಾಜ್ಯವಾಳಿದನೆಂದು ರಾಮಾಯಣದಲ್ಲಿ ಹೇಳಿದೆ. ಸಂಸ್ಕೃತಸಾಹಿತ್ಯದಲ್ಲಿ ಇನ್ನೂ ಉದಾಹರಣೆಗಳು ಇರಬಹುದಾದರೂ ಪ್ರಕೃತ, ಅವನ್ನು ನಿಲ್ಲಿಸಿ, ಅವುಗಳ ಹಿನ್ನೆಲೆಯಲ್ಲಿ ಕನ್ನಡ ಕಾವ್ಯಗಳಲ್ಲಿ ದೇಶಭಕ್ತಿ ಪ್ರಕಟವಾಗಿರುವುದನ್ನು ಮುಂದೆ ಲಕ್ಷಿಸಲಾಗುವುದು.

ಹಿಂದೆ ತಿಳಿಸಿರುವಂತೆ, ದೇಶಭಕ್ತಿಯೆಂಬುದು ವಾಸಮಾಡುವ ಭೂಮಿಯ ಸಮಗ್ರಭಾಗದ ಮೇಲಣ ಅವಿಚ್ಛಿನ್ನ ಪ್ರೇಮ ಮಾತ್ರವೇ ಆಗಿರದೆ, ದೇಶದ ಸಮಗ್ರತೆಯೊಂದಿಗೆ ಅದರ ಒಂದೊಂದು ಭಾಗದ ಪ್ರೇಮವೂ ಅಂತಹ ಭಾಗದ ಜನತೆಯ ಮೇಲಣ ಮತ್ತು ಸಂಸ್ಕೃತಿಯ ಪ್ರೇಮಗೌರವಗಳೂ ದೇಶಭಕ್ತಿಯ ಚಿಹ್ನೆಯೇ ಆಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಕನ್ನಡದ

ಪ್ರಥಮ ಲಾಕ್ಷಣಿಕ ಕೃತಿಯಾಗಿರುವ ಕವಿರಾಜಮಾರ್ಗದಲ್ಲಿ (ಕ್ರಿ.ಶ.೮೬೦) ಕನ್ನಡಿಗರ ಹಿರಿಮೆಯನ್ನು ಕೊಂಡಾಡಿರುವುದು ಲಕ್ಷ್ಯಾರ್ಹವಾಗಿದೆ- ಕನ್ನಡಮೆನಿಪ್ಪಾ ನಾಡಿನ ಪರಿಧಿಗಳನ್ನೂ ಅದರೊಳಗೆ ತಿರುಳ್ಗನ್ನಡದ ಪ್ರದೇಶವನ್ನೂ ಹೇಳಿರುವುದರೊಂದಿಗೆ ಕನ್ನಡಿಗರನ್ನು ಹೀಗೆ ಅಭಿಮಾನದಿಂದ ಬಣ್ಣಿಸಲಾಗಿದೆ-

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್ (೧-೩೮)

ಕನ್ನಡ ನಾಡಿನವರು ಹದವರಿತು ಮಾತಾಡುವವರು. ಇತರರು ನುಡಿದುದನ್ನು ಅರ್ಥಮಾಡಿಕೊಂಡು ವಿಮರ್ಶಿಸಬಲ್ಲರು. ನಿಜವಾಗಿ ಚತುರರು. ಪದವಿಯನ್ನೋ ಪ್ರಮಾಣಪತ್ರವನ್ನೋ ಪಡೆಯುವ ಉದ್ದೇಶವಿಟ್ಟು ಓದಿದವರಲ್ಲ. ಹಾಗಿದ್ದರೂ ಕಾವ್ಯರಚನೆಯಲ್ಲಿ ಪ್ರವೀಣರು. ಅಷ್ಟು ಮಾತ್ರವಲ್ಲ-

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ (೨-೨೮)

ದೇಶಭಕ್ತಿಯಿಂದ ಕನ್ನಡಿಗರನ್ನು ಹೀಗೆ ವಿಶೇಷಿಸಿ ಹೇಳಿರುವುದರಲ್ಲಿ ನಿಜಾಂಶವೇ ಇರುವುದಲ್ಲದೆ, ಕವಿಗಿರುವ ಅಭಿಮಾನಭಾವನೆಯೂ ಇದೆಯೆನ್ನಲಡ್ಡಿಯಿಲ್ಲ. ಕನ್ನಡಿಗರಾದ ನಾವು ಇಂದು ಕೂಡ ಹೀಗಿರಬೇಕೆಂಬ ಧ್ವನಿ ಇದರಲ್ಲಿ ಅಡಗಿದೆಯೆನ್ನಬಹುದು.

ಕನ್ನಡದ ಆದಿಕವಿಯಾದ ಪಂಪನು ದಿಗ್ವಿಜಯಿ ವಿಕ್ರಮಾರ್ಜುನನ ಮಾತುಗಳಾಗಿರುವ ನಾಲ್ಕು ಪದ್ಯಗಳಲ್ಲಿ ತೆಂಕನಾಡನ್ನು ಅಂದರೆ ಬನವಾಸಿ ದೇಶವನ್ನು ವರ್ಣಿಸುವಲ್ಲಿ (೪: ೨೮-೩೧) ತನ್ನ ದೇಶಭಕ್ತಿಭಾವವನ್ನು ಕೋಡಿಹರಿಸಿರುವುದು ಸ್ಪಷ್ಟವಾಗಿದೆ. ಕನ್ನಡಿಗರೆಲ್ಲ ನೆನಪಿಟ್ಟುಕೊಳ್ಳಬೇಕಾದುದೂ ಆಗಿರುತ್ತದೆ.

ಸೊಗಯಿಸಿ ಬಂದ ಮಾಮರನೆ ತಳ್ತಿಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಳ್ಪೊಡಾವ ಬಿ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್

ಜಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಿಸರೆ ಮಾನಿಸರಂತವರಾಗಿಯೆ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ

ಆಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್ ಕೋಳ್ವ ಜೊಂ
ಪಮುಮೇವೇಳ್ವುದನುಳ್ಳ ಮೆಯ್ಸುಕಮುಮಿಂತೆನ್ನಂ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ ಮರೆಯಲ್ಕಿನ್ನೇಂ ಮನಂ ಬರ್ಕುಮೇ?

ಬನವಾಸಿ ಇಂದೊಂದು ಊರಾಗಿದ್ದರೂ ಪಂಪನು ಬನವಾಸಿದೇಶ ಎಂದು ಹೇಳುವ ಮೂಲಕ, ಮತ್ತು 'ಆವ ಬೆಟ್ಟುಗಳೊಳಂ ಆವ ನಂದನವನಂಗಳೊಳಂ' ಎಂಬ ಮಾತಿನಿಂದ ಅನೇಕ ಬೆಟ್ಟಗಳನ್ನೂ ಉದ್ಯಾನಗಳನ್ನೂ ಲಕ್ಷ್ಯವಿಡುವ ಮೂಲಕ, ವಿಶಾಲ ಕರ್ಣಾಟಕವನ್ನು ಅಥವಾ ಭಾರತದೇಶವನ್ನೇ ಉದ್ದೇಶಿಸಿ ಹೇಳಿರುವನೆಂದು ಭಾವಿಸಬಹುದಾಗಿದೆ. ಹೀಗೆ, ಪ್ರದೇಶವಿಸ್ತಾರವನ್ನು ಮತ್ತು ಪ್ರಕೃತಿಸಂಪತ್ತನ್ನು ವರ್ಣಿಸುತ್ತ, ಇಲ್ಲಿ ಹುಟ್ಟುವುದೇ ಮಹಾಭಾಗ್ಯವೆಂದು ಉಗ್ಗಡಿಸಿದ್ದಾನೆ. 'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ' ಎಂಬ ಮಾತಿನಿಂದ ಕವಿಯ ದೇಶಭಕ್ತಿಯ ಪಾರಮ್ಯ ಅಭಿವ್ಯಕ್ತವಾಗಿದೆ. ಅಮೃತಪಾನ ಮಾಡಿದಷ್ಟು ಸುಖಕರವಾದ ಸುಪ್ರಭಾತ, ಸಂಗೀತ ಸಾಹಿತ್ಯಗೋಷ್ಠಿ, ವಾಕ್ಚಾತುರ್ಯವಂತರ ಮಾತು, ತಂಪಾದ ಲತಾಗೃಹ-ಮುಂತಾದವುಗಳಿಂದ ಮಾನವನಿಗೆ ಅಂತರಂಗ ಬಹಿರಂಗಗಳೆರಡರ ಸುಖವನ್ನೂ ನೀಡುವಂತಹ ಪ್ರದೇಶವಿದೆಂದು ಕೊಂಡಾಡಿರುವುದು ಕವಿಯ ಅಮೋಘ ದೇಶಭಕ್ತಿಯ ನಿದರ್ಶನವಾಗಿದೆ.

ಶ್ರೀರಾಮನ ಉನ್ನತ ದೇಶಭಕ್ತಿಯನ್ನು ವ್ಯಕ್ತಪಡಿಸುವ ಇನ್ನೊಂದು ಕಾವ್ಯವಾಗಿ ದೇವಪ್ಪಕವಿಯ 'ರಾಮವಿಜಯ' ಎಂಬ ಸಾಂಗತ್ಯಕಾವ್ಯ ನಮ್ಮ ಮುಂದಿದೆ. ಇವನು ಪಂಪನಂತೆ ಬ್ರಾಹ್ಮಣ ವಂಶಜನಾದ ಜೈನಕವಿ. ಈ ಕಾವ್ಯವು ಗುಣಭದ್ರಾಚಾರ್ಯರ ಪರಂಪರೆಯ ಕಥಾಸರಣಿಯಿಂದ ಕೂಡಿದೆ. (ನನ್ನ ಪ್ರಯತ್ನದ ಸಂಪಾದನೆಯ ಈ ಕಾವ್ಯವು ಭಾರತೀಯ ಜ್ಞಾನಪೀಠ ಮೂರ್ತಿದೇವೀ ಜೈನಗ್ರಂಥಮಾಲೆಯಲ್ಲಿ ಮೊದಲನೆಯ ಕನ್ನಡ ಗ್ರಂಥವಾಗಿ ೧೯೬೯ರಲ್ಲಿ ಪ್ರಕಾಶನಗೊಂಡಿದೆ.) ಶ್ರೀರಾಮನ ತಾಯಿನಾಡ ಒಲ್ಮೆ ಅಥವಾ ದೇಶಭಕ್ತಿ ವ್ಯಕ್ತವಾಗಿರುವ ಸಂದರ್ಭವಿದು-

ಸೀತಾವಿವಾಹಾನಂತರ, ಶ್ರೀರಾಮನು ಅಯೋಧ್ಯೆಯಲ್ಲಿದ್ದಾಗ, ಒಮ್ಮೆ ಒರ್ವ ಕುಲವೃದ್ಧನಿಂದ ತನ್ನ ಕುಲದ ಪೂರ್ವವೃತ್ತಾಂತವನ್ನು ಆಲಿಸುತ್ತಿದ್ದವನು ಇನ್ನೂ ಸ್ಪಷ್ಟೀಕರಣಕ್ಕಾಗಿ ತನ್ನ ತಂದೆಯ ಬಳಿಗೆ ಬಂದನು. 'ಎಲೈ ಪಿತೃದೇವನೇ, ನಮ್ಮ ಪೂರ್ವಜರ ಪಟ್ಟಣವು ಯಾವುದು? ಅಲ್ಲಿ ಈಗ ಯಾವನಿರುವನು?' ಎಂದು ಪ್ರಶ್ನಿಸಿದನು. ಆಗ ದಶರಥನು-'ನಮ್ಮ ಪೂರ್ವಕಾಲದ ಪಟ್ಟಣವು ವಾರಣಾಸಿ. ಅದನ್ನು ದಾಯವಾದಿ ಜಯಸೇನನು ಆಳುತ್ತಿದ್ದಾನೆ. ನಾವು ಅದನ್ನು ಅವನಿಗೇ ಬಿಟ್ಟಿದ್ದೇವೆ. ಈಗ ನಮಗೆ ಈ ಸಾಕೇತವು ಜನ್ಮಭೂಮಿಯ ಹಾಗೆ

ಸುಖಕರವಾಗಿದೆ. ಆದುದರಿಂದ ನಮ್ಮ ಜನ್ಮಭೂಮಿಯ ಗೊಡವೆ ನಮಗಿಲ್ಲವಾಗಿದೆ' ಎಂದನು. ರಾಮನಿಗೆ ಈ ವರ್ತನೆ ಸಹ್ಯವಾಗಲಿಲ್ಲ. ಆಗ ಅವನಲ್ಲಿದ್ದ ದೇಶಭಕ್ತಿಯ ಭಾವರಸ ಹೊನಲಾಗಿ ಮಾತಿನ ಮೂಲಕ ಹೀಗೆ ಸುರಿಯಿತು - (೯-೧೨, ೧೩)

ಜಿನಪತಿಯನು ಗುರುವನು ನಿಜಜನನಿಯ
ಜನಕನ ಜನ್ಮಭೂಮಿಯನು
ಮನವೊಲಿದುಳಿದವರುಂಟೆ ಬಿನ್ನಪವಿದ
ಜನನಾಥ ಲಾಲಿಪುದೆನುತ ||
ಏತರ ಜಸವೇತರ ಭುಜಬಲ ನಮ
ಗೇತರ ಜಯವೇತರಿರವು
ಏತರ ವೀರವಾ ಪುರವನು ದಾಯಾದ್ಯ
ರೀ ತೆರದೊಳಗಾಳುತಿರಲು ||

ಸ್ವತಃ ಜೈನನಾಗಿ ಜಿನೇಶನನ್ನು ತ್ಯಜಿಸಲಾಗುತ್ತದೆಯೇ? ಗುರುವನ್ನು ಬಿಟ್ಟುಬಿಡಲಾಗುವುದೆ? ತಂದೆಯನ್ನು ತಾಯನ್ನು ಬಿಟ್ಟು ಬೇರೆ ತಂದೆತಾಯಿಗಳನ್ನು ಪಡೆಯಲು ಸಾಧ್ಯವೆ? ಜನ್ಮಭೂಮಿಯನ್ನು ತ್ಯಜಿಸುವುದೆಂಬುದು ಹೀಗೆಯೇ ಆಗುವುದು. ಅದು ತ್ಯಾಗದ ಲಕ್ಷಣವಲ್ಲ ಎಂಬ ಮಾರ್ಮಿಕವಾದ ಅಭಿಪ್ರಾಯ ಈ ಮಾತಿನಲ್ಲಿ ಬಂದಿದೆ. ನಮ್ಮದೇ ಆದ ಭೂಭಾಗವನ್ನು ಅನ್ಯರು ಆಳುತ್ತಿರುವುದೆಂದರೆ ನಮ್ಮ ಕೀರ್ತಿ, ಶೌರ್ಯ, ವಿಜಯ, ಅಸ್ತಿತ್ವ ಹಾಗೂ ವೀರತ್ವಗಳೆಲ್ಲ ಮಣ್ಣುಗೂಡಿದಂತೆಯೇ ಸರಿ ! ಎಂಬೀ ಮಾತಿನಲ್ಲಿ ರಾಮನ ದೇಶಭಕ್ತಿ ವ್ಯಕ್ತವಾಗುವುದರೊಂದಿಗೆ ಇಂದು ನಮ್ಮ ದೇಶವೇ ಶತ್ರುದಾಯಾದ್ಯರಿಂದ ಹರಿಹಂಚಾಗುತ್ತಿರುವಾಗ ನಾವು ಹೇಗಿದ್ದೇವೆ ಎಂಬ ಅರಿವೂ ಉಂಟಾಗುವಂತಿದೆಯಲ್ಲವೆ?

ಹೀಗೆಂದ ಶ್ರೀರಾಮನು ಮುಂದುವರಿದು - 'ನಾನು ಆ ದಾಯಾದಿಯ ಸೊಕ್ಕನ್ನು ಮುರಿದು, ಅವನನ್ನು ಹಿಡಿದು ತಂದು ನಿನಗೊಪ್ಪಿಸುವೆನು. ಆ ಪಟ್ಟಣವನ್ನು ವಶಪಡಿಸುವೆನು-ಎಂದು ಹೇಳಿ, ತಂದೆಯ ಅನುಜ್ಞೆ ಪಡೆದು ಲಕ್ಷ್ಮಣಸಹಿತನಾಗಿ ಸೈನ್ಯದೊಂದಿಗೆ ಹೋದಾಗ, ಅಲ್ಲಿ ಆಳುತ್ತಿದ್ದ ಜಯಸೇನನು ರೋಷಗೊಂಡು ಯುದ್ಧಸನ್ನದ್ಧನಾದರೂ ಮಂತ್ರಿಯ ಹಿತೋಕ್ತಿಗೆ ಮಣಿದು ಶರಣಾದನು. ಹೀಗೆ ಈ ಕಾವ್ಯದಲ್ಲಿ ಶ್ರೀರಾಮನ ದೇಶಭಕ್ತಿಯ ಉಜ್ವಲ ಚಿತ್ರಣವಿದೆ.

ಕನ್ನಡಿಗರಲ್ಲಿ ಮಾತೃಭೂಮಿಯ ಮೇಲಣ ಭಕ್ತಿ, ಬದುಕಿನಲ್ಲಿಯೇ ಹಾಸುಹೊಕ್ಕಾದು ದೆಂಬುದಕ್ಕೆ ಜನಪದಗೀತದಲ್ಲಿಯೂ ಆಧಾರವಿದೆ. ಬೆಳಗ್ಗೆ ಎದ್ದೊಡನೆ ಸ್ಮರಿಸಬೇಕಾದುದು ಭೂಮಾತೆಯನ್ನೆಂದು ಜನಪದಗೀತದಲ್ಲಿ ಹೀಗೆ ಹೇಳಲಾಗಿದೆ-

ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆಯ ಬೆಳೆಯೋಳ-ಭೂಮಿತಾಯ
ಎದ್ದೊಂದು ಗಳಿಗೆ - ನೆನದೇನು

ಇದೇ ಹಾಡಿನ ನುಡಿ ಒಂದಿಷ್ಟು ಪಾಠಭೇದದಿಂದ ಕನ್ನಡ ನಾಡಿನ ಎಲ್ಲ ಕಡೆಯೂ ಪ್ರಚಲಿತವಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದು ಹೀಗಿದೆ-

ಹೊತ್ತಾರೆ ನಾನೆದ್ದು! ಮತ್ತಾರ ನೆನೆಯಲಿ
ಬತ್ತ ತೆಂಗಡಕೆ ಬೆಳೆಯೋಳ-ಭೂತಾಯ
ಭಕ್ತಿಲಿ ಬಾಗಿ-ನೆನವೇನು.

ಇದೇ ದೇಶಭಕ್ತಿಭಾವನೆ ಅಖಿಳಭಾರತೀಯವಾಗಿ ಸಂಸ್ಕೃತದಲ್ಲಿಯೂ ಕಾಣಿಸುತ್ತಿದೆ. ಅದರಂತೆ ಭಾರತೀಯನು ಎದ್ದೊಡನೆ ಮೊದಲು ಕರದರ್ಶನಮಾಡುವನು. ಒಡನೆಯೇ ಮೊದಲ ಹಜ್ಜೆಯನ್ನು ನೆಲದ ಮೇಲಿಡುತ್ತ ಕ್ಷಮಾಯಾಚನೆ ಮಾಡುವನು. ಆ ಶ್ಲೋಕಗಳು ಹೀಗಿವೆ -

ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತೀ
ಕರಮೂಲೇ ತು ಗೋವಿಂದಃ ಪ್ರಭಾತೇ ಕರದರ್ಶನಮ್
ಸಮುದ್ರವಸನೇ ದೇವಿ ಪರ್ವತಸ್ತನಮಂಡಲೇ
ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವ ಮೇ

ಈ ಕರ್ಮಭೂಮಿಯಲ್ಲಿ ಜನ್ಮತಾಳಿದ ಮನುಷ್ಯನಿಗೆ ಕರ್ಮಕ್ಕೆ ಪ್ರಮುಖಸಾಧನವಾದುದು ಕೈ. ಅಂತಹ ಕೈಯಲ್ಲಿ ಧನದೇವತೆಯಾದ ಲಕ್ಷ್ಮೀಯೂ ವಿದ್ಯಾಮಾತೆಯಾದ ಸರಸ್ವತಿಯೂ ನೆಲಸಿದ್ದಾರೆ; ವಿಶ್ವಪಾಲಕನಾದ ವಿಷ್ಣುವೂ ಇದ್ದಾನೆ ಎನ್ನುವಾಗ, ಮನುಷ್ಯನು ಜೀವನದಲ್ಲಿ ಧನವಿದ್ಯೆಗಳೆಂಬ ಎರಡನ್ನೂ ಗಳಿಸಬೇಕಲ್ಲದೆ ಲೋಕಹಿತಕಾರಕನಾಗಿಯೂ ಇರಬೇಕೆಂಬ ಕಲ್ಪನೆ ಕೂಡ ಈ ಕರದರ್ಶನದ ಸೂಕ್ತಿಯಲ್ಲಿ ಅಡಗಿರುತ್ತದೆ. ಹೀಗೆ ಕರದರ್ಶನಾನಂತರ, ಅಡಿಯಿಡುತ್ತಲೇ ತಾಯ್ನೆಲವನ್ನು ತುಳಿಯುವನಲ್ಲವೆ? ತಾಯಿಯನ್ನು ತುಳಿಯಬಹುದೆ? ಆದರೆ ಅನಿವಾರ್ಯವಾದುದರಿಂದ ಆಕೆ ಅದನ್ನು ಸಹಿಸುವಳು ಮತ್ತು ತಪ್ಪನ್ನು ಕ್ಷಮಿಸುವಳು. 'ಕ್ಷಮಯಾ ಧರಿತ್ರೀ' ಎನ್ನಲಾಗಿದೆ. ಸುಳ್ಳಿಗಿಂತ ಹೆಚ್ಚಿನ ಅಧರ್ಮವೇ ಇಲ್ಲದುದರಿಂದ ಸುಳ್ಳಾಡುವವನ ಭಾರವನ್ನು ಹೊರಲಾರೆನೆಂದು ಭೂಮಾತೆ ಹೇಳಿದುದಾಗಿ ಶ್ರೀಮದ್ಭಾಗವತದಲ್ಲಿ (ಸ್ಕಂಧ ೮ ಅಧ್ಯಾಯ ೨೦, ಶ್ಲೋಕ ೪) ಹೇಳಿದೆ-

ನ ಹ್ಯಸತ್ಯಾತ್ ಪರೋಧರ್ಮ ಇತಿ ಹೋವಾಚ ಭೂರಿಯಂ
ಸರ್ವಂ ಸೋಢುಮಲಂ ಮನ್ಯೇ ಋತೇ‌ಽಲೀಕಪರಂ ನರಮ್

ಅಂತಹ ಭೂಮಾತೆಯ ಮೇಲೆ ಅಭಿಮಾನವನ್ನೂ ಭಕ್ತಿಯನ್ನೂ ವ್ಯಕ್ತಪಡಿಸುವ ಆಧುನಿಕ ಕವಿಗಳ ಕವನಗಳು ಬೇಕಾದಷ್ಟಿವೆ. ಪ್ರಕೃತ, ಲೇಖನದ ಶೀರ್ಷಿಕೆಯ ವ್ಯಾಪ್ತಿ ಕಾವ್ಯಕ್ಕಿರುವುದಾದರೂ ಅಂತಹ ಕವಿತೆಗಳಲ್ಲಿಯೂ ಛಂದೋಬದ್ಧವಾದುದಕ್ಕೆ ವಿಶೇಷಲಕ್ಷ್ಯವಿಟ್ಟು ಇನ್ನುಳಿದುದನ್ನು ಸ್ಥೂಲವಾಗಿ ನಿರೂಪಿಸಬೇಕಾಗಿಬರುತ್ತಿದೆ.

ಸುಮಾರು ೬೦ ವರ್ಷಗಳ ಹಿಂದೆ, ಪ್ರಾಥಮಿಕ ಶಾಲೆಗಳ ಕನ್ನಡ ಪಠ್ಯಪುಸ್ತಕದಲ್ಲಿ 'ದೇಶಾಭಿಮಾನ' ಎಂಬ ಭಾಮಿನಿಷಟ್ಪದಿಯ ಪದ್ಯಭಾಗವಿದ್ದಿತು. ಮಕ್ಕಳಲ್ಲಿ ಎಳವೆಯಲ್ಲಿಯೇ ದೇಶಭಕ್ತಿಯನ್ನು ಕುದುರಿಸುವ ಉದ್ದೇಶದಿಂದ ಅದನ್ನು ಶಿಕ್ಷಣವೇತ್ತರು ಅಂತಹ ಸಣ್ಣ ತರಗತಿಗೆ

ಮಾನ್ಯಮಾಡಿದ್ದರು. ಭಾರತ ಮಾತೆಯ ಮೇಲಣ ಭಕ್ತಿಭಾವಭರಿತವಾದ ಆ ಭಾಮಿನಿ ಷಟ್ಪದೀ ಪದ್ಯಗಳ ಮೂರು ಸೊಲ್ಲುಗಳನ್ನು ನನ್ನ ನೆಪಿನ ಅದೆಯಿಂದ ತೆಗೆದು ಇಲ್ಲಿ ಕೊಡುತ್ತಿದ್ದೇನೆ-

ಆವಿನದು ನೊರೆಹಾಲನೊಲ್ಲೆನು
ದೇವಲೋಕದ ಸುಧೆಯನೊಲ್ಲೆನು
ದೇವಿ ನಿನ್ನಯ ನಾಮದದ್ಭುತ ರುಚಿಯನರಿತಿಹೆನು
ಪಾವನಳೆ ನಿನ್ನಂಘ್ರಿಕಮಲದ
ಸೇವೆಯದು ದೊರೆತಿಹುದು ತಾಯೇ
ಶ್ರೀವರನ ದಯೆಯಿಂದ ಮತ್ತಿನ್ನೇನು ಬೇಡೆನಗೆ ೧

ಇರಲೆನಗೆ ಕರಕನ್ನವುಣ್ಣಲು
ಬರಿಯ ನೆಲವಿರಲೆನಗೆ ಮಲಗಲು
ಹರುಕು ಬಟ್ಟೆಗಳೆನ್ನ ಮೈಯನು ಮುಚ್ಚಲಿರಲೆನಗೆ
ಮುರುಕು ಗುಡಿಸಿಲು ಇರಲಿ ಚಾಟಗೆ
ಸಿರಿಯರಸ ಮತ್ತೇನ ಬೇಡೆನು
ಭರತಭೂಮಿಯೊಳಿರುವುದೇ ನನಗೊಂದು ಸುಖವಿಹುದು ೨

ಬರಲಿ ಬ್ರಾಹ್ಮಣರಲ್ಲಿ ಜನ್ಮವು
ಬರಲಿ ಮಾದಿಗರಲ್ಲಿ ಇಲ್ಲವೆ
ಇರದು ಚಿಂತೆಯು ತಾಯೆ ನಿನ್ನುದರದಲಿ ಜನಿಸುವುದೇ
ಪರಮಭಾಗ್ಯವು ಎಂಬುದರಿಯೆನೆ?
ಮರೆಯದೆಯೆ ಪ್ರತಿಜನ್ಮದಲಿ ಶ್ರೀ
ವರನು ದಯೆಯಿಂದೆನಗೆ ನಿನ್ನಲೆ ಕೊಡಲಿ ಜನ್ಮವನು ೩

ಜನ್ಮಭೂಮಿಯನ್ನು ಮಾತೆಯೆಂದು ಕಾಣುವುದು ಮತ್ತು ನಾವೆಲ್ಲ ಆಕೆಯ ಪ್ರೀತಿಯ ಮಕ್ಕಳೆಂದು ಪರಿಗಣಿಸುವುದು-ನಮ್ಮ ನಮ್ಮೊಳಗಿನ ಭೇದಭಾವನನ್ನು ತೊರೆಯಲು, ಒಕ್ಕಟ್ಟಿನಿಂದ ವರ್ತಿಸಲು ಮತ್ತು ದೇಶದ ಏಳಿಗೆಯನ್ನು ಸಾಧಿಸಲು ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ.

ನಮ್ಮ ನಾಡಿನಲ್ಲಿ ಶಿಕ್ಷಣಕ್ಷೇತ್ರಕ್ಕೆ ಮತ್ತು ಸಾಹಿತ್ಯಕ್ಷೇತ್ರಕ್ಕೆ ವಿಶೇಷಸೇವೆ ಸಲ್ಲಿಸಿರುವ ಪಂಜೆ ಮಂಗೇಶರಾಯರು (೧೮೭೪-೧೯೩೭) ಕವಿಶಿಷ್ಯನಾಮದಿಂದ ಮಕ್ಕಳ ಪದ್ಯಗಳನ್ನಲ್ಲದೆ, ಇತರವನ್ನೂ ರಚಿಸಿದ್ದಾರೆ. ಅವುಗಳಲ್ಲಿ ದೇಶಭಕ್ತಿಯ ಪದ್ಯಗಳೂ ಇವೆ. ಅವರ ರಚನೆಗಳು ಲಯವಿನ್ಯಾಸವುಳ್ಳವು ಮತ್ತು ಛಂದೋಬದ್ಧವಾದುವೂ ಆಗಿವೆ. 'ಸತ್ಯಸೀಮೆಗೆ ತಾಯೆ ನಡೆಸೆನ್ನ' ಎಂಬುದು ದೇಶಭಕ್ತಿ ಪರವಾಗಿದ್ದು, ಓರ್ವ ದೇಶಭಕ್ತಿಶೂನ್ಯನಿಗೆ ಜ್ಞಾನೋದಯವಾಗಿ ಹೇಳುವ ರೀತಿಯಲ್ಲಿದೆ; ಭಾಮಿನಿಷಟ್ಪದೀ ರೂಪದಲ್ಲಿದೆ-

ಮಳೆಹನಿಯ ಬಡಿಹೂಗಳಲಿ ಮರ
ಗಳ ಹಸುರು ಹಚ್ಚೆಯಲಿ ಕಡಲಿನ

ಬಳಿನೊರೆಗಳಂಚಿನಲಿ ಮಿರುಗುವ ಸೀರೆಯನು ತಳೆದ
ಹೊಳೆವ ಹೊಳೆಗಳ ಗಳದ ಸರದಲಿ
ಝುಳದ ಹಿಮಗಿರಿಮಕುಟದಲಿ ಥಳ
ಥಳಿಪ ರಮಣಿಯೆ ಜನ್ಮಧರಣಿಯೆ ಭರತಭೂಮಣಿಯೇ ॥ ೧ ॥

ಹೊತ್ತಿಸಿದೆನಾ ಮುಂಚಿನಾಳಿಕೆ
ವೆತ್ತ ಬೀರರ ಪೂರ್ವದರಸರ
ಹೊತ್ತ ನಿನ್ನುದರವನು ಧರ್ಮಾಮೃತದ ಬೋಧಕರ
ಹೆತ್ತ ನಿನ್ನೀ ಬಸುರು ನನ್ನನು
ಹೆತ್ತು ಹಡೆಯಿತು ವಿಷವ ಸೀಗೆಯ
ಬಿತ್ತು ಮೊಳೆತಂತಾಯ್ತು ಬಾಳೆಯ ಬುಡದಿ ನನ್ನಿಂದ ॥ ೨ ॥

ಕತ್ತಿವೀರರು ನಿನ್ನ ಹಗೆತಲೆ
ಯೊತ್ತಿ ರಣದಲಿ ಜಯಿಸಿ ಕುಂಕುಮ
ನೆತ್ತರಿನ ಬೊಟ್ಟಿಟ್ಟು ಶೌರ್ಯದ ಹಣೆಯ ನಡುವಿನಲಿ
ಮತ್ತು ಕೀರ್ತಿಯ ಕಾಲ್ಗೆ ಗೆಜ್ಜೆಯ
ಸುತ್ತಿ ಬೆಳಗಿದ ನಿನ್ನ ಮುಖದಲಿ
ಬಿತ್ತು ನನ್ನೆದೆಯೊಳಗೆ ತುಂಬಿದ ಕತ್ತಲೆಯ ನೆರಳು ॥ ೩ ॥

ಮರೆದೆನೌ ಹೊಂಗೋಳ ಕೈಯಲಿ
ಮರೆತೆನೌ ಮಾಯೆಯಲಿ ಹೊಟ್ಟೆಯ
ಹೊರೆದೆನೌ ನನ್ನೆಲುಬು ಮಾಂಸವ ನಾನೆ ಉಂಡುಂಡು
ತೊರೆದೆನೌ ನನ್ನವರ ಮುಟ್ಟದೆ
ಒರೆದೆನೌ ಪರತಂತ್ರ ಪಾಠವ
ಬರೆದೆನೌ ನಿನ್ನಯ ಲಲಾಟದಿ ದಾಸಮುದ್ರೆಯನು ॥ ೪ ॥

ಕದ್ದ ಕಳ್ಳನು ಕೆಡುಕನಾದರು
ಮುದ್ದುಮಗನಲೆ ತಾಯ್ಗೆ ಆತನ
ನೊದ್ದು ಬಿಡುವಳೆ ತಾಯೆ ನೋಡಾ ಕರುಣದಿಂದೀಗ
ನಿದ್ದೆಯಿಂದೆಚ್ಚತ್ತೆ ಹೋ ಹೋ
ತಿದ್ದಿಕೊಳ್ಳಲು ಹೊತ್ತಿದೆಯೆ ನೀ
ನಿದ್ದು ಕೈಗೊಟ್ಟೆನಗೆ ಕಲಿಸೌ ನಿನ್ನ ಸೇವೆಯನು ॥ ೫ ॥

ನನ್ನ ಹಸಿಮೈತೊಗಲ ಜೋಡನು
ನಿನ್ನಡಿಗೆ ಜೋಡಿಸುವೆ ಗುಡಿಸುವೆ
ನನ್ನ ಕೂದಲ ಚೌರಿಯಲಿ ನಿನ್ನಡಿಯ ಧೂಳಿಯನು
ನನ್ನ ಮುದದಲಿ ಹಿಡಿವೆ ನಿನ್ನನು

ಇನ್ನು ಕುಳ್ಳಿರ್ದೀ ಮನೋರಥ
ವನ್ನು ಬೇಗನೆ ನೂಕಿ ನಡೆವೆನು ಸುಖದ ಮೇರುವಿಗೆ ॥ ೬ ॥

ಎಲ್ಲಿ ಸಾಹಸ ಸತ್ತ್ವದಳತೆಗೆ
ಬಳ್ಳವಾಗದೊ ಮೈಯ ಬಣ್ಣವು
ಎಲ್ಲಿ ಅನ್ಯಾಯಕ್ಕೆ ಕತ್ತಿಯು ಕೊಡದೊ ಬೆಂಬಲವ
ಎಲ್ಲಿ ಆತ್ಮೋನ್ನತಿಯ ಹಾದಿಗೆ
ಕಲ್ಲು ಮುಳ್ಳನ್ನಿಡರೊ ಆ ಸುಖ
ಸಲ್ಲಲಿತ ಸಮ ಸತ್ಯಸೀಮೆಗೆ ತಾಯೆ ನಡೆಸೆನ್ನ ॥ ೭ ॥

ತುಂಬ ಅರ್ಥಪೂರ್ಣವಾಗಿರುವ ಪದ್ಯಗಳಿವು-ನನ್ನ ಜನ್ಮಭೂಮಿಯಾಗಿರುವ ರತ್ನಪ್ರಾಯಳಾದ ಭಾರತಭೂಮಾತೆಯೇ, ನೀನು ಮಳೆಹನಿಗಳೆಂಬ ಬಿಡಿಹೂಗಳಿಂದಲೂ ಮರಗಳ ಹಸುರುಬಣ್ಣದ ಗುರುತುಗಳಿಂದಲೂ ಸಮುದ್ರದ ಬಿಳಿಯ ನೊರೆಗಳೆಂಬ ಅಂಚಿನಿಂದಲೂ ಮಿರುಗುತ್ತಿರುವ ಸೀರೆಯನ್ನು ಉಟ್ಟಿರುವೆ. ಹೊಳೆದು ಕಾಣುವ ನದಿಗಳೆಂಬ ಸರದಿಂದ ಮತ್ತು ಪ್ರಕಾಶಿಸುವ ಹಿಮಗಿರಿಯೆಂಬ ಕಿರೀಟದಿಂದ ಚೆನ್ನಾಗಿ ಕಾಂತಿಬೀರುವ ಸುಂದರಸ್ವರೂಪಿಣಿಯಾಗಿರುವೆ.

ತಾಯೇ, ಆದರೆ ನಾನು ಮಾಡಿದುದೇನು?-ಹಿಂದೆ ಆಳಿದಂತಹ ವೀರರನ್ನೂ ಹಿಂದಿನ ರಾಜರನ್ನೂ ಹೊತ್ತಿರುವ ನಿನ್ನ ಹೊಟ್ಟೆಯನ್ನೂ ನಾನು ಉರಿಸಿದ್ದೇನೆ. ಲೋಕಕ್ಕೆ ಧರ್ಮಾಮೃತವನ್ನು ಬೋಧಿಸಿದವರನ್ನು ಹೆತ್ತ ನಿನ್ನ ಈ ಬಸುರು ನನ್ನನ್ನು ಹೆತ್ತುದು ವಿಷವನ್ನು ಹೆತ್ತ ಹಾಗಾಯಿತು! ನನ್ನಿಂದಾಗಿ ಬಾಳೆಯ ಬುಡದಲ್ಲಿ ಸೀಗೆ ಬೀಜ ಮೊಳೆತ ಹಾಗಾಯಿತು.'

ಕತ್ತಿಯನ್ನು ಹಿಡಿದ ವೀರರು, ನಿನ್ನ ಶತ್ರುಗಳ ತಲೆಯನ್ನು ಹಾರಿಸಿ, ಯುದ್ಧದಲ್ಲಿ ಗೆದ್ದು ನಿನ್ನ ಹಣೆಗೆ ರಕ್ತವನ್ನೆ ಕುಂಕುಮದ ತಿಲಕವಾಗಿಟ್ಟು ಕೀರ್ತಿಯನ್ನೆ ಕಾಲಗೆಜ್ಜೆಯನ್ನಾಗಿ ಸುತ್ತಿದ್ದರು. ಇದರಿಂದ ಬೆಳಗಿದ ನಿನ್ನ ಮುಖದ ಮೇಲೆ, ನನ್ನ ಹೃದಯದಲ್ಲಿ ತುಂಬಿದ್ದ ಅಜ್ಞಾನದ ಕತ್ತಲೆಯ ಛಾಯೆ ಬಿದ್ದಿದೆ. ನಾನು ಚಿನ್ನದ ಕೈಕೋಳವನ್ನಿಟ್ಟುಕೊಂಡು, ಪರಾಧೀನನಾಗಿಯೇ ಮೆರೆದನು. ಹೊರಗಿನ ಮಾಯೆಯಲ್ಲಿ ನನ್ನನ್ನು ನಾನೆ ಮರೆತೆನು. ನನ್ನನ್ನು ನಾನೆ ಕೆಡಿಸಿಕೊಂಡು ಹೊಟ್ಟೆತುಂಬಿಸಿ ಕೊಂಡಿದ್ದೇನೆ. ನನ್ನವರನ್ನೆ ನಾನು ಅಸ್ಪೃಶ್ಯರೆಂದು ಬೇರೆಮಾಡಿದೆನು. ಪರರ ದಾಸ್ಯದ ಪಾಠವನ್ನೆ ಹೇಳುತ್ತ ಬಂದಿರುತ್ತೇನೆ. ನಿನ್ನ ಹಣೆಯಲ್ಲಿ ದಾಸ್ಯದ ಮುದ್ರೆಯನ್ನು ಬರೆದಿರುತ್ತೇನೆ.

ಕಳ್ಳನು ಅದೆಷ್ಟು ಕೆಡುಕನಾದರೂ ತಾಯಿಗೆ ಪ್ರೀತಿಯ ಮಗನೇ ಅಲ್ಲವೆ? ಅವನನ್ನು ತಾಯಿಯು ಒದ್ದುಬಿಡುವಳೆ? ನನ್ನನ್ನು ಕರುಣೆಯಿಂದ ನೋಡಮ್ಮಾ. ನಾನೀಗ ಮರವೆಯಿಂದ ಜಾಗೃತ ಸ್ಥಿತಿಗೆ ಬಂದಿದ್ದೇನೆ. ನನ್ನ ತಪ್ಪನ್ನು ತಿದ್ದಿಕೊಳ್ಳಲು ಈಗ ಸಮಯವಿಲ್ಲದಿರಬಹುದು. ಆದುದರಿಂದ ನೀನೇ ನನ್ನ ಕೈಹಿಡಿದು ನಿನ್ನ ಸೇವೆಯನ್ನು ಮಾಡುವ ವಿಧಾನವನ್ನು ಕಲಿಸಬೇಕಾಗಿದೆ.

ನನ್ನ ದೇಹದ ಹಸಿಯ ತೊಗಲನ್ನು ನಿನ್ನ ಕಾಲಿಗೆ ಪಾದರಕ್ಷೆ ಮಾಡುವೆನು. ನಿನ್ನ ಪಾದದ ಧೂಳನ್ನು ನನ್ನ ಕೂದಲಿನ ಚೌರಿಯಿಂದ ಗುಡಿಸುವೆನು. ನಿನ್ನನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡು,

ಇದುವರೆಗೆ ನಿಷ್ಕ್ರಿಯವಾಗಿದ್ದ ನನ್ನ ಮನಸ್ಸೆಂಬ ರಥವನ್ನು ಸುಖವೆಂಬ ಮೇರುವಿನ ಕಡೆಗೆ ನಡೆಸುವೆನು.

ದೇಹದ ಬಣ್ಣವು ಎಲ್ಲಿ ಸಾಹಸ ಸತ್ವದ ಅಳತೆಯಾಗದೋ ಎಲ್ಲಿ ಆಯುಧವು ಅನ್ಯಾಯಕ್ಕೆ ನೆರವಾಗದೋ ಆತ್ಮೋನ್ನತಿಯನ್ನು ಸಾಧಿಸಲು ಎಲ್ಲಿ ಯಾರ ಅಡ್ಡಿಯೂ ಇಲ್ಲವೋ, ಅಂತಹ ಸತ್ಯದ ಸೀಮೆಗೆ ನನ್ನನ್ನು ನಡೆಸು-ಎಂದೀ ಪದ್ಯದಲ್ಲಿ ಹೇಳಲಾಗಿದೆ.

ಪಂಜೆಮಂಗೇಶರಾಯರು ಸ್ವಲ್ಪಕಾಲ ಕೊಡಗಿನಲ್ಲಿದ್ದರು. ಅಲ್ಲಿನವರ ದೇಶಭಕ್ತಿಗೂ ಐತಿಹಾಸಿಕ ಮಹತ್ವಕ್ಕೂ ಸಂಸ್ಕೃತಿಗೂ ತಲೆದೂಗಿ ದೇಶಾಭಿಮಾನವನ್ನು ಸದಾ ಜಾಗೃತಗೊಳಿಸತಕ್ಕ 'ಹುತ್ತರಿ ಹಾಡು' ಎಂಬ ಸೊಗಸಾದ ಕವಿತೆಯನ್ನು ರಚಿಸಿರುತ್ತಾರೆ. ಇದೊಂದು ಭವ್ಯವಾದ ನಾಡ ಗೀತೆಯ ಅರ್ಹತೆಯನ್ನೆ ಪಡೆದಿದೆ. ಇದರ ಒಂದೆರಡು ಸೊಲ್ಲುಗಳಿವು -

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿಹೊಳೆ ಹೊಳೆಹೊಳೆವಳೋ
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆಕಳೆವಳೋ

ಅಲ್ಲಿ ಆ ಕಡೆ ನೋಡಲಾ
ಅಲ್ಲಿ ಕೊಡವರ ನಾಡಲಾ
ಅಲ್ಲಿ ಕೊಡವರ ಬೀಡಲಾ

. . . .

ಇದು ಅಗಸ್ತ್ಯನ ತಪದ ಮಣೆ ಕಾವೇರಿತಾಯ ತವರ್ಮನೆ
ಕದನಸಿರಿಗುಯ್ಯಾಲೆ ತೂಗಿದನಿಲ್ಲಿ ಚಂದಿರವರ್ಮನೆ
ಇದಕೊ ಚೆಂಗಾಳ್ವರಸರಾಡಂಬರವು ಕುಣಿದ ಶ್ರೀರಂಗವು
ಇದೊ ಇದೋ ಇಲ್ಲುರುಳ್ದ ಹಾಲೇರಿಯರ ಬಲಗಿರಿಶೃಂಗವು

ವಿಧಿಯ ಮಾಟದ ಕೊಡಗಿದು
ಮೊದಲೆ ನಮ್ಮದು ಕಡೆಗಿದು
ಕದಲದೆಮ್ಮದು ಬೆಡಗಿದು

ಇಂತಹವೇ ಆದ ಐದು ಸೊಲ್ಲುಗಳಿಂದ ಕೂಡಿದ ಈ ದೇಶಭಕ್ತಿ ಕವನದಲ್ಲಿ ದಿಗ್ದರ್ಶನಕ್ಕಾಗಿ ಎರಡನ್ನು ಮಾತ್ರ ಕಾಣಿಸಲಾಗಿದೆ.

ರಾಷ್ಟ್ರಕವಿ ಕುವೆಂಪು ಅವರ ಕಾವ್ಯ ಕವನಗಳಲ್ಲಿ ದೇಶಭಕ್ತಿಪರವಾದುವು ಅನೇಕವಾಗಿವೆ. ಅವುಗಳಲ್ಲಿ ಕೂಡ 'ಭಾರತಜನನಿಯ ತನುಜಾತೆ ಜಯಹೇ ಕರ್ಣಾಟಕಮಾತೆ' ಎಂಬುದಂತೂ ಕನ್ನಡದಲ್ಲಿ ನಮ್ಮ ನಾಡಿನ ಅಘೋಷಿತ ರಾಷ್ಟ್ರಗೀತೆಯೇ ಆಗಿರುತ್ತದೆ. ಭಾರತಮಾತೆ ಕರ್ಣಾಟಕಮಾತೆಯರಿಬ್ಬರ ಮೇಲೆಯೂ ಗೌರವ ಸಲ್ಲಿಸುವ ರೀತಿಯದಾಗಿದೆ. ಇನ್ನಿತರ ಆಧುನಿಕ ಕನ್ನಡ ಕವಿವರರಾದ ದ.ರಾ. ಬೇಂದ್ರೆ, ಪು.ತಿ.ನ. ಅಡಿಗ, ನರಸಿಂಹಸ್ವಾಮಿ ಮುಂತಾದವರ ರಚನೆಗಳಲ್ಲಿ ದೇಶಭಕ್ತಿಯವು ಸಾಕಷ್ಟಿವೆ. ಡಿ.ಎಲ್.ಎನ್. ಅವರ ಮುನ್ನುಡಿಯೊಂದಿಗೆ

೧೯೬೧ರಲ್ಲಿ ಹೊರಬಂದ ನನ್ನ 'ತೂಗುದೀವಿಗೆ' ಎಂಬ ಕವನ ಸಂಕಲನದಲ್ಲಿ ಕಂದವೃತ್ತಗಳಲ್ಲಿ ರಚಿತವಾದ 'ರಾಷ್ಟ್ರಾಭಿಮಾನ' ಎಂಬ ಕವನವೂ ಇದೆ. ಅವನ್ನೆಲ್ಲ ಆಯ್ದು ವಿವರಿಸುವುದಾದರೆ ಅದೊಂದು ಮಹಾಗ್ರಂಥವೇ ಆಗುವುದು. ಪ್ರಕೃತ ಲೇಖನದ ವ್ಯಾಪ್ತಿ ಕನ್ನಡ ಕಾವ್ಯಗಳಿಗೆ ಸೀಮಿತವಾಗಿದ್ದರೂ ಅಂತಹದೇ ಕಾವ್ಯಶೈಲಿಯದೆಂದು ಮತ್ತು ಆಧುನಿಕ ಕವಿಗಳಲ್ಲಿ ಹಿಂದಿನವರೆಂದು ಪಂಜೆಯವರ ರಚನೆಯವರೆಗೆ ಇಲ್ಲಿ ಕೈಚಾಚಲಾಗಿದೆ.

ಇಂತಹ ದೇಶಭಕ್ತಿ, ಲೌಕಿಕದಲ್ಲಿ ಇತರ ಎಲ್ಲ ಭಕ್ತಿಗಳಿಗಿಂತ ಮೇಲು ಮಾತ್ರವಲ್ಲ, ಮಾತೃ ಪಿತೃ ಗುರು ದೇವಭಕ್ತಿಗಳಿಗೂ ಬೀಜರೂಪವಾದುದು. ಆದುದರಿಂದ ಸಕಲ ಪ್ರಜೆಗಳಲ್ಲಿಯೂ ಇದ್ದೇ ಇರಬೇಕಾದುದು. ದೇಶಭಕ್ತಿಯೆಂಬುದು ಕವಿಗಳ ರಚನೆಗಳಲ್ಲಿ ಮಾತ್ರ ಕಾಣಿಸಿದರೆ ಸಾಲದು. ಎಲ್ಲರ ರಕ್ತಗತವಾಗಿ ಅವರವರ ನಡೆವಳಿಕೆಗಳಲ್ಲಿ ಕಾಣಿಸಬೇಕು. ಆಗ ಪ್ರತಿಯೊಬ್ಬ ಪ್ರಜೆಯೂ ಯಾವುದೇ ಕಾರ್ಯವನ್ನು-ಇದು ದೇಶದ್ರೋಹವಾಗಬಹುದೆ? ಭೂಮಿತಾಯಿಗೆ ನನ್ನ ಈ ಕೃತ್ಯವು ಮೆಚ್ಚಿಕೆಯಾಗುವುದೆ? ಎಂದು ಮುಂದಾಲೋಚನೆ ಮಾಡಿಯೇ ಮಾಡತೊಡಗುವನು. ಸ್ವತಃ ಫಲಾಪೇಕ್ಷೆಯಿಟ್ಟುಕೊಳ್ಳದೆ ಲೋಕಹಿತಕ್ಕಾಗಿ ಅಥವಾ ನಾಡ ತಾಯ ಪ್ರೀತಿಗಾಗಿ ತನ್ನಿಂದಾಗುವ ಸೇವೆ ಸಲ್ಲಿಸಲು ಮುಂದಾಗುವನು. ಇದರಿಂದ ದೇಶವು ವಿಶ್ವದಲ್ಲಿ ಕೀರ್ತಿಸಂಪನ್ನವಾಗುವುದಲ್ಲದೆ, ರಾಷ್ಟ್ರದಲ್ಲಿ ಶಾಂತಿಯೂ ಸಮೃದ್ಧಿಗಳೂ ಉಂಟಾಗುವವು. ಜಾತಿಗತ-ಸ್ಥಾನಗತ ಭೇದಗಳು, ವೈಮನಸ್ಸುಗಳು ಮತ್ತು ಮೇಲ್ತನ ಕೀಳ್ತನಗಳು ಅಳಿದು ಸಮಾನತೆ ನೆಲಸುವುದು.

□

೧೩

ಸಾಹಿತ್ಯ ಮತ್ತು ಸಂಸ್ಕೃತಿ

ಗಾಳಿ, ಬೆಳಕು, ನೀರು, ಆಹಾರ, ನೆಲೆ - ಇವು ಎಲ್ಲ ಪ್ರಾಣಿವರ್ಗಕ್ಕೂ ಆವಶ್ಯಕ. ಈ ವಿಷಯದಲ್ಲಿ ಮನುಷ್ಯನು ಇತರ ಪ್ರಾಣಿವರ್ಗಕ್ಕೆ ಸಮಾನನು. ಆದರೆ ಆತನಿಗೆ ಭಾವನಾಶಕ್ತಿ ಭಾಷಾಶಕ್ತಿಗಳನ್ನು ವಿಶೇಷವಾಗಿ ನೀಡಲಾಗಿದೆ. ಇವುಗಳ ಮೂಲಕ ಆತ ತನ್ನ ಮನಸ್ಸು, ಬುದ್ಧಿ, ಆತ್ಮಗಳನ್ನು ಎಷ್ಟೆಷ್ಟು ಅಧಿಕವಾಗಿ ಪ್ರೋಜ್ವಲಗೊಳಿಸುವನೋ ಅಷ್ಟಷ್ಟು ಮಟ್ಟಿಗೆ ಮೇಲ್ಮೆವಡೆಯುತ್ತಾನೆ; ಇತರ ಮನುಷ್ಯರಿಗಿಂತ ಉತ್ತಮನೆನಿಸುತ್ತಾನೆ. ದೇವ ಮಾನವನೇ ಆಗುತ್ತಾನೆ. ಹೀಗಾಗುವುದೇ ಮಾನವತೆಯ ಗುರಿ. ಅದಕ್ಕಾಗಿಯೇ ಎಲ್ಲ ಪ್ರಯತ್ನಗಳು, ಸಿದ್ಧತೆಗಳು ಜೀವನದಲ್ಲಿ ನಡೆಯಬೇಕಾಗುತ್ತವೆ. ಹೀಗೆ ಮೇಲ್ಮೆವಡೆಯುವುದು ತನ್ನೊಬ್ಬನ ಅಥವಾ ಒಬ್ಬಿಬ್ಬರ ಹಿತಕ್ಕಾಗಿಯಲ್ಲ. ಹಾಗೆ ಮೇಲ್ಮೆವಡೆದು ಜ್ಞಾನಿಯಾದವ, ಕರ್ಮಕುಶಲನಾದವ, ಕವಿಯಾದವ, ಸುಸಂಸ್ಕೃತನಾದವ ತನ್ನ ಸಮಾಜದ ಇತರರನ್ನೂ ತನ್ನ ಮಟ್ಟಕ್ಕೇರಿಸಲು ತನಗಿಂತಲೂ ಮೇಲೇರಿಸಲು ಸರ್ವಪ್ರಯತ್ನಗಳನ್ನೂ ಮಾಡುತ್ತಾನೆ; ಹೀಗೆ ಮಾಡುವ ಪ್ರಯತ್ನದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಎಂಬವು ವಿಶೇಷ ಮಹತ್ತ್ವದ ಸ್ಥಾನವನ್ನು ಪಡೆಯುತ್ತವೆ.

ಸಂಸ್ಕೃತಿ ತೋರಿಕೆಗೆ ಬಹುವಿಧವಾಗಿ ಕಾಣಿಸುವುದುಂಟು. ಅದರ ವ್ಯಾಪ್ತಿ ಅಷ್ಟು ದೊಡ್ಡದು. ಪೌರ್ವಾತ್ಯ ಪಾಶ್ಚಾತ್ಯ ಎಂಬುದು ಸ್ಥೂಲಭೇದ. ಔತ್ತರೇಯ, ದಾಕ್ಷಿಣಾತ್ಯ, ರಷ್ಯಾ, ಚೀನೀ, ಇಂಗ್ಲೆಂಡ್, ಅಮೇರಿಕ ಹೀಗೆ ದಿಗ್ದೇಶಗತವಾಗಿ ಸಂಸ್ಕೃತಿಯನ್ನು ಹೆಸರಿಸುತ್ತಾರೆ. ಇದಲ್ಲದೆ, ಹಿಂದು, ಕ್ರೈಸ್ತ, ಮಹಮ್ಮದಿ, ಆರ್ಯ, ದ್ರಾವಿಡ, ಕರ್ಣಾಟಕ, ಆಂಧ್ರ, ತೌಳವ - ಇತ್ಯಾದಿ ಅಸಂಖ್ಯ ವಿಭಾಗಗಳಾಗಿ ಪರಿಗಣನೆ ರೂಢಿಯಲ್ಲಿದೆ. ಐತಿಹಾಸಿಕವಾಗಿ ಅರಸುಮನೆತನಗಳ ಹೆಸರಿನಿಂದಲೂ (ಚಾಳುಕ್ಯ, ಹೊಯ್ಸಳ, ವಿಜಯನಗರ ಇ.) ಪರಿಗಣನೆ ಇದೆ. ಶಿಲ್ಪ, ಚಿತ್ರ, ನಾಟ್ಯಾದಿಗಳನ್ನೂ ಸಂಸ್ಕೃತಿಯ ನೆಲೆಯಿಂದಲೇ ಲೆಕ್ಕಿಸುವುದಿದೆ. ಹಾಗೆಯೇ ಭೌತಿಕ, ಆಧ್ಯಾತ್ಮಿಕ, ಧಾರ್ಮಿಕ, ಲೌಕಿಕ ಎಂದೂ ವಿಭಾಗಕ್ರಮಗಳಿವೆ. ಈ ಎಲ್ಲ ವಿಭಾಗಗಳು ತಂತಮ್ಮ ರೀತಿಯಲ್ಲಿ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರತಕ್ಕ ದೇಶ, ಜನ, ತತ್ತ್ವ, ಕಲಾ ವಿಚಾರಸೂಚಕಗಳೆನ್ನಬಹುದು ಮತ್ತು ಅಭ್ಯಾಸಕ್ಕಾಗಿ ಇಟ್ಟುಕೊಳ್ಳಬಹುದಾದ ಪರಿಮಿತಿಗಳು - ಎನ್ನಬಹುದು. ವಾಸ್ತವವಾಗಿ ಸಂಸ್ಕೃತಿ ಎಂಬುದು ಒಂದೇ. ಸಂಸ್ಕೃತಿಗೆ ಭಿನ್ನವಾದುದು 'ಅಸಂಸ್ಕೃತಿ' ಅಂತಹ ಅಸಂಸ್ಕೃತಿಯನ್ನು 'ಆಸುರೀಪ್ರವೃತ್ತಿ' ಎನ್ನಬಹುದು. ಆದುದರಿಂದ ಸಂಸ್ಕೃತಿಯೇ ಮಾನವೀಯತೆ. ಅದು ನಮ್ಮ ರಾಷ್ಟ್ರದ ಆತ್ಮ.

ವಾಗ್ಭೂಷಣ / ೧೦೦

ಡಾ.ಡಿ.ವಿ.ಜಿ. ಯವರು ಮಾಥ್ಯೂ ಅರ್ನಾಲ್ಡನ ಅಭಿಪ್ರಾಯವನ್ನು ಲಕ್ಷಿಸಿ, 'ಸಂಸ್ಕೃತಿ'ಗೆ ಒಳ್ಳೆಯ ವಿವರಣೆ ಕೊಟ್ಟಿದ್ದಾರೆ. ಆ ವಿವರಣೆಯ ಮುಖ್ಯಾಂಶಗಳಿವು - 'ಸಂಸ್ಕಾರದಿಂದ ಆದುದು ಸಂಸ್ಕೃತಿ' . ಸಂಸ್ಕಾರ ಅಥವಾ ಸಂಸ್ಕರಣ ಎಂದರೆ - ಸಮ್ಯಕ್ ಕರಣ ಸಮ್ಯಕ್ ಕೃತಿ, ಅದೇ ಸಂಸ್ಕೃತಿ. ಹಾಗೆಂದರೆ - ಚೆನ್ನಾಗುವಂತೆ ಮಾಡುವುದು, ಒಳ್ಳೆಯದನ್ನಾಗಿಸುವುದು. ಶುದ್ಧಿ ಮಾಡಿ ಉತ್ತಮಪಡಿಸುವುದು ಎಂದರ್ಥ. 'ಒಳ್ಳೆಯದು' ಎಂದರೆ ಒಂದಾನೊಂದು ಪದಾರ್ಥ ಅಥವಾ ಸಂಗತಿ ಹೇಗಿರಬೇಕೋ ಹಾಗಿರುವುದಾಗಿರುತ್ತದೆ. ಹೇಗಿದ್ದರೆ ನಮ್ಮ ಜೀವಿತದ ಪರಮೋದ್ದೇಶ ಸಿದ್ಧಿ ನಮಗೆ ಸಮೀಪಗತವಾಗುವುದೋ ಅದೇ 'ಒಳ್ಳೆಯದು' ಅದೇ ಹಿತ; ಅದೇ ಔಚಿತ್ಯ; ಅದೇ ಸಾಧು. ಆ ಒಳ್ಳೆಯದನ್ನು ಕಂಡುಕೊಳ್ಳುವ ಪ್ರಯತ್ನವೇ - ಆ ಹಿತವನ್ನು ಹುಡುಕುವುದೇ 'ಸಂಸ್ಕೃತಿ'. ನಮ್ಮ ಜೀವನವನ್ನು ಸಾಧುಗೊಳಿಸುವ ವಿಧಾನವೇ 'ಸಂಸ್ಕೃತಿ'. 'ಸಂಸ್ಕೃತಿ' ಎಂದರೆ ಸುಗುಣಸಾಮರಸ್ಯ ' (ಡಿ.ವಿ.ಜಿ. - ಸಂಸ್ಕೃತಿ, ೧೯೫೬, ಪುಟ: ೧೫,೧೬,೨೦)

ಓರ್ವ ಸಂಸ್ಕೃತಕವಿಯ ವಿವರಣೆ ಹೀಗಿದೆ -

ಆಚಾರೇ ವಾಚಿ ಭಾವೇ ಸಮುದಿತಸುಗುಣಾ ಸಂಸ್ಕೃತಿರ್ಯಾ ಪ್ರಸಿದ್ಧಾ
ಪ್ರಾಚೀನೈರ್ಭಾರತಾರ್ಯೈಃ ಪ್ರಗತಿಮತಿಯುತೈರ್ವರ್ಧಿತಾ ಧರ್ಮಮೂಲಾ
ಸಾಹಿತ್ಯೇ ವೇದ ಮಂತ್ರೇಷ್ವುಪನಿಷದಿ ಕಲಾ ಕಾವ್ಯಶಾಸ್ತ್ರೇ ಪುರಾಣೇ
ಶಾಂತಿಂ ಸೌಖ್ಯಂ ದದಾನಾ ಭುವಿ ಸಕಲಬುಧೈರಾದೃತಾ ಶ್ರೇಯಸೇ ಸ್ಯಾತ್
(ಎಡತೊರೆ ಚಂದ್ರ ಶೇಖರಶಾಸ್ತ್ರಿ : ಧಾರ್ಮಿಕಸಂಸ್ಕೃತಿ. ೧೯೫೮, ಪುಟ ೧೦)

ಅಂದರೆ - ತ್ರಿಕರಣಗಳಲ್ಲಿಯೂ ಮೂಡಿ ಬರುವ ಸುಗುಣವೇ ಸಂಸ್ಕೃತಿ ಎಂದು ಪ್ರಸಿದ್ಧವಾದುದು. ಇದನ್ನು ಪ್ರಗತಿಪರ ಬುದ್ಧಿಯುಳ್ಳವರೂ ಪ್ರಾಚೀನರೂ ಆದ ಭಾರತೀಯರು-ಆರ್ಯರು ವೃದ್ಧಿಪಡಿಸಿರುತ್ತಾರೆ. ಸಂಸ್ಕೃತಿಗೆ ಧರ್ಮವೇ ಮೂಲ. ಈ ಸಂಸ್ಕೃತಿಯು ಸಾಹಿತ್ಯಗಳಲ್ಲಿ, ವೇದ ಮಂತ್ರಗಳಲ್ಲಿ, ಉಪನಿಷತ್ತಿನಲ್ಲಿ, ಕಲೆಗಳಲ್ಲಿ, ಕಾವ್ಯಗಳಲ್ಲಿ, ಶಾಸ್ತ್ರಗಳಲ್ಲಿ, ಪುರಾಣಗಳಲ್ಲಿ ನೆಲೆವಡೆದಿದೆ. ಇದು ಶಾಂತಿಯನ್ನೂ ಸೌಖ್ಯವನ್ನೂ ಕೊಡುವುದಾಗಿದೆ. ಲೋಕದಲ್ಲಿ ವಿದ್ವಜ್ಜನರೆಲ್ಲರೂ ಇದನ್ನು ಆದರಿಸುವರು. ಇದು ಶ್ರೇಯಸ್ಸನ್ನು ಗಳಿಸಲಿಕ್ಕಾಗಿ ಇರತಕ್ಕುದಾಗಿದೆ. ಇಷ್ಟೊಂದು ಶ್ರೇಷ್ಠವೂ ಉಪಾದೇಯವೂ ಆದ ಸಂಸ್ಕೃತಿಗೆ ಸಾಧನವಾಗಿರುವವುಗಳಲ್ಲಿ ಸಾಹಿತ್ಯ ವೆಂಬುದು ಮುಖ್ಯವಾಗಿದೆ.

ಸಾಹಿತ್ಯಲಕ್ಷಣವೂ ಸಂಸ್ಕೃತಿನಿರೂಪಕವೇ ಅಗಿರುತ್ತದೆ. 'ಸ + ಹಿತ' ಎಂಬುದರಿಂದಲೇ ಸಾಹಿತ್ಯ ರೂಪಗೊಂಡಿದೆ. ಹಿತದಿಂದ ಕೂಡಿದುದು 'ಸಹಿತ'; ಸಹಿತದ ಭಾವವೇ 'ಸಾಹಿತ್ಯ' ಆದುದರಿಂದ ವ್ಯಕ್ತಿಗೆ, ಸಮಾಜಕ್ಕೆ, ರಾಷ್ಟ್ರಕ್ಕೆ ಹಾಗೂ ವಿಶ್ವಕ್ಕೇ ಹಿತಕರವಾಗಿರುವುದು ಸಾಹಿತ್ಯದ ಲಕ್ಷಣವೆಂದ ಹಾಗಾಯಿತು. ಕನ್ನಡದಲ್ಲಿ ಮೊತ್ತ ಮೊದಲ ಲಾಕ್ಷಣಿಕ ಕೃತಿಯಾಗಿರುವ ಕವಿರಾಜಮಾರ್ಗದಲ್ಲಿ ತತ್ಪೂರ್ವದ ಮಹಾಕವಿಗಳ ಕಾವ್ಯಗಳನ್ನು ಕುರಿತು ಹೇಳಿರುವ ಮಾತು ಇಲ್ಲಿ ಉಲ್ಲೇಖನೀಯ -

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುः
ಖೋಪಾತ್ತಮಿದೆಂದರಿಪುಗು
ಮಾ ಪರಮಕವಿ ಪ್ರಧಾನರಾ ಕಾವ್ಯಂಗಳ್ (೧-೧೮)

ಕಾವ್ಯ ಸಾಹಿತ್ಯವಿರುವುದು ಆನಂದಕ್ಕಾಗಿ ಮಾತ್ರವಲ್ಲ. ಕಾವ್ಯಮಾನಂದಾಯ - ಎಂಬ ಹೇಳಿಕೆಯಿದ್ದರೂ ಅದೊಂದೇ ಕಾವ್ಯಲಕ್ಷಣವಲ್ಲ. ಕಾವ್ಯವನ್ನು ಓದಿದವನು ಅದರಲ್ಲಿ ತನ್ನ ಜೀವನಕ್ಕೆ ಬೆಳಕನ್ನು ಕಾಣುವಂತಿರಬೇಕು. ಪಾಪಪುಣ್ಯಗಳ ಪ್ರಜ್ಞೆ ಮೂಡಿ ಬರಬೇಕು. ಹಿತವಾವುದು, ಅಹಿತವಾವುದು ಎಂಬ ಅರಿವಾಗಬೇಕು. ಯಾವುದು ನಿಜವಾದ ಸುಖ ಮತ್ತು ದುಃಖ ಎಂಬುದು ಗೊತ್ತಾಗಬೇಕು. ಹಿಂದಿನ ಕವಿಗಳ ಕಾವ್ಯಗಳಿಂದ ಇವು ಗೊತ್ತಾಗುತ್ತಿದ್ದುವೆಂದು ಕವಿರಾಜಮಾರ್ಗದಲ್ಲಿ ಹೇಳಿದೆ. ಇದರಿಂದ, ಕಾವ್ಯಸಾಹಿತ್ಯವು ಸದಸದ್ವಿವೇಕವನ್ನೂ ಕರ್ತವ್ಯಬುದ್ಧಿಯನ್ನೂ ಜಾಗೃತಗೊಳಿಸುವುದೆಂದು ಹೇಳಿದಂತಾಯಿತು. ಕಾವ್ಯವು ಸಂಸ್ಕೃತಿ ಪ್ರಬೋಧಕವೆಂದು ಸ್ಪಷ್ಟವಾಯಿತು. ಸಂಸ್ಕೃತ ಲಾಕ್ಷಣಿಕರಲ್ಲಿ ಒಬ್ಬನಾದ ಮಮ್ಮಟನ ಮಾತೂ ಈ ಸಂದರ್ಭದಲ್ಲಿ ಲಕ್ಷ್ಯಾರ್ಹವಾಗಿದೆ -

ಕಾವ್ಯಂ ಯಶಸೇऽರ್ಥಕೃತೇ
ವ್ಯವಹಾರವಿದೇ ಶಿವೇತರ ಕ್ಷತಯೇ
ಸದ್ಯಃ ಪರನಿರ್ವೃತಯೇ
ಕಾಂತಾಸಮ್ಮಿತತಯೋಪದೇಶಯುಜೇ

ಕಾವ್ಯಾಭ್ಯಾಸದ ಪ್ರಯೋಜನಗಳಾಗಿ ಇಲ್ಲಿ - ಕೀರ್ತಿ, ಧನಪ್ರಾಪ್ತಿ, ವ್ಯವಹಾರಜ್ಞಾನ, ಅಶುಭನಿವಾರಣೆ, ಶ್ರೇಷ್ಠವಾದ ಆನಂದ ಮತ್ತು ನಲ್ಲೆ ತನ್ನ ನಲ್ಲನಿಗೆ ಮನವೊಲಿಸಿ ಕೊಡುವ ರೀತಿಯ ಉಪದೇಶ - ಎಂಬ ಆರು ಬಗೆಯವನ್ನು ಹೇಳಲಾಗಿದೆ. ಇವುಗಳಲ್ಲಿ ಮೊದಲಿನವೆರಡು ಕವಿಗೆ ಬಂದರೂ ಬರಬಹುದು. ಮುಂದಿನ ನಾಲ್ಕು ಓದುಗರಿಗೆ ಲಭಿಸುವಂಥವಾಗಿವೆ. ಅವುಗಳಲ್ಲಿ 'ವ್ಯವಹಾರಜ್ಞಾನವು' ಸಂಸ್ಕೃತಿಯ ಮುಖ್ಯ ಲಕ್ಷಣವಾಗಿದೆ. 'ವ್ಯವಹಾರ' ಎಂದರೆ - ಮನುಷ್ಯನು ತನ್ನ ಸಮಾಜದ ಇತರರೊಡನೆ ಹೇಗೆ ವರ್ತಿಸಬೇಕು? ಎಂಬ ನೀತಿನಿಯಮ. ಸಾಮಾಜಿಕನಾದ ಮನುಷ್ಯನು ತನ್ನ ತಂದೆ, ತಾಯಿ, ಗುರು, ಅಣ್ಣ, ತಮ್ಮ, ಅಕ್ಕ, ತಂಗಿ, ಬಂಧು, ಬಳಗ, ಶತ್ರು, ಮಿತ್ರ, ಪತ್ನಿ, ಪರಸ್ತ್ರೀ, ಮಗಳು, ನಂಟ, ಬಂಟ, ಅಧಿಕಾರಿ - ಮುಂತಾದವರೊಡನೆ ವರ್ತಿಸತಕ್ಕ ರೀತಿಗಳು ವಿಭಿನ್ನವಾಗಿವೆ. ಅದರ ಅರಿವೇ ವ್ಯವಹಾರಜ್ಞಾನ. ಶ್ರೀ ಮದ್ರಾಮಾಯಣದಿಂದ ತಿಳಿಯತಕ್ಕ ವ್ಯಾವಹಾರಿಕ ಸಂಸ್ಕೃತಿಯೆಂದರೆ - ಶ್ರೀ ರಾಮನಂತೆ ವರ್ತಿಸಬೇಕು - ಎಂಬುದು. ರಾವಣನಂತೆ, ಶೂರ್ಪನಖಿಯಂತೆ ವರ್ತಿಸಬಾರದು ಎಂಬುದು. ಸ್ತ್ರೀಯರು ಸೀತೆಯಂತೆ, ಊರ್ಮಿಳೆಯಂತೆ, ತಾರಾ ಮಂಡೋದರಿಯರಂತೆ ಪತಿಪರಾಯಣೆಯ ರಾಗಬೇಕು ಎಂಬುದಾಗಿದೆ. ಪತಿಯನ್ನು ತಿದ್ದಲೂ ಮುಂದಾಗಬೇಕೆಂಬುದು ಮಂಡೋದರಿಯಿಂದ ತಿಳಿಯತಕ್ಕುದಾಗಿದೆ.

ಕಾವ್ಯ ರಚನೆಮಾಡತಕ್ಕವನು ಕವಿ. ಅವನು ಸಮಾಜನಿರ್ಮಾಪಕ. ಸಮಾಜದ ಓರೆಕೋರೆಗಳನ್ನು ತಿದ್ದಬೇಕಾದವನು; ಸುಸಂಸ್ಕೃತ. ಅವನಲ್ಲಿ ಸಂಸ್ಕೃತಿ ಇದ್ದರೆ ಮಾತ್ರ ಅವನ ಕೃತಿ ಸಂಸ್ಕೃತಿಯನ್ನು ಎತ್ತಿಹಿಡಿಯಬಲ್ಲುದು. ಅದಕ್ಕಾಗಿಯೇ ಹಿಂದಣವರು. 'ನಾನೃಷಿ: ಕುರುತೇ ಕಾವ್ಯಂ' ಋಷಿಯಲ್ಲದವನು ಕಾವ್ಯ ರಚನೆಮಾಡಲಾರನು - ಎಂದಿದ್ದಾರೆ. ಸ್ವತಃ ಋಷಿಯ ಯೋಗ್ಯತೆಯನ್ನು ಗಳಿಸಿ, ಜೀವನಾನುಭವ ಪಡೆದು, ತ್ಯಾಗ-ತಪಗಳನ್ನು ಆಚರಿಸಿ ಉದಾತ್ತನೆನಿಸಿದವನು ಕಾವ್ಯರಚಿಸಬಲ್ಲನೆಂದು ಅಭಿಪ್ರಾಯ. ಅಂದರೆ - ಅಂಥವನು ರಚಿಸಿದುದನ್ನು ಕಾವ್ಯವೆಂದು ಪರಿಗಣಿಸಬೇಕು ಎಂಬುದಿಲ್ಲಿ ಭಾವ. ಏಕೆಂದರೆ ಅಂತಹ ಕಾವ್ಯ ಮಾತ್ರ ಸಂಸ್ಕೃತಿಯನ್ನು ಎತ್ತಿಹಿಡಿಯಬಲ್ಲುದು. ಈ ಭಾವನೆ ಭಾರತೀಯ ಸಂಸ್ಕೃತಿಗೆ ಅನುಗುಣವಾದುದು. ಕವಿಯ ವ್ಯಕ್ತಿಜೀವನ ಉದಾತ್ತವಾಗಿ, ನಿಷ್ಕಳಂಕವಾಗಿ ಸಮಾಜಕ್ಕೆ ಆದರ್ಶವಾಗಿರಬೇಕೆಂದೂ ಹಾಗಿದ್ದರೆ ಮಾತ್ರ ಆತನ ಸಾಹಿತ್ಯವು ಲೋಕೋತ್ತರವಾಗುವುದೆಂದೂ ಪೂರ್ವಜರ ಮತ. ಈ ಮತಕ್ಕೆ ಅನುಗುಣವಾಗಿ ಹಲವು ಕನ್ನಡ ಕವಿಗಳು ತಮ್ಮ ಶೀಲಸೌಭಾಗ್ಯ ರೂಪದ ಸಂಸ್ಕೃತಿಯನ್ನು ಕಾವ್ಯಗಳಲ್ಲಿ ಹೇಳಿಕೊಂಡುದುಂಟು -

ಆದಿಕವಿ ಪಂಪನು (ಕ್ರಿ.ಶ. ೯೪೧) ತನ್ನ ವಿಕ್ರಮಾರ್ಜುನ ವಿಜಯಕಾವ್ಯದಲ್ಲಿ ಹೀಗೆಂದಿದ್ದಾನೆ-

ಪಂಪಂ ಧಾತ್ರೀವಳಯ ನಿ
ಳಿಂಪಂ, ಚತುರಂಗಬಲಭಯಂಕರಣಂ, ನಿ
ಷ್ಕಂಪಂ, ಲಲಿತಾಲಂಕರ
ಣಂ, ಪಂಚಶರೈಕರೂಪನಪಗತ ಪಾಪಂ (೧೪-೪೯)

ಧಾತ್ರೀವಳಯ ನಿಳಿಂಪಂ (ಭೂಲೋಕದ ದೇವನಂತೆ ಉದಾತ್ತನಾಗಿರುವವನು), ನಿಷ್ಕಂಪಂ (ಸ್ಥಿರಬುದ್ಧಿಯವನು - ಇದು ಧರ್ಮನಿಷ್ಠನ, ಸದ್ಭಕ್ತನ, ಸಮರಶೂರನ ಲಕ್ಷಣ), ಅಪಗತಪಾಪಂ (ಪಾಪವಿಲ್ಲದವನು) ಈ ವಿಶೇಷಣಗಳು ಸಂಸ್ಕೃತಿದ್ಯೋತಕಗಳೇ ಆಗಿವೆ. ಕವಿ ರಾಘವಾಂಕನು ಪ್ರತಿಜ್ಞಾಪೂರ್ವಕ ತನ್ನ ಸಚ್ಚಾರಿತ್ರವನ್ನು ಹರಿಶ್ಚಂದ್ರ ಕಾವ್ಯದಲ್ಲಿ ಹೀಗೆಂದಿದ್ದಾನೆ -

ಪರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ,
ಪರರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ,
ಪರರ ದೈವವ ನುತಿಸದಿರ್ಪ ಭಾಷೆಯು, ಪರರ ಕ್ಲೇಶವೀಕ್ಷಿಸದ ಭಾಷೆ,
ಪರರ ನಿಂದಿಸಿ ತನ್ನ ಹೊಗಳಿಕೊಳ್ಳದ ಭಾಷೆ,
ಪರರ ವಧುವಂ ಕಂಡು ಮನವೆಳಸದಿಹ ಭಾಷೆ,
ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು (೧-೧೭)

ಕವಿಯು ಅಸ್ತೇಯ, ಕರುಣೆ, ಅಕ್ರೋಧ, ಅಮತ್ಸರ, ವಿನಯ, ಬ್ರಹ್ಮಚರ್ಯ ಗುಣವುಳ್ಳವನೆಂದು ಮೇಲಿನ ಪದ್ಯದಿಂದ ವಿದಿತವಾಗುವುದು. ಹೀಗೆ ಇವನಂತೆ ಆಚಣ್ಣ, ಆಂಡಯ್ಯ ಮುಂತಾದ ಬೇರೆ ಬೇರೆ ಕವಿಗಳು ತಮ್ಮ ಸಚ್ಚಾರಿತ್ರವನ್ನು ಧೈರ್ಯದಿಂದ ತಮ್ಮ

ಕಾವ್ಯಗಳಲ್ಲಿ ಹೇಳಿಕೊಂಡಿರುವುದುಂಟು. ಇದರಿಂದ ಜನತೆಗೆ ಮಾರ್ಗ ದರ್ಶನ ಮಾಡತಕ್ಕ ಕವಿವರರ ಜೀವನ ಉದಾತ್ತವಾಗಿರಬೇಕೆಂದು ವಿದಿತವಾಗುವುದು.

ಆಧುನಿಕರು - ಮುಖ್ಯವಾಗಿ ಆಂಗ್ಲರಿಂದ ಪ್ರಭಾವಿತರಾದವರು ಈ ತತ್ತ್ವವನ್ನು ಅಷ್ಟು ಒಪ್ಪುವಂತೆ ತೋರುವುದಿಲ್ಲ. ಕವಿಯ ವ್ಯಕ್ತಿಚಾರಿತ್ರ ದೋಷಪೂರ್ಣವಾಗಿದ್ದರೂ ಆತನು ಸೃಷ್ಟಿಸಿದ ಸಾಹಿತ್ಯವು ಸಂಸ್ಕೃತಿ ಯನ್ನು ಪ್ರತಿಪಾದಿಸುತ್ತಿದ್ದರೆ, ಓದುಗರಿಗೆ ಸದ್ಯಃ ಪರನಿರ್ವೃತಿ (ಆನಂದ) ನೀಡಿದರೆ ಸಾಕೆಂದು ಅಂಥವರ ಅಭಿಪ್ರಾಯವಾಗಿದೆ. ಕವಿಯ ಕಾವ್ಯ ಸಮಾಧಿಯಲ್ಲಿ ಚಿತ್ರಿತವಾಗುವ ಭಾವನಾಪ್ರಪಂಚದ ಭಾವಾತ್ಮಕ ಚಿತ್ರವೇ ಕಾವ್ಯವಾಗಿರುವುದರಿಂದ, ಆತನ ಕಾವ್ಯವು ಶ್ರೇಷ್ಠವೆನಿಸುವಂಥದೆಂದು ಅವರ ಅಭಿಪ್ರಾಯ. ವಿದೇಶೀಸಂಸ್ಕೃತಿ ಹಾಗೂ ಆಂಗ್ಲ ಸಾಹಿತ್ಯ ಈ ವಿಚಾರವನ್ನೆತ್ತಿ ಹಿಡಿಯುತ್ತದೆ.

ಆಂಗ್ಲ ಕವಿಗಳಲ್ಲಿ ಒಬ್ಬನಾದ ಷೆಲ್ಲಿಯು ಗಾಡ್ವಿನ್ ಎಂಬವಳ ಮಗಳೊಡನೆ ಓಡಿಹೋದನಂತೆ! ಭೈರನ್ ಎಂಬ ಸಾಹಿತಿ ಪ್ರಣಯಸಾಹಸಿ ಎನಿಸಿದ್ದನಂತೆ! ವರ್ಡ್ಸ್‌ವರ್ತ್ ಕವಿ ತನಗೆ ಫ್ರೆಂಚ್ ಕಲಿಸಲು ನೇಮಿಸಿಕೊಂಡ ಉಪಾಧ್ಯಾಯೆಯನ್ನು ಪತ್ನಿಯಾಗಿ ಮಾಡಿಕೊಂಡನಂತೆ. ಶಿಷ್ಯೆಯನ್ನು ವಿವಾಹಮಾಡಿಕೊಂಡ, ಮಾಡಿಕೊಳ್ಳುತ್ತಿರುವ ಉದಾಹರಣೆಗಳು ನಮ್ಮಲ್ಲಿವೆ. ಆದರೆ ಪಾಠಕಲಿಸಿದ ಉಪಾಧ್ಯಾಯೆಯನ್ನು - ಹಿರಿಯೆಯನ್ನು ಮದುವೆಯಾದ ಉದಾಹರಣೆ ಇರಲಾರದು. ಇಂತಹ ವರ್ತನೆ ನಮ್ಮ ಸಂಸ್ಕೃತಿಗೆ ಅನುಗುಣವಲ್ಲ. ಮಹಾಭಾರತದ ಒಂದು ಉದಾಹರಣೆಯಿದು -

ಪಾಂಡವರು ಅಜ್ಞಾತವಾಸದಲ್ಲಿ ಇದ್ದಾಗ, ವಿರಾಟನ ಮಗಳಾದ ಉತ್ತರೆಗೆ ಬೃಹನ್ನಳೆ ರೂಪದಲ್ಲಿದ್ದ ಅರ್ಜುನನು ನಾಟ್ಯಾಚಾರ್ಯನಾಗಿದ್ದನು. ಗೋಗ್ರಹಣಾನಂತರ, ಪಾಂಡವರ ರಹಸ್ಯ ಬಯಲಾಯಿತು. ಆ ಸಂದರ್ಭದಲ್ಲಿ ಉತ್ತರನು ತನ್ನ ತಂಗಿಯಾದ ಉತ್ತರೆಯನ್ನು ಅರ್ಜುನನಿಗೆ ಮದುವೆಮಾಡಿಕೊಡುವುದಾಗಿ ಧರ್ಮರಾಯನಿಗೆ ಹೇಳಿದನು. ಆಗ ಧರ್ಮರಾಯನು ಸಂತಸಗೊಂಡು 'ಏಳೇಳು' ಎಂದು ನಸುನಗೆಯಿಂದ ಅರ್ಜುನನನ್ನು ನೋಡಿದನಂತೆ. ಅರ್ಜುನನು ಆಗ ಕೈಮುಗಿದು, ತನ್ನ ಮನಸ್ಸಿನ ನಿರ್ಣಯವನ್ನು ಹೀಗೆನ್ನುವನು -

ವರುಷವಿವಳಲಿ ನಾಟ್ಯವಿದ್ಯೆಯ
ಪರುಟವಿಸಿದೆನು ತಂದೆಯಂತೀ
ತರುಣಿ ಭಜಿಸಿದಳಾ ಪ್ರಕಾರ ರಹಸ್ಯದೇಶದಲಿ
ಗುರುತನದ ಗರುವಾಯಿಯೆತ್ತಲು
ಅರಸಿಯೆಂಬುದಿದಾವ ಮತವೀ
ವರಕುಮಾರಿಯನೀವಡಭಿಮನ್ಯುವಿಗೆ ಕೊಡಲೆಂದ

(ವಿರಾಟಪರ್ವ : ೧೦-೨೬)

ಶಿಷ್ಯೆಯನ್ನು ವರಿಸುವ ವಿಷಯದಲ್ಲಿ ಧರ್ಮಜ್ಞನಾದ ಧರ್ಮರಾಯನ ಆಕ್ಷೇಪವಿರುವುದಿಲ್ಲ. ಹೀಗಿದ್ದರೂ ಶಿಷ್ಯೆ ಮಗಳಿಗೆ ಸಮಾನವೆಂಬ ಕಲ್ಪನೆ ಅರ್ಜುನನದಾಗಿತ್ತು. ಹಾಗೆ ಅವನು ವರ್ತಿಸಿದುದು ಸಂಸ್ಕೃತಿಯ ದ್ಯೋತಕ.

ಮನುಷ್ಯನು ತನ್ನ ಸಕಲಕಾರ್ಯಗಳನ್ನೂ ನಿಃಸ್ವಾರ್ಥಿಯಾಗಿ ಅಥವಾ ಅತ್ಯಂತ ಪರಿಮಿತಸ್ವಾರ್ಥಯುತವಾಗಿ ಹಾಗೂ ಲೋಕಹಿತಾರ್ಥವಾಗಿ ಮಾಡಬೇಕೆಂಬುದನ್ನು ಧರ್ಮನೀತಿಶಾಸ್ತ್ರಗಳು ಸಾರಿಹೇಳುತ್ತವೆ. ನಮ್ಮ ಕವಿಗಳ, ಸಾಹಿತ್ಯಿಕರ ಜೀವನ ಅಂತಹದೇ ಆಗಿದ್ದಿತು. ಕವಿರಾಘವಾಂಕನು ತನ್ನ ಹರಿಶ್ಚಂದ್ರಚಾರಿತ್ರದ ಕೊನೆಗೆ ತಾನು ಕಾವ್ಯವನ್ನು 'ಜನ ಬದುಕಬೇಕೆಂದು, ಅನಪೇಕ್ಷೆಯಿಂದ' ರಚಿಸಿರುವುದಾಗಿ ಹೇಳಿ ತನ್ನ ನಿಃಸ್ವಾರ್ಥತೆಯನ್ನು ಸ್ಪಷ್ಟಪಡಿಸಿದ್ದಾನೆ. ಕವಿಕುಮಾರವ್ಯಾಸನು ಅದೆಷ್ಟು ವಿನಯಪೂರ್ಣ! ನೋಡಿ -

ವೀರನಾರಾಯಣನೆ ಕವಿ ಲಿಪಿ
ಕಾರ ಕುವರವ್ಯಾಸ, ಕೇಳುವ
ಸೂರಿಗಳು ಸನಕಾದಿಗಳು ಜಂಗಮಜನಾರ್ದನರು
ಚಾರುಕವಿತೆಯ ಬಳಕೆಯಲ್ಲ ವಿ
ಚಾರಿಸುವೊಡಳವಲ್ಲ...............ಎಂಬಲ್ಲಿಯೂ

ಕವಿ ಚಾಮರಸನು - **ಬಾಯ ನುಡಿಗಳ ಕೇಳಿ ಕಿವಿಯೊಳ**
ಗಾಯೆನುತ ಪರಿಣಮಿಸಿ ಹೋಹ ವಿ
ಡಾಯವಲ್ಲಿದು .... ಎಂಬಲ್ಲಿಯೂ

ಕಾವ್ಯರಚನೆಯಿರುವುದು ಕೇವಲ ಆನಂದಕ್ಕಾಗಿ ಅಲ್ಲ, ಸತ್ಪರಿಣಾಮಕ್ಕಾಗಿ, ಜೀವನಸುಧಾರಣೆಗಾಗಿ, ಕ್ಷಣಿಕ ತೃಪ್ತಿಗಾಗಿ ಅಲ್ಲ. ಜನತಾರೂಪದ ಜನಾರ್ದನನ ಸೇವೆಗಾಗಿ ಎಂದಿರುವುದು ಕಂಡುಬರುತ್ತದೆ. ಹೀಗೆ ಕವಿಧರ್ಮ- ಕಾವ್ಯಧರ್ಮಗಳೆರಡೂ ಸಂಸ್ಕೃತಿಸಾಧನೆಗಾಗಿ ಇರುವುವೆಂಬುದು ಸ್ಪಷ್ಟವಾದಂತಾಯಿತು.

ಸಾಹಿತ್ಯ ಪ್ರತಿಪಾದಿಸುವ ಸಂಸ್ಕೃತಿಯ ವಿಶಿಷ್ಟಗುಣಗಳಲ್ಲಿ ಸತ್ಯ, ಅಹಿಂಸೆ, ತ್ಯಾಗ ಎಂಬವು ಬಹಳ ಮಹತ್ತ್ವದುವು. ಸತ್ಯದ ಮೇಲ್ಮೆಯನ್ನು ಪ್ರಾಚೀನಕಾಲದಿಂದಲೇ ನೀತಿ ಶ್ಲೋಕಗಳು, ಪದ್ಯಗಳು ಸಾರುತ್ತ ಬಂದಿವೆ -

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ
ಸತ್ಯೇನ ವಾಯವೋ ವಾಂತಿ ಸರ್ವಂ ಸತ್ಯೇ ಪ್ರತಿಷ್ಠಿತಂ

ಅಂದರೆ - ಈ ಭೂಮಿ ನಿಂತಿರುವುದು, ಸೂರ್ಯನು ಬಿಸಿಲು ಕೊಡುತ್ತಿರುವುದು, ಗಾಳಿ ಬೀಸುತ್ತಿರುವುದು ಸತ್ಯದಿಂದ. ಎಲ್ಲವೂ ಸತ್ಯವನ್ನೇ ಆಶ್ರಯಸಿವೆ. ಹೀಗೆ ಸತ್ಯದ ಹಿರಿಮೆಯನ್ನು ಪ್ರತಿಪಾದಿಸುವ ಸಾಹಿತ್ಯ ಕನ್ನಡದಲ್ಲಿ ವಿಪುಲವಾಗಿಯೇ ಇದೆ.

ಶ್ರೀರಾಮನು ತಂದೆಯ ಸತ್ಯವನ್ನು ಪಾಲಿಸುವುದಕ್ಕಾಗಿ ರಾಜ್ಯತ್ಯಾಗಮಾಡಿ ವನವಾಸವನ್ನು ಕೈಗೊಂಡನು. ಆ ಮೇಲೆ ಭರತನು ಬಂದು ಒತ್ತಾಯದಿಂದ ಕರೆದರೂ ವನವಾಸವನ್ನು ಮುಗಿಸದೆ ಹಿಂದಕ್ಕೆ ಬಾರದೆ, ಸತ್ಯವಾಕ್ಯನೆನಿಸಿದನೆಂಬುದು ನಮಗೆ ರಾಮಾಯಣದಿಂದ ತಿಳಿದು ಬರುತ್ತದೆ. ಮಹಾಭಾರತದ ಕರ್ಣನು ತನ್ನ ತಾಯಿಗೆ ಕೊಟ್ಟ ಮಾತಿನಂತೆ, ಒಮ್ಮೆ ತೊಟ್ಟ ಬಾಣವನ್ನು ಪುನಃ ತೊಡಲಿಲ್ಲ. ಹರಿಶ್ಚಂದ್ರನಂತೂ ಸತ್ಯಕ್ಕೇ ಹೆಸರಾದವನು. ರಾಘವಾಂಕನ ಹರಿಶ್ಚಂದ್ರಚಾರಿತ್ರದ ಪ್ರಕಾರ ಹರಿಶ್ಚಂದ್ರನು ಸತ್ಯಕ್ಕೆ ಕೊಟ್ಟ ಬೆಲೆ, ಆ ಬೆಲೆಯನ್ನು ಉಳಿಸುವುದಕ್ಕಾಗಿ

ಪಟ್ಟ ಪಾಡು ರೋಮಾಂಚಕವಾಗಿದೆ; ವಿಶ್ವಾಮಿತ್ರನು ಹರಿಶ್ಚಂದ್ರವನ್ನು ಅಸತ್ಯನನ್ನಾಗಿ ಮಾಡುವೆನೆಂದು ದೇವಲೋಕದಲ್ಲಿ ಪ್ರತಿಜ್ಞೆ ಮಾಡಿ ಬಂದು, ಅವನನ್ನು ಬಗೆಬಗೆಯಾಗಿ ಪೀಡಿಸಿ ನೋಡಿದನು. ಕೊನೆಗೆ ಹೊಲತಿಯರನ್ನು ಮದುವೆಯಾಗು! - ಎಂದು ಒತ್ತಾಯಮಾಡಿದನು., ಆಗ ಹರಿಶ್ಚಂದ್ರನ ಮಾತಿದು -

ಎಡೆವಿಡದೆ ಬೇಡಿ ಕಾಡುವಿರಾದಡಿನ್ನು ಕೇಳ್
ಕಡೆಗೆನ್ನ ಸರ್ವರಾಜ್ಯವನಾದೊಡಂ ನಿಮಗೆ
ಕೊಡಹಡೆವೆನ್ನೈ ಸಲ್ಲದೀಯೊಂದು ತೇಜಮಂ ಕೊಡೆಂ

ಎನ್ನುವನು. ಆಗ ವಿಶ್ವಾಮಿತ್ರನು - 'ತಥಾಸ್ತು' ನೀನು ನನಗೆ ನಿನ್ನ ರಾಜ್ಯವನ್ನು ಕೊಟ್ಟೆ, ನಾನು ತೆಗೆದುಕೊಂಡೆ ' ಎಂದು ಘೋಷಿಸಿದನು. ಅದರಂತೆ ಮತ್ತು ಹರಿಶ್ಚಂದ್ರನು ಕೊಟ್ಟ ಮಾತಿನಂತೆ, ರಾಜ್ಯಸರ್ವಸ್ವವನ್ನೂ ವಿಶ್ವಾಮಿತ್ರನಿಗೆ ಕೊಡಬೇಕಾಯಿತು. ಮುನಿಗೆ ಕೊಡಬೇಕಾಗಿದ್ದ ದಕ್ಷಿಣೆಯ ಹಣಕ್ಕಾಗಿ ಹೆಂಡತಿಯನ್ನೂ ಮಗನನ್ನೂ ಮಾರಬೇಕಾಯಿತು. ತನ್ನನ್ನೂ ಹೊಲೆಯನಿಗೆ ಮಾರಿ, ಸುಡುಗಾಡ ಪಾಲಕನಾಗಿರಬೇಕಾಯಿತು. ಮತ್ತೆ ತನ್ನ ಮಗನು ಮಡಿದುದನ್ನು ಕಾಣಬೇಕಾಯಿತು. ಹೆಂಡತಿಯ ತಲೆಗಡಿಯಲು ನಿಲ್ಲಬೇಕಾಯಿತು. ಇವೆಲ್ಲವೂ ಕೇವಲ ತಾನು ನುಡಿದಂತೆ ನಡೆಯಲಿಕ್ಕಾಗಿ, ಸತ್ಯದ ರಕ್ಷಣೆಗಾಗಿ! ಈ ಎಲ್ಲ ಪರೀಕ್ಷೆಗಳಲ್ಲಿ ಉತ್ತೀರ್ಣನಾದ ಮೇಲೆ, ಅವನಿಗೆ ಶಿವನು ಪ್ರತ್ಯಕ್ಷನಾಗಿ, ಸಕಲ ಸಾಮ್ರಾಜ್ಯವನ್ನು ಪುನಃ ಕರುಣಿಸಿದನು - ಎಂಬುದೇ ಈ ಕಾವ್ಯವಸ್ತು.

ಇಂತಹ ಸತ್ಯಪಾಲನೆಯ ಕಥನಗಳು ಭಾರತೀಯ ಸಾಹಿತ್ಯಗಳಲ್ಲಿ - ಕನ್ನಡದಲ್ಲಿ ನೂರಾರಿವೆ. ನಮ್ಮ ಕವಿಗಳಿಗೆ ಅಂತಹ ಸತ್ಯವಾದಿ ಮಾನವರ ಚಿತ್ರಣದಿಂದ ತೃಪ್ತಿಯಿಲ್ಲ. ಅದಕ್ಕಾಗಿ ಪಂಚತಂತ್ರದ ಕಥೆಗಳಲ್ಲಿ ಮಾತ್ರವಲ್ಲದೆ ಜಾನಪದವೆನಿಸುವ ಗೋವಿನ ಕತೆಯಲ್ಲಿಯೂ ಸತ್ಯವನ್ನು ಎತ್ತಿಹಿಡಿಯಲಾಗಿದೆ. ಪುಣ್ಯಕೋಟಿ ಎಂಬ ಹಸುವನ್ನು ಹುಲಿ ಅಡ್ಡಗಟ್ಟಿದಾಗ ಅದು ಹೇಳಿದ ಮಾತಿದು -

ಒಂದು ಬಿನ್ನಹ ಹುಲಿಯ ರಾಯನೆ
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ ॥

ಹುಲಿಗೆ ಆ ಹಸುವಿನ ಮಾತಿನಲ್ಲಿ ನಂಬಿಕೆಯಿಲ್ಲ. ನಂಬಿಕೆ ಬರಿಸುವುದಕ್ಕಾಗಿ ಹಸು ಹೇಳಿದುದನ್ನು ಕೇಳಬೇಕು -

ಸತ್ಯವೆಂಬುದೆ ತಾಯಿ ತಂದೆ
ಸತ್ಯವೆಂಬುದೆ ಬಂಧು ಬಳಗವು
ಸತ್ಯವಾಕ್ಯಕೆ ತಪ್ಪಿನಡೆದರೆ
ಮೆಚ್ಚನಾ ಜಗದೀಶನು ॥

ಅಂತಹ ಹಸುವಿನ ಬಾಯಿಯಿಂದಲೂ ನಮ್ಮ ಕವಿಗಳು ಸತ್ಯದ ಹಿರಿಮೆಯನ್ನು ಹೇಳಿಸಿದ್ದಾರೆ. ಸತ್ಯದ ಕತೆಗಳನ್ನು ಕಟ್ಟಿದ್ದಾರೆ. 'ಕೈಯಿಂದ ಕೆಳಗೆ ಬಿದ್ದುದನ್ನು ಎತ್ತಬಹುದು, ಬಾಯಿಂದ ಬಿದ್ದುದನ್ನು ಎತ್ತರಾರೆವು. ಕೊಟ್ಟ ಮಾತೆಂಬುದು ಉಸಿರು, ಅದು ತಪ್ಪಿದರೆ ಸತ್ತಂತೆ. ಬರೆದುದನ್ನು, ಭಾವನೆಯನ್ನು ಅಳಿಸಬಹುದು, ಹೊರ ಬಂದ ಮಾತನ್ನು ಅಳಿಸಲು ಅಸಾಧ್ಯ' - ಎಂಬೀ ಮಾತುಗಳು ನಮ್ಮ ಸಂಸ್ಕೃತಿ ಸತ್ಯಕ್ಕೆ ಕೊಟ್ಟ ಸ್ಥಾನಮಾನದ್ಯೋತಕವಾಗಿವೆ.

ಸತ್ಯದಂತೆಯೇ ತ್ಯಾಗ ಎಂಬುದು ಸಂಸ್ಕೃತಿಯ ಮಹದ್ಗುಣ. 'ಕುಟುಂಬದ ಏಳಿಗೆಗಾಗಿ ಅವಶ್ಯವಾದಾಗ, ಒಬ್ಬ ವ್ಯಕ್ತಿಯನ್ನು ಬಿಟ್ಟು ಬಿಡಬೇಕು, ಗ್ರಾಮಕ್ಕಾಗಿ ಒಂದು ಕುಟುಂಬವನ್ನೂ ದೇಶಕ್ಕಾಗಿ ಒಂದು ಗ್ರಾಮವನ್ನೂ ಆತ್ಮಕಲ್ಯಾಣಕ್ಕಾಗಿ (ಸರ್ವಹಿತಕ್ಕಾಗಿ) ಪೃಥ್ವಿಯನ್ನೂ ತ್ಯಾಗಮಾಡಬೇಕು' ಎಂದು ನೀತಿ ಶಾಸ್ತ್ರವಿದೆ. ಋಷಿಗಳು ಆತ್ಮೋದ್ಧಾರಕ್ಕಾಗಿ ವಿಷಯತ್ಯಾಗ ಮಾಡುವುದು, ದೇಶಭಕ್ತರು ರಾಷ್ಟ್ರಹಿತಕ್ಕಾಗಿ ಸಕಲವನ್ನು-ಪ್ರಾಣವನ್ನೂ ತ್ಯಾಗಮಾಡುವುದು ನಡೆದುಬಂದ ಸಂಗತಿ. ತ್ಯಾಗ ಎಂದರೆ - ಬಿಟ್ಟುಬಿಡುವುದು ಎಂಬುದು ನಿಜ. ಆದರೆ ಯಾವುದು ಸಿಗುವುದಿಲ್ಲವೋ ಅದನ್ನು ಬಿಡುವುದೆಂಬುದು ತ್ಯಾಗವಲ್ಲ. ಒಂದು ನರಿ ತನಗೆ ಎಟಕದ ದ್ರಾಕ್ಷೆಗೊಂಚಲನ್ನು ಬಿಟ್ಟರೆ, ಅದು ತ್ಯಾಗವಲ್ಲ. ಶತ್ರು ನಮ್ಮ ದೇಶದ ಒಳನುಗ್ಗಿ ಭೂಸ್ವಾದೀನ ಮಾಡಿದಾಗ ನಾವು ಅದನ್ನು ಅವನಿಗೇ ಬಿಟ್ಟೆವೆಂದರೆ, ಅದು ತ್ಯಾಗವಲ್ಲ, ಅದು ಹೇಡಿತನದ ರಾಷ್ಟ್ರದ್ರೋಹ! ಆದಿಕವಿ ಪಂಪನು ವಿವರಿಸಿದ ಬಾಹುಬಲಿಯ ತ್ಯಾಗ ನಿಜವಾದ ತ್ಯಾಗ.

ಅವನ ಅಣ್ಣನಾದ ಭರತಕ್ರೇಶನು ದಿಗ್ವಿಜಯಿಯಾಗಿ ಬಂದು, ಕೊನೆಗೆ ಬಾಹುಬಲಿಯೊಡನೆ ಕಾದಾಡಿ ಪೂರ್ಣವಾಗಿ ಸೋತನು. ಬಾಹುಬಲಿ ಗೆದ್ದನು. ಈಗ ರಾಜ್ಯವೆಲ್ಲವೂ ಅವನಿಗಾಯಿತು. ಆದರೆ ಅವನು ಅದನ್ನು ಇಟ್ಟುಕೊಂಡನೆ? ಅವನು ಅದನ್ನು ಅಣ್ಣನಿಗಾಗಿ ತ್ಯಾಗಮಾಡಿದನು. ಅವನ ಮಾತಿದು -

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋ
ತ್ಪಲವನವಿಭ್ರಮದ್ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ, ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ! ನೀ
ನೊಲಿದ ಲತಾಂಗಿಗಂ ಧರೆಗಮಾಟಸಿದಂದು ನೆಗಳ್ತೆ ಮಾಸದೇ?

(ಆದಿಪುರಾಣಂ ೧೪-೧೩೦)

ರಾಮಾಯಣದಲ್ಲಿ ಭರತನ ಹಾಗೂ ರಾಮನ ತ್ಯಾಗವೂ ಅಂತಹದೇ ಆಗಿದೆ. ದಶರಥನು ರಾಮನಿಗೆ ರಾಜ್ಯವನ್ನಿತ್ತಾಗ, ಕೈಕೆ ಅಡ್ಡಬಂದಳು. ಅದನ್ನು ಭರತನಿಗೆ ಕೊಡುವಂತೆ ಕೇಳಿಕೊಂಡಳು. ಇದರಿಂದ ರಾಮನಿಗೆ ಬೇಸರವಾಯಿತೇ ? ರಾಮನ ಮಾತು ಪಂಪರಾಮಾಯಣದಲ್ಲಿ ಈ ರೀತಿಯಾಗಿದೆ -

ದೇವರೆನಗಿತ್ತೊಡಂ ವಸು
ಧಾವಲಯಮನಾಳ್ವರೆನ್ನ ತಮ್ಮಂದಿರೆ ಚಿಂ
ತಾವಿಷಯಮಲ್ತು ಭರತಂ
ಗೀವುದು ವಸುಮತಿಯನೆಮ್ಮೊಳೆಡೆಗಟ್ಟುಂಟೇ (6-119)

ತಂದೆ ತನಗೆ ಕೊಟ್ಟ ರಾಜ್ಯ ಇದೀಗ ಹೋಯಿತೆಂದು ರಾಮನಿಗೇನೂ ದುಃಖವಾಗಲಿಲ್ಲ. ಆಗ ಜನರು ಹೀಗೆ ಆಡಿಕೊಂಡರಂತೆ - (ಮೆಚ್ಚಿ ಹೊಗಳಿದರು)

ಏದೊರೆಯರ್ ಮಹಾಪುರುಷರಾದ್ಯರಿದಂ ಪಿಡಿದೊರ್ವರೊರ್ವರೊಳ್
ಕಾದಿದರೋಡಿದರ್ ಮಡಿದರಲ್ಲದೆ ತಂದೆಯ ಸನ್ನಿಗಿತ್ತರಾರ್
ಮೇದಿನಿಯಂ? ಜರತ್ತೃಣವನೀವವೊಲೆಂದು ಕಡಂಗಿ ಬಣ್ಣಿಸಿ
ತ್ತಾದರದಿಂ ಮಹೀಭುಜಸಭಾವಳಯಂ ಬಳಭದ್ರ ರಾಮನಂ (6-132)

ತಂದೆಯ ಸತ್ಯಪಾಲನೆಗಾಗಿ ರಾಮನು ರಾಜ್ಯತ್ಯಾಗ ಮಾಡಿದನಾದರೆ, ಭರತನು ತನ್ನ ಕೈಗೆ ಬಂದ ಪದವಿಯ ಭಾಗ್ಯವನ್ನು ಸ್ವೀಕರಿಸಲೇ ಇಲ್ಲ. ಯೋಗ್ಯನಾದ ಅಣ್ಣನಿರುವಾಗ. ಅವನೇ ಅರಸನಾಗತಕ್ಕವನಿರುವಾಗ, ಅಂತಹ ಪದವಿಯನ್ನು ಅಣ್ಣನಿಗಾಗಿಯೇ ಮೀಸಲಿಟ್ಟು ಭರತನು ತ್ಯಾಗವೀರನೆನಿಸಿದನು. ಸಂಸ್ಕೃತಿಯ ಲಕ್ಷಣದಿಂದ ಇದು ಉತ್ತಮವಾದ ತ್ಯಾಗವೇ ಸರಿ.

ಲೋಕಮಾನ್ಯ ತಿಲಕರು, ಗಾಂಧೀಜಿಯಂಥವರು ವ್ಯಕ್ತಿಸ್ವಾರ್ಥವನ್ನೆಲ್ಲ ಬದಿಗಿಟ್ಟು ಭಾರತಮಾತೆಯ ಬಂಧನದ ಬಿಡುಗಡೆಗಾಗಿ ಮಾಡಿದ ತ್ಯಾಗ ಅಸಾಧಾರವಾದುದು. ಇಂತಹ ತ್ಯಾಗವನ್ನೇ ನಮ್ಮ ಸಾಹಿತ್ಯ ಪ್ರತಿಪಾದಿಸುತ್ತದೆ. ಸತ್ಯವನ್ನೆತ್ತಿ ಹಿಡಿಯುವಾಗ ತ್ಯಾಗ ಅದರೊಂದಿಗೆ ಬಂದೇ ಬರುತ್ತದೆ.

ಸಂಸ್ಕೃತಿಯ ಲಕ್ಷಣಗಳಲ್ಲಿ ಅಹಿಂಸೆಯೂ ಮುಖ್ಯವಾದುದು. ಸಾಹಿತ್ಯದಲ್ಲಿ ಅದರ ಪ್ರತಿಪಾದನೆ ಇದ್ದೇ ಇದೆ. ನಮ್ಮ ಕಾವ್ಯ ನಾಟಕಗಳ ಕಥಾವಸ್ತು ಹೆಚ್ಚಾಗಿ ಭಾರತ, ರಾಮಾಯಣ, ಭಾಗವತ, ಪುರಾಣಾದಿಗಳಿಂದಲೇ ಆಯ್ದುವು. ಅವುಗಳಲ್ಲೆಲ್ಲಾ ಭಗವಂತನ ಲೀಲೆಗಳ ಅವತಾರಗಳ ವರ್ಣನೆ ಬರುತ್ತದೆ. ಶಿಷ್ಟರ ಪಾಲನೆಗಾಗಿ ದುಷ್ಟರ ಸಂಹಾರದ ಕಥೆಗಳು ಅವುಗಳಲ್ಲಿರುತ್ತವೆ. ದುಷ್ಟರ ಸಂಹಾರವೆಂಬುದು ಅವರ ಹಿಂಸಾಪ್ರವೃತ್ತಿಯನ್ನು ತೊಲಗಿಸುವುದಕ್ಕಾಗಿಯೇ ಆದರೂ ಸಂಹಾರದಲ್ಲಿ ಹಿಂಸೆಯೇನೋ ಇರುತ್ತದೆ. ಹಿಂಸೆಯಿಂದ ಪಾಪ ಬಂದೇ ಬರುತ್ತದೆ. ಎಂಬುದು ನಮ್ಮ ಸಂಸ್ಕೃತಿಗನುಗುಣವಾದ ನಂಬಿಕೆ. ಶ್ರೀ ರಾಮನು ರಾವಣಾದಿ ರಾಕ್ಷಸರನ್ನು ಕೊಂದ ಪಾಪಪರಿಹಾರಕ್ಕಾಗಿ ಅಶ್ವಮೇಧಯಾಗವನ್ನು ಮಾಡುತ್ತಾನೆ. ಹಾಗೆಯೇ ಧರ್ಮರಾಯನು ಬಂಧುಹತ್ಯಾದೋಷ ಪರಿಹಾರಕ್ಕಾಗಿ , ಯಾಗಮಾಡಿದ ಉದಾಹರಣೆ ಮಹಾಭಾರತದಲ್ಲಿದೆ. ದುಷ್ಟಸರ್ಪಗಳನ್ನು ಧ್ವಂಸಮಾಡತಕ್ಕ ಸರ್ಪಯಾಗಮಾಡಿದ ಜನಮೇಜಯನಿಗೂ ಪಾಪ ಬಂದಿತ್ತೆಂದು ಅಲ್ಲಿ ಹೇಳಿದೆ. ಜೈನಸಿದ್ಧಾಂತ ಪ್ರಕಾರ, ಯಾವ ಬಗೆಯ ಹಿಂಸೆಯಾದರೂ ಪಾಪವಂಟುವದು. ಜೈನ ರಾಮಾಯಣಗಳ ಪ್ರಕಾರ, ರಾವಣಾದಿಗಳನ್ನು ಕೊಂದ ಲಕ್ಷ್ಮಣನು ಘೋರ ನರಕಕ್ಕೆ ಇಳಿಯುತ್ತಾನೆ.

ಮಹಾಕವಿ ಜನ್ನನ ಯಶೋಧರ ಚರಿತೆ ಎಂಬ ಕಾವ್ಯ ಅಹಿಂಸಾಧರ್ಮವನ್ನು ಪ್ರತಿಪಾದಿಸುತ್ತದೆ. ಅದರಲ್ಲಿ ಬರುವ ಯಶೋಧರ ರಾಜನು ತನ್ನ ಮಡದಿ ಅಮೃತಮತಿ ಅಪಾತ್ರದಲ್ಲಿ ರಮಿಸುತ್ತಿರುವುದನ್ನು ಸ್ವತಃ ಕಂಡು ಕ್ರೋಧವಶನಾದನು. ಆ ಸಂದರ್ಭದ ಪದ್ಯವಿದು-

ಆಗಳ್ ಬಾಳ್ ನಿಮಿರ್ದುದು, ತೋಳ್
ತೂಗಿದುದು, ಮನಂ ಕನಲ್ದುದಿರ್ವರುಮನೆರಳ್

ಭಾಗಂಮಾಡಲ್ ಧೃತಿ ಬಂ
ದಾಗಳ್, ಮಾಣೆಂಬ ತೆರದೆ ಪೇಸಿದನರಸಂ

ಅಮೃತಮತಿ ಮತ್ತು ಅಷ್ಟವಂಕ ಎಂಬಿಬ್ಬರನ್ನೂ ಕಡಿದು ತುಂಡರಿಸಲೆಂದು ಅವನ ಕೈಯ ಖಡ್ಗ ನೆಟ್ಟಗಾಯಿತು. ಮನಸ್ಸು ಕ್ರೋಧವಶವಾಯಿತು... ಆದರೆ ಸಂಸ್ಕೃತಿಯ ಲಕ್ಷಣಗಳಲ್ಲಿ ಒಂದಾದ ಧೃತಿ ಅವನನ್ನು ತಡೆಯಿತು. ವಿವೇಕ ಮೂಡಿತು. ರಾಜನು ಹಿಂಸಾವೃತ್ತಿಗೆ ಹೇಸಿದನು. ತಾನು ಕಂಡ ಕನಸನ್ನು ಹೇಳುವಂತೆ ತಾಯಿಗೆ ತಿಳಿಸಿದನು. ಈ ಕೆಟ್ಟುದರ ಪರಿಹಾರಕ್ಕಾಗಿ ಚಂಡಿಕಾದೇವಿಗೆ ಪ್ರಾಣಿ ಬಲಿಕೊಡಬೇಕು. ಆದರೆ ಅದು ಹಿಂಸಕವಾಗುವುದು. ಅದು ಜೈನಧರ್ಮಕ್ಕೆ ವಿರುದ್ಧ. ಅದಕ್ಕಾಗಿ ಹಿಟ್ಟಿನ ಕೋಳಿಯನ್ನು ಯಶೋಧರನು ಕಡಿದು ಬಲಿಕೊಡುವಾಗ, ಒಂದು ಪಿಶಾಚಿ ಅದರಲ್ಲಿ ಸೇರಿ, ಆ ಕೋಳಿಯ ತಲೆಯಿಂದ ಕುಕ್ಕೂಕೂ ಎಂದು ಕೂಗಿತು. ಆಗ ಯಶೋಧರನು ದುಃಖಿತನಾಗಿ ಹೀಗೆಂದನು-

ಅಮೃತಮತಿಯೆಂಬ ಪಾತಕಿ
ಯ ಮಾಯೆ ಬನವಾಯ್ತು ಚಂದ್ರಮತಿಮಾತೆಯ ಮಾ
ತೆಮಗೆ ಬಲೆಯಾಯ್ತು ಹಿಂಸನ
ಮಮೋಘಶರಮಾಯ್ತು ಕೆಡೆದುದಾತ್ಮ ಕುರಂಗಂ

ಅಯ್ಯೋ ತನ್ನಿಂದ ಹಿಂಸೆಯಾಯಿತಲ್ಲಾ! 'ಆತ್ಮನಾಶವಾಯಿತಲ್ಲಾ' ಎಂದನು. ಪರಿಣಾಮವಾಗಿ ಅವನೂ ಅವನ ತಾಯಿಯೂ ವೈರಾಗ್ಯ ತಾಳಿ ತಪಸ್ಸಿಗೆ ಹೊರಟರು. ಹಲವು ಜನ್ಮಗಳಲ್ಲಿ ತೊಳಲಿದರು. ಹಿಂಸೆಯೆಂಬುದು ಕಾಯಿಕವಾಗಿರಲಿ, ಮಾನಸಿಕವಾಗಿರಲಿ, ಅದು ಆತ್ಮನಾಶಕ್ಕೆ ಕಾರಣವೆಂಬುದನ್ನೂ ಅಹಿಂಸೆಯನ್ನು ಸಾಧಿಸಿದಲ್ಲದೆ ಮೋಕ್ಷವಿಲ್ಲವೆಂಬುದನ್ನೂ ಈ ಕಾವ್ಯ ದೃಢಪಡಿಸುತ್ತದೆ. ಪ್ರಾಣಿಬಲಿಯನ್ನು ಸ್ವೀಕರಿಸತಕ್ಕ ಚಂಡಮಾರಿದೇವತೆಯ ಕಲ್ಲೆದೆ ಕೂಡ ಮೃದುವಾಗಿ ಅಹಿಂಸಕವನ್ನಾಗಿ ಪರಿವರ್ತಿಸಿದ ಅಹಿಂಸಾಧರ್ಮದ ಕಥೆಯನ್ನು ನಾವು ಈ ಕಾವ್ಯದಲ್ಲಿ ಕಾಣುತ್ತೇವೆ.

ಕನ್ನಡದ ಮೊದಲ ಉಪಲಬ್ಧ ಗದ್ಯಕೃತಿಯಾಗಿರುವ ವಡ್ಡಾರಾಧನೆಯಲ್ಲಿ ಬರುವ ಉಪಸರ್ಗಕೇವಲಿಗಳ ಜೀವನಕಥೆಗಳು ಕೂಡ ಅಹಿಂಸಾಪಾಲನೆಯ ಹಿರಿಮೆಯನ್ನು ತಿಳಿಸುತ್ತವೆ. ಕನ್ನಡ ಸಾಹಿತ್ಯದ ಜೈನಪುರಾಣಗಳೆಲ್ಲವೂ ಅಹಿಂಸೆಯನ್ನು ಪ್ರತಿಪಾದಿಸುವಂಥವೇ ಆಗಿವೆ.

ಅತಿಥಿಸತ್ಕಾರ ಮತ್ತು ಆಶ್ರಿತರಕ್ಷಣೆ - ಇವು ಸಂಸ್ಕೃತಿಯ ಇತರ ವಿಶೇಷಗುಣಗಳು. 'ಅತಿಥಿದೇವೋ ಭವ' ಎಂಬುದು ಉಪನಿಷದ್ವಾಣಿ. ಅತಿಥಿಯ ಆಸೆಗೆ ಭಂಗತರುವುದು ಪಾಪಕರ. ನೀತಿ ಶ್ಲೋಕ ಹೀಗಿದೆ -

ಅತಿಥಿರ್ಯತ್ರ ಭಗ್ನಾಶೋ ಗೃಹಾತ್ ಪ್ರತಿನಿವರ್ತತೇ
ಸ ದತ್ವಾ ದುಷ್ಕೃತಂ ತಸ್ಯ ಪುಣ್ಯಮಾದಾಯ ಗಚ್ಛತಿ (ಪಂಚತಂತ್ರ)

ಅತಿಥಿ ತನ್ನ ಆಸೆ ಈಡೇರದೆ ಮರಳಿದನೆಂದರೆ - ಅವನ ಪಾಪ ಗೃಹಸ್ಥನಿಗೆ ಬರುವುದು, ಗೃಹಸ್ಥನ ಪುಣ್ಯ ಅವನ ವಶವಾಗುವುದು ಎಂದರ್ಥ. ಹೀಗೆ ತಿಳಿದುಕೊಂಡವರು ನಮ್ಮ

ಪೂರ್ವಜರು. ಜಮದಗ್ನಿಮುನಿ ಕಾರ್ತಿವೀರ್ಯನಿಗೆ ಆತಿಥ್ಯವಿತ್ತುದು, ಧರ್ಮರಾಯನು ಸಾವಿರಾರು ಶಿಷ್ಯರೊಡನೆ ಬಂದ ದೂರ್ವಾಸನಿಗೆ ಆತಿಥ್ಯನೀಡಿದುದು ಆ ಸಂದರ್ಭದ ಸಂಗತಿಗಳು ನಮ್ಮ ಸಾಹಿತ್ಯದಲ್ಲಿ ಬರುತ್ತವೆ. ಶ್ರೀರಾಮನ ಯಜ್ಞಾಶ್ವವು ಆರಣ್ಯಕಮುನಿಯ ಆಶ್ರಮಕ್ಕೆ ಹೋದಾಗ, ಶತ್ರುಘ್ನಾದಿಗಳು ಸಾವಿರಾರು ಸೈನಿಕರೊಂದಿಗೆ ಅಲ್ಲಿಗೆ ಹೋಗಿ ಮುನಿಯ ಆತಿಥ್ಯವನ್ನು ಸ್ವೀಕರಿಸಿದುದಾಗಿ ಶ್ರೀ ರಾಮಾಶ್ವಮೇಧದಲ್ಲಿ ಹೇಳಿದೆ (ಆಶ್ವಾಸ : 13) ಆ ಅತಿಥ್ಯ ಬರಿಯ ಬಾಯುಪಚಾರವಾಗಿದ್ದಿಲ್ಲ. ಬಂದವರಿಗೆ ಅರ್ಘ್ಯ ಪಾದ್ಯಗಳನ್ನಿತ್ತು ಕುಳ್ಳಿರಿಸಿ, ಸವಿಯಾದ ಊಟವನ್ನಿತ್ತು, ಹೂವಿನಿಂದ ಸಿಂಗರಿಸಿ ಗಂಧದಿಂದ ಸೊಗಸುಮಾಡಿ, ಒಟ್ಟಿಗಿದ್ದು ಮಾತಾಡಿ ಮನ್ನಿಸಿದನೆಂದು ಹೇಳಲಾಗಿದೆ. ಇಂತಹ ಆತಿಥ್ಯದ ಉತ್ತಮ ಉದಾಹರಣೆಗಳು ನಮ್ಮ ಸಾಹಿತ್ಯದಲ್ಲಿ ಕಾಣಿಸುತ್ತವೆ.

ಆಶ್ರಿತರಕ್ಷಣೆಗೆ ಸಾಹಿತ್ಯದಲ್ಲಿ ಎಷ್ಟೋ ಉದಾಹರಣೆಗಳಿವೆ. ಭಗವಂತನಿಗೆ 'ಶ್ರಿತಜನಪಾಲ, ಆಶ್ರಿತರಕ್ಷಕ, ಪ್ರಪನ್ನಾರ್ತಿಹರ, ಪ್ರಪನ್ನ ಪಾರಿಜಾತ'- ಮುಂತಾದ ವಿಶೇಷಣಗಳನ್ನು ಭಕ್ತರು ಕೊಟ್ಟಿದ್ದಾರೆ. ಮಾನವರಲ್ಲಿ ಕೂಡ ಅದು ಶ್ರೇಷ್ಠ ಗುಣ. ವಿಭೀಷಣನು ತನ್ನ ಅಣ್ಣನಾದ ದುಷ್ಟ ರಾವಣನನ್ನು ತ್ಯಜಿಸಿ ಶ್ರೀ ರಾಮನನ್ನು ಮರೆಹೊಕ್ಕಾಗ, ಸುಗ್ರೀವನು-ಅವನಿಗೆ ಆಶ್ರಯನೀಡಬಾರದು, ಅವನನ್ನು ಕೊಲ್ಲಬೇಕೆಂದು ಹೇಳುತ್ತಾನೆ. ಆದರೆ, ಶ್ರೀ ರಾಮನು ಆಶ್ರಿತವಾತ್ಸಲ್ಯದಿಂದ ಹೀಗೆನ್ನುವನು -

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ

(ಯಾವನೇ ಆಗಿರಲಿ, 'ನಾನು ನಿನ್ನವನು', ಎಂದು ಒಮ್ಮೆ ಬಂದು ಹೇಳಿದರೆ ಸಾಕು. ಅಂತಹನಿಗೆ ಅಭಯ ನೀಡುವುದು ನನ್ನ ವ್ರತವಾಗಿದೆ). ಶ್ರೀ ರಾಮನ ಆಶ್ರಿತವಾತ್ಸಲ್ಯಕ್ಕೆ ಇದು ಒಳ್ಳೆಯ ಉದಾಹರಣೆ.

ಸತ್ಕಾಲೋಕನಂ ಎಂಬ ಚಂಪೂಕಾವ್ಯದಲ್ಲಿ ಇನ್ನೊಂದು ಉತ್ತಮ ಉದಾಹರಣೆಯಿದೆ.- ಗಯನೆಂಬ ಗಂಧರ್ವನ ದುರ್ವರ್ತನೆಯಿಂದ ಕ್ರುದ್ಧನಾದ ಶ್ರೀ ಕೃಷ್ಣನು ಅವನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಅವನು ಅರ್ಜುನನನ್ನು ಮರೆಹೊಗುತ್ತಾನೆ. ಅರ್ಜುನನು ಆಶ್ರಿತವಾತ್ಸಲ್ಯದಿಂದ 'ನಿನ್ನ ಪ್ರಾಣರಕ್ಷಣೆ ಮಾಡುತ್ತೇನೆ. ಸಾಧ್ಯವಾಗದಿದ್ದರೆ ನಾನೇ ಬೆಂಕಿಗೆ ಬಿದ್ದು ಸಾಯುತ್ತೇನೆ' ಎಂದು ಪ್ರತಿಜ್ಞೆ ಮಾಡಿ ಆಶ್ರಯಕೊಡುತ್ತಾನೆ. ಇದರಿಂದಾಗಿ ಕೃಷ್ಣಾರ್ಜುನರೊಳಗೆ ಕಾಳಗವಾಗುತ್ತದೆ. ಈ ಕಥೆ ಯಕ್ಷಗಾನದಲ್ಲಿ ಚೆನ್ನಾಗಿ ಬಂದಿದೆ. ಕೊನೆಗೆ ಶಿವನು ಬಂದು ಗಯನನ್ನುಳಿಸಿ ಕೃಷ್ಣಾರ್ಜುನರು ಒಂದು ಗೂಡಿರುವಂತೆ ಮಾಡುತ್ತಾನೆ.

ಪಂಪಭಾರತದಲ್ಲಿ ಧರ್ಮರಾಯನ ಆಶ್ರಿತರಕ್ಷಣ ಗುಣಕ್ಕೆ ಮಹತ್ವದ ಸಂದರ್ಭವಿದೆ - ವನವಾಸದಲ್ಲಿದ್ದ ಪಾಂಡವರನ್ನು ಕೆಣಕಿ ನೋಯಿಸುವುದಕ್ಕಾಗಿ ಕೌರವನು ಘೋಷಯಾತ್ರೆಯ ನೆಪದಿಂದ ಬಂದು ಚಿತ್ರಾಂಗದನೆಂಬ ಗಂಧರ್ವನಿಂದ ಬಂಧಿತನಾದನು. ಕೌರವನ ಮಡದಿ ಭಾನುಮತಿ ಬೇರೆ ಉಪಾಯ ಕಾಣದೆ, ಧರ್ಮರಾಯನ ಬಳಿಗೆ ಬಂದು ಪುರುಷಭಿಕ್ಷವನ್ನು

ಬೇಡುತ್ತಾ ಶರಣಾದಳು. ವಿವೇಕಿಯಾದ ಧರ್ಮಜನು ಕೌರವನ ಹಿಂದಣ ಅನ್ಯಾಯವೊಂದನ್ನೂ ಲೆಕ್ಕಿಸದೆ ಆಶ್ರಿತವಾತ್ಸಲ್ಯಕ್ಕೆ ಅನುಗುಣವಾಗಿ ಹೇಳಿದ ಮಾತು ಹೀಗಿದೆ -

> **ಸುರಿಯಲ್ವೇಡಮದರ್ಕೆ ಬಾಷ್ಪಜಳಮಂ ನಿನ್ನಾಣ್ಮನಂ ನಿನ್ನೊಳಿಂ.**
> **ದಿರದಾಂ ಕೂಡುವೆವೆಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ**
> **ನೂರ್ವರೆ ದಲ್ ಕೌರವರಾವುಮೈವರೆ ವಲಂ, ಮತ್ತೊರ್ವರೊಳ್ ತೊಟ್ಟ ಸಂ**
> **ಗರರಂಗಕ್ಕೆ ಜಸಕ್ಕೆ ಕೂಡುವೆಡೆಯೊಳ್ ನೂರೈವರಾವಲ್ಲವೇ** (೭-೩೫)

(ನೀನು ಕಣ್ಣೀರು ಸುರಿಸಬೇಡ. ನಾವು ಇಂದೇ ನಿನ್ನ ಪತಿಯನ್ನು ನಿನ್ನಲ್ಲಿಗೆ ತರುವೆವು. ಹೇಗಿದ್ದರೂ ನಮ್ಮೊಳಗಿನ ಜಗಳಕ್ಕೆ ಕೌರವರು ನೂರುಮಂದಿಯಾದರೆ, ನಾವು (ಪಾಂಡವರು) ಐದೇಮಂದಿ; ಆದರೆ ಅನ್ಯರೊಡನೆ ಯುದ್ಧಮಾಡುವ ಪರಿಸ್ಥಿತಿ ಬಂದಾಗ ನಾವು ನೂರೈದು ಮಂದಿಯಲ್ಲವೇ), ಧರ್ಮರಾಯನ ಉದಾತ್ತ ಸಂಸ್ಕೃತಿಯ ಅಭಿವ್ಯಕ್ತಿ ಇಲ್ಲಿ ಕಾಣುತ್ತದೆ.

ಭಾರತೀಯ ಸಾಹಿತ್ಯ ಪ್ರತಿಪಾದಿಸುವ ಸಂಸ್ಕೃತಿಗನುಗುಣವಾಗಿ ಸ್ತ್ರೀ ಒಂದು ಏಕಾಕಿ ವ್ಯಕ್ತಿಯಲ್ಲ. ಆಕೆ ಪುರುಷನ ಅರ್ಧಾಂಗಿ, ಪತಿವ್ರತೆ. 'ಸತಿಗೆ ಪಾತಿವ್ರತ್ಯವೇ ಭೂಷಣಂ' ಎಂಬುದು ಸೋಮೇಶ್ವರಶತಕದ ನೀತಿವಾಕ್ಯ. ಅಂತಹ ಸಾಧ್ವೀಮಣಿಯರಾದ ಸೀತೆ, ಸಾವಿತ್ರಿ, ದಮಯಂತಿ, ಚಂದ್ರಮತಿಯರಂತಹರ ಚರಿತ್ರೆ ನಮ್ಮ ಸಾಹಿತ್ಯದಲ್ಲಿ ಅಡಕವಾಗಿದೆ. ಶ್ರೀ ರಾಮನು ವನವಾಸಕ್ಕೆ ತೆರಳಿದಾಗ, ಸೀತೆ ತಾನೂ ತೆರಳುತ್ತಾಳೆ. ರಾವಣವಧಾನಂತರ ಅಗ್ನಿ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾಳೆ. ಲಕ್ಷ್ಮಣನ ಪತ್ನಿಯಾದ ಊರ್ಮಿಳೆ ಕಾಡಿಗೆ ಗಂಡನೊಂದಿಗೆ ತೆರಳದಿದ್ದರೂ ನಾಡಿನಲ್ಲಿದ್ದು ಆವನಂತೆ ಗಡ್ಡೆಗೆಣಸು ತಿಂದುಕೊಂಡು ತಪಸ್ವಿನಿಯಂತೆ ಇರುತ್ತಾಳೆ. ಹರಿಶ್ಚಂದ್ರನು ತನ್ನ ಸತ್ಯಪಾಲನೆಗಾಗಿ ದೇಶ ಕೋಶಗಳನ್ನು ವಿಶ್ವಾಮಿತ್ರ ಮುನಿಗೆ ಒಪ್ಪಿಸಿ, ಹೋಗುವಾಗ ಚಂದ್ರಮತಿಯೂ ಹಿಂಬಾಲಿಸಿದಳು. ಕೌಶಿಕನ ಕಪಟದ ದಾವಾಗ್ನಿ ಮುತ್ತಿದಾಗ, ಆಕೆ ತಾನು ಮುತ್ತೈದೆತನದಲ್ಲಿ ಮೊತ್ತಮೊದಲು ಬೆಂಕಿಗೆ ಬೀಳಲು ಸಿದ್ಧಳಾಗಿ ಮಾಡಿದ ಪ್ರಾರ್ಥನೆಯಲ್ಲಿ ಹೀಗಿದೆ - 'ನನಗೆ ಕೋಟಿ ಜನ್ಮಗಳಲ್ಲಿಯೂ ಹರಿಶ್ಚಂದ್ರನೇ ಗಂಡನಾಗಲಿ, ಲೋಹಿತಾಶ್ವನೇ ಮಗನಾಗಲಿ, ವಿಶ್ವಾಮಿತ್ರನು ನಿತ್ಯನಾಗಲಿ'. ಅದಲ್ಲದೆ ಅವಳು ಹರಿಶ್ಚಂದ್ರನಿಗೆ ಹೀಗೆಂದಳು - (ಹರಿಶ್ಚಂದ್ರ ಕಾವ್ಯ)

> **ಪೊಡವೀಶ ಕೇಳುಭಯ ಕುಲಶುದ್ಧೆಯಲ್ಲದಿ**
> **ರ್ದೊಡೆ ನಿನ್ನನಲ್ಲದನ್ಯರನು ಲೆಕ್ಕಿಸಿದೆನಾ**
> **ದೊಡೆ ಹಿಂದೆ ನಿನಗೊಂದನಿಕ್ಕಿ ನಾನೊಂದನುಂಡೊಡೆ ಮೂರುಕರಣವರಿಯೆ**
> **ಮೃಡನಲ್ಲದನ್ಯದೈವಕ್ಕೆ ನಮಿಸಿದೊಡೆನ್ನ**
> **ಹೊಡೆದು ಮುಕ್ಕುವುದು ದಾವಾಗ್ನಿ ಮೇಣಲ್ಲದಿ**
> **ರ್ದಡೆ ಬಟ್ಟೆಗೊಟ್ಟಪುದು ಕೇಳೆಂದು ಬೊಬ್ಬೆಗೊಡುವಾ ಪೊತ್ತದೇವೇಳ್ವೆನು** (೯-೭೨)

ಆ ವೇಳೆಯಲ್ಲಿ 'ತರುಣಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು' ಎಂದು ಕವಿ ಹೇಳುತ್ತಾನೆ. ವಿಶ್ವಾಮಿತ್ರನ ಕೃತಕಾಗ್ನಿ ಹರಿದೋಡಿತು. ಕೌಶಿಕನೆಂಬ ತಪೋಗರ್ವಿತನಾದ ಮುನಿಯನ್ನು

ಓರ್ವ ಪತಿವ್ರತೆಯಾದ ಗೃಹಿಣಿ ಹೇಗೆ ಭಂಗಗೊಳಿಸಿದಳೆಂಬ ವಿವರ ನಮ್ಮ ಸಂಸ್ಕೃತಿಯ ಹಿರಿಮೆಯ ದ್ಯೋತಕ. ಇಂತಹ ಉದಾಹರಣೆಗಳು ನಮ್ಮ ಸಾಹಿತ್ಯದಲ್ಲಿ ಎಷ್ಟೋ ಇವೆ.

ಸಮಯಬದ್ಧತೆ (Punctuality) ಎಂಬುದು ಸಂಸ್ಕೃತಿಯ ಇನ್ನೊಂದು ಪ್ರಮುಖಲಕ್ಷಣ. ಸೂರ್ಯನ ಉದಯಾಸ್ತಗಳು, ದಿವಾರಾತ್ರಿಗಳು, ಗ್ರಹಗತಿಗಳು, ಪ್ರಕೃತಿಯಲ್ಲಿ ಋತುಪರಿವರ್ತನೆಗಳು ಇವೆಲ್ಲವೂ ಕಾಲನಿಯಮಕ್ಕೆ ಅನುಗುಣವಾಗಿಯೇ ಇರುತ್ತವೆ. ಯುಗ, ವರ್ಷ, ತಿಥಿ, ನಕ್ಷತ್ರ, ಗಳಿಗೆ - ಗಂಟೆ, ನಿಮಿಷ - ಮುಂತಾಗಿ ಕಾಲವನ್ನು ಅಳೆಯಲಾಗುತ್ತದೆ. ಸಕಾಲದಲ್ಲಿ ನಡೆದುದೆಲ್ಲವೂ ಉತ್ತಮವೂ ಆದರ್ಶವೂ ಆಗುತ್ತವೆ. ಹೀಗಿರುವಾಗ ಮಾನವನ ಜೀವನದಲ್ಲಿ ಸಮಯಬದ್ಧತೆ ಎಂಬುದು ಅತಿಶ್ರೇಷ್ಠ ಸಂಸ್ಕೃತಿಯಾಗಿರುತ್ತದೆ. ಈ ಸಮಯಪರಿಜ್ಞಾನಕ್ಕಾಗಿ ಇತ್ತೀಚಿಯ ವಿಜ್ಞಾನದ ಕೊಡುಗೆಯಾಗಿ ಗಡಿಯಾರವಿರುತ್ತದೆ. ಜನರ ಕೈಯಲ್ಲಿಯೇ ಅದು ಇರುತ್ತದೆ. ಆದರೆ ನಿರ್ಣಯದಲ್ಲಿ ಹಾಗೂ ಆಮಂತ್ರಣಪತ್ರಗಳಲ್ಲಿ ಸೂಚಿತವಾದಂತೆ ಸಭಾಕಾರ್ಯಕ್ರಮಗಳು ನಡೆಯುತ್ತಿರುವುದು ವಿರಳವಾಗಿದೆ. ನಮ್ಮ ಸಾಹಿತ್ಯವು ಸಮಯಬದ್ಧತೆಗೆ ಮಹತ್ವಕೊಟ್ಟಿರುತ್ತದೆ. ರಾಮಾಯಣದಲ್ಲಿ ಕಂಡುಬರುವ ಸಮಯ ನಿಷ್ಠೆಯನ್ನು ನೋಡೋಣ. ವನವಾಸಕ್ಕೆ ತೆರಳಿದ ಶ್ರೀ ರಾಮನನ್ನು ಭರತನು ಸಂಧಿಸಿ ಹೇಳಿದ ಮಾತು ಹೀಗಿದೆ -

ಕಾದಿಹೆನು ಹದಿನಾಲ್ಕು ವರುಷವು
ಮೇದಿನಿಯ ನೀವ್ ಬಾರದಿರಲು ನಿ
ವೇದಿಸುವೆನೀ ತನುವನನಲಂಗೆಂದನಾ ಭರತ (ತೊರವೆರಾಮಾಯಣ)

ನೀವು ಅಯೋಧ್ಯೆಯಿಂದ ಹೊರಟಂದಿನಿಂದ ಹದಿನಾಲ್ಕು ವರ್ಷಕಾಲ ಕಾದಿರುತ್ತೇನೆ. ಆಗ ನೀವು ಬಾರದಿದ್ದರೆ, ನಾನು ಅಗ್ನಿಗೆ ಆಹುತಿಯಾಗುವೆನು - ಎಂದು ಭರತನು ಹೇಳಿರುತ್ತಾನೆ. ಅದರಂತೆ, ಹದಿನಾಲ್ಕು ವರ್ಷಾವಧಿಯ ಕೊನೆಯ ದಿನ ಬಂತು. ಆಗ ಭರತನು ನಂದಿಗ್ರಾಮದಲ್ಲಿರುತ್ತಾನೆ. ಇನ್ನೂ ರಾಮನು ಏಕೆ ಬಂದಿಲ್ಲವೆಂದು ತವಕಿಸುತ್ತಾ ಅಗ್ನಿಯನ್ನು ಪ್ರೋಜ್ವಲಗೊಳಿಸಿ ಇನ್ನೇನು ? ಪ್ರಾಣತ್ಯಾಗಕ್ಕಾಗಿ ಭರತನು ಅಗ್ನಿಗೆ ಪ್ರದಕ್ಷಿಣೆ ಬರುತ್ತಿದ್ದನು. ಆಗ ಹನುಮಂತನು ಬಂದು ಹೀಗೆಂದನು -

ರಾಮ ಬಂದನು, ಸಕಲ ಜಗದಭಿ
ರಾಮ ಬಂದನು, ರಿಪುಗಣೋತ್ಸವ
ಭೀಮ ಬಂದನು, ಜಾನಕಿಯ ನಯನೋತ್ಸವಾನಂದ
ಸೋಮ ಬಂದನು, ಶರಣಜನ ವಿ
ಶ್ರಾಮ ಬಂದನು, ಭರತ ಚಿತ್ತಯಿಸೆಂದನಾ ಹನುಮ (ತೊರವೆರಾಮಾಯಣ)

ಹೀಗೆ ನಮ್ಮ ಸಾಹಿತ್ಯದಲ್ಲಿ ಪ್ರತಿಪಾದಿತವಾದ ಸಂಸ್ಕೃತಿಯ ಗುಣಗಳು ಅಗಣಿತವಾಗಿವೆ. ಅವುಗಳ ಸರಿಯಾದ ಅನುಭವಕ್ಕಾಗಿ ಎಲ್ಲರೂ ಸಾಹಿತ್ಯಪಠನ ಮಾಡಬೇಕು. ಗಮಕಿಗಳಿಂದ ವಾಚನ ಮಾಡಿಸಬೇಕು. ಒಳ್ಳೆಯ ವ್ಯಾಖ್ಯಾನಕಾರರಿಂದ ವಿವರಣೆ ಮಾಡಿಸಿ ಕೇಳಬೇಕು. ಅದಕ್ಕಾಗಿಯೇ ನಮ್ಮಲ್ಲಿರುವ ಸಾಹಿತ್ಯ ಕೃತಿಗಳು ಅಪಾರವಾಗಿಯೇ ಇವೆ. ಅವನ್ನೆಲ್ಲ ಅಭ್ಯಸಿಸಿ ಬಾಳನ್ನು ಬಂಗಾರವಾಗಿ ಮಾಡುವ ಸದ್ಬುದ್ಧಿಯನ್ನು ಭಗವಂತನು ನೀಡಲಿ - ಎಂದು ಪ್ರಾರ್ಥಿಸೋಣ. □

ಶೃಂಗೇರಿಯಲ್ಲಿ ಶ್ರೀಚಂದ್ರಶೇಖರ ಭಾರತೀ ಸ್ವಾಮಿಗಳ ಷಷ್ಟ್ಯಬ್ದಿ ಸಮಾರಂಭದ ಸಾಹಿತ್ಯಗೋಷ್ಠಿಯಲ್ಲಿ ಮಾಡಿದ ಉಪನ್ಯಾಸ - ೧೯೭೬.

೧೪
ಒಂದೆರಡು ವ್ಯಾಕರಣದೋಷ ಸಮೀಕ್ಷೆ

೧. ವಕಾರಾಗಮಭ್ರಮೆ

ಕನ್ನಡದಲ್ಲಿ ವ್ಯಾಕರಣ ಶಾಸ್ತ್ರರಚನೆ ಬಲುಮಟ್ಟಿಗೆ ಸಂಸ್ಕೃತದ ಅನುಕರಣೆ, ನಿಜ. ಆದರೆ, ಹಲವು ವಿಷಯಗಳಲ್ಲಿ ಇದು ಸಂಸ್ಕೃತಕ್ಕಿಂತ ಬೇರೆಯಾಗಿ ವೈಶಿಷ್ಟ್ಯಪೂರ್ಣವಾಗಿದೆಯಲ್ಲದೆ, ಕನ್ನಡದ ಅತಿಶಯವನ್ನು ಎತ್ತಿ ತೋರಿಸುವಂತಿರುವುದೂ ಲಕ್ಷಾರ್ಹ. ಅಂಥವುಗಳಲ್ಲಿ ಕನ್ನಡದ ಸಂಧಿವಿಚಾರವೂ ಒಂದು. ಕನ್ನಡದಲ್ಲಿ ವಿಸರ್ಗಸಂಧಿಯಿಲ್ಲ. ಸಂಧಿಕಾರ್ಯವುಳ್ಳ ವ್ಯಂಜನಸಂಧಿಯೆಂದರೆ, ಆದೇಶವೊಂದೇ, ಸಂಸ್ಕೃತದಂತೆ - ಶ್ಚುತ್ವ, ಷ್ಟುತ್ವ, ಜಶ್ತ್ವ ಮುಂತಾದುವಿಲ್ಲ; ಸ್ವರಸಂಧಿಯಾಗಿ ಸವರ್ಣದೀರ್ಘ, ಗುಣ, ವೃದ್ಧಿ, ಯಣ್ ಮುಂತಾದುವಿಲ್ಲ. ಕನ್ನಡದಲ್ಲಿ ಸ್ವರಕ್ಕೆ ಸ್ವರ ಸೇರಿದಾಗ ಪೂರ್ವಸ್ವರ ಲೋಪವಾಗುವುದು. ಆಗ ನಾಮಹಾನಿಯಾಗುವುದಾದರೆ, ಅಲ್ಲಿ ಯಕಾರಾಗಮ ವಕಾರಗಮ ಆಗುತ್ತದೆ. ಸಂಧಿಗಳೆಂದರೆ, ಇವೇ. ಸಂಧಿಯಾಗದೆ ಇರತಕ್ಕ ಪ್ರಕೃತಿಭಾವವೂ ಇರುತ್ತದೆ. ಆಗಮಸಂಧಿಯಲ್ಲಿ ಇನ್ನೂ ಕೆಲವಿವೆ. ಅವು ವಿಭಕ್ತಿಪ್ರತ್ಯಯ ಸೇರುವಾಗ ಪರಿಣಮಿಸುವವು - ನ,ಮ,ಇನ್, ದ, ಆರ್ - ಎಂಬಿವು ಉದಾ:

ನ, ಮ ಆಗಮ : **ಪರದೊಳ್ ಸ್ವರಮಿರೆ ಬಂದುಗೆ**
ದೊರೆಕೊಳ್ಗುಂ ನತ್ವ ಮತ್ವಮಾ ಮತ್ವಕ್ಕು
ಚ್ಚರಿಪರ್ ವತ್ವಮನರೆಬರ್
ನಿರವದ್ಯಂ ನಿಜಮಕಾರದೆಡೆಗಂ ವತ್ವಂ

(ಶ.ದ..ಸೂ. ೧೧೪)

ಉದಾ: ರಾಮಂ + ಇವಂ - ರಾಮ + ನ್ + ಇವಂ - ರಾಮನಿವಂ

ವೃಕ್ಷಂ + ಇದು - ವೃಕ್ಷ + ಮ್ + ಇದು - ವೃಕ್ಷಮಿದು (ವೃಕ್ಷವಿದು)

ಈ ಉದಾಹರಣೆಗಳಲ್ಲಿ ಬಿಂದುವಿನ ಸ್ಥಾನದಲ್ಲಿ ನ್ ಮ್ ಗಳು ಬಂದಿರುವುದರಿಂದ ಅವೆರಡೂ ಆಗಮವೆನಿಸುವುದಿಲ್ಲ, ಆದೇಶವೆನಿಸುತ್ತವೆ. ಅನಂತರ ವೃಕ್ಷಮಿದು ಎಂಬುದು ವೃಕ್ಷವಿದು ಎಂದಾಗುವುದು. ಆಗ ಮಕಾರಕ್ಕೆ ವಕಾರ ಆದೇಶವಾಗುತ್ತದೆ. ಆದುದರಿಂದ ಇದು ವಕಾರಾಗಮವಲ್ಲ. ಮರ + ಇಲ್ಲ - ಮರವಿಲ್ಲ - ಎಂದು ತೋರಿಸಿ, ಇದನ್ನು ವಕಾರಾಗಮ ಎನ್ನುವುದು ಭ್ರಮೆ. ಮರಂ+ಇಲ್ಲ-ಮರಮಿಲ್ಲ-ಮರವಿಲ್ಲ ಎಂಬ ವಿವರವೇ ಸರಿಯಾದುದು.

ಮರ + ಇಲ್ಲ - ಮರವಿಲ್ಲ - ಎಂಬುದು ವಕಾರಾಗಮವಾದರೆ - ಮರಮಿಲ್ಲ - ಎಂಬಲ್ಲಿ ಮಕಾರಾಗಮವೆನಿಸುವುದೆ?

ಇನ್ ಆಗಮ : ನಾಡು + ಇಂ - ನಾಡಿಂ (ಇಲ್ಲಿ ಇನಾಗಮವಿಲ್ಲ), ನಾಡು + ಇನ್ + ಇಂ- ನಾಡಿನಿಂ (ಇಲ್ಲಿದೆ). ಉಕಾರಾಂತ, ಋಕಾರಾಂತ, ಎಕಾರಾಂತ (ಕೆಲವೆಡೆ ಮಾತ್ರ) ನಾಮವಾಚಿಗೆ ತೃತೀಯೆ ,ಪಂಚಮಿ, ಷಷ್ಠಿ, ಸಪ್ತಮೀವಿಭಕ್ತಿಗಳಲ್ಲಿ ಇನಾಗಮವಿರುತ್ತದೆ - ಹಾಡಿನಿಂ, ಪಿತೃವಿನ, ಕೆಳಗಿನ - ಇತ್ಯಾದಿ.

ದಕಾರಾಗಮ : ಅಕಾರಾಂತ ನಪುಂಸಕಲಿಂಗ ಏಕವಚನದಲ್ಲಿ ತೃತೀಯೆ, ಪಂಚಮಿ,ಷಷ್ಠಿ, ಸಪ್ತಮೀ ವಿಭಕ್ತಿ-ಗಳಲ್ಲಿ ದಕಾರಾಗಮವಾಗುತ್ತದೆ. ಇದು ಶಬ್ದದ ಪ್ರಕೃತಿರೂಪಕ್ಕೆ ಹತ್ತುವದು. ಉದಾ : ಮರದಿಂ, ಮರದ, ಮರದಲ್ಲಿ.

ಅರ್ ಆಗಮ : ತು, ದು ಕೊನೆಯಾಗಿರುವ ಕೃತ್ತು, ಗುಣವಾಚಿ, ಸರ್ವನಾಮ, ಸಂಖ್ಯಾ, ಪ್ರಮಾಣವಾಚಿಗಳಿಗೆ ಏಕವಚನದಲ್ಲಿ ತೃತೀಯೆ ಮತ್ತು ಅದರ ಮುಂದಿನ ವಿಭಕ್ತಿ - ಪ್ರತ್ಯಯ ಸೇರುವಾಗ ಅರ್ ಆಗಮವಾಗುವುದು (ಶ.ದ. ಸೂ.೧೨೦) ಉದಾ: ಆದುದರಿಂ, ಅದರಿಂ, ಅದರ, ಒಳ್ಳೆಯದರ ಇತ್ಯಾದಿ. ಹಳಗನ್ನಡ ಹೊಸಗನ್ನಡಗಳೆರಡರಲ್ಲಿಯೂ ಅರಾಗಮವಿದೆ.

ವಕಾರಾಗಮ : ಕನ್ನಡದ ವ್ಯಾಕರಣಗ್ರಂಥಗಳಾಗಿರುವ ಭಾಷಾಭೂಷಣ, (ಸೂತ್ರ ೨೪), ಶಬ್ದಸ್ಮೃತ್ಯಧಿಕರಣ (ಸೂತ್ರ ೯), ಶಬ್ದಾನುಶಾಸನ (ಸೂ.೩೭,೩೮) ಇವುಗಳಲ್ಲಿ ವಕಾರಾಗಮಕ್ಕೆ ಲಕ್ಷಣೋದಾಹರಣಗಳಿವೆ. ಶಬ್ದಮಣಿದರ್ಪಣದಲ್ಲಿ, ಉವರ್ಣ, ಋವರ್ಣ, ಓತ್ವ, ಔತ್ವಗಳಿಗೆ ಸ್ವರ ಪರವಾದರೆ ವಕಾರಾಗಮವಾಗುವುದೆಂದು ಹೇಳಿ, ಉದಾಹಹಣೆಗಳನ್ನು ಕೊಡಲಾಗಿದೆ. **ಅಕಾರಾಂತ ನಾಮಪ್ರಕೃತಿಗೆ ಸ್ವರ ಪರವಾದರೆ ವಕಾರಾಗಮವಾಗುವುದೆಂದು ಈ ವ್ಯಾಕರಣಗ್ರಂಥಗಳಲ್ಲಿ ಯಾವುದರಲ್ಲಿಯೂ ಹೇಳಿಲ್ಲ.** ಕನ್ನಡ ಕೈಪಿಡಿ ತೀ.ನಂ. ಶ್ರೀಯವರ ಮಧ್ಯಮವ್ಯಾಕರಣ, ನನ್ನ ಭಾಷಾದೀಪಿಕೆ (೧೯೫೭, ೧೯೯೩) ಎಂಬ ವ್ಯಾಕರಣ ಎಂಬ ವ್ಯಾಕರಣ ಕೃತಿಗಳ ಈ ವಕಾರಾಗಮ ವಿಷಯದಲ್ಲಿ ಒಮ್ಮತದವು.

ಆದರೆ ಈಚೆ ಪ್ರಕಟವಾಗಿ ನನ್ನ ಲಕ್ಷ್ಯಕ್ಕೆ ಬಂದ ಮೂರು ವ್ಯಾಕರಣ ಪುಸ್ತಕಗಳು ಹೊಸತೊಂದು ವಕಾರಾಗಮಲಕ್ಷಣವನ್ನು ಸಂಶೋಧಿಸಿವೆ! ಇದು ಸರಿಯೆ ?ಎಂಬುದನ್ನು ಪರಿಶೀಲಿಸುವುದು ಅವಶ್ಯ. ಪುಸ್ತಕಗಳಿವು -

೧. ಮೈಸೂರು ಸರ್ಕಾರದ ಪಠ್ಯ ಪುಸ್ತಕಗಳ ಇಲಾಖೆ (ವಿದ್ಯಾಸಂಶೋಧನ ಶಾಖೆ) ೮,೯ ಮತ್ತು ೧೦ನೆಯ ತರಗತಿಗೆ ಒದಗಿಸಿರುವ 'ಕನ್ನಡ ವ್ಯಾಕರಣ ದರ್ಪಣ (೧೯೭೦), ಪುಟ ೧೯ ರಲ್ಲಿ ಹೀಗೆ ಹೇಳಿದೆ. ಅಕಾರದ ಮುಂದೆ ಅಕಾರವೇ ಬಂದರೆ 'ವ್' ಕಾರಾಗಮವಾಗುವುದು. ಉದಾ ಹೊಲ + ಅನ್ನು - ಹೊಲ + ವ್ + ಅನ್ನು - ಹೊಲವನ್ನು. ಇದರಂತೆ ನೆಲವನ್ನು, ಕುಲವನ್ನು, ತಿಲವನ್ನು, ಮನವನ್ನು.

೨. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ವರ್ಷದ ಪ್ರಕಟನೆಯ 'ಹೊಸಗನ್ನಡ ವ್ಯಾಕರಣ' (೧೯೭೭) ಪುಟ ೧೦ ರಲ್ಲಿ ಹೀಗಿದೆ:- ಪ್ರಾತಿಪದಿಕದ ಅಕಾರಕ್ಕೆ ಸ್ವರ ಪರವಾದರೆ ನಡುವೆ ವಕಾರಾಗಮ ಬರುವುದು. ಉದಾ : ನೆಲ + ಅನ್ನು - ನೆಲವನ್ನು. ಇದರಂತೆ, ಧನವೇಕೆ, ಕುಲವೇನು, ಹೊಲವಿದು. ಪ್ರತ್ಯಯ ಅಕಾರವಾದಲ್ಲಿ ಅದಕ್ಕೆ ಲೋಪ ಬರುತ್ತದೆ. ಉದಾ : ನಮ್ಮ + ಅರಸ - ನಮ್ಮರಸ. ಅವನ + ಇಚ್ಛೆ - ಅವನಿಚ್ಛೆ.

೩. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪ್ರಕಟನೆಯ 'ಹೊಸಗನ್ನಡದ ವ್ಯಾಕರಣ' (೧೯೯೦), ಪುಟ ೩೭ ರಲ್ಲಿ ಇಂತಿದೆ:- ಸಂಸ್ಕೃತ ಕನ್ನಡ ಶಬ್ದಗಳಲ್ಲಿ ಅಕಾರಕ್ಕೆ ಅಕಾರ ಬಂದರೆ, ವಕಾರದ ಆಗಮವುಂಟು. (ಕುಲ + ಅನ್ನು - ಕುಲವನ್ನು, ಸಾಲ + ಅನ್ನು-ಸಾಲವನ್ನು).

ಇದೇಕೆ ವಕಾರಾಗಮವಲ್ಲವೆಂಬುದನ್ನು ಈಗ ನೋಡೋಣ. ಅಕಾರಾಂತ ನಪುಂಸಕಲಿಂಗದ ನಾಮ ಪ್ರಾತಿಪದಿಕಗಳಿಗೆ 'ಅಂ' ಅಥವಾ ಹೊಸಗನ್ನಡದ 'ಅನ್ನು' ಎಂಬ ಪ್ರತ್ಯಯ ಸೇರುವಾಗ ಆಯಾ ಪ್ರಾತಿಪದಿಕಕ್ಕೆ ಬಿಂದುರೂಪದ ಪ್ರಥಮಾವಿಭಕ್ತಿಯ ಪ್ರತ್ಯಯ ಮೊದಲೇ ಇರುತ್ತದೆ. ಹಳಗನ್ನಡದ ಅಕಾರಂತ ನಾಮವಾಚಿಗಳಿಗೆಲ್ಲ ಬಿಂದುವೇ ಪ್ರಥಮಾವಿಭಕ್ತಿ. ಹೊಸಗನ್ನಡದಲ್ಲಿ ಅದಕ್ಕೆ ಲೋಪವಿದ್ದರೂ ದ್ವಿತೀಯಾ ವಿಭಕ್ತಿ ಸೇರುವಾಗ ಲೋಪವಿರುವುದಿಲ್ಲ. ನಪುಂಸಕಲಿಂಗದಲ್ಲಿ ತೃತೀಯೆ ಮತ್ತು ಮುಂದಿನ ವಿಭಕ್ತಿ ಪ್ರತ್ಯಯ ಸೇರುವಾಗ ಲೋಪವಿರುವುದಿಲ್ಲ. ನಪುಂಸಕಲಿಂಗದಲ್ಲಿ ತೃತೀಯೆ ಮತ್ತು ಮುಂದಿನ ವಿಭಕ್ತಿಪ್ರತ್ಯಯ ಸೇರುವಾಗಲೆಲ್ಲ ಪ್ರಥಮೆ ಇರುವುದಿಲ್ಲ. ಅಚ್ಚಗನ್ನಡದ ಶಬ್ದಗಳಿಗೆ ಪುಲ್ಲಿಂಗದಂತೆ ನೆಲಂ, ನೆಲನಂ, ಎಂಬ ರೂಪಗಳೂ ವಿಕಲ್ಪವಾಗಿ ಪ್ರಯೋಗದಲ್ಲಿದೆ. ಕುಲ + ಅಂ - ಕುಲಮಂ ಎಂದಾಗುವಾಗ, ಹಿಂದೆ ಉದಾಹೃತವಾದ ಸೂತ್ರದಂತೆ 'ಅ ಮತ್ವಕ್ಕೆ ಉಚ್ಚರಿಪರ್ ವತ್ವಮಂ' ಎಂಬ ನಿಯಮದಂತೆ, ನೆಲವನ್ನು, ಕುಲವನ್ನು, ಎಂಬುದಾಗಿ ವಕಾರವು ಆದೇಶವಾಗಿ ಬಂದಿರುತ್ತದೆ. ಇದನ್ನು 'ವಕಾರದೇಶ' ಎನ್ನಬೇಕಲ್ಲದೆ ವಕಾರಾಗಮ ಎನ್ನಬಾರದು. 'ಸ್ಥಾನಿವದಾದೇಶಃ', 'ಶತ್ರುವದಾದೇಶಃ', 'ಅರಿಯವೋಲಾದೇಶಂ' ಎಂಬ ಸೂತ್ರಗಳ ಲಕ್ಷಣದಂತೆ, ಹೊಸತಾಗಿ ಬಂದ ಅಕ್ಷರವು ಮೊದಲಿದ್ದ ಅಕ್ಷರವನ್ನು ಅಳಿಸಿ ಅಥವಾ ಉಚ್ಚಾಟಿಸಿ, ಅದರ ಸ್ಥಾನದಲ್ಲಿ ಕಾಣಿಸಿಕೊಳ್ಳುವುದು ಆದೇಶವೆನಿಸುವುದಲ್ಲದೆ, ಆಗಮವೆನಿಸಲಾರದು.

ಆದುದರಿಂದ ಮನಂ + ಆಯ್ತು - ಮನಮಾಯ್ತು - (ಮನವಾಯ್ತು), ಮನಂ + ಇಲ್ಲ- ಮನಮಿಲ್ಲ (ಮನವಿಲ್ಲ). ಈ ಎರಡು ರೂಪಗಳಲ್ಲಿ ಮೊದಲನೆಯದರಲ್ಲಿ ಬಿಂದುವಿಗೆ ಸ್ವರ ಸೇರಿದಾಗ ಮಕಾರವಾಗಿದೆ ಆ ಮಕಾರಕ್ಕೆ ವಕಾರದ ಉಚ್ಚಾರಣೆ ಬಂದು, ಅಂದರೆ ವಕಾರ ಆದೇಶವಾಗಿ ಎರಡನೆಯ ರೂಪವಾಗಿದೆ. ಗುರು + ಅನ್ನು - ಗುರುವನ್ನು ಎಂಬಲ್ಲಿ ವಕಾರಾಗಮವೆಂಬುದು ಸರಿಯಾದುದು. ಅದರೆ ಕುಲ + ಅನ್ನು - ಕುಲವನ್ನು ಎಂದಾಗುವಂತೆ ಮನುಷ್ಯ + ಅನ್ನು - ಮನುಷ್ಯವನ್ನು ಎಂದಾಗದು. ಅದು ಮನುಷ್ಯಂ + ಅನ್ನು - ಮನುಷ್ಯ+ ನ್ + ಅನ್ನು - ಮನುಷ್ಯನನ್ನು ಎಂದಾಗುವುದೆಂದು ವ್ಯಾಕರಣ ವಿದ್ಯಾರ್ಥಿಗಳು ಅರಿತಿರಬೇಕಾಗುತ್ತದೆ.

ಮನಂ - ಎಂಬುದನ್ನು 'ಮನವು' ಎಂದಿಟ್ಟುಕೊಂಡು, ಮನವು + ಇಲ್ಲ - ಮನವಿಲ್ಲ- ಎಂದು ರೂಪಿಸಿ, ಇದನ್ನು 'ಉ' ಲೋಪವೆನ್ನಲು ಅಡ್ಡಿಯಿಲ್ಲ.

೨. ತನ್ನ, ತಮ್ಮ ಮತ್ತು ನನ್ನ, ನಮ್ಮ ವಿಚಾರ

ಕನ್ನಡದ ಸರ್ವನಾಮಗಳಲ್ಲಿ ತಾನು ಪ್ರಥಮಪುರುಷವೆಂದು ವ್ಯಾಕರಣ ಶಾಸ್ತ್ರಗಳಲ್ಲಿ ಹೇಳಲಾಗಿದೆ. ಆದರೆ ಅವನು, ಅವಳು, ಅದು ಎಂಬಿವು ಪ್ರಥಮಪುರುಷವಾಗುವುದರಿಂದ ಪ್ರಚಲಿತವಾಗಿ 'ತಾನು' ಎಂಬುದು ಆತ್ಮಾರ್ಥಕ ಸರ್ವನಾಮ (Reflective Pronoun) ಏಕವಚನವಾಗಿರುತ್ತದೆ. ಅದರ ಬಹುವಚನ ರೂಪ 'ತಾವು' ಆದರೆ, ಇದು ಮಧ್ಯಮಪುರುಷದಲ್ಲಿ ಆದರಾರ್ಥಕ ಬಹುವಚನವಾಗಿರುತ್ತದೆ. ಮೂರು ಪುರುಷಗಳಲ್ಲಿಯೂ ಪ್ರಯೋಗಕ್ಕೆ ಬರುವುದರಿಂದ ಆತ್ಮಾರ್ಥಕವೆನಿಸುವುದು. ತಾನು ಮತ್ತು ತಾವು ಎಂಬ ಇವೆರಡರ ಷಷ್ಠೀ ವಿಭಕ್ತಿ ರೂಪಗಳು 'ತನ್ನ' ಮತ್ತು 'ತಮ್ಮ' ಎಂಬುದು ಸಾಮಾನ್ಯರೂ ತಿಳಿದಿರುವ ಸಂಗತಿಯಾಗಿದೆ.

ಆದರೆ, ಇವುಗಳ ಪ್ರಯೋಗದಲ್ಲಿ ಅನೇಕ ವಿದ್ವಾಂಸರು ಹಳಿತಪ್ಪಿರುವುದು ಕಾಣಿಸುವುದರಿಂದ ಅದನ್ನಿಲ್ಲಿ ವಿವೇಚನೆಗೆ ಎತ್ತಿಕೊಳ್ಳಲಾಗಿದೆ. ಇದಕ್ಕೆ ಹಿನ್ನೆಲೆಯಾಗಿ ಸರ್ವನಾಮವೆಂದರೇನೆಂಬ ಸ್ಪಷ್ಟೀಕರಣ ಅವಶ್ಯವೆನಿಸುತ್ತದೆ - ಸರ್ವನಾಮವು ನಾಮ ಪ್ರತಿನಿಧಿ ಶಬ್ದ. ನಾಮವಾಚಿಗಿರುವ ನೆಲೆ ಬೆಲೆಯೆಲ್ಲವೂ ಅದರ ಸರ್ವನಾಮಕ್ಕಿದೆ. ಅದು ಪ್ರತಿನಿಧಿಸುವ ನಾಮದ ಸರ್ವವನ್ನೂ (ಲಿಂಗ, ವಚನ, ಪುರುಷ, ವಿಭಕ್ತಿಗಳನ್ನು) ವಹಿಸುವುದರಿಂದಲೇ ಅದರ ಸಾರ್ಥಕ್ಯವಿರುತ್ತದೆ. ಇಂಗ್ಲೀಷ್ ವ್ಯಾಕರಣಸೂತ್ರದಲ್ಲಿ ಹೇಳಿರುವುದು ಹೀಗೆ:

Since a pronoun is used instead of a noun, it must be of the same gender and person as the noun it stands for.[1]

ಆತ್ಮಾರ್ಥಕ ಸರ್ವನಾಮವಾಗಿರುವುದರಿಂದ ತಾನು ಮತ್ತು ತಾವು ಇವು ಮತ್ತು ಇವುಗಳ ವಿಭಕ್ತಿರೂಪಗಳು ಮೂರು ಪುರುಷಗಳಿಗೂ ಅನ್ವಯಿಸಬೇಕಾದುವು. ಆದರೆ, ಕನ್ನಡದಲ್ಲಿ ಉತ್ತಮ ಮಧ್ಯಮ ಪುರುಷಗಳಲ್ಲಿ ಅವುಗಳ ಸಹಜಪ್ರಯೋಗವಿಲ್ಲ. 'ನಾನು ತನ್ನ ಮನೆಗೆ ಹೋಗುತ್ತೇನೆ. ನೀನು ತನ್ನ ಕೆಲಸ ನೋಡು' ಎನ್ನುವುದಿಲ್ಲ. 'ನಾನು ನನ್ನ' ಎಂತಲೂ 'ನೀನು ನಿನ್ನ' ಎಂತಲೂ ಪ್ರಯೋಗಿಸುವುದೇ ರೂಢಿ. ಇದರ ಬಹುವಚನದಲ್ಲಿಯೂ ಹಾಗೆಯೇ. ಆದರೆ, ಪ್ರಥಮ ಪುರುಷದಲ್ಲಿ ಆತ್ಮಾರ್ಥಕ ಸರ್ವನಾಮದ ಬಳಕೆ ಇದ್ದೇ ಇರುತ್ತದೆ. ತನ್ನನ್ನು, ತನ್ನಿಂದ, ತನಗೆ, ತನ್ನ, ತನ್ನಲ್ಲಿ ಎಂಬ ಪ್ರಯೋಗಗಳಿರುತ್ತವೆ. ಬಹವಚನವಾಗಿ - ತಾವು, ತಮ್ಮನ್ನು, ತಮ್ಮಿಂದ, ತಮಗೆ, ತಮ್ಮ, ತಮ್ಮಲ್ಲಿ ಎಂಬ ರೂಪಗಳೂ ನೆಲೆವಡೆದಿವೆ. ಇವನ್ನು ಕ್ರಮವರಿತು ಹೆಚ್ಚಿನ ವಿದ್ವಾಂಸರು ಪ್ರಯೋಗಿಸುವರಾದರೂ, ವಿದ್ವಾಂಸರೇ ಕೆಲವೆಡೆ. 'ತನ್ನ' ಎಂಬ ಏಕವಚನವನ್ನೇ ಬಹುವಚನದ ಸ್ಥಾನದಲ್ಲಿ ಪ್ರಯೋಗಿಸುವುದು ಕಂಡು ಬಂದಿದೆ. ಅದು ಹೇಗೆ ಸರಿ? ಎಂಬುದಿಲ್ಲಿ ವಿಚಾರಾರ್ಹವಾಗಿದೆ.

---

1. J.C. Nesfield's English Grammar, Composition, and usage 1960, p. 35.

ಬಹುಸಂಖ್ಯಾವಾಚಿಯಾಗಿ ಬಹುವಚನವಿರುವಂತೆ, ಆದರಾರ್ಥಕ ಬಹುವಚನವೂ ಇರುತ್ತದೆ (Honourific Plural). ಮುಖ್ಯವಾಗಿ ಹಿರಿಯರನ್ನು, ಗುರುಗಳನ್ನು, ಸ್ವಾಮಿಗಳನ್ನು, ಗೌರವಾರ್ಹರನ್ನು ಕುರಿತು ಹೇಳುವಾಗ ತಾವು, ತಮ್ಮನ್ನು, ತಮ್ಮಿಂದ, ತಮಗೆ, ತಮ್ಮ, ತಮ್ಮಲ್ಲಿ ಎಂಬ ಸರ್ವನಾಮ ಬಹುವಚನಗಳನ್ನು ಬಳಸುವುದು ಶಿಷ್ಟಾಚಾರವಾಗಿರುತ್ತದೆ. ಆದರೆ ಇದರ ಉಲ್ಲಂಘನೆ ಅನೇಕ ಮುದ್ರಿತ ಪುಸ್ತಕಗಳಲ್ಲಿ ಕಾಣಿಸುತ್ತಿದೆಯಲ್ಲದೆ ಪತ್ರಿಕೆಗಳಲ್ಲಿ ನಿರಂತರ ನಡೆಯುತ್ತಲೇ ಇರುವುದು ಕಂಡುಬರುತ್ತಿದೆ. ಕೆಲವು ಉದಾಹರಣೆಗಳು :

೧. ನಿರಂಜನರು ಕನ್ನಡ ಸಾಹಿತ್ಯದಲ್ಲಿ **ತನ್ನದೇ** ಆದ ಶೈಲಿಯೊಂದನ್ನು ನಿರ್ಮಿಸಿದ್ದಾರೆ. (ಕಯ್ಯಾರ ಕಿಞ್ಞಣ್ಣ ರೈ : ನಿರಂಜನ ಅಭಿನಂದನ, ೧೯೮೬, ಪುಟ ೧೯, 'ಧೀರಚೇತನ' ಎಂಬ ಲೇಖನದಲ್ಲಿ)

೨. ವಾದಿರಾಜರು **ತನ್ನ** ತಾಯಿ ಹೇಳಿದ ಹರಕೆಯಂತೆ, ಹರಿಗೆ ಲಕ್ಷಾಲಂಕಾರವನ್ನು ಒಪ್ಪಿಸುವಂತೆ, ವ್ಯಾಸಭಾರತದ ಲಕ್ಷಶಬ್ದಗಳ ವಿಶೇಷಾರ್ಥದ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದರು. (ಕೆ. ವೆಂಕಟರಾಯಾಚಾರ್ಯ : ಸಾಹಿತ್ಯ ಸಮುಚ್ಚಯ, ಪುಟ ೧೦)

೩. ಕಾರ್ಕಳದಲ್ಲಿ ಒಂದು ಕೆರೆಯನ್ನು ಮುಚ್ಚಿಬಿಡಲು ತೀರ್ಮಾನಿಸಿದಾಗ, ಡಾ. ಶಿವರಾಮ ಕಾರಂತರು **ತನ್ನ** ಪ್ರತಿಭಟನೆ ಕಳಿಸಿ ಅದನ್ನು ತಪ್ಪಿಸಿದ್ದರು. (ತರಂಗ ಪತ್ರಿಕೆ, ಸಂಪಾದಕೀಯ, ೧೯-೩-೧೯೮೭)

೪. ಅಮೃತಾ ಪ್ರೀತಂ ತನ್ನ ಕಾವ್ಯರಚನೆಯ ವಸ್ತುಗಳನ್ನು **ತನ್ನ** ಮನದಾಳದ ನೋವಿನಿಂದಲೇ ಜೀವೋತ್ಪತ್ತಿ ಮಾಡಿದರು (ಮಲ್ಲೇಪುರಂ ವೆಂಕಟೇಶ್-ಕನ್ನಡ ಪ್ರಭ ೮-೨-೧೯೮೭, ಇದರಲ್ಲಿ ಸುನೇರಿ ಎಂಬ ಪುಸ್ತಕದ ವಿಮರ್ಶೆ)

೫. ಗೃಹಸ್ಥರು **ತಾನು** ಮಾಡಿದ ಅಡಿಗೆಯಲ್ಲಿ ಭೂತಗಳಿಗೂ ಪ್ರಾಣಿಗಳಿಗೂ ಭಾಗವನ್ನು ಕೊಡಬೇಕು. (ಶ್ರೀ ನರಸಿಂಹ ಭೀಮಾಚಾರ್ಯ 'ಆದರ್ಶ ಗೃಹಸ್ಥಾಶ್ರಮ' ಎಂಬ ಲೇಖನದಲ್ಲಿ -ಜೀವೋತ್ತಮ ಪತ್ರಿಕೆ, ಕುಮಟಾ. ಸಂಪುಟ ೨೮, ಸಂ ೧ ೧೯-೭-೧೯೮೫)

೬. ಆದಿಪ್ರಾಸವನ್ನು ಕಾವ್ಯಪುರುಷನ ಕೊರಳಲ್ಲಿ ತೂಗುತ್ತಿದ್ದ ಜನಿವಾರ ಎಂದು ಸಮರ್ಥಿಸುತ್ತಿದ್ದ ಪಂಜೆಯವರು ೧೯೩೪ ರಲ್ಲಿ **ತನ್ನ** ರಾಯಚೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣದಲ್ಲಿ ಪ್ರಾಸ ತಿರಸ್ಕರಣೆಯಿಂದ ಕನ್ನಡ ಶೈಲಿಗೆ ಸಹಜತೆ ಬಂದಿದೆ ಎಂಬುದನ್ನು ಒಪ್ಪಿಕೊಂಡರು. (ಮುರಳೀಧರ ಉಪಾಧ್ಯ : ಉಗ್ರಾಣ ಗ್ರಂಥದ ಆಲೋಕನದಲ್ಲಿ. ತರಂಗ ೩-೪-೧೯೮೮).

ಹೀಗೆ ಕೊಡಬಹುದಾದ ಉದಾಹರಣೆಗಳು ನೂರಾರಲ್ಲ, ಸಾವಿರಾರಿವೆ. ನಿತ್ಯವೂ ಈ ಪ್ರಯೋಗ ಆಗುತ್ತಲೇ ಇದೆ. ವಿರಳವಾಗಿ ಇತರ ಕಡೆಯ, ಆದರೆ ಮುಖ್ಯವಾಗಿ ದಕ್ಷಿಣ ಜಿಲ್ಲೆಯ ಕಡೆಯ, ಕೆಲವು ಮಂದಿ ವಿದ್ವಾಂಸರು ಅರಿತೋ ಅರಿಯದೆಯೋ ವಚನದೋಷದ

ಈ ಬಗೆಯ ತಪ್ಪುಬಳಕೆ ಮಾಡುತ್ತಿದ್ದಾರೆ ! **ತಮ್ಮ** ಎಂಬ ಬಹುವಚನ ಕನ್ನಡದಲ್ಲಿದ್ದರೂ **ತನ್ನ** ಎಂದೇ ಪ್ರಯೋಗಿಸುತ್ತಾರೆ. ಇದೇಕೆಂಬುದು ಶೋಧಿಸತಕ್ಕುದಾಗಿದೆ. ದಕ್ಷಿಣಕನ್ನಡ ಜಿಲ್ಲೆಯ ಕಡೆಯವನೇ ಆಗಿರುವ ಈ ಲೇಖಕನು ಅಭಿಪ್ರಾಯಪಟ್ಟಿರುವುದು ಹೀಗಿದೆ -

ತುಳುಭಾಷೆಯ ಪ್ರಭಾವದಿಂದ ಹೀಗಾಗಿದೆ. ತುಳುವಿನಲ್ಲಿ ಏಕವಚನದಲ್ಲಿಯೂ ಬಹುವಚನದಲ್ಲಿಯೂ **'ತನ್ನ'** ಎಂಬುದೇ ಪ್ರಯೋಗದಲ್ಲಿದೆ. ಉದಾಹರಣೆಗಳು- 'ಆರ್ ತನ್ನ ಕೈಟ್ಟ್ ಕೊಂಡ ತ್ತೆರ್' (ಅವರು ತನ್ನ ಕೈಯಲ್ಲಿ ತೆಗೆದುಕೊಂಡು ಬಂದರು). 'ಆಯೆ ತನ್ನ ತರೆಟ್ಟ್ ಪುದೆ ತುಂಬೊಂದು ಬತ್ತೆ' (ಅವನು ತನ್ನ ತಲೆಯಲ್ಲಿ ಹೊರೆ ಹೊತ್ತುಕೊಂಡು ಬಂದನು). 'ಜೋಯಿಸೆರ್ ಇತ್ತೆ ತನ್ನ ಇಲ್ಲಾಳಿತ್ತೆರ್' (ಜೋಯಿಸರು ಈಗ ತನ್ನ ಮನೆಯಲ್ಲಿದ್ದರು). ಹೀಗೆ ತುಳುವಿನಲ್ಲಿ **'ತಮ್ಮ'** ಎಂಬ ಬಹುವಚನವಿರಬೇಕಾದಲ್ಲಿ **'ತನ್ನ'** ಎಂಬ ಏಕವಚನಪ್ರಯೋಗವಿರುವುದು ಕಂಡುಬರುವ ಸಂಗತಿ. ಅದರ ಪ್ರಭಾವದಿಂದ ಕನ್ನಡದಲ್ಲಿಯೂ ಹಾಗೆ ಆದುದೆಂದು ತೋರುತ್ತದೆ.

ಯಾವುದೇ ಭಾಷೆಯ ಶುದ್ಧತೆಯು ವ್ಯಾಕರಣಶುದ್ಧತೆಯನ್ನು ಅವಲಂಬಿಸಿರುವುದರಿಂದ ಇದನ್ನು ಕನ್ನಡದಲ್ಲಿ ಅವರವರು ಯೋಚಿಸಿ, ತಿದ್ದಿಕೊಳ್ಳುವುದು ಸೂಕ್ತವಲ್ಲವೇ ? ದ.ಕ. ಜಿಲ್ಲೆಯ ಕಡೆಯ ಪತ್ರಿಕೆಗಳಲ್ಲಿ ಆ ಕಡೆಯ ಲೇಖಕರಲ್ಲಿ (ಈ ಲೇಖಕನ ಹೊರತು) ಹೆಚ್ಚಾಗಿ ಈ ತಪ್ಪು ಕಂಡುಬರುತ್ತದೆ. ಅದನ್ನು ಮಾಡುವವರು ಈ ಸಮೀಕ್ಷೆಯನ್ನು ಸಂಲಕ್ಷಿಸುವರೆಂದು ಭಾವಿಸುತ್ತೇನೆ.

ಮೇಲೆ ಕಾಣಿಸಿದ ತನ್ನ, ತಮ್ಮ ಪ್ರಯೋಗ ವಿಚಾರದಂತೆ ಇನ್ನೊಂದು ಸರ್ವನಾಮದ ವಚನ ದೋಷ ನನ್ನ, ನಮ್ಮ ಎಂಬುದರ ಪ್ರಯೋಗಗಳಲ್ಲಿವೆ. ನಮ್ಮ ತಾಯಿ, ನಮ್ಮ ತಂದೆ, ಎಂಬಲ್ಲಿ 'ನಮ್ಮ' ಎಂಬುದು ವ್ಯಕ್ತಿಯ ಅಣ್ಣತಮ್ಮಂದಿರು ಅಕ್ಕತಂಗಿಯರು ಕೂಡ ಒಳಗೊಂಡುದಾಗಿದ್ದರೆ ಸರಿ- ಶುದ್ಧ ಪ್ರಯೋಗ. ಆದರೆ 'ನನ್ನ' ಎಂದು ಏಕವ್ಯಕ್ತಿವಾಚಕವಿರುವಲ್ಲಿ 'ನಮ್ಮ' ಎಂಬ ಪ್ರಯೋಗ ಅಶುದ್ಧ. ಹಿಂದೀ ಭಾಷೆಯನ್ನು 'ನನ್ನ ತಂದೆ' ಎಂಬ ಅರ್ಥದಲ್ಲಿ 'ಮೇರೇ ಬಾಪ್' ಎಂದು 'ನಮ್ಮ' ಎಂಬರ್ಥದ ಬಹುವಚನ ಪ್ರಯೋಗವಿದೆ. ಇದು ಗೌರವ ಸೂಚಕವಾಗಿ ಬರುವ ಪ್ರಯೋಗ. ಕನ್ನಡದಲ್ಲಿ ಈ ವಿಧದ ಬಳಕೆ ಅಸಾಧು.

☐

೧೫

ಸೃಜನಶೀಲ ಸಾಹಿತ್ಯ - ಆಧುನಿಕ ಸ್ಥಿತಿ

ಸಾಹಿತ್ಯದಲ್ಲಿ ಗದ್ಯ, ಪದ್ಯ, ಮಿಶ್ರ (ಚಂಪು), ನಾಟಕ - ಎಂಬ ವಿಭಜನೆ ಪ್ರಾಚೀನಕಾಲದಿಂದಲೇ ನಡೆದುಬಂದಿದೆ. ಆಧುನಿಕ ಕಾಲದಲ್ಲಿ ಚಂಪೂಕಾವ್ಯ ರಚನೆ ವಿರಳವಾದರೂ ಇನ್ನುಳಿದ ಪ್ರಭೇದಗಳ ರಚನೆಗೆ ಕೊರತೆ ಇಲ್ಲ. ಅವುಗಳಲ್ಲಿ ಗದ್ಯವಂತೂ ಬಹುಪ್ರಕಾರಗಳಲ್ಲಿ ಕವಲೊಡೆದು ಮೆರೆಯುವುದನ್ನು ಕಾಣುತ್ತಿದ್ದೇವೆ. ಇಂತಹ ಸಾಹಿತ್ಯವನ್ನು ಇನ್ನೊಂದು ತೆರನಾಗಿ ಸೃಜನಶೀಲ ಮತ್ತು ಇತರ (ಶಾಸ್ತ್ರ) ಎಂದು ವಿಭಾಗಿಸಬಹುದಾಗಿದೆ. ಸೃಜನಶೀಲಸಾಹಿತ್ಯ ಭಾವಪ್ರಧಾನ. ಅದು ಕೃತಿಕಾರನ ಪ್ರತಿಭಾಗರ್ಭದಲ್ಲಿ ಪೋಷಿತವಾಗಿ ಬಳೆದು ಹೊರಬಂದು, ರಸಿಕರ ಭಾವುಕ ಚಿತ್ತವನ್ನು ಸೂರೆಗೊಳ್ಳುವಂತಹುದು; ಜೀವನ ದರ್ಶಕವೂ ಹೌದು. ಆದರೆ, ಶಾಸ್ತ್ರ ಸಾಹಿತ್ಯವೆಂಬುದು ಕೃತಿಕಾರನ ರಸ ಭಾವಶಕ್ತಿಗಿಂತಲೂ ಅವನ ಅಧ್ಯಯನಾತ್ಮಕ ವಿವೇಚನಾತ್ಮಕ ಸಂಶೋಧಾತ್ಮಕ ಅನುಭವ ಪಾಂಡಿತ್ಯಗಳ ಸೃಷ್ಟಿಯಾಗಿರುತ್ತದೆ. ಸೃಜನಾತ್ಮಕವೆನಿಸುವವು - ಕಾವ್ಯ, ಕವನ, ಕಥೆ, ಕಾದಂಬರಿ, ನಾಟಕ, ಸರಸಪ್ರಬಂಧ ಮುಂತಾದ ರೂಪಗಳನ್ನು ತಾಳುತ್ತವೆ. ಸೃಜನಶೀಲೇತರವೆನಿಸುವವು ಒಂದೆಡೆ - ತತ್ತ್ವ, ವೇದಾಂತ, ಧರ್ಮ, ಸಂಸ್ಕೃತಿ, ನೀತಿ ವಿಷಯಕವಾಗಿ, ಇನ್ನೊಂದೆಡೆ - ಸೃಜನಾತ್ಮಕ ಸಾಹಿತ್ಯಕ್ಕೆ ಪೋಷಕವೆನಿಸುವ ವ್ಯಾಕರಣ, ಛಂದಸ್ಸು, ಅಲಂಕಾರ, ರಸ, ರೀತಿ, ವಿಮರ್ಶೆ (ಸಮೀಕ್ಷೆ), ಸಂಶೋಧನೆ ಮುಂತಾದ ವಾಗ್ರೂಪ ತಾಳುತ್ತವೆ. ಪ್ರಕೃತ, ಇಲ್ಲಿ ಸೃಜನಶೀಲ ಕೃತಿಗಳ ಕಡೆಗೆ ಲಕ್ಷ್ಯವಿಡಬೇಕಾಗಿದೆ.

ಸೃಜನಶೀಲಸಾಹಿತ್ಯವನ್ನು ಲಕ್ಷ್ಯವಿಟ್ಟು ಲಾಕ್ಷಣಿಕರು ಸಾಹಿತ್ಯ ಎಂಬುದನ್ನು ಸ + ಹಿತ ಎಂಬ ಮೂಲಕ್ಕಿಳಿದು 'ಹಿತದಿಂದ ಕೂಡಿದುದು ಸಹಿತ; ಸಹಿತದ ಭಾವನೇ ಸಾಹಿತ್ಯ' ಎಂದು ವಿಶ್ಲೇಷಿಸಿದ್ದಾರೆ. ಯಾವ ವಾಙ್ಮಯವು (ವ್ಯಕ್ತಿಗೆ, ಸಮಾಜಕ್ಕೆ, ರಾಷ್ಟ್ರಕ್ಕೆ, ವಿಶ್ವಕ್ಕೆ) ಹಿತವೋ - ಒಳ್ಳಿತನ್ನು ಮಾಡಬಲ್ಲುದೋ ಅದು ಸಾಹಿತ್ಯ - ಎಂದಿದ್ದಾರೆ. ಸೃಜನಶೀಲ ಸಾಹಿತ್ಯವನ್ನು ಕವಿ ಸೃಷ್ಟಿಯದನ್ನಾಗಿ ಅನುಲಕ್ಷಿಸಿ, ಅದನ್ನು ಬ್ರಹ್ಮಸೃಷ್ಟಿಗಿಂತ ಭಿನ್ನವಾದ ವೈಶಿಷ್ಟಪೂರ್ಣ ಸೃಷ್ಟಿಯೆಂದು ಪರಿಗಣಿಸಿ ಓರ್ವ ಲಾಕ್ಷಣಿಕನೆಂದಿರುವುದು ಹೀಗಿದೆ -

ನಿಯತಿಕೃತ ನಿಯಮ ರಹಿತಾಂ
ಹ್ಲಾದೈಕಮಯೀಮನನ್ಯ ಪರತಂತ್ರಾಂ
ನವರಸರುಚಿರಾಂ ನಿರ್ಮಿತಿ
ಮಾದಧತೀ ಭಾರತೀ ಕವೇರ್ಜಯತಿ

ಅಂದರೆ - ಬಾಹ್ಯವಿಶ್ವದ ನಿಯಮವಿಲ್ಲದುದು, ಆನಂದಮಯಮಾದುದು, ತನ್ನದೇ ಆದ ತಂತ್ರವನ್ನುಳ್ಳುದು, ಶೃಂಗಾರ ವೀರಾದಿ ನವರಸಗಳಿಂದ ಶೋಭಾಯಮಾನವಾದುದು, ಕವಿವಾಣಿಯಿಂದಾದ ಸೃಷ್ಟಿ - ಎಂಬುದಿಲ್ಲಿ ಅಭಿಪ್ರಾಯ. ಇದನ್ನೇ ನೇಮಿಚಂದ್ರನು (ಕ್ರಿ.ಶ. ೧೧೭೦) ರಸವತ್ತಾಗಿ ಹೀಗೆಂದಿದ್ದಾನೆ -

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ, ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ, ಹರನಂ ನರನಿಕ್ಕಿ ಗಂಟಲಂ
ಮೆಟ್ಟುಗೆ ಮೆಟ್ಟದಿರ್ಕೆ, ಕವಿಗಳ್ ಕೃತಿಬಂಧದೊಳಲ್ತೆ ಕಟ್ಟದರ್
ಮುಟ್ಟದರಿಕ್ಕಿ ಮೆಟ್ಟದರಿದೇನಳವಗ್ಗಳಮೋ ಕವೀಂದ್ರರಾ!

ಅಂದರೆ, ಕಪಿಗಳು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದರೋ ಇಲ್ಲವೋ, ವಾಮನನು ಅಳೆದ ಪಾದ ಮುಗಿಲನ್ನು ಮುಟ್ಟಿತೋ ಇಲ್ಲವೋ, ಅರ್ಜುನನು ಹೋರಾಡುತ್ತಾ ಶಿವನನ್ನು ನೆಲಕ್ಕೆ ಬೀಳಿಸಿ, ಅವನ ಕೊರಳನ್ನು ಮೆಟ್ಟಿದನೋ ಇಲ್ಲವೋ ಯಾರು ಬಲ್ಲರು ? ಆದರೆ ,ಕವಿಗಳು ತಮ್ಮ ಕಾವ್ಯಬಂಧಗಳಲ್ಲಿ ಇವೆಲ್ಲವನ್ನು ಮಾಡಿಬಿಟ್ಟಿದ್ದಾರೆ! ಹೀಗಿರುವಾಗ ಕವಿಯ ಸೃಜನಸಾಮರ್ಥ್ಯ ಅಸಾಮಾನ್ಯವಲ್ಲವೆ? ಸೃಜನಶೀಲಕೃತಿಗಳು ಹೊತ್ತಿರುವ ಭಾವಶಕ್ತಿಯ ಚಿತ್ರಣವಿದು. ಆದರೆ, ಇಷ್ಟು ಮಾತ್ರದಿಂದ ಸೃಜನಶೀಲ ಸಾಹಿತ್ಯ ಕೃತಾರ್ಥವಾಗದು, ಲಾಕ್ಷಣಿಕ ಮಮ್ಮಟನು ಹೇಳಿರುವ ಕಾವ್ಯೋದ್ದೇಶಗಳಿವು -

ಕಾವ್ಯಂ ಯಶಸ್ಸೇಽರ್ಥಕೃತೇ
ವ್ಯವಹಾರವಿದೇ ಶಿವೇತರ ಕ್ಷತಯೇ
ಸದ್ಯಃ ಪರನಿರ್ವೃತಯೇ
ಕಾಂತಾಸಮ್ಮಿತತಯೋಪದೇಶಯುಜೇ

ಇಲ್ಲಿ ಸೃಜನಶೀಲಸಾಹಿತ್ಯಕ್ಕೆ ಆರು ಉದ್ದೇಶಗಳನ್ನು ಪಟ್ಟಿ ಮಾಡಿದೆ - ಮೊದಲನೆಯದು ಕೀರ್ತಿ. ಉತ್ತಮ ಕೃತಿರಚನೆಯಿಂದ ಕವಿಗೆ, ಕವಿಪೋಷಕರಿಗೆ, ಕವಿಕೃತಿಪಠನದಿಂದ ಪ್ರಭಾವಿತರಾಗಿ ಅನುಭವಪಡೆದು ಬದುಕನ್ನು ತಿದ್ದಿಕೊಂಡ ಸಾಮಾಜಿಕರಿಗೆ ಕೀರ್ತಿ ಬರುವುದು. ನಮ್ಮ ದೇಶದ ರಾಷ್ಟ್ರೀಯ ಮಹಾಕಾವ್ಯಗಳಾದ ಭಾರತ ರಾಮಾಯಣಗಳು ಇಂಥವು. ಇವುಗಳ ಕಥಾವಸ್ತುವನ್ನು ಪೂರ್ಣವಾಗಿ ಇಲ್ಲವೆ, ಭಾಗಶಃ ಆಯ್ದುಕೊಂಡು ಬೇರೆ ಬೇರೆ ಭಾಷೆಗಳಲ್ಲಿ ಕವಿಗಳಿಂದ ರಚಿತವಾದ ಕಾವ್ಯಗಳು ಕೂಡ ಇದೇ ಬಗೆಯವೆನ್ನಬಹುದು. ಕಾವ್ಯೋದ್ದೇಶಗಳಲ್ಲಿ ಎರಡನೆಯದು- ಅರ್ಥ ಅಂದರೆ ಐಶ್ವರ್ಯ. ಉತ್ತಮ ಸಾಹಿತ್ಯ ರಚನೆಯಿಂದ, ಅದರ ಜನಪ್ರಿಯತೆಯಿಂದ ಧನಪ್ರಾಪ್ತಿಯಾಗಬಹುದು. ಆದರೆ, ಇಲ್ಲಿ 'ಅರ್ಥ' ಎಂಬುದನ್ನು 'ಪುರುಷಾರ್ಥ' ಎಂದಿಟ್ಟುಕೊಳ್ಳಬಹುದಾಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷ ಸಾಧಕವಾದುದು ಸೃಜನಾತ್ಮಕ ಸಾಹಿತ್ಯದವೆಂದ ಹಾಗಾಯಿತು.

ಮೂರನೆಯ ಪ್ರಯೋಜನ 'ವ್ಯವಹಾರಜ್ಞಾನ' ಪ್ರಾಪ್ತಿ. ಸಾಮಾಜಿಕನಾದ ಮನುಷ್ಯನು ತನ್ನ ಜೀವನದಲ್ಲಿ ಎಲ್ಲೆಲ್ಲಿ ಆರಾರೊಡನೆ ಹೇಗೆ ಹೇಗೆ ವರ್ತಿಸಬೇಕೆಂಬ ಪರಿಜ್ಞಾನವೇ

ವ್ಯವಹಾರಜ್ಞಾನ. ಅದನ್ನು ಒದಗಿಸಿಕೊಡುವುದು ಸೃಜನಶೀಲಸಾಹಿತ್ಯದ ಪ್ರಮುಖಲಕ್ಷಣವಾಗಿದೆ. ಇನ್ನು ನಾಲ್ಕನೆಯದು 'ಶಿವೇತರ ಕ್ಷತಿ' ಅರ್ಥಾತ್ ಅಮಂಗಲ ಪರಿಹಾರ. ಮಾಡಬಾರದುದನ್ನು ಮಾಡದಂತೆ ಸಾಹಿತ್ಯವು ಪ್ರೇರೇಪಿಸಬೇಕು. ಐದನೆಯದು 'ಸದ್ಯಃ ಪರನಿರ್ವೃತಿ' - ಅಂದರೆ, ಓದಿದೊಡನೆ ಇಲ್ಲವೆ ಓದಿದುದನ್ನು ಕೇಳಿದೊಡನೆ, ಅತಿಶ್ರೇಷ್ಠ ಆನಂದವುಂಟಾಗಬೇಕು. ಇದಕ್ಕೆ ಕಾವ್ಯಾನಂದವೆಂದು ಹೆಸರು. ಇದನ್ನು 'ಬ್ರಹ್ಮಾನಂದ ಸಹೋದರ'ವೆಂದಿದ್ದಾರೆ. ಈ ಆನಂದವು ಜೀವನದಲ್ಲಿ ಎಂದೂ ಮರೆಯಲಾಗದ ಪ್ರಭಾವದ ಮುದ್ರೆಯನ್ನೊತ್ತುತ್ತದೆ. ಸೃಜನಶೀಲ ಸಾಹಿತ್ಯವನ್ನು ಓದುವವರಿಗೆ ಅದೆಷ್ಟೋ ಅಪ್ರತ್ಯಕ್ಷ ಸಂಗತಿಗಳು, ಸಂವಾದಗಳು, ವರ್ಣನೆಗಳು ಕಣ್ಣ ಮುಂದೆ ಬಂದಂತಾಗುತ್ತವೆ. ಸಹೃದಯತೆ ಜಾಗೃತವಾಗಿ ಕಾವ್ಯಪಾತ್ರಗಳಲ್ಲಿ ಓದುಗರು ತಾದಾತ್ಮ್ಯ ತಾಳುತ್ತಾರೆ. ಆನಂದ ಅನುಭವಿಸುತ್ತಾರೆ. ಇನ್ನು ಬರುವ ಆರನೆಯ ಪ್ರಯೋಜನವೇ ಉಪದೇಶ - ನೀತಿಮಾರ್ಗಬೋಧನೆ. ಅದು ಕೂಡ ಕಾಂತಾಸಮ್ಮಿತವಾಗಿ ಹ್ಲಾದಮಯವಾದುದು. ಈ ಪ್ರಯೋಜನಗಳ ನಿಕಷದಿಂದ ನಾವು ಈಗಿನ ಸೃಜನ ಶೀಲ ಕೃತಿಗಳ ಮೌಲ್ಯವನ್ನು ಕಾಣಬೇಕು.

ಇಂದು ನಮ್ಮ ದೇಶ ದಿಕ್ಕುಗಾಣದ ಸ್ಥಿತಿಯಲ್ಲಿದೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ವೈಯಕ್ತಿಕ, ಕೌಟುಂಬಿಕ, ವ್ಯಾವಹಾರಿಕ ಮುಂತಾದ ಯಾವ ನೆಲೆಯಲ್ಲಿ ನೋಡಿದರೂ ರಾಷ್ಟ್ರೀಯ ಭಾವನೆ ಶೂನ್ಯವಾಗಿ ಕಾಣುತ್ತಿದೆ. ಆದುದರಿಂದ ನಮ್ಮ ಸಾಹಿತ್ಯಕೃತಿಗಳು ಈ ಅರಕೆಯನ್ನು ತುಂಬುವ ದಿಕ್ಕಿಗೆ ಅಭಿಮುಖವಾಗಿ ಇರಬೇಕಾದುದು ಅವಶ್ಯ. ಅಂತಹ ದೃಷ್ಟಿಯುಳ್ಳ ಕೆಲವು ಜೀವನಚರಿತ್ರಗ್ರಂಥಗಳು, ವೈಚಾರಿಕ ಪ್ರಬಂಧಸಂಪುಟಗಳು, ಆತ್ಮಕಥನಗಳು ನಮ್ಮಲ್ಲಿವೆ. ಆಧುನಿಕ ಕಥೆ ಕಾದಂಬರಿಗಳು, ಕಾವ್ಯ ಕವನಗಳು, ಇಂತಹ ದಿಕ್ಕನ್ನು ಕಾಣಿಸುವವಾಗಿ ಇವೆ ಎಂಬ ಹಾಗೆ ತೋರುವುದಿಲ್ಲ. ಕೆಲವು ಕೃತಿಗಳಿಗೆ ಒಂದು ವೇಳೆ ಅಂತಹ ದಿಕ್ಕು ಇದ್ದರೂ ನಡೆಗೆಟ್ಟು ಮುಗ್ಗರಿಸುತ್ತಿರುವುದು ಕಂಡುಬರುತ್ತದೆ.

ಆಧುನಿಕರಲ್ಲಿ ಅನೇಕರ ಮನೋಭಾವದಂತೆ, ಕಥೆ ಕಾದಂಬರಿ ನಾಟಕಗಳಿಗೆ ಮಮ್ಮಟನು ಹೇಳಿದಂತಹ ಗುರಿ ಬೇಕಾಗಿಲ್ಲ. ಕಾವ್ಯಗಳಿಗೆ ಕವನಗಳಿಗೆ ಛಂದಸ್ಸು ಬೇಡ. ಮುಕ್ತ (ಬಿಡಲ್ಪಟ್ಟ) ಛಂದಸ್ಸು ಎಂಬುದೇ ಅಭಿಮಾನ ವಿಷಯ. (ಇತ್ತೀಚೆ, ನಾನು ಬರೆದು ಪ್ರಕಟಿಸಿರುವ ಶ್ರೀ ಗುರು ಚರಿತ್ರಾಮೃತಂ' ಎಂಬ ಭಾಮಿನಿಷಟ್ಪದಿಯ ಕಾವ್ಯವನ್ನು ಕುರಿತು ಓರ್ವ ಆಧುನಿಕ ಕವಿವರ್ಯರು - ನೀವು ಭಾಮಿನಿಷಟ್ಪದಿಯಲ್ಲಿ ಯಾಕೆ ಬರೆದಿರಿ?' ಎಂದು ತಾತ್ಸಾರದಿಂದ ಪ್ರಶ್ನಿಸಿದ್ದರು). ಆಧುನಿಕರು ಬರೆದುದೆಲ್ಲವೂ ಅವರವರ ಛಂದೋಬದ್ಧ ರಚನೆಗಳು! 'ಕಾವ್ಯಗಳು'!. ಅವಕ್ಕೆ ಅವರವರಿಟ್ಟುಕೊಂಡ ಛಂದೋನಾಮಗಳು. ವ್ಯಾಕರಣವೆಂಬುದು ಈ ಆಧುನಿಕರಿಗೆ ಬೇಕಾಗಿಯೇ ಇಲ್ಲ. ಭಾಷೆಯ ಶುದ್ಧತೆಯ ಕಡೆಗೆ ನೋಡಬೇಕಾಗಿಲ್ಲ. ಕೇಶಿರಾಜನು (ಕ್ರಿ.ಶ. ೧೨೬೦) ಕೃತಿಕಾರರಲ್ಲಿ ಸತೃಣಾಭ್ಯವಹಾರಿಗಳು (ಅನ್ನದಲ್ಲಿ ಬಂದ ಹುಲ್ಲನ್ನು ಆಚೆಗಿಡದೆ ಅದನ್ನು ತಿನ್ನುವ ಸ್ವಭಾವದ ಅವಿವೇಕಿಗಳು) ಎಂದಿದ್ದಾನೆ. ಗದ್ಯಕಾವ್ಯಕ್ಕೆ ವ್ಯಾಕರಣನಿರ್ಬಂಧ ಬೇಕಾಗಿಲ್ಲವೆಂದೂ ಪದ್ಯಕ್ಕೆ ಮಾತ್ರ ನಿರ್ಬಂಧ ಅವಶ್ಯವೆಂದೂ ಹೇಳುವರು. ಆದರೆ ಅರೋಚಿಗಳು (ಇಂತಹದನ್ನು ಅರುಚಿಕರವಾಗಿ ಕಾಣುವ ವಿವೇಕಿಗಳು) ಗದ್ಯ ಪದ್ಯವೆರಡೂ

ವ್ಯಾಕರಣ ಮರ್ಯಾದೆಯಿಂದ ಕೂಡಿರಬೇಕು - ಎನ್ನುವರು ಎಂಬುದಾಗಿ ಹೇಳಿದ್ದಾನೆ. ಆದರೆ ಈಗಿನ ಶತಮಾನದ ಕೃತಿಕಾರರು ಪದ್ಯರಚನೆಯಲ್ಲಿ ವ್ಯಾಕರಣ ಛಂದೋವಿಷಯಾದಿ ನಿರ್ಬಂಧವು ಲವಲೇಶದಷ್ಟೂ, ಬೇಡ, ಗದ್ಯದಲ್ಲಿ ಸ್ವಲ್ಪ ಇದ್ದರೆ ಇರಲಿ - ಎಂಬಂತೆ ವರ್ತಿಸುವುದು ಕಂಡುಬರುತ್ತದೆ. ಇದು ಕನ್ನಡ ಸಾಹಿತ್ಯ ಪೂರ್ತಿಯಾಗಿ ದಿಕ್ಕುಗೆಡುವ, ಜನಹಿತಕ್ಕೆ ಹೊರಗಾಗುವ, ಅಧೋಗತಿಗೆ ಮುಂದುವರಿಯುವ ಲಕ್ಷಣವೇ ಸರಿ.

ಓಗೆ ವ್ಯಾಕರಣವನ್ನು ಛಂದಸ್ಸನ್ನು ಬಿಟ್ಟು ಕೃತಿರಚಿಸುವವರು ತಮ್ಮ ರಚನೆಗಳನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಸರಳ - ಸುಲಭ ವಾಕ್ಯಯೋಗವನ್ನಾದರೂ ಬಳಸುವರೆ? ಅದೂ ಇಲ್ಲ. ವೇದಾಂತವನ್ನೋ ಗೂಢಾರ್ಥವನ್ನೋ ತುಂಬುವುದಕ್ಕಾಗಿ ಅತಿಕಠಿನ ಸಂಸ್ಕೃತ ಶಬ್ದಗಳನ್ನು, ಎಷ್ಟೋ ಕಡೆ ಅದು ಕೂಡ ತಪ್ಪಾಗಿ, ಬಳಸಿ ಕೃತಿರಚನೆಮಾಡುವುದು ಈಗ ರೂಢಿಯಾಗಿಹೋಗಿದೆ. 'ಪಾದಮಯಂ ಪದ್ಯಂ' ಎಂದು ಪದ್ಯಲಕ್ಷಣವಿದ್ದರೆ, ಆಧುನಿಕರ ಪದ್ಯಗಳಿಗೆ ಯಾವ ಬಗೆಯ ಪಾದವಿನ್ಯಾಸಲಕ್ಷಣವೂ ಇಲ್ಲ. ವಿಸಂಧಿದೋಷ ಎಲ್ಲೆಲ್ಲೂ! ಪರಪದಪೂರ್ವವು ದ್ವಿತ್ವವಾಗಿ ಪೂರ್ವಪದಾಂತ್ಯವು ಹ್ರಸ್ವವಾಗಿರುವ ಸಂಧಿದೋಷಕ್ಕೂ ಮಿತಿಯಿರುವುದಿಲ್ಲ. ಇದರಿಂದ ದ್ವಿತ್ವಾಕ್ಷರಗಳು ಸತ್ವಶೂನ್ಯವಾಗಿರುತ್ತವೆ. ಅರಿಸಮಾಸದ ಪರಾಕಾಷ್ಠೆಯಿರುತ್ತದೆ. ಅಶುದ್ಧ ಶಬ್ದರೂಪಗಳು, ಸಂಧಿ - ಸಮಾಸ ವಿಭಕ್ತಿ-ಲಿಂಗ-ವಚನ-ಕಾಲಗಳು ತಪ್ಪಾಗಿ ಅಲ್ಲಲ್ಲಿ ಕಾಣಿಸುತ್ತವೆ. ಇಂತಹ ಸೃಜನ ಕೃತಿಗಳಿಗೆ ವ್ಯಕ್ತಿಪ್ರಭಾವದಿಂದ ಶ್ಲಾಘನೆಗಳೂ ಬರುತ್ತವೆ. ಸಾಹಿತ್ಯಸಂಸ್ಥೆಗಳಿಂದ ಇವು ಬಹುಮಾನಿತಗಳಾಗುವುದೂ ಅಸಂಭಾವ್ಯವಲ್ಲ. ಇದೊಂದು ವೃತ್ತಿದರ್ಮವೆಂಬಂತಾಗಿದೆ. ಈ ಬಗೆಯ ರಚನೆಯನ್ನೇ ಮಹಾಕಾವ್ಯ ನಾಮದಿಂದ ಎತ್ತಿ ಹಿಡಿಯಲಾಗುತ್ತಿದೆ. ಇಂತಹ ವೃತ್ತಿಧರ್ಮದೆಡೆಯಲ್ಲಿ ಅರ್ಹತೆಯುಳ್ಳವೂ ಮೌಲಿಕವೂ ಆಗಿರುವ ಕೃತಿಗಳ ಪರಿಶೀಲನೆಯೇ ಬದ್ಧದ್ವಾರವಾಗಿಹೋಗಿದೆ!

ಇದಕ್ಕೆಲ್ಲ ಕಾರಣವೇನು? ಈಗಿನ ಪರಿಸರವೇ ಅಂತಹದು ಎನ್ನಬೇಕಾಗುತ್ತದೆ. ಪರಿಸರವನ್ನು ಕಾಲಪರಿಸ್ಥಿತಿಯನ್ನು ಅನುಸರಿಸುವುದು ಕೃತಿಕಾರನಿಗೆ ಅನಿವಾರ್ಯವಾಗುತ್ತದೆ. ಪರಿಸರಕ್ಕೆ ಸ್ಪಂದಿಸುವುದರಿಂದಲೇ ಸೃಜನಶೀಲಕೃತಿಗಳು ಅರ್ಥಪೂರ್ಣ ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತವೆ. ಇಂದಿನ ಸಾಮಾಜಿಕ ಪರಿಸ್ಥಿತಿಗೆ ಸಂವಾದಿಯಾಗಿ ಸಾಹಿತ್ಯವು ಸಂಕೀರ್ಣವಾಗುತ್ತ ಹೋಗುತ್ತಿದೆ. ಈಗಿನ ಪೀಳಿಗೆಯ ಬರೆಹಗಾರರಲ್ಲಿರುವ ವೈಚಾರಿಕ ಗೊಂದಲವೇ ಈ ಸಾಹಿತ್ಯಸೃಷ್ಟಿಕ್ರಿಯೆಯಲ್ಲಿಯೂ ಪ್ರತಿಫಲಿಸುತ್ತಿದೆ. ಈ ಸ್ಥಿತಿಗೆ ನಾವು ಮಮೋವೈಜ್ಞಾನಿಕ ಹಾಗೂ ಸಾಮಾಜಿಕ ಆರ್ಥಿಕ ಭೂಮಿಕೆಗಳಲ್ಲಿ ಕಾರಣಗಳನ್ನು ಹುಡುಕುತ್ತಾ ಸಾಹಿತ್ಯ ವಿಮರ್ಶೆಗೆ ಒಂದು ಸ್ಥಿರಚೌಕಟ್ಟನ್ನು ಹಾಕಿಕೊಳ್ಳಬೇಕಾಗುತ್ತದೆ.

೧) ಆರ್ಥಿಕ ಅಭದ್ರತೆ, ವರ್ಗ-ವರ್ಣ ವೈಷಮ್ಯಗಳು ಸಾಹಿತ್ಯದಲ್ಲಿಯೂ ಪ್ರಧಾನ ಪಾತ್ರ ವಹಿಸುವುದರಿಂದ ಕಲಾತ್ಮಕತೆ-ಸಾರ್ವಕಾಲಿಕ ಮೌಲ್ಯಗಳು ಅನುಚಿತವಾಗಿ ಮಾರ್ಪಡುತ್ತಲೇ ಇರುವುದರಿಂದ ಸಾಹಿತ್ಯದ ಭಿತ್ತಿಯೂ ಸಂಕುಚಿತವಾಗುತ್ತಿದೆ.

೨) ಸ್ಥಿರವಾದ ತಾತ್ವಿಕ-ವೈಚಾರಿಕ ಸಂವಹನವಿಲ್ಲದಿರುವುದರಿಂದ ಸಾಹಿತ್ಯವು ಅಸ್ಪಷ್ಟವಾಗುತ್ತಿದೆ. ಇಂದಿನ ಲೇಖಕರು ಸಂಪ್ರದಾಯವನ್ನು ಧಿಕ್ಕರಿಸುತ್ತಾರೆ. ಆದರೆ, ಹೊಸ ನೆಲೆಯ ಅನ್ವೇಷಣೆಯಲ್ಲಿ ಇನ್ನೂ ತೊಡಗದೆಯೇ ಇರುವುದರಿಂದ ತಂತ್ರ, ವಸ್ತು, ವ್ಯಾಪ್ತಿಗಳಲ್ಲಿ ಇಬ್ಬಂದಿತನ ತಲೆ ಹಾಕುತ್ತಿದೆ.

೩) ಆಂತರಿಕ ಬಾಹ್ಯ ಒತ್ತಡಗಳ ಪರಿಣಾಮವಾಗಿ ಸಾಹಿತ್ಯದಲ್ಲಿ ಅಸಮತೋಲನ ಅಲ್ಲಲ್ಲಿ ತಲೆಹಾಕುತ್ತಿದೆ.

೪) ಓದುಗರಲ್ಲಿ ವ್ಯಾಪ್ತವಾಗುತ್ತಿರುವ ಅಭ್ಯಾಸದ ನ್ಯೂನತೆ, ಸದಭಿರುಚಿಯ ಕೊರತೆಗಳಿಂದ ಸಾಹಿತ್ಯದ ಗುಣಮಟ್ಟ ಕುಸಿಯುತ್ತಿದೆ.

೫) ಹಸಿ ಹಸಿ ಅನುಭವಗಳನ್ನು ಅಭಿವ್ಯಕ್ತಪಡಿಸುವ ತಹತಹದಿಂದಾಗಿ, ಸಾಹಿತ್ಯದಲ್ಲಿ ಪಕ್ವಗುಣದ ಅಭಾವ ಎದ್ದು ಕಾಣುತ್ತದೆ. ಅಗ್ಗದ ಜನಪ್ರಿಯತೆಯ ಹಂಬಲವೂ ಇದಕ್ಕೆ ಒತ್ತಾಸೆಯಾಗುತ್ತಿದೆ.

ಈ ಎಲ್ಲಾ ಕಾರಣಗಳಿಂದಾಗಿ ಇಂದಿನ ಸೃಜನಾತ್ಮಕ ಸಾಹಿತ್ಯವು ಸ್ಪಷ್ಟವಾಗಿ ಎರಡು ವರ್ಗಗಳಲ್ಲಿ ಒಡೆದುಕೊಂಡಿರುವುದನ್ನು ಕಾಣುತ್ತೇವೆ - **ಮೊದಲನೆಯದು** ಸೂತ್ರ ಬದ್ಧವಾದ ಪೂರ್ವಯೋಜಿತ ಪಾತ್ರಗಳುಳ್ಳ ಜನಪ್ರಿಯ ಕೃತಿಗಳು. ಈ ಪ್ರಕಾರದ ಬರೆಹಗಳಿಗೆ ಬಹುಸುಲಭವಾಗಿ ಪ್ರಕಾಶಕರೂ ದೊರೆಯುತ್ತಾರೆ. ಮಾರುಕಟ್ಟೆಯೂ ಸಿದ್ಧವಾಗಿರುತ್ತದೆ. ಮದ್ಯಮವರ್ಗದ ಓದುಗರನ್ನು ಅದರಲ್ಲಿಯೂ ಬಲುಮಟ್ಟಿಗೆ ಮಹಿಳೆಯರನ್ನು, ಲಕ್ಷ್ಯದಲ್ಲಿಟ್ಟುಕೊಂಡೇ ರಚಿತವಾದಂತಹ ಕೃತಿಗಳು ಈ ವರ್ಗದಲ್ಲಿ ಬರುತ್ತವೆ. ಇದರಲ್ಲಿ ವೈಚಾರಿಕತೆಯ ತಾಕಲಾಟವಾಗಲಿ, ಸಂಘರ್ಷವಾಗಲಿ ಇರುವುದಿಲ್ಲ. ಬದಲಿಗೆ, ತೀರಾ ತೆಳುವಾದ ಕತೆಯ ಹಂದರ, ಸಾಂಸಾರಿಕ ವರ್ತುಲದಲ್ಲಿಯೇ ಸುತ್ತುಹೊಡೆಯುವ ಕಥಾವಸ್ತು, ಕೃತಕವಾದ ಭಾಷೆ, ಬಿಗುವಿಲ್ಲದ ನಿರೂಪಣೆಗಳು-ಈ ರೀತಿಯ ಕೃತಿಗಳ ಪ್ರಮುಖ ಲಕ್ಷಣಗಳನ್ನಾಗಿ ಗುರುತಿಸಬಹುದು. ಇಂಥ ಕೃತಿಗಳಿಗೆ ಸಾಫಲ್ಯವಿರುವುದು ಮಧ್ಯಮವರ್ಗದವರ ಆಶೋತ್ತರಗಳಿಗೆ ಸಾಹಿತ್ಯಿಕ ಅಭಿವ್ಯಕ್ತಿಯನ್ನು ಕೊಡುವ ರೀತಿಯಲ್ಲಿ. ಕೈಗೂಡದ ಕನಸುಗಳಿಗೆ ಅವು ಕಿಂಡಿಗಳಾಗುತ್ತಾ ತುಂಬ ಜನಪ್ರಿಯವೂ ಆಗುತ್ತದೆ. ಉಷಾ ನವರತ್ನರಾಮ್, ಸಾಯಿಸುತೆ, ಈಚನೂರು ಶಾಂತಾ, ಈಚನೂರು ಜಯಲಕ್ಷ್ಮಿ, ವಿಜಯ ಸಾಸನೂರ, ನಾ ಡಿಸೋಜ, ಕೆ.ಟಿ. ಗಟ್ಟಿ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಇವರು ಚಿತ್ರಿಸುವ ರೀತಿಯು ಒಂದು ರೀತಿಯಿಂದ ಪುನರಾವರ್ತನೆಯೇ.

ಈ ವರ್ಗದ ಕೃತಿಗಳಿಂದ ತೀರಾ ಭಿನ್ನವಾಗಿ, ಒಂದು ವೈಚಾರಿಕ ಉನ್ನತಿಯನ್ನು ಕಾಯ್ದುಕೊಳ್ಳುತ್ತಾ ಬರೆಯುವ ಅನಂತ ಮೂರ್ತಿ, ಶಾಂತಿ ನಾಥ ದೇಸಾಯಿ, ಲಂಕೇಶ, ದೇವನೂರ ಮಹಾದೇವ ಮುಂತಾದವರಲ್ಲಿ **ಎರಡನೆಯ ಪಂಗಡವನ್ನು** ಗುರುತಿಸುತ್ತೇವೆ. ಇವರ ಕೃತಿಗಳು ಜನಸಾಮಾನ್ಯರನ್ನು ತಲಪುವುದು ಸ್ವಲ್ಪ ನಿಧಾನವಾಗಿಯೇ. ಅಂದರೆ, ಇವು ಸೃಷ್ಟಿಸುವ ಪರಿಸರವೂ ಕ್ಲಿಷ್ಟವಾದುದೇ, ಒಂದು ವೈಚಾರಿಕತೆಯ ನಿಲುವಿಗೆ ಬದ್ಧವಾಗಿಯೇ.

ಅದನ್ನು ಪ್ರತಿಪಾದಿಸುವ ಮಾಧ್ಯಮವಾಗಿ ಅವರು ಸಾಹಿತ್ಯವನ್ನು ಬಳಸಿಕೊಳ್ಳುತ್ತಾರೆ. ಸಾಮಾಜಿಕವಾಗಿ ತುಳಿತಕ್ಕೆ ಒಳಗಾದವರ ಆಕ್ರೋಶದ ವಾಹಕವಾಗಿಯೂ ಸಾಹಿತ್ಯಕೃತಿಗಳು ಇಲ್ಲಿ ಕಾರ್ಯ ನಿರ್ವಹಿಸುತ್ತವೆ. ಈ ತಾಕಲಾಟದಿಂದ ಇಂತಹ ಕೃತಿಗಳು ಅರ್ಥಪೂರ್ಣವಾದು ದೇನನ್ನೋ ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತವೆ. ತಾತ್ವಿಕ ಭಿನ್ನಾಭಿಪ್ರಾಯಗಳ ತಳಹದಿಯಲ್ಲಿಯೇ ಬಳೆಯುವ ಇಂಥ ಕೃತಿಗಳು ಮಾಲ್ಯದ ದೃಷ್ಟಿಯಿಂದ ಗಮನಾರ್ಹ ವಾಗುತ್ತವೆಯಾದರೂ ಓದುಗರನ್ನು ಸೀಮಿತವಾಗಿ ಮಾತ್ರವೇ ಆಕರ್ಷಿಸುತ್ತವೆ.

ಭೈರಪ್ಪ, ನಿರಂಜನರಂತಹ ಬೆರಲೆಣಿಕೆಯ ಕೆಲವು ಮಂದಿ ಈ ಎರಡು ಅತಿಗಳಿಗೂ ಹೋಗದೆ, ಸುವರ್ಣಮಾಧ್ಯಮವೊಂದನ್ನು ಹುಡುಕಿಕೊಂಡಿದ್ದಾರೆ. ಇವರು ಜನಪ್ರಿಯತೆಯನ್ನು ಕಾಯ್ದುಕೊಳ್ಳುತ್ತಾ ಮೌಲಿಕತೆಯನ್ನೂ ಸಾಧಿಸಿಕೊಳ್ಳುತ್ತಾರೆ. ಒಂದು ದೃಷ್ಟಿಯಿಂದ ಇವರ ಸಾಧನೆ ಉಲ್ಲೇಖಾರ್ಹವೇ ಆಗಿದೆ. ಆದರೂ ಇಂತಹ ಕೃತಿಗಳನ್ನು ಓದುವ ವರ್ಗ ಸೀಮಿತವೇ ಸರಿ. ಶಿವರಾಮ ಕಾರಂತರಂಥವರಿಗೂ ಜನಪ್ರಿಯತೆ ದೊರಕದಿರುವುದಕ್ಕೆ ಕಾರಣ - ಅವರು ವೈಚಾರಿಕತೆಯ ಒಲವುಳ್ಳ ಕೃತಿಗಳನ್ನು ಬರೆದುದೇ ಆಗಿದೆ. ಸಾಮಾನ್ಯರು ಇಂಥ ಕೃತಿಗಳಿಗೆ ಪ್ರತಿಕ್ರಿಯಿಸುವುದು 'ಬರೇ ಬೋರ್' ಎಂದೇ. ಸಾಹಿತ್ಯ ಶರೀರದಿಂದ ತತ್ತ್ವವೊಂದನ್ನು ಸ್ವೀಕರಿಸುವ ತಾಳ್ಮೆ, ಆಳವಾದ ಅಧ್ಯಯನದ ಮತ್ತು ಗ್ರಹಣಸಾಮರ್ಥ್ಯಗಳ ಕೊರತೆ ಇಲ್ಲಿ ನಿರ್ಣಾಯಕವಾಗುತ್ತದೆ.

ಸಣ್ಣ ಕತೆ - ಕಾದಂಬರಿಗಳ ಬಗೆಗೆ ಹೇಳುವ ಮಾತುಗಳನ್ನೇ ನಮ್ಮ ಇಂದಿನ ಕಾವ್ಯಗಳ ಬಗೆಗೂ ಹೇಳಬಹುದು. ಪಂಡಿತ ಪರಂಪರೆಗೆ ಸೇರಿದ, ಸಾವಯವ ಸಮಗ್ರೀಕರಣವುಳ್ಳ ಕಾವ್ಯಗಳು ಇಂದು ಕಾಣಿಸುತ್ತಿಲ್ಲವೆಂದರೂ ತಪ್ಪಲ್ಲ. ಬರಿಯ ಶಬ್ದಗಳ ಸರ್ಕಸ್ಸು, ಭಾವನೆಗಳ ಅನಿಯಂತ್ರಣ, ಲಯದ ಕೊರತೆ, ವ್ಯಾಕರಣದೋಷಗಳು ಇರುವ ಇಂದಿನ ಕಾವ್ಯಗಳು ಶಿಸ್ತುಬದ್ಧವಾದ ಬರೆವಣಿಗೆಯನ್ನು ಮೈಗೂಡಿಸಿಕೊಂಡ ಶುದ್ಧಸಾಹಿತ್ಯಾಸಕ್ತರಿಗೆ ಒಗಟಾಗಿಯೇ ಉಳಿಯುತ್ತವೆ. ಆದರೂ ಈ ಶತಮಾನದ ಸಾಹಿತ್ಯ ವೈಶಿಷ್ಟ್ಯ ವೆಂದರೆ - ಕೆಲವಾದರೂ ಬಹುಮುಖ್ಯ ಮಹಾಕಾವ್ಯಗಳು ಬಂದಿರುವುದು. ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ', ಭೂಸನೂರ ಮಠರ 'ಭವ್ಯಮಾನವ' ವಿನಾಯಕರ 'ಭಾರತ ಸಿಂಧು ರಶ್ಮಿ', ಪು.ತಿ.ನ ಅವರ 'ಶ್ರೀ ಹರಿಚರಿತೆ' ಕಾಶಿ ವಿಶ್ವನಾಥ ಶೆಟ್ಟಿಯವರ 'ಬುದ್ಧಚರಿತ ಮಹಾಮಧು' ಇವನ್ನಿಲ್ಲಿ ನೆನೆಸಬಹುದು. ಇವುಗಳಲ್ಲಿ ಮೌಲಿಕತೆ, ಕಾವ್ಯಾತ್ಮಕತೆ, ಜೀವನ ದರ್ಶನದ ಪ್ರತಿಪಾದನೆಗಳು ಅನನ್ಯವಾಗಿ ನಡೆದಿವೆ.

ಹೀಗೆ, ಆಧುನಿಕ ಸೃಜನೇತರ ಸಾಹಿತ್ಯ ಸಂದರ್ಭದಲ್ಲಿ ಒಂದೆಡೆ ಜನಪ್ರಿಯತೆ (Popularity) ಸೋಗಿನಲ್ಲಿ ತೀರಾ ಅವೈಚಾರಿಕ ಸಾಹಿತ್ಯಕೃತಿಗಳ ಸಮೃದ್ಧಿ ಕಾಣಿಸಿದರೂ ಇನ್ನೊಂದೆಡೆ ಕೆಲವಾದರೂ ಮೌಲಿಕ ಕೃತಿಗಳು ಹೊಸ ಸೊಗಸುಗಳಿಂದ ಮೂಡಿಬಂದಿರುವುದು ಅಭಿಮಾನಕರವಾಗಿದೆ. ಜನತೆಗೆ ಒಳ್ಳೆಯ ಭಾಷಾ ಸಂಸ್ಕಾರವನ್ನೂ ಸಂಸ್ಕೃತಿಯನ್ನೂ ಪರಂಪರೆಯ ಬಂಧನೈಪುಣ್ಯವನ್ನೂ ಒದಗಿಸುವ ಕಾವ್ಯಗಳು, ಕವನಗಳು, ಜೀವನ ಚರಿತ್ರೆ, ಕಥೆ - ಕಾದಂಬರಿಗಳು ರಸಸ್ಯಂದಿಯಾಗಿ ಇನ್ನು ಮುಂದೆ ಬರಬಹುದೆಂದು ನಾವು ಆಶಿಸಬಹುದಾಗಿದೆ. □

೧೬

ಪಾರ್ದನವೋ ಪಾಡ್ದನವೋ

(ಒಂದು ಸಮೀಕ್ಷೆ)

ತುಳುನಾಡಿನ ಜನಪ್ರಿಯ ಭೂತಚರಿತ್ರೆಗಳನ್ನೊಳಗೊಂಡ ಪುರಾತನೀಯ (ಪಳಮೆ) ಗಳೆನಿಸುವ ಸಾಹಿತ್ಯ ಪ್ರಕಾರವನ್ನು 'ಪಾರ್ದನ' ಎನ್ನುವರು. ಹಿಂದೆ ಯಾರೋ ಪಂಡಿತಂ ಮನ್ಯರು 'ಪಾಡ್ದನ' (ಪಾಡ್ದನೊ) ಎಂದು ಉಚ್ಚಾರಣೆ ಮಾಡಲು ತೊಡಗಿರಬೇಕು. ಅದರಿಂದ ಗತಾನುಗತಿಕವಾಗಿ ಇದು 'ಪಾಡ್ದನ' ಎಂದು ಉಚ್ಚಾರಣೆಗೊಳ್ಳುತ್ತ ಬಂದಿದೆ. ಇದು ಹಾಡಲ್ಲ. ಸ್ವರತಾನ ವಿಶೇಷದಿಂದ ಎಳೆದೆಳೆದು ಹಾಡಿದಂತೆ ಹೇಳುವ ತುಳು ಗದ್ಯಪ್ರಕಾರ : ಜಾನಪದ. 'ಜಾನಪದ' ಎಂಬುದು ಸಂಸ್ಕೃತ ಶಬ್ದ. ಹಳ್ಳಿಯ ಬದುಕು, ನಡೆನುಡಿಗಳನ್ನು ರಸವತ್ತಾಗಿ, ಲಲಿತವಾಗಿ, ಪ್ರತಿಬಿಂಬಿಸುವ ಕರ್ತೃನಾಮಧೇಯವಿಲ್ಲದ ದೇಶೀಸಾಹಿತ್ಯವನ್ನು 'ಜಾನಪದ ಸಾಹಿತ್ಯ' ಎಂದು ಕರೆಯತೊಡಗಿರುವುದು ಈಚೆಗೆ.

ವಿದ್ವಾಂಸರ ಅಭಿಪ್ರಾಯ :

ಇತ್ತೀಚೆಗೆ ಉಡುಪಿಯಲ್ಲಿ (ಜನವರಿ ೨೨-೨೬, ೧೯೮೬) ನಡೆದ ಜಾನಪದ ರಂಗ ಕಲೆಗಳ ವಿಚಾರಸಂಕಿರಣದ ಸಭೆಗಳಲ್ಲಿ ವಿದ್ವಾಂಸರಿಂದ ಮಂಡಿಸಲಾದ ಉಪನ್ಯಾಸ - ಪ್ರಬಂಧ ಮಂಡನೆಗಳಲ್ಲಿ 'ಪಾಡ್ದನ' ಎಂಬ ರೂಪವೇ ಬಳಕೆಗೊಂಡಿದ್ದಿತು. ಓರ್ವ ವಿದ್ವಾಂಸರು 'ಪಾಡ್ದನ' ಎಂಬುದನ್ನು 'ಪಾಡ್-ದಿ-ನ' (ಅಂದರೆ, ಹಾಡಿದುದು) ಎಂಬ ನಿಷ್ಪತ್ತಿ ಯಿಂದ ಆಗಿದೆಯೆಂದು ತಿಳಿಸಿದರು. ಆ ಸಭೆಯಲ್ಲಿದ್ದ ನಾನು ಅದಕ್ಕೆ ಅಕ್ಷೇಪವೆತ್ತಿ ಅದರ ವ್ಯುತ್ಪತ್ತಿ ಬೇರೆ ವಿಧವೆಂದು ಸೂಚಿಸಿದ್ದೆ. ಶ್ರೀ ಕನರಾಡಿ ವಾದಿರಾಜ ಭಟ್ಟರು 'ಪಾಡ್ದನ' ಗಳು (೧೯೭೪) ಎಂಬ ತಮ್ಮ ಪುಸ್ತಕದಲ್ಲಿ ಪಾಡ್ದನ ಎಂದು ಉಚ್ಚಾರಣೆಯನ್ನು ಮಾನ್ಯ ಮಾಡುತ್ತ ಅದು ಪಾಡ್-ದ್-ನ ಎಂಬ ರೀತಿಯಲ್ಲಿ ನಿಷ್ಪನ್ನವಾದುದೆಂದು ನಿರ್ಧರಿಸಿದ್ದಾರೆ. 'ಪಾಡ್ದನೆ' ಎಂಬ ರೂಪವನ್ನು ಅಲ್ಲಗಳೆದಿದ್ದಾರೆ.

ಸುಮಾರು ೧೯೬೨ರ ವೇಳೆಗೆ ನಾನು 'ದಕ್ಷಿಣ ಕನ್ನಡ ಜಿಲ್ಲೆಯ ಜನಪ್ಪದ ಗೀತಗಳು' ಎಂಬೊಂದು ಸಂಶೋಧನ ಗ್ರಂಥವನ್ನು ರಚಿಸುತ್ತಿದ್ದೆ. ಅದರಲ್ಲಿ ಒಂದು ಅಧ್ಯಾಯ 'ತುಳು ಜಾನಪದ ಗೀತ' ಎಂಬುದಾಗಿತ್ತು. ಅದಕ್ಕಾಗಿ ತುಳುವಿನ ಪಳಮೆಗಳನ್ನು ಸಂಗ್ರಹಿಸುತ್ತಿದ್ದಾಗ ಪಾಡ್ದನ ಎಂಬುದರ ನಿಷ್ಪತ್ತಿ ಬೇಕಾಯಿತು. ನನ್ನ ಆಧಾರಗಳಿಂದ ಈ ಶಬ್ದವು ಪಾರ್ದನ

ಎಂದಿರಬೇಕೆಂದು ನಾನು ಮಾಡಿರುವ ನಿರ್ಣಯವು ಮಾರ್ಪಾಡಾಗಬೇಕಾದ ಸ್ಥಿತಿ ಇಂದಿಗೂ ಬಂದಿಲ್ಲ.

ಈ ಶಬ್ದ 'ಪಾಡ್-ದ್-ನ' ಅಥವಾ 'ಪಾಡ್-ದಿ-ನ' ಮೂಲದಿಂದಿರಬೇಕಾದರೆ ತುಳುವಿನಲ್ಲಿ ಆ ಧಾತುರೂಪವಿದೆಯೇ? ನೋಡಬೇಕು. ತುಳುವಿನಲ್ಲಿ 'ಪಾಡ್' ಎಂಬ ಧಾತುವಿಗೆ 'ಹಾಕು' ಎಂದು ಅರ್ಥ. 'ಬೀಳಿಸು' ಎಂಬರ್ಥದಲ್ಲಿಯೂ ಬಳಕೆಯಿದೆ. 'ಹಾಡು' ಎಂಬ ಕನ್ನಡದ ಕ್ರಿಯಾರ್ಥ ಅದಕ್ಕಿಲ್ಲ. ಆದುದರಿಂದ ಆ ನಿಷ್ಪತ್ತಿ ಸಂಬದ್ಧಗೊಳ್ಳದು.

ತುಳುನಾಡಿನ ಭೂತಗಳ ಹಾಗೂ ಪಾರ್ದನಗಳನ್ನು ಕುರಿತು ತುಂಬ ಅಧ್ಯಯನ ಮಾಡಿರುವ ಮಿತ್ರರಾದ ಶ್ರೀ ಅಮೃತ ಸೋಮೇಶ್ವರ ಅವರು ಬರೆದ ಹಾಗು ಸರಕಾರದಿಂದ ಬಹುಮಾನಿತವಾದ ಒಂದು ಪುಸ್ತಕ 'ತುಳು ಪಾಡ್ದನದ ಕಥೆಗಳು'. ಪಾಡ್ದನವೋ ಪಾರ್ದನವೋ ಎಂಬ ಶಬ್ದ ರೂಪದ ಖಚಿತತೆಗಾಗಿ ಅವರಿಗೆ ನಾನು ಪತ್ರ ಬರೆದಿದ್ದೆ. ಅದಕ್ಕೆ ಅವರು ಉತ್ತರವಾಗಿ ಪಾರ್ದನ ಎಂಬುದೇ ತುಳುವಿನಲ್ಲಿ ಅದರ ಖಚಿತವಾದ ಉಚ್ಚಾರಣೆಯೆಂದೂ ವಿದ್ವಾಂಸರನೇಕರು ಅದನ್ನು 'ಪಾಡ್ದನ' ಎನ್ನುತ್ತಿರುವುದರಿಂದ ತಾನು ಕೂಡ ಹಾಗೆಯೇ ಪ್ರಯೋಗಿಸಿರುವುದೆಂದೂ ತಿಳಿಸಿರುತ್ತಾರೆ. ಇದೇ ವಿಷಯದಲ್ಲಿ ನಿರ್ಣಯ ಮಾಡುವುದಕ್ಕಾಗಿ ನಾನು ಮುಂಜೇಶ್ವರ ಗೋವಿಂದ ಪೈಗಳ ಅಭಿಪ್ರಾಯಕ್ಕಾಗಿ ಪತ್ರ ಬರೆದೆ. ಅದಕ್ಕೆ ಉತ್ತರವಾಗಿ ಅವರು ನನಗೆ ೨-೩-೧೯೬೨ರಲ್ಲಿ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ -

"ಭೂತಗಳ ಆಯನಗಳಲ್ಲಿ, ಕೋಲಗಳಲ್ಲಿ, ಪರವರು ಮೊದಲಾದ ಜಾತಿಯ ಹೆಂಗುಸರು ಕೂತುಕೊಂಡು ಪದ್ಯಗಳ ರೀತಿಯಲ್ಲಿ ಎಳೆದೆಳೆದು ಹಾಡುತ್ತಿರುವ ಗದ್ಯ ಪಾಠಗಳಿವೆ. ಅವುಗಳ ಹೆಸರು ಪಾಡ್ದನೆ ಗಳೆಂದು. ಅವುಗಳಲ್ಲಿ ಈ ಭೂತಗಳು ಎಲ್ಲೆಲ್ಲಿ ಹುಟ್ಟಿದವು. ಎಲ್ಲಿ ಬೆಳೆದವು, ಎಲ್ಲೆಲ್ಲಿಂದ ಬಂದವು, ಎಲ್ಲೆಲ್ಲಿ ಸುತ್ತಾಡಿದವು, ಎಲ್ಲೆಲ್ಲಿಗೆ ಬಂದು ನೆಲಸಿದವು—ಎಂದು ಮುಂತಾಗಿ ಆಯಾಭೂತಗಳ ಚರಿತ್ರಗಳೂ ಇವೆ. ಅಂದರೆ ಅವು ಆಯಾ ಭೂತಗಳ ಚರಿತ್ರೆಯನ್ನು ಒಳಗೊಂಡಿರುವ ಸ್ತುತಿಪಾಠಗಳು, ಪ್ರಾರ್ಥನೆಗಳು. ಹೀಗಾಗಿ ಪ್ರಾರ್ಥನೆ ಎಂಬ ಸಂಸ್ಕೃತ ಶಬ್ದವೇ ತುಳುಭಾಷೆಯಲ್ಲಿ 'ಪಾಡ್ದನೆ' ಎಂದಾಯಿತು - ಎಂದು ನನ್ನ ದೃಢವಾದ ಅಭಿಪ್ರಾಯ". ಇದೇ ಅಭಿಪ್ರಾಯವನ್ನು ಅವರು 'ತೆಂಕನಾಡು' (೧೯೪೭ ಕಾಸರಗೋಡು ಕನ್ನಡ ಸಾಹಿತ್ಯ ಸಮ್ಮೇಳನ ಸಂಪುಟ) ಎಂಬ ಗ್ರಂಥದಲ್ಲಿ ಬರೆದ ತುಳು ನಾಡು - ಪೂರ್ವಸ್ಮೃತಿ ಎಂಬ ಲೇಖನದಲ್ಲಿಯೂ ಹಿಂದೆಯೇ ತಿಳಿಯಪಡಿಸಿದ್ದಾರೆ.

ಗೋವಿಂದ ಪೈಗಳು ಹೇಳಿರುವಂತೆ ಪಾಡ್ದನೆ ಆಗಿದ್ದರೆ, ಪ್ರಚಲಿತವಾಗಿ ಪಾಡ್ದನ ಹೇಗಾಯಿತು? ಅದರ ಕೊನೆಯ ಎತ್ವ ಹೇಗೆ ಹಾರಿ ಹೋಯಿತು? ಎಂಬುದಕ್ಕೆ ವಿವರಣೆ ಇಲ್ಲ. ಇವಲ್ಲದೆ, ತುಳುವಿನ ಜಾನಪದ ಸಂಸ್ಕೃತಿ ದರ್ಶಕವಾಗಿರುವ ಈ ಸಾಹಿತ್ಯಪ್ರಭೇದಕ್ಕೆ ತುಳುವಿನ ಸ್ವಂತಿಕೆಯ (ದೇಶೀಯ) ಹೆಸರು ಏಕೆ ಸೃಷ್ಟಿಯಾಗಿಲ್ಲ? ಎಂಬೀ ಪ್ರಶ್ನೆಗಳು ಎದ್ದು, ಉತ್ತರವಿಲ್ಲದೆ ತೊಳಲಾಡುವಂತಾಗುತ್ತದೆ.

ತುಳುನಾಡಿನ ಇನ್ನೊಬ್ಬರು ವಿದ್ವಾಂಸರಾದ ರಾವ್ ಸಾಹೇಬ್ ರಂಗನಾಥ ಪೂಂಜ ಎಂಬವರು ಅದೇ ತೆಂಕನಾಡು ಗ್ರಂಥದಲ್ಲಿ ಬರೆದಿರುವ 'ಭೂತಾರಾಧನೆ' ಎಂಬ ಲೇಖನದಲ್ಲಿ ಹೀಗೆಂದಿದ್ದಾರೆ. - ಭೂತದ ಚರಿತ್ರೆಯನ್ನೂ ಅತಿಮಾನುಷ ಶಕ್ತಿಯನ್ನೂ ಹೊಗಳುವ ಈ ಹಾಡುಗಳಿಗೆ 'ಪಾರ್ದನೆ' ಸ್ಮರಣೆ ಎನ್ನುತ್ತಾರೆ. ಈ ಅಭಿಮತದಂತೆ ಇದರ ಉಚ್ಚಾರಣೆ 'ಪಾರ್ದನೆ' ಎಂದು. ಇದು ಸಂಸ್ಕೃತ ಜನ್ಯವಲ್ಲ. ತುಳುವಿನ ದೇಸಿ. ಆದರೆ ತುಳುವಿನಲ್ಲಿ ಸ್ಮರಣೆ ಎಂಬರ್ಥದಲ್ಲಿ ಪಾರ್ದನೆ ಎಂಬ ಶಬ್ದಪ್ರಯೋಗವಿಲ್ಲ.

ಪ್ರಾರ್ಥನೆಯ ತದ್ಭವವೇ ?

ಪಾರ್ದನವನ್ನು ಮಲೆಯಾಳದಲ್ಲಿ 'ತೋತಿಯಂ' ಎನ್ನುತ್ತಾರೆಂದೂ ಅದು ಸಂಸ್ಕೃತದ ಸ್ತೋತ್ರದ ತದ್ಭವವೆಂದೂ ನನಗೋರ್ವ ಮಲೆಯಾಳಿ ವಿದ್ವಾಂಸರು ತಿಳಿಸಿದರು. ಇದರಿಂದ ಸ್ವಲ್ಪ ಮಟ್ಟಿಗೆ ಪಾಡ್ದನೆ ಯು 'ಪ್ರಾರ್ಥನೆ'ಯ ತದ್ಭವವೆನ್ನಲು ಸಮರ್ಥನೆ ದೊರಕಬಹುದಾದರೂ ಈ ಸಮರ್ಥನೆಗೆ ಬಲ ಸಾಲದು. ತೋತಿಯಂ ಎಂಬುದಕ್ಕೆ 'ಹೇಳಿದ್ದು'. ಹೇಳಲ್ಪಟ್ಟಿದ್ದು'. ಎಂತಲೂ ಅರ್ಥವಿದೆಯೆಂದು ಅವರೇ ನನಗೆ ಮತ್ತೆ ತಿಳಿಸಿದರು. ಆದರೆ 'ಪಾಡ್ದನೆ' ಎಂಬುದರಲ್ಲಿ 'ಹೇಳಿದ್ದು' ಎಂಬರ್ಥದ ಸುಳುಹಿಲ್ಲ. ಈ ಶಬ್ದರೂಪ ವಿಚಾರದಲ್ಲಿ ಸುಮಾರು ೧೯೬೨ರಲ್ಲಿ ನಾನು ಕೆಲಮಟ್ಟಿಗೆ ಸಂಶೋಧನ ಪ್ರಯತ್ನವನ್ನು ಮಾಡಿರುತ್ತೇನೆ. ಅದರ ಫಲಿತಾಂಶಗಳಿವು :

ಭೂತಾರಾಧನೆಗೆ ಸಂಬಂಧಿಸಿದ ಈ ಪಾರ್ದನಗಳನ್ನು ಮೊತ್ತಮೊದಲು ಸಂಗ್ರಹಿಸಿದವರು ಎ.ಸಿ. ಬರ್ನೆಲರು. ಇವರು ಕಾಲವಾದುದು ೧೮೮೨ರಲ್ಲಿ. ಆದುದರಿಂದ ಇವರ ಸಂಗ್ರಹ ಕಾರ್ಯ ೧೮೮೨ಕ್ಕಿಂತ ಕೆಲವು ವರ್ಷಗಳ ಹಿಂದೆಯೇ ಆಗಿರಬೇಕು. ಅವರು ಸಂಗ್ರಹಿಸಿ ೩೦ ಪಾರ್ದನಗಳನ್ನು ಸ್ವಹಸ್ತದಲ್ಲಿಯೇ ಬರೆದಿಟ್ಟುದಾಗಿ ತಿಳಿದುಬರುತ್ತದೆ. ಬರ್ನೆಲರ ಈ ಪಾರ್ದನ ಸಂಗ್ರಹದಲ್ಲಿ ತಿದ್ದುಪಡಿಗಳನ್ನು ಮಾಡಿದವರು ಬಾಸೆಲ್ ಮಿಶನ್ನಿನ ರೆವರೆಂಡ್ ಎ. ಮನ್ನರ್ ಎಂಬವರು. ಅನಂತರ ಅದನ್ನು ಮೇಜರ್ ಆರ್. ಸಿ. ಟೆಂಪಲ್ ಎಂಬವರು ತಮ್ಮ ಪ್ರಸ್ತಾವನೆಯೊಂದಿಗೆ 'ತುಳುವರ ಭೂತಾರಾಧನೆ ' (The Devil worship of the Tuluvas) ಎಂಬ ವಿವರ ಲೇಖನವನ್ನು ಇಂಡಿಯನ್ ಆಂಟಿಕ್ವೆರಿ, ಸಂಪುಟ ೨೩ರಲ್ಲಿ (೧೮೯೪) ಕೊಟ್ಟಿರುತ್ತಾರೆ. ಎ.ಸಿ. ಬರ್ನೆಲರು ಸ್ವತಃ ಬರೆದಿರುವ ಶಬ್ದರೂಪ 'ಪಾರ್ದನ' ಎಂದಿದೆಯಲ್ಲದೆ ಬೇರೆ ರೂಪದಲ್ಲಿಲ್ಲ. ಆ. ೩೦ ಪಾರ್ದನಗಳ ಹೆಸರು ಪಟ್ಟಿಯಲ್ಲಿ ಜುಮಾದಿ ಪಾರ್ದನೊ, ದೇಯಿಬೈದಿ ಪಾರ್ದನೊ, ಕೋಟಿ ಚನ್ನಯ ಪಾರ್ದನೊ, ಮಗ್ರಂದಾಯ ಪಾರ್ದನೊ - ಹೀಗೆ ನಾಲ್ಕು ಕಡೆ ಪಾರ್ದನೊ ಎಂಬ ಉಚ್ಚಾರಣೆಯೇ ಇದೆ. ಇದರಿಂದ, ಸ್ವತಃ ಕ್ಷೇತ್ರಕಾರ್ಯ ಮಾಡಿ ಇದೊಂದು ಸಾಹಿತ್ಯವನ್ನು ಸಂಗ್ರಹ ಮಾಡಿರುವ ಬರ್ನೆಲರು ಅದರ ಸ್ಪಷ್ಟೋಚ್ಚಾರಣೆಯಾದ ಪಾರ್ದನೊ ಎಂಬ ರೂಪವನ್ನು ಬಳಸಿರುವುದು ಕಂಡು ಬರುತ್ತದೆ. ಬರ್ನೆಲರು ಬರೆದಿಟ್ಟುಕೊಂಡವನ್ನು ತಿದ್ದುಪಡಿ ಮಾಡಿರುವ ಎ. ಮನ್ನಾರ್ ಅವರು (ಆಂಟಿಕ್ವೆರಿ ಸಂ. ೨೩, ಪುಟ ೧೭) ಜುಮಾರಿಪಾರ್ದನೊ ಎಂದು ಮೂಲದಲ್ಲಿದ್ದುದನ್ನು ಜುಮಾದಿ ಪಾಡ್ದನ ಎಂದು ಅನುಚಿತವಾಗಿ ಸಿದ್ದಿ 'ಪಾಡ್ದನ' ಎಂಬ ರೂಪವನ್ನು ಬಳಸಲು ತಳಹದಿ

ಹಾಕಿದುದು ಕಂಡುಬರುತ್ತದೆ. ಅಲ್ಲಿಂದಲೀಗ ಗತಾನುಗತಿಕವಾಗಿ (ಗತಾನು ಗತಿಕೋಲೋಕಃ ನ ಲೋಕಃ ಪಾರಮಾರ್ಥಿಕಃ ಎಂಬ ಸೂಕ್ತಿಯಂತೆ) 'ಪಾಡ್ದನ' ಎಂದು ಅಶುದ್ಧ ಪ್ರಯೋಗ ನುಸುಳಿ ಬಂದುದಾಗಿ ತಿಳಿಯಬಹುದು.

ಎ. ಮನ್ನಾರರಿಂದ ೧೮೮೬ರಲ್ಲಿ ರಚಿತವಾದ ತುಳು- ಇಂಗ್ಲೀಷ್ ಡಿಕ್ಷನರಿ ಮತ್ತು ಅದನ್ನೇ ಅವಲಂಬಿಸಿ ಪ್ರೊ. ಎಂ. ಮರಿಯಪ್ಪ ಭಟ್ಟರ ಸಂಪಾದಕತ್ವದಲ್ಲಿ ಬಂದ ಡಿಕ್ಷನರಿಯಲ್ಲಿ 'ಪಾಡ್ದನೊ' ಎಂತಲೇ ಈ ಶಬ್ದದ ಬಳಕೆಯಾಗಿದೆ. ಪಂಜೆಯವರ ನೆನಪಿಗಾಗಿ (೧೯೫೨) ಎಂಬ ಗ್ರಂಥದಲ್ಲಿ (ಪುಟ ೨೨೩) ಪಾಡ್ದೊನೆ ಎಂದು ಪಂಜೆ ಮಂಗೇಶರಾಯರು ಶಬ್ದಪ್ರಯೋಗ ಮಾಡುತ್ತಿದ್ದುದಾಗಿ ತಿಳಿಸಲಾಗಿದೆ.

ಪರತ್ತನೊ

ಸುಮಾರು ೧೯೬೨ರ ವೇಳೆಗೆ, ನನ್ನ ಸಂಶೋಧನ ಗ್ರಂಥಕ್ಕಾಗಿ ನಾನು ಹಲವು ತುಳು ಪಾರ್ದನಗಳನ್ನು ಸಂಗ್ರಹಿಸಿರುತ್ತೇನೆ. ನಮ್ಮೂರಿನ (ಬಾಯಾರು ಗ್ರಾಮ ಕಾಸರಗೋಡು ತಾಲೂಕು). ಓರ್ವ ನಲಿಕೆಯವನಿಂದ ಹೇಳಿಸಿ ಪಾರ್ದನಗಳನ್ನು ಬರೆದುಕೊಳ್ಳುತ್ತಿದ್ದಾಗ ಈ ಶಬ್ದರೂಪವನ್ನು ಹಾಗೂ ಶಬ್ದಾರ್ಥವನ್ನು ಕುರಿತು ನಾನು ಅವನನ್ನೇ ಪ್ರಶ್ನಿಸಿದೆ. ಆಗ ಅವನು- "ಇಂದ್ ಪರತ್ ಪಣ್ಪುನ ಅಂಚಾತ್ ಪರತ್ತನೋ (ಪಾರ್ತನೊ). ಪಾರ್ದನೊ ಅಂದ್ ಲಾ ಪಣ್ಪೊ" ಅಂದರೆ, ಇದು ಹಳೆಯದನ್ನು (ಪುರಾತನವಾದದ್ದನ್ನು) ಹೇಳುವುದು. ಆದುದರಿಂದ ಇದು ಪಾರ್ತನೊ ಇದನ್ನು ನಾವು ಪಾರ್ದನೊ ಎಂದೂ ಹೇಳುತ್ತೇವೆ. - ಎಂದು ಆತ ನನಗೆ ಸ್ಪಷ್ಟ ಪಡಿಸಿದ. ಆಗಲೆ ನನಗೆ ಈ ಶಬ್ದದ ವ್ಯುತ್ಪತ್ತಿಯ ಸುಳುಹು ಸಿಕ್ಕಿತು. ತುಳುವಿನಲ್ಲಿ ಪರತ್ತ್ ಎಂದರೆ ಹಳೆಯದು ಎಂದರ್ಥ. ಕನ್ನಡದಲ್ಲಿ ಭಾವವಾಚಿಯಾಗಿರುವ ತನ ಪ್ರತ್ಯಯ ಸೇರಿ - ಬಡತನ, ಒಡೆತನ, ಹೊಸತನ, ಹಳತನ ಮುಂತಾದ ಸಾಧಿತ ಶಬ್ದಗಾಳಾಗುತ್ತವೆ. ತುಳುವಿನಲ್ಲಿಯೂ ತನ ಪ್ರತ್ಯಯವಿದೆ. ಅದು ಹ್ರಸ್ವದ ಮುಂದೆ ಬಂದಾಗ ತಕಾರಕ್ಕೆ ದ್ವಿತ್ವವಿದೆ. ಅಂತ್ಯದ ಒಕಾರ ಪ್ರಥಮಾ ವಿಭಕ್ತಿ ಸೂಚಕವೂ ಹೌದು. ಅಗ ಕನ್ನಡದ ಪಳಮೆ (ಆಂಟಿಕ್ವಿಟಿ) ಎಂಬ ಅರ್ಥವನ್ನೇ ಕೊಡತಕ್ಕ ತುಳುಶಬ್ದ ಪರತ್ತನೊ. ಇದು ತ್ವರಿತೋಚ್ಚಾರಣೆಗೊಂಡು ಪಾರ್ತನೊ ಎಂದಾಗಿದೆ. ತುಳುವಿನಲ್ಲಿ ಎಷ್ಟೋ ಶಬ್ದಗಳಿಗೆ ತಕಾರಕ್ಕೆ ದಕಾರವುಂಟು. ಉದಾ: ಕೊರ್‌ತ್- ಕೊರ್‌ದ್ (ಕೊಟ್ಟು) , ಕೆರ್‌ತ್ - ಕೆರ್‌ದ್(ಕೊಂದು), ಪಂಡ್‌ತ್-ಪಂಡ್‌ದ್ (ಹೇಳಿ) ಬೂರ್‌ತ್ - ಬೂರ್‌ದ್ (ಬಿದ್ದು) ಇತ್ಯಾದಿ. ಇದರಂತೆ ಪಾರ್ತನೊ ಎಂಬುದು ಪಾರ್ದನೊ ಎಂಬ ರೂಪದಿಂದಲೂ ತುಳು ಜನರಲ್ಲಿ ಉಚ್ಚಾರಣೆ ಪಡೆದಿದೆ. ಹಿಂದೆ ಕೊಟ್ಟಿರುವ ಆಧಾರಗಳಿಂದ ಬಾಸೆಲ್ ಮಿಶನ್ನಿನ ಮನ್ನಾರರು ಪಾರ್ದನ ಎಂಬುದರ ಇನ್ನೊಂದು ಪಾಠವಾಗಿ ಪಾಡ್ದನ ಎಂಬುದನ್ನು ಪ್ರಯೋಗಿಸಿದಂತೆ ತೋರುತ್ತದೆ. ಅವರಿಂದ ಈಚೆಗಿನ ತುಳುವೇತರರು ಪಾರ್ದನ ಎಂಬುದರ ಉಚ್ಚಾರಣೆಯನ್ನು ತುಳುಜನರಿಗೆ ಬಿಟ್ಟುಕೊಟ್ಟು ತಾವು—ಪಾಡ್ದೊನೆ, ಪಾಡ್ದನೆ. ಪಾಡ್ದನಿ ಇತ್ಯಾದಿಯಾಗಿ ಮನಬಂದಂತೆ

ರೂಪಭೇದವನ್ನು ಸೃಜಿಸಿಕೊಂಡು ಅದನ್ನೇ ಸಮರ್ಥಿಸಿಕೊಂಡು ಬಂದುದು ಕಾಣುತ್ತದೆ. ಈ ರೂಪಭೇದಗಳಲ್ಲಿ ಪಾಡ್ದನ ಎಂಬುದಕ್ಕೆ ಈಗೀಗ ಹೆಚ್ಚು ಒಲವೂ ಬಲವೂ ಬಂದಿದೆ.

'ಪಾರ್ದನ' ಎಂಬುದರಲ್ಲಿರುವ ರೇಫೆಗೆ ಡಕಾರಾದೇಶವಾಗಿ 'ಪಾಡ್ದನ' ಆಗಿದೆ ಎನ್ನುವವರೂ ಇದ್ದಾರೆ. ಈ ವಾದವೂ ನಿರ್ಬಲ, ಏಕೆಂದರೆ ತುಳುವಿನಲ್ಲಿ ರೇಫೆಗೆ ದಕಾರಾದೇಶವಿದೆಯಲ್ಲದೆ ಡಕಾರಾದೇಶ ನನಗೆ ಕಂಡುಬಂದಿಲ್ಲ. ಉದಾ: ಮರತ್ತೆ - ಮದತ್ತೆ (ಮರೆತೆನು), ಮರೆಪ್ಪು-ಮದೆಪ್ಪು (ಅಡ್ಡ ತಟ್ಟಿ) ಇತ್ಯಾದಿ. ಆದುದರಿಂದ, 'ಪಾರ್ದನ' (ಪಾರ್ದನೊ) ಎಂಬುದೇ ತುಳುವಿನಲ್ಲಿ ಅರ್ಥವತ್ತಾದ ಶುದ್ಧಪ್ರಯೋಗವೆನಿಸುತ್ತದೆ. ಈ ಶಬ್ದವು 'ಜಾನಪದ' ಎಂಬ ಸಂಸ್ಕೃತ ಶಬ್ದದಷ್ಟು ಅರ್ಥವ್ಯಾಪ್ತಿಯಿಂದ ಕೂಡಿರದಿದ್ದರೂ ಕನ್ನಡದ ದೇಶೀ ಶಬ್ದವಾಗಿರುವ 'ಪಳಮೆ' ಎಂಬುದಕ್ಕೆ ಸರಿಸಾಟಿಯಾಗಿ ನಿಲ್ಲುವ ಅಚ್ಚ ತುಳುವಿನ (ದೇಸಿಯೆನಿಸುವ) ಶಬ್ದವೆಂದು ಯಾವ ಬಾಧಕವೂ ಇಲ್ಲದೆ ತಿಳಿಯಬಹುದು.

□

ಉದಯವಾಣಿ ದಿನಪತ್ರಿಕೆಯಲ್ಲಿ (೨೩-೪-೧೯೮೬) ಪ್ರಕಟಿತ ಲೇಖನ.

೧೭
ಶ್ರೀಕೃಷ್ಣನ ಔದಾತ್ಯ

ದ್ವಾಪರಯುಗದ ಕೊನೆಯ ಭಾಗದ ಒಂದು ಕಾಲದಲ್ಲಿ ಶ್ರಾವಣಮಾಸ ಕೃಷ್ಣಪಕ್ಷ ಅಷ್ಟಮಿಯ ರಾತ್ರಿ, ಕಗ್ಗತ್ತಲೆ. ಆಗ ತಾನೇ ಚಂದ್ರೋದಯವಾಗಿ ಬೆಳಕು ಕಾಣಿಸತೊಡಗಿದೆ. ಲೋಕದಲ್ಲಿ ಕವಿದ ಅಧರ್ಮದ ಕತ್ತಲೆಯನ್ನು ತೊಲಗಿಸಲು ಆ ಚಂದ್ರನೊಡನೆ ಮೂಡಿದ ಆಶಾಕಿರಣವೋ ಎಂಬಂತೆ, ಮಥುರೆಯ ಕರಾಳ ಕಾರಾಗೃಹದಲ್ಲಿ ಮಹಾವಿಭೂತಿಪುರುಷನೋರ್ವನ ಜನನವಾಯಿತು. ಆತನೇ ವಸುದೇವ ದೇವಕಿಯರ ಅಷ್ಟಮಪುತ್ರನಾದ ಭಗವಾನ್ ಶ್ರೀ ಕೃಷ್ಣನು. ಅವನ ಕಾರ್ಯಸಾಧನೆಯಿಂದ ಸತ್ಪುರುಷರು ಬಂಧಮುಕ್ತರಾದರು. ಯೋಗಿಗಳಿಗೆ ವಿಶೇಷದ ಜ್ಞಾನೋದಯವಾಯಿತು. ದುರುಳರು ನಾಶವಾದರು. ಧರ್ಮಸಾಮ್ರಾಜ್ಯ ಸ್ಥಾಪಿತವಾಯಿತು. ಶ್ರೀ ಕೃಷ್ಣನ ವ್ಯಕ್ತಿತ್ವವೆಂಬುದು ಲೌಕಿಕವೂ ಹೌದು, ಅಲೌಕಿಕವೂ ಹೌದು.

ಭಾರತೀಯ ಐತಿಹಾಸಿಕ ಕಥಾನಾಯಕರಲ್ಲಿ ಪರಮ ಉದಾತ್ತತೆಗೆ ಹೆಸರಾದವರಲ್ಲಿ ಮೊದಲಿಗನು ಶ್ರೀ ರಾಮನು. ಕನ್ನಡ ಕವಿ ನಾಗಚಂದ್ರನು ಅವನನ್ನು ಉದಾತ್ತರಾಘವನೆಂದೇ ವರ್ಣಿಸಿದ್ದಾನೆ. ಶ್ರೀ ಮದ್ರಾಮಾಣಯದ ಪ್ರಕಾರ, ಅವನು ಮರ್ಯಾದಾಪುರುಷೋತ್ತಮನು. ಜೀವನದಲ್ಲಿ ಪ್ರಮಾದರಹಿತನಾಗಿ - ಅಂದರೆ, ಮಾನವಸಹಜತೆಯಿಂದ ಒಂದು ತಪ್ಪನ್ನೂ ಮಾಡದ ಮಹಾನುಭಾವನು. ಆದುದರಿಂದ ಮರ್ಯಾದಾಪುರುಷೋತ್ತಮನು. ಧರ್ಮರಕ್ಷಣೆಗಾಗಿ, ಅಧರ್ಮನಾಶಕ್ಕಾಗಿ ಅವತಾರವೆತ್ತಿದವನು. ಶ್ರೀ ಕೃಷ್ಣನೂ ಅಂತೆಯೇ ಭಗವದವತಾರಿ. ಶ್ರೀ ರಾಮನು ಅಂಶಾವತಾರಿಯಾದರೆ, ಶ್ರೀ ಕೃಷ್ಣನು ಪೂರ್ಣಾಂಶಗಳಿಂದ ಕೂಡಿದ ಅವತಾರಿ. ಆದುದರಿಂದ ಭಕ್ತರಿಂದ ಅವನು ದೇವನೆಂದೇ ಪರಿಗಣಿತನಾಗಿದ್ದಾನೆ. ಅವನ ಬದುಕಿನ ಸುತ್ತಲೂ ಅದ್ಭುತವೂ ಆಲೌಕಿಕವೂ ಆದ ಅಮಾನುಷ ಚರಿತ್ರಗಳೂ ಪೋಣಿಸಲ್ಪಟ್ಟಿವೆ. ಅವನನ್ನು ಹೆಚ್ಚಿನವರು ಅನುಕರಣೀಯತೆ ಅನುಸರಣೀಯತೆಗಳಿಗೆ ಅತೀತನನ್ನಾಗಿ, ಪೂಜಾಯೋಗ್ಯನನ್ನಾಗಿ ಮತ್ತು ಧ್ಯಾನಯೋಗ್ಯನನ್ನಾಗಿ ಕಾಣುತ್ತಾರೆ. ನಮಗಿಂದು ಶ್ರೀ ಕೃಷ್ಣನ ಲೌಕಿಕ ಉದಾತ್ತತೆಯ ಅರಿವು ಅತ್ಯವಶ್ಯ.

ಶ್ರೀ ಕೃಷ್ಣನನ್ನು ಪತ್ರ-ಪುಷ್ಪ-ಧೂಪ-ದೀಪ-ನೈವೇದ್ಯ ಗಳಿಂದ ಮಾಡತಕ್ಕ ಭಕ್ತಿಪೂಜೆಗಳಿಗೂ ಮಿಗಿಲಾಗಿ - ಸ್ವಕರ್ಮದಿಂದ, ಸ್ವಧರ್ಮಪಾಲನೆಯಿಂದ ಆತನನ್ನು ಅರ್ಚಿಸಬೇಕು. ಅರ್ಜುನನಂತಹ ಭಕ್ತಿ ಸಂಪನ್ನತೆಯನ್ನು ಮೂಡಿಸಿಕೊಳ್ಳಬೇಕು. ಶ್ರೀ ಕೃಷ್ಣನ ಭಕ್ತಾಗ್ರೇಸರನಾದ ಅರ್ಜುನನು

ಕೃಷ್ಣನ ಸ್ತುತಿಕೀರ್ತನೆಗಳಲ್ಲಿ ತನ್ಮಯನಾಗದೆ, ಅವನ ಆಜ್ಞೆಯಂತೆ, ಪ್ರೇರಣೆಯಂತೆ ಕರ್ತವ್ಯಶೀಲನಾಗಿ ಭಕ್ತನೆನಿಸಿದನು, ಈ ದೃಷ್ಟಿಯ ಅಧ್ಯಯನಕ್ಕೆ ಕೃಷ್ಣನ ಲೌಕಿಕ ಜೀವನದಲ್ಲಿ ಸಮೃದ್ಧವಾಗಿ ವಸ್ತುವಿನ್ಯಾಸಗಳಿವೆ.

ಶ್ರೀ ಕೃಷ್ಣನ ಲೌಕಿಕ ಉದ್ದಾತತೆಯನ್ನರಿಯಲು ನಮಗೆ ಮುಖ್ಯವಾಗಿ ಇರತಕ್ಕ ಸಾಹಿತ್ಯ ಗ್ರಂಥಗಳು - ಮಹಾಭಾರತ ಮತ್ತು ಭಾಗವತ ಮಹಾಪುರಾಣ. ಭಾಗವತವು ಅವನನ್ನು ಅಲೌಕಿಕ ಮಹಿಮನಾಗಿಸಿ, ಅದ್ಭುತಚಮತ್ಕೃತಿಯುಳ್ಳವನಾಗಿ, ಪರಮಾತ್ಮನಾಗಿ, ಲೀಲಾನಾಟಕಪಾತ್ರಧಾರಿಯಾಗಿ ವರ್ಣಿಸಿದೆ. ಅದರೊಂದಿಗೆ ಅವನನ್ನು ಜಾರನೆಂದೂ ಚೋರನೆಂದೂ ವರ್ಣಿಸಿರುವುದುಂಟು. ಈ ಜಾರತ್ವ ಚೋರತ್ವಗಳು ಅಲೌಕಿಕ ಅಥವಾ ಆಧ್ಯಾತ್ಮಿಕ ಅರ್ಥದಿಂದ ಕೂಡಿದ ಆರೋಪಗಳಲ್ಲದೆ, ವಾಸ್ತವಿಕವಾಗಿ ಕೃಷ್ಣನು ಅಂಥವನಲ್ಲ. ಇದಕ್ಕೆ ಉದಾಹರಣೆಗಳಿವೆ. ಬಾಲ್ಯದಲ್ಲಿ ಅಳುತ್ತಿದ್ದ ಅವನನ್ನು ಸಂತೈಸುವುದಕ್ಕಾಗಿ ಒಮ್ಮೆ ಗೋಪಿ ಅವನಿಗೊಂದು ಕಥೆ ಹೇಳಿದಳಂತೆ. ಕವಿ ರುದ್ರಭಟ್ಟನ (೧೧೮೦) ಜಗನ್ನಾಥವಿಜಯದ ಪದ್ಯ ಹೀಗಿದೆ.

ಕತೆಯಂ ಕೇಳೆಲೆ ಕಂದ ಹುಂ ರಘುಜನೆಂಬ ಹುಂ ಸಕಾಂತಂ ವನ
ಸ್ಥಿತನಾದಂ ಗುರು ಪೇಳೆ ಹುಂ ದಶಶಿರಂ ಕೊಂಡೊಯ್ದನಾ ರಾಮನಾ
ಸತಿಯಂ ತಾನೆನೆ ಪೂರ್ವಮಂ ನೆನೆಯುತಂ ಹುಂಕೊಳ್ಳದುತ್ಕೋಪ ಹೂಂ
ಕೃತಿಯಂ ಮಾಡುತುಮೊಂಡುಗರ್ಚಿ ಕಿಸುಗಣ್ಣಿಟ್ಟಚ್ಯುತಂ ರಂಜಿಕುಂ (೩-೬೧)

ಗೋಪಿಯು ಬಾಲಕೃಷ್ಣನಿಗೆ ಶ್ರೀ ರಾಮನ ಕಥೆಯನ್ನು ಹೇಳುತ್ತಿದ್ದಾಗ ಹುಂಗುಟ್ಟುತ್ತಿದ್ದ ಕೃಷ್ಣನು - ಹತ್ತುತಲೆಯ ರಾವಣನು ಸೀತೆಯನ್ನು ಕದ್ದುಯ್ದನೆಂದು ಹೇಳಿದಾಗ, ಯಥಾರೀತಿ ಹುಂ ಎಂದು ಹೇಳದೆ, ಅತಿಕೋಪದ ಹೂಂಕಾರವನ್ನು ಮಾಡಿದುದು ಮಾತ್ರವಲ್ಲ. ಕಣ್ಣುಗೆಂಪು ಮಾಡಿದುದಲ್ಲದೆ. ಅವುಡುಗಚ್ಚಿ ಸಿಟ್ಟನ್ನು ಪ್ರದರ್ಶಿಸಬೇಕಾದರೆ - ಅವನ ನೈತಿಕಪ್ರಜ್ಞೆ ಅದೆಷ್ಟರದು! ಎಂಬ ಅರಿವಾಗುವುದು.

ಶ್ರೀ ಕೃಷ್ಣನ ಗಾರ್ಹಸ್ಥ್ಯವು ಜನಸಾಮಾನ್ಯರ ವಿಚಾರಶಕ್ತಿಗೆ ನಿಲುಕುವಂತಹುದಲ್ಲ. ಅವನಿಗೆ ಎಂಟುಮಂದಿ ಪಟ್ಟಮಹಿಷಿಯರು ಮಾತ್ರವಲ್ಲದೆ, ಹದಿನಾರುಸಾವಿರದ ನೂರುಮಂದಿ ರಾಜ ಕನ್ಯೆಯರು ಜನಸಾಮಾನ್ಯರ ವಿಚಾರಶಕ್ತಿಗೆ ನಿಲುಕುವಂತಹುದಲ್ಲ. ಆ ರಾಜಕನ್ಯೆಯರೊಂದಿಗೆ ವಿವಾಹಿತ ಸಂಬಂಧವೂ ಇದ್ದುದಾಗಿ ಭಾಗವತದಲ್ಲಿ ಹೇಳಲಾಗಿದೆ. ಆ ಹದಿನಾರು ಸಾವಿರ ಕನ್ಯೆಯರು ಲಕ್ಷ್ಮೀದೇವಿಯ ಅಂಶದವರೆಂದು ತಿಳಿಸಲಾಗಿದೆಯಲ್ಲದೆ, ಅವರನ್ನು ಏಕಕಾಲದಲ್ಲಿ ಕೃಷ್ಣನು ಸ್ವತಃ ಹದಿನಾರು ಸಾವಿರ ಶ್ರೀ ಕೃಷ್ಣರೂಪಧಾರಿಯಾಗಿ ವರಿಸಿಕೊಂಡು ಅವರೆಲ್ಲರೊಡನೆ ಓರ್ವ ಸಾಮಾನ್ಯ ಮನುಷ್ಯನಂತೆ ಗೃಹಸ್ಥಧರ್ಮಾಚರಣೆಯಲ್ಲಿದ್ದನೆಂತಲೂ ಹೇಳಲಾಗಿದೆ. (ನೋಡಿ: ಸ್ಕಂಧ ೧೦, ಅಧ್ಯಾಯ : ೫೯). ಇದನ್ನು ಅವನ ಭಕ್ತ ಲೀಲೆ ಅಥವಾ ಅಧ್ಯಾತ್ಮಲೀಲೆ ಎನ್ನಬಹುದು.

ಶ್ರೀ ಕೃಷ್ಣನು ಚಿಕ್ಕಂದಿನಿಂದಲೇ ಸಮಾಜಜೀವಿಯಾಗಿದ್ದನು. ಶ್ರೇಷ್ಠವಾದ ವೃಷ್ಣಿವಂಶದಲ್ಲಿ ಜನ್ಮತಾಳಿದ್ದರೂ ತಾನು 'ಗೋಪಾಲ' ನೆಂದು ಹೇಳಿಕೊಂಡನು. ಕೀಳುಬಾಳಿನ ಗೋಪಾಲಕರ ಜೊತೆಯಲ್ಲಿ ಗೋಪಾಲವೃತ್ತಿಯಲ್ಲಿದ್ದು ಗೋಪಸಮಾಜವನ್ನು ಒಂದುಗೂಡಿಸಿದನು. ಗೋಸೇವೆಯನ್ನು ಸಮಾಜಸೇವೆಯ ಅಂಗವಾಗಿ ಪರಿಗಣಿಸಿದನು. ಯಾದವರಲ್ಲಿ ಆಗ ಎರಡು ಪಂಗಡಗಳಿದ್ದವು. ಒಂದು ಪಂಗಡಕ್ಕೆ ಆಹುಕನು ಮುಖಂಡನಾದರೆ ಇನ್ನೊಂದಕ್ಕೆ ಅಕ್ರೂರನು ನಾಯಕನು. ಶ್ರೀ ಕೃಷ್ಣನು ಆಹುಕನ ಮಗಳಾದ 'ಸುತನು' ಎಂಬಾಕೆಯನ್ನು ಅಕ್ರೂರನಿಗೆ ಮದುವೆಮಾಡಿಸಿ, ಈ ಪಂಗಡಗಳನ್ನು ಒಂದು ಗೂಡಿಸಿದನು. ಪಾಂಡವರನ್ನೂ ಕೌರವರನ್ನೂ ಒಂದುಗೂಡಿಸುವುದು ಅಸಾಧ್ಯವಾದಾಗ, ಸತ್ಪುರುಷರಾದ ಪಾಂಡವರ ಪಕ್ಷವನ್ನು ವಹಿಸಿ, ಕೌರವರನ್ನು ನಾಶಗೊಳಿಸಿದನು.

ಶ್ರೀ ಕೃಷ್ಣನ ಲೌಕಿಕವ್ಯವಹಾರನೈಪುಣ್ಯ ಅಸಾಮಾನ್ಯ. ಅದಕ್ಕೆ ಉದಾಹರಣೆಯಾಗಿ ಕಂಸವಧೆ - ಜರಾಸಂಧವಧೆಗಳ ವೃತ್ತಾಂತಗಳಿವೆ. ದುರುಳ ಕಂಸನಿಂದ ಲೋಕವು ನೊಂದಿದ್ದರೂ ಅವನನ್ನು ಎದುರಿಸುವ ಧೈರ್ಯ ಯಾರಿಗೂ ಇದ್ದಿಲ್ಲ. ಈ ಸಂದರ್ಭದಲ್ಲಿ ಕೃಷ್ಣ ಬಲರಾಮರು ಮಲ್ಲಯುದ್ಧಪ್ರವೀಣರಾಗಿ ದುಷ್ಟರನ್ನು ಸಂಹರಿಸುತ್ತಿರುವುದು ಕಂಸನಿಗೆ ಕುಕ್ಕುತ್ತಿತ್ತು. ಈ ಅಳಿಯಂದಿರು ಒಂದಲ್ಲೊಂದು ದಿನ ತನ್ನನ್ನೇ ನಾಶ ಪಡಿಸದಿರರೆಂದು ಅವನು ತಿಳಿದಿದ್ದನು. ಆದುದರಿಂದ ಅವರಿಬ್ಬರನ್ನೂ ಕೃತ್ರಿಮಪ್ರೇಮದಿಂದ ಬರಮಾಡಿಸಿ ಮುಷ್ಟಿಕ ಚಾಣೂರರೆಂಬ ಮಲ್ಲರಿಂದ ಕೊಲ್ಲಿಸಲು ಬಗೆದನು. ಆದರೆ ಇವರು ಆ ಮಲ್ಲರನ್ನು ಕೊಂದರಲ್ಲದೆ, ಆ ಕ್ಷಣದಲ್ಲೇ ಕಂಸನ ಬಳಿಗೆ ನೆಗೆದು, ಅವನ ಶಿರವನ್ನು ಛೇದಿಸಿದರು. ಸೈನ್ಯ ನಾಶವೇನೂ ಆಗಲಿಲ್ಲ. ಕಂಸನನ್ನು ಕೊಂದನಂತರ ಕೃಷ್ಣನೇ ಸಿಂಹಾಸನವನ್ನು ಏರಬಹುದಾಗಿದ್ದರೂ ಅವನು ಹಾಗೆ ಮಾಡದೆ ಉಗ್ರಸೇನನಿಗೇ ಪಟ್ಟವನ್ನಿತ್ತನು.

ಮಗಧಾಧಿಪನಾದ ಜರಾಸಂಧನು ಅತ್ಯಂತ ಕ್ರೂರನಾಗಿದ್ದನು. ಆತನು ತನ್ನೊಡನೆ ಕಾದಿದ ರಾಜರನ್ನು ಸೆರೆಹಿಡಿದು ನೂರರ ಸಂಖ್ಯೆಯಾದೊಡನೆ ಅವರೆಲ್ಲರನ್ನೂ ನಿರ್ದಯವಾಗಿ ಮಹಾದೇವನಿಗೆ ಬಲಿಕೊಡುತ್ತಿದ್ದನಂತೆ! ಅಂತಹ ಬಲಿಷ್ಠನಾದ ಮಾಗಧನನ್ನು ಕೃಷ್ಣನು ಸುಲಭವಾಗಿ ಭೀಮದಿಂದ ಕೊಲಿಸಿದನು. ಕೃಷ್ಣನು ರಾತ್ರಿಯಲ್ಲಿ ಭೀಮಾರ್ಜುನರ ಸಹಿತ ಜರಾಸಂಧನ ದುರ್ಗದೊಳಗೆ ಬಂದು ರಣಭಿಕ್ಷವನ್ನು ಯಾಚಿಸಿ ಭೀಮನಿಂದ ಅವನನ್ನು ಕೊಲ್ಲಿಸುವಲ್ಲಿ ಹೆಚ್ಚಿನ ಪ್ರಾಣಹಾನಿಯಾಗಿಲ್ಲ. ಶಿಶುಪಾಲನನ್ನು ಕೊಲ್ಲುವ ಸಂದರ್ಭದಲ್ಲಿಯೂ ಕೃಷ್ಣನು ಅವನೊಬ್ಬನನ್ನೇ ಕೊಂದನು. ಶ್ರೀ ಕೃಷ್ಣನ ಸಾಮಾಜಿಕ ಉದಾತ್ತತೆಗೆ ಹಲವು ಉದಾಹರಣೆಗಳಿವೆ - ಅವನು ಸಮಾಜಹಿತವನ್ನೇ ಧ್ಯೇಯವಾಗಿಟ್ಟುಕೊಂಡು, ಸಮಾಜ ಘಾತಕರನ್ನು - ಅಂದರೆ ಅವರ ದುಷ್ಕೃತ್ಯಗಳನ್ನು ದ್ವೇಷಿಸಿದನಲ್ಲದೆ, ವ್ಯಕ್ತಿದ್ವೇಷವನ್ನಿಟ್ಟುಕೊಳ್ಳಲಿಲ್ಲ. ಶಿಶುಪಾಲನನ್ನು ವಧಿಸಿದನಂತರ, ಅವನ ಔರ್ಧ್ವದೈಹಿಕಗಳನ್ನು ವಿಧಿವತ್ತಾಗಿ ಮಾಡಿಸಿ ಅವನ ಸ್ಥಾನದಲ್ಲಿ ಅವನ ಮಗುವಿಗೆ ರಾಜ್ಯಾಭಿಷೇಕ ಮಾಡಿಸಿದನು. ದಂಡೋಪಾಯವನ್ನು ಅನಿವಾರ್ಯಪರಿಸ್ಥಿತಿಯಲ್ಲಿ ಮಾತ್ರ ಪ್ರಯೋಗಿಸಿದನು. ಅದನ್ನು ಕೂಡ ಕನಿಷ್ಠ ಪ್ರಮಾಣದಲ್ಲಿ ಪ್ರಯೋಗಿಸಿ ಘನಿಷ್ಠ ಫಲವನ್ನು ಸಂಪಾದಿಸಿಕೊಂಡನು. ಧರ್ಮರಾಯನ ರಾಜ ಸೂಯ ಯಾಗದಲ್ಲಿ

ಅತಿಥಿಗಳ ಪಾದತೊಳೆಯುವ ಕೆಲಸವನ್ನು ಕೃಷ್ಣನು ಕೈಗೊಂಡನೆಂದು ಸಭಾಪರ್ವದಲ್ಲಿ ಹೇಳಿದೆ. ವ್ಯಾಸ, ಧೃತರಾಷ್ಟ್ರ, ಕುಂತಿ, ಯುಧಿಷ್ಠಿರ ಇವರನ್ನು ಕಂಡಾಗಲೆಲ್ಲಾ ಸ್ವತಃ 'ನಮಸ್ತೇ' ಎಂದು ವಂದಿಸುತ್ತಿದ್ದನೆಂದು ಮಹಾಭಾರತದಿಂದ ತಿಳಿದುಬರುತ್ತದೆ. ರಾಜಸೂಯದ ಸಂದರ್ಭದಲ್ಲಿ ಅಗ್ರಪೂಜೆಯ ಗೌರವವು ಅನಿರೀಕ್ಷಿತವಾಗಿ ಅಕಾಂಕ್ಷಿತವಾಗಿ ಕೃಷ್ಣನಿಗೆ ದೊರೆತುದು ನಿಜ. ಆದರೆ ಮುಂದೆ ಅಶ್ವಮೇಧ ಯಾಗಕಾಲದಲ್ಲಿ ಅಂತಹ ಗೌರವವನ್ನು ತನಗೆ ಕೊಡಬಾರದೆಂದು ಮೊದಲಾಗಿಯೇ ಸೂಚಿಸಿದ್ದನು. ಅರ್ಜುನನಿಗೆ ಸಾರಥಿಯಾದುದನ್ನು ಪರಿಭಾವಿಸಿದರೆ, ಶ್ರೀ ಕೃಷ್ಣನ ನಿರಹಂಕಾರವೃತ್ತಿಗೂ ಪ್ರಸಿದ್ಧಿ ವಿಮುಖತೆಗೂ ಸೇವಾಭಾವನೆಗೂ ಬೇರೆ ಉದಾಹರಣೆಗಳು ಬೇಕಾಗಿಲ್ಲ.

ಶ್ರೀ ಕೃಷ್ಣನು ಧರ್ಮನಿಷ್ಠ ರಾಜನೀತಿಪಟು. ಕಂಸ, ಜರಾಸಂಧ, ಕೌರವಾದಿಗಳ ಏಕಸತ್ತಾತ್ಮಕ ಅಧಾರ್ಮಿಕ ಸಾಮ್ರಾಜ್ಯವನ್ನು ಉರುಳಿಸಿ, ಯುಧಿಷ್ಠಿರನ ಆತ್ಮನಿರ್ಣಯರೂಪದ ಧರ್ಮಬದ್ಧ ಸಾಮ್ರಾಜ್ಯದ ಸ್ಥಾಪನಾಚಾರ್ಯನವನು. ಯೋಗೇಶ್ವರನು. ಅವನ ಪ್ರತಿಪಾದನೆಯ ಯೋಗವು ಸಮತಾಭಾವದಿಂದ ಕೂಡಿದ್ದು ರಾಜಧರ್ಮವೂ ಯೋಗಾಂತರ್ಗತ. ಧರ್ಮಸಾಮ್ರಾಜ್ಯಸ್ಥಾಪನೆಗಿಂತ ದೊಡ್ಡ ಯೋಗವಿಲ್ಲ. ಅದನ್ನು ಸಾಧಿಸಿದುದರಿಂದಲೇ ಕೃಷ್ಣನು ಯೋಗೇಶ್ವರನೆನಿಸಿದನು. ಈ ಯೋಗೇಶ್ವರನು ಕಂಡ ಸಮಾನತೆ, ಮನುಷ್ಯರಿಗೆ ಮಾತ್ರವೇ ಅನ್ವಯಿಸುವಂಥದ್ದಲ್ಲ. ಅದು ಭಗವದ್ಗೀತೆಯಲ್ಲಿ ಹೇಳಿರುವಂತೆ ಮಾನವರಲ್ಲಿ, ಹಸು-ಆನೆ ನಾಯಿ ಮುಂತಾದ ಪ್ರಾಣಿಗಳಲ್ಲಿಯೂ ಕಾಣುವ ಸಮಾನತೆಯಾಗಿದೆ. ಶ್ರೀ ಕೃಷ್ಣನ ಪ್ರಭಾವದಿಂದ ಕೂಡಿದ ಯಾದವರ ರಾಜ್ಯದಲ್ಲಿ ಮದಿರೆ (ಸುರಾಪಾನ) ಸಂಪೂರ್ಣನಿಷಿದ್ಧವಾಗಿತ್ತು. ಮದಿರಾಪಾನಕ್ಕೆ ಮರಣದಂಡನೆ ಇದ್ದಿತಂತೆ.

ಶ್ರೀ ಕೃಷ್ಣನು ಲೋಕಪ್ರೇಮಿ. ಹಾಗೆಯೇ ಮಾತೃ-ಪಿತೃ ಭಕ್ತನೂ ಆಗಿದ್ದನು. ದುರುಳ ಕಂಸನನ್ನು ಕೊಂದು ತಾಯ್ತಂದೆಯರನ್ನು ಸೆರೆಯಿಂದ ಬಿಡಿಸಿದನಂತರ, ಅವರೊಡನೆ ಕೃಷ್ಣನು ಹೇಳಿದ ಮತಿದು - (ಜಗನ್ನಾಥವಿಜಯ ಕಾವ್ಯದಿಂದ ಆಯ್ದುದು)

ಕೇಳಿಲೆ ತಾತ ಕೇಳ್ ಜನನಿ ಕಂಸನ ಕಾರಣದಿಂದಗಲ್ದು ಗೋ
ಪಾಲಯವಾಸರಾದೆಮಗೆ ನಿಮ್ಮ ಪದಾರ್ಚನೆಗೆಯ್ವದಿನ್ನೆಗಂ
ಕಾಲಮಿದಿಂತು ಪೋಯ್ತು ಪಿತೃ-ಮಾತೃ-ಗುರು-ದ್ವಿಜ-ದೇವಪೂಜೆಯಿಂ
ಕಾಲಮಿದೆಯ್ದೆ ಸಲ್ಲದನ ಬಾಳ್ಕೆ ನಿರರ್ಥಕಮಲ್ತೆ ಲೋಕದೊಳ್ (೬-೯೩)

ಶ್ರೀ ಕೃಷ್ಣನ ಮಾನವೋಚಿತ ಉದಾತ್ತ ಮನೋವೃತ್ತಿಗೆ ಈ ಉದಾಹರಣೆ ಸಾಲದೆ ?

ವೈಯಕ್ತಿಕವಾಗಿ ಶ್ರೀ ಕೃಷ್ಣನು ಅತಿ ನಿಷ್ಠಾವಂತನು. ಸಕಾಲದಲ್ಲಿ ಸಂಧ್ಯೋಪಾಸನೆ ಅವನ ನಿತ್ಯಕರ್ಮವಾಗಿದ್ದಿತು. ರುಕ್ಮಿಣಿಯನ್ನು ವರಿಸಿದ ಅನಂತರ ಪುತ್ರಪ್ರಾಪ್ತಿಗಾಗಿ ಬ್ರಹ್ಮಚರ್ಯಪೂರ್ವಕವಾಗಿ ಹಿಮಾಲಯದ ಪಾರ್ಶ್ವದಲ್ಲಿ ತಪಸ್ಸುಮಾಡಿದನೆಂದು ಸೌಪ್ತಿಕಪರ್ವದಲ್ಲಿ ಹೇಳಲಾಗಿದೆ. ಎಲ್ಲಾ ಉಪನಿಷತ್ತುಗಳ ಸಾರಭೂತವಾದ ಭಗವದ್ಗೀತೆಯನ್ನು ಅವನು ಉಪದೇಶಿಸಿರಬೇಕಾದರೆ, ಅವನ ಆಚಾರವಿಚಾರಗಳ ಔದಾತ್ಯ ಅದೆಷ್ಟೆಂದು ವಿವರಿಸಲು ಸಾಧ್ಯವಾಗದು. ಮಾನವಕುಲವನ್ನೇ ಅವನು ಸರ್ವದಾ ಮಾರ್ಗದರ್ಶನ ಮಾಡಿದವನು. ಅವನ ಆಧ್ಯಾತ್ಮಿಕ ಹಾಗೂ ಲೌಕಿಕ ಅಧ್ಯಯನದಿಂದ ನವಚೈತನ್ಯವನ್ನು ಪಡೆದು ಜ್ಞಾನಯುಕ್ತ ಕರ್ಮಯೋಗಿಗಳಾಗಿ ಧರ್ಮಯುಕ್ತ ಸಮಾಜಹಿತ ಕಾರ್ಯಗಳಲ್ಲಿ ಮುಂದಡಿಯಿಡಲು ಸಾಧ್ಯವಾದೀತು.

□

೧೮
ಕವಿರಾಜಮಾರ್ಗ ವಿವೇಕ
(ಭಾಷಣ ಪ್ರಬಂಧ)

ಪುರಸಭಾಭವನ, ಮಂಗಳೂರು, ೨೮-೮-೧೯೮೩

ಪ್ರಾಚೀನ ಕಾಲದಿಂದಲೆ ಕರ್ಣಾಟಕದ ವಿಶಾಲ ಸೀಮಾತಳದ ಅವಿಭಾಜ್ಯ ಅಂಗ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶ. ಹೀಗೆನ್ನುವಾಗ ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜ್ಯ ಅಂಗವಾಗಿದ್ದರೂ ರಾಜಕೀಯವಾಗಿ ಕಳಚಿರುವ ಕಾಸರಗೋಡು ತಾಲೂಕಿನ ಕನ್ನಡ ನೆಲವೂ ಸಾಂಸ್ಕೃತಿಕವಾಗಿ ಇದರೊಳಗೊಳ್ಳುತ್ತದೆ - ಎಂದು ತಿಳಿಯಬೇಕು. ಈ ಪ್ರದೇಶದ ಸಾಹಿತ್ಯಕಾರರಲ್ಲಿ ದಿವಂಗತ ಮುಳಿಯ ತಿಮ್ಮಪ್ಪಯ್ಯನವರು ಕನಿಷ್ಠಿಕಾಧಿಷ್ಠಿತರೆಂದು ನನ್ನೆಣಿಕೆ. ಸಾಹಿತ್ಯ ವಿವೇಕದಿಂದ ದೂರ ಸರಿದುಕೊಂಡು ಮಾರ್ಗೋಲ್ಲಂಘನವನ್ನೆ ಮಾರ್ಗವೆಂದೆಣಿಸಿ ಅನೇಕರು ವರ್ತಿಸುತ್ತಿದ್ದಾಗ, ಮಾರ್ಗಾನುಸರಣೆಯನ್ನು ಎತ್ತಿ ಹಿಡಿದ ಕೀರ್ತಿ ತಿಮ್ಮಪ್ಪಯ್ಯನವರಿಗಿದೆ. ಆದುದರಿಂದ ಸಾಹಿತ್ಯ ಕ್ಷೇತ್ರದಲ್ಲಿ ಅವರ ಹಜ್ಜೆ ಗುರುತು ಎಂದಿಗೂ ಮಾಸದುದು, ಮಾಸಬಾರದುದು. ಒಂದೆರಡು ಪ್ರಥಮಗಳ ಹಾಗೂ ಅನನ್ಯ ರಚನೆಗಳ ಕೀರ್ತಿಗೆ ಭಾಜನರವರು. ಶ್ರೇಷ್ಠ ಸಾಹಿತ್ಯಕಾರನು ತಾನೊಂದು ರಚನೆಯನ್ನು ಉಪಕ್ರಮಿಸುವಾಗ-ಇಂತಹದೊಂದನ್ನು ಇತರರು ರಚಿಸಿರಬಾರದು. ರಚಿಸಿದ್ದರೂ ಅದಕ್ಕಿಂತ ಇದರಲ್ಲಿ ಮೇಲ್ಮೆಯಿರಬೇಕು - ಎಂಬ ಕಡೆಗೆ ಲಕ್ಷ್ಯ ಹರಿಸುತ್ತಾನೆ. ಹಿಂದಣವನೊಬ್ಬನು ಪ್ರಥಮವೆನಿಸುವ ಒಂದು ಅಮೋಘ ರಚನೆಯನ್ನು ಮಾಡಿ, ಇತರರು ಇಂತಹದನ್ನು ಮಾಡಲಾರರು - ಎಂದು ಹೆಮ್ಮೆ ಪಟ್ಟಿದ್ದರೆ, ಅಂತಹದೇ ರಚನೆಯನ್ನು ತಾನು ಮಾಡಿ "ನನಗೂ ಇದು ಸಾಧ್ಯವಿದೆ" ಎಂದು ತೋರಿಸಿಕೊಡುತ್ತಾನೆ.

ಉದಾಹರಣೆಯಾಗಿ, ಆದಿಕವಿ ಪಂಪನು ಅರಿಕೇಸರಿಯನ್ನು ಅರ್ಜುನನಲ್ಲಿ ಸಮಾಸೀಕರಿಸಿ ಸಮಸ್ತಭಾರತವನ್ನು ರಚಿಸಿದ್ದರೆ, ಅನಂತರ ಬಂದ ರನ್ನನು ಅದೇ ಮಾದರಿಯಲ್ಲಿ 'ಸಾಹಸ ಭೀಮ ವಿಜಯ' ವನ್ನು ಬರೆದನಲ್ಲವೆ ?. ಅದರಂತೆ, ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಸಾಹಿತ್ಯ ರಚನೆಗಳಲ್ಲಿ 'ತನ್ನದಿದು ಸಾಹಿತ್ಯ ಕ್ಷೇತ್ರದಲ್ಲಿ ಪ್ರಥಮವಾಗಿ ನಿಲ್ಲಬೇಕು. ಇಲ್ಲವೆ, ಹಿಂದೆ ರಚಿತವಾದ ಪ್ರಥಮ ಕೃತಿಗೆ ತನ್ನದು ದ್ವಿತೀಯವಾಗಬೇಕು'. ಎಂಬ ಲಕ್ಷ್ಯವನ್ನಿಟ್ಟಂತೆ ಕಂಡುಬರುತ್ತದೆ. ನಿದರ್ಶನಗಳಿವು—ಆಂಡಯ್ಯನು (೧೨೧೦) ತನ್ನ 'ಕಬ್ಬಿಗರ ಕಾವ' ರಚನೆಯ ಮೂಲಕ ಒಂದು ಹೊಸ ಹಜ್ಜೆಗುರುತನ್ನು ಸ್ಥಾಪಿಸಿದನು. 'ಮುನ್ನಿನ ಪೆಂಪನಾಳ್ದ ಕಬ್ಬಿಗರು'

ಸೊಗಸಾದ ಸಂಸ್ಕೃತವನ್ನು ಬೆರೆಸದೆ, ಕಾವ್ಯರಚನೆ ಮಾಡಲು ಸಮರ್ಥರಾಗಲಿಲ್ಲ. ಆದರೆ ಆಂಡಯ್ಯನಿಗೆ ಮಾತ್ರ, ಮಾತನಾಡಿದಂತೆ ಅಂದವಾಗಿ ರಚಿಸಲು ಸಾಧ್ಯ - ಎಂದು ಅವನ ಕಾಲದಲ್ಲಿದ್ದ ಬಲ್ಲವರು ಆಡಿಕೊಳ್ಳುತ್ತಿದ್ದರಂತೆ. ಅಷ್ಟೇ ಅಲ್ಲ - ಇಂತಹದ್ದೊಂದು ಬಲ್ಳು ಯಾರಲ್ಲಿಯೂ ದೊರೆಯದು ಎನ್ನುತ್ತಿದ್ದರಂತೆ. ಆಂಡಯ್ಯನ ಕಾಲದ ಆ ಬಲ್ಲವರ ಮಾತನ್ನು ಮುರಿದು "ನನಗಿದು ಸಾಧ್ಯವಿದೆ". ಎಂದು ತೋರಿಸಿಕೊಡುವಂತೆ ತಿಮ್ಮಪ್ಪಯ್ಯನವರು "ಸೊಬಗಿನ ಬಳ್ಳಿ" ಎಂಬ ಅಚ್ಚಗನ್ನಡ ಕೃತಿಯನ್ನು ರಚಿಸಿದ್ದಾರೆ. ಇತ್ತೀಚೆ, ಕೊಳಂಬೆ ಪುಟ್ಟಣ್ಣಗೌಡರು 'ಕಾಲೂರ ಚೆಲುವೆ' ಎಂಬ ಪದ್ಯಕೃತಿಯನ್ನು ಈ ಬಗೆಯ ಪೂರ್ಣತೆಯ ಕ್ಷೇತ್ರದಲ್ಲಿ ಮೂರನೆಯದನ್ನು ರಚಿಸಿರುವುದೂ ಲಕ್ಷ್ಯಾರ್ಹ. ಈಗೀಗ ಕನ್ನಡದ ಮೇಲಿನ ಅತ್ಯಂತ ಅಭಿಮಾನಿಗಳೆಂದು ಕೊಚ್ಚಿಕೊಳ್ಳುತ್ತಿರುವ ಕೆಲವರು ಸಂಸ್ಕೃತವನ್ನು ನಿಷೇಧಿಸಿ, ಕನ್ನಡವನ್ನು ಮುಂದೆ ತರಲು ಹೋರಾಟ ನಡೆಸುವವರಿದ್ದಾರೆ. ಆದರೆ, ಅವರ ಮಾತಿನಲ್ಲಿ ಮತ್ತು ಬರೆಹಗಳಲ್ಲಿ ಕಾಣುವ ಸಂಸ್ಕೃತದ ಶಬ್ದಬಾಹುಳ್ಯ ಮತ್ತು ಕಠಿನ ಶಬ್ದ ಪ್ರಯೋಗವು ಸಂಸ್ಕೃತ ದ್ವೇಷಿಯಲ್ಲದ ಯಾವ ಕನ್ನಡಿಗನಲ್ಲಿಯೂ ಆಗುವುದಿಲ್ಲವೆಂದು ದೃಢವಾಗಿ ಹೇಳಬಹುದು. ಸಂಸ್ಕೃತವನ್ನೇನೂ ಕಲಿಯದವರು, ಕಲಿಯಲೊಲ್ಲದವರು "ಇದು ಸಂಸ್ಕೃತ ಶಬ್ದ , ಇದು ಕನ್ನಡ ಶಬ್ದ , ಇದು ಅನ್ಯದೇಶಿ" ಎಂದು ತಿಳಿದಿರುವುದಾದರೂ ಹೇಗೆ? ಅದಿರಲಿ.

'ಹೊಸಗನ್ನಡ ಗದ್ಯಶೈಲಿಯ ಮುಂಜಾವಿನ ಕೋಳಿ' ಎನಿಸಿದ ಮುದ್ದಣನು ಹಳಗನ್ನಡ ಗದ್ಯದಲ್ಲಿ ಶ್ರೀ ರಾಮಾಶ್ವಮೇಧ ರಚನೆಯ ಮೂಲಕ ಒಂದು ಹೊಸ ಮಾರ್ಗವನ್ನು ಹಾಕಿಕೊಟ್ಟನು. ತಿಮ್ಮಪ್ಪಯ್ಯನವರು ಅದೇ ಮಾರ್ಗಹಿಡಿದು "ಚಂದ್ರಾವಲೀ ವಿಲಾಸ" ವನ್ನು ರಚಿಸಿದರು. ಅವರ 'ನಾಡೋಜ ಪಂಪ' ಶ್ರೇಷ್ಠ ವಿಮರ್ಶ ಸಂಶೋಧನಗಳ ಬೃಹದ್ ಗ್ರಂಥ. ಕನ್ನಡದ ಒಬ್ಬ ಮಹಾಕವಿಯನ್ನು ಕುರಿತು, ಓರ್ವ ಲೇಖಕರು ಬರೆದ ಇಷ್ಟೊಂದು ಗಾತ್ರದ ಮತ್ತು ಪಾತ್ರದ, ಆಳ-ಹರಹುಗಳುಳ್ಳ ವಿವೇಕಯುಕ್ತ ಪಾಂಡಿತ್ಯಪೂರ್ಣ. ಅಂತೂ ಆತ್ಮೋಪಮ ಸಮೀಕ್ಷಾ ಗ್ರಂಥ ಇದೇ ಮೊದಲನೆಯದು, 'ಇದಕ್ಕೆಣೆಯಾದುದು ಇದೇ' - ಎಂಬಂತಿದೆ. ೧೯೪೫ರಲ್ಲಿ ಪ್ರಕಟವಾಗಿರುವ 'ಪಾರ್ತಿಸುಬ್ಬ' ಎಂಬುದು ಇವರ ಇನ್ನೊಂದು ಸಮೀಕ್ಷಾಕೃತಿಯ ಕೃತಿ. ಯಕ್ಷಗಾನ ಕಲೆಯ ವಿಮರ್ಶಕ್ಷೇತ್ರದಲ್ಲಿ ನಾಂದೀರೂಪದ ರಚನೆಯಿದು. ಕವಿ ಕೃತಿಗಳ ಬಗೆಗೆ ಸಾಕಷ್ಟು ಬೆಳಕನ್ನು ಬೀರುವ ಈ ಪುಸ್ತಕ ಈ ಕ್ಷೇತ್ರದಲ್ಲಿ ಪ್ರಥಮ ರಚನೆಯೇ ಆಗಿದೆ.

ಕಾವ್ಯ ಶಾಸ್ತ್ರ ಪರಿಜ್ಞಾನದ ಆಳ ಹರಹುಗಳಲ್ಲಿ, ಅದನ್ನು ಇತರರಿಗೆ ತೆರೆದಂತೆ ತಿಳಿಸುವುದರಲ್ಲಿ, ವಿನಯೋಪೇತ ಅಭಿವ್ಯಕ್ತಿಯಲ್ಲಿ ಮುಳಿಯ ತಿಮ್ಮಪ್ಪಯ್ಯನವರ ಪರಿಣತೆ ಅದೆಷ್ಟೆಂಬುದನ್ನು ನಿದರ್ಶಿಸುವ ಉದ್ಗ್ರಂಥ 'ಕವಿರಾಜಮಾರ್ಗವಿವೇಕ'. ಇದೇ ಪ್ರಕೃತ ಇಲ್ಲಿ ವಿವರಣ ವಿಷಯ. ಕನ್ನಡದಲ್ಲಿ ಪರಿಣತೆಯನ್ನು ಅಪೇಕ್ಷಿಸುವ ಯಾವ ವ್ಯಕ್ತಿಯೂ ಓದಿ, ಕೇಳಿ, ಪಾಠ ಹೇಳಿಸಿ ತಿಳಿದು ಮನನಮಾಡಿಕೊಳ್ಳಬೇಕಾದ ವಿಷಯವುಳ್ಳ ಗ್ರಂಥವಿದು. ನಿರೂಪಣೆಯಲ್ಲಿ ಲೇಖಕರು ತಮ್ಮ ಪರಿಪೂರ್ಣತೆಯಿಂದ ಇಲ್ಲಿ ವರ್ತಿಸಿದ್ದಾರೆ. ವಿಚಾರಗಳು ಕವಿರಾಜಮಾರ್ಗದಿಂದ ಆಯ್ಕೆಗೊಂಡು, ಲೇಖಕರ ಹೃದಯದಾಳದಲ್ಲಿ ಮೊಳೆತು, ಮನೋಬುದ್ಧಿಗಳಲ್ಲಿ ಪಕ್ವಗೊಂಡು ಪ್ರಕಟವಾಗಿವೆ. ಸವಿಮರ್ಶ ಪ್ರತಿಪಾದನೆ ವ್ಯಾಖ್ಯಾನಗಳು ಸಾಗಿವೆ.

'ಕವಿರಾಜಮಾರ್ಗ' ತನ್ನ ಹೆಸರಿನಂತೆ, ಕವಿಗಳ ರಾಜಮಾರ್ಗವೂ ಹೌದು, ಕವಿರಾಜರುಗಳ ಮಾರ್ಗವೂ ಹೌದು. ಅಂತಹ ರಾಜಮಾರ್ಗದಲ್ಲಿ ಸಂಚರಿಸುವವರಿಗೆ ಮಾರ್ಗನಿಯಮ (Rules of the Road) ಗೊತ್ತಿರಬೇಕಲ್ಲವೆ? ಆ ಮಾರ್ಗನಿಯಮದ ಅರಿವೇ (ಜ್ಞಾನವೇ) 'ವಿವೇಕ'. 'ವಿವೇಕ' ಎಂದರೆ ಸರಿತಪ್ಪುಗಳನ್ನು ವಿಭಜಿಸಿ ತಿಳಿದು ವರ್ತಿಸುವ ಬುದ್ಧಿ. 'ವಿವೇಚನಂ ವಿವೇಕಃ - ವಿಚಿರ್ ಪೃಥಗ್ಭಾವೇ' ಎಂಬುದು ಈ ಸಂಸ್ಕೃತ ಶಬ್ದದ ವ್ಯುತ್ಪತ್ತಿಯಿರುತ್ತದೆ. 'ವಿವೇಕಃ. ಪೃಥಗಾತ್ಮತಾ' ಎಂದಿದೆ ಅಮರಕೋಶ. ಕವಿರಾಜಮಾರ್ಗೋಕ್ತ ಸಂಗತಿಗಳನ್ನು ಬೇರೆಬೇರೆಯಾಗಿ ವಿಭಾಗಿಸಿಕೊಂಡು ಅವುಗಳ ಬಗೆಗೆ ಸಮಗ್ರ ಸಮೀಕ್ಷಾತ್ಮಕ ನಿರ್ಣಯವನ್ನು ಮಂಡಿಸುವ ಗ್ರಂಥವಾದುದರಿಂದ ಇದು 'ಕವಿರಾಜಮಾರ್ಗ ವಿವೇಕ' ಎಂದು ಸಾರ್ಥಕನಾಮವನ್ನು ತಳೆದಿದೆ. ಕವಿರಾಜಮಾರ್ಗ ಕನ್ನಡದ ಆದ್ಯ ಲಾಕ್ಷಣಿಕ ಗ್ರಂಥ. ಆದಿ ಎನ್ನುವಾಗ 'ಮೊದಲನೆಯದು' ಎಂಬುದು ಸ್ಥೂಲಾರ್ಥ. ಅದರ ಅರ್ಥವ್ಯಾಪ್ತಿ ಅಷ್ಟೆ ಅಲ್ಲ. ಈ ಜಗತ್ತಿಗೆಲ್ಲ ಪರಮಾತ್ಮ ವಸ್ತುವೆ ಆದಿ ಎನ್ನುವಾಗ, ಅಕ್ಷರಮಾಲೆಗೆ ಅಕಾರವೇ ಆದಿ ಎನ್ನುವಾಗ, ಮೊದಲನೆಯದೆನಿಸುವ ಆ ಒಂದರಿಂದಲೇ ಮುಂದಿನವೆಲ್ಲ ಹುಟ್ಟಿ, ಬಳೆದು ಬಂದವು - ಎಂಬ ವ್ಯಾಪಕಾರ್ಥ 'ಆದಿ' ಶಬ್ದಕ್ಕಿದೆ. ಕನ್ನಡದ ಇತರ ಲಕ್ಷಣಗ್ರಂಥಗಳು ಕವಿರಾಜಮಾರ್ಗದ ವಿವರಣ ಕಿರಣಗಳು. ಆ ಕಿರಣಗಳ ಬೆಳಕಿನಲ್ಲಿ ಬೆಳೆದ ಸಸ್ಯ ಫಲ ಸಮೃದ್ಧಿಯೇ ಮಾರ್ಗಕಾವ್ಯಗಳು - ಎಂದಿಲ್ಲಿ ತಿಳಿದುಕೊಳ್ಳಬಹುದು.

ಕವಿರಾಜಮಾರ್ಗವೂ ಒಂದು ಉತ್ತಮ ಮಾರ್ಗದರ್ಶಿ ಗ್ರಂಥ. ಇದರಲ್ಲಿ ದೋಷಾದೋಷಾನುವರ್ಣನ ನಿರ್ಣಯ, ಶಬ್ದಾಲಂಕಾರ ವರ್ಣನ ನಿರ್ಣಯ. ಅರ್ಥಾಂಲಕಾರ ಪ್ರಕರಣ - ಎಂಬ ಮೂರು ಪರಿಚ್ಛೇದಗಳಿವೆ. ಕನ್ನಡದ ಜನಪದ (ನಾಡಿನ) ವಿಸ್ತಾರ, ನಾಡವರ ಸಂಸ್ಕೃತಿ, ಉನ್ನತಿ. ಕನ್ನಡವನ್ನು ಸಾಹಿತ್ಯ ರಚನೆಗೆ ಬಳಸುವಾಗ ಲಕ್ಷಿಸತಕ್ಕ ಸಂಗತಿ, ಪ್ರಯೋಗದಲ್ಲಿ ಸರಿ ತಪ್ಪುಗಳ ಅರಿವು, ಕಾವ್ಯ ತತ್ತ್ವಗಳಾದ ಗುಣ ಅಲಂಕಾರಗಳ ಪರಿಜ್ಞಾನ, ದಕ್ಷಿಣ - ಉತ್ತರ ಮಾರ್ಗಭೇದ - ಇವು ಈ ಗ್ರಂಥದಲ್ಲಿ ಪ್ರತಿಪಾದ್ಯ ಸಂಗತಿಗಳು. ಇವಲ್ಲದೆ, ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ, ಸಮಗ್ರ ಭಾರತಕ್ಕೆ ಆದರ್ಶಪ್ರಾಯವಾದ ಆಳಿಕೆಯ ವ್ಯವಸ್ಥೆ ಎಂತಹುದು ಎಂಬುದಕ್ಕೂ ಕವಿರಾಜ ಮಾರ್ಗ ಗ್ರಂಥವು ಮಾರ್ಗದರ್ಶಿಯಾಗಿದೆ—ಎಂಬುದನ್ನು ಕವಿರಾಜಮಾರ್ಗ ವಿವೇಕದಲ್ಲಿ ಪ್ರತಿಪಾದಿಸುವುದನ್ನು ನಾವು ಕಾಣುತ್ತೇವೆ. ಆದುದರಿಂದ ಈ ಗ್ರಂಥವು ಸಾಹಿತಿಗಳಿಗೆ ಮಾತ್ರವಲ್ಲದೆ ಸಮಾಜನಿಷ್ಠೆ ದೇಶನಿಷ್ಠೆಯುಳ್ಳವರಿಗೂ ಕೈಪಿಡಿಯೆನಿಸುತ್ತದೆ.

ಕಾವ್ಯ ಲಕ್ಷಣ ನಿರೂಪಣೆಯ ವಿಷಯಕ್ಕೆ ಬಂದಾಗ, ಕೆಲವರು ಆಡಿಕೊಳ್ಳುವುದುಂಟು- ಕನ್ನಡಕ್ಕಿರುವ ವ್ಯಾಕರಣ, ಛಂದಸ್ಸು, ಕಾವ್ಯ ಶಾಸ್ತ್ರ ವಿಚಾರಗಳು ಕೇವಲ ಅಧ್ಯಯನಕ್ಕಲ್ಲದೆ, ಅನುಸರಣೆಗಲ್ಲ - ಎಂದು. ಇವೆಲ್ಲ ಇರುವುದು ಕಲಿತು ಮರೆಯುವುದಕ್ಕೆಂದು. ಆದುದರಿಂದ ಇವು ಅನವಶ್ಯವೆಂದು. ಇಂಥವನ್ನೆಲ್ಲ ಅಧ್ಯಯನದಿಂದ ಹೊರಪಡಿಸಿ ಗ್ರಂಥಾಲಯ ಭೂಷಣಗಳಾಗಿ ಮಾತ್ರ ಇರುವಂತೆ ಮಾಡುವ ದುಸ್ಸಾಹಸದ ಲಕ್ಷಣವೂ ಕಂಡುಬರುತ್ತದೆ. ಇಂತಹ ದುಸ್ಸಾಹಸವು ಕನ್ನಡದ ವಿದ್ವತ್ತಿಗೆ ದುರದೃಷ್ಟಕರ. ಭಾಷೆ ಸಾಹಿತ್ಯಗಳ ಅಭಿವೃದ್ಧಿಗೆ

ಮಾರಕ. ಮುಂದೆ ಬರುವ ಸಾಹಿತಿಗಳನ್ನೂ ಅವರ ಸಾಹಿತ್ಯವನ್ನೂ ಅಧೋಗತಿಗಿಳಿಸಿ, ಓದುಗರನ್ನು ಮಾರ್ಗ ಭ್ರಷ್ಟಗೊಳಿಸಿ, ಸಾಹಿತ್ಯವನ್ನು - (ಸ-ಹಿತವಾಗಬೇಕಾದುದನ್ನು) ಕೆಡಿಸಿ, ಆತ್ಮಘಾತಕ ಪ್ರವೃತ್ತಿಯ ಕಡೆಗೊಯ್ಯುವ ವಿವೇಕ ಹೀನತೆಯ ದ್ಯೋತಕವಾದುದು. ಆದುದರಿಂದ ಈ ದಿಶೆಯಲ್ಲಿ ವಿವೇಕವನ್ನು ಮೂಡಿಸುವುದಕ್ಕಾಗಿ ಕವಿರಾಜಮಾರ್ಗವಿವೇಕ ರಚಿತವಾಗಿದೆ—ಎಂದು ನಾವು ಮನವರಿಕೆ ಮಾಡಿಕೊಳ್ಳಬೇಕು.

ಕವಿರಾಜಮಾರ್ಗದ ಪ್ರಥಮ ಸಂಸ್ಕರಣ ಕೆ.ಬಿ. ಪಾಠಕರಿಂದಾಯಿತು. ೧೮೯೮ರಲ್ಲಿ ಇದು ಪ್ರಕಾಶಿತವಾಯಿತು. ೧೯೨೯ರಲ್ಲಿ ಎ. ವೆಂಕಟರಾವ್ ಮತ್ತು ಎಚ್. ಶೇಷಅಯ್ಯಂಗಾರ್ಯರಿಂದ ದ್ವಿತೀಯ ಸಂಸ್ಕರಣ ಹೊರಬಂತು. ಮತ್ತೆ ೧೯೬೮ರಲ್ಲಿ ಎಂ.ವಿ. ಸೀತಾರಾಮಯ್ಯನವರು ಇದನ್ನು ಸಂಪಾದಿಸಿ. ಸೂಕ್ತ ಟಿಪ್ಪಣಿಯೊಂದಿಗೆ ಪ್ರಕಾಶಪಡಿಸಿದರು. ಹೀಗೆ ಈ ಎಪ್ಪತ್ತು ವರ್ಷಗಳಲ್ಲಿ ಈ ಗ್ರಂಥ ಮೂರು ಬಾರಿ ಮಾತ್ರ ಅಚ್ಚಾದುದೆಂದರೆ, ಇದನ್ನು ಅಭ್ಯಾಸ ಮಾಡುವವರ ಅಲಕ್ಷ್ಯ ಎಷ್ಟರ ಮಟ್ಟಿಗಿದೆ ಎಂಬುದು ವೇದ್ಯವಾಗುತ್ತದೆ. ಈ ಉದ್ಗ್ರಂಥವನ್ನು ಕುರಿತು ಬಂದಿರುವ ಸಮೀಕ್ಷಾತ್ಮಕ ಗ್ರಂಥಗಳಲ್ಲಿ ಮೊದಲನೆಯದು ಮುಳಿಯ ತಿಮ್ಮಪ್ಪಯ್ಯನವರ ಈ 'ಕವಿರಾಜಮಾರ್ಗ ವಿವೇಕ'. ಇದರ ಪ್ರಥಮಭಾಗ ಮಾತ್ರ ೧೯೪೮ರಲ್ಲಿ ಪ್ರಕಾಶಿತವಾಗಿದೆ. ಆ ಮೇಲೆ ಇದೀಗ ೧೯೭೩ರಲ್ಲಿ ಈ ಗ್ರಂಥದ ಭಾಗ - ಒಂದು ಮತ್ತು ಎರಡು ಒಟ್ಟಿಗೆ ತಿಮ್ಮಪ್ಪಯ್ಯನವರ ಸುಪುತ್ರ ಎಂ.ಕೇಶವ ಭಟ್ಟರ ಸಂಪಾದಕತ್ವದಲ್ಲಿ ಹೊರ ಬಂದಿದೆ. ಭೀಮಸೇನರಾವ್ ಚಿಟಗುಪ್ಪಿಯವರು ೧೯೭೨ರಲ್ಲಿ ಮನ್ವಂತರ ಗ್ರಂಥ ಮಾಲೆಯ ಒಂಬತ್ತನೆ ಸಂಪುಟವಾಗಿ, ಕವಿರಾಜಮಾರ್ಗ ಪ್ರಶಸ್ತಿ ಎಂಬ ಮಹಾ ಪ್ರಬಂಧವನ್ನು ಪ್ರಕಟಿಸಿರುತ್ತಾರೆ. ಡಾ।। ಎಂ.ಎಂ. ಕಲಬುರ್ಗಿಯವರು ಬರೆದ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಮಹಾಪ್ರಬಂಧ ೧೯೭೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಾಶಿತವಾಗಿದೆ. ೧೯೭೩ರಲ್ಲಿ ಐಬಿಎಚ್ ಪ್ರಕಾಶನದ ಕವಿಕಾವ್ಯಪರಂಪರೆ ಮಾಲಿಕೆಯಲ್ಲಿ ಒಂದನೆಯ ಗ್ರಂಥವಾಗಿ 'ಕವಿರಾಜಮಾರ್ಗ' ಎಂಬ ವಿಮರ್ಶಗ್ರಂಥ ಪ್ರಕಟವಾಗಿದೆ. ಇದರ ಸಂಪಾದಕರು ಡಾ।। ವಿ.ಸೀ. ಸೀತಾರಾಮಯ್ಯ ಅನಂತರ ಇದೀಗ ಡಾ. ಕೆ. ಕೃಷ್ಣಮೂರ್ತಿಯವರು ಬರೆದ ಅನುವಾದ ಸಹಿತವಾದ ಕವಿರಾಜಮಾರ್ಗವು ಐಬಿಎಚ್ ಪ್ರಕಾಶನದ ಮೂಲಕ ೧೯೮೩ರಲ್ಲಿ ಹೊರಬಂದಿದೆ. ಪ್ರೊ ಎಂ. ವಿ. ಸೀತಾರಾಮಯ್ಯನವರು ಸಂಪಾದಿಸಿದ ಕವಿರಾಜಮಾರ್ಗ ಗ್ರಂಥಕ್ಕೆ ಪೀಠಿಕೆ - ಟಿಪ್ಪಣಿಗಳನ್ನು ಸಿದ್ಧಪಡಿಸುವಲ್ಲಿ, ಕವಿರಾಜಮಾರ್ಗ ವಿವೇಕ ಗ್ರಂಥದ ಎರಡು ಭಾಗಗಳನ್ನು ೧೯೬೮ರ ವೇಳೆಗೇ ಬಳಸಿಕೊಂಡಿದ್ದಾರೆ. ಆಗ ಭಾಗ ಎರಡು ಅಚ್ಚಾಗಿದ್ದಿಲ್ಲವಾದರೂ ಎಂ. ಕೇಶವ ಭಟ್ಟರಿಂದ ಕೈ ಬರೆಹದ ಪ್ರತಿಯನ್ನು ಪಡೆದು, ಬಳಸಿಕೊಂಡಿರುತ್ತಾರೆ. ಇತರರಿಗೆ ಅದನ್ನು (ಕವಿರಾಜಮಾರ್ಗವಿವೇಕ ಭಾಗ ಎರಡನ್ನು) ಬಳಸಿಕೊಳ್ಳುವ ಭಾಗ್ಯವಿದ್ದಿಲ್ಲ.

ಕವಿರಾಜಮಾರ್ಗ ವಿವೇಕದಲ್ಲಿ ಎರಡು ಭಾಗಗಳೂ ಸೇರಿ, ಅಧ್ಯಾಯಗಳು ಹದಿನೇಳು. ಮೊದಲನೆಯ ಭಾಗದಲ್ಲಿ ಒಂಬತ್ತು ಅಧ್ಯಾಯಗಳಿದ್ದು ಪ್ರತಿಪಾದ್ಯ ವಿಷಯಗಳ ಶೀರ್ಷಿಕೆಗಳಿವು- ರಾಷ್ಟ್ರಕೂಟವಂಶ, ರಾಷ್ಟ್ರಕೂಟ ತ್ರಿಮೂರ್ತಿಗಳು, ಪ್ರಭೂತವರ್ಷಗೋವಿಂದ, ಅಮೋಘವರ್ಷ

ನೃಪತುಂಗ, ನೃಪತುಂಗನ ಆಳಿಕೆ, ನೃಪತುಂಗನ ಮತ, ಕವಿರಾಜಮಾರ್ಗಕಾರನಾರು, ಆಗಿನ ಕಾಲದ ಕನ್ನಡ ಸ್ವರೂಪವೂ ಗ್ರಂಥಕಾರನ ಗುರಿಯೂ, ಹಿನ್ನೋಟ. ಭಾಗ ಎರಡು— ಕವಿರಾಜಮಾರ್ಗದ ವ್ಯಾಖ್ಯಾತ್ಮಕವಾದುದು. ಅಧ್ಯಾಯ ಶೀರ್ಷಿಕೆಗಳಿವು - ಕಾವ್ಯದೋಷಗಳು, ಮಾರ್ಗವಿಭಾಗ, ಮುಂದುವರಿದುದು ಗುಣಗತ ಮಾರ್ಗ ಭೇದ, ರಸಗತ ಮಾರ್ಗಭೇದ, ನೆಗಟ್ದಿ ಕನ್ನಡದೊಳಗಿನ ಮಾರ್ಗಭೇದ, ಅಲಂಕಾರದರ್ಶನ—ಮುಂದುವರಿದುದು, ಶಬ್ದಾಲಂಕಾರ ಸಂಗ್ರಹ ಅರ್ಥಾಲಂಕಾರ ಸಂಗ್ರಹ - ಹೀಗೆ ಇಲ್ಲಿ ಎಂಟು ಅಧ್ಯಾಯಗಳು. ಕೊನೆಗೆ ಆಧಾರ ಗ್ರಂಥಲೇಖನಾವಳಿ. ಅನುಬಂಧದಲ್ಲಿ ನೃಪತುಂಗನ ಶಾಸನಗಳು, ಪದ್ಯಗಳ ಮತ್ತು ಶ್ಲೋಕಗಳ ಅಕಾರಾದಿ, ಶಬ್ದಸೂಚಿ. ಇವೆಲ್ಲದರಿಂದ ಗ್ರಂಥ ರೂಪವಿದು ಶಾಸ್ತ್ರೀಯವಾಗಿ ಪರಿಪೂರ್ಣವಾಗಿದೆ. ಈ ಗ್ರಂಥಕ್ಕೆ ಸಂಬಂಧಪಟ್ಟಂತೆ ಕೆಲವು ಮುಖ್ಯಾಂಶಗಳನ್ನಿಲ್ಲಿ ತಿಳಿಸಬಹುದಾಗಿದೆ -

ಕವಿರಾಜಮಾರ್ಗಕಾರನು ಅಂದು ಆ ಕಾಲದ ಕವಿಗಳ, ಸಾಹಿತ್ಯಾಭ್ಯಾಸ ಮಾಡುವವರ ಹಾಗೂ ಉಪಾಧ್ಯಾಯರ ಕೈಗನ್ನಡಿಯಾಗುವಂತೆ , ಕವಿರಾಜಮಾರ್ಗವನ್ನು ರಚಿಸಿದ್ದಾನೆ. ಶ್ರೀ ವಿಜಯನಿಂದ ರಚಿತವಾಗಿರಬಹುದಾದ ಈ ಗ್ರಂಥವು ನೃಪತುಂಗನ ಸಭೆಯ ಮಹಾವಿದ್ವಾಂಸರ ಪರಿಶೀಲನೆಗೆ ಒಳಪಟ್ಟು ನೃಪತುಂಗ ಅನುಮತವಾಗಿ ಸಿದ್ಧವಾದಂತೆ ಕಾಣುತ್ತದೆ. ಅಂದು ಸಲ್ಲುವಂತಾಗಿದ್ದ ಈ ಲಕ್ಷಣ ಗ್ರಂಥ ಇಂದೂ ಸಲ್ಲುವಂಥದೆ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ. ನೃಪತುಂಗನ ಕಾಲದ ವಿದ್ವಜ್ಜ ನರ ಪರಿಣತಿ ತುಂಬ ಮೇಲು ಮಟ್ಟದ್ದಾಗಿ ಇದ್ದಿರಬೇಕು. ಆ ಕಾಲದಲ್ಲಿದ್ದ ಸಾಮಾನ್ಯರಾದ ಜನರು ಕೂಡ, ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಆಗಿದ್ದರೆಂದು ಕವಿರಾಜಮಾರ್ಗ ಸಾಕ್ಷಿಕೊಡುತ್ತದೆ. ಹೀಗಿದ್ದರೆ ಕುರಿತು ಓದಿದವರ ಪರಿಣತೆಯ ಅಂತಸ್ತು ಅದೆಷ್ಟು ಮೇಲಿದ್ದಿತ್ತೋ! ಆದುದರಿಂದಲೇ ಇರಬಹುದು- ಕವಿರಾಜಮಾರ್ಗಕ್ಕೊಂದು ವ್ಯಾಖ್ಯಾನಗ್ರಂಥವನ್ನು ಅಂದು ಯಾರೂ ರಚಿಸಿಲ್ಲ. ಆದರೆ ಇಂದು ಅದರಲ್ಲಿ ಉಕ್ತವಾದ ಎಷ್ಟೋ ವಿಚಾರಗಳಿಗೆ ಸರಿಯಾಗಿ ಅರ್ಥ ಮಾಡಲು ಸಾಧ್ಯವಾಗುವುದಿಲ್ಲ. ಈ ಸ್ಥಿತಿಯನ್ನು ಮನಗಂಡು ತಿಮ್ಮಪ್ಪಯ್ಯನವರು ಕವಿರಾಜ ಮಾರ್ಗವಿವೇಕವನ್ನು ರಚಿಸಿದುದರಿಂದ ಕನ್ನಡಿಗರಿಗೆ ಮಹದುಪಕಾರವಾಗಿದೆ. ಇಂತಹ ಗ್ರಂಥರಚನೆಗೆ ಆಸರೆಯಾದ ನೃಪತುಂಗನ ಮಾನ್ಯಖೇಟ ರಾಜಧಾನಿಯ ಹಾಗೂ ರಾಷ್ಟ್ರಕೂಟ ರಾಜವಂಶದ ಹಿಂದಿನ ದೊರೆಗಳ ರಾಜ್ಯರಚನೆ. ಪ್ರಜಾಪಾಲನೆಗಳ ವಿವರವನ್ನು ಶಾಸನಗಳ ಆಧಾರದಿಂದ ಮತ್ತು ಕವಿರಾಜಮಾರ್ಗದ ಲಕ್ಷ್ಯಪದ್ಯಗಳ ನೆಲೆಯಿಂದ ಭಾಗ ಒಂದರಲ್ಲಿ ತಿಮ್ಮಪ್ಪಯ್ಯನವರು ವಿವರಿಸಿದ್ದಾರೆ.

ರಾಷ್ಟ್ರಕೂಟವಂಶದವರು ಹುಟ್ಟುಕನ್ನಡಿಗರು. ಆಭೀರರೆಂದು ಕರೆಯಿಸಿಕೊಂಡಿರುವ ಯಾದವ ವಂಶಜರು. ಈ ವಂಶದಲ್ಲಿ ಪ್ರಮುಖರು, ದಂತಿದುರ್ಗ (೭೪೭-೭೫೪) ಕೃಷ್ಣ (ಅಕಾಲ ವರ್ಷ ಶುಭತುಂಗ), ಧ್ರುವ ನಿರುಪಮ, ಮೂರನೆಯ ಗೋವಿಂದ (ಜಗತ್ತುಂಗ, ಪ್ರಭೂತವರ್ಷ) ಮತ್ತು ನೃಪತುಂಗ ಅಮೋಘವರ್ಷ ೮೧೪-೮೭೭ ಎಂಬೀ ಐವರು. ಇವರ ಬಗೆಗೆ ಶಾಸನಾಧಾರಗಳಿಂದ ಇತಿಹಾಸಾಂಶಗಳನ್ನು ಒದಗಿಸಲಾಗಿದೆ. ರಾಷ್ಟ್ರಕೂಟ

ಎಂಬ ಶಬ್ದದ ಮೂಲ ರೂಪ 'ರಟ್ಟ' ಎಂಬ ಕನ್ನಡದ ರೂಪ. ಈ ಐವರಲ್ಲಿ ಧ್ರುವ ನಿರುಪಮನ ಮಗ ಜಗತ್ತುಂಗ ಗೋವಿಂದರಾಜನು ರಾಜನೀತಿನಿಪುಣನಾಗಿದ್ದನು. ಆತನು ಅಖಂಡ ಕರ್ನಾಟಕಕ್ಕೆ ಮಾತ್ರವಲ್ಲ, ಅಥವಾ ಮತ್ತಿನ ವಿಜಯನಗರದ ಅರಸನಂತೆ ದಕ್ಷಿಣಾಪಥಕ್ಕೆ ಮಾತ್ರವೂ ಅಲ್ಲ - ಅಖಂಡ ಭರತಖಂಡಕ್ಕೆ ಹಾಗೂ ಲಂಕಾರಾಜ್ಯದ ವರೆಗೆ ಒಕ್ಕೊಡೆಯ ಚಕ್ರವರ್ತಿ. ಶಕಪುರುಷ ವಿಕ್ರಮಾದಿತ್ಯ, ಶಾಲಿವಾಹನ, ಅಶೋಕ ಚಕ್ರವರ್ತಿಗಳನ್ನು ಮೀರಿಸಿದ್ದನು. ಭಾರತ ಭೂಮಿಯ ಚಾರಿತ್ರಿಕ ಚಕ್ರವರ್ತಿ ಎಂಬ ಹೆಸರನ್ನು ಸಾರ್ಥಕವಾಗಿ ಪಡೆದವನೆಂದರೆ ರಾಷ್ಟ್ರಕೂಟವಂಶದ ಈ ಮೂರನೆ ಗೋವಿಂದ ರಾಜನಲ್ಲದೆ ಇನ್ನೊಬ್ಬನಲ್ಲ - ಎಂದು ತಿಮ್ಮಪ್ಪಯ್ಯನವರು ಆಧಾರ ಪೂರ್ವಕ ಘೋಷಿಸಿದ್ದಾರೆ. ಅವನ ರಾಜಧಾನಿ ಹೇಲಾಪುರ (ವಿಲಾಸನಗರ) ವಾಗಿತ್ತು. ಅದೇ ಅವನ ಮಗ ನೃಪತುಂಗನ ಕಾಲದಲ್ಲಿ ಮಾನ್ಯಖೇಟವಾಗಿ ಮಾರ್ಪಟ್ಟಿತೆಂದು ವಿವರಿಸಲಾಗಿದೆ. ಜಗತ್ತುಂಗನ ಕಾಲದಲ್ಲಿ ಮಾನ್ಯಖೇಟವಾಗಿ ಮಾರ್ಪಟ್ಟಿತೆಂದು ವಿವರಿಸಲಾಗಿದೆ. ಜಗತ್ತುಂಗನ ಗೋವಿಂದನ ಕಾಲದಲ್ಲಿಯೇ (ಕ್ರಿ.ಶ., ೭೯೩-೮೧೨) ಕನ್ನಡ ಸಾಹಿತ್ಯ ರಚನೆಯಾದ ಸೂಚನೆಗಳನ್ನು ಲೇಖಕರು ಸಂಶೋಧಿಸಿದ್ದಾರೆ.

ನೃಪತುಂಗನು ಬಲು ಚಿಕ್ಕವನಿರುವಾಗಲೆ ಪಟ್ಟವೇರಿದ್ದನು. ಅವನು ಎದುರಿಸಿದ ವಿಪ್ಲವಗಳು ಅನೇಕ. ಅವು ಪರಿಹಾರವಾದುವನ್ನು ಕವಿರಾಜ ಮಾರ್ಗದಲ್ಲಿ ಉದಾಹೃತವಾದ ಪದ್ಯಗಳ ಆಧಾರದಿಂದ ಮತ್ತು ಶಾಸನಗಳ ಉಲ್ಲೇಖಗಳಿಂದ ತಿಮ್ಮಪ್ಪಯ್ಯನವರು ಸ್ಪಷ್ಟ ಪಡಿಸಿದ್ದಾರೆ. ನೃಪತುಂಗನ ಆಳಿಕೆ ಅವನ ತಂದೆಯ ಮಾರ್ಗವರ್ತಿಯಾಗಿಯೇ ಇದ್ದಿತು. ಆಗ ರಾಜ್ಯಭಾರ ನಡೆಸುತ್ತಿದ್ದ ಅಧಿಕಾರಮಹತ್ತರರು (ಉನ್ನತಾಧಿಕಾರಿಗಳು) ಎಂದರೆ - ರಾಷ್ಟ್ರಪತಿ, ವಿಷಯಪತಿ, ಗ್ರಾಮಕೂಟ, ಯುಕ್ತಕ, ನಿಯುಕ್ತಕ - ಎಂಬವರಾಗಿ ಆಧಾರದಿಂದ ತಿಳಿಸಲಾಗಿದೆ. ಇವರನ್ನು ಕವಿರಾಜಮಾರ್ಗವಿವೇಕ ರಚನಾಕಾಲದ (ಅಂದರೆ ಸ್ವಾತಂತ್ರ್ಯಪೂರ್ವದ) ಈ ದೇಶದ ಉನ್ನತಾಧಿಕಾರಿಗಳೊಡನೆ ಹೋಲಿಸಲಾಗಿದೆ. ರಾಷ್ಟ್ರಪತಿ ಅಂದರೆ ವೈಸರಾಯಿ ಅಥವಾ ಗವರ್ನರ್ ಎಂದು. 'ವಿಷಯಪತಿ' ಎಂದರೆ 'ಕಲೆಕ್ಟರ್' ಎಂದು ಲೇಖಕರು ನಿರೂಪಿಸಿದ್ದಾರೆ. ಸ್ವಾತಂತ್ರ್ಯಾನಂತರದ ಈ ಕಾಲಕ್ಕಂತೂ ರಾಷ್ಟ್ರಪತಿ ಸ್ಥಾನ ಎಲ್ಲರಿಗೂ ಗೊತ್ತಿದೆ. 'ವಿಷಯ ಪತಿ' ಈ ಕಾಲದ ರಾಜ್ಯಪಾಲರಾಗಬಹುದು. ಹಾಗೆಯೇ ಆಯುಕ್ತರು, ನಿಯುಕ್ತರು ಈ ಕಾಲದ ಅಧಿಕಾರಿವರ್ಗದಲ್ಲಿದ್ದಾರೆ. ಇಡೀ ದೇಶದ ಅಧಿಕಾರ ಸಂಸ್ಥೆ ಚೆನ್ನಾಗಿ ನಡೆಯಬೇಕಾದರೆ ಅಧಿಕಾರಿವರ್ಗ ಮಾತ್ರವೆ ಸಾಲದು. ಅದಕ್ಕಾಗಿಯೆ ಹಳ್ಳಿ ಹಳ್ಳಿಗಳಲ್ಲಿ 'ಮಹಾಜನ' ಎಂಬೊಂದು ಸ್ವತಂತ್ರಸಂಸ್ಥೆ ಇದ್ದಿತೆಂದೂ ಅದರಲ್ಲಿ ಎಲ್ಲ ವರ್ಗಗಳ ಜನರೂ ಸದಸ್ಯರಾಗಿದ್ದರೆಂದೂ ವಿದಿತಪಡಿಸಲಾಗಿದೆ. ಇವರಲ್ಲದೆ. ಆಳುವ ರಾಜನಿಗೂ, ಅವನ ಮನೆತನಕ್ಕೂ ಮತಾಚಾರಗಳನ್ನು ಬೋಧಿಸುವ ಕುಲಗುರುಗಳಾಗಿ ಮತ್ತು ದೇವಾಲಯದ ಅಧಿಕಾರಿಗಳಾಗಿ "ಗೊರವರು" ಎಂಬವರಿದ್ದರೆಂದು ಸ್ಪಷ್ಟೀಕರಿಸಲಾಗಿದೆ. 'ಗೊರವ' ಎಂಬುದು ಸಂಸ್ಕೃತದ 'ಗುರು' ಶಬ್ದವೇ ಕನ್ನಡಕ್ಕೆ ರೂಪಾಂತರಗೊಂಡುದೆಂದು ಅಭಿಪ್ರಾಯಪಡಲಾಗಿದೆ. ನೃಪತುಂಗನಿಗೆ "ಉದಾರಂ" ಎಂಬುದೊಂದು ಬಿರುದು. ಇದಕ್ಕೆ ಅನುಗುಣವಾಗಿ ಅವನು ಎಲ್ಲ ಮತಗಳಿಗಿಂತ ಮೇಲಾದ ಮತವನ್ನು - ಅಂದರೆ ಸರ್ವಧರ್ಮ ಸಮಭಾವವನ್ನು ಸಹಿಷ್ಣುತೆಯನ್ನು ಅನುಸರಿಸುತ್ತಿದ್ದನೆಂದು

ವಿಶದಪಡಿಸಲಾಗಿದೆ. ಕವಿರಾಜಮಾರ್ಗದಲ್ಲಿ ಉದಾತ್ತಾಲಂಕಾರಕ್ಕೆ ಉದಾಹರಣೆಯಾಗಿರುವ ಈ ಪದ್ಯವೊಂದು ಆತನ ಉದಾರತೆಯನ್ನು ಚಿತ್ರಿಸುತ್ತದೆ. -

ಕಸವರಮೆಂಬುದು ಮಿಗೆ ಸೈ
ರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ
ಕಸಮೇಂ ಕಸವರಮೇನು ।
ಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ (III-೧೭೬)

ಪರವಿಚಾರಸಹಿಷ್ಣುತೆ ಪರಧರ್ಮ ಸಹಿಷ್ಣುತೆ ಎಂಬುದೇ ಕಸವರ - ಅಂದರೆ ಐಶ್ವರ್ಯ. ಅದು ಇಲ್ಲವಾದರೆ ಕಸ ಮತ್ತು ಕಸವರ ಎರಡೂ ಒಂದೇ. ಎಲ್ಲರೂ ತಮ್ಮನ್ನು ತಾವು ವಶದಲ್ಲಿರಿಸಕೊಳ್ಳಲಾರದೆ ಇತರರಿಗೆ ಉಬ್ಬಸವನ್ನುಂಟುಮಾಡುವರು. ಆದು ಸರಿಯಲ್ಲವೆಂಬ ಇದು ತ್ರಿಕಾಲಾಬಾಧಿತವಾದ ರಾಷ್ಟ್ರನೀತಿಯೇ ಸರಿ.

ನೃಪತುಂಗನ ಮತ ಯಾವುದು? ಎಂಬ ಚರ್ಚೆ ಒಂದು ಇಡಿಯ ಅಧ್ಯಾಯದಲ್ಲಿ ಬಂದಿದೆ. ನೃಪತುಂಗನು ಜೈನನೆಂದು ಪ್ರತಿಪಾದಿಸಿದವರು ಅನೇಕರು. ಅವರ ಪ್ರತಿಪಾದನೆಗೆ ಆಧಾರವಾಗಿ ನೃಪತುಂಗ ವಿರಚಿತವೆನ್ನಲಾದ 'ಪ್ರಶ್ನೋತ್ತರ ರತ್ನಮಾಲಿಕಾ' ಎಂಬ ನೀತಿ ಗ್ರಂಥವನ್ನು ಉದಾಹರಿಸಿರುತ್ತಾರೆ. ಅದರಲ್ಲಿರುವ ಪದ್ಯಗಳಿಗೆ ಜೈನ ಪರಿಭಾಷೆಗನುಗುಣವಾಗಿ ಬರೆಯಲಾದ ಹಳಗನ್ನಡದ ಟೀಕು ಇದೆ. (ಇದನ್ನು ನಾನು ಶಾಸ್ತ್ರೀಯವಾಗಿ ಸಂಪಾದಿಸಿರುತ್ತೇನೆ.) ಇದಲ್ಲದೆ ನೃಪತುಂಗನ ಗುರುಗಳಲ್ಲೊಬ್ಬನಾದ ಜೈನಯತಿ ಕುಮುದೇಂದುವಿನ ಸಿರಿಭೂವಲಯದಲ್ಲಿ ನೃಪತುಂಗನ ಬಗೆಗೆ ಹೀಗೆ ಉಲ್ಲೇಖವಿದೆ -

ನಾನಾ ಜನಪದ ವೆಲ್ಲದರೊಳು ಧರ್ಮ
ತಾನು ಕ್ಷೀಣಿಸಿ ಬರ್ಪಾಗ
ತಾನಲ್ಲಿ ಮಾನ್ಯ ಖೇಟದ ದೊರೆ ಜಿನಭಕ್ತ
ತಾನು ಅಮೋಘವರ್ಷಾಂಕ

(ಸಿರಿಭೂವಲಯ - **IX**-೧೪೬)

ಈ ಪದ್ಯದಲ್ಲಿ ನೃಪತುಂಗನನ್ನು ಜಿನಭಕ್ತನೆಂದು ಹೇಳಿದೆ. ಧಾರವಾಡದ ಕಡೆಯ ವಿದ್ವಾಂಸರು ನೃಪತುಂಗನನ್ನು ಜೈನನೆಂದು, ಕವಿರಾಜಮಾರ್ಗ ಗ್ರಂಥಕರ್ತೃವೆಂದು ಸಾಧಿಸುತ್ತ ಬಂದಿದ್ದಾರೆ. ಶ್ರೀ ವಿಜಯನೇ ಕರ್ತೃವೆಂದು ಒಪ್ಪಬಹುದಾದರೂ ಆ ಶ್ರೀ ವಿಜಯ ಎಂಬುದು ನೃಪತುಂಗನ ಬಿರುದೆಂದು ಅವರ ಅಭಿಪ್ರಾಯವಿದೆ.

ಮಂಜೇಶ್ವರ ಗೋವಿಂದ ಪೈಯವರ ಸಂಶೋಧನೆಯಂತೆ ಪ್ರಶ್ನೋತ್ತರ ರತ್ನಮಾಲಿಕೆ ನೃಪತುಂಗ ಕೃತವಲ್ಲ. ವಿಮಲನೆಂಬ ಶ್ವೇತಾಂಬರ ಜೈನಗುರುವಿನದು. ನೃಪತುಂಗನು ವೈಷ್ಣವನು. ಇದನ್ನು ಮುಳಿಯ ತಮ್ಮಪ್ಪಯ್ಯನವರು ಸಮರ್ಥಿಸುತ್ತ—ನೃಪತುಂಗನು ಅತ್ಯುದಾತ್ತನಾಗಿ ಸರ್ವಮತಸಹಿಷ್ಣುವಾಗಿ ಇದ್ದನೆಂಬುದರಲ್ಲಿ ಸಂದೇಹವಿಲ್ಲ. ಆತನು ಲಕ್ಷ್ಮೀಭಕ್ತನೂ ವೀರನಾರಾಯಣ ಬಿರುದುಳ್ಳವನೂ ಆದ ವೈಷ್ಣವನೆಂದು ಭಾವಿಸುವುದು ಉಚಿತವಾಗಿದೆ ಎಂದಿದ್ದಾರೆ.

ಕವಿರಾಜಮಾರ್ಗದ ರಚನೆ ಶ್ರೀ ವಿಜಯನಿಂದ, ಕವೀಶ್ವರನಿಂದ ಆಯಿತೆಂಬ ಅಭಿಪ್ರಾಯಕ್ಕೆ ಪೋಷಣೆಗಳು ಇವೆ. ನೃಪತುಂಗ ಸಭಾಸದನೂ ವಾಗಧಿಪನೂ ಆದ ಶ್ರೀ ವಿಜಯನೇ ಗ್ರಂಥಕಾರನೆಂಬುದನ್ನು ಮುಳಿಯ ತಿಮ್ಮಪ್ಪ ಯ್ಯನವರು ಪ್ರತಿಪಾದಿಸಿದ್ದಾರೆ. ಕವಿರಾಜಮಾರ್ಗದಲ್ಲಿ ಉಲ್ಲೇಖಗೊಂಡಿರುವ ಪೂರ್ವಕವಿಗಳ ಸಾಲಿನಲ್ಲಿ ಓರ್ವ ಶ್ರೀ ವಿಜಯನಿದ್ದಾನೆ. ಇವನು ಬೇರೊಬ್ಬನೆಂದು ಅಭಿಪ್ರಾಯ ಪಟ್ಟಿದ್ದಾರೆ. ಕವಿರಾಜಮಾರ್ಗಕಾರನಾದ ಶ್ರೀ ವಿಜಯನ ಮೂಲನಾಮ ಜಯ ಅಥವಾ ಜಯಾಶ್ವ. ಜಯಾಳ್ವ ಎಂಬೀ ಹೆಸರನ್ನು ಕವಿಯು ತನ್ನ ಷಡಕ್ಷರ (ಆರು ಅಡ್ಡಪಟ್ಟಿಗಳಿರುವ) ಚಕ್ರಬಂಧ ವೃತ್ತದಲ್ಲಿ ಹುದುಗಿಸಿರುವುದನ್ನು ತಿಮ್ಮಪ್ಪಯ್ಯನವರು ಶೋಧಿಸಿ ಕಂಡಿದ್ದಾರೆ. 'ಜಯಾಳ್ವ' ಶಬ್ದದ 'ಆಳ್ವಾ' ಎಂಬುದರಲ್ಲಿ ಬರುವ ಳ ಕಾರವು ಕುಳವಲ್ಲ. ಱವೆಂದು, ಆಱ್ವ ಎಂದರೆ ತಾತ್ವಿಕ ವಿವೇಕಮಗ್ನ ಅಥವಾ ಯೋಗಿಸನ್ನಿಭ ಎಂದು ಅರ್ಥವೆಂದು ವಿವರಣೆ ಮಾಡಿದ್ದಾರೆ. 'ವಿವೇಕ ಬೃಹಸ್ಪತಿ' ಎನಿಸಿದ ನೃಪತುಂಗನ ಸಭಾಸದನಾಗಲು ಯಾವ ಅರ್ಹತೆ ಬೇಕಾಗಿದ್ದಿತೆಂಬುದಕ್ಕೆ ಪ್ರಮಾಣ ಭೂತವಾಗುವ ಅನೇಕ ಪದ್ಯಗಳು ಕವಿರಾಜಮಾರ್ಗದಲ್ಲಿವೆ. ಅವನ್ನು ಲೇಖಕರು ವಿವರಿಸಿದ್ದಾರೆ. ಕವಿರಾಜಮಾರ್ಗ ವನ್ನು ನೃಪತುಂಗದೇವಾನುಮತ ಎನ್ನಲಾಗಿದೆಯಲ್ಲದೆ, ನೃಪತುಂಗನ ಕೃತವೆಂದು ಹೇಳಿಲ್ಲದುದು ಮುಖ್ಯ ಆಧಾರವಾಗಿದೆ. ಅಂತಹ ಗ್ರಂಥಕ್ಕೆ ನೃಪತುಂಗನ ಭಾವನೆಯೇ ಸೂತ್ರ. ಗ್ರಂಥಕಾರನ ಗ್ರಂಥವೇ ವೃತ್ತಿ. ಇದರೊಳಗಿನ ಗುಣದೋಷಗಳನ್ನು ಮಹಾಸಭಾಸದರು ಅವಲೋಕಿಸಿ ತಿದ್ದುಪಡಿ ಮಾಡಿದ್ದರು''. ಎಂಬುದನ್ನು ಲೇಖಕರು ಸಂಶೋಧಿಸಿ ತಿಳಿಸಿದ್ದಾರೆ. ಕವಿರಾಜಮಾರ್ಗದ ಮೂರನೆಯ ಸಂಸ್ಕರಣದಲ್ಲಿ ಅದರ ಸಂಪಾದಕರಾದ ಎಂ. ವಿ. ಸೀ. ಅವರಿಗೆ "ಕವಿರಾಜಮಾರ್ಗದ ಕರ್ತೃ ನೃಪತುಂಗನಲ್ಲ ಶ್ರೀ ವಿಜಯನೇ" ಎಂದು ಕಂಠೋಕ್ತವಾಗಿ ಹೇಳಲು ಹೆಚ್ಚಿನ ಧೈರ್ಯ ಬಂದುದು ಕವಿರಾಜಮಾರ್ಗವಿವೇಕ ಗ್ರಂಥದಿಂದಲೆಂದು ಹೇಳಬಹುದು.

ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಕನ್ನಡನಾಡಿನ ವ್ಯಾಪ್ತಿ ಕಾವೇರಿಯಿಂದ ಗೋದಾವರಿ ವರೆಗೆ. ಅದರೊಳಗೆ ಕಿಸುವೊಳಲು. ಕೊಪಣನಗರ (ಕೊಪ್ಪಳ), ಪುಲಿಗೆರೆ (ಲಕ್ಷ್ಮೇಶ್ವರ), ಒಂಕುಂದ ಎಂಬ ನಾಲ್ಕು ಊರುಗಳ ಸ್ಥಳ ತಿರುಳ್ಗನ್ನಡನಾಡು. ತಿಮ್ಮಪ್ಪಯ್ಯನವರು ಇದಕ್ಕೆ ಇನ್ನಷ್ಟು ವಿವರಣೆ ಕೊಟ್ಟಿದ್ದಾರೆ. ಈ ನಾಲ್ಕು ಊರುಗಳಿಂದ ಕಾವೇರಿವರೆಗಿನದು 'ತೆಂಕನಾಡು'. ಗೋದಾವರಿ ವರೆಗಣದು 'ಬಡಗುನಾಡು' ಅಲ್ಲಿಂದ ಉತ್ತರಕ್ಕೆ ವಿಂಧ್ಯೆಯ ತಪ್ಪಲಿನ ರೇವಾನದಿಯ ವರೆಗಿನದು 'ಬಡಬಡಗು' ನಾಡು ಅಥವಾ 'ಉತ್ತರೋತ್ತರ ಕನ್ನಡನಾಡು'. ಈ ಉತ್ತರೋತ್ತರ ಕನ್ನಡನಾಡಿನ ಭಾಷಾಸಾಹಿತ್ಯ ಮೆಲ್ಲಮೆಲ್ಲಗೆ ಮೈಸವೆಯಿಸಿಕೊಂಡಿತು - ಎಂದು ತಿಳಿಸಿದ್ದಾರೆ. ನಮ್ಮ ಕನ್ನಡನಾಡಿನ ಭೌಗೋಲಿಕ ಇತಿಹಾಸವೇ ಹಾಗೆ! ನಾಡಿನ ವಿಸ್ತಾರ ಬರುಬರುತ್ತಾ ಹ್ರಾಸವಾಗಿದೆ. ನಮ್ಮ ಕಾಸರಗೋಡಿನ ಭಾಗ ದಕ್ಷಿಣ ಕನ್ನಡದಿಂದ ಬೇರೆಯಾದ ಉದಾಹರಣೆ ನಮ್ಮ ಕಣ್ಣ ಮುಂದೆಯೇ ಇದೆ. ಕನ್ನಡದ ಭಾಷಾಲಕ್ಷಣವನ್ನು ತಿಳಿಸುವ ವ್ಯಾಕರಣದ ಸಂಧಿಲಕ್ಷಣವೇ ಹಾಗಿದೆಯಲ್ಲವೆ? ಸಂಧಿಕಾರ್ಯದಲ್ಲಿ ಲೋಪವೇ ಪ್ರಧಾನವಾಗಿದೆ. "ಸ್ವರೇ ಸ್ವರಸ್ಯ ಲೋಪಃ" ಎಂಬುದೇ ಸಂಧಿಸೂತ್ರ. ಈ ಲೋಪದ ಪ್ರಭಾವವು ನಾಡಿನ ಹರಹಿಗೂ

ತಪ್ಪಿಹೋಗಿದೆ - ಇದು ತಿಮ್ಮಪ್ಪಯ್ಯನವರ ಮಾತಲ್ಲ. ಅವರೆಂದಂತೆ ಆಗಿರುವ ನಾಡಿನ ಹ್ರಾಸಕ್ಕೆ ನನ್ನದೊಂದು ವ್ಯಾಖ್ಯಾನ.

ಹಿಂದೆ ಇಷ್ಟೊಂದು ವಿಶಾಲವಾಗಿದ್ದ ಕನ್ನಡನಾಡಿನಲ್ಲಿ ದೇಸಿ ಅದೆಷ್ಟು ಬೇರೆ ಬೇರೆಯಾಗಿದ್ದಿತೆಂದರೆ— "ವಾಸುಗಿಯುಮಱಿಯಲಾರದೆ ಬೇಗಱುಗುಂ ದೇಸಿಬೇರೆ ವೇರಪ್ಪುದರಿಂ" - ಎಂದು ಕವಿರಾಜಮಾರ್ಗಕಾರನೇ ಹೇಳಿದ್ದಾನೆ. ಆ ದೇಸಿಗಳು ಆಯಾ ಪ್ರದೇಶದವರಿಗೆ ಸರಿಯೆಂದು ತೋರುತ್ತಿದ್ದರೂ ಇತರ ಪ್ರದೇಶದವರಿಗೆ ದೋಷ ಪೂರ್ಣವಾಗಿಯೇ ಭಾಸವಾಗುತ್ತಿದ್ದವೆಂದು ಹೇಳಿದೆ. ಆ ಕಾಲ ಕಳೆದು ಈಗ ಹನ್ನೊಂದು ಶತಮಾನಗಳುರುಳಿವೆ. ಇಂದೂ ನಾವು ಜನರ ವರ್ಗಗತವಾಗಿ ಈ ಪ್ರದೇಶಾನುಗುಣವಾಗಿ ದೇಸಿಯ ರೂಪದಲ್ಲಿ ಬೇರೆ ಬೇರೆ ಕನ್ನಡಗಳನ್ನು ಕಾಣುತ್ತಿದ್ದೇವಲ್ಲವೇ? ಉದಾಹರಣೆ : ಮಂಗಳೂರು ಕಡೆ 'ಕೂಗು' ಎಂದರೆ ಅಳು ಅಥವಾ ಅಳುವುದು. ಮೈಸೂರತ್ತ 'ಕರೆಯುವುದು' ಎಂದರ್ಥ. ಆದುದರಿಂದ ಉಭಯ ಪ್ರದೇಶದವರು ಸೇರಿದ ಕಡೆ 'ಕೂಗು' ಶಬ್ದ ಪ್ರಯೋಗವಾದಾಗ 'ಮೈಸೂರು ಕೂಗೋ?' ಮಂಗಳೂರು ಕೂಗೋ? ಎಂದು ಸ್ಪಷ್ಟೀಕರಿಸಬೇಕಾಗುವುದುಂಟು. 'ಜಾಗ್ರತೆ' ಎಂಬುದು ಅಂತಹುದೇ ಶಬ್ದ. 'ಜಾಗ್ರತೆಯಾಗಿ ಹೋಗು' ಎಂದು ಮೈಸೂರಿನಲ್ಲಿ ಹೇಳಿದಂತೆ ವೇಗವಾಗಿ ಹೋಗಬೇಕು. ಮಂಗಳೂರಿನಲ್ಲಿ ತುಂಬಾ ಎಚ್ಚರಿಕೆವಹಿಸಿ ನಿಧಾನವಾಗಿಯೇ ಹೋಗಬೇಕು. ಹೀಗೆ ದೇಸಿ ಬೇರೆ ಬೇರೆಯಾಗುವ ಉದಾಹರಣೆಗಳು ಎಷ್ಟೋ ಇವೆ. ಅವ್ಯುತ್ಪನ್ನರಾದ ಗ್ರಾಮ್ಯರ ಆಡುಮಾತಿನಲ್ಲಿ ಅಥವಾ ಜಾನಪದ ಭಾಷೆಯಲ್ಲೇ ಅಕ್ಷರ - ಶಬ್ದ -ವಾಕ್ಯಗಳ ಬಳಕೆ ಬೇರೆ ಕಡೆಯವರಿಗೆ ಗೊತ್ತಾಗದಷ್ಟು ಬೇರೆ ಬೇರೆಯಾಗಿ ಇಂದೂ ಇದೆ. ಕವಿರಾಜಮಾರ್ಗಕಾಲದಲ್ಲಿ ಒಂದು ಬಗೆಯ ಶುದ್ಧರೂಪದ ಗ್ರಾಂಥಿಕ ಭಾಷೆ ರೂಢಿಗೊಳ್ಳುತ್ತ ಬಂದಿರಬೇಕು. ಹೀಗೆ ದೇಸಿ ಬೇರೆ ಬೇರೆಯಾದರೂ ಆ ಕಾಲದಲ್ಲಿ ಈ ನಾಡಿನ ಜನರು ಹದವರಿತು ಶಬ್ದಗಳನ್ನಾಯ್ದು ನುಡಿಯುತ್ತಿದ್ದರಲ್ಲದೆ. ಅನ್ಯರಾಡಿದುದನ್ನು ಗ್ರಹಿಸಿಕೊಳ್ಳುತ್ತಿದ್ದರು. ಕಾವ್ಯರಚನೆಯನ್ನು ಮಾಡುತ್ತಿದ್ದರು. ಜಾಣರಾದವರು ಇತರರ ಭಾಷಾ ಪ್ರಯೋಗದ ನ್ಯೂನತೆಗಳನ್ನು ತಿದ್ದುತ್ತಿದ್ದರು - ಎಂದು ಹೇಳಲಾಗಿದೆ. ಆ ಕಾಲದ ಕನ್ನಡದಲ್ಲಿ ದೇಸಿಗಬ್ಬಗಳಾಗಿ ಬೆದಂಡೆ, ಚತ್ತಾಣ, ಮೆಲ್ವಾಡು, ಬಾಜನೆ ಗಬ್ಬ, ಹಾಡು - ಮುಂತಾದವು ಇದ್ದುವೆಂದು ವಿದಿತವಾಗುತ್ತದೆ. ಕವಿರಾಜಮಾರ್ಗಕಾರನು ಮಾರ್ಗಸಾಹಿತ್ಯಕ್ಕೆ ಮಹತ್ವವನ್ನು ಕೊಟ್ಟಿದ್ದರೂ ಈ ದೇಸಿಗಬ್ಬಗಳನ್ನು ಅಂದರೆ ಜಾನಪದ ಸಾಹಿತ್ಯವನ್ನು ಖಂಡಿಸಿಲ್ಲ. ಅವನ್ನೂ ಮಾನ್ಯಮಾಡಿದ್ದಾನೆ.

ಆ ಕಾಲದಲ್ಲಿ ಪ್ರಚುರವಾಗಿದ್ದ ಸಂಸ್ಕೃತ - ಪ್ರಾಕೃತಗಳಲ್ಲಿ ಲಕ್ಷ್ಯ - ಲಕ್ಷಣ ಗ್ರಂಥಗಳು ಸಾಕಷ್ಟು ಇದ್ದುವು. ಆದುದರಿಂದ ಅವುಗಳಲ್ಲಿ ಕಾವ್ಯಮಾರ್ಗ ಸುಗಮವಾಗಿದ್ದಿತು. ಆದರೆ ಕನ್ನಡದಲ್ಲಿ ಲಕ್ಷಣಗ್ರಂಥಗಳಿದ್ದಿಲ್ಲ. 'ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ' (೧-೪೮) ಅಂದರೆ, ರಚಿತವಾಗಿ ನೆಲೆಯನ್ನು ಪಡೆದುಕೊಂಡ ಕಾವ್ಯವು ಮುಂದಿನ ಕಾವ್ಯರಚನೆಗೆ ಲಕ್ಷಣ ಗ್ರಂಥವಾಗುತ್ತಿದ್ದಿತು.— ಲಕ್ಷ್ಯವೇ ಲಕ್ಷಣ ನಿರೂಪಕವಾಗಿದ್ದಿತು. ಹಿಂದೆ ರಚಿತವಾದ ಕವಿತಾಮಾರ್ಗವನ್ನು ಹಿಡಿದು ಮುಂದಿನವರು ಕಾವ್ಯರಚನೆ ಮಾಡುತ್ತಿದ್ದರೆಂದು ಅಭಿಪ್ರಾಯ

ವಾಗುತ್ತದೆ. ಆದುದರಿಂದ ಕವಿರಾಜಮಾರ್ಗ ಎಂಬ ಲಕ್ಷಣ ಗ್ರಂಥ ಅದು ಅವಶ್ಯವಾಗಿದ್ದಿತು. ಅದರ ರಚನೆ ಕಾಲದ ಕರೆಯೂ ಆಗಿದ್ದಿತು - ಎಂಬುದು ವಿದಿತವಾಗುತ್ತದೆ. ಚತ್ತಾಣ, ಬೆದಂಡೆ, ಬಾಜನೆಗಬ್ಬ ಮುಂತಾದುವುಗಳ ಲಕ್ಷಣಗಳನ್ನು ಕವಿರಾಜಮಾರ್ಗ ವಿವೇಕದಲ್ಲಿ ಯಥಾಮತಿಯಾಗಿ ವಿವರಿಸಲಾಗಿದೆ.

ಇನ್ನೀಗ ಕವಿರಾಜಮಾರ್ಗ ಮೂಲಗ್ರಂಥಕ್ಕೆ ಬರೆದ ವ್ಯಾಖ್ಯಾನರೂಪವಾಗಿರುವ, ಕವಿರಾಜಮಾರ್ಗವಿವೇಕ ಗ್ರಂಥದ ಭಾಗ ಎರಡನ್ನು ಅವಲೋಕಿಸಬಹುದು. ಮೊದಲು ಕಾವ್ಯ ದೋಷಗಳನ್ನು ಕುರಿತಾದುದು. ಪ್ರಮುಖ ದೋಷಗಳಾಗಿ ಶ್ರುತದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿ ಕಷ್ಟ ಎಂಬ ನಾಲ್ಕನ್ನು ಹೇಳಲಾಗಿದೆ. ಇವನ್ನು ಮೂಲ ದೋಷಗಳೆಂದು ತಿಮ್ಮಪ್ಪಯ್ಯನವರು ವಿವರಿಸಿದ್ದಾರೆ. ಈ ಮೂಲ ದೋಷಗಳು ಹಬ್ಬಿ ಹದಿನಾರಾಗಿವೆ. ಶ್ರುತದುಷ್ಟವೆಂಬುದು ಅಕ್ಷರಗಳ ಜೋಡಣೆಯಿಂದ ಅಶ್ಲೀಲ ಶಬ್ದಾರ್ಥವನ್ನುಂಟು ಮಾಡುವಂಥದು. ಶ್ರುತಿಕಷ್ಟವೆಂದರೆ, ಕೇಳಲೂ ಉಚ್ಚಾರಣೆಮಾಡಲೂ ಕ್ಲೇಶಕರವಾದ ಪದರಚನೆ. ದುಷ್ಕರ ಕಾವ್ಯಗಳಲ್ಲಿ ಅಂದರೆ ಚಿತ್ರಕವಿತ್ವಗಳಲ್ಲಿ ಶ್ರುತಿಕಷ್ಟವು ದೋಷವೆನಿಸದು. ಪಗರಣದಲ್ಲಿ ಶ್ರುತದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ ಎಂಬೀ ಮೂರು ಇರಬಹುದು; ಇವು ಹಾಸ್ಯೋತ್ಪಾದನೆಗೆ ಅದರಲ್ಲಿ ಸಹಕಾರಿಗಳಾಗುತ್ತವೆ. ಕವಿರಾಜಮಾರ್ಗ ಕಾಲದಲ್ಲಿ ಹಳಗನ್ನಡವನ್ನು ಹೊಲೆಗೆಡಿಸಿ, ಹೊಸಕಾವ್ಯಗಳಲ್ಲಿ ಸೇರಿಸುತ್ತಿದ್ದುದನ್ನು ಖಂಡಿಸಲಾಗಿದೆ. ಈ ಪ್ರಸ್ತಾವದಲ್ಲಿ ತಿಮ್ಮಪ್ಪಯ್ಯನವರು ಈಗಲೂ ಹಳಗನ್ನಡಗಳನ್ನು ಹೊಸದೆಂಬ ಪದ್ಯಕಾವ್ಯಗಳಲ್ಲಿ ಬೆರಸಿ, ಗದ್ಯಗಳಲ್ಲಿಯೂ ತುರುಕಿ ಬರೆವ ಲೇಖಕರು ಇದ್ದಾರೆ. ಇದು ದೋಷಗಳಲ್ಲೊಂದು" - ಎಂದಿದ್ದಾರೆ. ಸಮಸಂಸ್ಕೃತದಲ್ಲಿ ಕನ್ನಡವನ್ನು ಬೆರೆಸಬಹುದು - ಎಂದು ಕವಿರಾಜಮಾರ್ಗಕಾರನು ಹೇಳಿರುವುದನ್ನು ಲೇಖಕರು ಕೇಶಿರಾಜನ ಹೇಳಿಕೆಗೆ ಹೋಲಿಸಿ ಅಲ್ಲಿ ಹೇಳಿದ್ದು ಸಮಸಂಸ್ಕೃತವನ್ನೂ ಕನ್ನಡವನ್ನೂ ಬೆರಸಿ ಸಮಾಸಮಾಡಬಹುದೆಂಬ ಅರ್ಥದಲ್ಲಿ ಅಲ್ಲ - ಎಂದು ಸಂದೇಹ ಪರಿಹಾರವನ್ನು ಮಾಡಿದ್ದಾರೆ. ಈ ಕಾಲದ ಲೇಖಕರು ಅರಿಸಮಾಸ ದೋಷದ ಕಡೆಗೆ, ಲಕ್ಷ್ಯ ವಿಡುವುದಿಲ್ಲ. ಆದರೆ ಲಕ್ಷ್ಯವನ್ನು ಹರಿಸುತ್ತಿದ್ದರೆ ಈಗೀಗ ಪ್ರಯೋಗಗೊಳ್ಳುತ್ತಿರುವ ಸನ್ನಡತೆ, ಮಹಾಮೆಚ್ಚಿಕೆ, ನಿಲುಗಡೆ ರಹಿತ, ದುರ್ಬಗೆ (ಕೆಟ್ಟಯೋಚನೆ) - ಇಂಥವು ಕಡಮೆಯಾಗಿ, ಲಕ್ಷಣಕ್ಕೆ ಸಹ್ಯವಾಗುತ್ತಿದ್ದವಲ್ಲವೆ? ಸಂಸ್ಕೃತದ ಪದ್ಯರಚನೆಯಲ್ಲಿ ಯತಿಭಂಗವು ದೋಷಕರ. ಆದರೆ ಕನ್ನಡದಲ್ಲಿ ಖಂಡಪ್ರಾಸದ ಬಳಕೆಯಿರುವುದರಿಂದ ಯತಿಭಂಗವು ದೋಷವೆನಿಸುವುದಿಲ್ಲವೆಂದು ಕವಿರಾಜಮಾರ್ಗ ಹೇಳುತ್ತದೆ. ಖಂಡ ಪ್ರಾಸವೆಂದರೆ ಪದ್ಯದ ಖಂಡಗಳಾಗಿರುವ ಪ್ರತಿಯೊಂದು ಪಾದದಲ್ಲಿ ನಿಯತವಾದ ಖಂಡದಲ್ಲಿ ಬರುವ ದ್ವಿತೀಯಾಕ್ಷರ ಪ್ರಾಸವೆಂದು ಅಭಿಪ್ರಾಯ ಪಡಲಾಗಿದೆ.

ಶಬ್ದದೋಷಗಳೆಂದು ಕವಿರಾಜಮಾರ್ಗದಲ್ಲಿ ಹೇಳಲಾದ ಕಾರಕದೋಷ ವಚನ ದೋಷಾದಿಗಳನ್ನು ಕವಿರಾಜಮಾರ್ಗವಿವೇಕದಲ್ಲಿ ವಿವರಿಸಿರುವುದನ್ನು ಕಾಣುತ್ತೇವೆ. ಅಲ್ಲಿ ಹೇಳಿರುವಂತೆ ಕಾರಕಗಳು ಕರ್ಮ ಕರಣಾದಿಯಾಗಿ ಆರು; ವಿಭಕ್ತಿಗಳು ಏಳು. ಹೀಗೆಂದುದರ ಔಚಿತ್ಯವನ್ನು ಚರ್ಚಿಸಲಾಗಿದೆ. ಕರ್ತೃಕಾರಕವಲ್ಲವೆ? ಸಂಬಂಧವು ಕಾರಕವೆನಿಸುವುದು ಹೇಗೆ?- ಈ ಚರ್ಚೆಯ ಉತ್ತರ ಈ ಕಾಲದ ವೈಯಾಕರಣರಿಗೂ ಬೇಕು ಅದು ಇಲ್ಲಿದೆ. ಷಷ್ಠೀ

ವಿಭಕ್ತಿಯುಕ್ತ ಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ "ಸಂಬದ್ಧಕಾರಕ" ಎಂದು ಕರೆಯಬಹುದು - ಎಂಬೀ ವಿವರಣೆ ತಿಮ್ಮಪ್ಪಯ್ಯನವರ ವ್ಯಾಕರಣ ಕೌಶಲಕ್ಕೆ ನಿದರ್ಶನವಾಗಿದೆ. "ಬರಂ ಎಮಗೆ ದೇವತೆಗಳ್ ಈಗೆ" - ಎಂಬುದು ಕಾರಕದೋಷ. ಇಲ್ಲಿ ಬರಮಂ (ವರವನ್ನು - ಎಂದರ್ಥ) ಎಂದಾಗಬೇಕು. ಆದರೆ, 'ದೇವತೆಗಳ್ ಎಮಗೆ ಬರಮೀಗೆ' - ಎಂದರೆ ನಿರ್ದೋಷ. ಏಕೆಂದರೆ ಬರಮೀಗೆ ಎಂಬಲ್ಲಿ ಕ್ರಿಯಾಸಮಾಸವಾಗಿ, ದ್ವಿತೀಯಾ ವಿಭಕ್ತಿ ಲುಪ್ತವಾಗಿದೆ. ವಚನದೋಷ ವಿಚಾರವೂ ನಮಗೆ ಉದಾದೇಯವೇ ಸರಿ. ಕುದುರೆ ಓಡಿದವು. ಕೋಳಿ ಕೂಗಿದವು—ಎಂಬ ಜಾತಿವಾಚಕದಲ್ಲಿ ಕರ್ತೃ ಏಕವಚನವಾಗಿ ಕ್ರಿಯೆ ಬಹುವಚನವಾಗಿ ಇರುವದು ಸಾಧು. 'ಕುದುರೆಗಳು ಓಡಿತು' ಎಂಬುದು ಸರಿಯಲ್ಲ. ಈ ಸಂದರ್ಭದಲ್ಲಿ ಆಧುನಿಕ ವಿದ್ವಾಂಸರು ಮಾಡುತ್ತಿರುವ ವಚನದೋಷವೊಂದನ್ನು ಪ್ರಸ್ತಾವಿಸದೆ ನಿರ್ವಾಹವಿಲ್ಲ. ಜನ ಹೇಳುತ್ತಾರೆ' ಎನ್ನುತ್ತಾರಲ್ಲ? ಇದು ಹೇಗೆ ಸರಿ ? ' ಜನ ' ಶಬ್ದ ನಪುಂಸಕ ಲಿಂಗದ ಏಕವಚನ. (ನೋಡಿ. ಶಬ್ದಮಣಿದರ್ಪಣ ಸೂತ್ರ ೧೦೨) 'ಜನ ಹೇಳುತ್ತದೆ.' ಎನ್ನಬೇಕು ಅಥವಾ 'ಜನರು ಹೇಳುತ್ತಾರೆ' ಎನ್ನಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಕಡೆ ನಾಲ್ಕು ಜನ ಹೋಯಿತು. ಆ ಜನ ಹೇಳಿತು - ಎಂದು ನಪುಂಸಕಲಿಂಗದ ಪ್ರಯೋಗವೇ ವ್ಯವಹಾರದಲ್ಲಿದೆ. ಈ ಶುದ್ಧವಾದ ಅನುಸರಣೆಯನ್ನು ಈಗಿನ ವಿದ್ವಾಂಸರ (ವಿಧ್ವಂಸರ) ಅನುಕರಣೆಯಿಂದ ತಪ್ಪಾಗಿ ತಿದ್ದಬೇಕೆ ? ಇಂದಿನವರು ಮಾಡುವ ಇಂತಹ ದೋಷಗಳನ್ನು ನಾವೆತ್ತಿ ತೋರಿಸಬಹುದೆ? ತೋರಿಸಿದರೆ ಪಥ್ಯವಾದೀತೆ?

ಲಘುವಿರಬೇಕಾದಲ್ಲಿ ಗುರುವನ್ನು ಅಥವಾ ಗುರುವಿರಬೇಕಾದಲ್ಲಿ ಲಘ್ವಕ್ಷರವನ್ನು ಬಳಸುವುದು ಗುರುಲಘುದೋಷವೆನಿಸುವುದು. ಇದಕ್ಕೆ ತಿಮ್ಮಪ್ಪಯ್ಯನವರು ಉದಾಹರಣೆ ಕೊಟ್ಟಿಲ್ಲ. 'ಗದುಗಿನ ವೀರ ನಾರಯಣ' ಎಂಬ ಕುಮಾರ ವ್ಯಾಸವಾಣಿಯಲ್ಲಿ ದೀರ್ಘ ರೇಫ ಹ್ರಸ್ವವಾಗಿರುವುದು ಒಂದು ಉದಾಹರಣೆಯಾಗುತ್ತದೆ. ಆಧುನಿಕರ ಕವನಗಳಲ್ಲಿ ಇಂತಹುದಕ್ಕೆ ಇನ್ನೆಷ್ಟು ಉದಾಹರಣೆಗಳೂ ಸಿಗುತ್ತವೆ. ಕವಿಕುವೆಂಪು ಅವರು ಒಂದು ಕವನದ ನುಡಿಯನ್ನು 'ಶಂಕರ ರಮನುಜ ವಿದ್ಯಾರಣ್ಯ'. ಎಂದೇ ಎಲ್ಲ ಕಡೆ ಹಾಡಲಾಗುತ್ತಿದೆ. ಇದು ಗುರುಲಘುದೋಷಮಾತ್ರವಲ್ಲ ಅರ್ಥದೋಷವೂ ಹೌದು. ಇದನ್ನು ರಾಮಾನುಜ ಎಂದು ದೀರ್ಘಾಕ್ಷರವನ್ನು ದೀರ್ಘವಾಗಿ ಎಳೆದು ಹಾಡಲು ಸಾಧ್ಯವಿದೆ. ಆದರೆ ದೋಷದ ಅರಿವೂ ದೋಷವಿವಾರಣೆಯ ಬಗೆಗೆ ಒಲವೂ ಬೇಕಲ್ಲವೆ ?

'ಕವಿರಾಜಮಾರ್ಗ' ಎಂಬ ಹೆಸರಿಗೆ ಸಾರ್ಥಕ್ಯವನ್ನು ತಂದಿರುವ ಇನ್ನೊಂದು ಮುಖ್ಯವಾದ ವಿಷಯವೆಂದರೆ ಉತ್ತರಮಾರ್ಗ ದಕ್ಷಿಣಮಾರ್ಗ ವಿಚಾರ. ಸಂಸ್ಕೃತದ ಲಾಕ್ಷಣಿಕರು ವೈದರ್ಭಿ, ಗೌಡಿ, ಪಾಂಚಾಲಿ, ಲಾಟಿ - ಮುಂತಾಗಿ ಆಗಣ. ವಿಶಿಷ್ಟ ದೇಶಗಳ ಸಂಬಂಧದಿಂದ ಕಾವ್ಯ ಮಾರ್ಗಗಳನ್ನು ಗುರುತಿಸಿದ್ದರು. ಆದರೆ ಕವಿರಾಜಮಾರ್ಗ ಕರ್ತೃ ಎರಡೇ ಮಾರ್ಗಗಳಲ್ಲಿ ಕನ್ನಡದ ಕಾವ್ಯಗಳಲ್ಲಿ ಭಾಷಾಪ್ರಯೋಗವನ್ನು, ಗುಣಗತ ಭೇದಗಳನ್ನು , ರಸಗತ ಪ್ರಯೋಗ ವೈಶಿಷ್ಟ್ಯಗಳನ್ನು ನಿರೂಪಿಸಿದ್ದಾನೆ. ಈ ಉಭಯ ಮಾರ್ಗ ವಿಚಾರವನ್ನು 'ಮಾರ್ಗ ವಿಭಾಗ' ಎಂಬ ಅಧ್ಯಾಯದಲ್ಲಿ ಮುಳಿಯ ತಿಮ್ಮಪ್ಪಯ್ಯನವರು ವಿವರಿಸಿ ಸ್ಪಷ್ಟೀಕರಿಸಿದ್ದಾರೆ. ಹೀಗೆ

ಮಾರ್ಗಭೇದವನ್ನು ವಿವರಿಸಿದ ಅನಂತರ, ಕೊನೆಗೆ ಅಲಂಕಾರ ದರ್ಶನ ಎಂಬ ಅಧ್ಯಾಯದಲ್ಲಿ ಶಬ್ದಾಲಂಕಾರ ಅರ್ಥಾಲಂಕಾರಗಳನ್ನು ವಿವರಿಸಿದ್ದಾರೆ. ಪದ್ಯರಚನೆಯಲ್ಲಿ ಸಲ್ಲದ ಒಂದು ಮುಖ್ಯದೋಷವಿದು - ಲಘ್ವಂತ ಪದದ ಮುಂದೆ ಒತ್ತಕ್ಷರವೆ ಆದಿಯಾಗಿರುವ ಪದವನ್ನು ಬಳಸಬಾರದು— 'ಬರಿಸಿ ಕ್ಷಿತಿಪತಿಯಂ ಕುಳ್ಳಿರಿಸಿ ಪ್ರಿಯ ಕುಶಲ ವಾರ್ತೆಯಂ ನೆರೆ ಕೇಳ್ದು' ಎಂಬುದು ಸಲ್ಲದು. ಕೇಶಿರಾಜನು ಒಂದು ವ್ಯಾಕರಣ ಸೂತ್ರದಲ್ಲಿ ಇದನ್ನು ಸ್ಪಷ್ಟೀಕರಿಸಿದ್ದಾನೆ. ನಿರರ್ಥಕ ಪದಗಳ ಬಳಕೆಯನ್ನು ಕವಿರಾಜಮಾರ್ಗ ನಿಷೇಧಿಸಿದೆ.

ಶಬ್ದಾಲಂಕಾರಗಳಲ್ಲಿ ಮುಖ್ಯವೆನಿಸುವ ಪ್ರಾಸ ವಿಚಾರಗಳಲ್ಲಿ ಕವಿರಾಜಮಾರ್ಗ ಉತ್ತಮ ಮಾರ್ಗದರ್ಶಕವೆಂಬುದನ್ನು ತಿಮ್ಮಪ್ಪಯ್ಯನವರು ತೋರಿಸಿಕೊಟ್ಟಿದ್ದಾರೆ. ಕವಿರಾಜಮಾರ್ಗವು-

ನುತ ಶಬ್ದಾಲಂಕಾರದೊ
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ

ಎಂದು ದ್ವಿತೀಯಾಕ್ಷರ ಪ್ರಾಸದ ಅನಿವಾರ್ಯತೆಯನ್ನು ಹೇಳಿದೆ. ಇದನ್ನೆ ಉರು (ಶ್ರೇಷ್ಠ) ಪ್ರಾಸವೆಂದೂ ಖಂಡ ಪ್ರಾಸವೆಂದೂ ಕರೆದಿದೆ. ಇದನ್ನಲ್ಲದೆ ವಿನುತ, ಶಾಂತ, ವರ್ಗ, ಸಮೀಪಗತ, ಅನುಪ್ರಾಸ, ಅಂತಪ್ರಾಸ - ಎಂಬ ಆರು ಬಗೆಯ ಪ್ರಾಸಗಳನ್ನೂ ತಿಳಿಸಿದೆ. ಇವುಗಳಲ್ಲಿ ಪ್ರಾಸ (ಪಾದಗಳಲ್ಲಿ ದ್ವಿತೀಯಾಕ್ಷರ ಪ್ರಾಸ), ಅನುಪ್ರಾಸ, ಅಂತಪ್ರಾಸಗಳು ಮೂರು ಇವತಿಶಯಂಗಳ್ ಎಂದಿದೆ. ಹಿಂದೆ ದ್ವಿತೀಯಾಕ್ಷರ ಪ್ರಾಸವನ್ನು ಕನ್ನಡಕ್ಕೆ ಅತಿಶಯವಾದುದೆಂದ ಮೇಲೆ ಮೂರು ಇವು ಅತಿಶಯಗಳು ಎಂದರೇನು ? ಎಂಬ ಪೂರ್ವಪಕ್ಷವನ್ನೆತ್ತಿ ದ್ವಿತೀಯಾಕ್ಷರ ಪ್ರಾಸವಲ್ಲದೆ ಅನುಪ್ರಾಸ ಅಂತ್ಯಪ್ರಾಸಗಳಿದ್ದ ರಚನೆ ಇನ್ನಷ್ಟು ಅಶಿಶಯವೆನಿಸುವುದು ಎಂಬುದೆ ಇದರ ತಾತ್ಪರ್ಯವೆಂದು ತಿಮ್ಮಪ್ಪಯ್ಯನವರು ವಿವರಣೆ ಮಾಡಿದ್ದಾರೆ. ಇನ್ನುಳಿದ ಶಾಂತ ಪ್ರಾಸ, ವರ್ಗ ಪ್ರಾಸ, ಸಮೀಪ ಪ್ರಾಸಗಳು "ಪ್ರಾಸಾಭಾಸಂಗಳ್" ಎನ್ನಲಾಗಿದೆ. 'ಪ್ರಾಸಾಭಾಸಂಗಳ್' ಎಂದರೆ, ಅತಿಶಯ ವಲ್ಲದವು ಎಂಬುದಾಗಿ ಅರ್ಥವಿವರಣೆ ಮಾಡಲಾಗಿದೆ.

ಕವಿರಾಜಮಾರ್ಗದಲ್ಲಿ ಉದಾಹೃತವಾಗಿರುವ ದುಷ್ಕರಗಳೆಂದು ಕರೆಯಲಾಗದ ಚಿತ್ರ ಬಂಧಗಳಲ್ಲಿ ಕೆಲವಕ್ಕೆ ಸಾಹಸದಿಂದ ತಿಮ್ಮಪ್ಪಯ್ಯನವರು ಅರ್ಥ ಕಟ್ಟಿದ್ದಾರೆ. ಇತರರಿಗೆ ಅಷ್ಟೂ ಸಾಧ್ಯವಾಗಿಲ್ಲ. ಇದೇ ಪ್ರಕರಣದ ಕೊನೆಗೆ ಏಳು ಬಗೆಯ ಹೇಳಿಕಾಬಂಧಗಳನ್ನು ಅಂದರೆ ಒಗಟಿನಂತಿರುವ ವಿನೋದಾರ್ಥಕ ರಚನೆಗಳನ್ನು ನಾಗವರ್ಮನ ಹೇಳಿಕೆಗಳೊಡನೆ ತುಲನೆ ಮಾಡಲಾಗಿದೆ. "ಈ ಹೇಳಿಕೆಗಳೊಳಗೆ ಅಲ್ಲಲ್ಲಿ ಅರ್ಥ ಸ್ವಾರಸ್ಯ ಅಷ್ಟಷ್ಟು ತೋರಬಹುದು. ಆದರೂ ಇವೆಲ್ಲವೂ ದುಷ್ಕರ ಸಾಮ್ರಾಜ್ಯದೊಳಗಿನ ಪ್ರಜಾವರ್ಗವೇ ಸರಿ" ಎಂಬುದು ತಿಮ್ಮಪ್ಪಯ್ಯನವರ ವಿಮರ್ಶೋಕ್ತಿ.

ಕವಿರಾಜಮಾರ್ಗದ ಅರ್ಥಾಲಂಕಾರ ವಿಭಾಗದಲ್ಲಿ ಪೂರ್ವ ಶಾಸ್ತ್ರೋಕ್ತಗಳಾಗಿರುವ ಮೂವತ್ತನಾಲ್ಕು ಅಲಂಕಾರಗಳನ್ನು, ಇವಕ್ಕೆ ಸೇರಿಸಿ ಭಾವಿಕ, ಧ್ವನಿ ಎಂಬೆರಡನ್ನು - ಹೀಗೆ ಒಟ್ಟು ಮೂವತ್ತಾರು ಅರ್ಥಾಲಂಕಾರವನ್ನು ಲಕ್ಷಣೋದಾಹರಣ ಪೂರ್ವಕ ನಿರೂಪಿಸಿರುವುದನ್ನು

ಸ್ಪಷ್ಟವಾಗಿಯೂ ಸರಳವಾಗಿಯೂ ವಿವರಿಸಲಾಗಿದೆ. ರನ್ನನ ಗದಾಯುದ್ಧದಲ್ಲಿ "ಪದಿನಾರಲ್ಲವಲಂಕ್ರಿಯಾ ರಚನೆ ಮೂವತ್ತಾರು ನೇರ್ಪಟ್ಟುವು" ಎಂದಿರುವುದಕ್ಕೆ ಹೀಗೆ ಕವಿರಾಜಮಾರ್ಗದಲ್ಲಿ ಆಧಾರ ಸಿಗುತ್ತದೆ. "ಧ್ವನಿಯೆಂಬುದಳಂಕಾರಂ, ಧ್ವನಿಯಿಸುಗುಂ ಶಬ್ದದಿಂದ ಮರ್ಥದೆ ದೂಷ್ಯಂ". ಎಂಬ ಕವಿರಾಜಮಾರ್ಗದ ಸೂತ್ರವನ್ನು ಸರಿಯಾಗಿ ವ್ಯಾಖ್ಯಾನಿಸಲಾಗಿದೆ. ಮಾತಿನಲ್ಲಿ ಅಡಗಿದ ವ್ಯಂಗ್ಯವೇ ಧ್ವನಿಯಷ್ಟೆ? ಅದನ್ನು ಇತರ ಲಾಕ್ಷಣಿಕರು ರಸ ವಿಚಾರಗಳಲ್ಲಿ ಅಂತರ್ಗತಗೊಳಿಸಿದ್ದಾರೆ. ಆದರೆ ಕವಿರಾಜಮಾರ್ಗದಲ್ಲಿ ಅದೊಂದು ಉಕ್ತಿವೈಚಿತ್ರ್ಯರೂಪವಾಗಿ ಬಂದಿದ್ದು ಅರ್ಥಾಲಂಕಾರಗಳಲ್ಲಿ ಸೇರಿದೆ. ಪ್ರಯೋಗಿಸಲಾದ ಶಬ್ದದಿಂದ ಅರ್ಥಕ್ಕೆ ದೂಷ್ಯವು ಅಂದರೆ 'ಮರೆ' (ದೂಷ್ಯ ಎಂದರೆ ಉಡಿಗೆ, ಉಡುಪು) ಉಂಟಾಗಿದ್ದರೆ ಧ್ವನಿಯೆಂಬ ಅಲಂಕಾರವಾಗುವುದು. ಇದಕ್ಕೆ ಉದಾಹರಣೆಯಾಗಿ 'ಕಮಲದಲ್ಲಿ ಎರಡು ಮೀನುಗಳು ಶೋಭಿಸುತ್ತಿವೆ, ಇದು ಅಶ್ಚರ್ಯ' ಎಂಬ ಅರ್ಥದ ಮಾತಿದೆ. ಇಲ್ಲಿ 'ಕಮಲ' ಓರ್ವ ಚೆಲುವೆಯ ಮುಖವೆಂದು, ಅಲ್ಲಿ ಎರಡು ಮೀನುಗಳಂತೆ ಕಣ್ಣುಗಳೆಂದು ಹೊರಉಡುಪಿನೊಳಗಣ ಗೂಢಾರ್ಥವಾಗಿರುತ್ತದೆ. 'ಕಮಲ' ಎಂಬುದಕ್ಕೆ ನೀರು ಎಂಬರ್ಥವೂ ಇದೆ. ಈ ಅರ್ಥವನ್ನು ತೆಗೆದುಕೊಂಡಾಗ ಅದು ನಿರ್ದೋಷವೆನಿಸುವ ವಾಚ್ಯಾರ್ಥವಾಗುತ್ತದೆ. ಹೀಗೆ, ಧ್ವನಿಯಲ್ಲಿ ವಾಚ್ಯ ಮತ್ತು ವ್ಯಂಗ್ಯ ಎಂಬೆರಡೂ ಸೇರಿರಬೇಕು.

ಕವಿರಾಜಮಾರ್ಗದಲ್ಲಿ ಅರ್ಥಾಲಂಕಾರ ಪ್ರಕರಣ ಪ್ರಕಾರ, ಅಲಂಕಾರಗಳು ಮುವತ್ತಾರಾದರೂ ಮುಂದೆ ಅವುಗಳ ಸಂಖ್ಯೆ ಹೆಚ್ಚಿದೆ. ಕಾವ್ಯ ಸಾಹಿತ್ಯ ಅಭಿವೃದ್ಧಿಯಾದ ಹಾಗೆಲ್ಲ ಅವುಗಳಲ್ಲಿ ಬಳಸುವ ಉಕ್ತಿ ವೈಚಿತ್ರ್ಯ , ಭಾವ ಪ್ರಕಾಶನ - ಇವು ಹೆಚ್ಚಾಗುತ್ತ ಬಂದುದರಿಂದ, ಅವನ್ನೆಲ್ಲ ಲಕ್ಷಣಕ್ಕೆ ಒಳಪಡಿಸುವಾಗ ಅವುಗಳಲ್ಲಿ ಪರಸ್ಪರ ಭಿನ್ನತೆ ಕಾಣಿಸಿದ್ದೂ ಸಹಜ. ಇದರಿಂದಾಗಿ ಮುಂದೆ ತಿರುಮಲಾರ್ಯನು ತನ್ನ ಅಪ್ರತಿಮವೀರ ಚರಿತೆಯಲ್ಲಿ ಅರ್ಥಾಲಂಕಾರಗಳು ನೂರು ಬಗೆ ಎಂದು ಹೇಳಿದ್ದಾನೆ. ಆಧುನಿಕರು ನಿರೂಪಿಸುವವು ಇನ್ನೂ ಹದಿನೈದು ಇವೆಯೆಂದು ಹೇಳಿ ಲಕ್ಷಣೋದಾಹರಣಗಳಿಂದ ವಿವರಿಸಿದ್ದಾನೆ. ಈ ಎಲ್ಲ ಅಲಂಕಾರಗಳ ಉಪಭೇದಗಳನ್ನು ಲಕ್ಷಿಸಿದಾಗ ಅರ್ಥಾಂಲಕಾರಗಳು ಸಂಖ್ಯೆಯಲ್ಲಿ ಸುಮಾರು ಐನೂರರಷ್ಟೇ ಆಗಬಹುದು. ಇಷ್ಟೊಂದು ವಿಸ್ತಾರವಾದ ಭಾರತೀಯ ಅಲಂಕಾರಶಾಸ್ತ್ರದ ಅಧ್ಯಯನಕ್ಕೆ ಕವಿರಾಜಮಾರ್ಗ ತಳಹದಿಯಾಗಿದೆ. ಅದಕ್ಕೆ ವ್ಯಾಖ್ಯಾನಾತ್ಮಕವಾಗಿರುವ ಕವಿರಾಜಮಾರ್ಗವಿವೇಕವು ಸಾಹಿತ್ಯಾ ಭ್ಯಾಸಮಾಡುವವರಿಗೆ, ಸಾಹಿತ್ಯ ರಚನೋದ್ಯುಕ್ತರಿಗೆ ಸಾಹಿತ್ಯ ವಿಮರ್ಶಕರಿಗೆ ಅತ್ಯಂತ ಉಪಯುಕ್ತವೆಂಬುದರಲ್ಲಿ ನನಗೆ ಸಂಶಯವಿಲ್ಲ.

ಆದರೆ ಈ ಲಕ್ಷಣ ಗ್ರಂಥವನ್ನೆಲ್ಲ ಓದಿ, ಅರ್ಥಮಾಡಿ, ಮನವ ಮಾಡುವ ಕಷ್ಟವೇಕೆ? ಕವಿತೆ ಎಂಬುದು ಕವಿಯ ಹೃದಯದಲ್ಲಿ ತಾನಾಗಿ ಮೂಡಿ ಹೊರ ಹೊಮ್ಮುವಂಥದು. ಎಂದು ತಂತಮ್ಮ ಲೋಪದೋಷಗಳನ್ನು ಮುಚ್ಚಿಕೊಳ್ಳುವ ಕವಿವರರಿದ್ದಾರೆ! ಹಿಂದೆ ಕೂಡ, ಇಂಥವರಿದ್ದರಂತೆ. ಅವರು ಸಕಲ ಕಾವ್ಯ ದೋಷಗಳಿಂದಲೂ ಕೂಡಿದ ಕಾವ್ಯಗಳನ್ನೇ ಬರೆಯುತ್ತಿದ್ದರಂತೆ. ಇದು ನಮ್ಮದೆ ಆದ ದೇಸಿ. ಹೊಸತನ ಎಂದುಕೊಳ್ಳುತ್ತಿದ್ದರಂತೆ. ಅಂಥವರ ಬಗೆಯನ್ನು ಕುರಿತು ಒಂದೆಡೆ ಹೀಗೆ ಹೇಳಿದೆ -

ಛಂದಮಿದಾವುದೆಂದೊಡಿರಿವರ್ ಪದಬಂಧದೊಳೀ ಪ್ರಯೋಗಮೇ
ನೆಂದೊಡೆ ಬಯ್ವರಾವ ಕವಿಮಾರ್ಗಮಿದೊಂದೆಡೆ ಪೊಯ್ವರರ್ಥಮೇ
ನೆಂದೊಡೆ ತೊಂಡುಭಂಡುಗೆಡೆದುಟ್ಟುದನಿಕ್ಕುವರಾವ ನೀತಿ ಪೇ
ಳೆಂದೊಡೆ ಕೊಲ್ವರೀಗಳಿನ ದೇಸಿಗೆ ಬಳ್ದ ಮಹಾಕವೀಶ್ವರರ್

(ಸೂಕ್ತಿ ಸುಧಾರ್ಣವ, ಪೀಠಿಕಾಸಂಧಿ, ಪದ್ಯ ೩೫)

ಇಂತಹ ಮಹಾಕವೀಶ್ವರರಿಗೆ ಕವಿರಾಜಮಾರ್ಗವೇಕೆ ? ಅದರ ವಿವೇಕವೇಕೆ ? ಛಂದೋ ವ್ಯಾಕರಣಾದಿಗಳೇಕೆ? ಇವರದೆಲ್ಲವೂ ಸುಲಭ ಮಾರ್ಗ ; ನೇರದಾರಿ. (ಉತ್ತುಬಿತ್ತದೆ ಬೆಳೆ ತೆಗೆವ ಕೆಲಸ) 'ಎಲ್ಲ ನಡೀತದೆ' ಎನ್ನುವವರಿವರು. ಡಾ|| ಶ್ರೀನಿವಾಸ ಹಾವನೂರರು 'ಎಲ್ಲ ನಡೀತದೆ' ಎಂಬ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ನಾನದನ್ನು ಓದಿದ್ದೇನೆ. ಅದರ ಭಾವಕಿರಣ ಇಲ್ಲಿವರೆಗೂ ಇದೆ. ಇಂತಹ ಸುಲಭಾಪೇಕ್ಷಿಗಳ ಬಗೆಗೂ ಕವಿರಾಜಮಾರ್ಗ ಮಾತಾಡದೆ ಕುಳಿತಿಲ್ಲ. ಪ್ರತಿಭೆ, ಸಹಜಚತುರತೆ, ವಿದ್ವತ್ ಸೇವೆ, ಶ್ರುತ (ಕೃತಿ) ಪರಿಚಯ - ಎಂಬೀ ನಾಲ್ಕನ್ನು ಕಾವ್ಯ ಸಂಪತ್ತಿಗೆ ಕಾರಣಗಳೆಂದು ತಿಳಿಸಿದನಂತರ ಬರುವ ಮಾತಿದು -

ಪಸರಿಸಿದಾ ಬಗೆ ಮನಮಂ
ಪೊಸತಾಗೆ ನೆಗಳ್ದಲರಿಯನಾ ರಚನೆಯೊಳೇಂ
ಬಸನಂ ತನಗಿನಿತರ ಚೇ
ವಸಮೇಂ ಕವರ್ದವರುದೊಳರೆ ಕವಿಯಲ್ಲದರಂ **(೧-೧೨)**

ಈ ಬಗೆಗಳಿಂದ ಮನಸ್ಸನ್ನು ನವೀಕರಿಸಿಕೊಂಡು ಕಾವ್ಯರಚನೆ ಮಾಡಲಾರದವನಿಗೆ ರಚನಾವ್ಯಸನವೇಕೆ? ಕಾವ್ಯಬರೆಯಬೇಕೆಂಬ ಇಷ್ಟೆಲ್ಲಾ ಚಿಂತೆಯಾದರೂ ಅವನಿಗೇಕೆ? ಕವಿಯಲ್ಲದವರನ್ನು ಯಾರಾದರೂ ಸೆರೆಹಿಡಿಯುವರೆ? ಕವಿಯಲ್ಲದವರನ್ನು ಹಿಡಿದು ಜೈಲಿಗೆ ಹಾಕುತ್ತಾರೆಯೆ? - ಎಂದು ಈ ಪದ್ಯದಲ್ಲಿ ಹೇಳಿದೆ. ಪ್ರಚಲಿತವಾದ ಮಾತಿನಲ್ಲಿ ಹೇಳುವುದಾದರೆ- ಅಂಥವರನ್ನು ಕುರಿತು ನೀನೇಕೆ ಕವಿತೆ ಮಾಡುವುದಿಲ್ಲ? ಎಂದು ಬೆನ್ನಿಗೆ ಯಾರಾದರೂ ಗುದ್ದುವರೆ? ಮತ್ತೇಕೆ ಈ ಪ್ರಯಾಸದ ಕೆಲಸ?

ತ್ರಿವಿಕ್ರಮ ಪಂಡಿತನೆಂಬ ಸಂಸ್ಕೃತದ ಕವಿ ತನ್ನ 'ವಿಶ್ವಗುಣಾದರ್ಶಚಂಪು'ವಿನಲ್ಲಿ ವೈಯಾಕರಣರನ್ನು ಮಹ್ಯಾಭರಣರೆಂದು (ಜಗತ್ತಿಗೆ ಭೂಷಣ ಪ್ರಾಯರೆಂದು) ಕರೆದು, ಹೇಳಿದ ಒಂದು ಮಾತುಂಟು. ಪಂಡಿತರನ್ನು ಬೆರಳೆಣಿಕೆ ಮಾಡುವಾಗ ಮೊದಲು ವೈಯಾಕರಣನನ್ನು ಹೆಸರಿಸುವುದು ಕ್ರಮವಂತೆ. ಪ್ರಾಶಸ್ತ್ಯದೃಷ್ಟಿಯಿಂದ ಅದು ಸರಿಯಿರಬಹುದು. ಹಾಗೆಯೇ ಕನ್ನಡದಲ್ಲಿ ಪಂಡಿತ ಸಾಹಿತಿಗಳನ್ನು ಹೆಸರೆತ್ತುತ್ತ ಬೆರಲೆಣಿಸುವಾಗ ಮೊದಲು ಲೆಕ್ಕಿಸಬೇಕಾದುದು ಮುಳಿಯ ತಿಮ್ಮಪ್ಪಯ್ಯನವರನ್ನು, ಅವರು ಕನಿಷ್ಠಿಕಾಧಿಷ್ಠಿತರು, ಕವಿಕಾಳಿದಾಸನ ವಿಚಾರವಾಗಿ ಇದೊಂದು ಪದ್ಯ ಪ್ರಚಲಿತವಾಗಿದೆ.

ಪುರಾ ಕವೀನಾಂ ಗಣನಾ ಪ್ರಸಂಗೇ ಕನಿಷ್ಠಿಕಾಧಿಷ್ಠಿತ ಕಾಲಿದಾಸಃ
ಪ್ರಾಯೇಣ ತತ್ತುಲ್ಯ ಕವೇರಭಾವಾದನಾಮಿಕಾ ಸಾರ್ಥವತೀ ಬಭೂವ

- 'ಹಿಂದೆ, ಕವಿಗಳನ್ನು ಬೆರಲೆಣಿಸಿ ಲೆಕ್ಕಮಾಡುವಾಗ ಮೊತ್ತಮೊದಲ ಕಿರುಬೆರಲಿಗೆ ಕಾಳಿದಾಸನ ಹೆಸರುಬಂತು. ಅವನಿಗೆಣೆಯಾದ ಕವಿಯ ಹೆಸರು ಇಲ್ಲದುದರಿಂದ ಎರಡನೆಯ

ಬೆರಲಿಗೆ ಅನಾಮಿಕ ಎಂಬ ಹೆಸರು ಸಾರ್ಥಕವಾಯಿತು'. ಮುಳಿಯ ತಿಮ್ಮಪ್ಪಯ್ಯವನ ಅನಂತರದ ಈ ಕಾಲದಲ್ಲಿ ವಿದ್ವಾಂಸರನ್ನು ಬೆರಲೆಣಿಸುವಾಗ ಕಿರುಬೆರಲಿಗೆ ಬಂದು ನಿಲ್ಲುವ ಹೆಸರೆಂದರೆ- ಕವಿರಾಜಮಾರ್ಗವನ್ನರಿತು ವಿವೇಕ ಪಡೆದು, ಅನುಸರಿಸುವ ವಿದ್ವಾಂಸರದು. ಈ ಮಾತನ್ನು ಮನ್ನಿಸುವುದಾದರೆ, ಅಂತಹ ಅರ್ಹತೆಗೆ ಕಾರಣವಾಗುವ ಕವಿರಾಜ ಮಾರ್ಗವನ್ನು ಅಭ್ಯಸಿಸಲು ಈ ಕವಿರಾಜಮಾರ್ಗ ವಿವೇಕದಷ್ಟು ಸಹಕಾರಿಯಾಗುವ ಗ್ರಂಥವೂ ಬೇರೆ ಇಲ್ಲವೆಂದು ಹೇಳಬಹುದು.

□

---

೧. ತಿರೆಯೊಳ್ ನೆಗಳ್ತೆವಡೆದ
ಕ್ಷರಮಾಲೆಯೊಳೆಲ್ಲಮೆಂತುಟಾದಿಯಕಾರಂ
ನಿರುಪಮ ಕಲ್ಯಾಣ ಗುಣಾ
ಕರನಕ್ಷರನಂತುಟಾದಿಯೀ ಜಗಕೆಲ್ಲಂ

(ಆರ್. ನರಸಿಂಹಾಚಾರ್ಯ, ನೀತಿಮಂಜರಿ, ಭಾಗ ೨)

೨. ಕನ್ನಡದ ಪಂಡಿತ ಕವಿಗಳು ಜಾನಪದ ಕವಿಗಳನ್ನು ಅವರ ರಚನೆಗಳನ್ನು ಅಲಕ್ಷಿಸಿ ನಿಂದಿಸಿದ್ದಾರೆ, ಖಂಡಿಸಿದ್ದಾರೆ-ಎಂದು ಮಾಡತಕ್ಕ ಆರೋಪಣೆಗೆ ಬೈಗುಳಿಗೆ ಬೆಲೆಯಿಲ್ಲ. ಇದಕ್ಕೆ ಅಜ್ಞಾನ ಅಥವಾ ಪೂರ್ವಾಗ್ರಹವೇ ಕಾರಣ.

೩. ಪರಪದ ಪೂರ್ವಂ ದ್ವಿತ್ವಾ
ಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾ
ಕ್ಷರಮಾಗೆ ಸಂಧಿದೋಷಂ
ಸರೇಫಮಿದಿರಾಗೆ ಶಿಥಿಲಮೆಂದನು ಕರಿಪರ್

(ಶ.ದ.ಸೂ. ೬೯)

೧೯

ವಿಕ್ರಮಾರ್ಜುನ ವಿಜಯದಲ್ಲಿ ಭವಿಷ್ಯವಾಣಿ

ಭಾರತೀಯ ಪರಂಪರೆಯ ಮಹಾಕಾವ್ಯಗಳಲ್ಲಿ ಬರುವ ಕಥಾವಸ್ತುವನ್ನೂ ಅದರ ನಿರೂಪಣೆಯ ಕ್ರಮಕೌಶಲಗಳನ್ನೂ ಪರಿಶೀಲಿಸಿದಾಗ, ಧರ್ಮನೀತಿಗಳ ಸತ್ಪ್ರೇರಣೆಯೇ - ಉಪದೇಶವೇ, ಕಾವ್ಯೋದ್ದೇಶಗಳಲ್ಲಿ ಪ್ರಧಾನವಾಗಿರುವುದು ಭಾಸವಾಗುವುದು. (ಮಮ್ಮಟನು ಕಾವ್ಯ ಪ್ರಕಾಶದಲ್ಲಿ ತಿಳಿಸಿದ ಕಾವ್ಯೋದ್ದೇಶಗಳಾದ ಕೀರ್ತಿ, ಹಣ, ನಡೆವಳಿ, ಅಶುಭ ನಿವಾರಣೆ, ಆನಂದ, ಕಾಂತಾಸಮ್ಮಿತವಾದ ಉಪದೇಶಯೋಜನೆ - ಇವಿಷ್ಟನ್ನೂ ಇಲ್ಲಿ ನೆನೆಪಿಸಿಕೊಳ್ಳ ಬಹುದು.) ಈ ಪ್ರಧಾನ ಧ್ಯೇಯದ ಸಾಧನೆಗಾಗಿ ಹಾಗೂ ಈ ಧ್ಯೇಯ ಮಾರ್ಗವನ್ನು ಆಕರ್ಷಕ ಗೊಳಿಸುವುದಕ್ಕಾಗಿ ಕಾವ್ಯದ ಇತರೋದ್ದೇಶಗಳು ಸಮಾವೇಶಗೊಂಡಿವೆಯೆನ್ನಬಹುದು. ಇದರಿಂದ ಕಾವ್ಯರಸ ಮಗ್ನರಾದ ಸಹೃದಯ ರಸಿಕರು ಕಥಾಪುರುಷರೊಡನೆ ಬೆರೆತು ಮುನ್ನಡೆದು, "ಪಾಪವಿದು, ಪುಣ್ಯವಿದು, ಹಿತರೂಪಮಿದು, ಅಹಿತ ಪ್ರಕಾರಮಿದು, ದುಃಖೋಪಾತ್ತಮಿದು"... ಎಂದು ಸ್ಪಷ್ಟವಾಗಿ ತಿಳಿದುಕೊಳ್ಳುವರು. ಕಥಾವಸ್ತುವಿನಲ್ಲಿ ಬರುವ ವಿವಿಧ ಪಾತ್ರಗಳ ಸಹಜಗುಣಗಳಾದ ಸ್ನೇಹ , ವೈರ, ಉಪಾಯ, ಬಲಶೌರ್ಯ, ಶೀಲಾದಿಗಳನ್ನು ನೋಡಿ ಸಹಾನುತಾಪವನ್ನೂ ಕೆಲವೆಡೆ ಅವುಗಳಿಂದಲೇ ಅಸಹನೆ ಹೊಂದಿ ತುಚ್ಛೀಕಾರವನ್ನೂ ತಾಳುವರು. ನಮ್ಮ ಪರಂಪರೆಯ ಕಾವ್ಯಗಳು ಸುಖಾಂತಗಳೇ ಆಗಿದ್ದು ಅವುಗಳಲ್ಲಿ ಸತ್ಯಕ್ಕೆ ಜಯವೂ ನ್ಯಾಯಕ್ಕೆ ಸರ್ವಬಲವೂ ಧರ್ಮಕ್ಕೆ ವಿಜಯವೂ ಅಸತ್ಯ , ಅನ್ಯಾಯ, ಅಧರ್ಮಕ್ಕೆ ನಾಶವೂ ಎದ್ದು ಕಾಣುವುವು. ಕಾವ್ಯಘಟನೆಗಳ ಎಡೆ ಎಡೆಯಲ್ಲಿ ಈ ನೀತಿ ತತ್ತ್ವವನ್ನು ಸ್ಫುರಿಸಿ ತೋರಿಸುವುದಕ್ಕಾಗಿಯೂ ಅಮಂಗಲ ನಿವಾರಣೆಗಾಗಿಯೂ ಆಸುರಿ ದೈವಿಕ ದಂದ್ವ ಶಕ್ತಿಗಳ ಸಂಘರ್ಷದಲ್ಲಿ ದೈವಿಕದ ಕಡೆಗೆ ಮೆಚ್ಚನ್ನು ಕುದುರಿಸುವುದಕ್ಕಾಗಿಯೂ ಓದುಗರಲ್ಲಿ ಕಥೆಯ ಭವ್ಯ ಭವಿಷ್ಯದ ಬಗೆಗೆ ಉಜ್ವಲ ಕಲ್ಪನೆಯನ್ನು ನೆಲೆಗೊಳಿಸುವುದಕ್ಕಾಗಿಯೂ ಅವರಲ್ಲಿ ಸ್ಥಾಯಿಯಾಗಿರುವ ನೀತಿಯುತ ಆಶೆ-ಆಕಾಂಕ್ಷೆಗಳು ಕಥಾ ಸನ್ನಿವೇಶದ ಪ್ರಭಾವದಿಂದ ನೆಲೆಗೆಡುವಂತಿರುವುದನ್ನು ಕದಲದಂತೆ ಆಧರಿಸಿ ಅಚಲವಾಗಿಸುವುದಕ್ಕಾಗಿಯೂ ಕವಿಗಳು ಬಹಳ ಜಾಣ್ಮೆಯನ್ನು ಬಳಸಿಕೊಂಡಿದ್ದಾರೆ. ಅಂತಹ ಕಡೆಗಳಲ್ಲಿ ಕಥೆಯ ಕೆಲವು ಪಾತ್ರಗಳ ಮಾತಿನಿಂದಲೂ ಸ್ವವಾಣಿಯಿಂದಲೂ ಮೌಹೂರ್ತಿಕರಂತೆ ಶಕುನವಿದರಂತೆ ಸಾಮುದ್ರಿಕರಂತೆ ಜೋಯಿಸಿಗರಿಂತೆ ಭವಿಷ್ಯವನ್ನು - ಅಸತ್ಯವಾಗದ ಭವಿಷ್ಯವನ್ನು ತಿಳಿಸಿದುದು ಕಂಡುಬರುತ್ತದೆ. ಈ ಭವಿಷ್ಯದ ಸೂಚನೆ ಕಾವ್ಯಕಥಾಂತರ್ಗತ ವರ್ಣನಾಂಶವೇ ಆಗಿರುತ್ತದಲ್ಲದೆ, ಕಥೆಗೆ

ಬಾಹ್ಯಾಂಶವಾಗಿರುವುದಿಲ್ಲ. ಇದನ್ನು 'ಭವಿಷ್ಯವಾಣಿ' ಎನ್ನಬಹುದು. ಪಂಪಮಹಾಕವಿಯ ವಿಕ್ರಮಾರ್ಜುನ ವಿಜಯದಲ್ಲಿ ಭವಿಷ್ಯವಾಣಿಯನ್ನು ಆಯ್ದು ನೋಡುವುದೇ ಈ ಪ್ರಬಂಧದ ಉದ್ದೇಶ.

ಮಹಾಭಾರತದ ಪ್ರಧಾನ ವ್ಯಕ್ತಿಗಳು ಪಾಂಡವರು ಮತ್ತು ಕೌರವರು. ಪಂಪಭಾರತದಲ್ಲಿ ಅವರ ಹುಟ್ಟಿನೊಡನೆ ಹುಟ್ಟಿಕೊಂಡ ಭವಿಷ್ಯವಾಣಿ ಮಾರ್ಮಿಕವಾಗಿದೆ. ಮೊಳಿಕೆಯಲ್ಲಿ ಬೆಳೆಯ ಸಿರಿ ಅಡಗಿರುವುದಷ್ಟೆ. ಅದರಂತೆ ಕಾರ್ಯಾರಂಭದಲ್ಲಿ ಕಾರ್ಯಪರಿಣಾಮದ ಲಕ್ಷಣಸೂಚನೆಯಿರುವುದೂ ಉಂಟು. ಪಾಂಡವರಲ್ಲಿ ಒಬ್ಬೊಬ್ಬರೂ ಒಂದೊಂದು ದಿವ್ಯಾಂಶದಿಂದ ಜನಿಸಿದರು. ಧರ್ಮನ ಅಂಶದಲ್ಲಿ ಧರ್ಮಪುತ್ರನು "ಪುಟ್ಟುವುದುಂ ಧರ್ಮಮು ಮೊಡವುಟ್ಟಿದು ದೀತನೊಳ್" (೧-೧೨೨) ಎಂದು ಮುನಿಸಮಿತಿ ಹೇಳಿದಂತೆ ಇಲ್ಲಿ ಕವಿಯು ಧರ್ಮಜನ ಗುಣದ ಬೀಜವನ್ನು ಆತನ ಹುಟ್ಟಿನಲ್ಲೇ ಬಿತ್ತಿ, ಅದನ್ನು ಚೆನ್ನಾಗಿ ಬೆಳೆಯಿಸಿ, ಕೊನೆಗೆ ಕಾವ್ಯದ ಸಮಾರೋಪ ವಾಕ್ಯಗಳಲ್ಲಿ "ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್" ಎಂದು ಕೊಂಡಾಡಿ ಭವಿಷ್ಯದ ನಿರೀಕ್ಷಿತ ಫಲವನ್ನು ಪಡೆದಿದ್ದಾನೆ. ಅರ್ಜುನನನ್ನು ಗರ್ಭದಲ್ಲಿ ಪಡೆಯುವ ಮುನ್ನ ಕುಂತಿ ಹಲವು ಶುಭ ಸ್ವಪ್ನಗಳನ್ನು ಕಾಣುವಳು. ಆಕೆಯಲ್ಲಿ ಆ ಮೇಲೆ ಕಂಡು ಬಂದ ಗರ್ಭಲಕ್ಷಣ ವಿವರಣೆಯಲ್ಲಿ ಆಕೆ ಪಡೆವ ಮಗನ ಮುಂದಿನ ಮೇಲ್ಮೆ ಹೃದಯಂಗಮವಾಗಿ ನಿರೂಪಿತವಾಗಿದೆ. ಗರ್ಭಿಣಿಯಾದ ಕುಂತಿಯ ದೋಹಳದ ವರ್ಣನೆಯಿದು—

ಉರ್ಚಿದ ಬಾಳೊಳಾತ್ಮ ಮುಖಬಿಂಬಮನಳ್ತಿಯೆ ನೋಡಲುಂ ಮನಂ
ಪೆರ್ಚೆ ಧನುರ್ಲತಾಗುಣ ನಿನಾದಮನಾಲಿಸಿ ಕೇಳಲುಂ ಮನಂ
ಬೆರ್ಚದೆ ಸಿಂಹ ಪೋತಕಮನೋವಲುಮಾಕೆಯ ದೋಹಳಂ ಕರಂ
ಪೆರ್ಚಿದುದಾ ಗುಣಾರ್ಣವನ ಮುಂದಣ ಬೀರಮನಂದೆ ತೋರ್ಪವೋಲ್

(೧-೧೪೨)

ಇಷ್ಟೇ ಅಲ್ಲದೆ, ಸಪ್ತಸಾಗರಗಳ ನೀರನ್ನೊಂದು ಮಾಡಿ ಮೀಯಲೂ ಆಕೆ ಆಸೆಪಟ್ಟಳಂತೆ. ಆಕೆಯಲ್ಲಿ ಹುಟ್ಟುವ ಅರ್ಜುನನ ಶೌರ್ಯಮಯ ಭವಿಷ್ಯವು ಆಕೆಯ ದೋಹಳ ವಿವರಣೆಯಲ್ಲಿ ಹೀಗೆ ಹೊರ ಹೊಮ್ಮಿದೆ.

ಭೀಮನ ಬಾಲ್ಯದ ವರ್ಣನೆಯಲ್ಲಿ ವ್ಯಕ್ತವಾದ ಭವಿಷ್ಯ ನಿರೂಪಣೆಯನ್ನು ನೋಡಿ— ಆತನು ಪುಟ್ಟ ಹಜ್ಜೆಯಿಕ್ಕುವಾಗ ಶಿಲೆಗಳು ಹುಡಿಯಾಗುತ್ತಿದ್ದುವು ! ಮುದ್ದಾಟದಿಂದ ಆನೆಗಳನ್ನು ಹಿಡಿದು ಒತ್ತಿ ಬೆನ್ನೇರಿದನೆಂದರೆ ಅವು ನೊಂದು ಬಾಯಿ ಬಿಡುತ್ತಿದ್ದವು, ನಜ್ಜುಗುಜ್ಜಾಗುತ್ತಿದ್ದುವು! ಆತನು ಮುದ್ದಿನಿಂದ ಹತ್ತುವ, ಗುದ್ದುವ, ಹಿಡಿವ, ಎಳೆವ ಪೀಡೆಗೆ ಸಿಕ್ಕಿ ಅಂಜಿದ ಸಿಂಹಗಳು ಋಷ್ಯಾಶ್ರಮ ಪ್ರಾಂತವನ್ನೇ ಬಿಟ್ಟು ಓಡಿ ಹೋಗುತ್ತಿದ್ದುವು. (೨-೫,೬). ಎಳವೆಯಲ್ಲಿಯೇ ಬಳೆದಿರುವಂತೆ ಕಾಣಿಸಿದ ಈ ಗಂಡುಗಲಿತನ ಆತನ ಬಾಳಿನಲ್ಲಿ ಪೂರ್ಣಪಕ್ವವಾಗಿ ಫಲಿಸಿದುದು ವಿದಿತವಷ್ಟೆ.

ಪಾಂಡವ ಪ್ರಮುಖರ ಜನನ - ಬಾಲ್ಯಗಳ ಭವಿಷ್ಯವು ಹೀಗೆ ಸತ್ಪರಿಣಾಮಕಾರಿಯಾದರೆ, ಕೌರವರದು ದುಷ್ಪರಿಣಾಮಕಾರಿ. ಅವರ ಹುಟ್ಟಿನ ವರ್ಣನೆಯಲ್ಲಿಯೇ ಕೆಟ್ಟ ಭವಿಷ್ಯದ ಲಕ್ಷಣಗಳು ಕಾಣಿಸಿವೆ. ಅವರು ಹುಟ್ಟಿದುದು 'ಕ್ಷೀರಸಾಗರದಲ್ಲಿ ಕಾಲಕೂಟದ ಅಂಕುರಗಳು ಜನಿಸಿದಂತೆ' ಎಂದು ಕವಿಯು ದುಷ್ಟ ಕೌರವರ ಚರಿತ್ರ ಚಿತ್ರಣದ ನಾಂದಿಯನ್ನು ಮಾಡಿದ್ದಾನೆ. ಅವರಲ್ಲಿ ಮೊದಲಿಗನಾದ ದುರ್ಯೋಧನನು ಜನಿಸಿದಾಗ ಅಶುಭ ಸೂಚಕಗಳಾದ ಹಲವು ಉತ್ಪಾತಗಳಾದುವಂತೆ!

ಪ್ರತಿಮೆಗಳಳ್ತುವು ಮೊಳಗಿದು
ದತಿ ರಭಸದೆ ಧಾತ್ರಿ ದೆಸೆಗಳುರಿದವು ಭೂತ
ಪ್ರತತಿಗಳಾಡಿದುವೊಳರಿದು
ವತಿ ರಮ್ಯಸ್ಥಾನದೊಳ್ ಶಿವಾನಿವಹಂಗಳ್ (೧-೧೩೨)

ಈ ಉತ್ಪಾತಗಳನ್ನು ಕಂಡು "ಮುಂದರಿವ ಚದುರನಾದ ವಿದುರನು" "ಈತನೆ ನಮ್ಮ ಕುಲಕ್ಕಂ ಕೇತು ದಲ್" ಎನ್ನುವನು. ಈ ಭವಿಷ್ಯ ಲಕ್ಷಣವು ನಿಜವಾದುದೆಂದು ಭಾರತದ ಮುಂದಿನ ಘಟನೆಗಳಿಂದ ಸ್ಪಷ್ಟವಾಗುವುದು.

ಪಂಪನು ಜೋಯಿಸಿಗನಾದ ಮತ್ತಿನ ಸಂದರ್ಭವನ್ನರಿಯಲು ಕೌರವ-ಪಾಂಡವರ ಶಸ್ತ್ರ ವಿದ್ಯಾಭ್ಯಾಸ ಭಾಗಕ್ಕೆ ಬರಬೇಕು. ದ್ರೋಣನು ಅರ್ಜುನನನ್ನು ಮಾತಿನಿಂದಲೆ ಒರೆದುನೋಡಿ ಇವರೆಲ್ಲರಲ್ಲಿ ಇವನೊಬ್ಬನೆ ಧನುರ್ವಿದ್ಯಾ ಕುಶಲನಾಗುವನೆಂದು ಭವಿಷ್ಯವನ್ನು ಹೇಳಿದುದು ಕೌರವನಿಗೆ ಹಿತವೆನಿಸಿರಲಾರದು. ಅಂತಹ ಪರಿಸ್ಥಿತಿಯಲ್ಲಿ ಅಲ್ಲಿಗೆ ವಿದ್ಯೆ ಕಲಿಯಲು ಕರ್ಣನು ಬರುವನು. ಅವನ ಬರುವಿಕೆಯನ್ನು ಕವಿಯು "ಕೌರವರ್ಗೆಲ್ಲಂ ಪ್ರಾಣಂ ಬರ್ಪಾಕೃತಿಯೊಳೆ ಬಾಣಾಸನ ಬಾಣಪಾಣಿ ಕರ್ಣಂ ಬಂದಂ" (೨-೫೭) ಎನ್ನುವನು. ಆ ಸಂದರ್ಭದಲ್ಲಿ ಅರ್ಜುನನ ಮೇಲ್ಮೆಯನ್ನು ಕೇಳಿಯೂ ಕಂಡೂ ಕೌರವರಿಗಂತೂ ಪ್ರಾಣವೇ ಹೋದಂತಾಗಿತ್ತು! ಅರ್ಜುನನಿಗೆ ಸಮಸ್ಪರ್ಧಿಯಾಗುವ ವ್ಯಕ್ತಿಯೊಬ್ಬನು ಅಲ್ಲಿಗೆ ಬಂದನೆಂದೂ ಆತನು ಕೌರವರ ಪಕ್ಷದವನಾಗುವನೆಂದೂ ಕವಿಯು ಭಾವೀ ಕಲ್ಪನೆಯ ಭಾವನೆಯನ್ನಿಟ್ಟುಕೊಂಡು ಕೌರವರಿಗೆ ಪ್ರಾಣಬರುವಂತೆ ಕರ್ಣನು ಬಂದನೆಂದು ಭವಿಷ್ಯವಾಣಿಯೊಂದಿಗೆ ಹೇಳಿರುವನು. ಕರ್ಣನು 'ಗುಣಾರ್ಣವನೊಳ್ ಸೆಣಸಿ ಪಗೆಯನಭ್ಯಾಸಂ ಗೆಯ್ವಂತೆ ವಿದ್ಯಾಭ್ಯಾಸಂ ಗೆಯ್ಯೆ' ಎಂದು ಹೇಳಿದುದು ಕರ್ಣಾರ್ಜುನರ ಹಗೆತನದ ಭವಿಷ್ಯವನ್ನು ಮಾರ್ಮಿಕವಾಗಿ ನುಡಿದಂತೆಯೇ ಆಗಿದೆ.

ಮುಂದೆ ದ್ರೋಣ ಶಿಷ್ಯರ ಶಸ್ತ್ರವಿದ್ಯಾ ಪರೀಕ್ಷೆ. ಅಲ್ಲಿ ಕರ್ಣನು ಅರ್ಜುನನೊಡನೆ ಕಾದಲನುವಾಗುವನು. ದ್ರೋಣಕೃಪರು ಆತನನ್ನು ಕುಲಹೀನನೆಂದು ತಳ್ಳಿದರು. ಆಗ ಕರ್ಣನನ್ನು ಕುಲಜನನ್ನಾಗಿ ಮಾಡುವೆನೆಂದು ಕೌರವನು ಅವನಿಗೆ ಅಂಗರಾಜ್ಯಾಭಿಷೇಕವನ್ನು ಮಾಡಿ, ಆತನನ್ನು ತನ್ನ ಕೆಳೆಯನನ್ನಾಗಿ ಪರಿಗ್ರಹಿಸಿ, ಧೃತರಾಷ್ಟ್ರ ಗಾಂಧಾರಿಯರಿಗೆ ಪೊಡಮಡಿಸಿದನು. ಆ ಸಂದರ್ಭದ ಸೂರ್ಯಾಸ್ತಮಯ ಕರ್ಣನ ಭವಿಷ್ಯಸೂಚಕವಾಗಿತ್ತೆಂದು ಕವಿಯ ಅಭಿಪ್ರಾಯ. ಸೂರ್ಯನು ಕರ್ಣನಿಗೆ 'ಸುಯೋಧನನಿಂದ ನಿನಗೆ ಬಂದ ರಾಜ್ಯಸಂಪತ್ತಿಗಾಗಿ ಗರ್ವತಾಳದಿರು,

ಅರ್ಜುನನಿಂದ ಇದೆಲ್ಲವೂ ಅಸ್ತಮಾನ ಹೊಂದಲಿದೆ' ಎಂದು ಸೂಚಿಸುವಂತೆ ಅಸ್ತಮಾನವನ್ನೆಯ್ದಿದನಂತೆ. (೧-೮೬) ಆ ಮೇಲಿನ ಚಂದ್ರೋದಯವು "ಗುಣಾರ್ಣವನೊಳ್ ಉಂತೆ ಸೆಣಸಲ್ಕೆಂದು ಇರ್ಪ ಸುಯೋಧನಂಗೆ ಕಿಸುಗಣ್ಣಿದ" ರೀತಿಯಲ್ಲಿ ಇತ್ತಂತೆ. ವಂಶೋದ್ಧಾರಕನಾದ ಅರ್ಜುನನಲ್ಲಿ ಕಾದಿ ಜಯಿಸುವುದು ಕರ್ಣನಿಗೆ ಅಸಾಧ್ಯವೆಂಬ ಭವಿಷ್ಯವನ್ನು ಚಂದ್ರೋದಯಕ್ಕೆ ಅರ್ಥವಾಗಿ ಇಲ್ಲಿ ಕವಿ ನುಡಿದಿದ್ದಾನೆ.

ಪಾಂಡವರ ಅಭಿವೃದ್ಧಿಗೆ ಹೊಟ್ಟೆಗಿಚ್ಚುದಾಳಿದ ಕೌರವನು ಅವರನ್ನು ಲಾಕ್ಷಾಗೃಹದಲ್ಲಿ ಸುಡುವ ಏರ್ಪಾಡು ಮಾಡಿದ್ದಾನೆ. ಅವರನ್ನು ಅದೊಂದು ದಿನ ಬೆಳಗ್ಗೆ ಅಲ್ಲಿಗೆ ಬೀಳ್ಕೊಡುವ ಸಿದ್ಧತೆ ಆಗಿದೆ. ಪಾಂಡವರು ಅಲ್ಲಿ ಏನಾಗಿ ಬಿಡುವರೋ? ಎಂಬ ಮರುಕದಿಂದ ಓದುಗರ ಹೃದಯತಂತಿ ಮಿಡಿಯುತ್ತಿರುವುದು. ಲಾಕ್ಷಾಗೃಹ ವಾಸದ ಪರಿಣಾಮದ ಸೂಕ್ಷ್ಮ ಪರಿಚಯ ಇಲ್ಲಿ ಓದುಗರಿಗೆ ಬೇಕೆನಿಸುವುದು. ಈ ಮನೋವಿಜ್ಞಾನವನ್ನರಿತ ಮಹಾಕವಿ ಭವಿಷ್ಯವಾಣಿಯುಕ್ತವಾದ ಹೊಸ ಅರ್ಥದಿಂದ ಅಂದಿನ ಸೂರ್ಯೋದಯನ್ನು ಹೀಗೆ ವರ್ಣಿಸುವನು—

ಉದಿತೋದಿತನ್ಕೆ ನೀಂ ನಿನ
ಗುದಯದ ಮೇಲುದಯಮೆಂದು ನೆಗಟ್ದರಿಗಂಗ
ಭ್ಯುದಯಮನಱಿಪುವ ತೆಱದಿಂ
ದುದಯಾಚಲ ಚುಂಬ ಬಿಂಬನಿನನುದಯಿಸಿದಂ (೨-೯೩)

ಪಾಂಡವರನ್ನು ಅರಗಿನಾಲಯಕ್ಕೆ ಕಳುಹಿಸುವ ದಿನದ ಸೂರ್ಯೋದಯವದು ಅವರಿಗೆ ಹಾನಿ ಸೂಚಕವಾಗಿರಲಿಲ್ಲವೆಂದೇ ನಿರೂಪಿಸಲಾಗಿದೆ. ಅವರಿಗೆ ಅಭ್ಯುದಯವನ್ನು ಸೂಚಿಸುವಂತೆ ಇನನು ಉದಯಾಚಳ ಚುಂಬಿಯಾಗಿ ಉದಯಿಸಿದನೆಂದು ಹೇಳಿದುದರಿಂದ, ಮೊದಲು ಕದಡಿದ ಸಹೃದಯ ಹೃದಯಕ್ಕೆ ಸಾಂತ್ವನವು ಲಭಿಸುವುದು. ವಿದುರನ ವಿಶ್ವಾಸದಾಸನಾದ ಕನಕನಿಂದ ಪಾಂಡವರಿಗೆ ಕೌರವರ ಸಂಚು ಗೊತ್ತಾಯಿತು. ಅರ್ಧರಾತ್ರಿಯಲ್ಲಿ ಭೀಮಸೇನನು ತಾನೇ ಆ ಮನೆಗೆ ಬೆಂಕಿಗೊಟ್ಟು ತನ್ನ ತಾಯಿಯನ್ನೂ ಅಣ್ಣತಮ್ಮಂದಿರನ್ನೂ ದೂರಕ್ಕೆ ಒಯ್ಯುವನು. ಅರಗಿನ ಮನೆಯನ್ನು ಸುಡುತ್ತಿದ್ದ ಬೆಂಕಿಯ ನಾಲಗೆ ದುರ್ಯೋಧನನನ್ನು ಲೀಲೆಯಿಂದ ನುಂಗುವ ಮೃತ್ಯುವಿನ ನಾಲಗೆಯಂತೆ ಇತ್ತೆಂದು ವರ್ಣಿಸಿದ ಕವಿವಾಣಿ ದುರ್ಯೋಧನನ ಭವಿಷ್ಯದ ವಾಣಿಯೇ ಆಗಿದೆ.

ಅರಗಿನಾಲಯದಿಂದ ಪಾರಾದ ಪಾಂಡವರು ಏಕಚಕ್ರನಗರಕ್ಕೆ ಬರುವರು. ಅಲ್ಲಿದ್ದಾಗ ಒಮ್ಮೆ ಕುಂತಿಯು ನೆರೆಮನೆಯ ಆರ್ತನಾದವನ್ನು ಕೇಳಿ, ಅಲ್ಲಿಗೆ ಹೋಗಿ ಅವರಿಗಾಗಿ ತನ್ನ ಮಗನಾದ ಭೀಮನನ್ನು "ಬಕನ ಬಾರಿಗೆ" ಕೊಡಲೊಪ್ಪುವಳು. ಭೀಮನು ಈ ಸಂಗತಿಯನ್ನು ತಿಳಿದು 'ನಾಳಿನ ಉಣಿಸಂ ಎನಗೆ ದೊರೆಕೊಳಿಸಿ ಬಂದುದು ಕರಂ ಒಳ್ಳಿತಾಯ್ತು' ಎಂದು ನಗುತ್ತಿರುವನು. ಈ ಪರೋಪಕಾರ ಸಂದರ್ಭವು ಪ್ರಾಪ್ತವಾದುದಕ್ಕಾಗಿ ಉಳಿದ ನಾಲ್ವರು ತಮ್ಮ ಪುಣ್ಯಕ್ಕೆ ಮೆಚ್ಚುತ್ತಿರುವರು. ಆಗ ಸೂರ್ಯೋದಯವಾಗುವುದು. ಈ ಸಂದರ್ಭದಲ್ಲಿ

ಇದೇನು ? ಭೀಮನು ಮುಂದೆ ಬಕನಿಗೆ ಆಹುತಿಯಾಗುವನೇ ? ಎಂಬ ಭವಿಷ್ಯದ ಶಂಕಾಯುಕ್ತವಾದ ಚಿಂತೆ ಓದುಗನ ಮನವನ್ನು ತಬ್ಬುವುದು ಸಹಜ. ಇಲ್ಲಿನ ಸೂರ್ಯೋದಯವನ್ನು ವರ್ಣಿಸುತ್ತ 'ನೇಸರ್ ಮೂಡಿದುದು ಬಕಂಗೆ ಮಿಳ್ತು ಮೂಡುವ ತೆರದಿಂ' (೩-೨೭) ಬಕನ ಮರಣದ ಭವಿಷ್ಯವಾಣಿಯನ್ನು ಕವಿಯು ಸಮಯೋಚಿತ ವರ್ಣನಾಂತರ್ಗತವಾಗಿ ವ್ಯಕ್ತಗೊಳಿಸಿರುವನು.

ಜೂಜಾಟದ ದುರದೃಷ್ಟ ಸಂದರ್ಭ. ಧರ್ಮರಾಯನು ಈ ಆಟದಲ್ಲಿ ಸೋಲುತ್ತ ಬರುತ್ತಿದ್ದಾನೆ. ಜೂಜಾಟವನ್ನು ನಿಲ್ಲಿಸಲು ಭೀಷ್ಮವಿದುರರು ಕೌರವನಿಗೆ ಹೇಳಿಯೂ ಪ್ರಯೋಜನವಾಗುವುದಿಲ್ಲ. ಆಗ ಅವರು ಧೃತರಾಷ್ಟ್ರನೊಡನೆ ಹೀಗೆನ್ನುವರು -"ಪೂರ್ವದ ದುಷ್ಕರ್ಮದ ಫಲವೇ ಹುಟ್ಟುವಂತೆ ನಿನಗೆ ಈ ದುರ್ಯೋಧನನು ಹುಟ್ಟಿ ನಿಮ್ಮೆಲ್ಲರನ್ನೂ ಅಧೋಗತಿಗೆ ತಳ್ಳುತ್ತಿದ್ದಾನೆ. ಪಾಂಡವರಲ್ಲಿ ವೈರವು ಲೇಸಲ್ಲ; ಸರ್ಪಧ್ವಜನಾದ ಈತನಿಗೆ ಜೂಜಿನಲ್ಲಿ ಬಂದ ಗೆಲವು ಗೆಲವಲ್ಲ; ಅದು ವಿಷದ ಸವಿಯಂತೆ ನಾಶಕಾರಣವಾಗುವುದು". ಸತ್ಪುರುಷರು, ಹಿರಿಯರು ಕಂಡು ನುಡಿದ ಭವಿಷ್ಯವಿದು-ನೀತಿಬೋಧನೆಯೊಡನೆ ವ್ಯಕ್ತವಾಗಿದೆ. ಅದೇ ಜೂಜಾಟದ ಸಂದರ್ಭದಲ್ಲಿ ದುಶ್ಶಾಸನನು ಯಾರೇನೆಂದರೂ ಕೇಳದೆ "ತನಗಂ ಮೆಲ್ಲನೆ ಮೃತ್ಯುಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ', ಈ ಕಾರಣದಿಂದಲೇ ಕೋಪೋದ್ರಿಕ್ತನಾದ ಭೀಮನು ಪ್ರತಿಜ್ಞಾರೂಢನಾಗಿ ಮುಂದೆ ಕುರುಕ್ಷೇತ್ರದ ಮಹಾಯುದ್ಧದಲ್ಲಿ ದುಶ್ಶಾಸನನನ್ನು ಕೆಡಹಿ, ಆತನ ಹೊಟ್ಟೆ ಸೀಳಿ, ಕರುಳನ್ನು ದ್ರೌಪದಿಗೆ ಮುಡಿಸುವನು; ಅವನ ಉರಸ್ಥಳದ ಕೆನ್ನೆತ್ತರನ್ನು ಕುಡಿವನು. ದುರ್ಯೋಧನನ ಊರುಭಂಗ ಕಿರೀಟಭಂಗಗಳನ್ನು ಮಾಡುವನು. ದುಶ್ಶಾಸನನಿಗೆ ಮೇಲೆಂದಂತೆ "ಮೃತ್ಯು ಮೆಲ್ಲನೆ" ಸಾರಿದುದು ನಿಜವಾದ ಭವಿಷ್ಯೋಕ್ತಿಯೇ ಸರಿ. ಪಾಂಡವರು ವಿರಾಟನಗರದಲ್ಲಿದ್ದಾಗ ಕೀಚಕನು ಕಾಮಾತುರನಾಗಿ ದ್ರೌಪದಿಯನ್ನು ಪೀಡಿಸುವನು. ಭೀಮನು ಆಕೆಯ ಮಾನರಕ್ಷಣೆಗಾಗಿ ಅವನನ್ನು ಕೊಲ್ಲಲು ಅಣಿಯಾಗುವನು. ಆಕೆ ಮೊದಲಾಗಿ ಕೊಟ್ಟಿದ್ದ ಸೂಚನೆಯಂತೆ ಕೀಚಕನಿದ್ದ ನಾಟಕಶಾಲೆಗೆ ಭೀಮನು "ವೀರಶ್ರೀಯ ವಿವಾಹಮಂಟಪಮಂ ಪುಗುವಂತೊಳಪೊಕ್ಕು" ಸಿಂಗಬಲನೆಂಬ ಸಿಂಹವನ್ನು ನುಂಗಲು ಬಂದ ಶರಭದಂತಿದ್ದನು. ಈ ಕಾದಾಟದ ಭವಿಷ್ಯವು ನಾಟಕಶಾಲೆಯನ್ನು ಭೀಮನು ಪ್ರವೇಶಿಸಿದ ಉತ್ಪ್ರೇಕ್ಷೆಯಲ್ಲಿಯೂ ಶರಭದಂತೆ ಇದ್ದನೆಂಬ ಕಲ್ಪನೋಕ್ತಿಯಲ್ಲಿಯೂ ವ್ಯಕ್ತವಾಗಿದೆ.

ಕುರುಕ್ಷೇತ್ರದ ಮಹಾಯುದ್ಧ ತೀವ್ರಸ್ಥಿತಿಗೆ ತಲಪಿದೆ. ಕೌರವಸೇನಾಪತಿ ಭೀಷ್ಮ; ಪಾಂಡವ ಸೈನ್ಯಕ್ಕೆ ಆಗ ನಾಯಕ ಧೃಷ್ಟದ್ಯುಮ್ನ. ಅರಿಕೇಸರಿಯ ಸಮರಲೀಲೆಗೆ ಆಸ್ಪದವಾದ ಸೂರ್ಯೋದಯ ವರ್ಣನವಿದು -

ಆ ಸಮರಮುಖದೊಳಿಸೆವರಿ
ಕೇಸರಿಯ ವಿರೋಧಿ ರುಧಿರ ಜಲನಿಧಿವೋಲ್ ಸಂ
ಧ್ಯಾಸಮಯಮೆಸೆಯೆ ತಳ ತಳ
ನೇಸರ್ ಮೂಡುವುದುಮೊಡ್ಡಣಕ್ಕೆಳ್ತಂದರ್ (೧೧-೬)

ಆ ಸೂರ್ಯೋದಯದ ಸಂಜೆಗೆಂಪು ದ್ರಷ್ಟಾರನಾದ ಕವಿಗೆ ಅರಿಕೇಸರಿಯ ವೈರಿಗಳ ನೆತ್ತರ ಕಡಲಿನಂತೆ ಕಂಡುದು, ಮುಂದೆ ಅರ್ಜುನನು ಮಾಡಲಿರುವ ವೈರಿವಧಾಸೂಚಕ ಭವಿಷ್ಯವಾಣಿಯೇ ಆಗಿದೆ. ಇದಲ್ಲದೆ ಅರ್ಜುನನು ಸಂಸಪ್ತಕ ಬಲವನ್ನು ಕೊಂದು ಈಚೆ ಭಯಂಕರವಾಗಿ ಕಾದಾಡುತ್ತಿದ್ದ ದ್ರೋಣಾಶ್ವತ್ಥಾಮ ಶಲ್ಯ ಭಗದತ್ತ ಭೀಷ್ಮಾದಿಗಳಿಗೆದುರಾಗಿ ಬರುವಾಗ "ಬಂದಂ ಅರಾತಿಗೆ ಮಿಳ್ತು ಬರ್ಪವೋಲ್" ಎಂಬಲ್ಲಿಯೂ ಅರ್ಜುನನು ಮುಂದೆ ಮಾಡಲಿರುವ ಶತ್ರುಸಂಹಾರವನ್ನು ನಿರ್ದೇಶಿಸಿದಂತಾಗಿದೆ.

ಭೀಷ್ಮನ ಕಾದಾಟವೀಗ ಒಂಬತ್ತನೆಯ ದಿನಕ್ಕೆ ತಲಪಿತ್ತು. ಪಾಂಡವರ ಜಯವೆಂಬುದಂತೂ ಕನಸಿನ ಗಂಟಿನಂತೆ ತೋರತೊಡಗಿತು. ಭೀಷ್ಮನನ್ನು ಭೇದದಲ್ಲಿಯೆ ಗೆಲ್ಲಬೇಕಲ್ಲದೆ ಶೌರ್ಯದಲ್ಲಿ ಅಸಾಧ್ಯವೆಂದು ಬಗೆಯರಿತು ಧರ್ಮರಾಯನು ಭೀಷ್ಮನ ಮರೆಹೊಕ್ಕು ಭೇದವನ್ನು ಸಾಧಿಸಿದನು. ಶಿಖಂಡಿ ತನಗಿದಿರಾದಾಗ ಸಾವು ಉಂಟಾಗುವುದೆಂದೂ ಅರ್ಜುನನಿಗೆ ಈ ಸಂಗತಿಯನ್ನು ತಿಳಿಸದೆ ಈ ರೀತಿ ಮಾಡಿ ವೀರಲಕ್ಷ್ಮಿಗೆ ನೆಲೆಯಾಗಬಹುದೆಂದೂ ಹೇಳಿದ ಭೀಷ್ಮನ ಅಭಯವಚನವನ್ನು ಪಡೆದು ಧರ್ಮರಾಯನು ಶ್ರೀಕೃಷ್ಣನಿಗೆ ಈ ವಿವರವನ್ನು ತಿಳಿಸಿ ಪವಡಿಸಿದನಂತರದ ಹೊತ್ತಾರೆಯ ವರ್ಣನೆ ಹೀಗಿದೆ :

ಚಲಚಲದಾಂತು ಕಾದುವ ಸುಯೋಧನ ಸಾಧನದೊಡ್ಡುಗಳ್ ಕಲಿ
ಲ್ದಲಱ್ ತೆರಳ್ದು ತೂಳ್ದು ಬಿಱುತೋಡೆ ಗುಣಾರ್ಣವನಿಂದಮಾಜಿಯೊಳ್
ಕೊಲಿಸಿ ಸಮಸ್ತ ಧಾತ್ರಿಯುಮನಾಳಿಪೆವೆಂದುಲಿವಂತೆ ಪಕ್ಕಿಗಳ್
ಚಲಿಮಿಲಿಯೆಂಬ ಪೊಟ್ಟರೊಳೆ ಬಂದುರದೊಡ್ಡಿದನಂತಕಾತ್ಮಜಂ (೧೧-೩೩)

ಹೀಗೆ ಇಲ್ಲಿ ಹಕ್ಕಿಗಳ ಪ್ರಾತಃಕಾಲದ ಚಿಲಿಮಿಲಿಯಲ್ಲಿ ಅರ್ಜುನನು ಯುದ್ಧದಲ್ಲಿ ಮಾಡುವ ಶತ್ರುವಧೆಯ ಮತ್ತು ಆತನು ಹೊಂದುವ ಸಾಮ್ರಾಜ್ಯಾಧಿಕಾರದ ಮತ್ತು ಕೌರಸೇನೆ ಚೆಲ್ಲಾಪಿಲ್ಲಿಯಾಗಿ ಓಡುವ ಭವಿಷ್ಯವನ್ನು ಮೂಡಿಸಿದ್ದಾನೆ ಕವಿ.

ಅಭಿಮನ್ಯು ರಣದೇವತೆಗೆ ತುತ್ತಾದನಷ್ಟೆ. ಸೈಂಧವನಿಂದ ಆತನು ಹತನಾದುದನ್ನು ಕೇಳಿದ ಅರ್ಜುನನು ಸೂರ್ಯಾಸ್ತಮಯದೊಳಗೆ ವೈರಿಯನ್ನು ವಧಿಸಲು ಪ್ರತಿಜ್ಞೆ ಮಾಡುವನು. ಸೈಂಧವನನ್ನು ಕೊಲ್ಲಲು ತಕ್ಕುದಾದ ಪಾಶುಪತಾಸ್ತ್ರವಿದ್ದರೂ ಪಾಶುಪತ ಮುಷ್ಟಿಯನ್ನು ಆತನು ಇನ್ನೂ ಪಡೆದಿರಲಿಲ್ಲ. ಶ್ರೀಕೃಷ್ಣನ ನೆರವಿನಿಂದ ಅರ್ಜುನನು ಕೈಲಾಸಕ್ಕೆ ಹೋಗಿ ಶಿವನಿಂದ ಮುಷ್ಟಿಯನ್ನು ಪಡೆದುಕೊಂಡು ಬರುವನು. ಮರುದಿನದ ಸೂರ್ಯೋದಯದ ಮೂಲಕ ವ್ಯಕ್ತವಾದ ಭವಿಷ್ಯ ಹೀಗಿದೆ :

ತನ್ನ ಸುತನಳಲೊಳರ್ಜುನ
ನೆನ್ನುದಯಮನೆಯ್ದೆ ಪಾರ್ದು ಪಗೆವರ ಬೇರೊಳ್
ಬೆನ್ನೀರನೆರೆಯದಿರನದ
ನಾನ್ನೋಡುವೆನೆಂಬ ತೆರದಿನಿನನುದಯಿಸಿದಂ (೧೧-೧೩೨)

ಈ ಸೂರ್ಯೋದಯವು ಅರ್ಜುನನು ನಿಶ್ಚಯವಾಗಿಯೂ ಸೈಂಧವವಧೆಯನ್ನು ಮಾಡುವವನೆಂಬುದನ್ನು ಸ್ಪಷ್ಟವಾಗಿ ತಿಳಿಸುವ ಪೂರ್ವಸೂಚನೆಯಾಗಿದೆ.

ಭಾರತಯುದ್ಧ ಮುಂದುವರಿದು ಕೌರವಸೇನೆಯ ಮುಖ್ಯಾಧಿಕಾರ ಭೀಷ್ಮನಿಂದ ದ್ರೋಣನಿಗೆ ದಾಟಿ, ಆತನಿಂದ ಕರ್ಣನ ಕೈಗೆ ಬಂದಿದೆ. ಆತನು ಅಸಾಮಾನ್ಯ ವೀರ. ಅವನ ವೀರತೆಗೆ ರೆಕ್ಕೆ ಮೂಡಿದಂತೆ ಆತನಿಗೆ ರಥಕಲ್ಪಸಿದ್ಧಿಯುಳ್ಳ ಶಲ್ಯನ ಸಾರಥಿತ್ವವೂ ದೊರಕಿದೆ. ಕರ್ಣನಿಗೆ ದೊರೆತ ಈ ಶೌರ್ಯಾನುಕೂಲತೆಯಿಂದ ಆತನೊಡನೆ ಕಾದಾಟವೆಂಬುದು ಧರ್ಮರಾಯನಿಗೆ ಮನಃಸ್ಖಲನೆಯನ್ನೇ ಉಂಟುಮಾಡಿದೆ. ಇದುವರೆಗೆ ಜಯವನ್ನೇ ಒಲಿಸಿಕೊಂಡು ಬಂದ ಪಾಂಡವರಿಗೇನು ಯುದ್ಧದಲ್ಲಿ ಈ ಕೊನೆಯ ಭಾಗದಲ್ಲಿ ಸೋಲುಬಂದು ಬಿಡುವುದೆ? ಎಂಬ ಸಂದೇಹ ನಮ್ಮಲ್ಲಿಯೂ ಹುಟ್ಟುವಂತಿದೆ. ಈ ಸಂದೇಹವು ಭವಿಷ್ಯವಾಣಿಯನ್ನು ಕೇಳುವ ಕುತೂಹಲವನ್ನು ಕೆರಳಿಸುವುದು. ಇಲ್ಲಿ ಶ್ರೀಕೃಷ್ಣನು ಈ ಸಂದೇಹವನ್ನು ಪರಿಹರಿಸುವ ಮಾತನ್ನಾಡಿದ್ದಾನೆ. "ನೀನೆಂದಂತೆ ರಥಕಲ್ಪಮೆಂಬುದು ಶಲ್ಯಂಗೆ ಒಡವುಟ್ಟಿದುದಾದೊಡಂ ಅವರಿರ್ವರ್ಗಂ (ಕರ್ಣಶಲ್ಯರಿಗೆ) ಮೂಗುದುರಿಸಲಾಗದ ಕಡ್ಡಂ, ಅವರ್ಗೆ ಉಂತುಂ ಒಡಂಬಡಾಗದು". ಅಲ್ಲದೆ ಕರ್ಣನು ಶೂರನೂ ತ್ಯಾಗಿಯೂ ಕೀರ್ತಿಶಾಲಿಯೂ ಆಗಿದ್ದರೂ "ಅಂತು ಆಕರ್ಣಾಂತಾಕೃಷ್ಟ ಬಾಣಾವಳಿಯೊಳೆ ಹರಿಗಂ ಕರ್ಣನಂ ನಾಳೆ ಕೊಲ್ಗುಂ" (೧೨-೧೦೪) ಎಂದು ಶ್ರೀಕೃಷ್ಣನು ಧರ್ಮರಾಯನಿಗೆ ಹೇಳಿದುದು ಧೈರ್ಯೋಕ್ತಿ ಮಾತ್ರವೇ ಅಲ್ಲ, ಭವಿಷ್ಯವಾಣಿಯೂ ಆಗಿದೆ. ಇದೇ ಸಂದರ್ಭದಲ್ಲಿ ಕವಿ ತನ್ನದೇ ಆದ ಭವಿಷ್ಯವಾಣಿಯನ್ನೂ ಬೀರಿರುವನು. ಕವಿಗೆ ಭವಿಷ್ಯವನ್ನು ಹೇಳಲು ಇಲ್ಲಿಯೂ ಸೂರ್ಯೋದಯವೇ ಸಹಕಾರಿ.

> **ಇಂದೆನ್ನ ಮಗನನರ್ಜುನ**
> **ನೊಂದುಂ ತಳ್ವಿಲ್ಲದಟ್ಟಿವನವನಂ ನೀಂ ಕಾ**
> **ಯೆಂದು ಸುರಪತಿಯ ಕಾಲ್ವಿಡಿ**
> **ವಂದಮನಿಟ್ಟಿಸಿದುವು ಪಸರಿಪಿನಕಿರಣಂಗಳ್** (೧೨-೧೦೮)

ಉದಯದ ಹೊತ್ತಿಗೆ ಸೂರ್ಯನ ಕಿರಣಗಳು ಸುರಪತಿಯ ದಿಕ್ಕಿನಲ್ಲಿ (ಮೂಡಲಲ್ಲಿ) ಹರಡಿರುತ್ತವಷ್ಟೆ. ಸೂರ್ಯನು ತನ್ನ ಕರಗಳಿಂದ ಸುರಪತಿಯ ಕಾಲು ಹಿಡಿವಂತೆ (ನಮಸ್ಕರಿಸುವಂತೆ) ಆಗ ತೋರುತ್ತಿತ್ತು. ಹೀಗೆ ನಮಸ್ಕರಿಸುವ ಉದ್ದೇಶವನ್ನು ಕಲ್ಪನಾಪೂರ್ವಕವಾಗಿ ನುಡಿದು ಪಂಪಮಹಾಕವಿ ಭವಿಷ್ಯವನ್ನು ಪ್ರಕಟಿಸಿದ್ದಾನೆ. ತನ್ನ ಮಗನಾದ ಕರ್ಣನನ್ನು ಏನೂ ತಡವಿಲ್ಲದೆ ಅರ್ಜುನನು ಕೊಲಲಿರುವುದರಿಂದ ಅವನನ್ನು (ಕರ್ಣನನ್ನು) ನೀನು ಕಾಪಾಡಬೇಕು - ಎಂದು ದೇವೇಂದ್ರನನ್ನು ಪ್ರಾರ್ಥಿಸುವುದೇ ಉದ್ದೇಶವಂತೆ. ಪುತ್ರವತ್ಸಲನಾದ ಸೂರ್ಯನ ವರ್ಣನೆಯಿದು ಭವಿಷ್ಯವಾಣಿಯಲ್ಲವೇ?

ಈವರೆಗೆ ಉದ್ಧರಿಸಿ ತಿಳಿಸಿದ ಭವಿಷ್ಯವಾಣಿಯನ್ನು ಕವಿ ಎರಡು ವಿಧಗಳಿಂದ ಅಭಿವ್ಯಕ್ತಗೊಳಿಸಿದುದು ಕಂಡುಬರುತ್ತದೆ. ಕಥೆಯಲ್ಲಿ ಬರುವ ನೀತಿನಿಷ್ಠ ಪಾತ್ರಗಳಿಂದ ಸಂದರ್ಭೋಚಿತವಾಗಿ ಹೇಳಿಸಿದುದು ಒಂದು. ಮಾತುಬಾರದ ಪ್ರಾಣಿಗಳ ಕೂಗು,

ಸೂರ್ಯಚಂದ್ರ ಪಂಚಭೂತಾದಿಗಳ ಗತಿ-ಇತ್ಯಾದಿಗಳ ಮಾಧ್ಯಮದಿಂದ ಹಾಗೂ ಕವಿ ಅದಕ್ಕೆ ತಾನೇ ಅರ್ಥಕಟ್ಟಿ ತನ್ನ ಮಾತಿನಲ್ಲಿ ಭವಿಷ್ಯವನ್ನು ಹೇಳಿದುದು ಇನ್ನೊಂದು ವಿಧ. ಈ ಎರಡೂ ವಿಧಗಳು ವಿಕ್ರಮಾರ್ಜುನವಿಜಯದಲ್ಲಿ ಕಂಡುಬರುತ್ತವೆ. ಇಂತಹ ಭವಿಷ್ಯೋಕ್ತಿ ಮೂಡಿಬಂದ ಸಂದರ್ಭಗಳೂ ಮನನೀಯವಾಗಿವೆ. ಸಾಮಾನ್ಯವಾಗಿ ಲೋಕದಲ್ಲಿ ಜನನ-ಮರಣಗಳಾದಾಗ, ಜೀವನ ಪಥದಲ್ಲಿ ಪ್ರಗತಿಯ ಮಹತ್ವಾಕಾಂಕ್ಷೆ ಪ್ರಕಟಿಸಿದಾಗ, ದುರ್ಗತಿ ತಲೆದೋರಿದಾಗ-ಅದೃಷ್ಟ ಭವಿಷ್ಯವನ್ನರಿಯುವ ಕುತೂಹಲವು ಮನುಷ್ಯನಿಗೆ ಉಂಟಾಗುವುದು ಸಹಜ. ಮುಖ್ಯವಾಗಿ ಕಷ್ಟಕರವಾದ ಆಧಿ-ವ್ಯಾಧಿ-ಸಂಕಷ್ಟಗಳು, ಉತ್ಪಾತಗಳು ಕಾಣಿಸಿದಾಗಲೆಲ್ಲ ಮನುಷ್ಯನು ಅವನ್ನು ನಿವಾರಿಸುವ ಸದುದ್ದೇಶದಿಂದ ಜ್ಯೋತಿಶ್ಶಾಸ್ತ್ರ , ಸಾಮುದ್ರಿಕ ಶಾಸ್ತ್ರ , ಶಕುನ ಶಾಸ್ತ್ರಾದಿಗಳಿಂದ ಅಥವಾ ದೈವೋನ್ಮಾದಗೊಂಡು ಮುಂಬರತಕ್ಕುದನ್ನು ಹೇಳುವುದರಿಂದ ಭವಿಷ್ಯವನ್ನು ತಿಳಿದುಕೊಳ್ಳುವನು. ಜೀವನದ ಪ್ರತಿಬಿಂಬವೆನಿಸುವ ಕಾವ್ಯಗಳಲ್ಲಿ ಕೂಡ, ಕಥಾಪುರುಷರು ಜನಿಸಿದಾಗ, ಅವರು ಬಾಲ್ಯದಶೆಯಲ್ಲಿದ್ದಾಗ, ಹಾಗೂ ಅವರು ವಿಶೇಷ ಕಾರ್ಯಕ್ಕೆ ಕೈಯಿಕ್ಕಿದಾಗ ಕವಿಯು ಭವಿಷ್ಯವನ್ನು ನಿರೂಪಿಸಿದುದು ಕಂಡುಬರುತ್ತದೆ. ಕಥಾಪುರುಷರಲ್ಲಿ ಪರಸ್ಪರ ಸಂಘರ್ಷ ಜಯವನ್ನೂ ಅಸತ್ಯ ಅನ್ಯಾಯಗಳಿಗೆ ಅಪಜಯವನ್ನೂ ಭವಿಷ್ಯಸೂಚನೆಯಾಗಿ ತಿಳಿಸುವುದೂ ಅನುಸರಿಸಿದ ಕಾವ್ಯಪದ್ಧತಿ.

ಕಾವ್ಯದಲ್ಲಿ ಭವಿಷ್ಯವಾಣಿ ಬಂದಲ್ಲೆಲ್ಲ ಅಲಂಕಾರವೂ ಜತೆಗೂಡಿದೆ. ಸ್ವಭಾವೋಕ್ತಿ, ಅತಿಶಯೋಕ್ತಿ, ಉಪಮೆ, ಉತ್ಪ್ರೇಕ್ಷೆಗಳು ಭವಿಷ್ಯವಾಣಿಗೆ ಕಳೆಗೊಟ್ಟಿವೆ. ಅವುಗಳಲ್ಲೂ ಉತ್ಪ್ರೇಕ್ಷೆಯೇ ಅತ್ಯಂತ ಸಮಂಜಸವಾಗಿ ಹೊಂದಿಕೊಂಡುದು ಹಿಂದಿನ ಉದಾಹರಣೆಗಳ ಕಡೆಗೆ ದೃಷ್ಟಿ ಬೀರಿದರೆ ಕಂಡುಬರುವುದು. ಹೀಗೆ ಭವಿಷ್ಯವಾಣಿಗೆ ಉತ್ಪ್ರೇಕ್ಷೆಯೇ ಅಲಂಕಾರ ಸಾಧನವಾಗಲು ಕಾರಣವೂ ಇಲ್ಲದಿಲ್ಲ. ಭವಿಷ್ಯವಾಣಿಯೆಂಬುದು ವರ್ತಮಾನಕಾಲದ ಸ್ಥಿತಿಗತಿಗಳಿಂದ ನಿರ್ಣಯಿಸುವ ಮುಂದಿನ ಕಲ್ಪನೆಯನ್ನು ತಿಳಿಸುವುದಷ್ಟೆ. ಕಲ್ಪನೆಯೇ ಇದರ ತಳಹದಿ. ಉತ್ಪ್ರೇಕ್ಷೆಗೆ ಕವಿಕಲ್ಪನೆಯೇ ತಳಹದಿ.

ಲೋಕದಲ್ಲಿ ಭವಿಷ್ಯವನ್ನು ಶಾಸ್ತ್ರಾಧಾರದಿಂದೇನೋ ಹೇಳುವವರು ಹೇಳುವರು. ಆದರೆ ಆ ಭವಿಷ್ಯವು ನಿಜವಾಗುತ್ತದೆಯೆನ್ನುವಂತಿಲ್ಲ; ಹೆಚ್ಚಿನವೂ ಸುಳ್ಳಾಗುತ್ತವೆ. ಈ ಭವಿಷ್ಯವಾದಿಗಳು ಯಾರನ್ನು ಕುರಿತು ಅಥವಾ ಯಾವ ಘಟನೆಯನ್ನು ಕುರಿತು ಭವಿಷ್ಯವನ್ನಾಡಿದರೋ ಆ ವ್ಯಕ್ತಿಯನ್ನು ಅಥವಾ ಘಟನೆಯನ್ನು ರೂಪಿಸುವುದರಲ್ಲಿ ಅವರ ಪಾತ್ರವೇನೂ ಇರುವುದಿಲ್ಲ. ಕೆಲವೊಮ್ಮೆ ಪಾತ್ರವನ್ನು ವಹಿಸಿದರೂ ಸಾಕಷ್ಟು ಸಾಮರ್ಥ್ಯವಿಲ್ಲದಿರುವುದೇ ಇದಕ್ಕೆ ಕಾರಣವೆನ್ನಬಹುದು. ಕಾವ್ಯದಲ್ಲಿ ಕವಿವಾಣಿಯ ಮೂಲಕ ಬರುವ ಭವಿಷ್ಯವಾಣಿ ಅಂಥದಲ್ಲ. ಅದು ಪೂರ್ಣಸತ್ಯಪರಿಣಮಿಸುವುದು. ಅಲ್ಲಿ ಕವಿ ಭವಿಷ್ಯವನ್ನು ಹೇಳುವವನೂ ಹೌದು. ಆ ಭವಿಷ್ಯದ ಕಡೆಗೆ ಗುರಿತಪ್ಪದೆ ನಡೆಸುವವನೂ ಹೌದು. ಕಾವ್ಯವಸ್ತುವಿನ್ಯಾಸದಲ್ಲಿ ಅವನು "ಅಘಟಿತ ಘಟನಾ ನೂತನ ಬ್ರಹ್ಮನೇ" ಸರಿ. ಮಹಾಕವಿ ಪಂಪನಲ್ಲಿ ಈ ಮಾತು ಪೂರ್ಣ ಸಾರ್ಥಕ್ಯವನ್ನು ಹೊಂದಿದೆ.

□

೨೦

ಪಂಪನ ದೇಸಿ

ಸಂಸ್ಕೃತಕ್ಕೆ ಆದಿಕವಿ ವಾಲ್ಮೀಕಿಯಾದಂತೆ, ಕನ್ನಡಕ್ಕೆ, ಆದಿಕವಿಯೆಂದು ಮಹಾಕವಿಯೆಂದು ಖ್ಯಾತನಾದವನು ಪಂಪ. ಇವನು ಆದಿಪಂಪನೂ ಹೌದು. ಇವನ ಕಾಲ ಕ್ರಿ.ಶ. ೯೪೦. ಇದೇ ಹೆಸರಿನಲ್ಲಿ ಇನ್ನೊಬ್ಬ ಕವಿ ನಾಗಚಂದ್ರನು (ಕಾಲ : ಕ್ರಿ.ಶ. ೧೧೦೦) ಅಭಿನವಪಂಪ. ಪ್ರಕೃತ ಉಲ್ಲೇಖನೀಯನಾದ ಆದಿಪಂಪನ ಕಾವ್ಯಗಳು: ಆದಿಪುರಾಣ - ಎಂಬ ಜಿನಾಗಮ ಕಾವ್ಯ ಮತ್ತು ವಿಕ್ರಮಾರ್ಜುನ ವಿಜಯ (ಕಾವ್ಯ ಕರ್ತೃವಿನ ಹೆಸರಿನಿಂದ ಪಂಪಭಾರತ ಎಂದು ಹೆಸರುಗೊಂಡಿರುವ) ಲೌಕಿಕ ಕಾವ್ಯ ಇವೆರಡೇ. ಪಂಪಭಾರತವನ್ನು ಸ್ವತಃ ಕವಿ ಪಂಪನು 'ಸಮಸ್ತಭಾರತ' ಎಂದು ಹೆಸರಿಸಿದ್ದಾನೆ. 'ಸಮಸ್ತ' ಎಂಬುದಕ್ಕೆ ಇಲ್ಲಿ ಸಂಪೂರ್ಣ ಎಂಬ ಅರ್ಥವಲ್ಲ. ವಾಸ್ತವಿಕವಾಗಿ ಇದು ಸಂಪೂರ್ಣ ಭಾರತದ ಕತೆಯನ್ನು ಒಳಗೊಂಡೂ ಇಲ್ಲ. ಇರುವ ಕಥೆಯೂ ಯಥಾವತ್ತಾಗಿ ಇಲ್ಲ. ಹಾಗಿದ್ದರೆ, ಈ ಹೆಸರೇಕೆ ಬಂತು?

ಪಂಪನ ಆಶ್ರಯದಾತನಾದ, ವಿಕ್ರಮಾರ್ಜುನ ಎಂಬ ಬಿರುದುಳ್ಳ ಚಾಲುಕ್ಯ ಅರಿಕೇಸರಿ ಇಲ್ಲಿ ಕಥಾನಾಯಕ. ಅವನನ್ನು ಮಹಾಭಾರತದ ಅರ್ಜುನನೊಂದಿಗೆ ಇದರಲ್ಲಿ ಸಮೀಕರಿಸಲಾಗಿದೆ. ಮಹಾಭಾರತದ ಇತರ ಪಾತ್ರಗಳನ್ನು ಇತಿಹಾಸಪುರುಷರೊಂದಿಗೆ ಸಮಾಸಗೊಳಿಸಿದೆ. ಹೀಗೆ ಇದು ಪ್ರಸ್ತುತದಲ್ಲಿ ಅಪ್ರಸ್ತುತದ್ಯೋತಕವಾಗುವ ಸಮಾಸೋಕ್ತಿ ಎಂಬ ಅಲಂಕಾರಕ್ಕೆ ಅನುಗುಣವಾಗುವ ಕಥಾವಸ್ತುವುಳ್ಳುದಾಗಿ. 'ಸಮಸ್ತಭಾರತ' ಎನಿಸಿದೆ. ಇದನ್ನು ಕವಿ ತನ್ನ ಮಾತಿನಲ್ಲೇ ಸ್ಪಷ್ಟಪಡಿಸಿದ್ದಾನೆ - (೧-೧೧)

ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ, ವರ್ಣಕಂ
ಕತೆಯೊಳೊಡಂಬಡಂ ಪಡೆಯೆ ಪೇಳ್ದೊಡೆ ಪಂಪನೆ ಪೇಳ್ಗುಮೆಂದು ಪಂ
ಡಿತರೆ ತಗುಳ್ದು ಬಚ್ಚಳಿಸೆ ಪೇಳಲೊಡರ್ಚಿದೆನೀ ಪ್ರಬಂಧಮಂ (೧-೧೧)

ಇಂತಹದೊಂದು ಅಪೂರ್ವ ರೀತಿಯಲ್ಲಿ ಸಮಸ್ತಭಾರತ ಎಂದೆನಿಸುವಂತೆ ಕಾವ್ಯ ರಚನೆಯನ್ನು ಬೇರೆ ಯಾವ ಪೂರ್ವ ಕವಿಯೂ ಮಾಡಿಲ್ಲವೆಂಬುದೂ ಇಂಥದನ್ನು ರಚಿಸುವುದಾದರೆ ಪಂಪನು ಮಾತ್ರ ರಚಿಸಬಲ್ಲನೆಂದೂ ಆ ಕಾಲದ ಪಂಡಿತರು ಹೇಳುತ್ತಿದ್ದರೆಂಬುದು ಈ ಮಾತಿನಿಂದ ಗೊತ್ತಾಗುತ್ತದೆ. ಹೀಗೆ ಸಮಸ್ತಭಾರತವಾಗಿರುವುದು ಪಂಪನ ಈ ಕಾವ್ಯದ ಒಂದು ಪೆಂಪು.

ಪಂಪನ ವಾಗ್ವಿಲಾಸವನ್ನು, ಛಂದೋವೈಶಿಷ್ಟವನ್ನು, ಕಾವ್ಯಗುಣವನ್ನು, ಪಾತ್ರಚಿತ್ರಣದ ಸೊಗಸನ್ನು, ರಸಾಲಂಕಾರ ವೈಭವವನ್ನು, ರೀತಿಯನ್ನು ಅವನಿಂದೀಚೆಯ ಅನೇಕ ಕವಿಗಳು, ವಿಮರ್ಶಕರು, ವಿದ್ವಾಂಸರು ಮೆಚ್ಚಿ ಹೊಗಳಿದ್ದಾರೆ. ಹಳಗನ್ನಡ ಕವಿಗಳ ಛಂದೋಬದ್ಧತೆಯನ್ನು ಕವಿಪದ್ಧತಿಗಳನ್ನು ಬಗೆಬಗೆಯಾಗಿ ತೆಗಳುವ, ತಿರಸ್ಕರಿಸುವ ಸಂಪ್ರದಾಯದ ಅತ್ಯಾಧುನಿಕ ವಿದ್ವನ್ಮನ್ಯರು ಕೂಡ, ಪಂಪನನ್ನು ಅವಗಣಿಸುವುದಿಲ್ಲ. ಅಷ್ಟರ ಮಟ್ಟಿಗೆ ಪಂಪನು ಎಲ್ಲ ಕನ್ನಡಿಗರಿಗೆ ಗೌರವಾರ್ಹನಾಗಿದ್ದಾನೆ. 'ಪಂಪನ ದೇಸಿ' ಎಂಬುದೇ ಪ್ರಸ್ತುತ ಪ್ರತಿಪಾದ್ಯ ವಿಷಯವಾಗಿರುವುದರಿಂದ, ಇತರ ವಿಷಯಗಳು ಇಲ್ಲಿ ಅಪ್ರಸ್ತುತ, ಕೇವಲ ಸೂಚ್ಯ.

'ದೇಸಿ' ಎಂಬುದರ ಜೊತೆಗೂಡಿ ಬರುವ ಇನ್ನೊಂದು ಮುಖ್ಯ ಅಂಶ 'ಮಾರ್ಗ'. ಮಾರ್ಗ, ದೇಸಿ ಎಂಬಿವೆರಡೂ ಒಡವೆರೆದು ಪಂಪನ ಕೃತಿಗಳಿಗೆ ಮಹತ್ತ್ವವನ್ನು ತಂದ ಅಂಶಗಳಾಗಿರುತ್ತವೆ. ಪಂಪನು ತನ್ನ ಆದಿಪುರಾಣದ ಕೊನೆಯ ಭಾಗದಲ್ಲಿ ಹೇಳಿರುವುದು ಪ್ರಕೃತ ಉಲ್ಲೇಖನೀಯ -

ತ್ರಿದಶಸ್ತುತ್ಯಮಿದಾದಿದೇವ ಚರಿತಂ ಕರ್ಣಾಮೃತಸ್ಯಂದಿಯ
ಕ್ಕಿದು ಭವ್ಯಾವಳಿಗೆಂದು ಪೇಳಿಸೆ ಬುಧರ್ ಸ್ವರ್ಗಾಪವರ್ಗಕ್ಕಮಾ
ಸ್ಪದಮಪ್ಪಾದಿಪುರಾಣ ವಸ್ತುಕೃತಿಯಂ ಪೇಳ್ದಂ ಬೆಡಂಗಪ್ಪ ಮಾ
ರ್ಗದೊಳಂ ದೇಸಿಯೊಳಂ ಪೊದಳ್ದಿಸೆವಿನಂ ಸಂಸಾರಸಾರೋದಯಂ (೧೬-೭೮)

ಮಾರ್ಗ-ದೇಸಿ ಎಂಬಿವೆರಡೂ ಒಡವೆರೆದು ಸೊಗಸಾಗಿರುವ ಕಾವ್ಯ ಪಂಪನ ಆದಿಪುರಾಣ. ಆದಿಪುರಾಣವನ್ನು ರಚಿಸಿದನಂತರ ಅವನು ಬರೆದುದು ವಿಕ್ರಮಾರ್ಜುನವಿಜಯ. ಇದು ಕೂಡ, ದೇಸಿ ಮಾರ್ಗ ಎಂಬ ಉಭಯ ಲಕ್ಷಣಗಳಿಂದ ಒಪ್ಪಿದುದು. ಪಂಪನು ಒಪ್ಪಿರುವ ಕಾವ್ಯಲಕ್ಷಣವನ್ನು ತಿಳಿಸುತ್ತ ಅದು ವಸಂತಕಾಲದ ಮಾಮರದಂತೆ ಶೋಭಾಯಮಾನವಾದುದು ಎಂದು ವರ್ಣಿಸುವಲ್ಲಿ ಮಾಡಿರುವ ಅವನ ಆಲಂಕಾರಿಕ ನಿರೂಪಣೆ ಹೀಗಿದೆ - (೧-೮)

ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು, ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಿಂ ಬಳಲ್ದು ತುಂ
ಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೊಲ್

ಈ ನಿರೂಪಣೆಯಂತೆ, ಉತ್ತಮ ಕಾವ್ಯವಾಗಬೇಕಾದರೆ, ಅದರಲ್ಲಿ ಹೊಸತಾದ ಭಾವನೆ ಇರಬೇಕು, ಅದು ಮೃದುಬಂಧದಲ್ಲಿ ಒಂದಿರಬೇಕು. ದೇಸಿಯಲ್ಲಿ ಒಳಹೊಕ್ಕಿರಬೇಕು. ಮತ್ತೆ ಮಾರ್ಗದಲ್ಲಿ ಮುಂದುವರಿದಿರಬೇಕು. ಇಂತಹ ಕಾವ್ಯವು ಎಳಮಾವು ಸುಗ್ಗಿಯಲ್ಲಿ (ವಸಂತಕಾಲದಲ್ಲಿ) ಕೆಂಪಾದ ಚಿಗುರಿನಿಂದ ಹೂಗಳಿಂದ ತುಂಬಿಗಳಿಂದ ಹಾಡುವ ಕೋಗಿಲೆಗಳಿಂದ ಒಪ್ಪುವಂತೆ ಶೋಭಾಯಮಾನವಾಗುವುದು. ಪಂಪನ ರಚನೆ ಅಂತಹದು.

ಮಾರ್ಗ-ದೇಸಿ :

ಪಂಪನ ದೇಸಿಯನ್ನು ಸಮೀಕ್ಷಿಸುವುದಕ್ಕೆ, ಪ್ರಾಸ್ತಾವಿಕವಾಗಿ ಮಾರ್ಗ - ದೇಶಿಗಳೆರಡರ ವ್ಯಾಪ್ತಿಯನ್ನು ಸ್ವಲ್ಪ ವಿವರಿಸುವುದು ಅವಶ್ಯ. ಸಾಹಿತ್ಯ - ಸಂಗೀತ ಎಂಬೆರಡರಲ್ಲಿಯೂ ಮಾರ್ಗ - ದೇಶಿ ಎಂಬ ಪ್ರಭೇದವಿರುವುದಾಗಿ ಲಾಕ್ಷಣಿಕರು ಹೇಳಿದ್ದಾರೆ. ಅಷ್ಟೇ ಏಕೆ? ಜನರ ಸಂಸ್ಕೃತಿ, ವೈದ್ಯ, ಆಚಾರ, ಆಹಾರ, ಉಡುಗೆ ತೊಡುಗೆಗಳಂತಹ ಬಾಹ್ಯವರ್ತನೆಗಳಲ್ಲಿಯೂ ನಾವು ಕಾಣುವಂತ ದೇಸಿ ಇರುತ್ತದೆ. ಸಂಗೀತ ವಿಷಯಕ್ಕೆ ಸಂಬಂಧಿಸಿದಂತೆ 'ಸಂಗೀತರತ್ನಾಕರ' ದ ಉಲ್ಲೇಖವಿದು : -

ಗೀತಂ ವಾದ್ಯಂ ತಥಾ ನೃತ್ತಂ ತ್ರಯಂ ಸಂಗೀತಮುಚ್ಯತೇ
ಮಾರ್ಗೋ ದೇಶೀತಿ ತದ್ ದ್ವೇಧಾ ತತ್ರ ಮಾರ್ಗಸ್ಸ ಉಚ್ಯತೇ
ಯೋ ಮಾರ್ಗಿತೋ ವಿರಿಂಚಾದ್ಯೈಃ ಪ್ರಯುಕ್ತೋ ಭರತಾದಿಭಿಃ
ದೇವಸ್ಯ ಪುರತಃ ಶಂಭೋರ್ನಿಯತೋಭ್ಯುದಯಪ್ರದಃ
ದೇಶೇ ದೇಶೇ ಜನಾನಾಂ ಯದ್ರುಚ್ಯಾ ಹೃದಯರಂಜಕಂ
ಗೀತಂ ಚ ವಾದನಂ ನೃತ್ತಂ ತದ್ದೇಶೀತ್ಯಭಿಧೀಯತೇ ॥

(ತಾತ್ಪರ್ಯ : ಗೀತ (ಹಾಡು), ವಾದನ, ನೃತ್ಯ ಈ ಮೂರನ್ನು ಸಂಗೀತವೆನ್ನುವರು. ಅದು ಮಾರ್ಗ ದೇಶಿ ಎಂದೆರಡು ವಿಧ. ಮಾರ್ಗ ಎಂದರೆ, ಬ್ರಹ್ಮ ಭರತ ಮುಂತಾದವರ ವಿಶೇಷ ಅನ್ವೇಷಣೆಯಿಂದ ಶಿಷ್ಟರೂಪಗೊಂಡು ಶಿವನ ಮುಂದೆ ಪ್ರಯೋಗವಾದುದು. ಬೇರೆ ಬೇರೆ ಪ್ರದೇಶಗಳ ಬೇರೆ ಬೇರೆ ಅಭಿರುಚಿಗನುಗುಣವಾಗಿ ವಿಭಿನ್ನವಾಗಿ ಕಾಣಿಸುವ ಗೀತ ವಾದನ ನೃತ್ಯಗಳು 'ದೇಶಿ' ಎನಿಸುತ್ತವೆ.) ಜಗದೇಕಮಲ್ಲನ 'ಸಂಗೀತಚೂಡಾಮಣಿ' ಎಂಬ ಗ್ರಂಥದಲ್ಲಿಯೂ ಹೀಗೆ ಜಾನಪದ ಲಕ್ಷಣಗಳುಳ್ಳುದೇ 'ದೇಶಿ' ಎಂಬುದಾಗಿ ಹೇಳಿದೆ :

ದೇಶೇಷು ದೇಶೇಷು ನರೇಶ್ವರಾಣಾಂ ಕುರ್ಯಾಜ್ಜನಾನಾಮಪಿ ವರ್ತನಂ ಯಥಾ
ಗೀತಂ ಚ ವಾದ್ಯಂ ಚ ತಥಾ ಚ ನೃತ್ಯಂ ದೇಶೀತಿ ನಾಮ್ನಾ ಪರಿಕೀರ್ತಿತಂ ಸಾ
(ಸಂಗೀತ ಚೂಡಾಮಣಿ - ಗಾಯಕವಾಡ ಗ್ರಂಥಮಾಲಾ)

ಸಂಗೀತ ಶಾಸ್ತ್ರಕ್ಕೆ ಹೇಳಿರುವ ಈ ನಿರೂಪಣೆ ಸಾಹಿತ್ಯಕ್ಕೂ ಅಧ್ಯಾಹಾರವಾಗುತ್ತದೆ. ಕಾವ್ಯ ಲಕ್ಷಣಜ್ಞರಾದ ವಿದ್ವತ್ಕವಿಗಳಿಂದ ರೂಪಗೊಂಡ, ವ್ಯಾಕರಣ ಛಂದೋಲಂಕಾರ ಕಾವ್ಯಗುಣಗಳಿಂದೊಪ್ಪುವ ಪರಿಷ್ಕೃತ ರಚನೆ ಮಾರ್ಗವೆನಿಸುತ್ತದೆ. ಬೇರೆ ಬೇರೆ ದೇಶಕ್ಕೆ - ಪ್ರದೇಶಕ್ಕೆ ಸಂಬಂಧಿಸಿದುದು 'ದೇಶಿ' ಇದರ ತಭ್ಬವ 'ದೇಸಿ' ಕನ್ನಡದಲ್ಲಿ ದೇಸೆ ಎಂಬ ಪ್ರಯೋಗವೂ ಇದೆ. ಸೊಗಸು ಎಂತಲೂ ಈ ಶಬ್ದಕ್ಕೆ ಅರ್ಥವಿದೆ. 'ದೇಸಿ' ಎಂಬ ಅರ್ಥದಲ್ಲೇ ಇಂದು ಹೆಚ್ಚು ಪ್ರಚಲಿತವಾಗಿರುವುದು ಜಾನಪದ ಎಂಬ ಶಬ್ದ. ಹಳ್ಳಿಯ ಜನರ ಮಾತು, ಬದುಕು, ಬಗೆಗಳಿಗೆ ಕನ್ನಡಿಯಂತಿರುವ ಜಾನಪದ ಕವಿಕೃತಿಗೂ ಮೂಲಪ್ರೇರಕ. ಅಚ್ಚಗನ್ನಡದ ಶಬ್ದಗಳಿಗೆ ದೇಸಿ (ದೇಶ್ಯ, ದೇಶಿ) ಎಂತಲೂ ಹೆಸರಿದೆ. ಪೂರ್ವ ಕವಿಗಳು ಜಾನಪದದಿಂದ-ದೇಸಿಯಿಂದ, ಶಬ್ದಸಂಪತ್ತನ್ನೂ ಭಾವ ಅನುಭವ ಸಮೃದ್ಧಿಯನ್ನೂ ಗಳಿಸಿ, ತಮ್ಮ ಕಾವ್ಯಗಳನ್ನು

ಪೊಸಯಿಸುತ್ತಿದ್ದರು. ಇದರಿಂದಾಗಿ ಕಾವ್ಯದ ಶ್ರೇಷ್ಠತೆ ವೈಶಿಷ್ಟ್ಯಗಳು ದೇಸಿಯಿಂದ ರೂಪುಗೊಳ್ಳುತ್ತಿದ್ದುವು.

ಕನ್ನಡದ ಭಾಷೆ ಸಾಹಿತ್ಯಗಳ ವೈಶಿಷ್ಟ್ಯವೆಲ್ಲ ದೇಸಿಯಲ್ಲಿ ಅಂತರ್ಗವಾಗುತ್ತವೆ. - ಕನ್ನಡಕ್ಕೆ ಅತಿಶಯವೆನಿಸಿರುವ ಪದ್ಯ ಪಾದಗಳ ದ್ವಿತೀಯಾಕ್ಷರ ಪ್ರಾಸ (ಆದಿಪ್ರಾಸ, ಖಂಡಪ್ರಾಸ), ದೇಸಿ ಯೆಂಬುದನ್ನು ಕವಿರಾಜಮಾರ್ಗ ಸಮರ್ಥಿಸಿದೆ -

ದೇಸಿಯೆನೆ ನಿರಿಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ (೧-೭೫)

ಕನ್ನಡಕ್ಕೆ ವಿಶಿಷ್ಟವೆನಿಸುವ ಕಂದ, ರಗಳೆ, ಷಟ್ಪದಿ, ಅಂಶಗಣಪ್ರಯೋಗದ ಬಗೆ ಬಗೆಯ ಧಾಟಿಯ ಬಂಧಗಳು ದೇಸಿಯ ಅಂತರ್ಗತಗಳು. ಭಾಷೆಯ ಅಸಾಧಾರಣ ಲಕ್ಷಣಗಳಾಗಿರುವ ಗಮಕಸಮಾಸ, ರಳ ಕುಳ ಕ್ಷಳವಿಚಾರ, ಕನ್ನಡ ಸಂಧಿಗಳು, ಸಮಸಂಸ್ಕೃತ - ತದ್ಭವ ರಚನೆ, ಕನ್ನಡದ ಸತಿಸಪ್ತಮಿ, ಯತಿ ವಿಲಂಘನ ಮುಂತಾದುವು ದೇಸಿಯೆನಿಸುವವಾಗಿದ್ದು ಮಾರ್ಗಕ್ಕೆ ಪೋಷಕಗಳಾಗಿವೆ. ಇವು ಸಾವಿರಾರು ವರ್ಷಗಳಿಂದ ಅನುಸರಿಸಿ ಬಂದ ದೇಶೀ ಲಕ್ಷಣಗಳಾಗಿವೆ.

ಮಾರ್ಗವೆನಿಸುವ ದೇಸಿ ಮತ್ತು ಮಾರ್ಗವೆನಿಸಲಾರದ ದೇಸಿ ಎಂದು ದೇಸಿಯಲ್ಲಿಯೂ ಎರಡು ಬಗೆಯಿದೆ. ಮಾರ್ಗವೆನಿಸಿದ ದೇಸಿನುಡಿಯನ್ನು 'ಶುದ್ಧಜಾನಪದ' ಎನ್ನಬಹುದು. ಇಲ್ಲಿ 'ಶುದ್ಧ' ಎಂಬುದು ಅತಿಶಯಾರ್ಥಕವೆಂದರಿಯಬೇಕು. ಮಾರ್ಗವೆನಿಸದ ದೇಸಿಯ ಭಾಷೆ ಗ್ರಾಮ್ಯರೂಪದಲ್ಲಿದ್ದು ಅಪ್ರಗಲ್ಭ ಜನವರ್ಗದ ಆಡುಮಾತಾಗಿರುತ್ತದೆ. ಇದರಲ್ಲಿ ಅಸಂಖ್ಯ ರೂಪವ್ಯತ್ಯಾಸಗಳೂ ಉಂಟು. ಅಂತಹ ಆಡುಮಾತಿನ ಒಂದು ಉದಾಹರಣೆ : 'ಅವ್ರು ಯೇಳಿದ್ರು, ಇವ್ರು ವಾಂಟ್ರು, ವಾದ್ರು, ನನ್ತಂದೆ ಮನೇಲಿ ಅವ್ರೆ.' ಇಂತಹ ಭಾಷೆ ಮಾರ್ಗ ಸಾಹಿತ್ಯಕ್ಕೆ ಸ್ವೀಕಾರಾರ್ಹವಾಗದು. ಕೇವಲ ಜಾನಪದ ಸಾಹಿತ್ಯದಲ್ಲಿ ಇಂತಹ ಪ್ರಯೋಗವಿದ್ದರೆ ಯಾರೂ ಆಕ್ಷೇಪಿಸರು.

ಇನ್ನೊಂದೆಡೆ ಈ ಇಪ್ಪತ್ತನೆ ಶತಮಾನದಲ್ಲಿ ಅನ್ಯದೇಶಿ ಎಂಬುದು ಕನ್ನಡದೊಳ ನುಗ್ಗಿಬಂದಿದೆ. ಇದರಿಂದ ನಗರದೇಶಿ ಎನಿಸಬಹುದಾದ ಭಾಷೆ ರೂಪಗೊಂಡಿದೆ. ಅದರ ವಾಕ್ಸರಣಿಗೆ ಉದಾಹರಣವಿದು -

'ಎಗ್ಸಾಮಿನೇಶನ್ಗೆ ಕೂತಿದ್ದೆ. ನೆಕ್ಸ್ಟ್ ಮಂತ್ನ ನೈಂಟೀಂತ್ ಗೆ ರಿಸಲ್ಟ್ ಬರ್ ಬೌದು. ಅದು ತನ್ಕ ಟೈಮ್ ಸ್ಪೆಂಡ್ ಮಾಡ್ತಿದೇನೆ.'

ಇಂಗ್ಲೀಷಿನ ಅನುಚಿತ ಮಿಶ್ರಣದ ಈ ನಗರದೇಶಿಯೂ ಮಾರ್ಗ ಸಾಹಿತ್ಯಕ್ಕೆ ಒಪ್ಪದು.

ಆಧುನಿಕ ಸಾಹಿತ್ಯದಲ್ಲಿ 'ನವ್ಯ' ಎಂಬ ಹೆಸರುಹೊತ್ತಿರುವ ಕವಿತಾರಚನೆಗಳು ಕೂಡ ಈಗಿನ ಒಂದು ಬಗೆಯ್ದ ದೇಸಿ ಎನಿಸಬಹುದಾಗಿದೆ. ಈ ಬಗೆಯ ದೇಸಿಯ ರಚನೆಗೆ ಛಂದಸ್ಸು ಬೇಡ, ವ್ಯಾಕರಣ ತೊಡಕು, ತ್ಯಾಜ್ಯ. ಪೂರ್ವ ಕವಿಮಾರ್ಗ ಒಂದು ಗೋಳು.! ಇಂತಹ

ರಚನೆಗೆ ಅರ್ಥಬೋಧೆ ಇಲ್ಲ. ಇಂತಹ ರಚನೆ ಇಂದಿನಷ್ಟಲ್ಲವಾದರೂ ಕೆಲಮಟ್ಟಿಗೆ ಹಿಂದೆಯೂ ಇದ್ದಿರಬೇಕು. ಅದಕ್ಕೆ ಸಾಕ್ಷಿಯಿದು. (ಸೂಕ್ತಿಸುಧಾರ್ಣವ : ಪೀಠಿಕೆ, ಪದ್ಯ ೩೫)

ಛಂದಮಿದಾವುದೆಂದೊಡಿರಿವರ್ ಪದಬಂಧದೊಳೀ ಪ್ರಯೋಗಮೇ
ನೆಂದೊಡೆ ಬಯ್ವರಾವ ಕವಿಮಾರ್ಗಮಿದೆಂದೊಡೆ ಪೊಯ್ವರರ್ಥಮೇ
ನೆಂದೊಡೆ ತೊಂಡು ಬಂಡುಗೆಡೆದುಟ್ಟುದನಿಕ್ಕುವರಾವ ನೀತಿ ಪೇ
ಳೆಂದೊಡೆ ಕೊಲ್ವರೀಗಳಿನ ದೇಸಿಗೆ ಬಲ್ದ ಮಹಾಕವೀಶ್ವರರ್

ಪಂಪನ ದೇಸಿ ಇಂತಹುದಲ್ಲ. ಅದು ಗ್ರಾಮ್ಯವಲ್ಲ. ಶುದ್ಧೀಕೃತ, ಶಿಷ್ಟ ಭಾಷೆಯ ರೂಪ ತಾಳಿರುವ ದೇಸಿ. ಕನ್ನಡಕ್ಕೆ ವಿಶಿಷ್ಟವೆನಿಸುವ ಅಂಶಗಳು ಅದರಲ್ಲಿ ಯಥೇಷ್ಟ. ಅಂಥವಕ್ಕೆ ಪಂಪನಿಂದಲೇ ಉದಾಹರಣೆಗಳನ್ನು ನೋಡೋಣ:

ಛಂದಸ್ಸಿನಲ್ಲಿ ದೇಸಿ :

ಪಂಪನ ಎರಡು ಕಾವ್ಯಗಳೂ ಚಂಪೂರೂಪದವು - ಗದ್ಯಪದ್ಯಾತ್ಮಕ ರಚನೆಗಳು. ಬಹು ಸಂಖ್ಯಾಕವಾಗಿ ಇವುಗಳಲ್ಲಿರುವವು ಕಂದಪದ್ಯಗಳು. ಕಂದಪದ್ಯಗಳು ಕನ್ನಡದ ದೇಸಿಗಳೆನಿಸುತ್ತವೆ. ಪಂಪನಿಂದ ಮೊದಲ್ಗೊಂಡು ಮುಂದಿನ ಚಂಪೂಕವಿಗಳ ಕೃತಿಗಳಲ್ಲಿ ಹೆಚ್ಚಾಗಿ ಬಳಕೆಯಾದ ಪದ್ಯಗಳಿವು. ಅಂಶ ಛಂದಸ್ಸಿನ ಹುಟ್ಟುಗಳಾಗಿರುವ ತ್ರಿಪದಿಗಳು ಪಿರಿಯಕ್ಕರಗಳೂ ಮಾದರಿಯಾಗಿ ಪಂಪನಿಂದ ಬಳಕೆಯಾಗಿವೆ. ಆದಿಪುರಾಣದಲ್ಲಿ ಪಂಪನು ಎರಡು ತ್ರಿಪದಿಗಳನ್ನು ಇರಿಸಿದ್ದಾನೆ. (೬-೧೩,೧೦೦)

ಒಂದು ಉದಾಹರಣೆ : ವರದತ್ತಂ ಮೊದಲಾಗೆ । ಧರಣೀಶರವರ್ಗೆಲ್ಲಂ
ಸುರಲೋಕಂ ಸುವಿಧಿಯೊಡನಾದು—ದಂತುಟೆ
ನೆರಪಿದರೆನಿತೀ - ಸುರಲೋಕಂ (೬-೧೩)

ಕನ್ನಡದ ದೇಸಿಯ ಛಂದಸ್ಸಿಗೆಲ್ಲ ಮೂಲವೆನಿಸಿದುದು ತ್ರಿಪದಿ. ಇದನ್ನು ಮೊತ್ತಮೊದಲು ನಾವು ಕಾಣುವದು ಕ್ರಿ.ಶ. ೭೦೦ರ ಬಾದಾಮಿ ಶಾಸನದಲ್ಲಿ - ಅರಭಟ್ಟನ ಹಿರಿಮೆಯನ್ನು ಸಾರುವ ರಚನೆಯಾಗಿ. ಜಾನಪದ ಗೀತಗಳಲ್ಲಿ, ಹೆಂಗುಸರ ಶೋಭಾನೆಗಳಲ್ಲಿ ತುಂಬ ಪ್ರಚಲಿತವಾಗಿರುವ ಈ ದೇಸಿಹಾಡಿನ ಮಟ್ಟನ್ನು ಮಾದರಿಗಾಗಿ ಪಂಪನು ಆದಿಪುರಾಣದಲ್ಲಿ ಪ್ರಯೋಗಿಸಿದ್ದಾನೆ. ಹಾಗೆಯೇ ಪಿರಿಯಕ್ಕರವನ್ನೂ ತನ್ನ ಎರಡು ಕಾವ್ಯಗಳಲ್ಲಿಯೂ ಬಳಸಿದ್ದಾನೆ. ಜಾನಪದ ಗೇಯಗುಣವುಳ್ಳ ರಚನೆ ಇದು. ಒಂದು ಉದಾಹರಣೆ :

ಆಡಲಾಡಿಸಲ್ ಪಾಳಿಯಂ ನಿರಿಸಲುಂ ಪರಿಗೊಳಲ್ ತೊವಲಿಕ್ಕಲೊಳಗಂ ಬರಲ್
ಕಾಡ ಬೇಲಿಯಂ ಮಾರ್ಡಾಡನರಿಯಲುಂ ಮೂಡಿಗೆ ಕುಕ್ಕಂಬಂ ಸುಳಿಸಿ ಜೊಂಪಂ
ಬೀಡುಬಡುವಿಂಬು ಕದಳಿ ತೆಂಗಿನ ತಾಣಂ ಜಾಣಂ ನೀರ್ದಾಣಮೆಂದೆಡೆಯರಿದುಂ
ಮಾಡಲ್ ಮಾಡಿಸಲ್ ಪಡೆಮೆಚ್ಚೆ ನೀಂ ಬಲ್ಲೆ ನೀಂ ಮೆಚ್ಚೆ ಹರಿಗ ಕೇಳಾನೆ ಬಲ್ಲೆಂ
(೫-೪೧)

ಪಂಪನ ಛಂದಸ್ಸಿನ ದೇಸಿಗಳಲ್ಲಿ ರಗಳೆ ಇನ್ನೊಂದು ಬಗೆಯದು. ರಗಳೆಗಳು ಮಂದಾನಿಲ, ಲಲಿತ, ಉತ್ಸವ - ಎಂದು ಮೂರು ವಿಧ. ಇವೆಲ್ಲವೂ ಮಾತ್ರಾ ಗಣ ರಚನೆಗಳು. ಇವುಗಳ

ರಚನೆಯಲ್ಲಿ ಪಂಪನು ಹೊಸತನವನ್ನು, ಹೊಸದೇಸೆಯನ್ನು ಮೆರೆದಿದ್ದಾನೆ. ಮಂದಾನಿಲದಲ್ಲಿ ಅಂಶಚ್ಛಂದದ ಲಯವನ್ನು ಮೂಡಿಸಿದ್ದಾನೆ.

ಉದಾ :

> **ಸ್ಫುರಿತೇಂದ್ರನೀಲ ಮಣಿಖಚಿತ ಭೂಮಿ**
> **ಚೆಲುವಿಂಗಿದು ನೆಟ್ಟನೆ ಜನ್ಮಭೂಮಿ**
> **ಮರಕತ ಮಣಿ ವಿರಚಿತ ವಿಮಲ ಭಿತ್ತಿ**
> **ಪೊಗಳಲ್ ಕರಮರಿದದು ಬೇರೆ ಭಿತ್ತಿ ॥**

(ಆದಿಪು. ಆ.೪- ಪದ್ಯ ೩೧ ರ ಮೊದಲು)

ಇಲ್ಲಿ ಚತುರ್ಮಾತ್ರಾಗಣದಲ್ಲಿ ಪರಿವೃತ್ತಿಯನ್ನು ಕಾಣಬಹುದು. ಮೊದಲ ಪಾದದ ೨ನೆಯದು ಮತ್ತು ಎಲ್ಲ ಪಾದ್ಯಾಂತ್ಯ ಜಗಣವಾಗಿರುವುದನ್ನೂ ಕಾಣಬಹುದು. ಏಕತಾಳದ ಗತಿಯನ್ನು ಅಷ್ಟತಾಳಕ್ಕೆ ಒಡಂಬಡಿಸಿದ ಚೆಲುವನ್ನು ಇಲ್ಲಿ ನೋಡಬಹುದು.

ಪಂಪಭಾರತದಲ್ಲಿ ಬರುವ ಮಟ್ಟರಗಳೆ ಮಂದಾನಿಲದ ಪ್ರಭೇದವಾಗಿ ಅಂಶಗಣ ಪ್ರಭಾವದ ದೇಸಿಯಾಗಿದೆ :

> **ಎಯ್ದುವುದುಂ ತತ್ ಪುರದುಪವನಂಗ**
> **ಳವಿರಳ ಮಲಯಾನಿಲಕಂಪಿತಂಗ**
> **ಳವಿರಳ ಕುಸುಮಾವಳಿ ಕಂಪುವೀರೆ**
> **ಸೊಗಯಿಪ ಕಿರುಮಿಡಿಗಳೊಳೊಪ್ಪಿ ತೋರೆ ॥**

(೪-೧೦)

ಇನ್ನೊಂದು ಬಗೆಯ ಮದಾನಿಲ ರಗಳೆಯ ಪ್ರಯೋಗ ಪಂಪನಲ್ಲಿದೆ. ಇದರಲ್ಲಿರುವ ಗಣಪರಿವೃತ್ತಿ ಲಕ್ಷ್ಯಾರ್ಹ. ಇದು ೩ + ೫ ಮಾತ್ರಾಗಣಗಳ ಗಣನೆಯಿಂದಿದೆ :

> **ಅಲ್ಲಿ ಸೊಗಯಿಸುವ ಕೃತಕ ಗಿರಿಗಳಿಂ**
> **ಕಲ್ಪತರುಗಳನೆ. ಪೋಲ್ವ ಮರಗಳಿಂ**
> **ನಂದನಂಗಳೊಳ್ ಸುಳಿವ ಬಿರಯಿಯಿಂ**
> **ಕಂಪು ಕಣ್ಮಲೆಯೆ ಪೂತ ಸುರಯಿಯಿಂ**

(೩-೨೨)

ಉತ್ಸವರಗಳೆಯ ಗತಿಯುಳ್ಳ ಇನ್ನೊಂದು ರಗಳೆಯ ದೇಸಿ ಈ ಕೆಳಗಿನದು.

ಇದರಲ್ಲಿ ಪ್ರತಿಯೊಂದು ಪಾದದ ಉತ್ತರಾರ್ಧದಲ್ಲಿ ಆವೃತ್ತಿಯಿದೆ. ಇದನ್ನು ಮುಳಿಯ ತಿಮ್ಮಪ್ಪಯ್ಯನವರು 'ಮುಕ್ತಪದಾರ್ಥಗ್ರಹಣ ರಘಟಾಬಂಧ' ಎಂದು ಕರೆದಿದ್ದಾರೆ. (ನಾಡೋಜ ಪಂಪ). ಉತ್ಸಾಹ ರಗಳೆಯ ಲಯವುಳ್ಳುದಾದರೂ ಪಾದಾಂತ್ಯದಲ್ಲಿ ಒಂದು ಮಾತ್ರೆ ಕಡಮೆ ಬರುತ್ತದೆ -

ಅದರ ಪೊರವೊಳಲ ವಿಶಾಲ ಕನಕಕೃತಕ ಗಿರಿಗಳಿಂ
ಕನಕಕೃತಕಗಿರಿಗಳಿಂ। ಫಲಪ್ರಕೀರ್ಣ ತರುಗಳಿಂ
ನನೆಯ ಕೊನೆಯ ತಳಿರ ಮುಗುಳ ವನಲತಾನಿಕುಂಜದಿಂ
ವನಲತಾ ನಿಕುಂಜದಿಂ। ಪ್ರಸೂನ ರಜದ ಪುಂಜದಿಂ
ಕನಕಶೈಲಮೆನಿಸಿ ನೆಗಳ್ದ ಭೂಮಿಪಾಲ ಭವನದಿಂ
ಭೂಮಿಪಾಲಭವನದಿಂ। ಸಮಸ್ತ ವಸ್ತು ಭುವನದಿಂ

(೧-೫೮)

ಪಂಪನ ಲಲಿತರಗಳೆ ಲಕ್ಷಣಬದ್ಧವಾಗಿ ಪಂಚಮಾತ್ರಗಣಗಳ ರಚನೆಯಾಗಿ ಸೊಗಸಾಗಿದೆ. ಉದಾಹರಣೆಯಿದು :

ಶ್ರೀಗೆ ಕುಲಸದನಮೆನೆ ತೊಳಪ ಮಣಿಭವನದೊಳ್
ರಾಗರಸಮೊದವೆ ಸರಸಿರುಹಸಮ ವದನದೊಳ್
ಪೊಳೆವ ಪಚ್ಚಡದೆ ಸೊಗಯಿಸುವ ಮೃದುತಲ್ಪದೊಳ್
ಲಲಿತ ಗಂಗಾನದೀ ಲಹರಿಕಾತಲ್ಪದೊಳ್. . . . . .

(ಆದಿಪು : ೭-೨೭)

ಇನ್ನೀಗ ಪಂಪನ ವರ್ಣನೆಗಳ ದೇಸಿಯ ಕಡೆಗೆ ನೋಡೋಣ -

ವರ್ಣನೆಯಲ್ಲಿ ದೇಸಿ :

ಜ್ಯೋತ್ಸ್ನಾವಿಹಾರ

ಮಹಾಕಾವ್ಯಗಳಲ್ಲಿ ಬರುವ ಹದಿನೆಂಟು ವರ್ಣನೆಗಳಲ್ಲಿ ಜ್ಯೋತ್ಸ್ನಾವಿಹಾರ (ಬೆಳ್ದಿಂಗಳಲ್ಲಿ ನಗರ ಸಂಚಾರ) ಎಂಬುದೊಂದು. ಸೂಳೆಗೇರಿಯ ವರ್ಣನೆಯೂ ಇದರಲ್ಲಿ ಬರುತ್ತದೆ. ಇಂತಹ ವರ್ಣನೆಯ ಸಂದರ್ಭದಲ್ಲಿ ಕವಿಗಳು ಶೃಂಗಾರರಸವನ್ನು ಕೋಡಿಹರಿಸುತ್ತಾರೆ. ಅಂತಹ ಶೃಂಗಾರವು ಶುದ್ಧ ಗ್ರಾಮ್ಯದ ಮಟ್ಟಕ್ಕೆ ಇಳಿವುದೂ ಉಂಟು. ನೀತಿಗೆ ದೂರವಾಗುವುದೂ ಉಂಟು. ಪಂಪನು ಇಂತಹ ಶೃಂಗಾರದ ವರ್ಣನೆಯನ್ನು ಅಗ್ರಾಮ್ಯವೆನಿಸುವಂತೆ ಸಂಸ್ಕರಿಸಿ ನಿರೂಪಣೆ ಮಾಡಿರುವುದು ಅವನ ವೈಶಿಷ್ಟ್ಯ. ಸೂಳೆಗೇರಿಗೆ ಬರತಕ್ಕ ವಿಟರು 'ತಲೆಯನ್ನೂ ಮೂಗನ್ನೂ ಒತ್ತೆಯಿಟ್ಟು ನೆರೆವಷ್ಟು ಗಾಂಪರಾಗಿರುವರಲ್ಲವೆ' ಎನ್ನುತ್ತಾನೆ. ವಿಟರನ್ನು ಪಂಪನು ಅರಬೊಜಂಗ, ಕಿರುಕುಣಬೊಜಂಗ, ಪೋರ್ಕುಳಿಬೊಜಂಗ ಎಂದು ವರ್ಗೀಕರಿಸಿರುವ ದೇಸಿ ಪಂಪಭಾರತದಲ್ಲಿ ಸೊಗಸಾಗಿದೆ.

ಮಧುದೇವತಾರ್ಚನೆ

ಅರಿಕೇಸರಿ ಜ್ಯೋತ್ಸ್ನಾವಿಹಾರದಲ್ಲಿ ಮಧುದೇವತಾಪೂಜೆ ಮಾಡುವ ಬೀದಿಯಲ್ಲಿ ಬರುತ್ತಾನೆ. ಆ ಮಧುದೇವತಾ ಪೂಜೆಯ ಕ್ರಮವನ್ನು ಕವಿ ಸ್ವತಃ ಕಂಡಂತೆ ವರ್ಣಿಸಿದ್ದಾನೆ. (೪-೮೭ ಪದ್ಯಾನಂತರದ ಗದ್ಯ) :

"ಅಲ್ಲಿ ಒಂದೆಡೆ ಕಳ್ಳೊಳಮಮರ್ದಿನೊಳಂ ಪುಟ್ಟಿದ ಪೆಂಡಿರಂತೆ ಸೊಗಯಿಸುವ ಪಲರುಮೊಳ್ವೆಂಡಿರೊಂದೆಡೆಯೊಳಿರ್ದು ಕಾಮದೇವನೆಂಬ ಬಳಮದ್ರ್ದುಕಾಶನ ಮಾಡಿದ

ಮರ್ದಿನಂತೆ ಬಳೆದು ದಳಂಬಡೆದು, ಮೂನೂರರುವತ್ತು ಜಾತಿಯ ಕಳ್ಗಳಂ ಮುಂದಿಟ್ಟು ಮಧುಮಂತ್ರದಿಂ ಮಧುದೇವತೆಗಳನರ್ಚಿಸಿ ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ ಗಿಳಿಯ ಕೋಗಿಲೆಯ ಕೊಂಚೆಯಂಚೆಯ ಕುಂತಳಿಕೆಯ ಮಾಳ್ಕೆಯ ಸಿಪ್ಪುಗಳೊಳ್ ತೀವಿ ಮಧುಮಂತ್ರಂಗಳಿಂ ಮಂತ್ರಿಸಿ ನೆಲದೊಳೆರೆದು ತಲೆಯೊಳ್ ತಳಿದು ಕಳ್ಳೊಳ್ ಬೊಟ್ಟನಿಟ್ಟು ಕೊಂಡು ಕೆಲದರ್ಗೆಲ್ಲಂ ಬೊಟ್ಟಿಟ್ಟು ಕಿರಿಯರ್ ಪಿರಿಯರರಿದು ಪೊಡಮಟ್ಟು ಧರ್ಮಗಳ್ಗುಡಿವರ್ಗೆಲ್ಲಂ ಮೀಸಲ್ಗಳ್ಳನೆರೆದು ಪೊನ್ನ ಬೆಳ್ಳಿಯ ಸಿಪ್ಪುಗಳೊಳ್ ಕಿರಿಕಿರಿದನೆರೆದು ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುದಿನ ಮೆಣಸುಗಡಲೆಯ ಪುಡಿಯೊಳಡಸಿದಲ್ಲ ವಲ್ಲಣೆಗೆಯ ಚಕ್ಕಣಂಗಳಂ ಸವಿಸವಿದು" -

ಈ ವರ್ಣನೆಯಲ್ಲಿ ಹಿಂದಿನ ಕಾಲದ ಶಾಕ್ತೇಯ ಪಂಥದ ಮಧುಪೂಜೆಯ ದೇಸಿಯ ಚಿತ್ರಣವಿದೆ. ಬೇರೆ ಬೇರೆ ಕಳ್ಳುಗಳನ್ನು ಕೂಡಿಸಿಟ್ಟು ಪೂಜಿಸುವ ವಿಧಾನ ಇಲ್ಲಿ ಕಂಡುಬರುತ್ತದೆ. ಕಳ್ಳು ಮಾಡುವ ಪೂಜಾರಿಜಾತಿಯ ಹೆಂಗುಸರು ಮೊದಲು ಭೂದೇವಿಯ ತೃಪ್ತಿಗಾಗಿ ಕಳ್ಳನ್ನು ನೆಲಕ್ಕೆರೆಯುವುದು, ತಲೆಗೆ ತಳಿಯುವುದು. ಕಳ್ಳಿನಿಂದ ಬೊಟ್ಟಿಡುವುದು, ಅಚೀಚೆಯವರಿಗೂ ಬೊಟ್ಟಿಡುವುದು, ಆಗ ಹಿರಿಯರು ಕಿರಿಯರೆನ್ನದೆ ಎಲ್ಲರೂ ಮಧುದೇವತೆಗೆ ನಮಸ್ಕರಿಸುವುದು, ಧರ್ಮದ ಕಳ್ಳನ್ನು ಕುಡಿಯತಕ್ಕವರಿಗೆ ಮೀಸಲುಕಳ್ಳನ್ನು ಎರೆಯುವುದು, ಸಕ್ಕಣದೊಂದಿಗೆ ಸವಿಯುವುದು - ಇವೆಲ್ಲವೂ ಶಾಕ್ತೇಯವೆನಿಸುವ ವಾಮಾಚಾರದ ದೇಸಿಯನ್ನು ಪ್ರತಿಬಿಂಬಿಸುತ್ತವೆ. ಇಂತಹ ಕಳ್ಳು ಕುಡುಕರ ಬದುಕನ್ನು ಕವಿ ಅದೆಷ್ಟು ಸಮೀಪದಿಂದ ಕಂಡಿರಬೇಕು! ಎನಿಸುತ್ತದೆ. ಈ ವಿವರಗಳಲ್ಲಿ ಒಂದು ಜನವರ್ಗದ ಆಚರಣೆಯ ದೇಸಿ ವ್ಯಕ್ತವಾಗುತ್ತದೆ.

ಯುದ್ಧಪ್ರಸ್ಥಾನದ ದೇಸಿ :

ಯುದ್ಧವರ್ಣನೆಯನ್ನು ಸೊಗಸಾಗಿ ಎಷ್ಟೋ ಕವಿಗಳು ನಿರೂಪಿಸಿದ್ದಾರೆ. ಆದರೆ, ಯುದ್ಧಕ್ಕೆ ಹೊರಡುವ ಸಂದರ್ಭದ ವೀರಾಲಾಪಗಳು, ವೀರವನಿತೆಯರ ವೀರೋಚಿತ ವರ್ತನೆ, ಆ ವರ್ತನೆಯಲ್ಲಿ ಅಡಕವಾದ ಸಂಸ್ಕೃತಿಪೋಷಕ ನೀತಿ - ಇವನ್ನು ವ್ಯಕ್ತಪಡಿಸುವಲ್ಲಿ ಅನುಭವ ಸಂಪತ್ತಿನ ಹೊಸದೇಸಿಯನ್ನು ಸೃಷ್ಟಿಸಿರುವುದರಲ್ಲಿ ಪಂಪನದೇ ಮೇಲುಗೈ ಎನ್ನಬಹುದು. ಪಂಪಭಾರತದ ದಶಮಾಶ್ವಾಸದಲ್ಲಿ ಇದನ್ನು ನಾವು ಕಾಣಬಹುದು -

ಭಯಂಕರ ಬಾಹುಬಲವುಳ್ಳ ಓರ್ವ ಭಟನು ತನ್ನೊಡೆಯನಿಗೆ ಹೀಗೆನ್ನುತ್ತಾನೆ.

> **ನಾಳೆ ವಿರೋಧಿ ಸಾಧನ ಘಟಾಘಟಿತಾಹವದಲ್ಲಿ ನಿನ್ನ ಕ**
> **ಟ್ಟಾಳಿರೆ, ಮುಂಚಿ ತಾಗದೊಡಮಳ್ಳುಜಿಟೆ ತಾಗಿ ವಿರೋಧಿ ಸೈನ್ಯ ಭೂ**
> **ಪಾಳರನೊಂದೆ ಪೊಯ್ಯದೊಡಮೀ ತಲೆ ಪೋದೊಡಮಟ್ಟೆಯಟ್ಟಿ ಕ**
> **ಟ್ಟಾಳನೆ ಮುಟ್ಟ ತಳ್ತಿಱಿಯದಿರ್ದೊಡಮಂಜದೆನಾಂ ಮಹೀಪತೀ** (೧೦-೩೯)

ಯುದ್ಧದಲ್ಲಿ ತನ್ನ ತಲೆ ಹಾರಿದರೂ, ಈ ಮುಂಡವೇ ಶತ್ರುವೀರನ ಮೇಲೆ ಬಿದ್ದು ತಿವಿಯದಿದ್ದರೆ, ಆಗ ತನ್ನನ್ನು ನೀನು ಹೇಡಿಯೆಂದು ತಿಳಿ! ಎನ್ನುತ್ತಾನೆ. ಇಲ್ಲಿ ಇನ್ನೆರಡು ಪದ್ಯಗಳೂ

ಒಂದೊಂದು ಬಗೆಯಲ್ಲಿ ರೋಮಾಂಚಕ ವೀರಾಲಾಪಗಳಾಗಿವೆ. ಅತ್ತ ಇನ್ನೊಬ್ಬನು ತನ್ನ ನಲ್ಲೆಗೆ ಹೇಳುವ ಮಾತಿನ ಸ್ವಾರಸ್ಯ ಹೀಗಿದೆ :

ಈ ಹೊತ್ತೆ ಹೊತ್ತು, ನಾಳೆ ನಾನು ದೇವಲೋಕದ ಕನ್ನೆಯರ ಓಲಗದಲ್ಲಿರುವೆನು ಎನ್ನುವನು. ಆಗ ಆಕೆ— ನೀನೆಂದಂತೆ ಹೋಗತೀರದು. ನಾಳೆ ಮಗುಳ್ದು ಬಂದು ಎನ್ನೊಳ್ ನೆರೆವೆ ಎನ್ನುತ್ತಾಳೆ. ಇದನ್ನು ನೀನು ಹೇಗೆ ತಿಳಿದುಕೊಂಡೆ ? ಎಂದು ಕೇಳಿದಾಗ 'ನನ್ನ ಓಲೆವಾಗ್ಯವುಂಟು ಎಂದಳು. ಇನ್ನೊಂದೆಡೆ ಓರ್ವಳು ದರ್ಭಶಯನಸ್ಥನಾದ ನಿಜಪ್ರಾಣೇಶ್ವರನ ಪರಿಚ್ಛೇದ (ನಿರ್ಣಯ) ವನ್ನು ಅರಿತು ತನ್ನ ಸಾವನ್ನು ಪರಿಚ್ಛೇದಿಸಿ ಹೀಗೆನ್ನುತ್ತಾಳೆ—

ತಾಂ ಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲಿ ಮಾ
ಣ್ದಾಂ ಗಡಮಿರ್ಪೆನಂತನಿತು ಬೆಳ್ಳೆನೆ? ಮುನ್ನಮೆ ಪೋಗಿ ನಲ್ಮೆ ಗೆ
ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋವೊ ಸ
ಗ್ಗಂಗಳೊಳಿರ್ಪ ದೇವಡಿತಿ ತೊಳ್ತಿರೊಳಳ್ತಿಯನಾಗಲೀವೆನೇ (೧೦-೪೫)

ಹೀಗೆ ಇಲ್ಲಿ ಆಕೆ ತನ್ನ ನಿಷ್ಕಪಟವಾದ ನಲ್ಮೆಯನ್ನು ನಾಲಗೆಯ ತುದಿಗೆ ತಂದು ನುಡಿದಳು. ಇನ್ನೊಬ್ಬಳು ತನ್ನ ಅಣ್ಣನ ಬಾಹುಬಲದ ಭಯಂಕರತೆಯನ್ನು ನಚ್ಚಿ ಹೇಳುತ್ತಾಳೆ : ನನಗೆ ನಿನ್ನ ಇತರ ಮುತ್ತುಗಳು ಬೇಡ. ನಿನ್ನ ಕೈಯ ಖಡ್ಗದಿಂದ ಶತ್ರುವಿನ ಮತ್ತಗಜದ ಶಿರವನ್ನು ಛೇದಿಸಿ ಆ ನೆತ್ತರ ಕಡಲಲ್ಲಿ ಬೆಳೆದ ನಿರ್ಮಲ ನಿರ್ವ್ರಣ, ವೃತ್ತದ ಮುತ್ತುಗಳ ಸಮೂಹವನ್ನು ನನಗೆ ತಂದು ಕೊಡು ಎನ್ನುತ್ತಾಳೆ. ಪಂಪನು ಸ್ವತಃ ಚತುರಂಗಬಲ ಭಯಂಕರನಾದುದರಿಂದ ಇಂತಹ ಸನ್ನಿವೇಶದ ಅನುಭವವಿದ್ದಿರಬೇಕು ಎನಿಸುತ್ತದೆ. ಆದುದರಿಂದಲೆ ಇಂತಹ ಸನ್ನಿವೇಶ ನಿರ್ಮಾಣದ ಹೊಸ ದೇಸಿ ಅವನಲ್ಲಿ ಕಾಣುತ್ತದೆ.

ಬೇಟೆಯ ದೇಸಿ :

ಮೃಗಯಾ ವಿಹಾರ ಅಥವಾ ಬೇಟೆ ಎಂಬುದು ಹಿಂದಿನ ಕಾಲದಲ್ಲಿ ರಾಜರಲ್ಲಿ ಪ್ರಚಲಿತವಿದ್ದ ಒಂದು ವಿನೋದ. ಇದು ವಿನೋದ ಮಾತ್ರವಲ್ಲ, ದುಷ್ಟಪ್ರಾಣಿಗಳನ್ನು ನಿಗ್ರಹಿಸಿ, ಹಸುಗಳಿಗೂ ಬೆಳೆಗಳಿಗೂ ಕ್ಷೇಮವನ್ನುಂಟುಮಾಡುವ ರಾಜಧರ್ಮದ ಅಂಗವೂ ಹೌದು. ಪಂಪನು ಇಂತಹ ಒಂದು ಬೇಟೆಯ ಸನ್ನಿವೇಶವನ್ನು ವಿಕ್ರಮಾರ್ಜುನ ವಿಜಯದಲ್ಲಿ, ಬೇಟೆಯ ದೇಸಿಯನ್ನು ಪ್ರಕಟಮಾಡಿದ್ದಾನೆ. ಭುವನಕ್ಕೆಲ್ಲ ಒಸಗೆ ಬರುವಂತೆ ಬಂದ ವಸಂತದಲ್ಲಿ ಒಂದು ದಿನ ಆಸ್ಥಾನದ ಓಲಗದಲ್ಲಿ ಅರ್ಜುನನೂ ಕೃಷ್ಣನೂ ಇರುತ್ತಿರಲು, ಓರ್ವ ಕಿರಾತನು ಅವನ ದೇಸಿ ಉಡುಪಿನಲ್ಲಿ ಬರುತ್ತಾನೆ. ಅರಿಕೇಸರಿಗೆ ವಂದಿಸಿ ಬೇಟೆಗಿದು ತಕ್ಕ ಸಮಯವೆಂದು ಹೀಗೆನ್ನುತ್ತಾನೆ - "ಪೊಲನುಡುಗಿ ಬಂದುದು, ಉಡಿದುದು ಪುಲ್, ಕಾಡು ಎಲೆಯಿಕ್ಕಿ ನಿಂದುವು, ತಣಿದುವು ಮೃಗಂಗಳ್, ಸುಳಿಯದು ಗಾಳಿ, ಮೃಗಂ ಕೆಯ್ವಳಿಯ ಮೇತದೊಳೆ ದಣಿದುವು. ಪಂದಿಗಳ್ ಪಳನವಿರಿಕ್ಕಿದುವು. ಅದರಿಂ ಪಳು ಪರಿದಾಡಲ್ ಬೆಡಂಗು" ಎಂಬೀ ಮಾತುಗಳ ಮೂಲಕ ಬೇಟೆಗಾರನು ಅರಿಕೇಸರಿಯ ಮನಸ್ಸನ್ನು ಬೇಟೆಯ ಕಡೆಗೆ ಸೆಳೆಯುತ್ತಾನೆ. ಈ ಸಂದರ್ಭದಲ್ಲಿ ಎರಡು ಪಿರಿಯಕ್ಕರ ಮತ್ತು ಅವುಗಳ ನಡುವೆ ಬಂದ ಕಂದದ ಮೂಲಕ ಬೇಟೆಯ ದೇಸಿ

ಕಂಡುಬರುತ್ತದೆ. ಬೇಟೆಯಲ್ಲಿ ಪೆರ್ವೇಂಟೆ, ದೀವದ ಬೇಂಟೆ, ಪಂದಿವೇಂಟೆ - ಎಂಬ ನಾಲ್ಕು ಪ್ರಕಾರಗಳನ್ನೂ ಕಿರಾತನು ವಿವರಿಸುತ್ತಾನೆ. ಅಂತಹ ಬೇಟೆಯ ಕ್ರಮವನ್ನು ಅರಸರಲ್ಲೆಲ್ಲ ನೀನು ಬಲ್ಲೆ ಬೇಟೆಗಾರರಲ್ಲಿ ನಾನು ಬಲ್ಲೆ - ಎಂದು ಹೇಳುತ್ತಾನೆ.

ಗಾದೆಯ ದೇಸಿ :

ಪಂಪನು ತನ್ನ ಕಾವ್ಯಗಳಲ್ಲಿ ಅರ್ಥಪುಷ್ಟಿಗಾಗಿ ಅನೇಕ ಗಾದೆಗಳನ್ನು ಬಳಸಿದ್ದಾನೆ. ಕೆಲವಿವು :

೧) ಈಗಳೊಂದಡಕೆಯುಮಿಲ್ಲ ಕೈಯೊಳ್ (೨-೪೬) :

ದ್ರೋಣನು ತನ್ನ ಬಡತನದ ಬವಣೆ ಸಹಿಸದೆ ಮಗನಾದ ಅಶ್ವತ್ಥಾಮನನ್ನು ಕೂಡಿಕೊಂಡು ಕೊಡುಗೈಯ ಪರಶುರಾಮನಲ್ಲಿಗೆ ಹೋದನು. ದ್ರವ್ಯಾರ್ಥಿಯಾಗಿ ಬಂದ ದ್ರೋಣನನ್ನು ಕುರಿತು ತನ್ನಲ್ಲಿ ಏನೂ ಇಲ್ಲದುದರಿಂದ ವ್ಯಥೆಪಟ್ಟ ಪರಶುರಾಮನು ಹೀಗೆಂದನು :

> **ಒಡಮೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ**
> **ದಡಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗಂ . . . .**

ಈ ಗಾದೆ ನಮ್ಮಲ್ಲಿ ರೂಢವಾಗಿರುವ ಅತಿಥಿಸತ್ಕಾರದ ಹಿರಿಮೆಯನ್ನು ಸಾರುತ್ತದೆ. ಅತಿಥಿ ಕೇಳಿದುದನ್ನು ಕೊಡಬೇಕು. ಅಸಾಧ್ಯವಾದಲ್ಲಿ ಇದ್ದುದೇನನ್ನಾದರೂ ಕೊಡಬೇಕು. ಭಗ್ನಾಶನನ್ನಾಗಿ ಕಳುಹಬಾರದು. ಒಂದಡಕೆಯ ಚೂರನ್ನಾದರೂ ಕೊಟ್ಟು ಕಳುಹಬೇಕು. ಎಂಬ ಗೂಢಾರ್ಥ ಇಲ್ಲಿದೆ.

೨) ಸಿರಿಕಳ್ಳೊಡವುಟ್ಟಿತು (೨-೪೯) :

ಐಶ್ವರ್ಯದೊಂದಿಗೆ ಮದಮತ್ತತೆಯೂ ಉಂಟಾಗುತ್ತದೆ. ಎಂಬುದು ಈ ಗಾದೆಯ ತಾತ್ಪರ್ಯ. ದ್ರೋಣನು ತನ್ನ ಬಾಲ್ಯ ಮಿತ್ರನಾದ ದ್ರುಪದಲ್ಲಿಗೆ ಹೋದಾಗ ಅವನು ರಾಜ್ಯ ಮದಿರಾ ಮದೋನ್ಮತ್ತನೂ ಗರ್ವ ಗ್ರಹವ್ಯಗ್ರಚಿತ್ತನೂ ಆಗಿ ದ್ರೋಣನನ್ನು ನೂಕಿ ಕಳೆಯಲು ಅಜ್ಞೆಮಾಡಿದ್ದಲ್ಲದೆ ಹೇಯವಾಗಿ ನುಡಿದನು. ಆಗ ದ್ರೋಣನು ಗರ್ವಿಷ್ಠರಾಜರ ಸ್ವಭಾವವನ್ನು ಹೀಗೆ ಚಿತ್ರಿಸುತ್ತಾನೆ :

> **ನುಡಿ ತಡವಪ್ಪುದೊಂದು ಮೊಗದೊಳ್ ಮುರುಕಂ ದೊರೆಕೊಳ್ವುದೊಂದು ನಾ**
> **ಣ್ಗೆಡೆಗುಡದಿರ್ಪುದೊಂದು ನುಡಿಗಳ್ ಮೊರೆಯಂ ಮರೆಯಿಪ್ಪುದೊಂದು ಕ**
> **ಳ್ಗುಡಿದವರಂದಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂ**
> **ಬಡದೆ ಜಲಕ್ಕನೀಗಳರಿತೆಂ ಸಿರಿ ಕಳ್ಳೊಡವುಟ್ಟಿತೆಂಬುದಂ**

೩) ನೊಳವಿಂಗೆ ಕುಪ್ಪೆ ವರಂ, ಕೆಮ್ಮನೆ ಮೀಸೆವೊತ್ತೆನೇ (೨-೫೦) :

ಈ ಎರಡು ಗಾದೆಮಾತುಗಳೂ ಪಂಪಭಾರತದಲ್ಲಿ ಒಂದೇ ಕಡೆ ಬಂದಿವೆ :

> **ಖಳ, ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ**
> **ದಳವೊಡನೋದಿದೊಂದು ಬೆರಗಿಂಗೆ ಕೊಲಲ್ಕೆನಗಾಗದೀ ಸಭಾ**

ವಳಯದೊಳಿನ್ನನೇಳಿಸಿದ ನಿನ್ನನನಾಕುಳಮೆನ್ನ ಚಟ್ಟರಿಂ
ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ

ದ್ರುಪದನ ಅವಹೇಳನಕ್ಕೆ ಒಳಗಾದ ದ್ರೋಣನು ಹೇಳುವ ಮಾತು - ನೊಳವಿಗೆ ಭಕ್ಷ್ಯ ಭೋಜ್ಯಗಳೊಂದೂ ಬೇಡ. ಅದಕ್ಕೆ ಕೊಳೆ ಕುಪ್ಪೆಯೇ ವರವೆನಿಸುವುದು. ಹಾಗೆಯೇ ನಿನ್ನ ಶೌರ್ಯ ನನ್ನತನಕ ಉಂಟೆ ? ಸಹಪಾಠಿಯಾಗಿದ್ದ ಒಂದು ದಾಕ್ಷಿಣ್ಯಕ್ಕಾಗಿ ನಿನ್ನನ್ನು ಕೊಲ್ಲಲಾರೆ. ಈ ಸಭೆಯಲ್ಲಿ ನನ್ನನ್ನು ಹೀನಯಿಸಿದ್ದರಿಂದ ಅದಕ್ಕೆ ಪ್ರತಿಕಾರವಾಗಿ ನನ್ನ ಶಿಷ್ಯರಿಂದ ನಿನ್ನನ್ನು ಬಂಧಿಸದೆ ಇದ್ದರೆ, ನಾನೇನು ಸುಮ್ಮನೆ ಮೀಸೆ ಹೊತ್ತಿರುವೆನೆ ?

೪) ಪಡೆನೋಡಲ್ ಬಂದವರಂ ಗುಡಿವೊರಿಸಿದರ್ (೩-೧೫) :

ಕುತೂಹಲದಿಂದ ಸೈನ್ಯವನ್ನು ನೋಡಲೆಂದು ಬಂದವನ ಕೈಯಲ್ಲಿ ಬಿಟ್ಟಿಯಾಗಿ ಪತಾಕೆ ಹೊರಿಸಿದರು - ಎಂದು ಗಾದೆಯ ಅರ್ಥ. ಪ್ರಕೃತ ಸಂದರ್ಭವಿದು - ಪಾಂಡವರು ಅರಗಿನ ಮನೆಯಿಂದ ಪಾರಾಗಿ ಹಿಡಿಂಬವನಕ್ಕೆ ಬಂದಾಗ ಹಿಡಿಂಬಾಸುರನು ಅವರನ್ನು ಹಿಡಿದು ತಂದು ಅವರ ಮಾಂಸದ ಅಡುಗೆ ಮಾಡುವಂತೆ ತಂಗಿಯಾದ ಹಿಡಿಂಬೆಗೆ ಆಜ್ಞೆಮಾಡುತ್ತಾನೆ. ಆಕೆ ಭೀಮನನ್ನು ಕಂಡು ಮೋಹಗೊಂಡಳು. ನೀನು ಯಾರು, ಏಕೆ ಬಂದೆ? ಎಂದು ಕೇಳಿದಾಗ ಹಿಡಿಂಬೆ ಇಂತೆಂದಳು - 'ನಾನು ಅಣ್ಣನ ಆಜ್ಞೆಯಂತೆ ನಿಮ್ಮೆಲ್ಲರನ್ನು ಹಿಡಿದು ತಿನ್ನಲು ಬಂದಿರುತ್ತೇನೆ. ಆದರೆ ಮನ್ಮಥನು ನಿನಗಾಗಿ ನನ್ನನ್ನೆ ತಿಂದನು. ಇದೀಗ ನಿನ್ನ ನನ್ನ ವಿಷಯದಲ್ಲಿ 'ಪಡೆನೋಡಲು ಬಂದವರನ್ನು ಗುಡಿ ಹೊರಿಸಿದರು' ಎಂಬ ಹಾಗಾಯಿತು. ಎನ್ನುವಳು.

೫) ತಣಿಯುಂಡಮರ್ದಂ ಗೋಮೂತ್ರದಿಂದೆ ಬಾಯ್ಬೂಸಿದವೊಲ್ (೬-೪೮) :

ರಾಜಸೂಯ ಯಾಗದ ಕೊನೆಗೆ ಶ್ರೀ ಕೃಷ್ಣನಿಗೆ ಅಗ್ರಪೂಜೆ ಕೊಟ್ಟುದರಿಂದ ಕೆರಳಿದ ಶಿಶುಪಾಲನು ಆಡಿದ ಮಾತಿನಲ್ಲಿ ಈ ಗಾದೆ ಬಂದಿದೆ:

ಸಮಕಟ್ಟಱಿಯದೆ ಹರಿಗ
ರ್ಘ್ಯಮೆತ್ತಿ ನಿಂದಿರ್ದ ಯಜ್ಞವಿದು ಮೊದಲೊಳ್ ತಾ
ನಮರ್ದುಮಮರ್ದಿರದೆ ತಣಿಯುಂ
ಡಮರ್ದಂ ಗೋಮೂತ್ರದಿಂದೆ ಬಾಯ್ಬೂಸಿದವೊಲ್

ಇದುವರೆಗಿನ ಯಜ್ಞಕಾರ್ಯ ಕುಂದಿಲ್ಲದಂತೆ ನಡೆದುದು ಅಮೃತವನ್ನು ತೃಪ್ತಿಕರವಾಗಿ ಸೇವಿಸಿದಂತೆ ಆಗಿದೆ. ಆದರೆ ಕೊನೆಗೆ ಸರಿಯಾವುದೆಂದು ತಿಳಿಯದೆ ಅರ್ಘ್ಯವೆತ್ತಿದುದು ಮತ್ತೀಗ ಗೋವಿನ ಗಂಜಳದಿಂದ ಬಾಯ್ತೊಳೆದಂತೆ ಆಗಿದೆ ಎನ್ನುತ್ತಾನೆ ಶಿಶುಪಾಲ.

೬) ಬಡಿಗಂಡನಿಲ್ಲ ಪಾಲನೆ ಕಂಡಂ (೭-೧೯) :

ಮೋಸದ ಜೂಜಾಟದಲ್ಲಿ ಕೌರವನು ಪಾಂಡವರ ರಾಜ್ಯದ ಪಾಲನ್ನು ಒಳಹಾಕಿದನು. ವನವಾಸಕ್ಕಾಗಿ ಪಾಂಡವರು ಹೊರಡಲು ಪುರಜನರು ಅವರ ಪೋಗಿಂಗೆ ಸೈರಿಸಲಾರದೆ ಹೇಳಿಕೊಳ್ಳುವ ಮಾತಿನಲ್ಲಿ ಈ ಗಾದೆಯಿದೆ -

ಜೂದಿನ ಗೆಲ್ದೊಳಾದೀ
ಮೇದಿನಿಯುಂ ಕಂಡು ಕಜ್ಜಮಂ ಕಾಣದೆ ದು
ರ್ಯೋದನನದೇನದೇಂ ಮರು
ಳಾದನೊ ಬಡಿಗಂಡನಿಲ್ಲ ಪಾಲನೆ ಕಂಡಂ

ಬೆಕ್ಕು ಕದ್ದು ಹಾಲ್ಕುಡಿಯುವಾಗ ಅದಕ್ಕೆ ಕಾಣುವುದು ಹಾಲು (ಪಾಲು) ಮಾತ್ರ. ಆ ಬೆಕ್ಕಿಗೆ ಹೊಡೆಯಲು ಒಡತಿ ಎತ್ತಿದ ಬಡಿಗೆ ಕಾಣಿಸದು. ಹಾಗೆಯೇ ಕೌರವನು ಪಾಂಡವರ ರಾಜ್ಯದ ಪಾಲನ್ನು ಮಾತ್ರ ಕಂಡನಲ್ಲದೆ ಅದರ ಭಯಂಕರ ಪರಿಣಾಮವನ್ನು ಕಾಣಲಿಲ್ಲ - ಎಂಬ ಭವಿಷ್ಯತ್ವದ ಸಂಕೇತ ಈ ಗಾದೆಯಲ್ಲಿದೆ.

೭) ಸೆಟ್ಟಿಯ ಬಳ್ಳಂ ಕಿರಿದು (೧೨-೧೭೫) :

ಅಕ್ಕಿ, ಬೇಳೆ, ಕಾಳು ಮುಂತಾದ ದಿನಸಿಯ ಬಗೆಗಳನ್ನು ಮಾರುವ ಸೆಟ್ಟಿ ಎರಡು ಬಗೆಯ ಬಳ್ಳಗಳನ್ನು ಇಟ್ಟಿರುತ್ತಾನೆಂದು ಪ್ರತೀತಿ. ಒಂದು ದೊಡ್ಡ ಅಳತೆಯದು ಇತರರಿಂದ ತೆಗೆದುಕೊಳ್ಳುವಾಗ ಅಳೆಯಲು ಉಪಯೋಗಿಸುವಂತಹದು. ಇನ್ನೊಂದು ಚಿಕ್ಕ ಅಳತೆಯದು-ಇತರರಿಗೆ ಅಳೆದುಕೊಡುವಾಗ ಉಪಯೋಗಿಸುವಂತಹದು. 'ಸೆಟ್ಟಿಯ ಬಳ್ಳ ಕಿರಿದು, ಭಟ್ಟನ ಸೊಲ್ಲು ಹಿರಿದು' ಎಂಬುದು ಈ ಗಾದೆಯ ಪೂರ್ಣರೂಪ. ಪಂಪಭಾರತದಲ್ಲಿ ಅರ್ಜುನನು ಕರ್ಣನನ್ನು ಜರೆಯುವಲ್ಲಿ ಈ ಗಾದೆ ಬಳಕೆಯಾಗಿದೆ. 'ಹಿಂದೆ ನೀನು ಬಹಳ ಶೌರ್ಯವನ್ನು ಮೆರೆಯಿಸಿದವನು. ಆ ಬಳ್ಳ ದೊಡ್ಡದು. ಆದರೆ, ಈಗಿನ ಯುದ್ಧದಲ್ಲಿ ಏಕೆ ನನಗೆ ಹೆದರಿ ಹಿಂಜರಿದೆ? 'ಸೆಟ್ಟಿಯ ಬಳ್ಳ ಕಿರಿದು' ಎಂಬ ಗಾದೆಯನ್ನು ನಿಶ್ಚಯಗೊಳಿಸಿದೆಯಲ್ಲವೆ? ಎನ್ನುತ್ತಾನೆ.

೮) ಅಕ್ಕಿಗೊಟ್ಟು ಮಡಗೂಳುಣ್ಬಂದಂ (ಆದಿಪು. ೧೪-೩೨) :

ಭರತ ಚಕ್ರೇಶ್ವರನು ತನ್ನ ಅಧೀನತೆಗೆ ತಮ್ಮಂದಿರೆಲ್ಲರೂ ಒಳಪಡುವಂತೆ ಹೇಳಿ ಕಳುಹಿಸಿದಾಗ ಆ ಸೋದರರು ಭಾವಿಸಿ ಆಡಿಕೊಂಡ ಮಾತಿನಲ್ಲಿ ಈ ಗಾದೆಯಿದೆ :

ಪಿರಿಯಣ್ಣಂ ಗುರು ತಂದೆಯೆಂದೆರಗುವಂ ಮುನ್ನೆಲ್ಲಮಿಂತೀಗಳಾ
ಳರಸೆಂಬೊಂದು ವಿಭೇದಮಾದೊಡೆಜಕಂ ಚಿಃ ಕಷ್ಟಮಲ್ತೇ ವಸುಂ
ಧರೆಗಯ್ಯಂ ದಯೆಗೆಯ್ಯೆ ಮುಂ ಪಡೆದುದರ್ಕಿಂತೀತನೊಳ್ ತೊಟ್ಟ ಕಿಂ
ಕರಭಾವಂ ನಮಗಕ್ಕಿಗೊಟ್ಟು ಮಡಗೂಳುಣ್ಬಂದಮಂ ಪೋಲದೇ

ಭರತನು ನಮಗೆಲ್ಲ ಹಿರಿಯಣ್ಣ, ಗುರು, ತಂದೆ - ಎಂಬ ಪೂಜ್ಯಭಾವನೆಯಿಂದ ನಾವೆಲ್ಲ ಮೊದಲೇ ಸ್ವಾಷ್ಟಾಂಗ ವಂದನೆ ಸಲ್ಲಿಸೋಣ. ಆದರೆ, ನಮ್ಮ ರಾಜ್ಯವನ್ನೆಲ್ಲ ಅವನಿಗೆ ಒಪ್ಪಿಸಿದಲ್ಲಿ ಅವನು ಅರಸು, ನಾವು ಆಳುಗಳಾಗುತ್ತೇವೆ. ಈ ವಿಭೇದವಾದರೆ ನಮ್ಮೊಳಗೆ ಎರಕ ಕಷ್ಟಕರ. ನಮ್ಮ ತಂದೆ ದಯೆಪಾಲಿಸಿದ್ದರಿಂದ ನಾವು ರಾಜ್ಯ ಪಡೆದೆವು. ಇದನ್ನೀಗ ಹಿರಿಯಣ್ಣನಿಗೆ ಒಪ್ಪಿಸುವುದೆಂದರೆ, ಇದ್ದ ಅಕ್ಕಿಯನ್ನು ಕೊಟ್ಟಹಾಗೆ. ಅನಂತರ, ಅವನ ಆಳಾಗಿ ವರ್ತಿಸುವುದೆಂದರೆ, ಆ ಅಕ್ಕಿಯ ಅನ್ನದಲ್ಲಿ ಅವನು ತಿಂದುಳಿದುದನ್ನು (ಅವಶೇಷಾನ್ನವನ್ನು) ತಿಂದಂತೆ ಹೀನಾಯಮಾನವೇ ಸರಿ. - ಹೀಗೆ ಅವರು ಆಡಿಕೊಳ್ಳುತ್ತಾರೆ.

ಶಬ್ದಪ್ರಯೋಗಗಳಲ್ಲಿ ದೇಸಿ

ಪ್ರಚಲಿತವಾಗಿ ಜನರಿಗೆ ಗೊತ್ತಿಲ್ಲದ ಎಷ್ಟೋ ದೇಶಿ ಶಬ್ದಗಳನ್ನು ಪಂಪನು ತನ್ನ ಕಾವ್ಯಗಳಲ್ಲಿ ಬಳಸಿದ್ದಾನೆ. ಅವಕ್ಕೆಲ್ಲ ಮಾರ್ಗತ್ವವನ್ನು ಕಲ್ಪಿಸಿ, ದೇಸಿ - ಮಾರ್ಗಗಳೆರಡೂ ಒಡವೆರೆದರೆ, ಹೇಗೆ ಚೆನ್ನೆನಿಸುವುದೆಂದು ತೋರಿಸಿದ್ದಾನೆ. ಅವನ್ನೆಲ್ಲ ಗುರುತಿಸುವುದು ಇನ್ನೂ ವ್ಯಾಪಕದ ಕೆಲಸ. ಆದುದರಿಂದ ಪ್ರಾತಿನಿಧಿಕವಾಗಿ ಮಾತ್ರ ಕೆಲವನ್ನಿಲ್ಲಿ ಪ್ರಸ್ತಾವಿಸಲಾಗುವುದು - ಇವುಗಳಲ್ಲಿ ಅನೇಕವು ಹವ್ಯಕ ಉಪಭಾಷೆಯಲ್ಲಿ ಮತ್ತು ತುಳುವಿನಲ್ಲಿ ಚಾಲನೆಯಲ್ಲಿರುವುದಾಗಿ ಕಂಡುಬರುತ್ತದೆ.

೧) **ಇಲ್ಲೆಯೋ** (೨-೯೧): ಮೇಣ್ಕುಲಮಿಲ್ಲೆಯೋ .... ಪೂಣ್ಕೆಗಳಿಲ್ಲೆಯೋ)

‘ಇಲ್ಲವೋ’ ಎಂಬರ್ಥದಲ್ಲಿರುವ ಈ ದೇಸಿಮಾತು ಹವ್ಯಕರ ಬಳಕೆಮಾತಿನಲ್ಲಿದೆ.

೨) **ಇಸಲೆ** (ಆದಿಪು ೨-೯೧) ಓಸರಿಸಿದಂ ಇಸಲೆ ಕಂತು)

‘ಬಾಣಪ್ರಯೋಗ ಮಾಡುವುದಕ್ಕೆ’ ಎಂದರ್ಥ, ಧಾತುವಿಗೆ ಸೇರುವ ‘ಅಲು’ ಪ್ರತ್ಯಯವು (ಹೋಗಲು, ನೋಡಲು - ಇತ್ಯಾದಿ.) ಹವ್ಯಕರಲ್ಲಿ ‘ಅಲೆ’ ಎಂಬ ರೂಪದಲ್ಲಿದೆ. ಉದಾ : ಓದಲೆ, ಬರೆವಲೆ, ಹೇಳಲೆ - ಇತ್ಯಾದಿ.) ಪಂಪನು ಇದನ್ನೇ ಪ್ರಯೋಗಿಸಿರುವುದು ಕಂಡುಬರುತ್ತದೆ.

೩) **ತಂಗೆ** (೩-೧೧ ವಚನ) ಹವ್ಯಕದಲ್ಲಿ ‘ತಂಗಿ’ ಎಂಬುದು ತಂಗೆ ಎಂತಲೇ ಉಚ್ಚಾರಗೊಳ್ಳುತ್ತದೆ.

೪) **ಎಕ್ಕಸಕ್ಕ** (೧೧-೧೩೭ವಚನ) ಹೆಚ್ಚು, ಅತಿಶಯ ಎಂಬ ಅರ್ಥದಲ್ಲಿ ಈ ಶಬ್ದ ಹವ್ಯಕದಲ್ಲಿದ್ದು ಕನ್ನಡಕ್ಕೆ ದೇಸಿಯಾಗಿದೆ.

೫) **ತೆಗಲೆ** (೧೧-೧೩೬) ವಕ್ಷಸ್ಥಳ ಎಂಬ ಅರ್ಥವುಳ್ಳ ಈ ಶಬ್ದವು ಹವ್ಯಕ, ತುಳು ಎರಡರಲ್ಲಿ ಪ್ರಚಲಿತವಾಗಿದೆ.

೬) **ಪುಳಿಂಚು** (೮-೬೭) ಮೃಗಮದದ ಪುಳಿಂಚು) - ದ್ರವ ವಸ್ತುವಿನ ಮಿತಿಮೀರಿದ ಲೇಪನ. ಎಣ್ಣೆ ಪುಳಿಂಚು. (ಹವ್ಯಕ ಮತ್ತು ತುಳು)

೭) **ಕಳಿಂಚು** (೮-೫೧) ಬರವ ಕಳಿಂಚಿನ) - ಒಣಗಿ ಸುಟ್ಟು ಕರಿಕಾಗುವಿಕೆ. ಹವ್ಯಕ ತುಳುಗಳಲ್ಲಿ ಕರಂಚು ಎಂಬ ರೂಪದಲ್ಲಿದೆ.

೮) **ಜೊಂಪ** (೭-೮೧) ವಚನ, ಆದಿಪು, ೨-೯೭ ವಚನ) - ಚಪ್ಪರ - ಈ ಶಬ್ದ ಹವ್ಯಕದಲ್ಲಿಲ್ಲ. ತುಳುವಿನಲ್ಲಿ ದೊಂಪ ಎಂಬ ರೂಪದಲ್ಲಿದೆ.

೯) **ನೂರು** (೫-೪೩) - ನುಸುಳು, ನುಗ್ಗು ಎಂಬ ಅರ್ಥದ ಧಾತು. ಹವ್ಯಕ ತುಳುಗಳಲ್ಲಿದೆ.

೧೦) **ಪರಡು** (೯-೯೫ ವಚನ) ದಕ್ಷಿಣ ಚರಣದೊಳ್ ನೆಲನಂ ಪರಡಿ) - ಕತ್ತಲೆಯಲ್ಲಿ ಕಣ್ಣಿಗೆ ಕಾಣಿಸದ ಕಡೆ ಕಾಲಿನಿಂದಲೋ ಕೈಯಿಂದಲೋ ಸ್ಪರ್ಶಿಸಿ ಹುಡುಕುವುದು. (ತು.ಹ.)

೧೧) **ಬೆಳ್ಳ** (೪-೪೨ : ವಾರಾಶಿ ಭೋಂಕನೆ ಬೆಳ್ಳಂಗೆಡೆದತ್ತೊ) ಪ್ರವಾಹ. ಇದೇ ಅರ್ಥದಲ್ಲಿ ಹ.ತು.ಗಳಲ್ಲಿದೆ ಹೆಡ್ಡ ಎಂಬ ಅರ್ಥದಲ್ಲಿಯೂ ಪಂಪನ ಪ್ರಯೋಗ (೧೦-೪೫)

೧೨) **ನೋಡುಗೆ** (೩-೫೫) ನೀನಾತನಂ ನೋಡುಗೇ) - ನೋಡು ಎಂದೇ ಅರ್ಥ. ಇದು ಸ್ತ್ರೀಯನ್ನು ಸಂಬೋಧಿಸಿ, ಹೇಳುವ ವಿಧಿರೂಪದ ಕ್ರಿಯಾಪದ. ಇಂತಹ ಪ್ರಯೋಗ ತುಳುವಿನಲ್ಲಿದೆ. ಉದಾ: ಬಲ್ಲಗೆ (ಬಾ), ಪೋಲಗೆ (ಹೋಗು).

ಪಂಪನು ನಿರೂಪಿಸಿರುವ ಲಾಕ್ಷಣಿಕ ಪ್ರಸ್ತಾವದಂತೆ, ಕಾವ್ಯವು ಶ್ರೇಷ್ಠವೆನಿಸಬೇಕಾದರೆ ದೇಶಿ - ಮಾರ್ಗಗಳೆರಡೂ ಒಡಂಬಟ್ಟಿರಬೇಕು. ಕೇವಲ ದೇಸಿಯೇ ಆಗಿದ್ದರೆ ಸಾಲದು. ಮಾರ್ಗರಹಿತವಾದ ದೇಸಿ ಶುದ್ಧಜಾನಪದವೆನಿಸುವುದು. ಆದರಲ್ಲಿ ಭಾಷಾದೃಷ್ಟಿಯಿಂದ ಉಚ್ಚಾರಣೆಯ ದೋಷ, ಅಕ್ಷರದೋಷ, ಶಬ್ದದೋಷ, ವಾಕ್ಯದೋಷ - ಇವೊಂದೂ ಲಕ್ಷಿಸತಕ್ಕವಲ್ಲ. ದೇಸಿ ಊರೂರಿಗೂ ಸೀಮೆ ಸೀಮೆಗೂ ಬೇರೆ ಬೇರೆಯಾಗುವುದರಿಂದ, ಒಂದು ಕಡೆಯವರು ಇನ್ನೊಂದು ಕಡೆಯ ದೇಸಿಯನ್ನು - ಜಾನಪದ ಸಾಹಿತ್ಯವನ್ನು ತಿಳಿಯಲಾರದಾಗುವ ಸಂಭಾವ್ಯವುಂಟು. 'ವಾಸುಗಿಯು ಮರಿಯಲಾರದೆ ಬೇಸರುಗುಂ ದೇಸಿ ಬೇರೆವೇರಪ್ಪುದರಿಂ' ಎಂಬುದು ಕವಿರಾಜಮಾರ್ಗದ ಮಾತು. ಈ ಮಾತು ಅಂದಿಗೆ ಹೇಗೆ ಸರಿಯೋ ಹಾಗೆಯೇ ಇಂದಿಗೂ ಸರಿ. ಪಂಪನು ಈ ಸಂಗತಿಯನ್ನು ಸಾವಿರ ವರ್ಷಗಳ ಹಿಂದೆಯೇ ಸಂಲಕ್ಷಿಸಿ, ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು. ಎಂದು ಹೇಳಿಬಿಟ್ಟಿದ್ದಾನೆ. ಅಂದರೆ, ದೇಸಿಯ ಅಂತಸ್ಸತ್ತ್ವವನ್ನು, ಅರ್ಥ ಸಂಪತ್ತನ್ನು, ಭಾವ ಸಮೃದ್ಧಿಯನ್ನು ಸ್ವೀಕರಿಸಿ, ಅಲ್ಲಿಯ ಅಶುದ್ಧವನ್ನು, ಅಶ್ಲೀಲವನ್ನು, ಅಸಭ್ಯವನ್ನು ಪರಿಹರಿಸಿ ಮಾರ್ಗ ಸಾಹಿತ್ಯವನ್ನು ರೂಪಿಸಬೇಕೆಂಬುದು ಪಂಪನ ಆಶಯ. ಆ ಆಶಯನ್ನು ಅವನದೇ ಆದ ಇನ್ನೊಂದು ಉದಾಹರಣೆಯಿಂದ ದೃಢಪಡಿಸಬಹುದು -

ನರೇಂದ್ರ ತಾಪಸನಾದ ಅರ್ಜುನನು ಇಂದ್ರಕೀಲದಲ್ಲಿ ತಪಸ್ಸಾಧನೆ ಮಾಡುತ್ತಿರಲು, ಅವನಿಗೆ ತಪೋವಿಘ್ನವನ್ನು ಮಾಡುವುದಕ್ಕಾಗಿ ಇಂದ್ರನ ಅಣತಿಯಂತೆ ದೇವಗಣಿಕೆಯರಾದ ಊರ್ವಶಿ, ಮೇನಕೆ, ತಿಲೋತ್ತಮೆಯರು ಬರುತ್ತಾರೆ. ಅವರಲ್ಲೊಬ್ಬಳು ಸರಸ್ವತಿ ಬಾಯ್ದೆರೆದಂತೆ ಹಾಡಿದಳು. ಇನ್ನೊಬ್ಬಳು ಗೇಯದೊಳೀಕೆ ಸೊರ್ಕನಿಕ್ಕಿದಳೆನೆ ಕಳ್ಗೆ ಚಕ್ಕಣಮೆನಿಪ್ಪುದು ಸೋಗು ಎನಿಸಲ್ಕೆಸಾಲ್ವ ಸಗ್ಗದ ಪೊಸ ದೇಸಿಯೋಳಿಗಳನ್ನು ಹಾಡಿದಳು. ಇವರ ಗಾನದಲ್ಲಿ ದೇಸಿ ಸಮೃದ್ಧವಾಗಿಯೇ ಇತ್ತು, ಮಾರ್ಗ ಇರಲಿಲ್ಲ. ಅನಂತರ ಆ ಗೀತಗಳಿಗೆ ಮಕುಟವಿಡುವಂತೆ ತಿಲೋತ್ತಮೆ ನಾಟ್ಯವಾಡಿದಳು. ಅದು ಹೇಗಿತ್ತು ? ಅರ್ಜುನನಲ್ಲಿ ಅದೇನು ಪ್ರಭಾವವನ್ನು ಬೀರಿತು ? ಎಂಬುದನ್ನು ಪಂಪನು ಹೀಗೆ ತಿಳಿಸಿದ್ದಾನೆ -

> **ಆಡದ ಮೆಯ್ಗಳಿಲ್ಲ ನಿಡುಮೆಯ್ಗಳುಮಾಡಿದುವಂತೆ ಮೆಟ್ಟುವಳ್**
> **ನೋಡಿದರೆಲ್ಲರಂ ಪಿಡಿದು ಮೆಟ್ಟದಳಿಟ್ಟಳಮಾಯ್ತು ದೇಸಿ ಕೆ**
> **ಯ್ಯೂಡಿದುದಿಲ್ಲ ಮಾರ್ಗಮೆನೆ ವಿಸ್ಮಯಮಾಗಿರೆ ತನ್ನ ಮುಂದೆ ಬಂ**
> **ದಾಡಿದಳಾ ತಿಲೋತ್ತಮೆಯಸೊಲ್ದನುಮಿಲ್ಲ ನರೇಂದ್ರ ತಾಪಸಂ** (೭-೯೧)

ಅರ್ಜುನನ ಮುಂದೆ ಪ್ರದರ್ಶಿತವಾದ ತಿಲೋತ್ತಮೆಯ ನೃತ್ಯದಲ್ಲಿ ದೇಸಿ ಇಟ್ಟಳ (ಸಮೃದ್ಧ; ಮನೋಹರ)ವಾಗಿದ್ದಿತು. ಆದರೇನು ? ಸಭ್ಯರು ಸುಸಂಸ್ಕೃತರು ಮೆಚ್ಚುವ ಮಾರ್ಗ ಕೈಗೂಡಿ ಬಂದಿರಲಿಲ್ಲ. ಆದುದರಿಂದಲೇ ನರೇಂದ್ರ ತಾಪಸನು 'ಒಲ್ದನುಮಿಲ್ಲ.' ಅರ್ಜುನನು ಮೆಚ್ಚಲೇ ಇಲ್ಲ. ಇಲ್ಲಿ ಪಂಪನು ಅರ್ಜುನನ ಪ್ರತಿಕ್ರಿಯೆಯ ಮೂಲಕ ಉತ್ತಮ ಸಾಹಿತ್ಯದ ಲಾಕ್ಷಣಿಕತೆಯ ಸಂದೇಶವನ್ನು ನಮಗೆ ನೀಡಿದ್ದಾನೆ. ದೇಸಿ ಮಾರ್ಗಗಳೆರಡೂ ಇದ್ದರೆ ಕಲೆ ಸುಗ್ರಾಹ್ಯವೆಂಬುದನ್ನು ಸೂಚ್ಯವಾಗಿ ತಿಳಿಸಿರುತ್ತಾನೆ. ಪಂಪನು ಇಂತಹ ಒಂದು ಸಾರ್ವಕಾಲಿಕ ಕಾವ್ಯತತ್ತ್ವವನ್ನು ನಿರೂಪಿಸಿದ್ದಾನೆಂದು ನಾವಿಲ್ಲಿ ತಿಳಿದುಕೊಳ್ಳಬಹುದು.

□

೨೧
ಜೈನರಾಮಾಯಣಗಳಲ್ಲಿ ಹನುಮಂತ

ರಾಮಾಯಣ ಎಷ್ಟು ವಿಧ? ಅದರ ಮಹತ್ವವೇನು? ಎಂಬ ಪ್ರಶ್ನೆಗೆ ಶ್ರೀರಾಮರಕ್ಷಾ ಸ್ತೋತ್ರದಲ್ಲಿ ಉತ್ತರ ಹೀಗಿದೆ -

ಚರಿತಂ ರಘುನಾಥಸ್ಯ ಶತಕೋಟಿ ಪ್ರವಿಸ್ತರಂ
ಏಕೈಕಮಕ್ಷರಂ ಪುಂಸಾಂ ಮಹಾಪಾತಕನಾಶನಂ

ಅಂದರೆ - "ರಾಮಾಯಣದ ಸಂಖ್ಯೆ ಶತಕೋಟಿ. ಅಂತಹ ರಾಮಾಯಣದ ಒಂದೇ ಒಂದು ಅಕ್ಷರರೋಚ್ಚಾರಣೆ ಮಹಾಪಾಪಗಳನ್ನು ನಾಶಪಡಿಸುವುದು". ಅದ್ಭುತರಾಮಾಯಣದಲ್ಲಿ ಹೇಳಿರುವ ಪ್ರಕಾರ, ಬ್ರಹ್ಮಲೋಕದಲ್ಲಿ ಶತಕೋಟಿ ರಾಮಾಯಣಗಳಿವೆ. ಅವುಗಳಲ್ಲಿ ಇಪ್ಪತ್ತೈದು ಸಾವಿರ ರಾಮಾಯಣಗಳು ಈ ಭೂಲೋಕಕ್ಕೆ ಬಂದಿವೆ. ಕವಿ ಕುಮಾರವ್ಯಾಸನು ತನ್ನ ಕಾವ್ಯರಚನೆಗೆ ಮಹಾಭಾರತವನ್ನು ಆರಿಸಿಕೊಳ್ಳಲು ಕಾರಣವಾಗಿ ರಾಮಾಯಣಗಳು ಅಸಂಖ್ಯವಾಗಿರುವುದನ್ನು ಹೀಗೆ ಹೇಳಿದ್ದಾನೆ -

ತಿಣಿಕಿದನು ಫಣಿರಾಯ ರಾಮಾ
ಯಣದ ಕವಿಗಳ ಭಾರದಲಿ ತಿಂ
ತಿಣಿಯ ರಘುವರಚರಿತೆಯಲಿ ಕಾಲಿಡಲು ತೆರಪಿಲ್ಲ (ಸಂ. ೧-೧೭)

ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿಯೂ ನಮ್ಮ ದೇಶದ ಎಲ್ಲ ಭಾಷೆಗಳಲ್ಲಿಯೂ ಜಾನಪದ ಯಕ್ಷಗಾನ ಸಾಹಿತ್ಯದಲ್ಲಿಯೂ ರಾಮಾಯಣಗಳಿವೆ. ಇವಲ್ಲದೆ, ಬೌದ್ಧರಾಮಾಯಣ ಜೈನ ರಾಮಾಯಣ ಎಂಬ ವರ್ಗವೂ ಇದೆ. ಪ್ರಕೃತ, ಜೈನ ರಾಮಾಯಣವೇ ನಿರೂಪಣ ವಿಷಯ.

ಜೈನರಾಮಾಯಣ ಕೂಡ, ಸ್ಪಷ್ಟವ್ಯತ್ಯಾಸವುಳ್ಳ ಎರಡು ಪರಂಪರೆಯಿಂದ ಕೂಡಿದೆ. ಒಂದು ವಿಮಲಸೂರಿಯ ಪ್ರಾಕೃತದ 'ಪಉಮಚರಿಯ' ಇದರ ಕಾಲ: ಕ್ರಿ.ಶ. ೩. ಇನ್ನೊಂದು - ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ರಚಿಸಿದ 'ಉತ್ತರಪುರಾಣ'ದಲ್ಲಿ ಬರುವ 'ಮುನಿಸುವ್ರತ ತೀರ್ಥಂಕರ' ಪುರಾಣಾಂತರ್ಗತ ರಾಮಾಯಣ (ಕಾಲ : ಕ್ರಿ.ಶ. ೮೯೮). ವಿಮಲಸೂರಿಯ ಪರಂಪರೆಯದಾಗಿ ಸಂಸ್ಕೃತದಲ್ಲಿ ರವಿಷೇಣನ 'ಪದ್ಮಪುರಾಣ', ಹೇಮಚಂದ್ರನ 'ಜೈನರಾಮಾಯಣ', ದೇವವಿಜಯಗಣಿಯ 'ರಾಮಚರಿತ'ಗಳಿವೆ. ಕನ್ನಡದಲ್ಲಿ 'ಪಂಪರಾಮಾಯಣ' ಚಂಪು (೧೧೦೦), ಕುಮುದೇಂದುರಾಮಾಯಣ - ಷಟ್ಪದಿ (೧೨೭೫),

ದೇವಚಂದ್ರನ (೧೭೯೪) 'ರಾಮಕಥಾವತಾರ' - ಚಂಪು, ಚಂದ್ರಸಾಗರವರ್ಣಿಯ (೧೮೧೦) 'ಜಿನರಾಮಾಯಣ' - ಷಟ್ಪದಿ - ಇವನ್ನು ಮುಖ್ಯವಾಗಿ ಹೇಳಬಹುದು. ಗುಣಭದ್ರಾಚಾರ್ಯರ ಅನುಸರಣೆಯಲ್ಲಿ - ಚಾವುಂಡರಾಯ ಪುರಾಣ (೯೭೮) ಎಂಬ ಹಳಗನ್ನಡ ಗದ್ಯಕಾವ್ಯದಲ್ಲಿ ಬರುವ 'ರಾಮಲಕ್ಷಣ ಚರಿತಂ' ಎಂಬ ಭಾಗ, ದೇವಪ್ಪಕವಿಯ (೧೫೨೦) 'ರಾಮವಿಜಯ ಕಾವ್ಯ' - ಸಾಂಗತ್ಯ, ನಾಗರಾಜನ (೧೩೩೧) 'ಪುಣ್ಯಾಸ್ರವ' ದಲ್ಲಿ ಬರುವ ರಾಮಾಯಣ - ಎಂಬಿವನ್ನು ಹೇಳಬಹುದು.

ಜೈನರಾಮಾಯಣಗಳ ಪ್ರಕಾರ - ರಾಮ, ಲಕ್ಷ್ಮಣ, ಸುಗ್ರೀವ, ಹನುಮ, ರಾವಣ- ಇವರೆಲ್ಲ ಜೈನರು, ಜಿನಭಕ್ತರು. ರಾವಣನಲ್ಲಿ ಉದಾತ್ತಗುಣಗಳೇ ಹೆಚ್ಚಾಗಿದ್ದರೂ ಸೀತಾಪಹಾರ ಮಾಡಿದ ಅನೀತಿವಂತ. ಅದೊಂದೇ ಕಾರಣದಿಂದ ಶಿಕ್ಷಾರ್ಹ. ಹನುಮಾದಿಗಳು ಕಪಿಗಳಲ್ಲ; ಕಪಿಧ್ವಜರು. ವಿಮಲಸೂರಿಯ ಪ್ರಕಾರ - ಆದಿತ್ಯಪುರದ ಪ್ರಹ್ಲಾದರಾಜನ ಮಗ ಪವನಂಜಯ. ಇವನು ಮಹೇಂದ್ರಪುರದ ಮಹೇಂದ್ರನೆಂಬ ವಿದ್ಯಾಧರನ ಮಗನ ಮಗಳಾದ ಅಂಜನೆಯನ್ನು ಮದುವೆಯಾದನು. ಆಕೆ ಹನೂರುದ್ವೀಪದಲ್ಲಿ ಪ್ರಸವಿಸಿದ ಪುತ್ರನೇ ಹನುಮಂತ; ಜನಿಸುವಾಗಲೇ ವಜ್ರದೇಹಿ. ಒಮ್ಮೆ ಅಂಜನೆಯ ಕೈಯಲ್ಲಿದ್ದ ಈ ಶಿಶು ತನ್ನ ಚಟುವಟಿಕೆಯಿಂದ ಜಾರಿ ಮಹಾಶಿಲೆಯ ಮೇಲೆ ಬೀಳಲು ಮಗುವಿಗೇನೂ ಏಟಾಗಲಿಲ್ಲ. ಆದರೆ, ಆ ಶಿಲೆ ಪುಡಿಯಾಯಿತು! ಆದುದರಿಂದ ಅಂಜನೆ ತನ್ನ ಮಗುವನ್ನು ಮುದ್ದಿನಿಂದ ಶ್ರೀ ಶೈಲ ಎಂದು ಕರೆಯತೊಡಗಿದಳು. ಮಹಾತೇಜಸ್ವಿಯೂ ಸಕಲ ವಿದ್ಯಾಪ್ರವೀಣನೂ ನೀತಿಸಂಪನ್ನನೂ ಆಗಿ ಹನುಮನು ಹರಯಕ್ಕೆ ಬಂದ ಮೇಲೆ ರಾವಣನಿಗೆ ಸಹಾಯಕನಾದನು. ಇವನ ನೆರವಿನಿಂದ ರಾವಣನು ವರುಣನನ್ನು ಸೋಲಿಸಿದನು. ಅನಂತರ ಹನುಮನು ಸ್ವಲ್ಪ ಕಾಲ ಲಂಕೆಯಲ್ಲಿದ್ದನು. ರಾವಣನ ತಂಗಿ ಚಂದ್ರನಖಿ - ಅವಳ ಮಗಳಾದ ಅನಂಗಪುಷ್ಪೆ ಎಂಬವಳನ್ನು ರಾವಣನು ಹನುಮಂತನಿಗೆ ಮದುವೆ ಮಾಡಿಸಿದನು. ಮುಂದೆ, ಸುಗ್ರೀವನ ಮಗಳಾದ ಪದ್ಮರಾಗೆಯನ್ನೂ ಹನಮಂತನು ವರಿಸಿಮದಾಗಿ ಈ ಜೈನ ರಾಮಾಯಣ ಕಥೆ ಹೇಳುತ್ತದೆ. ಸುಗ್ರೀವನ ತಂಗಿ ಶ್ರೀಪ್ರಭೆಯನ್ನು ರಾವಣನಿಗೆ ಕೊಟ್ಟುದಾಗಿಯೂ ಹೇಳಲಾಗಿದೆ. ಈ ಪೂರ್ವಕಥೆ ಗುಣಭದ್ರಾಚಾರ್ಯರಲ್ಲಿ ಸ್ವಲ್ಪ ವ್ಯತ್ಯಾಸಗಳಿಂದ ಕೂಡಿದೆ -

ವಾಲಿ-ಸುಗ್ರೀವರು ಕಿಳಕಿಳ ನಗರದ ಬಲೀಂದ್ರನೆಂಬ ಖೇಚರ ರಾಜನಿಗೆ ಸೌಂದರಿ ಎಂಬ ಅರಸಿಯಲ್ಲಿ ಜನಿಸಿದವರು. ಬಲೀಂದ್ರನ ಅನಂತರ, ವಾಲಿಗೆ ಅಧಿರಾಜ ಪದವಿಯೂ ಸುಗ್ರೀವನಿಗೆ ಯುವ ರಾಜತ್ವವೂ ದೊರಕಿದವು. ವಾಲಿ ದುರುಳನಾಗಿದ್ದು ತಮ್ಮನಾದ ಸುಗ್ರೀವನನ್ನು ರಾಜ್ಯಭ್ರಷ್ಟಗೊಳಿಸಿದನು. ಇನ್ನೊಂದೆಡೆ - ವಿದ್ಯುತ್ಕಾಂತಪುರದ ರಾಜನಾದ ಪ್ರಭಂಜನನೆಂಬ ಖೇಚರ ರಾಜನಿಗೆ ಅಂಜನಾದೇವಿಯಲ್ಲಿ ಜನಿಸಿದಾತ ಅಮಿತವೇಗ. ಇವನು ಮಹಾಪರಾಕ್ರಮಿ. ಗಗನಗಾಮಿವಿದ್ಯೆಯಲ್ಲಿ, ರೂಪಾಂತರವಿದ್ಯೆಗಳಲ್ಲಿ ನಿಪುಣ. ವ್ಯಾಕರಣಾದಿ ಶಾಸ್ತ್ರಜ್ಞಾನವುಳ್ಳವನು. ಹಾಗೆಯೇ ಅತ್ಯಂತ ನೀತಿನಿಷ್ಠನೂ ಲೋಕಹಿತದೃಷ್ಟಿಯವನೂ ಆಗಿದ್ದನು. ಒಮ್ಮೆ ಖೇಚರಕುಮಾರಕರ ಸಮೂಹದಲ್ಲಿ ನಡೆದ ವಿದ್ಯಾಮಹಿಮೆಯ ಪರೀಕ್ಷೆಯಲ್ಲಿ ಈ ಅಮಿತವೇಗನು

ಬೃಹದ್ರೂಪತಾಳಿ, ವಿಜಯಾರ್ಧಪರ್ವತದ ನೆತ್ತಿಯ ಮೇಲೆ ತನ್ನ ಬಲಗಾಲನ್ನಿಟ್ಟು ಎಡಗಾಲಿನಿಂದ ಸೂರ್ಯಮಂಡಲವನ್ನು ಒದೆದು ಸಾಮರ್ಥ್ಯಪ್ರದರ್ಶನ ಮಾಡಿದನು. ಅನಂತರ ಅಣುರೂಪವನ್ನು ತಾಳಿ ಬೆರಗುಪಡಿಸಿದನು. ಅಂದಿನಿಂದ ಅಮಿತವೇಗನಿಗೆ ಅಣುವ, ಅಣುಮಾನ್ ಎಂಬ ಹೆಸರುಗಳಾದವು. ಹನುಂತನೆಂದೂ ಅವನನ್ನು ಕರೆಯಲಾಯಿತು. ವ್ಯಾಕರಣಸಾಗರವನ್ನೇ ಪಾನಮಾಡಿದ ವಾಕ್ಕೋವಿದನಾದ ಈತನು ಸುಗ್ರೀವನ ಗೆಳೆಯನಾದನು.

ಒಮ್ಮೆ ಇವರಿಬ್ಬರು ಸಮ್ಮೇದಪರ್ವತದ ಸಿದ್ಧಕೂಟದಲ್ಲಿ ಜಿನಪೂಜೆಮಾಡುತ್ತಿದ್ದ ಸಂದರ್ಭದಲ್ಲಿ ನಾರದಮಹರ್ಷಿಯೂ ಅಲ್ಲಿಗೆ ಬಂದಿದ್ದನು. ಸುಗ್ರೀವನಿಗೆ ವಾಲಿಯಿಂದಾದ ಕಷ್ಟಕ್ಕೆ ಪರಿಹಾರವಾಗುವ ಬಗೆಯನ್ನು ತಿಳಿಸಲು ಇವರು ಕೇಳಿಕೊಂಡಾಗ, ನಾರದನು ಲೋಕಕಲ್ಯಾಣನಿಷ್ಠರಾದ ರಾಮಲಕ್ಷ್ಮಣರಿಗೆ ಸೀತಾನ್ವೇಷಣ ಕಾರ್ಯದಲ್ಲಿ ನೆರವಾಗುವಂತೆ ಸೂಚಿಸಿದನು. ಅದರಂತೆ ಅವರಿಬ್ಬರೂ ರಾಮಲಕ್ಷ್ಮಣರಿದ್ದಲ್ಲಿಗೆ ಸಕಾಲದಲ್ಲಿ ಬಂದರು.

ಜೈನರಾಮಾಯಣಗಳಲ್ಲಿ ಅಣುವನ (ಹನುಮಂತನ) ಅತಿ ಪ್ರಮುಖವೂ ಅನನ್ಯ ಸಾಧ್ಯವೂ ಆದ ಶ್ರೇಷ್ಠವಾದ ರಾಮಸೇವೆಯೆಂದರೆ - ಅವನು ಮೂರುಬಾರಿ ಲಂಕೆಗೆ ಹೋದುದು ಮತ್ತು ಪ್ರತಿಸಲವೂ ಕಾರ್ಯಯಶಸ್ವಿಯಾದುದು. ಮೊದಲನೆಯ ಬಾರಿ ಲಂಕೆಯಲ್ಲಿ ಸೀತೆಯಿರುವ ಸ್ಥಳವನ್ನು ಕಂಡುಹಿಡಿದು ಆಕೆಗೆ ರಾಮನ ಮುದ್ರಿಕೆಯನ್ನಿತ್ತು ಅವಳಿಂದ ಚೂಡಾಮಣಿಯನ್ನು ಕಾರ್ಯಜಯದ ಸಂಕೇತವಾಗಿ ತಂದುದು. ಎರಡನೆಯ ಬಾರಿ - ರಾವಣನೊಡನೆ ಸಂಧಿಪ್ರಸ್ತಾವಕ್ಕಾಗಿ ಹೋಗಿ ಬಂದುದು. ಮೂರನೆಯ ಬಾರಿ - ಲಂಕೋದ್ಯಾನವನ್ನು ಮುರಿದು, ಲಂಕಾದಹನ ಮಾಡಿ ತನ್ನ ಅದ್ಭುತ ಶಕ್ತಿ ಪ್ರದರ್ಶನ ಮಾಡಿದುದು. ಅವನ್ನಿಲ್ಲಿ ಸಂಕ್ಷೇಪಿಸಿ ಸಮೀಕ್ಷಿಸಲಾಗುವುದು -

ರಾವಣನ ಲಂಕಾಪುರಿಗೆ ಹೋಗಿ ಸೀತೆಯ ಸುದ್ದಿಯನ್ನು ತರಬೇಕಾದರೆ ಆಕಾಶಗಾಮೀ ವಿದ್ಯೆಯನ್ನರಿತ ಹನುಮಂತನೇ ಆಗಬೇಕೆಂದು ಇತರರೆಲ್ಲರೂ ಸೂಚಿಸಿದ ಸಂದರ್ಭದಲ್ಲಿ ಮಾರುತಿಯು ಮೇಘರುತಿಯಿಂದ (ಗುಡುಗಿನಂತಹ ಸ್ವರದಿಂದ) ರಾಮನಿಗೆ ಹೇಳಿದ ಮಾತು ಇಲ್ಲಿದೆ -

ನಯದಿಂ ತಂದಪೆನಂತುಮೀಯದೊಡೆ ಬಲ್ಪಿಂ ತಂದಪೆಂ ದೇವ ದೇ
ವಿಯನಂತಲ್ಲದೆ ನೋಡಿ ಬಪ್ಪುದೆನೆ ಮಾಯಾರೂಪದಿಂ ಪೋಗಿ ಶು
ದ್ಧಿಯನಾಂ ತರ್ಪವನಲ್ಲೆನಾನೆ ಕೊಳನಂ ಪೊಕ್ಕಂತೆವೊಲ್ ಪೊಕ್ಕು ಲಂ
ಕೆಯುಮಂ ದೈತ್ಯನುಮಂ ಭಯಂಗೊಳಿಸಿ ತರ್ಪೆಂ ಜಾನಕೀಶುದ್ಧಿಯಂ

(ಪಂಪರಾ. ೧೧-೪೩)

ಅಂದರೆ - 'ರಾವಣನಿಗೆ ಒಳ್ಳೆಯ ಮಾತನ್ನು ಹೇಳಿ, ನಯವಾಗಿ ಸೀತಾಮಾತೆಯನ್ನು ನಾನು ತರುವೆನು. ಹಾಗೆ ನಯದಿಂದ ಕೊಡದಿದ್ದರೆ ಬಲಾತ್ಕಾರದಿಂದ ತರುವೆನು. ಇದಾವುದೂ ಬೇಡ, ಆಕೆಯನ್ನು ನೋಡಿ ಬಂದರೆ ಸಾಕೆನ್ನುವುದಾದರೆ, ನಾನು ಮಾಯಾರೂಪದಿಂದ ಹೋಗಿ ನೋಡಿ ಸುದ್ದಿಯನ್ನು ತರುವವನಲ್ಲ. ಆನೆಯು ಕೊಳವನ್ನು ಹೊಕ್ಕ ಹಾಗೆ, ನಾನು ಲಂಕೆಯನ್ನು ಹೊಕ್ಕು ಲಂಕಾನಗರವನ್ನೂ ರಾವಣವನ್ನೂ ಭಯಪಡಿಸಿ ಜಾನಕಿಯ ಸುದ್ದಿಯನ್ನು

ತರುವೆನು. ಅಷ್ಟೇ ಅಲ್ಲ, ಹಿಂದೆ ಒಬ್ಬ ರಾಕ್ಷಸನು ಈ ಭೂಮಾತೆಯನ್ನು ಪಾತಾಳಕ್ಕೆ ಒಯ್ದಾಗ, ವಿಷ್ಣುವು ಆ ರಾಕ್ಷಸನನ್ನು ಕೊಂದು ಭೂಮಿಯನ್ನು ತಂದ ಹಾಗೆ, ಅಸುರನಾದ ರಾವಣನನ್ನು ಸಂಹರಿಸಿ ಸೀತಾ ದೇವಿಯನ್ನು ತರುವೆನು. ನನಗೆ ಇದೇನು ಅಸಾಧ್ಯವೇ? - ಎಂದನು. ಹನುಮಂತನ ಸಾಮರ್ಥ್ಯದ ಆತ್ಮವಿಶ್ವಾಸ ಈ ಮಾತಿನಲ್ಲಿ ವ್ಯಕ್ತವಾಗಿದೆ. ಆಗ ಶ್ರೀ ರಾಮನು-ಸೀತೆಯ ಸುದ್ದಿಯನ್ನು ತರುವ ರಾಯಭಾರ ಮಾತ್ರ ನಿನಗೆ, ಯುದ್ಧದಲ್ಲಿ ರಾವಣನನ್ನು ವಧಿಸಿ ಸೀತೆಯನ್ನು ತರುವ ರಾಯಭಾರ ಲಕ್ಷ್ಮಣನಿಗೆ ಮುಡಿಪಾದುದು—ಎಂದನು. ಅನಂತರ, ಅಣುವನು ಶ್ರೀ ರಾಮನ ಮುದ್ರಿಕೆಯನ್ನೂ ಪತ್ರಕರಂಡಕವನ್ನೂ ಪಡೆದುಕೊಂಡು ಆಕಾಶಗಾಮಿನೀ ವಿದ್ಯಾಬಲದಿಂದ ನಭಕ್ಕೆ ನೆಗೆದು ಲಂಕೆಗೆ ತೆರಳಿದನು.

ಹನುಮಂತನು ಲಂಕಾಪುರವನ್ನು ಪ್ರವೇಶಿಸುವಾಗ ತನ್ನ ಕಾಮರೂಪಿಣೀವಿದ್ಯೆಯಿಂದ ಮಧುಕರ (ತುಂಬಿಯ) ರೂಪವನ್ನು ತಾಳಿದ್ದನು. ಎಲ್ಲೆಲ್ಲಿ ಹುಡುಕಿಯೂ ಕಾಣದೆ ಕೊನೆಗೆ 'ಸರ್ವರ್ತುಕ' ಎಂಬ ಉದ್ಯಾನದಲ್ಲಿ ಖೇಚರಿಯರ ಕಾವಲಿನ ಬಂಧನದಲ್ಲಿ ಶಿರೀಷವೃಕ್ಷದ ಕೆಳಗಿದ್ದ ಸೀತೆಯನ್ನು ಕಂಡನು. ಆಕೆಯನ್ನು ಒಲಿಸಲು ರಾವಣನು ಬಗೆಬಗೆಯಿಂದ ಯತ್ನಿಸಿದುದನ್ನು, ಮಂಡೋದರಿ ಅವನಿಗೆ ತಡೆಯನ್ನು ಒಡ್ಡಿದುದನ್ನು ಮತ್ತು ಸೀತೆಗೆ ಧೈರ್ಯ ನೀಡುತ್ತಿದ್ದುದನ್ನೆಲ್ಲ ಕಣ್ಣಾರೆ ಕಂಡು, ಅವರೆಲ್ಲ ತೆರಳಿದ ಅನಂತರ ಹನುಮಂತನು ಕಪಿರೂಪದಲ್ಲಿ ಸೀತೆಗೆ ಕಾಣಿಸಿಕೊಂಡು ಶ್ರೀರಾಮನ ಉಂಗುರವನ್ನೂ ಪತ್ರವನ್ನೂ ಕೊಟ್ಟು ಹೀಗೆಂದನು - "ನಿಮ್ಮನ್ನೀಗಲೆ ಒಯ್ಯುವ ಸಾಮರ್ಥ್ಯ ನನಗಿದ್ದರೂ ಒಡೆಯನ ಆಜ್ಞೆ ಇಲ್ಲದುದರಿಂದ ಅದು ಸಲ್ಲದು. ರಾವಣನು ಕದ್ದುಕೊಂಡೊಯ್ದಂತೆ, ನೀನು ಕದ್ದು ತಾರದಿರು ಎಂದು ರಾಮನು ಹೇಳಿರುತ್ತಾನೆ." ಹೀಗೆಂದು ಹನುಮನು ಸೀತೆಯಿಂದ ಚೂಡಾಮಣಿಯನ್ನು ಪಡೆದುಕೊಂಡು ಬಂದು ರಾಮನಿಗೆ ಎಲ್ಲ ಸಂಗತಿಯನ್ನೂ ನಿವೇದಿಸಿದನು.

ಮರುದಿನ ರಾಮನು ಜನನಾಯಕರ ಸಭೆಯಲ್ಲಿ 'ನಮಗಿನ್ನು ಮುಂದಿನ ಕಾರ್ಯವಾವುದು?' ಎಂದು ಕೇಳಿದಾಗ, ಅಣುವನು 'ಮೊದಲು ಸಾಮ ಭೇದೋಪಾಯಗಳನ್ನು ಪ್ರಯೋಗಿಸುವುದು, ಅದಾಗದಿದ್ದರೆ ದಂಡೋಪಾಯದಿಂದ ಲಂಕೆಯನ್ನೇ ಗೆದ್ದು ಬಿಡೋಣ' ಎಂದನು. ರಾಮನಿಗೆ ಇದು ಸರಿಯೆನಿಸಿತು. ಅವನು ಸೇನಾಪತಿಪಟ್ಟವನ್ನು ಅಣುವನಿಗೂ ಯುವರಾಜಪಟ್ಟವನ್ನು ಸುಗ್ರೀವನಿಗೂ ಕಟ್ಟಿದನು.

ಅನಂತರ ಅಂಗದನ ಸೂಚನೆಯಂತೆ, ಶ್ರೀ ರಾಮನು ವಿಜಯ, ಕುಮುದ, ಮನೋವೇಗ, ರವಿಗತಿ - ಎಂಬ ನಾಲ್ವರು ಖೇಚರಕುಮಾರರೊಡನೆ ಹನುಮನನ್ನು ಸಂಧಿಪ್ರಸ್ತಾವಕ್ಕಾಗಿ ರಾವಣನಲ್ಲಿಗೆ ಕಳುಹಿಸಿದನು. ಅಲ್ಲಿ ವಿಭೀಷಣನನ್ನು ಕಂಡು ಅವನೊಂದಿಗೆ ರಾವಣನನ್ನು ಕಾಣುವಂತೆ ಸೂಚಿಸಿ ಬೀಳ್ಕೊಟ್ಟನು. ಗಗನಗಾಮಿನೀ ವಿದ್ಯೆಯಿಂದ ಅವರು ಲಂಕೆಗೆ ಬಂದರು. ರಾವಣನಲ್ಲಿ ಸಂಧಿಪ್ರಸ್ತಾವದ ಬೇಳೆ ಬೇಯಲಿಲ್ಲ. ವಿಭೀಷಣನ ನೀತಿಬೋಧೆಗೂ ಬೆಲೆ ಬರಲಿಲ್ಲ. ಆಗ ಹನುಮಂತನು 'ಈ ಭೂಮಂಡಲದ ರಾಜರಲ್ಲಿ ನಿನ್ನಂತಹ ಕೆಟ್ಟವರು ಯಾರೂ ಇಲ್ಲ. ಸೀತೆಯನ್ನು ನೀನು ರಾಮನಿಗೆ ಒಪ್ಪಿಸದಿದ್ದರೆ, ನಿನ್ನ ಕೀರ್ತಿ, ಐಶ್ವರ್ಯ, ಜಯದೇವತೆಯರು

ನಿನ್ನಲ್ಲಿ ನಿಲ್ಲರು, ನೀನು ಸಾಯುವೆ ' ಎಂದನು. ಅದಕ್ಕೆ ರಾವಣನು 'ವಿಷಸರ್ಪನ ಹೆಡೆಯ ರತ್ನವನ್ನು, ಸಿಂಹದ ಪ್ರಾಣವನ್ನು, ನನ್ನ ಕೈಗೆ ಬಂದ ಸ್ತ್ರೀಯನ್ನು ತೆಗೆದುಕೊಳ್ಳುವವರು ಯಾರೂ ಇಲ್ಲ' ಎಂದು ನುಡಿದು ಒಳಗೆ ನಡೆದನು. ರಾವಣನ ಕಡೆಯವರು ಹನುಮನೊಡನೆ ಕೀಳುಮಾತಾಡಿದರು. "ನಿಮ್ಮ ದರ್ಪ-ಶೌರ್ಯಗಳನ್ನು ನಾಳಿನ ಯುದ್ಧದಲ್ಲಿ ತಿಳಿಯಬಹುದು" - ಎಂದು ಹೇಳಿ, ಅಣುವನು ಗುಪ್ತವಾಗಿ ಇನ್ನೊಮ್ಮೆ ಸರ್ವರ್ತುಕೋದ್ಯಾನಕ್ಕೆ ಬಂದನು. ಮಂಡೋದರಿ ಅಲ್ಲಿ ಸೀತೆಯೊಂದಿಗೆ ಪಾರಣೆ ಮಾಡಿ, ಪ್ರೀತಿಯ ಮಾತುಗಳನ್ನಾಡಿ, ತೆರಳಿದುದನ್ನು ಕಂಡು, ತನ್ನ ಜೊತೆಯವರೊಂದಿಗೆ ಹಿಂದೆರಳಿ, ಎಲ್ಲ ಸಂಗತಿಗಳನ್ನೂ ಶ್ರೀ ರಾಮನಿಗೆ ನಿವೇದಿಸಿದನು. ಇನ್ನುಳಿದುದು ದಂಡೋಪಾಯವೊಂದೇ ಎಂಬುದನ್ನು ಖಚಿತಪಡಿಸಿದನು.

ಶ್ರೀ ರಾಮನು ಸೈನ್ಯವನ್ನು ಕೂಡಿಕೊಂಡು ಬರುತ್ತ, ಚಿತ್ರಕೂಟದಲ್ಲಿ ಬೀಡುಬಿಟ್ಟನು. ಅಲ್ಲಿಗೆ ವಾಲಿಯ ದೂತನೊಬ್ಬನು ಬಂದು, ತನ್ನೊಡೆಯನು ಹೇಳಿಕಳುಹಿದುದನ್ನು ಹೀಗೆ ಪ್ರಸ್ತಾವಿಸಿದನು - 'ಈ ಅಣುವ ಸುಗ್ರೀವರಿಂದ ನಿನಗೆ ಪ್ರಯೋಜನವಿಲ್ಲ. ನನ್ನನ್ನು ಸೇರಿಕೊಂಡರೆ, ಆ ಲಂಕೆಗೆ ಮುತ್ತಿಗೆ ಹಾಕಿ ರಾವಣನನ್ನು ಮುರಿದು ನಿನ್ನ ಮಡದಿಯನ್ನು ನಿನಗೆ ತಂದುಕೊಡುವೆನು. ಇದಕ್ಕೆ ಉತ್ತರವನ್ನು ತಿಳಿಸಬೇಕು'. ರಾಮನು ಈ ವಿಷಯದಲ್ಲಿ ತನ್ನ ಮಂತ್ರಿಯ ಅಭಿಮತವನ್ನು ಕೇಳಿದಾಗ ಆತನು - 'ಈ ವಾಲಿದೂತನ ಮಾತು ವಂಚನೆಯದು. ಏಕೆಂದರೆ - ವಾಲಿಯೂ ರಾವಣನೂ ಪರಸ್ಪರ ಮಿತ್ರರು ಮತ್ತು ದುಷ್ಟರು. ಆದುದರಿಂದ ನಾವು ಲಂಕೆಗೆ ಹೋಗುವ ಮೊದಲೇ ವಾಲಿವಧೆ ಮಾಡಬೇಕು'. ಎಂದನು. ರಾಮನು ಒಪ್ಪಿ ಆ ದೂತನನ್ನು ಕರೆದು 'ಎಲೈ ನೀನು ನಮ್ಮ ಈ ದೂತನೊಡನೆ ತೆರಳು. ಆ ವಾಲಿಗೆ ಮಾಹಾಮೇಘ ಎಂಬೊಂದು ಆನೆಯಿದೆ. ಅದನ್ನು ಅವನು ನನಗೊಪ್ಪಿಸಲಿ' ಎಂದನು. ಈ ಮಾತನ್ನು ಕೇಳಿ, ವಾಲಿ ಕೆರಳಿದನು. 'ರಾಮನು ರಾವಣನಿಂದ ತನ್ನ ಪತ್ನಿಯನ್ನು ಬಿಡಿಸಿಕೊಂಡು ಬಂದರೆ, ನನ್ನ ಆನೆಯನ್ನು ಅವನಿಗೆ ಒಪ್ಪಿಸುವೆನು. ಅದಲ್ಲವಾದರೆ ನನ್ನೊಡನೆ ಯುದ್ಧಮಾಡಿ ಆನೆಯನ್ನು ಪಡೆದುಕೊಳ್ಳಲಿ' ಎಂದು ಹೇಳಿಕಳುಹಿಸಿದನು. ಶ್ರೀರಾಮನು ವಾಲಿವಧೆಗಾಗಿ ಲಕ್ಷ್ಮಣ, ಸುಗ್ರೀವ, ಅಣುವರನ್ನು ಕಳುಹಿಸುತ್ತಾ ಲಕ್ಷ್ಮಣನಿಗೆ - 'ಕೆಟ್ಟಮಾತುಗಳನ್ನಾಡಿದ ವಾಲಿಯ ತಲೆಯನ್ನು ಕಡಿದು, ಸುಗ್ರೀವನಿಗೆ ಪಟ್ಟಕಟ್ಟಿ ಬಾ' ಎಂದು ಆಜ್ಞೆ ಮಾಡಿದನು. ವಾಲಿವಧೆಯಾಯಿತು, ಸುಗ್ರೀವನಿಗೆ ಕಿಷ್ಕಿಂಧೆಯ ಪಟ್ಟವೂ ಆಯಿತು. ಲಂಕೆಗೆ ದಂಡಯಾತ್ರೆಯೂ ನೆರವೇರಿತು.

ಅತ್ತ ಲಂಕೆಯಲ್ಲಿ ಪೌರರು, ಪರಿಜನರು, ಬಾಂಧವರು ಮಂತ್ರಿಗಳು ರಾವಣನಿಗೆ ಬೋಧನೆ ಮಾಡುತ್ತಾ ಸೀತೆಯನ್ನು ಒಪ್ಪಿಸಲು ಹೇಳಿದರು. ಅವರ ಮಾತಿಗೆ ರಾವಣನು ಬೆಲೆಕೊಡಲಿಲ್ಲ. ತಮ್ಮನಾದ ವಿಭೀಷಣನೂ ನೀತಿ ಹೇಳಿದುದಕ್ಕೆ ರಾವಣನು ಅವನನ್ನು ಕಠಿಣೋಕ್ತಿಗಳಿಂದ ನಿರಾಕರಿಸಿ, ಬೈದು ಹೊರಗಟ್ಟಿದನು. ಅವನು ರಾಮನ ಬಳಿಗೆ ಬಂದನು. ಹನುಮಂತನು ಅವನನ್ನು ಇದಿರ್ಗೊಂಡು ಕರೆತಂದನು. ಅವನಿಗೆ ಲಂಕೆಯ ಪಟ್ಟವನ್ನು ಕಟ್ಟುವುದಾಗಿ ರಾಮನು ಅಭಯವನ್ನಿತ್ತನು.

ಹೀಗಿರಲು ಹನುಮಂತನು ಶ್ರೀರಾಮನೊಡನೆಂದನು - 'ನಾನು ಇನ್ನೊಮ್ಮೆ ಲಂಕೆಗೆ ಹೋಗಿ ರಾವಣನ ಉದ್ಯಾನವನ್ನು ಮುರಿದು, ಲಂಕಾದಹನ ಮಾಡಿ, ರಾವಣನ ಮನಃಸ್ಥಿತಿಯನ್ನು ತಿಳಿದು ಬರುವೆನು'. ರಾಮನು ಅದಕ್ಕೊಪ್ಪಿ ಅವನನ್ನು ಕಳುಹಿಸಿಕೊಟ್ಟನು. ಹನುಮಂತನ ಅದ್ಭುತಸಾಹಸಕ್ಕೆ ಈ ಸಂದರ್ಭವೊಂದು ಒರೆಗಲ್ಲೆನ್ನಬಹುದು. ಅವನು ಮರ್ಕಟವಿದ್ಯೆಯಿಂದ ಕಪಿಸೈನ್ಯವನ್ನು ಸೃಷ್ಟಿಸಿದನು. ಅವನ್ನು ಕೂಡಿಕೊಂಡು ಲಂಕೆಗೆ ಬಂದನು. ಅಲ್ಲಿನ ಉದ್ಯಾನದ ಮರಗಳನ್ನೆಲ್ಲ ಮುರಿದನು. ಒಂದು ಮರವನ್ನು ಕಿತ್ತು ಇನ್ನೊಂದು ಮರಕ್ಕೆ ಬಡಿದು, ಮತ್ತೊಂದು ಮರಕ್ಕೆ ಹಾರಿ ಉದ್ಯಾನವನವನ್ನೇ ಕೆಡಹುತ್ತಿರಲು, ಕಾದಲು ಬಂದ ವನಪಾಲಕರನ್ನು ಹೊಡೆದುರುಳಿಸಿದನು. ಪಟ್ಟಣದ ಕಾವಲಿನ ಅಧಿಕಾರಿಯ ಆಜ್ಞೆಯಂತೆ ಆಗ ರಾಕ್ಷಸವಿದ್ಯೆಯ ಮಹಾಸೈನ್ಯ ಬಂದು ಕವಿಯಿತು. ಕಪಿಸೈನ್ಯದ ಎದುರಿನಲ್ಲಿ ರಾಕ್ಷಸ ಸೈನ್ಯ ನಾಶಗೊಂಡಿತು. ಬದುಕಿದವರು ಓಡಿಹೋದರು.

ಆ ಮೇಲೆ, ಹನುಮಂತನು ಅಗ್ನಿ ಬಾಣಪ್ರಯೋಗದಿಂದ ಪಟ್ಟಣಕ್ಕೇ ಬೆಂಕಿಕೊಟ್ಟು ಬೂದಿಮಾಡಿದನು. ರಾವಣನ ಕಡೆಯವರು ನಿಶ್ಚೇಷ್ಟಿತರಾದರು. ಅಣುವನು ಕಪಿರೂಪದಲ್ಲಿ ಮುಖವಿಕಾರ ಮಾಡಿಕೊಂಡು ಕುಣಿಯುತ್ತ, ಹಲ್ಲುಗಿರಿಯುತ್ತ, ಹುಬ್ಬು ಹಾರಿಸುತ್ತ, ಮಿಣಮಿಣನೆ ನೋಡುತ್ತ, ಕಿರಿಚುತ್ತ, ಮೈನೆಟ್ಟಗೆ ಮಾಡಿ ಆಕಳಿಸುತ್ತ ತಲೆಯಲ್ಲಾಡಿಸುತ್ತಾ ಜನರನ್ನು ಭೀತಿಗೊಳಿಸಿದನು. ಕೊನೆಗೆ ತೃಪ್ತನಾಗಿ ಹಿಂದೆರಳಿದನು. ಶ್ರೀ ರಾಮನ ಬಳಿಗೆ ಬಂದು ಲಂಕೆಯಲ್ಲಿ ತಾನು ಮಾಡಿದ ಸಂಗತಿಯನ್ನೆಲ್ಲ ತಿಳಿಸಿದನು. 'ನಾನು ಲಂಕಾನಗರದ ಜನರನ್ನು ಎಷ್ಟೊಂದು ಗೋಳ್ಗುಡಿಸಿದರೂ ಆ ರಾವಣನು ಹೊರಗೆ ಬರಲಿಲ್ಲವೇತಕೋ ತಿಳಿಯದು' ಎಂದನು. ಆಗ ವಿಭೀಷಣನಿಂದ ಅದಕ್ಕೆ ಕಾರಣ ವ್ಯಕ್ತವಾಯಿತು -

'ಸುಗ್ರೀವ, ಅಣುವ, ಲಕ್ಷ್ಮಣರಿಂದ ವಾಲಿ ಹತನಾದ ಸುದ್ದಿಯನ್ನು ಕೇಳಿ, ರಾವಣನು ಅವರನ್ನು ಜಯಿಸುವ ಮಹಾವಿದ್ಯೆಯನ್ನು ಗಳಿಸಲು ಆದಿತ್ಯಪಾದಗಿರಿಗೆ ತೆರಳಿರುತ್ತಾನೆ. ಅಲ್ಲಿ ಅವನು ಆ ವಿದ್ಯೆಗಳನ್ನು ಸಾಧಿಸಿದರೆ ಅಜೇಯನಾಗುವನು. ಆದುದರಿಂದ ರಾವಣನಿಗೆ ವಿಘ್ನವನ್ನುಂಟುಮಾಡಬೇಕು'. ರಾಮ ಲಕ್ಷ್ಮಣರು ಈಗ ಸೈನ್ಯವನ್ನು ಕೂಡಿಕೊಂಡು ಆ ಕಡೆಗೆ ಹೊರಟರು. ಈ ಸಂದರ್ಭದಲ್ಲಿ ಸುಗ್ರೀವ ಅಣುವ ಇವರಿಬ್ಬರು ಶ್ರೀರಾಮನಿಗೆ ಯುದ್ಧವಿಜಯಕ್ಕಾಗಿ ಗರುಡವಾಹಿನಿ, ಸಿಂಹವಾಹಿನಿ, ಹನನಾವರಣೀಯ - ಎಂಬ ವಿದ್ಯೆಗಳನ್ನು ಹೇಳಿಕೊಟ್ಟರು. ಲಕ್ಷ್ಮಣನಿಗೆ ಎಂಟು ಬಗೆಯ ಖೇಚರ ವಿದ್ಯೆಗಳನ್ನು ಕಲಿಸಿದರು. ಆಗ ಅತ್ತ ರಾವಣನಲ್ಲಿದ್ದ ಪ್ರಜ್ಞಪ್ತಿವಿದ್ಯಾದೇವತೆಯು 'ಇನ್ನು ನಿನ್ನೊಡನೆ ಇರಲು ಸಾಧ್ಯವಿಲ್ಲ' - ಎಂದುಕೊಂಡು ರಾವಣನಿಂದ ತೊಲಗಿಹೋಯಿತು. ಇದರಿಂದಲೇ ಮುಂದೆ ರಾವಣನಿಗೆ ಸೋಲವುಂಟಾಗುವಂತಾಯಿತು. ಜೈನರಾಮಾಯಣದ ಪ್ರಕಾರ, ಲಕ್ಷ್ಮಣನಿಂದ ರಾವಣನ ವಧೆಯಾಗುವುದು. ರಾಮಲಕ್ಷ್ಮಣರು ಸೀತಾಸಮೇತರಾಗಿ ಸಾಕೇತಕ್ಕೆ ಆಗಮಿಸುವರು. ಇಂತಹದೊಂದು ಶ್ರೇಷ್ಠವಾದ ಧರ್ಮವಿಜಯಕ್ಕೆ ಮುಖ್ಯಕಾರಣನಾಗಿ ಹನುಮಂತನ ಪಾತ್ರವಿರುತ್ತದೆ.

ಜೈನರಾಮಾಯಣಗಳಲ್ಲಿ ಕಥಾವ್ಯತ್ಯಾಸಗಳೇನಿದ್ದರೂ ಇತರ ರಾಮಾಯಣಗಳಂತೆ ಹನುಮಂತನ ಪಾತ್ರವು ಸತ್ತ್ವ ಸಾಮರ್ಥ್ಯಯುತವೂ ನೀತಿಬೋಧಕವೂ ಆಗಿದೆಯೆಂಬುದು ನಿಸ್ಸಂಶಯ. ಧರ್ಮನಿಷ್ಠೆ, ಲೋಕಹಿತ, ಶ್ರೀರಾಮಸೇವೆ ಇವು ಮೂರು ಅನನ್ಯವೆಂದು ಭಾವಿಸಿ ವರ್ತಿಸಿದವನು ಆತನು. ತನಗೆ ರಾವಣನು ಮಾವನಾಗಿ ಸಮೀಪದ ಬಂಧುವಾಗಿದ್ದರೂ ಹಿಂದೆ ಆತನಿಗೆ ನೆರವಾಗಿದ್ದವನಾದರೂ ಅವನು ಅನ್ಯಾಯದ ಮಾರ್ಗ ಹಿಡಿದಾಗ, ಅವನನ್ನು ದೂರಮಾಡಿಕೊಂಡು, ಆವನ ವಿರೋಧಿಯಾದ ರಾಮನ ಪಕ್ಷವನ್ನು ವಹಿಸಿ ವಿಜಯ ಸಾಧನೆ ಮಾಡಿದನು. ಅಂತಹ ಆಂಜನೇಯ ಸ್ವಾಮಿಯ ಸೇವೆಯೆಂಬುದು ಜಾತ್ರೆ, ಪೂಜೆ, ಉತ್ಸವ, ಭಜನೆ, ವ್ರತಾದಿಗಳ ರೂಪದೊಂದಿಗೆ ಆ ಮಹಾತ್ಮನನ್ನು ಕುರಿತು ಕೃತಿರಚನೆ ಕೂಡ ಆಗಿದ್ದು, ಆತನ ಶ್ರೇಷ್ಠಗುಣಗಳನ್ನು ನಮ್ಮಲ್ಲಿ ಆಳವಡಿಸಿಕೊಳ್ಳುವುದೂ ಅಷ್ಟೇ ಮುಖ್ಯವಾಗಿದೆ.

□

೨೨

ಜಾನಪದ ಐತಿಹಾಸಿಕ ಮೌಲ್ಯ

'ಜಾನಪದ' ಎಂಬುದು ಅರ್ಥದಲ್ಲಿ ಬಹಳ ವ್ಯಾಪಕವಾಗಿದೆ. ಇದರಲ್ಲಿ ಪ್ರಾಚೀನ ಪರಂಪರೆಯನ್ನುಳ್ಳ ಮಾನವ ವಿಜ್ಞಾನದ ಎಲ್ಲ ಅಂಶಗಳೂ ಅಡಕವಾಗುತ್ತವೆ. ಸಂಸ್ಕೃತಿ, ಜನಜೀವನ, ಜನಭಾಷೆ, ಹಬ್ಬ-ಜಾತ್ರೆ ವ್ರತಾದಿ ಆಚರಣೆ, ದೇಶೀವೈಶಿಷ್ಟವುಳ್ಳ ಸಂಗೀತ - ಸಾಹಿತ್ಯ ಇಂಥವೆಲ್ಲವೂ ಜಾನಪದಾಂತರ್ಗತಗಳೇ. ಹೀಗಿರುವಾಗ ಐತಿಹಾಸಿಕ ಮೌಲ್ಯವೂ ಜಾನಪದದಲ್ಲಿ ಲಕ್ಷ್ಯಾರ್ಹವಾಗಿರುವುದು ಸಹಜವೇ ಆಗಿದೆ.

ಭಾರತೀಯರು ತಮ್ಮ ಪ್ರಜ್ಞಾಕ್ಷೇತ್ರದಲ್ಲಿ ಪುರಾಣಕ್ಕೆ ಕೊಟ್ಟಿರುವಷ್ಟು ಮಹತ್ತ್ವವನ್ನು ಇತಿಹಾಸಕ್ಕೆ ಕೊಟ್ಟಿದ್ದಿಲ್ಲ. ನಮ್ಮ ರಾಮಾಯಣ ಮಹಾಭಾರತ ಘಟನೆಗಳೂ ಇತಿಹಾಸವೆನಿಸಿದರೂ, ಅವು ಕೂಡ ಪುರಾಣದ ಛಾಯೆಗಳಿಂದ ತುಂಬಿವೆ. ನಮ್ಮ ಪೂರ್ವಿಕರು ಪುರಾಣವನ್ನು ಇತಿಹಾಸವಾಗಿ ತಿಳಿದುಕೊಂಡರು. ವಾಸ್ತವವಾಗಿ ಇತಿಹಾಸ ಎಂದು ಹಿಂದೆ ನಡೆದ ಘಟನೆಗಳ ಉಲ್ಲೇಖ. ಪೌಢ ಸಾಹಿತ್ಯದಲ್ಲಿ ಬರುವಂತೆ ಜಾನಪದ ಸಾಹಿತ್ಯದಲ್ಲಿಯೂ ದೇವದೇವಿಯರ ಕಥೆಗಳು, ಅತಿಮಾನುಷ ಘಟನೆಗಳು, ಪ್ರಾಣಿಪಕ್ಷಿಗಳ ಮಾನವೋಚಿತ ವ್ಯವಹಾರಗಳು ಬಂದಿದ್ದು ಇವು ಕೂಡ, ನಮ್ಮ ಪೂರ್ವಿಕರಿಗೆ ಇತಿಹಾಸವೆನಿಸಿದವು. ನಾಡಿನ ಪುಣ್ಯಸ್ಥಳಗಳ ಮಹಾತ್ಮ್ಯದ ಕಥನಗಳು ಕೂಡ ಇತಿಹಾಸಗಳೇ ಆದವು. ಆದರೆ ಪ್ರಸ್ತುತ ಪ್ರಬಂಧದಲ್ಲಿ ಲಕ್ಷ್ಯವಿಟ್ಟಿರುವ ಇತಿಹಾಸ ಇವಲ್ಲ. ಬೇರೆ ಬೇರೆ ಕಾಲಗಳಲ್ಲಿ ನಮ್ಮ ದೇಶವನ್ನಾಳಿದ ರಾಜರು, ರಾಜವಂಶ, ಅವರ ಕಾಲದ ಮಹತ್ತ್ವಪೂರ್ಣವಾದ ಮತ್ತು ಸತ್ಯವಾದ ಘಟನೆಗಳು ಇತಿಹಾಸವೆನಿಸುತ್ತವೆ. ಅಂತಹ ಐತಿಹಾಸಿಕ ಅಂಶಗಳು ನಮ್ಮ ಜಾನಪದದಲ್ಲಿ ಬಂದುದನ್ನು ನೋಡುವುದೇ ಪ್ರಸ್ತುತ ಪ್ರಬಂಧದ ಉದ್ದೇಶ. ಅದರಲ್ಲಿಯೂ ಕನ್ನಡ ನಾಡಿನ ಜನಪದ ಸಾಹಿತ್ಯದಲ್ಲಿ ಬಂದುದನ್ನು ಯಥಾಸಾಧ್ಯ ಅವಲೋಕಿಸುವುದು ಮಾತ್ರ ಇಟ್ಟ ಗುರಿ.

ಸಾವಿರಾರು ವರ್ಷಗಳ ಹಿಂದೆ ನಡೆದಿರಬಹುದಾದ ರಾಮಾಯಣ ಮಹಾಭಾರತಗಳು, ವಿವಿಧ ಪುರಾಣಕಥೆಗಳು, ಅವು ಪ್ರತಿಪಾದಿಸಿದ ಜೀವನ ಮೌಲ್ಯ-ನೀತಿ-ಧರ್ಮ ತತ್ತ್ವ ಇಂತಹ ವಿಚಾರಗಳು ಭಾರತೀಯ ಜನತೆಯ ಮನೋಭಾವ ಸಂಸ್ಕೃತಿಗಳನ್ನು ರೂಪಿಸುವಲ್ಲಿ ವಹಿಸಿದ ಅಮೂಲ್ಯ ಪಾತ್ರವನ್ನು ನಮ್ಮ ಇತಿಹಾಸ ವಹಿಸಲಿಲ್ಲ. ಕರ್ನಾಟಕದ ಇತಿಹಾಸವನ್ನೇ ತೆಗೆದುಕೊಂಡರೆ, ಇಲ್ಲಿ ಆಳಿದ ಕದಂಬ, ಗಂಗ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ ಮುಂತಾದ

ಅರಸು ಮನೆತನಗಳು ಮಾಡಿದ ಕಾರ್ಯ ನಮ್ಮ ಜಾನಪದ ಜನಮನದಲ್ಲಿ ಅಚ್ಚಳಿಯದೆ ಉಳಿವಂತೆ ಆಗಿಲ್ಲ. ಅವರ ಪ್ರಾಬಲ್ಯ ಕಾಲದಲ್ಲಿ ಒಂದು ವೇಳೆ ಪ್ರಾದೇಶಿಕವಾಗಿ ಅವರ ಪ್ರಭಾವ ಬಿದ್ದಿರಬಹುದುದಾದರೂ ಆ ಕುರಿತು ಉಂಟಾಗಿರಬಹುದಾದ ಜಾನಪದಗೀತಗಳು ಇಂದಿಗೆ ಉಳಿದಿಲ್ಲ. ಸಾಮಾನ್ಯ ಜನತೆ ವಿಸ್ಮರಣಶೀಲ. ಯಾವುದಾದರೂ ಘಟನೆಗಳು ನೆಸಕೆಯಲ್ಲಿ ಉಳಿಯಬೇಕಾದರೆ ಅವು ಶಾಸನಸ್ಥವಾಗಬೇಕು ಅಥವಾ ಗ್ರಂಥದಲ್ಲಿ ಸೇರಿರಬೇಕು. ಶಾಸನಾಂತರ್ಗತವೂ ಅಲ್ಲ, ಗ್ರಂಥರೂಪವುಳ್ಳುದೂ ಅಲ್ಲದಾಗಿರುವ ಜಾನಪದ ಸಾಹಿತ್ಯದಲ್ಲಿ ಅಂತಹ ಪೂರ್ವಘಟನೆ ಉಳಿದಿರುವುದೆಂತು ? ಹೀಗಿದ್ದರೂ ಹೆಚ್ಚು ಪ್ರಾಚೀನವಲ್ಲದ ಹಲವು ಐತಿಹಾಸಿಕ ಅಂಶಗಳನ್ನು ಕನ್ನಡದಲ್ಲಿ ಪ್ರಕಟವಾಗಿರುವ ಅಥವಾ ದೊರೆಯುವ ಕೆಲವು ಜಾನಪದ ಗೀತಗಳಲ್ಲಿ ಅವನ್ನು ಕಾಣಲು ಸಾಧ್ಯವಿದೆ.

ಹನ್ನೆರಡನೆಯ ಶತಮಾನದಲ್ಲಿ ಕೂಡಲಸಂಗನ ಶರಣರಾಗಿ ಬಂದ ಬಸವಣ್ಣನವರು ಮಾಡಿದ ಕಾರ್ಯ ಅಸಾಧಾರಣ ಮತ್ತು ಅವಿಸ್ಮರಣೀಯ. ಅವರನ್ನು ಕುರಿತಾಗಿ ಹಲವಾರು ಗೀತಗಳು ತ್ರಿಪದೀ ರೂಪದಲ್ಲಿ ಪ್ರಚಾರದಲ್ಲಿವೆ. ಶಿವಶರಣರಿಗೆ ಅವರ ಮನೆಯಲ್ಲಿ ನಿತ್ಯವೂ ಆದರಾತಿಥ್ಯಗಳು ನಡೆಯುತ್ತಿದ್ದವು. ಅವರು ತಮ್ಮ ಮಡದಿ ನೀಲಮ್ಮನಿಗೆ ಹೇಳುವ ಮಾತುಗಳು ಅವರ ಜಂಗಮಭಕ್ತಿಗೆ ಸಾಕ್ಷಿಗೊಡುತ್ತವೆ.

ಅಡಿಗೆಯ ಅರಮನೆಗೆ । ನಡೆದು ಬಾ ನೀಲಮ್ಮ
ತಡವು ಆದಾವು ಶಿವಪೂಜೆ - ಅಲ್ಲಿರ್ವ
ಜಡೆಯ ಜಂಗಮರು - ಹಸಿದಾರು

ಬಗುತರು ಹಸಿದಾರು । ಬಗುತೆ ನೀ ಎಡೆಮಾಡೆ
ಬಗಸೆ ಪಾಯಸವ ತಿಳಿತುಪ್ಪ - ನೀಲಮ್ಮ
ಬಹುತ ಜಂಗಮಗೆ - ಎಡೆಮಾಡೆ[೧]

ಬಸವಣ್ಣನ ಮೇಲೂ ಶರಣರ ಮೇಲೂ ದ್ವೇಷ ಕಟ್ಟಿ ಬಿಜ್ಜಳನು ಹಾಳಾಗಿ ಹೋದನೆಂಬುದನ್ನು ಕೆಳಗಿನ ತ್ರಿಪದೀ ಪದ್ಯ ತಿಳಿಸುತ್ತದೆ -

ಶರಣರ ನಿಂದಿಸಿ । ಉರಿದಾವೆ ಗದ್ದಿಗೆ
ಶರಣರ ಪ್ರೇಮಿ ಬಸವಯ್ಯ - ನಿಂದಿಸಿ
ಉರಿದೋ ಬಿಜ್ಜಳನ - ಅರಮನೆ[೨]

ಪ್ರಸ್ತುತ ಪ್ರಬಂಧಕ್ಕಾಗಿ ತವಕದಿಂದ ಮಾಡಿದ ಅನ್ವೇಷಣೆಯಲ್ಲಿ ಹೆಚ್ಚಿನ ಐತಿಹಾಸಿಕ ಮೌಲ್ಯವುಳ್ಳುದಾಗಿ ಕೈಗೆ ಬಂದ ಜಾನಪದ ಸಾಹಿತ್ಯ ಕುಮ್ಮಟ ದುರ್ಗದ ಕುಮಾರ ರಾಮನನ್ನು ಕುರಿತುದು. ಆತ "ಕನ್ನಡನಾಡಿನಲ್ಲಿ ಬಹು ಜನಪ್ರಿಯನಾದ ವ್ಯಕ್ತಿ. ಪೌರುಷ ಮತ್ತು ಶೌಚ ಗುಣಗಳಿಗೆ ಹೆಸರಾದ ಕೆಚ್ಚೆದೆಯ ಕಲಿ. ದಕ್ಷಿಣ ಭಾರತದ ರಾಜರು ಡಿಳ್ಳಿಯ ಸುಲ್ತಾನರಿಗೆ

---

೧. ಕರಾಕೃ - ನಾಡಹಾಡುಗಳು (೧೯೭೪) ಪುಟ ೧೩

೨. ದೇ. ಜವರೇಗೌಡ - ನಂಜುಂಡಕವಿ (೧೯೬೪) ಪುಟ ೧

ತಲೆತಗ್ಗಿಸಿಕೊಂಡು ಬಾಳುತ್ತಿದ್ದ ಕಾಲದಲ್ಲಿ ಕೆಲವು ದಿನಗಳಾದರೂ ತುರುಕರ ದಾಳಿಯನ್ನೆದುರಿಸಿ ಅವರಿಗೆ ಸಿಂಹ ಸ್ವಪ್ನವಾಗಿ ಮೆರೆದ ಗಂಡುಗಲಿ.ವಿಜಯನಗರ ಸಾಮ್ರಾಜ್ಯಸ್ಥಾಪನೆಗೆ ತಳ ಹದಿ ಹಾಕಿದ ಮಹಾನುಭಾವ. ಕನ್ನಡನಾಡಿನ ಮೂಲೆಮೂಲೆಯಲ್ಲೆಲ್ಲ ಅವನ ಕತೆ ಹರಡಿದೆ".[೩] ಹದಿಮೂರನೆ ಶತಮಾನದ ಈ ಐತಿಹಾಸಿಕ ಪುರುಷನನ್ನು ಕುರಿತ ಜಾನಪದ ಸಾಹಿತ್ಯದಲ್ಲಿ 'ಕುಮಾರ ರಾಮನ ದುಂದುಮೆ' ಎಂಬುದು ಮಹತ್ವವುಳ್ಳದು. ನೂರ ಮೂವತ್ತೊಂದು ದುಂದುಮೆಗಳ ಸಂಕಲನವಾಗಿ ಈ ಕುಮಾರರಾಮನ ಇತಿಹಾಸ ಕಥನವಿದೆ. 'ದುಂದುಮೆ'[೪] ಎಂಬುದು ಒಂದು ಬಗೆಯ ಜಾನಪದ ಛಂದಸ್ಸು. ಅದರ ಪಲ್ಲವಿ ಹೀಗಿದೆ -

ದುಂದುಮೆ । ಕೇಳ್ರಿ ದುಂದುಮೆ
ದುಂದುಮೆ ನಿರ್ದುಮೆ ಪಾಲಗನ್ನಿರೆ । ದುಂದುಮೆ । ಪಲ್ಲವಿ

ಇದರಿಂದ ಒಂದು ಪದ್ಯವನ್ನು ಇಲ್ಲಿ ಉದಾಹರಿಸುತ್ತೇನೆ -

ಧರೆಯೊಳು ಕುಮ್ಮಟ ನಗರ ಪಾಲಿಸುವಂಥ
ಅರಸು ಕಂಪಿಲರಾಯನೆಂಬವನು । ಆತನ
ಅರಸಿ ಹರಿಯಾಲಮ್ಮ ಇರುವಳನ್ನು । ಇಟ್ಟು
ಕರಚೆಲ್ವ ರಶ್ಮಿ ಬೇರೆ ಮಾಲಿನಿಯೊಳು । ಮತ್ತು
ವರಮಂತ್ರಿ ಬೈಚಪ್ಪ ದೊರೆಯು ಮಾರ್ಬಲ ದಂಡು । ಕೇಳು
ಪರಮಾನಂದದೊಳಿರೆ ಪುರದ ವಿಸ್ತಾರವನು । ದುಂದುಮೆ । (ಪದ್ಯ ೨)

ಇತಿಹಾಸದ ಉಲ್ಲೇಖಕ್ಕೂ ಈ ದುಂದುಮೆಯಲ್ಲಿ ಬರುವ ಸಂಗತಿಗೂ ಘಟನೆಯಲ್ಲಿ ಹಾಗೂ ಹೆಸರುಗಳ ಉಚ್ಚಾರಣೆಯಲ್ಲಿ ಕೆಲವು ವ್ಯತ್ಯಾಸಗಳಿವೆ. ಉದಾಹರಣೆಗಾಗಿ, ಕಂಪಿಲನ ಮಡದಿ ಹರಿಹರದೇವಿ ಎಂದು ಇತಿಹಾಸದಲ್ಲಿ ಹಾಗೂ ನಂಜುಂಡಕವಿಯ ರಾಮನಾಥಚರಿತದಲ್ಲಿ ಹೇಳಿದೆ. ಆದರೆ ಇಲ್ಲಿ ಜಾನಪದ ಉಚ್ಚಾರಣೆಗೆ ಉಚಿತವಾಗಿ 'ಹರಿಯಾಲಮ್ಮ' ಎನ್ನಲಾಗಿದೆ, ಇಂತಹ ಹೆಚ್ಚಿನ ಉದಾಹರಣೆಗಳಿಗೆ ಇಲ್ಲಿ ಅವಕಾಶವಿಲ್ಲ.

ಕುಮಾರರಾಮನ ಕುರಿತ ಬೇರೆ ಜನಪದಗೀತಗಳೂ ಇವೆ. ಕಂಪಿಲಿಯನ್ನು ಕುರಿತು ತ್ರಿಪದಿಗಳಲ್ಲಿ ಒಂದೆರಡನ್ನು ಇಲ್ಲಿ ಉದಾಹರಿಸುತ್ತೇನೆ -

ಹಂಪಿಯ ಶರಣರಿಗೆ । ಸೊಂಪಾದ ಪಟ್ಟಣ
ಕಂಪಿಲಿಯು ನೆರಳು ಶರಣರಿಗೊ - ತುರುಕರಿಗೆ
ಕಂಪನವು ಕೇ ಳಿ - ಎದಿಯಾಗೊ
ಕೊಂಕಣದ ಮಾತಂಗಿ । ಬಿಂಕ ಮಾದರ ಹುಡುಗಿ
ಕೊಂಕ ಗುಣದ್ಯೆಣ್ಣು ತುರುಕರಿಗೆ - ಮನಸೋತು
ವುಂಕಿ ಹಾಕ್ಯಾಳೋ - ಕಂಪಿಲಿಗೊ

---

೩. ಅದರಲ್ಲೆ ಪುಟ ೧೪

೪. ಡಾ. ಗದ್ದಗಿ ಮಠ ಇವರ ಸಂಗ್ರಹ (೧೯೫೯)

ಇದರಲ್ಲಿ ಮಾತಂಗಿ ಎಂಬ ಹೆಣ್ಣು ಕುಮಾರರಾಮನ ನಾಶಕ್ಕೆ ಕಾರಣವಾದ ಉಲ್ಲೇಖ ಐತಿಹಾಸಿಕವಾಗಿದೆ. ಮುಂದಿನ ಇನ್ನೊಂದು ಪದ್ಯವಿದು -

ರಾಮರಾಯನು ಬಿದ್ದ । ನಾಮ ನಿರ್ನಾಮಾ ತೊ
ಧೂಮ ದೂಮಾತೊ ಕಂಪಲಿಯೊ - ನಾರಿಯರ
ಹೋಮಕೊಂಡಾತೋ - ಕಿಚ್ಚಾತೊ[೫]

ಕುಮಾರರಾಮನು ಬಿದ್ದುಹೋದಾಗ ಅರಮನೆಯ ಸ್ತ್ರಿಯರೆಲ್ಲ ಅಗ್ನಿಪ್ರವೇಶ ಮಾಡಿದ ಸಂಗತಿಯನ್ನು ಮೇಲಿನ ಪದ್ಯ ಸಾರುತ್ತದೆ.

ಕರ್ಣಾಟಕದ ಇತಿಹಾಸದ ಪ್ರಕಾರ ಹೊಯ್ಸಳ, ಕಂಪಿಲ - ಮುಂತಾದ ರಾಜ್ಯಗಳ ಪತನಾನಂತರ ದಕ್ಷಿಣ ಭಾರತದಲ್ಲಿ ಮಹಮ್ಮದೀಯರ ದುರಾಕ್ರಮಣವನ್ನು ಎದುರಿಸಿ ಹಿಂದೂಧರ್ಮ ರಕ್ಷಣೆಯ ಹೊಣೆಹೊತ್ತು ತಲೆಯೆತ್ತಿದ ಸಾಮ್ರಾಜ್ಯ. 'ವಿಜಯನಗರ', ಹುಕ್ಕ ಬುಕ್ಕರು ಈ ಸಾಮ್ರಾಜ್ಯದ ಸ್ಥಾಪಕರು'. ವಿಜಯನಗರ ಚಿನ್ನದ ಮಳೆಯನ್ನು ಕಂಡಿತೆಂದು ಪ್ರತೀತಿ. ಈ ವಿಷಯವು ಜನಪದಗೀತಗಳಲ್ಲಿ ಬಂದಿದೆ.

ಬನ್ನಿಯ ಮರಹುಟ್ಟ । ಹೊನ್ನಿನ ಮಳೆಗರೆದು
ಚನ್ನಪಟ್ಟಣಕೆ ಹೊಳೆಹರಿದು - ಹಂಪ್ಯಾಗ
ಬಲ್ಲಾಳ ವೀರರು ಗುಟ್ಯಾಗ್ರೋ
ಹುಕ್ಕಬುಕ್ಕರು ಕೂಡಿ । ಚಿಕ್ಕ ರಾಜ್ಯವ ಕಟ್ಟಿ
ಮಿಕ್ಯಾರೋ ಸುತ್ತ ನಾಡಾಗ - ಹಂಪಿಯ
ಅಕ್ಕರ ವಿರೂಪಾಕ್ಷ - ವರ ಕೊಟ್ಟೊ

ವಿಜಯನಗರದ ಪತನಕ್ಕೆ ಕಾರಣವಾದ ರಕ್ಕಸ ತಂಗಡಿಯ ಕದನದ ಉಲ್ಲೇಖ ಒಂದು ಪದ್ಯದಲ್ಲಿ ಹೀಗಿದೆ -

ವಿಜಯನಗರದ ರಾಮ । ಗಜದ ಅಂಬಾರಿಲಿ
ತಜವಿಜಲಿ ತಲಪಿ ತಂಗಡಗಿ-ಸಿರಗಂಗಿ
ಸಂದಾರ ತಿವಿದ-ಈಟಲೆ[೬]

ವಿಜಯನಗರ ಸಾಮ್ರಾಜ್ಯ ಬಿದ್ದುಹೋದನಂತರ ಕರ್ಣಾಟಕದ ಬೇರೆ ಬೇರೆ ಭಾಗಗಳಲ್ಲಿ ಹಲವಾರು ಪಾಳೆಯಗಾರರು ಕ್ರಿ.ಶ. ೧೭ ಮತ್ತು ೧೮ನೆಯ ಶತಮಾನಗಳಲ್ಲಿ ಪರಾಕ್ರಮ ವನ್ನು ಮೆರೆದವರು. ಮೈಸೂರು ಯುದ್ಧದಲ್ಲಿ ಬ್ರಿಟಿಷರು ಗೆದ್ದು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದಾಗ ಅವರನ್ನೂ ಇವರು ಪ್ರತಿಭಟಿಸಿದರು. ಈ ತರೀಕೆರೆ ನಾಯಕರು ಬಸವಾಪಟ್ಟಣದಿಂದ ಬಂದವರು. ಇವರ ವಂಶದಲ್ಲಿ ಸರ್ಜಾ ರಂಗಪ್ಪನಾಯಕ ಮತ್ತು ಆತನ ಮಗ ಹನುಮಪ್ಪನಾಯಕ ಇವರು ಸಾಹಸದ ಶೌರ್ಯಗಳಿಗೆ ಹೆಸರಾದವರು. ರಂಗಪ್ಪನು ಬ್ರಿಟಿಷರ ವಿರುದ್ಧ ಬಂಡಾಯ ಹೂಡಿ ೧೮೩೧ ರಲ್ಲಿ ವೀರಸ್ವರ್ಗವೇರಿದನು. ಆವನ ಮಗ ಹನುಮಪ್ಪನು ಹೋರಾಟ ಮುಂದುವರಿಸಿ

---

೫. ಎಂ. ಜೀವನ - ಜನಪದಗೀತೆಗಳು, ಪದ್ಯಸಂಖ್ಯೆ ೧೮೭೬, ೧೮೮೦. ೧೮೮೧

೬. ಅದರಲ್ಲೆ - ಪದ್ಯ ೧೮೮೫, ೧೮೮೭

ಕೊನೆಗೆ ನೇಣಿಗೆ ಬಲಿಯಾದನ್ನು. 'ಸರ್ಜಪ್ಪನಾಯಕರ ಪದ' ಎಂಬ ಜನಪದಗೀತದಲ್ಲಿ ಇವರ ಶೌರ್ಯದ ಕಥನವಿದೆ. 'ತರಿಕೆರೆ ರಂಗಪ್ಪನಾಯಕ' ಎಂಬ[೭] ಗೀತ ಭಾಗವನ್ನು ನೋಡಬಹುದು. ಇನ್ನೊಂದೆಡೆ ಸರ್ಜಾಭೂಪನು ಯುದ್ಧಕ್ಕೆ ಹೊರಡುವ ವರ್ಣನೆಯಿದೆ -

ನಾಗರಾಯ್ನ ಹಿಡಿದನಣ್ಣ ಆಳುಮಗನ ಕರೆದನಣ್ಣ
ಮರಿಗುದುರೆಗೆ ಜೀನ ಬಿಗಿಸ್ಯಾನೋ - ಸರ್ಜಭೂಪ
ಆಗ ಮುಂದಾತ - ನಡೆದಾನೋ[೮]

ಇದೇ ಸರ್ಜಾ ಹನುಮಪ್ಪನ ಉಪಪತ್ನಿ ನಿಂಗಮ್ಮ ಹೂವನ ಹಳ್ಳಿಯಲ್ಲಿ ಈತನಿಗೆ ಅಮಲು ಕೊಟ್ಟು, ಆತನನ್ನು ತನ್ನ ಅಣ್ಣನಾದ ಗೋವಿಂದರಾಯನಿಗೆ ಸೆರೆಸಿಕ್ಕುವಂತೆ ಮಾಡುತ್ತಾಳೆ. ಆವನ ಆಯುಧಗಳನ್ನು ಒಯ್ದು ಶತ್ರುವಿಗೆ ಒಪ್ಪಿಸುತ್ತಾಳೆ. ಆದರೆ ಮತ್ತೆ ಪಶ್ಚಾತ್ತಾಪದಿಂದ ಹೀಗೆನ್ನುತ್ತಾಳೆ.

ಸಾವಿರಾಳು ಶಕುತಿಯೋನ ಮೂರಾನೆ ಬಲದೋನ
ಸೆರೆಯನ್ನ ಕೊಟ್ಟೆ - ಸರ್ಜನ್ನ

ಸರ್ಜ ಭೂಪನನ್ನು ಆರುಸಾವಿರ ದಂಡು ಮುತ್ತಿ ಸೆರೆಹಿಡಿಯಿತು. ಅವನನ್ನು ಗಲ್ಲಿಗೇರಿಸುವ ವೇಳೆಗೆ ಆತನು ಶತ್ರುಗಳಿಗೆ ಪ್ರಾಣಾರ್ಪಣೆ ಮಾಡಲೊಪ್ಪದೆ ತಾನೇ ಹಗ್ಗವನ್ನು ತನ್ನ ಕೊರಳಿಗೆ ಬಿಗಿದು ಸತ್ತುಕೊಂಡನೆಂದು ಜನಪದಗೀತಗಳಲ್ಲಿ ಹೇಳಿದೆ. ಇಂತಹ ಇತಿಹಾಸ ವಿಷಯಕ್ಕೆ ಮೇಲಿನ ಹಾಡುಗಳು ಆಸರೆಯಾಗಿವೆ.

ಚಿತ್ರದುರ್ಗವು ಜಾನಪದಗೀತ ಸಮೃದ್ಧಿಯುಳ್ಳುದು. ಈ ಗೀತಗಳಲ್ಲಿ ಕೆಲವು ಚಿತ್ರದುರ್ಗದ ಪಾಳಯಗಾರರ ಕುರಿತಾಗಿದ್ದು, ಅಲ್ಲಿನ ಇತಿಹಾಸದ ಮೇಲೆ ಬೆಳಕುಬೀರುವಂಥವು. ಕ್ರಿ.ಶ. ಹದಿನೈದನೆಯ ಶತಮಾನದಿಂದ ಈಚೆ ಇಲ್ಲಿ ನಾಯಕರೆಂದು ಪ್ರಸಿದ್ಧರಾದ ಪಾಳೆಯಗಾರರಿದ್ದರು. ಮತ್ತಿ ತಿಮ್ಮಣ್ಣನಾಯಕ ಅವರಲ್ಲಿ ಮೊದಲಿಗನೆಂದು ಹೇಳುತ್ತಾರೆ. ಅವನ ವಂಶದಲ್ಲಿ ಬಂದ ಮದಕರಿ ನಾಯಕನು ಸುತ್ತುಮುತ್ತಣ ಹಲವು ಕೋಟೆಗಳನ್ನು ಗೆದ್ದು ಕಾರ್ಯವನ್ನು ಮೆರೆದು, ಕೊನೆಗೂ ಮಾಯಿಕೊಂಡದಲ್ಲಿ ಮಡಿದಂತೆ ಜನಪದ ಗೀತಗಳಲ್ಲಿ ಹೇಳಲಾಗಿದೆ.[೯]

ಮದಕರಿ ನಾಯಕನ ಶೌರ್ಯವನ್ನು ವರ್ಣಿಸುವ ಹಾಡುಗಳಿವು -

ಎಂಥಾ ಬಹಾದ್ದೂರ ನೋಡಣ್ಣ। ಮದಕರಿ ಭೂಪ।
ಎಂಥಾ ಸರದಾರ ನೋಡಣ್ಣ। ಪಲ್ಲವಿ।
ಆನೆಗೊಂದಿ ದೊರೆಗಳು ಬ್ಯಾಟೀಗೆ ಬರಬೇಕೆಂದು
ಧೀರ ಮದಕರಿಭೂಪ

---

೭. ಕರಾಕೃ - ಪಾಳೆಯಗಾರರ ಪದಗಳು

೮. ಹೊಸ್ನ ಬಿತ್ತೇವು ಹೊಲಕಲ್ಲ - ಪುಟ ೧೭-೩೫ "ತರೀಕೆರೆ ಪಾಳೆಯಗಾರರು"

೯. ಆದರಲ್ಲೇ

ಮದಕರಿನಾಯಕನು ಬೇಟೆಗೆ ಹೊರಟವನು ಹೋಗುವಾಗಲೂ ಹಿಂದಕ್ಕೆ ಬರುವಾಗಲೂ ನಿಂತಲ್ಲಿ ಕುಳಿತಲ್ಲಿ ಕೋಟೆಗಳನ್ನು ಒಡಿದಂತೆ ಹೇಳಲಾಗಿದ -

ಹೋಗುತ್ತ ಕಡಿದ ರಾಯದುರ್ಗದ ಕೋಟೆ
ಬರುತ್ತ ಕಡಿದ ಬಳ್ಳಾರಿ ಪೇಟೆ
ಸಿಟ್ಟುಮಾಡಿ ಕಡಿದನಲ್ಲೆ ಸಿಟ್ಟಹಳ್ಳಿ ಗುತ್ತಿದುರ್ಗ
ನೀಲಗುದ್ರೆ ಏರ್ಕವ್ನೆ ನೀಲಪಾಗು ಸುತ್ಕವ್ನೆ
ಕುಂತು ಗೆದ್ದನೆ ಮದಕರಿ ಭೂಪ
ನಿಂತು ಗೆದ್ದನೆ ನಿಡುಗಲ್ಲು ಭೂಪ
ಧೀರ ಮದಕೇರಿ ಗೆದ್ದ ಸಿಕ್ಕು ಸಿರ್‍ಯಾದ ಕೋಟೆ
ಆವೂರು ಈವೂರು ಗೆದ್ದ
ದಿಚ್ಛೆಯ ಪ್ರಾಂತ ಗೆದ್ದ
ಉಚ್ಚಂಗಿ ದುರುಗವು
ಬೇಗ ಗೆದ್ದು ಬಂದಾನು ಮಧ್ಯಾನಕೆ । ಎಂಥ

ಮೇಲಿನ ಮಾತುಗಳಲ್ಲಿ ಕಾವ್ಯ ಶೈಲಿಯಿದೆ. ಅತಿಶಯೋಕ್ತಿಯಿದೆ. ತಾತ್ಪರ್ಯವಾಗಿ ಆತನು ಮಹಾಶೂರನಾಗಿದ್ದನೆಂದು ವಿದಿತವಾಗುವುದು. ಆತ ತನ್ನ ಸೈನ್ಯಕ್ಕೆ ಕೊಟ್ಟ ವೀರಾವೇಶದ ಕರೆಯಿದು -

ಹೆಂಡಿರು ಇದ್ದವರು । ಹೆಂಡ್ರಮನೆಗೋಗೀರ
ಹೆಂಡಿರಿಲ್ಲಾದ ಹುಡುಗರು - ನೀವೆಲ್ರು
ಕತ್ತಿಗೆ ಕೈಯ - ಕಲಿಮಾಡಿ

ಅಂತಹ ಮದಕರಿನಾಯಕನು ಬಿದ್ದ ಸಂಗತಿ ಇಲ್ಲಿದೆ -

ಬಿದ್ದಾನೆ ಮದಕೇರಿ ಬಳಿಯಂಗಿ ಮೇಲಾಗಿ
ವಜ್ಜರದ ಬಾಕು ಅಡಿಯಾಗಿ - ಮದಕೇರಿ
ಸೂರಿದಿಗೆ ಮುಖವು - ಎದುರಾಗಿ[೧೦]

ಸುಮಾರು ಇದೇ ಕಾಲದ ಇನ್ನೊಬ್ಬ ಪಾಳೆಯಗಾರ 'ಸೀರ್‍ಯಾದ ರಂಗಣ್ಣ ನಾಯಕ'. ಆತನನ್ನು ಕುರಿತ ಜನಪದಗೀತಗಳಲ್ಲಿ ಅವನ ಪರಾಕ್ರಮ ವರ್ಣಿತವಾಗಿದೆ. ಸೀರ್‍ಯದ ರಂಗಣ್ಣನು ಕುವ್ವರದ ಕೆಂಗಣ್ಣನೊಡನೆ ಪಗಡೆಯಾಡಿ ಆತನನ್ನು ಸೋಲಿಸುತ್ತಾನೆ ಮತ್ತು ಅವಮಾನಿಸುತ್ತಾನೆ. ಇದರಿಂದ ಕೆಂಗಣ್ಣನು ಕೋಪಗೊಂಡು ಪೆನುಕೊಂಡೆಯಕ್ಕೆ ಹೋಗಿ ತುರುಕರು ರಂಗಪ್ಪನ ಮೇಲೆ ಬೀಳುವಂತೆ ಮಾಡುತ್ತಾನೆ. ರಂಗಪ್ಪನು ತನ್ನ ತಂಗಿಯನ್ನೂ ತಾಯಿಯನ್ನೂ ಸಂತಯಿಸಿ ಯುದ್ಧಕ್ಕೆ ಹೊರಡುವುದನ್ನು ಮುಂದಿನ ಉದಾಹರಣದ ಹಾಡುಗಳು ತಿಳಿಸುತ್ತವೆ.

ತೆಂಗಿನ ಹಣ್ಣೊಂದು । ತಂಗಿ ಮಡಲಿಗೆ ಕಟ್ಟಿ
ತಂಗಿ ಸರ್ಜಮ್ಮ ಆಳದಿರೆ - ತುರ್ಕರ ಕೂಡೆ

೧೦. ಅದರಲ್ಲೇ

ಮೂರೇ ಮಾತಾಡಿ - ಬರುತೀನಿ
ಮಾವಿನ ಹಣ್ಣಾಂದು ತಾಯ್ಮಡಿಲಿಗೆ ಕಟ್ಟಿ
ತಾಯ್ ತಿಮ್ಮಾಜಮ್ಮಾ ಅಳದಿರೆ - ತುರ್ಕರ ಕೂಡೆ
ಮೂರೇ ಮಾತಾಡಿ - ಬರುತೀನಿ

ರಂಗಣ್ಣನು ಯುದ್ಧಮಾಡಿದ ಅವನ ತಲೆ ಸಿರ್‍ಯಾದ ನಡುಪೇಟೆಯಲ್ಲಿ ನೆಲಕ್ಕುರುಳಿತು. ಇದನ್ನು ತಿಳಿಸುವ ಹಾಡಿದು -

ಆನೆ ಬಿತ್ತು ಅಂಕುಶಕೆ ಕುದ್ರೆ ಬಿತ್ತು ಲಾಯಕ್ಕೆ
ಸೀತೆ ಬಿತ್ತು ಕಂಚ ಹೊಳೆಯಾಚೆ - ರಂಗಣ್ಣನ
ಶಿರ ಬಿತ್ತು ಸೀರ್‍ಯಾ - ನಡುಪೇಟ್ಗೆ[೧೧]

ಆಂಗ್ಲೇಯರು ನಮ್ಮ ದೇಶವನ್ನು ನಿರಂಕುಶವಾಗಿ ಆಳುತ್ತಿದ್ದಾಗ ಅಲ್ಲಲ್ಲಿ ಜನತೆ - ಜನನಾಯಕರು ಬಂಡಾಯವೆದ್ದ ಘಟನೆಗಳಿವೆ. ಅವುಗಳಲ್ಲಿ ಕೆಲವು ಜವಪದಗೀತಗಳಲ್ಲಿ ಬಂದು ಬಿಟ್ಟಿವೆ. ನರಗುಂದದ ಬಂಡಾಯ ಅವುಗಳಲ್ಲೊಂದಾಗಿದೆ. ಇದನ್ನು 'ಮುಂಡರಗಿ ಭೀಮಣ್ಣನ ಬಂಡಾಯ' ಎನ್ನಲಾಗಿದೆ. ನರಗುಂದದ ಕುರಿತ ತ್ರಿಪದಿಯಿದು -

ನರಗುಂದವೆಂಬೋದು । ಅರಗಿಣಿ ಪಟ್ಟಣ
ಕೆರೆ ಕಡಿಸಿ ನೀರ ಕುಡಿಲಿಲ್ಲ - ಬಾಬಣ್ಣಾ
ತಿರುಗಿ ನರಗುಂದ - ಹೊಗಲಿಲ್ಲ[೧೨]

ಇಲ್ಲಿ ಬಂದಿರುವ ಕೆರೆಕಡಿಸಿದ ವಿಚಾರ ಮತ್ತು ಅದರ ಪರಿಣಾಮ ಏನೆಂಬುದು ಇನ್ನಷ್ಟು ಅನ್ವೇಷಣೆ ಮಾಡಿ, ತಿಳಿಯತಕ್ಕ ಸಂಗತಿಯಾಗಿ ಕಾಣುತ್ತದೆ. ಇದೇ ಸಂಗ್ರಹದ ಮುಂದಿನ ಹಾಡು ನುಡಿಗಳಲ್ಲಿ ಮಂಡರಗಿ ಭೀಮಣ್ಣನ ಬಂಡಾಯದ ಪ್ರಸ್ತಾವವಿದೆ.

ಮಂಡಗಿರಿ ಭೀಮಣ್ಣ । ಬಂಡಾಯ ಎಬ್ಬಿಸಿದ
ದಂಡ ಕೂಡ್ಸ್ಯಾನೋ ನರಗುಂದ - ಬಾಬಸಾಬ
ಕೆಂಡ ಕಾರ್‍ಯಾನೋ - ಕುಂಪಣಿಗೋ
ಮಡದಿ ಮಕ್ಕಳ ಬಿಟ್ಟ । ಹಡೆದ ತಾಯಿಯ ಬಿಟ್ಟ
ಕಡೆಗವ ಬಿಟ್ಟ ನಡದಾಸೆ - ಬಾಬಸಾಬ
ಕೇಡಿಗೆ ಬಿಟ್ಟ - ನರಗುಂದ
ಹೂಲಿ ಸ್ವಾಮಿಯು ಕೊಟ್ಟ ಕೋಲ ಮಿಂಚಿನ ಶಾಪ
ಗಾಲಮೇಲಾತೋ ನರಗುಂದ - ಮರುವರ್ಷ
ಕೂಲಿ ಕುಂಬಳಿಗೆ - ಎರವಾತೋ[೧೩]

---

೧೧. ಅದೇ ಪುಸ್ತಕದಲ್ಲಿ

೧೨. ಎಂ. ಜೀವನ - ಜಾನಪದ ಗೀತೆಗಳು, ಪದ್ಯ ೧೮೯೧

೧೩. ಅದರಲ್ಲೇ - ಪದ್ಯಗಳು ೧೮೯೫, ೧೯೦೦. ೧೯೦೪

ಐತಿಹಾಸಿಕ ಮೌಲ್ಯವುಳ್ಳ ಜಾನಪದಗೀತಗಳಲ್ಲಿ ಲಾವಣಿಗಳು ಹೆಚ್ಚಿನ ವಿವರವನ್ನು ಕೊಡತಕ್ಕವು. ಅವು ಆಯಾ ಘಟನೆಗಳ ಹಿನ್ನೆಲೆಯನ್ನೂ ಸಂಭಾವ್ಯವನ್ನೂ ಪರಿಣಾಮವನ್ನೂ ಬಹಳ ಮಾರ್ಮಿಕವಾಗಿ ತಿಳಿಸುತ್ತವೆ. ಹೂವಿನ ಹಡಗಲಿ 'ಭೀಮರಾಯನ ಬಂಡಾಯ'[೧೪] ಲಾವಣಿಯಾಗಿ ಪ್ರಕಟವಾಗಿದೆ. ಆದರೆ ಇದರ ರಚನೆ ಕುಂಪಿಣಿ ಸರಕಾರದ ಶೌರ್ಯವನ್ನು ಹೊಗಳುವ ರೀತಿಯಲ್ಲಿದೆ -

ಧೀರ ಕುಂಪಣಿ ಸರದಾರ ಟೇಲರ ಸಾಹೇಬ
ಗ್ಯಾರು ಸರಿಯೋ ಧರೆಯೊಳಗೇ - ಎಂಬುದು ಇದರ ಪಲ್ಲವಿ
ಭೀಮರಾಯನ ಕೊನೆಯನ್ನು ಕುರಿತು ಆ ಲಾವಣಿ ಹೇಳುವುದಿದು -
ಕಿತ್ತ ಕತ್ತಿ ಕೈ ಎತ್ತಿ ಸುತ್ತ ಮುತ್ತ
ಕೇಳುತಾನ ಬಂಟರನು
ಭೀಮರಾಯ ಕೂಡಿ ಹೋದವಾ ರಣಶೂರ
ತಡೆಯದೆ ಹಾರುತ್ತಿದ್ದವು ಶಿರ
ಹರಿಯುತಲೈತೋ ಕೆಂಪು ನೆತ್ತರ
ಒಮ್ಮೆ ಗುಂಡು ಹಾರಿತೋ ಸಾವಿರ
ಹಮ್ಮಿಗೆ ದೇಸಾಯಿ ಭೀಮರಾಯ
ಆದೇ ಕ್ಷಣಕೆ ಸಂಹಾರ ಧೀರ ಕುಂಪಣಿ

ಬ್ರಿಟಿಷರ ದಾಸ್ಯದಿಂದ ನಮ್ಮ ದೇಶವನ್ನು ಮುಕ್ತಗೊಳಿಸಲು ಮಾಡಿದ ಹೋರಾಟದಲ್ಲಿ ಕಿತ್ತೂರು ಪ್ರಮುಖಸ್ಥಾನವನ್ನು ವಹಿಸಿದೆ. ಈ ಚಿಕ್ಕ ಸಂಸ್ಥಾನದ ಅರಸರು ಪ್ರಜೆಗಳು ಸ್ವಾತಂತ್ರ್ಯ ಪ್ರೇಮಕ್ಕೆ ಹೆಸರಾದವರು. ಕಿತ್ತೂರಿನ ಅಧಿಪತಿಯಾದ ಮಲ್ಲಸರ್ಜನನಿಗೆ ಮೊದಲ ಮಡದಿ ರುದ್ರವ್ವೆ, ಎರಡನೆಯವಳು ಚೆನ್ನಮ್ಮ. ರಾಜಕೀಯ ವಿಪತ್ತುಗಳಿಂದ ಮಲ್ಲಸರ್ಜನನು ತೀರಿಹೋಗುತ್ತಾನೆ. ರುದ್ರವ್ವೆಯೂ ಸಾಯುತ್ತಾಳೆ. ಮಲ್ಲಸರ್ಜನನ ಮಗನೂ ಸತ್ತು ಅನಂತರ ಬ್ರಿಟಿಷ ಅಧಿಕಾರಿ ದತಕರೆಯು ಕಿತ್ತೂರನ್ನು ಕಿತ್ತುಕೊಳ್ಳಲು ಯತ್ನಿಸುತ್ತಾನೆ, ಯುದ್ಧವಾಗುತ್ತದೆ. ಕಿತ್ತೂರ ಕೋಲ ಪದಗಳು[೧೫] ಈ ಐತಿಹಾಸಿಕ ವಿವರವನ್ನು ಕೊಡುತ್ತವೆ. ಠಾಕರೆಯ ಡಂಗುರವಿದು-

ಲಡಾಯಿ ಮಾಡಾಕ ನಮಗೂಡ ಕೂಡಿದರ
ಏಳೂರ ವತನವ ಕೊಡತೇವಿ - ನಾಡಾಗ
ಥಾಕರೆ ಡಂಗ್ರ - ಹೊಡಿಸ್ಯಾನ

ಕಿತ್ತೂರನ್ನು ಮುತ್ತಲು ಅವನು ಮಾಡಿದ ದಂಡಯಾತ್ರೆಯ ವರ್ಣನೆ ಹೀಗಿದೆ -

ಆನ್ಯೊಂದು ಐನೂರು ಕುದಿರ್‍ಯೊಂದು ಸಾವಿರ
ಕಾಲಾಳು ಮಂದಿ ಕಡಮಿಲ್ಲ - ಸಾಹೇಬನ
ದಂಡು ಮುಂದಕ್ಕ - ಸಾಗ್ಯಾವ.

---

೧೪. ಆರ್. ಎಸ್. ಪಂಚಮುಖಿ - ಕರ್ನಾಟಕದ ಜಾನಪದಗೀತಗಳು (೧೯೫೩) ಪುಟ ೧೨-೨೦
೧೫. ಡಾ. ಬಿ.ಎಸ್. ಗದ್ದಗಿಮಠ - ಲೋಕಗೀತಗಳು (೧೯೬೦) ಪುಟ ೧೯೮ - ೨೨೯- ೨೨೮.

ಕಿತ್ತೂರನ್ನು ಮುತ್ತಲು ಆಂಗ್ಲರ ಸೇನೆ ಬರುತ್ತಿದ್ದಾಗ ಚೆನ್ನಮ್ಮ ಅರಮನೆಯಲ್ಲಿರುತ್ತ ಒಂದು ಕನಸನ್ನ ಕಾಣುತ್ತಾಳೆ. ಅದರಲ್ಲಿ ಪತಿ ಮಲ್ಲಸರ್ಜನು ಕಾಣಿಸುತ್ತಾನೆ. 'ನನ್ನ ಮಡದಿಯೆ' ನಾಳೆ ಬೆಳಗ್ಗ ಕಿತ್ತೂರಿಗೆ ಕಂಟಕ ಬರುತ್ತದೆ. ಹೊಟ್ಟೆಯಲ್ಲಿ ಬಂದ ಮಗನಿದ್ದರೆ ಸೂಚನೆ ಕೊಡುವ ಮೊದಲೇ ಆತ ರಣಕ್ಕೆ ದುಮ್ಮಿಕ್ಕುತ್ತಿದ್ದ. ಅಂಥ ಮಗನಿಲ್ಲದ ಕಾರಣ ನನ್ನ ಮಡದಿ ಗಂಡಾಗಿ ಮಾಡಲಿ ಕಾಳಗ ಎನ್ನುತ್ತಾನೆ.

ಗಂಡ ಉಡಗರಿ ಉಟ್ಟು । ಗುಂಡಿ ಮುಂಡಾಸ ಸುತ್ತಿ
ಗುಳಗಿ ಚಣ್ಣವ ತೊಡಬೇಕ - ನನ ಮಡದಿ
ಕೈಯಾಗ ಕತ್ತಿ - ಹಿಡಿಬೇಕ ಎನ್ನುತ್ತಾನೆ.

ಕಿತ್ತೂರ ಚೆನ್ನಮ್ಮನ ಆಜ್ಞೆಯಂತೆ ಸೈನ್ಯ ಸಿದ್ಧವಾಗುತ್ತಿದೆ. ಸಂಗೊಳ್ಳಿರಾಯಣ್ಣನೂ ಬಂದೊದಗುತ್ತಾನೆ -

ಕಿತ್ತೂರ ಕುರುಬನು ಸಂಗೊಳ್ಳಿ ರಾಯಣ್ಣ
ಬೇಗನೆ ಬಂದು ಒದಗಿದ - ಅಂಕಲಗಿ
ಅಡಿವೆಪ್ಪ ಮಡಿವಳ - ಮಾದೇವ

ಯುದ್ಧದ ಪರಿಣಾಮವನ್ನು ತಿಳಿಸುವ ಪದ್ಯವಿದು -

ಬಾಲಿ ಚೆನ್ನವ್ವಗಂಜಿ ಠಾಕರೆ ಸಾಹೇಬನ ದಂಡು
ಕೈ ಮಗಿದು ಬೆದರಿ ದಿಕ್ಕೆಟ್ಟು - ಚೆನ್ನವ್ವ
ಠಾಕರೆಯ ಚಂಡು - ಚೆಂಡಾಡಿ (ಪುಟ ೨೨೬)

ಈ ಜಾನಪದ ಗೀತದಲ್ಲಿ ಠಾಕರನ ಕೊಲೆ, ಚೆನ್ನಬಸಪ್ಪನ ಕೊಲೆ ಇವುಗಳ ವಿಚಾರವಿದ್ದು ಐತಿಹಾಸಿಕ ವಿವರ ಮನದಟ್ಟಾಗುತ್ತದೆ.

'ನರಗುಂದದ ಲಾವಣಿ' ಎಂಬ ಇನ್ನೊಂದು ಕಥನ ಗೀತದಲ್ಲಿ ಚೆನ್ನಮ್ಮನ ಶೌರ್ಯ ವರ್ಣಿತವಾಗಿದೆ - ಅದನ್ನು ದಿಗ್ದರ್ಶಿಸುತ್ತೇನೆ -

ಏಳ್ರೋ ರಣಕೆ। ಇನ್ನಾ ಪೇಳ್ವೆ। ಯುದ್ಧದ ಕಥೆಯನ್ನ
ನಮ್ಮ ನಾಡಿನ ಚನ್ನಾ। ಚೆನ್ನಮ್ಮ ತೋರ್ದ ಶೌರ್ಯವನ್ನ
ಹಗೆಯ ಭಾವ ತಿಳಿದು। ಯುದ್ಧಕ್ಕೆ ಪೋದಳಾಕೆ ಮುನಿದು
ಥಂಥನನೆ ಜಿಗಿದು। ಖಡ್ಗವ ಒರೆಗಳಿಂದ ಹಿರಿದು
ಚಮಕ್ ಮಾಡಿ ಕಾಲ್ದಂಡು ಉಳಿದು ಕೂಡಿ ಬಂದಂತೆ
ವೈರಿ ಸೈನ್ಯ ಕೊಂದಳವಳು ಗಂಡವಳು[೧೬]

ಕಿತ್ತೂರ ಚೆನ್ನಮ್ಮನ ಸೊಸೆ ವೀರಮ್ಮ. ಈಕೆ ರಾಯಣ್ಣ ಮೊದಲಾದ ಸ್ವಾತಂತ್ರ್ಯದ ಹೋರಾಟಗಾರರಿಗೆ ಉತ್ತೇಜನವಿತ್ತಳು. ಚೆನ್ನಮ್ಮನಂತೆ ಈಕೆ ಸೆರೆಮನೆ ಸೇರಿದಳು. ವೀರಮ್ಮನ ದುರಂತ ಮರಣವನ್ನು ಒಂದು ಲಾವಣಿ ಪದದಲ್ಲಿ ಚಿತ್ರಿಸಲಾಗಿದೆ.[೧೭] ಕಿತ್ತೂರ ಪತನದ

೧೬. ಆರ್. ಎಸ್. ಪಂಚಮುಖಿ - ಕರ್ನಾಟಕದ ಜನಪದಗೀತೆಗಳು (೧೯೫೩) ಪುಟ ೬೩

೧೭. ಗ.ಸ. ಹಾಲಪ್ಪ ಭಾರತ ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ (ಕಿತ್ತೂರ ರಾಣಿ ಚೆನ್ನಮ್ಮ) ಪುಟ ೧೦೭-೧೧೫

ಅನಂತರ ಪುನಃ ಅದಕ್ಕೆ ಸ್ವಾತಂತ್ರ್ಯ ತರುವುದಕ್ಕಾಗಿ ಹೋರಾಡಿದವನು ಸಂಗೊಳ್ಳಿ ರಾಯಣ್ಣ. ಆದರೆ ಆತನು ದೇಶದ್ರೋಹಿಗಳ ಒಳಸಂಚಿಗೆ ಗುರಿಯಾಗಿ ಬ್ರಿಟಿಷರ ಸೆರೆಯಾಳಾಗಿ ನಂದಗಡದಲ್ಲಿ ಗಲ್ಲಿಗೇರಬೇಕಾಯಿತು. ಕಿತ್ತೂರ ರಾಣಿಯ ಧ್ಯೇಯವನ್ನು ಮುಂದುವರಿಸಿದ ಈ ಯೋಧನನ್ನು ಕುರಿತು 'ಸಂಗೊಳ್ಳಿ ರಾಯಣ್ಣನ ಹಾಡು'.[೧೮] ರಚಿತವಾಗಿದೆ. ಹಲವು ತ್ರಿಪದಿಯ ಹಾಡುಗಳಲ್ಲಿ ರಾಯಣ್ಣನ ಉಲ್ಲೇಖ ಬರುತ್ತದೆ. ಅಕ್ಕತಂಗಿಯರ ಸಂವಾದ ರೂಪದ ಅಂತಹ ಒಂದೆರಡು ಉದಾಹರಣೆಗಳಿವು -

ಅಣ್ಣ ರಾಯಣ್ಣನ ಕೊಂದಾವೆ ನೋಡಕ್ಕ
ಬಿಳಿಯರ ದಂಡು ಚಣದಾಗ - ಕಿತ್ತೂರ
ಕೋಟೆಗೆ ರಕ್ತ - ಬಳಿದಾವು
ಬ್ರಿಟಿಷರ ಸರ್ವಾಧಿಪತ್ಯದಿಂದ ನೊಂದ ಜನತೆಯ ಮಾತನ್ನು ಕೇಳಿ
ಬಿಳಿಯ ಕೋತಿಗಳಾಟ ದೇಶೆಲ್ಲ ಹಬ್ಬೈತಿ
ಕೊನೆ ಎಂದೋ ಶಿವನೆ ನಾಡಿಗೆ - ನಾಡೆಲ್ಲ
ಉರಿದೆದ್ದು ಬಾಲ - ಕೊಯ್ಯಲಿ[೧೯]

ಇನ್ನೊಂದೆಡೆ ಬೇರೊಂದು ಜಾನಪದ ಗೀತ ಸಂಕಲನದಲ್ಲಿ ಎರೆನಾಡದೊರೆಯ ಪರಾಕ್ರಮದ ವರ್ಣನೆಯಿದೆ. ಆತನು ನಲ್ಯಾರ ನಾಡವನ್ನು ಜಯಿಸಿದಂತೆ ಹೇಳಲಾಗಿದೆ :-

ಎರಿನಾಡ ದೊರಿ ನಮ್ಮ । ಹಿರಿದಾನ ಒರಿಗಿತ್ತಿ
ಸುರಿಸ್ಯಾನ ಸುತ್ತ ನೆತ್ತರ - ನಗಿನಗಿಸಿ
ನಲ್ಯಾರ ನಾಡ - ಜಯಿಸ್ಯಾನ[೨೦]

ಇದರ ಇತಿಹಾಸವೇನೆಂಬುದನ್ನು ತಿಳಿಯಬೇಕಾಗಿದೆ.

ನಮ್ಮ ಕನ್ನಡನಾಡಿನಲ್ಲಿ ನಡೆದ ಮಹತ್ವಪೂರ್ಣವಾದ ಅನೇಕ ಸಂಗತಿಗಳು ಜಾನಪದ ಕಥನಗೀತಗಳಿಗೆ ವಸ್ತುಗಳಾಗಿವೆ. ಅವುಗಳಲ್ಲಿ 'ಪೆರಿಯಾ ಪಟ್ಟಣದ ಕಾಳೆಗ' ಎಂಬುದನ್ನು ಕೆಲವರು ಸಂಗ್ರಹಿಸಿ ಪ್ರಕಟಮಾಡಿದ್ದಾರೆ. ಈ ಸಂಗ್ರಹದಲ್ಲಿ ಶ್ರೀ ಜಿ.ಶಂ.ಪ. ಅವರ ಸಂಗ್ರಹವು ಸಮರ್ಪಕವಾಗಿಯೂ ಕ್ರಮಬದ್ಧವಾಗಿಯೂ ಇದೆ. ಈ ಕಾಳಗದ ಘಟನೆಯ ಸಾರಾಂಶವಿದು[೨೧]

ಪಿರಿಯಾ ಪಟ್ಟಣದ ವೀರರಾಜನಿಗೆ ತನ್ನ ರಾಣಿಯಾದ ಪಟ್ಟದ ಅಮ್ಮಯ್ಯ ಎಂಬವಳಲ್ಲಿ ಒಂದು ಹೆಣ್ಣುಮಗು ಜನಿಸಿತು. ಆ ಮಗುವಿನಿಂದ ಮುಂದೆ ರಾಜ್ಯಕ್ಕೆ ಕೇಡಾಗುವುದೆಂಬ ಭವಿಷ್ಯವರಿತು ರಾಜನು ಅದನ್ನು ಕೊಲ್ಲಲು ಆಜ್ಞೆ ಮಾಡಿದನು. ಪಟ್ಟದ ಅಮ್ಮಯ್ಯ ಆ ಮಗುವನ್ನು ರಹಸ್ಯವಾಗಿಟ್ಟು ಬೆಳೆಸಿದಳು. ತನ್ನ ಮಗಳೇ ಆಕೆಯೆಂದು ಅರಿಯದ ರಾಜನು

---

೧೮. ಅದರಲ್ಲೇ - ಪುಟ ೧೫೬-೧೭೧

೧೯. ಕೆ. ವಿರೂಪಾಕ್ಷಗೌಡ - ಹಳ್ಳಿಯ ಪದಗಳು (೧೯೬೮) ಪುಟ ೬೩

೨೦. ಎಂ. ಜೀವನ ಜಾನಪದಗೀತೆಗಳು, ಪದ್ಯ ೨೧೯೨

೨೧. ಹೊನ್ನು ಬಿತ್ತೇವು ಹೊಲಕ್ಕೆಲ್ಲ - ಪುಟ ೫೭೭

ಅವಳ ಮೇಲೆ ಮೋಹಗೊಂಡುದನ್ನು ರಾಣಿ ತಿಳಿದು ತನ್ನ ಸೋದರಮಾವನಾದ ಮೈಸೂರು ದಳವಾಯಿಯ ಬಳಿಗೆ ಕಳುಹಿಸಿದಳು. ಇದರಿಂದ ಮೈಸೂರು ದಳವಾಯಿಗೂ ವೀರರಾಜನಿಗೂ ಯುದ್ಧನಡೆಯಿತು. ಯುದ್ಧದಲ್ಲಿ ವೀರರಾಜನು ಮಡಿದನು. ಸಾಯುವ ಮುನ್ನ ಆತನ ಮೂವರು ಹೆಂಡಿರು ಒತ್ತಾಯಿಸಿದ ಪ್ರಕಾರ ವೀರರಾಜನು ಅವರನ್ನೂ ಕೊಂದನು. ಪಿರಿಯಾ ಪಟ್ಟಣ ಮೈಸೂರಿಗೆ ಸೇರಿತು. ಈ ಇತಿಹಾಸ ಜಾನಪದ ಲಾವಣಿಯೊಂದಕ್ಕೆ ವಸ್ತುವಾಗಿದೆ. ಕರುಣ - ವೀರರಸಗಳ ಮಡುವಾಗಿ ಈ ಕಥನಗೀತ ಸೊಗಸಾಗಿದೆ. ಇದರಲ್ಲಿ ವೀರರಾಜ ಮೈಸೂರ ದಳವಾಯಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ -

ಎಂದಿಗೂ ಹುಟ್ಟಿ ಇಂದಿಗೂ ಬೆಳೆದರೂ । ದಳವಾಯಿ ಮಾವಣ್ಣಾ
ರಕ್ತದ ಮುಖ ನೋಡೆ ಇಲ್ಲವಲ್ಲಾ
ಗಂಡು ಆದರೆ ದಂಡೆತ್ತಿ ಬರಲಯ್ಯಾ । ದಳವಾಯಿಯವರು
ಹೇಡಿಯಾದರೆ ತನ್ನರಮನೇಲಿರಲಯ್ಯ
ಸುಮ್ಮನೆ ಇದ್ದು ಒಪ್ಪುವುದಿಲ್ಲವಲ್ಲ । ದಳವಾಯಿಯವರು
ಬಣ್ಣವುಟ್ಟುಕೊಂಡು ಬಳೆಯ ತೊಟ್ಟುಕೊಂಡು
ಹೇಡಿಯಾಗಿ ತನ್ನರಮನೆಲಿರಲಯ್ಯಾ[೨೨]

ಈ ಪತ್ರವನ್ನೋದಿ ದಳವಾಯಿ ತನ್ನ ಪ್ರಾಣವನ್ನು ಇನ್ನು ಹಿಡಿದುಕೊಂಡು ಸುಮ್ಮನಿರಲಾರೆನೆಂದು ತನ್ನ ಹೆತ್ತಯ್ಯನೊಡನೆ ಹೇಳುತ್ತಾನೆ. ಮೂರು ತಿಂಗಳ ಭತ್ಯ ಸಮೇತ ಮೂರು ಸಾವಿರ ಸೈನ್ಯವನ್ನು ತನ್ನೊಡನೆ ಕಳುಹುವಂತೆ ಹೇಳುತ್ತಾನೆ. ಸತ್ತರೆ ಅಲ್ಲೇ ಸಾಯುತ್ತೇನೆ. ಉಳಿದರೆ ಪಿರಿಯಾಪಟ್ಟಣವನ್ನು ತರುತ್ತೇನೆ - ಎಂದು ಹೇಳಿ ಸೈನ್ಯಸಮೇತ ಹೊರಟು ಪಿರಿಯಾ ಪಟ್ಟಣವನ್ನು ಮುತ್ತುತ್ತಾನೆ.

ಐತಿಹಾಸಿಕ ಜಾನಪದ ಕಥನವಾಗಿ 'ಶ್ರೀ ರಂಗಪಟ್ಟಣದ ಲಾವಣಿ' ಯೂ ಇಲ್ಲಿ ಉಲ್ಲೇಖಾರ್ಹವಾಗಿದೆ.

ಕನ್ನಡದ ಉಪಭಾಷೆಗಳಂತಿರುವ ಕೊಡಗು ಮತ್ತು ತುಳು ಭಾಷೆಗಳ ಜಾನಪದ ಸಾಹಿತ್ಯದಲ್ಲಿಯೂ ಇತಿಹಾಸಕ್ಕೆ ಸಂಬಂಧವಿರುವ ವಿಷಯಗಳು ಉಪಲಬ್ಧವಿವೆ. 'ಪನ್ನಂಗಾಲ್ ತಮ್ಮೆ' ಎಂಬುದು ಕೊಡಗು ಭಾಷೆಯ ಒಂದು ಪಾಟ್ಟು (ಅಂದರೆ ಹಾಡು). ಇದರಲ್ಲಿ ಮೂವರು ಸೋದರರು ಒಬ್ಬಳು ಸಹೋದರಿಯೊಂದಿಗೆ ಕೇರಳ ಸೀಮೆಯಿಂದ ಕೊಡಗಿಗೆ ಬಂದು ನೆಲಸಿದುದು ಗೊತ್ತಾಗುತ್ತದೆ. ಕೊಡಗಿನಲ್ಲಿ ನೆಲೆಯೂರಲು ಕೇರಳದಿಂದ ಜನರು ಬರುತ್ತಿದ್ದುದು ಐತಿಹಾಸಿಕ ವಿಷಯವಾಗಿದೆ. ಇನ್ನೊಂದು ಕೊಡಗು ಹಾಡು 'ಕಲ್ಯಾಣಂಡ ಅಜ್ಜಪ್ಪನ ಪಾಟ್ಟು'. ಕೊಡಗು ಸೀಮೆಯ ನಾಪೋಕ್ಲು ಎಂಬಲ್ಲಿ ಸುಮಾರು ಹದಿನೈದನೆಯ ಶತಮಾನದಲ್ಲಿದ್ದ ಪಾಳೆಯಗಾರರ ಕುರಿತಾಗಿ ಈ ಹಾಡು ವಿವರವನ್ನು ಕೊಡುತ್ತದೆ.

---

೨೨. ಕ ರಾ ಕೃ - ಜಾನಪದ ಕಥನಗೀತಗಳು (೧೯೬೨) ಪುಟ ೩೦೮

ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಸಾಹಿತ್ಯದಲ್ಲಿ ಮುಖ್ಯವಾಗಿ ತುಳುವಿನಲ್ಲಿ ಇತಿಹಾಸದ ರೇಖೆಗಳು ದೊರೆಯುತ್ತವೆ. ತುಳುವಿನಲ್ಲಿ ಸಂಧಿಪಾರ್ದನ (ಇದನ್ನು 'ಪಾಡ್ದನ' ಎಂದು ಉಚ್ಚರಿಸಬಾರದು) ಗಳೆಂಬ ಸಾಹಿತ್ಯವಿದೆ. ಅದರಲ್ಲಿ ಭೂತಗಳ ಕಥೆ ಬರುತ್ತದೆ. ಶಿವನ ಭೂತಗಣಗಳು ಆತನ ಆಜ್ಞೆಯಂತೆ ಭೂಮಿಗೆ ಇಳಿದು ಬಂದು ಎಲ್ಲೆಲ್ಲಿ ಸಂಚರಿಸಿದವು, ಎಲ್ಲೆಲ್ಲಿ ನೆಲಸಿದವು ಎಂಬ ವಿವರದೊಂದಿಗೆ ಕೆಲವು ಐತಿಹಾಸಿಕ ಅಂಶಗಳು ಇದರಲ್ಲಿ ಸೇರಿಕೊಂಡುದನ್ನು ಕಾಣಬಹುದು. 'ಕೋಟಿ ಚೆನ್ನಯರ ಪಾರ್ದನ' ಎಂಬುದು ಶೌರ್ಯಮಯ ಜೀವನ ನಡೆಸಿ ಶತ್ರುಗಳೊಂದಿಗೆ ಕಾದಾಡಿ ಮಡಿದ ಸೋದರರಿಬ್ಬರ ರೋಮಾಂಚಕ ಇತಿಹಾಸವೇ ಆಗಿದೆ. ಸಹೋದರ ಪ್ರೇಮ, ಸ್ವಾಮಿನಿಷ್ಠೆ, ಸೇಡನ್ನು ಈಡೇರಿಸುವ ಹಟ, ಆಡಿದಂತೆ ನಡೆವ ಧೀರವೃತ್ತಿ - ಇಂತಹ ಗುಣಗಳಿಗೆ ದೃಷ್ಟಾಂತವಾದ ಐತಿಹ್ಯ ಈ ಪಾರ್ದನ. ಈ ಐತಿಹ್ಯದ ಕಾಲ ಸುಮಾರು ನಾನೂರು ವರ್ಷಗಳ ಹಿಂದಿನದು. ಪಡುಮಲೆ ಪಂಜ ಮತ್ತು ಯಣ್ಮೂರು ಸೀಮೆಗಳನ್ನು ಬಲ್ಲಾಳ ಅರಸರು ಆಳುತ್ತಿದ್ದ ಕಾಲ. ಈ ಐತಿಹ್ಯವಸ್ತು ಈ ಮೂರು ಸೀಮೆಗಳಿಗೆ ವ್ಯಾಪಿಸಿದೆ.

'ಪಂಜುರ್ಲಿ ಪಾರ್ದನ' ಎಂಬುದು ಒಂದು ಭೂತದ ಕಥೆಯನ್ನುಳ್ಳುದಾದರೂ ಇದರ ಮೊದಲ ಭಾಗ ಇತಿಹಾಸದ ರೂಪದಲ್ಲೇ ಇದೆ. ಮಡಿಕೇರಿಯಲ್ಲಿ ಬೈರ ತೋಡರಸನು ಆಳುತ್ತಿದ್ದನು. ಅವನದು ದರ್ಪ ಕ್ರೌರ್ಯಗಳ ಅಳಿಕೆ. ಪ್ರಜೆಗಳಿಗೆ ಆತ ಕಂಟಕನಾಗಿದ್ದ. ಇದರಿಂದ ಪ್ರಜೆಗಳು ಇರುಳಿರುಳೇ ಹೊರಟು ಕನ್ನಡ ಅರಸನ ಮರೆಹೊಕ್ಕರು. ಕನ್ನಡ ಅರಸನು ಬೈರತೋಡನ ಮೇಲೆ ಯುದ್ಧಸಾರಿದನು. ಕನ್ನಡ ಅರಸನ ಸಹಾಯಕ್ಕೆ ಒಂದು ಸಾವಿರ ಕೊಡಗರು ಬಂದರು. ಬಡಗಣ ಬತ್ತಿಕೋಟೆಯಿಂದ ಸಾವಿರ ಆನೆಗಳೂ ಸಾವಿರ ಕುದುರೆಗಳೂ ಸಾವಿರ ಸೈನಿಕರೂ ಬಂದರು. ತೆಂಕಣ ಚೆಂಬುನಾಡಿ ಕೋಟೆಯಿಂದ (ಕೊಡಗಿನ ಇಂದಿನ ಪೆರಾಜೆಯಿರಬಹುದು) ಸಾವಿರ ಕುದುರೆಗಳೂ ಸಾವಿರ ಕಾಲಾಳುಗಳೂ ಬಂದು ಸೇರಿದರು - ಪಡುವಣ ಬಲ್ನಾಡ ಗಂಗಮಂಡಲದಿಂದ ಒಂದು ಸಾವಿರ ಸೈನಿಕರೂ ಕೂಡಿ ಕೊಡಗಿಗೆ ದಂಡಯಾತ್ರೆ ಸಾಗಿತು.

ಬೈರತೋಡನು ಈ ವೇಳೆಗೆ 'ನಾಲ್ಕುನಾಡು' ಎಂಬಲ್ಲಿಗೆ ತನ್ನ ತಂಗಿಮನೆಗೆ ಹೋಗಿದ್ದನು. ಅಲ್ಲಿ ಅವನು ತಂಗಿಯನ್ನೆ ಮೋಹಿಸಿ ಪಶುಪ್ರಾಯನಾಗಿ ವರ್ತಿಸಿ ಭಾವನ ದ್ವೇಷಕ್ಕೆ ಗುರಿಯಾದನು. ಅವನು ಕನ್ನಡ ಅರಸನಿಗೆ ಪತ್ರ ಬರೆದು ಮಡಿಕೇರಿ ಕೋಟೆಯ ಒಳಗುಟ್ಟನ್ನು ತಿಳಿಸಿ ಸುಲಭದಲ್ಲಿ ಗೆಲ್ಲುವಂತೆ ಮಾಡಿದನು. ಮಡಿಕೇರಿ ಕನ್ನಡ ಅರಸನ ವಶವಾಯಿತು. ಈ ಕನ್ನಡ ಅರಸನು ತನ್ನ ಪ್ರಜೆಗಳಿಗೆ ದೇಶದ ಸುವ್ಯವಸ್ಥೆಯಾಗಿ ಹಲವಾರು ಕಟ್ಟುಕಟ್ಟಳೆಗಳನ್ನು ಮಾಡಿದನು.

ಈ ಪಾರ್ದನದ ಕಥೆಯಲ್ಲಿ ಹೇಳುವ ಇತಿಹಾಸದ ಸಂಶೋಧನೆ ಆಗಿಲ್ಲ. ಈ ಕನ್ನಡ ಅರಸನು ಹಾವೇರಿ ಮನೆತನದ ವೀರರಾಜನಿರಬಹುದು. ಆತನು ಕ್ರಿ.ಶ. ೧೬೦೦ ರಲ್ಲಿ ಕೊಡಗಿನ ನಾಯಕರನ್ನು ಸೋಲಿಸಿ ರಾಜನಾದನೆಂದು ಇತಿಹಾಸವಿದೆ.

'ಕುಂಬಳೆ ಸೀಮೆ ಚರಿತ್ರೆ' ಎಂಬೊಂದು ತುಳು ಲಾವಣೆಯಿದೆ. ಇದು ದೇಪಸ್ಥಾನ, ಭೂತಸ್ಥಾನ, ತೀರ್ಥಕ್ಷೇತ್ರಗಳ ಇತಿಹಾಸವನ್ನು ತಿಳಿಸುವಂತಿದ್ದು ಈಚೆಯ ಜಾನಪದ ಕವಿ ಪುಂಡೂರು ದಾಮೋದರ ಪುಣಿಂಜತ್ತಾಯರಿಂದ ರಚಿತವಾದುದು.

ಪ್ರಾಚೀನ ಪರಂಪರೆಯುಳ್ಳ ಭಾರತದೇಶದ ಎಲ್ಲ ಜನಪದ ಸಾಹಿತ್ಯದಲ್ಲಿಯೂ ಐತಿಹಾಸಿಕ ಮೌಲ್ಯವುಳ್ಳವು ಹೇರಳವಾಗಿ ಉಪಲಬ್ಧವಿರಲು ಸಾಧ್ಯ. ಕರ್ಣಾಟಕದಲ್ಲಂತೂ ಎಷ್ಟೋ ಹಾಡುಗಳು ಕಾಲಗರ್ಭವನ್ನು ಸೇರಿ ಮರೆಯಾದರೂ ಈಗ ದೊರೆತವುಗಳಲ್ಲಿ ಅಂತಹ ಇತಿಹಾಸದ ಎಳೆಗಳು ಅಲ್ಲಲ್ಲಿ ಕಾಣಸುತ್ತವೆಯೆಂಬುದು ವಿದಿತವಾಗುವುದು. ಇವುಗಳ ಸಂಗ್ರಹಕಾರ್ಯ ಪೂರ್ಣವಾಗಿಲ್ಲ. ಇನ್ನೂ ಸಂಗ್ರಹ ಮಾಡುವುದು ಆವಶ್ಯಕ. ಇದರಿಂದ ಇತಿಹಾಸ ಪರಿಶೀಲನೆ ಮಾಡುವವರಿಗೆ ಹೆಚ್ಚಿನ ಆಧಾರ ದೊರೆತಂತಾಗುವುದು. ಇದುವರೆಗಿನ ಇತಿಹಾಸಕಾರರು ಅಲ್ಲಿಲ್ಲಿನ ಶಿಲಾ ಶಾಸನಗಳಿಂದಲೋ, ಹಳೆಯ ಕಡೆತಗಳಿಂದಲೋ, ವಿದೇಶಿ ಪ್ರವಾಸಿಕರ ಉಲ್ಲೇಖಗಳಿಂದಲೋ, ಚಾರಿತ್ರಿಕ ವಸ್ತುವನ್ನುಳ್ಳ ಕಾವ್ಯನಾಟಕಗಳಿಂದಲೋ ವಸ್ತುವನ್ನು ಕಂಡು ಅದರ ಆಧಾರದಿಂದ ಇತಿಹಾಸವನ್ನು ರೂಪಿಸಿದ್ದಾರೆ. ಹಾಗೆ ರೂಪಿಸಿರುವ ಇತಿಹಾಸವನ್ನು ಜಾನಪದ ಉಲ್ಲೇಖದೊಡನೆ ತುಲನೆ ಮಾಡಿ ಹೆಚ್ಚಿನ ವಿವರದೊಡನೆ ವಾಸ್ತವಿಕಾಂಶವನ್ನು ತಿಳಿಯುವ ಕಾರ್ಯ ನಡೆಯಬೇಕಾಗಿದೆ. ಇಂದಿಗೆ ಮರೆಯಾಗಿರುವ ಎಷ್ಟೋ ಅರಸುಮನೆತನಗಳ ಹಾಗೂ ಪೂರ್ವ ಘಟನೆಗಳ ಇತಿಹಾಸ ನಿರ್ಮಾಣಕ್ಕೆ ಜಾನಪದ ಸಹಾಯಕವಾದೀತು. ಪ್ರಬಂಧವಿದು ಸಮಗ್ರವಲ್ಲ, ಪರಿಷ್ಕೃತವೂ ಅಲ್ಲ, ಲೋಪದೋಷರಹಿತವೂ ಅಲ್ಲ. ಇದನ್ನು ಸಿದ್ಧಗೊಳಿಸುವಲ್ಲಿ ಆಧಾರವಾಗಿಟ್ಟುಕೊಂಡ ಜಾನಪದ ಗೀತಗಳಲ್ಲಿ ಹಾಗೂ ಲಾವಣೆಗಳಲ್ಲಿ ತಪ್ಪುಗಳೂ ಇದ್ದಿರಬಹುದು. ಭಾವ - ಭಾಷಾರೂಪಗಳು ಅರ್ಥವಾಗದೆ ಉಳಿದವಂತೂ ಇದ್ದೇ ಇದ್ದವು. ಅರ್ಥವಾಗುವ ಅಂಶವನ್ನು ಕೂಡ ಪ್ರಚಲಿತವಾದ ಆಯಾ ಕಾಲದ ಇತಿಹಾಸ ಗ್ರಂಥಗಳ ಹೇಳಿಕೆಗಳಿಗೆ ಒರೆದು ನೋಡಲು ಸಾಧ್ಯವೂ ಆಗಿಲ್ಲ, ಅದಕ್ಕಿಲ್ಲಿ ಅವಕಾಶವೂ ಇಲ್ಲ. 'ಜಾನಪದ ಐತಿಹಾಸಿಕ ಮೌಲ್ಯ' ಎಂಬುದು ಬೃಹತ್ತಾದ ಸಂಶೋಧ ಗ್ರಂಥಕ್ಕೆ ವಸ್ತುವಾಗಬಲ್ಲುದು. ಅಂತಹ ರಚನೆಗೆ ಉದ್ಯುಕ್ತವಾಗುವ ವಿದ್ವತ್ಸಾಹಸಕ್ಕೆ ಪ್ರಬಂಧವಿದು ಆಂಶಿಕವಾಗಿ ಪ್ರೇರಕವಾದೀತೆಂದು ಮಾತ್ರ ಭಾವಿಸಬಹುದು.

☐

೨೩

ಕರ್ನಾಟಕದಲ್ಲಿ ಜನಪದಗೀತಗಳ ಪ್ರಾಚೀನತೆ

'ನುಡಿದು ನುಡಿದು ಭಾಷೆಯಾಯಿತು' ಎಂಬ ಭಾಷಾ ಸೃಷ್ಟಿಯ ಸಿದ್ಧಾಂತಕ್ಕೆ ಅನುಗುಣವಾಗಿ ಯಾವ ಭಾಷೆಯಲ್ಲಾದರೂ ಅದರ ಪ್ರಾರಂಭದ ರೂಪ ಮಾತು; ಆಡುಮಾತು. ಈ ಮಾತು ಗದ್ಯಸ್ವರೂಪವೆಂಬುದು ನಿಶ್ಚಯ. ಯಾವನೊಬ್ಬನೂ ಮಾತಾಡುವುದು ಗದ್ಯದಲ್ಲಿ ತಾನೇ? ಅದೇ ಮಾತು ಪರಿಮಾರ್ಜಿತ, ಪರಿಷ್ಕೃತ, ಸುಂದರ, ಹೃದಯಗ್ರಾಹಿ ಎನಿಸಿದಾಗ ಅದು ಸಾಹಿತ್ಯ ಅಥವಾ ಕಾವ್ಯ ಎಂಬ ಸಾರ್ಥಕ ನಾಮಧೇಯವನ್ನು ಪಡೆಯುವುದು. ಸಾಹಿತ್ಯದ ಮೊದಮೊದಲ ರೂಪ ಪದ್ಯವಿರಲಿ, ಗದ್ಯವಿರಲಿ, ಅದು ತನ್ನ ದೇಶೀರೂಪ ಅಥವಾ ಜಾನಪದರೂಪದಿಂದಲೇ ಮೊದಲಾಯಿತು-ಎಂಬುದು ನಮ್ಮ ಕನ್ನಡಕ್ಕೂ ಸಲ್ಲುವ ಮಾತು.

ಕನ್ನಡದಲ್ಲಿ ಪ್ರಾಚೀನ ಜನಪದಸಾಹಿತ್ಯವು ನಿರ್ದಿಷ್ಟವಾಗಿ ಇಂತಹ ರೂಪದಲ್ಲೇ ಇದ್ದಿತೆಂದು ನಿಷ್ಕರ್ಷೆಗೆ ಬರಲು ಆಧಾರಗಳಿಲ್ಲ. ಗ್ರಂಥಸ್ಥ ಉಲ್ಲೇಖಗಳಿಂದ ಕನ್ನಡ ಸಾಹಿತ್ಯ ಪ್ರಾರಂಭವಾದ ಕಾಲದಲ್ಲೇ ಜನಪದಗೀತಗಳು ಪ್ರಚಲಿತವಿದ್ದವೆಂದು ನಿರ್ಣಯಿಸಬಹುದು. ಕನ್ನಡದಲ್ಲಿ ಒಂಬತ್ತನೆಯ ಶತಮಾನದಲ್ಲಿ ರಚಿತವಾದ ಕವಿರಾಜಮಾರ್ಗದಲ್ಲಿ ಕನ್ನಡಿಗರ ಸಾಹಿತ್ಯಕೌಶಲವನ್ನು ಹೇಳುತ್ತ, ಗ್ರಂಥಕರ್ತನು ಕನ್ನಡಿಗರನ್ನು 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್' ಎಂದು ಪ್ರಕಾರಾಂತರವಾಗಿ ಅಂತಪ ಓದದ ಜನರ ಜಾನಪದಗೀತಗಳನ್ನೆ ಶ್ಲಾಘಿಸಿದ್ದಾನೆನ್ನ ಬಹುದು. ಅದೇ ಗ್ರಂಥದಲ್ಲಿ 'ಪಗರಣ' ಎಂಬ ದೃಶ್ಯಕಾವ್ಯದ ಉಲ್ಲೇಖವಿದೆ. 'ಪಗರಣ' ಎಂಬ ಶಬ್ದ ಸಂಸ್ಕೃತದ 'ಪ್ರಕರಣ' ಎಂಬುದರ ಅಪಭ್ರಂಶವಿರಬಹುದು. ಆಂಗಿಕ, ವಾಚಿಕ, ಆಹಾರ್ಯಕ, ಸಾತ್ವಿಕ ಎಂಬ ಚತುರ್ವಿಧವಾದ ಅಭಿನಯಗಳಿಂದ ಪ್ರದರ್ಶಿತವಾಗುವ ದಶರೂಪಕ (ಹತ್ತು ತೆರದ ದೃಶ್ಯಕಾವ್ಯ)ಗಳಲ್ಲಿ 'ಪ್ರಕರಣ' ಎಂಬುದೊಂದು. 'ಮೃಚ್ಛಕಟಿಕ' ಇದಕ್ಕೊಂದು ಉದಾಹರಣೆ. ಕವಿರಾಜಮಾರ್ಗದಲ್ಲಿ ಉಲ್ಲಿಖಿತವಾದ ಪಗರಣವು ದಶರೂಪಕಗಳಲ್ಲಿ ಒಂದೆಂದು ಹೇಳಲಾದ ಪ್ರಕರಣವಲ್ಲ; ಅದು ಪಾಮರರನ್ನು ರಂಜಿಸುವ ಒಂದು ದೃಶ್ಯಪ್ರಭೇದ.

ಕವಿರಾಜಮಾರ್ಗಕಾರನು ಶ್ರುತದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿಕಷ್ಟ ಎಂಬ ನಾಲ್ಕು ಬಗೆಯ ಕೃತಿದೋಷಗಳನ್ನು ಹೇಳುತ್ತ, 'ಪಗರಣ'ದಲ್ಲಿ 'ಕಲ್ಪನೋಕ್ತಿಕಷ್ಟ' ಎಂಬ ದೋಷ ಮಾತ್ರ ತ್ಯಾಜ್ಯವಾಗಿದ್ದು, ಉಳಿದ ಮೂರೂ ಸಭಾಸದರಲ್ಲಿ ಹಾಸ್ಯವನ್ನುಕ್ಕಿಸಿ ನಗಿಸಲು ಸಹಾಯಕವಾಗುವುದು; ಆದುದರಿಂದ ನಿರ್ದೋಷಗಳೆಂದು ವಿವರಿಸಿದ್ದಾನೆ. ಸಂಸ್ಕೃತದ ಪ್ರಕರಣಾದಿ ದೃಶ್ಯಕಾವ್ಯಗಳಲ್ಲಿ ಶ್ರುತಿಕಷ್ಟ, ಅರ್ಥದುಷ್ಟ, ಶ್ರುತದುಷ್ಟ (ಅಶ್ಲೀಲ)-ಮುಂತಾದ ನಾಲ್ಕೂ ದೋಷಗಳಾಗಿದ್ದು ಕನ್ನಡದ ಪಗರಣದಲ್ಲಿ ಒಂದು ಮಾತ್ರ ದೋಷವೆಂದು ಲಕ್ಷಣವನ್ನು ಹೇಳಿರುವುದು ಕಂಡುಬರುತ್ತದೆ. ಇದರಿಂದ ಈ ಪಗರಣವು ಇಂದಿನ ಯಕ್ಷಗಾನ ಪ್ರಬಂಧದ

ಬಯಲಾಟಕ್ಕೆ ಸರಿಯಾಗಿ ಕಾಣುವುದು. ಅದರೊಳಗಿನ ಹಾಸ್ಯಗಾರನ ನಾಲಗೆಗೆ ನಾಟಕದ ವಿದೂಷಕನದಕ್ಕಿಂತಲೂ ಹೆಚ್ಚಿನ ಸ್ವಾತಂತ್ರ್ಯವಿದೆಯಷ್ಟೆ?[೧] ಇದೇ ಪಗರಣವೆಂಬ ದೃಶ್ಯಕಾವ್ಯ ಪ್ರಭೇದವನ್ನು ೧೩ನೆಯ ಶತಮಾನದ ಕವಿ ನಯಸೇನನು ತನ್ನ ಧರ್ಮಾಮೃತದಲ್ಲಿಯೂ ಉಲ್ಲೇಖಿಸಿರುತ್ತಾನೆ.

ಕ್ರಿ.ಶ. ೯ನೆಯ ಶತಮಾನಕ್ಕೆ ಮೊದಲೇ ಕನ್ನಡದಲ್ಲಿ ಮಾರ್ಗಕಾವ್ಯಗಳಿದ್ದಂತೆ ದೇಸಿಗಬ್ಬಗಳೂ ಇದ್ದುವೆಂದು ತಿಳಿಸಲು ಹಿಂದಿನ ಕವಿಗಳು ಏನೂ ಹಿಂಜರಿದಿಲ್ಲ-

ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ ಚತ್ತಾಣಮಂ ಬೆದಂಡೆಯುಮೆಂದೀ
ಗಡಿನ ನೆಗಳ್ತೆಯ ಕಬ್ಬದೊ
ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್[೨]

ಎರಡನೆಯ ನಾಗವರ್ಮನ ಕಾವ್ಯಾವಲೋಕದಲ್ಲಿ (ಕಾಲ : ೧೧೪೦) ಸೂತ್ರ ೨೪೩ರಲ್ಲಿ ಬೆದಂಡೆಯ ಉಲ್ಲೇಖವಿದೆ. ಉದಯಾದಿತ್ಯಾಲಂಕಾರದಲ್ಲಿ (೧೧೫೦) ಚತ್ತಾಣ ಬೆದಂಡೆಗಳೆರಡನ್ನೂ ಹೆಸರಿಸಿದೆ. ಶಬ್ದಮಣಿ ದರ್ಪಣದಲ್ಲಿ (೧೨೬೦) 'ಬೆದಂಡೆಯೆಂದು ವೈದಂಡಿಕಂ' ಎಂದು ಹೇಳಿದೆ. ಈ ಎರಡಕ್ಕೂ ಲಕ್ಷಣ ವಿವರಣೆಗಳು ಇವುಗಳಲ್ಲಿಲ್ಲ.

ಆ ದೇಸಿಗಬ್ಬಗಳು (ಈಗಡಿನ) ಕವಿರಾಜಮಾರ್ಗಕಾಲದ ನೆಗಳ್ತೆಯ ಕಬ್ಬಗಳ ಸಾಲಿನಲ್ಲಿ ಮಾತಿಗೆಲ್ಲ (ನುಡಿಗೆಲ್ಲ) ಸಲ್ಲದೆ ಇದ್ದುವೆಂದೂ ಅಂದಿಗೆ ಪೂರ್ವಿಕರೆನಿಸಿದ ಕವಿಗಳು ಅವನ್ನು ತಮ್ಮ ಕಾಲದ ಖ್ಯಾತಕಾವ್ಯಗಳೊಡನೆ ಒಡಂಬಟ್ಟಿದ್ದರೆಂದೂ ಮೇಲಿನ ಪದ್ಯದಲ್ಲಿ ಹೇಳಲಾಗಿದೆ. ಇದರಿಂದ ಕವಿರಾಜಮಾರ್ಗ ಕಾಲದಲ್ಲಿ ವಿದ್ವನ್ಮೋಹವು ಹೆಚ್ಚಾಗುತ್ತಿದ್ದು ದೇಸಿಗಬ್ಬಗಳ ಮಾತನ್ನೆತ್ತುವ ವಿದ್ವಾಂಸರು ಕಡಿಮೆಯಾಗತೊಡಗಿದ್ದರೆಂದು ಭಾಸವಾಗುವುದು. ಹೀಗಿದ್ದರೂ ದೇಸಿಗಬ್ಬಗಳು-ಜನಪದಗೀತಗಳು ಜನವಾಣಿಯ ಉಸಿರಾಗಿ ಅವರ ಭಾವನೆಯ ಹಸಿರಾಗಿ ಆ ಕಾಲದಲ್ಲಿ ಪಂಡಿತರಲ್ಲದವರಲ್ಲಿ ಉಳಿದಿದ್ದವೆಂದು ವಿದಿತವಾಗುವುದು. ಪ್ರಾಚೀನ ಕವಿಗಳು ಅವಕ್ಕೆ ಕೂಡ, ಮಾನ್ಯತೆಯನ್ನು ಕೊಟ್ಟರು. ಕವಿರಾಜಮಾರ್ಗಕಾರನೂ ಅವನ್ನು ಮಾನ್ಯಮಾಡಿದನೆಂಬುದು ಸ್ಪಷ್ಟವಾಗಿದೆ. ಮುಂದೆ ಎರಡನೆಯ ನಾಗವರ್ಮನೂ ಜನಪದಗೀತಪ್ರಕಾರವನ್ನು ಹೇಯವಾಗಿ ನೋಡದೆ, ತನ್ನ ಗ್ರಂಥದಲ್ಲಿ ಪದ, ಮೆಲ್ವಾಡು, ಬೆದಂಡೆ-ಮುಂತಾದ ತನ್ನ ಕಾಲದ ದೇಸಿಗಬ್ಬಗಳ ಉಲ್ಲೇಖವನ್ನು ಮಾಡಿರುವುದು ಕಂಡುಬರುತ್ತದೆ. ದೇಸಿಗಬ್ಬಗಳಾದ ಈ ಬೆದಂಡೆ ಚತ್ತಾಣಗಳ ಲಕ್ಷ್ಯ ಲಕ್ಷಣಗಳು ಜಾನಪದ ಗೀತಪ್ರಭೇದಾತ್ಮಕ ವಾಗಿಯೇ ಇವೆ. ಕವಿರಾಜಮಾರ್ಗೋಕ್ತವಾಗಿ, ಬೆದಂಡೆಯ ಲಕ್ಷಣವಿದು-

ಕಂದಮುಮಮಳಿನ ವೃತ್ತಮು
ಮೊಂದೊಂದೆಡೆಗೊಂಡು, ಜಾತಿ ಜಾಣೆಸೆಯೆ ಬೆಡಂ
ಗೊಂದಿವರೊಳಮರೆ ಪೇಳಲ್
ಸುಂದರ ರೂಪಿಂ ಬೆದಂಡೆಗಬ್ಬಮದಕ್ಕುಂ (ಕ.ರಾ. ೧-೩೪)

೧. ದಿ. ಮುಳಿಯ ತಿಮ್ಮಪ್ಪಯ್ಯ -ಪಾರ್ತಿಸುಬ್ಬ, ಪುಟ : ೩೦
೨. ಕವಿರಾಜಮಾರ್ಗ ೧-೩೨

ಅಂದರೆ - ಒಂದೊಂದು ಕಂದ ಮತ್ತು ವೃತ್ತ ಸೇರಿಕೊಂಡಿದ್ದು ಉಳಿದುವೆಲ್ಲವೂ ಜಾತಿ (ಮಾತ್ರಾಗಣ ನಿಯತವಾದ) ಜಾತ್ಯ್ಯ ಯ ಪದ್ಯಗಳಾಗಿರುವ ರಚನೆ 'ಬೆದಂಡೆ' ಎಂಬ ದೇಶೀಕಾವ್ಯ ಪ್ರಭೇದವಾಗಿದೆ. ಇದು ಈಗಿನ ಯಕ್ಷಗಾನ ಪ್ರಸಂಗದ ಸಮಾನವಾಗಿ ಕಂಡುಬರುತ್ತದೆ. ಇದನ್ನೇ ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ 'ಮೆಲ್ವಾಡು' ಎಂದು ಹೆಸರಿಸಿದುದಾಗಿ ಕಂಡುಬರುತ್ತದೆ. ಅದರ ಲಕ್ಷಣ ಹೀಗಿದೆ -

> **ಸಂದಿಸಿರೆ ಕಂದಮುಂ ಪೆರ**
> **ತೊಂದರಿಕೆಯ ವೃತ್ತಜಾತಿಯುಂ, ಪದಮವು ತ**
> **ಳ್ತೊಂದಿರೆ ಪನ್ನೆರಡು ವರಂ**
> **ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್ (ಸೂತ್ರ : ೨೪೩, ಪದ್ಯ : ೯೫೨)**

ಅನೇಕ ವಿದ್ವಾಂಸರು ಈ ಪದ್ಯಕ್ಕೆ ಅರ್ಥಮಾಡಿರುವುದು ಸರಿಯಿಲ್ಲ. ಅವರೆಂದಿರುವ ಪ್ರಕಾರ "ಕಂದವೂ ಬೇರೊಂದು ಪ್ರಸಿದ್ಧವೃತ್ತವೂ ಸೇರಿಕೊಂಡಿದ್ದುದು ಪದ. ಅಂತಹ ಪದಗಳು ಹನ್ನೆರಡರ ವರೆಗೆ ಇದ್ದರೆ ಅದು ಮೆಲ್ವಾಡೆನಿಸುವುದು" ಈ ಅರ್ಥದಲ್ಲಿ ಅನ್ವಯದೋಷವಿದೆ. ಸರಿಯಾದ ಅರ್ಥವಿದು- ಕಂದವೂ ಬೇರೊಂದಾಗಿ ಪ್ರಸಿದ್ಧವಾದ ವೃತ್ತವೂ (ಶಾರ್ದೂಲವಿಕ್ರೀಡಿತ ವೃತ್ತವೂ) ಸೇರಿದ್ದು, ಪದಗಳು (ಮಾತ್ರಾಗಣ ಅಂಶಗಣಗಳಿಂದ ಕೂಡಿ ತಾಳಗತಿಯುಳ್ಳವು) ಹನ್ನೆರಡರ ವರೆಗೆ ಇದ್ದರೆ, (ರಾಗ-ನಾಟಿ, ಝಂಪೆತಾಳ; ಕೇತಾರಗಾಳ, ಅಷ್ಟತಾಳ; ಸೌರಾಷ್ಟ್ರ ತ್ರಿವುಡೆತಾಳ; ಸಾಂಗತ್ಯ ರೂಪಕ ತಾಳ; ಕಾಪಿ-ಅಷ್ಟತಾಳ; ಮಾರವಿ-ಏಕತಾಳ-ಮುಂತಾದ ರಾಗತಾಳ ಸೂಚಿಗಳುಳ್ಳ ಪದ್ಯಗಳು) ಅದು 'ಮೆಲ್ವಾಡು' ಎಂಬ ಪ್ರಭೇದದ ರಚನೆ ಎಂದಿರುವುದು ಯಕ್ಷಗಾನದ ಪದಗಳ ರಚನೆಯ ಲಕ್ಷಣವಾಗಿರುತ್ತದೆ. ಇದರಿಂದ ಬೆದಂಡೆ, ಮೆಲ್ವಾಡುಗಳೆಂಬ ಎರಡೂ ಒಂದೇ ಆಗಿರುವುದು ವಿದಿತವಾಗುವುದು. ಇನ್ನೀಗ ಚತ್ತಾಣದ ಲಕ್ಷಣವನ್ನು ನೋಡೋಣ-

> **ಕಂದಗಳ್ ಪಲವಾಗಿರೆ**
> **ಸುಂದರವೃತ್ತಂಗಳಕ್ಕರಂ ಚೌಪದಿ ಮ**
> **ತ್ತಂ ದಲ್ ಗೀತಿಕೆ ತಿವದಿಗ**
> **ಳಂದಂಬೆತ್ತಿಸೆಯೆ ಪೇಳ್ವೊಡದು ಚತ್ತಾಣಂ** (ಕ.ರಾ. ೧-೩೫)

ಅಂದರೆ - ಹಲವು ಕಂದಗಳು ಮತ್ತು ವೃತ್ತಗಳಿದ್ದು ಅಕ್ಕರ, ಚೌಪದಿ, ಗೀತಿಕೆ, ತ್ರಿಪದಿ-ಇಂತಹ ಪ್ರಕಾರದ ಆರು ಬಗೆಯ (ಷಟ್) ಸ್ಥಾನವಾಗಿರುವ ರಚನೆಯನ್ನು ಚತ್ತಾಣವೆಂದು ಹೇಳಲಾಗಿದೆ. ಇಂದಿಗಿದು ಯಾವುದೆಂಬುದು ನಿರ್ಧಾರವಾಗಿಲ್ಲ. ಮಹಿಳಾ ಗೇಯಸಾಹಿತ್ಯವಾಗಿರುವ 'ಶೋಭಾನೆ ಹಾಡುಗಳು' ಆಗಿರಲು ಸಾಧ್ಯವೆಂದು ನಾನು 'ಹವ್ಯಕರ ಶೋಭಾನೆಗಳು' ಎಂಬ ನನ್ನ ಗ್ರಂಥದಲ್ಲಿ (ಇದು ಅಕಾಡೆಮಿ ಬಹುಮಾನವನ್ನು ೧೯೮೮ರಲ್ಲಿ ಪಡೆದಿರುವ ಗ್ರಂಥ) ಪ್ರತಿಪಾದನೆ ಮಾಡಿರುತ್ತೇನೆ. 'ಚತ್ತಾಣ' ಎಂಬುದರ ಪೂರ್ವರೂಪವು 'ಚಿತ್ರಾಯತನ' ಎಂದರೆ ಚಿತ್ರಾ (ತ್ರಿಪದಿ) ಉಳ್ಳದು -'ಚಿತ್ತಾಯನ' ಎಂದಿಟ್ಟುಕೊಂಡರೆ ಚಿತ್ತ= ಅಯನ-ಎಂಬಲ್ಲಿ 'ಅಯ' ಎಂಬುದಕ್ಕೆ ಶುಭಕರವಾದುದು, ಸೌಭಾಗ್ಯ-ಎಂಬ ಅರ್ಥಗಳಿವೆ. 'ಆಯಃ ಶೋಭಾವಹೋ ವಿಧಿಃ' ಮತ್ತು 'ಏತಿ ಸುಕೃತಿನಮಯಃ-' 'ಇಣ್‌ಗತೌ' ಎಂಬ

ವ್ಯುತ್ಪತ್ತಿಯಂತೆ ಪುಣ್ಯವಂತನನ್ನು ಸೇರುವಂಥದು 'ಅಯ'. 'ಅಯನ' ಎಂಬಲ್ಲಿಯೂ ಅದೇ ಅರ್ಥವಿದೆ. ಅದು ಮಂಗಲಗೀತವನ್ನೇ ಲಕ್ಷಿಸಿದಂತಿದೆ. ಇದರಿಂದ ಶೋಭಾನೆ ಹಾಡಾಗಬಹುದು. ಶೋಭಾನೆಯ ಹುಟ್ಟು 'ಭಾಗ್ಯವುಳ್ಳವರ ಮನೆಯಲ್ಲಿ ಶುಭಕಾರ್ಯವಾಗುವಲ್ಲಿ' ಎಂದು ಅದೊಂದು ಜಾನಪದ ತ್ರಿಪದಿಯಲ್ಲಿ ಹೇಳಿದೆ -

ಸೋಬಾನ ಶುಭಕಾರ್ಯ ಯಾವಲ್ಲಿ ಹುಟ್ಯಾವ
ಬಾಗೆಯುಳ್ಳವರ ಮನಿಯಾಗ - ಶುಭಕಾರ್ಯ
ಆಗ ಹುಟ್ಯಾವ - ಬೆಳೆದಾವ

(ಡಾ. ಗದ್ದಗಿಮಠ : ಲೋಕಗೀತೆಗಳು, ಪುಟ : ೯)

ಶುಭಸಮಾರಂಭಗಳಲ್ಲಿ ಸುವಾಸಿನಿಯರು ಹಾಡುವ 'ಮಂಗಲಗೀತೆ'ಗಳ ಉಲ್ಲೇಖವು ಕನ್ನಡದ ಹಲವಾರು ಪ್ರಾಚೀನ ಕಾವ್ಯಗಳಲ್ಲಿ ಕಾಣಿಸುವುದು. ಹತ್ತನೆಯ ಶತಮಾನದ ಆದಿಕವಿ ಪಂಪನ ಆದಿಪುರಾಣದಲ್ಲಿ ಜಿನಶಿಶುವಿನ ಜನ್ಮಾಭಿಷೇಕೋತ್ಸವವನ್ನು ದೇವೇಂದ್ರನು ಮಂದರಾಚಲದಲ್ಲಿ ನೆರವೇರಿಸಿದನೆಂಬಲ್ಲಿ ಕಂದಪದ್ಯ ಹೀಗಿದೆ -

ಸುರಕರ ನಿರ್ಭರ ಹತಿಯಿಂ
ಸುರದುಂದುಭಿನಿನದಮಮರ ವನಿತಾ ವದನಾಂ
ಬುರುಹದಿನೊರ್ಮೆಯೆ ಮಂಗಲ
ಪರಂಪರಾಗೀತನಿನದಮೊದವಿತ್ತೆತ್ತಂ (ಆದಿಪುರಾಣ : ೭-೮)

ಹದಿನಾರನೆಯ ಶತಮಾನದ ನರಹರಿ ಕವಿ ಸೀತಾವಿವಾಹವರ್ಣನೆಯಲ್ಲಿ 'ತರುಣಿಯರ ಶುಭಗೀತ'ವನ್ನು ವರ್ಣಿಸಿದ್ದಾನೆ. ೧೫೩೦ರಲ್ಲಿದ್ದ ವೀರಭದ್ರನೃಪಾಲನು ವೀರಭದ್ರವಿಜಯ ಕಾವ್ಯದಲ್ಲಿ (ಆ. ೯-೭೫) 'ಶೋಭನಂಗಳಂ ಪಾಡುತ್ತುಂ.... ಮಡದಿಯರ್' ಎಂದು ಉಲ್ಲೇಖಿಸಿದ್ದಾನೆ. ರತ್ನಾಕರ ವರ್ಣಿ (೧೫೫೦), ತಿಮ್ಮಾಮಾತ್ಯ (೧೭೫೦) ಇವರ ಕಾವ್ಯಗಳಲ್ಲಿಯೂ ಶೋಭನಗೀತ ಹಾಡಿದ ವಿವರಗಳಿವೆ.

ಕನ್ನಡದ ಮಹಾಕವಿಗಳು ಕುಕವಿಗಳನ್ನು ಕಾಳ್ಕಬ್ಬಿಗರೆಂದು, ಬೆಳ್ಳಕ್ಕರಿಗರೆಂದು ನಿಂದೆ ಮಾಡಿರುವುದುಂಟು. ಈ ತುಚ್ಛೀಕಾರವು ಜನಪದಗೀತಗಳಿಗಲ್ಲ; ಜನಪದಕವಿಗಳಿಗೂ ಅಲ್ಲ; ಯಾವನೂ ವರಬಲದಿಂದಲ್ಲದೆ, ಒಮ್ಮೆಗೇ ಮಹಾಕವಿಯಾಗಲಾರನು. ಮೊದಮೊದಲು ಜಾನಪದಗೀತ ರಚನೆಮಾಡಿ, ಭಾವಕವಿತ್ವ ಬರೆದು, ಸರಳ ಪದ್ಯಗಳನ್ನು ಮಾಡಿ - ಹೀಗೆ ಅಭ್ಯಾಸ ಮಾಡಿಯೇ ಪಂಡಿತಕವಿಯಾಗಬೇಕಷ್ಟೆ? ನಯಸೇನ, ನೇಮಿಚಂದ್ರ, ಮಧುರ-ಮೊದಲಾದವರು ಮಾಡಿರುವ ಕವಿನಿಂದೆ ಜಾನಪದಕವಿಗಳನ್ನು ಕುರಿತುದಲ್ಲ; ಹಾಗೆ ತಿಳಿಯುವುದೂ ಸರಿಯಲ್ಲ. ನೇಮಿಚಂದ್ರ, ಮಧುರ ಮುಂತಾದ ಕವಿಗಳು ತಮ್ಮ ಅದ್ವಕೃತಿಗಳಲ್ಲಿ "ಒನಕೆವಾಡು (ತ್ರಿಪದಿಯಲ್ಲಿ) ರಚನೆಮಾಡಿದ್ದಾರೆ. ತಮಗೆ ಜನಪದಗೀತಗಳಲ್ಲಿರತಕ್ಕ ಆದರವನ್ನೇ ವ್ಯಕ್ತಪಡಿಸಿದ್ದಾರೆನ್ನಲು ಅಡ್ಡಿಯಿಲ್ಲ." ☐

೨೪

ಮದುವೆಯ ಹಾಡುಗಳು

ಸಂಗೀತ ಸಾಹಿತ್ಯಗಳಲ್ಲಿ ಮಾರ್ಗ, ದೇಶಿ ಎಂಬೆರಡು ವಿಭಾಗ ಹಿಂದಿನಿಂದಲೇ ಪ್ರಚಲಿತವಾಗಿ ಬಂದಿದೆ. ಕಲಾವಿದರ ಸಾಧನೆ ಸಿದ್ಧಿಗಳಿಂದ ಪರಿಮಾರ್ಜನೆ ಪರಿಶುದ್ಧಿಗಳ ಉನ್ನತಿಯ ಹಂತವನ್ನೇರಿ ವಿದ್ವದ್ರಂಜಕವಾದುದು 'ಮಾರ್ಗ' ಎನಿಸಿತು. ಬೇರೆ ಬೇರೆ ಪ್ರದೇಶದ ಜನಸಾಮಾನ್ಯರ ಅಭಿರುಚಿಗೆ ಅನುಗುಣವಾಗಿ ಸಹಜವೂ ಸರಳವೂ ಅಪ್ರೌಢವೂ ಆದುದು 'ದೇಶಿ' ಎನಿಸಿತು.

ದೇಶೇ ದೇಶೇ ಜನಾನಾಂ ಯದ್ರುಚ್ಯಾ ಹೃದಯರಂಜಕಂ
ಗೀತಂ ಚ ವಾದನಂ ನೃತ್ಯಂ
ತದ್ದೇಶೀತ್ಯಭಿಧೀಯತೇ (ಸಂಗೀತ ರತ್ನಾಕರ)

ಎಂದು ದೇಶಿಯ ಲಕ್ಷಣವನ್ನು ನಿರೂಪಣೆ ಮಾಡಲಾಗಿದೆ. ನಮ್ಮ ಕರ್ನಾಟಕದ ಜಾನಪದ ಸಾಹಿತ್ಯ ಸಂಗೀತಗಳು 'ದೇಶಿ' ಎಂಬೀ ವರ್ಗಕ್ಕೆ ಸೇರುತ್ತವೆ. ಈ ದೇಶಿಯಲ್ಲಿಯೂ ವಿವರಣೆಯ ಸೌಕರ್ಯಕ್ಕಾಗಿ ಹಾಗೂ ವೈಶಿಷ್ಟ್ಯದ ಅರಿವಿಗಾಗಿ ಎರಡು ವಿಭಾಗ ಮಾಡಿಕೊಳ್ಳುವುದು ಸೂಕ್ತ. ಅವುಗಳಲ್ಲಿ ಒಂದು ಶುದ್ಧ ಜಾನಪದ ಇನ್ನೊಂದು ಪೂರ್ಣವಾಗಿ ಜಾನಪದವೂ ಅಲ್ಲ, ಮಾರ್ಗವೂ ಅಲ್ಲ ಎಂಬಂಥದು. ಈ ವರ್ಗಕ್ಕೆ ಕರ್ನಾಟಕದ - ಅದರಲ್ಲಿಯೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಯಕ್ಷಗಾನ ಸಾಹಿತ್ಯ ಹಾಗೂ ಹವ್ಯಕರಲ್ಲಿ - ಪ್ರಚಲಿತವಿರುವ ಶೋಭನಗೀತ ಸಾಹಿತ್ಯ - ಇವೆರಡೂ ಮತ್ತು ಇವುಗಳ ಗಾನ ಪದ್ಧತಿಗಳೂ ಸೇರುತ್ತವೆ. ಶುದ್ಧ ಜಾನಪದವೆನಿಸುವ ಹಾಡುಗಳ ಮತ್ತು ಇನ್ನಿತರ ರೂಪದ ಸಾಹಿತ್ಯದ ವರ್ಗಕ್ಕೆ ಹವ್ಯಕರಲ್ಲಿ ಪ್ರಚಲಿತವಿರುವ ಶೋಭನಗೀತ ಸಾಹಿತ್ಯ - ಮತ್ತು ಇವುಗಳ ಗಾನ ಪದ್ಧತಿಗಳೂ ಸೇರುತ್ತವೆ. ಶುದ್ಧ ಜಾನಪದನೆನಿಸುವ ಹಾಡುಗಳ ಮತ್ತು ಇನ್ನಿತರ ರೂಪದ ಸಾಹಿತ್ಯದ ಕುರಿತು ಈಗೀಗ ಸಂಗ್ರಹಣೆ, ಸಂಶೋಧನೆ, ಪ್ರಕಟನೆಗಳು ಆಗುತ್ತಿವೆ. ಯಕ್ಷಗಾನವನ್ನು ಕುರಿತೂ ಸ್ವಲ್ಪಮಟ್ಟಿಗೆ ಆಗುತ್ತಿದೆ. ಯಕ್ಷಗಾನ ಕಲೆ ಇಂದಿಗೂ ಜನಪ್ರಿಯವಾಗಿ ಉಳಿದುಕೊಂಡಿರುವುದರಿಂದ ಅದಕ್ಕೆ ಸಂಬಂಧಿಸಿದ ಸಾಹಿತ್ಯ ಜನರ ಕಣ್ಣ ಮುಂದೆ ಇದೆ. ಆದರೆ ಶೋಭಾನೆಗಳ ಸಾಹಿತ್ಯದ ಪ್ರಚಾರ, ಪ್ರಯೋಗ ಬಹುಮಟ್ಟಿಗೆ ನಿಂತೇಹೋಗಿರುವುದು ಶೋಚನೀಯ.

ಯಕ್ಷಗಾನ ಎಂಬುದು ಗಂಡುಸರ ಕಲೆ. ಅದನ್ನು ಹಾಡುವವರು, ತಾಳಮದ್ದಳೆಯ ರೂಪದಲ್ಲೋ ಬಯಲಾಟದ ರೂಪದಲ್ಲೋ ಹಾಡಿ, ಮಾತಾಡಿ, ಪ್ರದರ್ಶಿಸುವವರು ಗಂಡುಸರೇ. ಯಕ್ಷಗಾನದ ಪದ್ಯಗಳಿಗೆ 'ಪದಗಳು' ಎನ್ನುತ್ತಾರೆ. 'ಹಾಡುಗಳು' ಎನ್ನುವುದಿಲ್ಲ. ಶೋಭಾನೆಗಳೆಲ್ಲವೂ ಹಾಡುಗಳು. ಅವನ್ನು ಹಾಡತಕ್ಕವರು ಹೆಂಗುಸರೇ. ಯಕ್ಷಗಾನಕ್ಕೆ ರಾಗ, ತಾಳ, ವಾದನ ಸಂಯೋಜನೆ ಇರುತ್ತದೆ. ಶೋಭಾನೆಗಳಿಗೆ ಇವಿಲ್ಲ. ಶೋಭಾನೆಗಳನ್ನು ಪೂಜೆ, ಹೋಮ, ಮದುವೆ, ಉಪನಯನ - ಮುಂತಾದ ಸಾಮಾಜಿಕ ಸಮಾರಂಭಗಳಲ್ಲಿ ಹೆಂಗುಸರು ಹಾಡುತ್ತಾರೆ. ಈ ಹಾಡುಗಳನ್ನು ಶೋಭನ ಗೀತ, ಶುಭಗೀತ, ಶೋಭಾನೆ, ಶೋಭಾನೆ ಹಾಡು, ಮಂಗಲಗೀತ ಎಂಬ ಹೆಸರುಗಳಿಂದ ಕರೆದಿದ್ದಾರೆ. ಸಾಮಾಜಿಕ ಸಮಾರಂಭಗಳಲ್ಲಿ ಶೋಭಾನೆಗಳನ್ನು ಹಾಡಬೇಕೆಂದು ಧರ್ಮಶಾಸ್ತ್ರಗಳೂ ಕಟ್ಟುಮಾಡಿವೆ. ನಮ್ಮ ಕನ್ನಡ ಕಾವ್ಯಗಳಲ್ಲಿ ಕೂಡ, ಶೋಭಾನೆಗಳನ್ನು ಹಾಡಿದ ಉಲ್ಲೇಖಗಳು ಎಷ್ಟೋ ಕಡೆ ಬಂದಿವೆ. ಆದರೆ ಈ ಹಾಡುಗಳ ಛಂದೋ ರೂಪಕ್ಕೆ ಪ್ರಾಚೀನ ಉದಾಹರಣೆ ಸಿಗುವುದಿಲ್ಲ. ಈ ದೃಷ್ಟಿಯಿಂದ ಇದು ಜಾನಪದವೇ ಸರಿ.

ಧರ್ಮಶಾಸ್ತ್ರಕಾರರಲ್ಲೊಬ್ಬನಾದ ನೃಸಿಂಹಸೂರಿ ಎಂಬಾತನು ತನ್ನ ಪ್ರಯೋಗ ಪಾರಿಜಾತ ಎಂಬ ಗ್ರಂಥದಲ್ಲಿ ಆಶ್ವಲಾಯನ ಪ್ರಯೋಗದ ವಿವಾಹ ವಿಧಿಯನ್ನು ತಿಳಿಸುತ್ತ ವಾಗ್ದಾನ ಕನ್ಯಾವರಣ ವಿಧಿಯನ್ನು ವಿವರಿಸುವಲ್ಲಿ ಹೀಗೆಂದಿದ್ದಾನೆ - ವಿವಾಹ ನಿರ್ಣಯ ಕಾರ್ಯದ ಪ್ರಯುಕ್ತ, ವರನೂ ವರನ ತಂದೆ ಹಾಗೂ ಇತರ ನಾಲ್ಕು ಮಂದಿ ವರನ ಕಡೆಯವರು ಮತ್ತೈದೆಯರನ್ನು ಕೂಡಿಕೊಂಡು, ಮಂಗಲಗೀತ ವಾದ್ಯಗಳೊಂದಿಗೆ ಕನ್ಯಾಪಿತೃಗೃಹಕ್ಕೆ ಹೋಗಬೇಕು. ಅಲ್ಲಿ ದಾತೃಜ್ಞಾತಿ ಬಾಂಧವರೊಂದಿಗೆ ಮಂಗಲಕರ ಪೀಠದಲ್ಲಿ ಪೂರ್ವ ಮುಖವಾಗಿ ಕುಳಿತ ಕನ್ಯೆಯ ಕೈಗಳಲ್ಲಿ ಫಲವನ್ನಿಟ್ಟು ವಿವಾಹ ಸಂಕಲ್ಪವನ್ನು ಹೇಳಬೇಕು. ಈ 'ವಾಗ್ದಾನ ವಿಧಿ' ಕೂಡ ಶೋಭಾನೆಗಳೊಂದಿಗೆ ನಡೆಯಬೇಕೆಂಬ ಸೂಚನೆ ಶಾಸ್ತ್ರಗಳಲ್ಲಿ ಕಾಣುತ್ತದೆ. ಕನ್ನಡ ಸಾಹಿತ್ಯದಲ್ಲಿಯೂ ಕೆಲವು ಕಾವ್ಯ ಸಾಹಿತ್ಯದಲ್ಲಿಯೂ ಶೋಭನ ಗೀತಗಳ ಉಲ್ಲೇಖಗಳನ್ನು ಕಾಣಬಹುದು. ಆದಿಕವಿ ಪಂಪನು ಜಿನಶಿಶುವಿನ ಜನ್ಮಾಭಿಷೇಕೋತ್ಸವದಲ್ಲಿ ದೇವಾಂಗನೆಯರು 'ಮಂಗಲ ಗೀತ' ಹಾಡಿದುದನ್ನು ಪ್ರಸ್ತಾವಿಸಿದ್ದಾನೆ.

ಸುರಕರ ನಿರ್ಭರ ಹತಿಯಿಂ
ಸುರ ದುಂದುಭಿನಿನದಮಮರ ವನಿತಾ ವದನಾಂ
ಬುರುಹದಿ ನೊರ್ಮೆಯೆ ಮಂಗಲ
ಪರಂಪರಾ ಗೀತನಿನದಮೊದವಿತ್ತೆತ್ತಂ

(ಆದಿಪುರಾಣ ೭- ೭೮)

ಕ್ರಿ.ಶ. ೧೫೩೦ ರಲ್ಲಿದ್ದ ವೀರಭದ್ರ ನೃಪಾಲನೆಂಬ ಕವಿ ಬರೆದ 'ವೀರಭದ್ರ ವಿಜಯ' ದಲ್ಲಿ 'ಶೋಭನ'ದ ಉಲ್ಲೇಖವಿದೆ.

ನಡೆಮಡಿಗಳ ಪಾಸುತ್ತುಂ
ಸಡಗರದಿಂ ಶೋಭನಂಗಳಂ ಪಾಡುತ್ತುಂ

ಬಿಡದಾರತಿಗಳನೆತ್ತುತೆ
ಮಡದಿಯರಿದಿರ್ಗೊಂಡರಲ್ಲಿ ವಿಶ್ವೇಶ್ವರನಂ

ತೊರವೆ ರಾಮಾಯಣದಲ್ಲಿ ಶುಭಗೀತದ ಮಾತಿದೆ -

ತರುಣಿಯರ ಶುಭಗೀತ ಧರಣೀ
ಸುರರ ಸೂಕ್ತ ಸುಮಂತ್ರ ಸಂಪ
ತ್ಕರಿಕರಾಯುತ ರವವೆಸೆದುದುದ್ವಾಹಗೇಹದಲಿ

(ಬಾಲಕಾಂಡ, ಸಂಧಿ ೧೬ ಪದ್ಯ ೪೦)

ಆನಂದ ರಾಮಾಯಣದಲ್ಲಿ ಶ್ರೀ ರಾಮನು ಸೀತೆಯನ್ನು ವರಿಸಿ ಅಯೋಧ್ಯೆಗೆ ಬಂದಾಗ ಹೆಂಗುಸರು ಹಾಡಿದ ಶೋಭಾನೆಗಳ ನಿನಾದವನ್ನು ಹೇಳಿದೆ -

ಮೊಳಗೆ ಜಯತೂರ್ಯಗಳು ಶೋಭನ
ಗಳ ನಿನಾದದೊಳಬಲೆಯರು ಪೊಂ
ದಳಿಗೆಯಾರತಿಗಳ ನಿವಾಳಿಸಿ ಮೌನಿ ಸಂಘಗಳು
ನಲಿದು ಮಂತ್ರಾಕ್ಷತೆಗಳಿಡಲ
ಗ್ಗಳಿಕೆಯಿಂ ಶುಭ ಲಗ್ನದಲಿ ನಿಜ
ನಿಳಯಕೈತಂದರು ಮಹಾವಿಭವಾನುರಾಗದಲಿ॥

ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯವು ಶೋಭಾನೆ ಹಾಡನ್ನು ಉಲ್ಲೇಖಿಸಿದೆ-

ನಾಭಿಯಿಂದೇಳಿಸಿ ಯೆದೆಯೊಳೋಲಾಡಿಸಿ
ಶೋಭೆಯ ಮಾಡಿ ಕಂಠದೊಳು
ಆ ಭೂಪ ಮೆಚ್ಚಿ ರಾಗಿಸಿದರು ಶ್ರೀದೇವಿ
ಶೋಭನವನು ಪಾಡುವಂತೆ

(ಭೋಗ ವಿಜಯ, ಉಪ್ಪರಿಗೆ ಸಂಧಿ, ಪದ್ಯ ೬೪)

ಶೋಭಾನೆ ಹಾಡುಗಳು ಕರ್ನಾಟಕದಲ್ಲಿ ಹಿಂದೂ ಜಾತಿಯ ಎಲ್ಲಾ ವರ್ಗದಲ್ಲಿಯೂ ಪ್ರಚಲಿತವಾಗಿ ಬಂದಿವೆ. ಜಾತಿಗತವಾಗಿ ಬಂದ ಈ ಹಾಡುಗಳ ಮೂಲಕ ಆಯಾ ಜಾತಿಯ ಸಮಾಜದ ಕಟ್ಟುಕಟ್ಟಳೆಗಳನ್ನೂ ಶೋಭನ ಸಾಹಿತ್ಯ ಮೌಲ್ಯವನ್ನೂ ಗೇಯತೆಗೆ ಅವುಗಳಿಂದಾದ ಕೊಡುಗೆಯನ್ನೂ ಅವುಗಳ ಛಂದೋವೈಶಿಷ್ಟ್ಯವನ್ನೂ ಗುರುತಿಸಿಕೊಳ್ಳಬಹುದು. ಆ ಕುರಿತ ವಿವರಣೆ ಆಸಕ್ತರಿಗೆ ವಿಶೇಷ ಅಧ್ಯಯನದ ವಿಷಯವಾಗುತ್ತದೆ. ಇದೀಗ ಹವ್ಯಕ ಬ್ರಾಹ್ಮಣರಲ್ಲಿ ಪ್ರಚಲಿತವಿರುವ ಮದುವೆಯ ಶೋಭಾನೆಗಳನ್ನು ಮಾತ್ರ ಯಥಾಸಾಧ್ಯ ಅವಲೋಕಿಸಲಾಗುವುದು. ಹವ್ಯಕರು ಅಚ್ಚಗನ್ನಡಿಗರಾಗಿದ್ದು ಶ್ರೀ ಶಂಕರಾಚಾರ್ಯ ಗುರು ಪರಂಪರೆಯ ಶ್ರೀ ರಾಮ ಚಂದ್ರಾಪುರ ಗುರುಮಠಕ್ಕೆ ಒಳಗಾದವರು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಪುತ್ತೂರು ತಾಲೂಕುಗಳು, ಈಗಿನ ಕೇರಳದ ಕಾಸರಗೋಡು ತಾಲೂಕು, ಶಿವಮೊಗ್ಗ ಜಿಲ್ಲೆಯ ಮತ್ತು ಉತ್ತರ ಕನ್ನಡ ಜಿಲ್ಲೆಯ ಭಾಗಗಳು, ಹಾಗೂ ಕೊಡಗು ಈ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಹಿಂದಿನ ಕಾಲದಲ್ಲಿ ಹವ್ಯಕರ ಮದುವೆ, ಉಪನಯನ ಮುಂತಾದ ಸಾಮಾಜಿಕ ಸಮಾರಂಭಗಳು ವಿಧಿಯುಕ್ತವಾಗಿಯೇ ನಡೆಯುತ್ತಿದ್ದವು. ಅವಕ್ಕೆ ಸಿದ್ಧತೆ ಹಲವು ತಿಂಗಳಿಂದಲೇ

ಪ್ರಾರಂಭವಾಗುತ್ತಿತ್ತು. ಈ ಸಮಾರಂಭಗಳು ವೇದೋಕ್ತವಾಗಿ ನಡೆಯುವಾಗಲೇ ಮುತ್ತೈದೆ ಹೆಂಗುಸರು ಶೋಭಾನೆಗಳನ್ನು ಹಾಡುತ್ತಿದ್ದರು. ಮದುವೆಯ ದಿಬ್ಬಣ ಹೋಗುವುದು, ದಿಬ್ಬಣ ಎದುರುಗೊಳ್ಳುವುದು, ಉಪಚರಿಸುವುದು. ಮದುಮಗಳನ್ನು ಸಿಂಗರಿಸುವುದು, ಧಾರೆ ಎರೆಯುವುದು, ದಕ್ಷಿಣೆ ಕೊಡುವುದು, ಮಂತ್ರಾಕ್ಷತೆ ಹಾಕುವುದು, ಸಪ್ತಪದಿ ಕಾರ್ಯಕ್ರಮ, ಭೂರಿ ಭೋಜನ, ಚತುರ್ಥಿ ಸಮಾರಂಭ, ವರನ ಗೃಹ ಪ್ರವೇಶ (ಸಟ್ಟುಮುಡಿ ಕಟ್ಟಳೆಗಳು) ನಡೆಯುವಾಗಲೆಲ್ಲಾ ಶೋಭಾನೆಗಳನ್ನು ಹೇಳುವುದು, ಪದ್ಧತಿ. ಕೆಲವರಿಗೆ ಅದೊಂದು ಗೌರವ. ವಧೂವರರ ಅಕ್ಕಂದಿರು ಈ ಶೋಭಾನೆ ಹಾಡುವ ಗೌರವಕ್ಕೆ ಅರ್ಹರು.

ಮದುವೆಗಳಲ್ಲಿ ಮಾತ್ರವಲ್ಲ. ಪೂಜೆ, ಹೋಮ, ವ್ರತ, ಸಂತರ್ಪಣೆ, ಚವಲ, ಉಪನಯನ, ದಿಂಡು, ಕೋಡಿ (ಸೀಮಂತ), ಪುತ್ರೋತ್ಸವ - ಇವು ನಡೆಯುವಾಗಲೂ ಹೆಂಗುಸರ ಶೋಭಾನೆಗಳ ಇನಿದನಿ ಕೇಳಿಬರುತ್ತಿದ್ದಿತು.

ಇಂತಹ ಶೋಭಾನೆಗಳನ್ನು ಹಿಂದಿನ ಅಜ್ಞಾತ ಕವಿಗಳು ರಚಿಸಿದ್ದು, ಅವು ಅಜ್ಜಿಯಿಂದ, ತಾಯಿಯಿಂದ, ಅಕ್ಕಂದಿರಿಂದ,ಅತ್ತೆಯರಿಂದ, ಹಾಗೂ ಇತರ ಸಂಬಂಧಿಕ ಸ್ತ್ರೀಯರಿಂದ ಕರ್ಣಾಕರ್ಣಿಕೆಯಾಗಿ ಕಿರಿಯ ಹೆಂಗುಸರಿಗೆ ಬರುತ್ತಿದ್ದವು. ಇವನ್ನು ರಚಿಸುವ ಕವಿ - ಕವಯಿತ್ರಿಯರೂ ಅಂತಹ ಕವಿಗಳಿಂದ ರಚನೆ ಮಾಡಿಸಿ, ಬರೆದು ಓದಿ ಕಂಠಪಾಠ ಮಾಡಿ, ಸಂದರ್ಭದಲ್ಲಿ ಹಾಡುವುದೆಂದರೆ ಅದನ್ನು ಹಾಡುವ ಸುವಾಸಿನಿಯರಿಗೆ ಉತ್ಸಾಹವೆನಿಸುತ್ತಿತ್ತು ಮದುವೆಯ ಸಮಾರಂಭದಲ್ಲಿ ಅಂತಹ ಶೋಭಾನೆಗಳನ್ನು ಹಾಡುವಾಗ ಕೇಳಿದ ಸ್ತ್ರೀಯರೂ ಪುರುಷರೂ ಆನಂದ ಪಡುತ್ತಿದ್ದರು. ಆದರೆ ಈಗ ಈ ಹಾಡುಗಳೂ ಇವನ್ನು ಹಾಡುವ ರೂಢಿಯೂ ಇಲ್ಲವೆನಿಸುವಷ್ಟು ಅಧೋಗತಿಯುಂಟಾಗಿದೆ ಎಂದು ಹೇಳದೆ ವಿಧಿಯಿಲ್ಲ.

ದಾಂಪತ್ಯ ಜೀವನದ ಪ್ರಾರಂಭವೇ ಮದುವೆ. ಅದು ಮುಂದೆ ನಡೆಯತಕ್ಕ ಎಲ್ಲ ವಿಧದ ಕೌಟುಂಬಿಕ, ಸಾಮಾಜಿಕ ಜೀವನ ಪದ್ಧತಿಗೂ ಪ್ರಸ್ತ - ಸಮಾರಂಭಗಳಿಗೂ ನಾಂದಿ. ಪ್ರಕೃತ ಶೋಭಾನೆ ಹಾಡುಗಳ ಉದಾಹರಣೆಗೂ ಅದೇ ಪ್ರಾರಂಭ. ಸಾಂಪ್ರದಾಯಿಕವಾಗಿ ಮದುವೆಯ ಸಮಾರಂಭವೇರ್ಪಡುವುದು ವಧುವಿನ ಗೃಹದಲ್ಲಿ. ಅದಕ್ಕೆ ಮುಂಚಿತವಾಗಿ ಎರಡೂ ಕಡೆಯವರು ಒಪ್ಪಿ ವಿವಾಹಕ್ಕೆ ಸುಯೋಗ್ಯ ದಿನ, ಮುಹೂರ್ತ ನಿರ್ಣಯಗಳಾಗಿರುತ್ತವೆ. ವರ-ವಧುಗಳಿಬ್ಬರ ಗೃಹದಲ್ಲಿಯೂ ಒಂದೇ ದಿನ ನಾಂದಿ ಕಾರ್ಯಕ್ರಮ ನಡೆಯುತ್ತದೆ. ರಕ್ಷೆಯಾಗಿ ಅರಸಿನ ಪಟ್ಟೆನೂಲು ಕಟ್ಟುತ್ತಾರೆ. ವರನ ಮನೆಯಲ್ಲಿ ಸಮಾವರ್ತನೆ ನಡೆಯುತ್ತದೆ. ನಿಶ್ಚಿತ ಕನ್ಯೆಯನ್ನು ವರನು ವರಿಸುವ ಮೊದಲಿನ ಸಮಾರಂಭವಿದು. ಕೆಳಗೆ ಉದಾಹರಿಸಿದ ಹಾಡು ಶ್ರೀಕೃಷ್ಣನ ಸಮಾವರ್ತನೆಯ ಕಾರ್ಯಕ್ರಮವನ್ನು ತಿಳಿಸುತ್ತದೆ. ಗಾರ್ಗ್ಯ ಪುರೋಹಿತರು ಇದನ್ನು ನೆರವೇರಿಸಿ ಕೊಡುತ್ತಾರೆ. ಈ ಸಮಾರಂಭದ ಅಂಗವಾಗಿ ವರನು ತನಗೆ ಕನ್ಯಾದಾನ ಮಾಡುವವರಿಲ್ಲವೆಂದು ಕಾಶೀ ಪ್ರಯಾಣಕ್ಕೆ ಹೊರಡುತ್ತಾನೆ. ಆಗ ಅವನ ಸೋದರ ಮಾವ ಬಂದು ತಡೆದು, ತಾನು ಕನ್ಯೆಯನ್ನು ಕೊಡುವುದಾಗಿ ಹೇಳಿ ಅವನನ್ನು ಗೃಹಸ್ಥನಾಗುವಂತೆ ಮಾಡುತ್ತಾನೆ. ಒಂಬತ್ತು ಸೊಲ್ಲುಗಳುಳ್ಳ ಅಂತಹ ಒಂದು ಹಾಡಿನ ಉದಾಹರಣೆಯಾಗಿ

ಕೆಲವು ಸೊಲ್ಲುಗಳಿವು. ಪ್ರತಿಯೊಂದು ಸೊಲ್ಲಿಗೆ ಪಾದಗಳು ಐದು. ನಾಲ್ಕು ಮಾತ್ರೆಗಳ ಗಣಗಳಿಂದ ಕೂಡಿದ ಶೋಭಾನೆಯಿದು -

ಶ್ರೀ ಗಜವದನನ ಚರಣಕೆ ಮಣಿದು
ವಾಗೀಶ್ವರಿ ಪದಯುಗಳವ ನೆನೆದು
ನಾಗಶಯನನ ವೈವಾಹಕೆಂದೆನುತನು
ರಾಗದಿಂದಲಿ ಸಮಾವರ್ತನೆಯನು ಗೈ ||
ದಾಗಮವ ಹೇಳಿ - ಪೊಗಳುವೆ

ಚೆನ್ನರ ಚೆಲುವೆಯಾಗಿಹ ರುಕ್ಮಿಣಿಯ
ಮನ್ನಿಸಿ ಮಾಡಿಕೊಂಬೆನು ಪರಿಣಯವ
ಎನ್ನ ಮನ್ನಿಪುದೆಂದು ಸನ್ನುತ ರಂಗನು
ಮುನ್ನ ಕಾಶಿಗೆ ಹೊರಪಯಣವನೆಸಗಲು ||
ಸನ್ನಾಹನಾಗಿ - ಪೊರಟನು

ಏಳಡಿ ಹಜ್ಜೆಯನಿಡುತ ಸಂತಸದಿ
ಬಾಲಕೃಷ್ಣಯ್ಯನು ಪೊರಡಲು ಮುದದಿ
ಬಾಲೆಯನೀವೆನು ಪೋಗದಿರೆನುತಲಿ
ಲೀಲೆಯಿಂದಲಿ ಸೋದರ ಬಂಧುಗಳು ಏ ||
ಶಾಲದಿ ಬೋಧಿಸುತ - ತಡೆದರು

ವರನಿಗೆ ಬೇಕಾದುದು ಇಷ್ಟೇ. ತಾನು ಕಾಶೀ ಪ್ರಯಾಣಕ್ಕ ಹೊರಟದ್ದು ಒಂದು ವಿಧದ ಕಣ್ಣುಕಟ್ಟು. ಈಗ ತಡೆದುದರಿಂದ ಅವನ ಇಷ್ಟಕ್ಕೆ ಅನುಗುಣವೇ ಆಯಿತು. ಅವನ ಪ್ರತಿಕ್ರಿಯೆ ಮುಂದಿನ ಸೊಲ್ಲಿನಲ್ಲಿದೆ -

ಹಾಗಾದರೆ ಹಾಗಾಗಲೆಂದೆನುತ
ನಾಗಶಯನ ಸಂತಸದಲಿ ನಗುತ
ರಾಗದಿಂದಲಿ ಭೂರಿ ವಾದ್ಯ ಸಂಭ್ರಮದಿ
ಬೇಗದಿಂದಲಿ ಮಾತೆ ಪಿತರಿಗೆ ವಂದಿಸು ||
ತಾಗ ದಿಬ್ಬಣದಿ - ಪೊರಟನೆ

ವರನ ದಿಬ್ಬಣ ಸಂಭ್ರಮದಿಂದ ಹೊರಟು ವಧೂ ಗೃಹವನ್ನು ತಲಪುತ್ತದೆ. ದಿಬ್ಬಣ ಹೋಗುವ ಹಾಡುಗಳು ಅನೇಕವಿವೆ. ಅವುಗಳಲ್ಲಿ ಐದು ಸೊಲ್ಲುಗಳುಳ್ಳ ಹಾಡಿನ ಒಂದೆರಡು ಸೊಲ್ಲುಗಳನ್ನು ಉದಾಹರಿಸುತ್ತೇನೆ. ಈ ಹಾಡು ಮೂರು ಮಾತ್ರೆಯ ಮತ್ತು ನಾಲ್ಕು ಮಾತ್ರೆಯ ಗಣಗಳುಳ್ಳ ತ್ರಿಪುಡೆ ತಾಳದ ಗತಿಯಿಂದ ಕೂಡಿದೆ. ಮೊದಲ ನಾಲ್ಕು ಸಾಲುಗಳನ್ನು ಮಧ್ಯಮ ಗತಿಯಲ್ಲಿ ಆ ಮೇಲಿನ ಪಾದಗಳನ್ನು ದ್ರುತ (ತ್ವರಿತ) ಗತಿಯಲ್ಲಿ ಹೇಳಿ, ಕೊನೆಯ ಒಂದು ಪಾದವನ್ನು ವಿಳಂಬದ ಗತಿಯಲ್ಲಿ ಹೇಳುವುದು ಇವರ ಧಾಟಿ. ಹೀಗೆ ಇದೊಂದು ನವಪದಿ.

ಗುರು ಗಣಪರನು ಪೂಜಿಸುತ ಶ್ರೀ । ಹರಿಯ ಧ್ಯಾನಿಸುತ । ವಿಘ್ನವ
ಪರಿಹರಿಸಿ ಕರುಣಾಮೃತಾಬ್ಧಿಯ ಮನದೊಳರ್ಚಿಸುತ । ಸಾಸಿರ
ಸರಸಿಜದಿ ಜ್ಯೋತಿಸ್ವರೂಪದಿಯಿರಿಸಿ ತೋರಿಸುತ । ಕರುಣದಿ
ಶರಣರನು ರಕ್ಷಿಸುವ ಸ್ವಾಮಿಯ ಮನದಿ ಭಾವಿಸುತ
ನಿರುಪಮನಸುತ ಮನುಮಥನ ವಧು
ವರಕನುವ ಮಾಳ್ಪುದಕೆ ಸರ್ವರು
ಹರುಷದಲಿ ಕರಿತುರಗ ಮೊದಲಾ
ದುರುತರದ ಭರದಿಂದ ದಿಬ್ಬಣಾ ॥
ಶರಧಿ ಘೋಷದಲಿ - ಪೊರಟರು

ಈ ಹಾಡಿನಲ್ಲಿ ಮನ್ಮಥನು ರತೀದೇವಿಯನ್ನು ವರಿಸಲು ಹೊರಟ ದಿಬ್ಬಣದ ವಿವರವಿರುತ್ತದೆ. ದಿಬ್ಬಣ ಹೋಗುತ್ತಿರುವಾಗ ಹೆಂಗುಸರು ಶೋಭಾನೆ ಗಳನ್ನು ಹಾಡುತ್ತಿದ್ದುದಾಗಿ ಈ ಹಾಡಿನಲ್ಲೇ ಹೇಳಲಾಗಿದೆ. ಇನ್ನೊಂದು ಸೊಲ್ಲಿನ ಉದಾಹರಣೆ -

ಹತ್ತು ದೆಸೆಯಲಿ ಶೋಭಿಸುವ ನವ
ರತ್ನ ವಿಭವದಲಿ । ಮಿನುಗುವ
ವೃತ್ತಕುಚೆಯರ ಶೋಭನದ ರವ
ಹತ್ತು ದೆಸೆಗಳಲಿ । ಬೆಳಗಿಯೆ
ಕತ್ತಲೆಯ ಶತ್ರುವಿನವೋಲ್ ಬಹ
ಸತ್ವ ರೂಪದಲಿ ॥
ಉತ್ತಮನ ಮತ್ತವರು ಧ್ಯಾನಿಸೆ
ಸುತ್ತುಮುತ್ತಲು ಛತ್ರ ಚಾಮರ
ವೆತ್ತಿ ನಾನಾ ವಿಧದ ರಭಸದಿ
ಕತ್ತುರಿಯು ಮೊದಲಾದ ಪರಿಮಳ ॥
ವಿಸ್ತಾರದಲ್ಲಿ - ಪೊರಟರು

ವರನ ದಿಬ್ಬಣ ವಧೂಗೃಹಕ್ಕೆ ತಲಪಿದೆ. ದಿಬ್ಬಣಿಗರನ್ನೀಗ ಉಪಚರಿಸಲಾಗುತ್ತಿದೆ. ಅದಕ್ಕೂ ಹಾಡು ಇದ್ದೇ ಇದೆ. ನಾಲ್ಕು ಮಾತ್ರೆಯ ಗಣಗಳಿಂದ ಕೂಡಿದ ಪಂಚ ಪಾದಗಳುಳ್ಳ ಐದು ಸೊಲ್ಲುಗಳಿರುವ ಹಾಡಿನ ಉದಾಹರಣೆ ಇಲ್ಲಿದೆ. ಇದರ ಧಾಟಿಯಲ್ಲಿ ನಾಲ್ಕು ಪಾದಗಳಿಗೆ ಮಧ್ಯಮ ಗತಿಯೂ ಕೊನೆಯದಕ್ಕೆ ವಿಳಂಬ ಗತಿಯೂ ಇರುತ್ತದೆ. ಇದರಲ್ಲಿ ಶ್ರೀಮನ್ನಾರಾಯಣನ ಮದುವೆ ದಿಬ್ಬಣಿಗರನ್ನು ಉಪಚರಿಸಿದಂತೆ ಸಾಹಿತ್ಯವಿದೆ -

ಶ್ರೀ ಗಣನಾಥನ ಚರಣಕೆ ಮಣಿದು
ವಾಗ್ದೇವಿಯ ಪೂಜಿಸಿ ಮನವೊಲಿದು
ಸಾಗರಶಯನನ ಮದುವೆ ದಿಬ್ಬಣಿಗರ
ನಾಗರಿಕೆಯರುಪಚರಿಸಿದ ಸಂಭ್ರಮ ॥
ದಾಗಮವ ಪೇಳಿ - ಪೊಗಳುವೆ ॥ ೧ ॥
ಯಾತಕೆ ತಡವಿದೆ ನಾದಿನಿಯೆನುತ

ಪ್ರೀತಿಯೊಳತ್ತಿಗೆ ನೀ ಬಾರೆನುತ
ಚಾತುರ್ಯದೊಳತಿ ಜಾತಿ ಕಸ್ತೂರಿ ಸು
ನೀತ ಕಮ್ಮಕ್ಕೆಣ್ಣೆಯ ತಾ ತಳಿಯುತ ಸಂ ॥
ಪ್ರೀತಿಯೊಳುಪಚಾರ - ಗಯಿದಾರು ॥ ೨ ॥

ಬಾಯುಪಚಾರ ಹೇಳುತ್ತ ಬಾಯಾರಿಕೆ ಕೊಡುವ ಹಾಡು ಉಲ್ಲೇಖನೀಯ. ಅದು ಹೀಗಿದೆ -

ಬನ್ನಿ ಬನ್ನೀ ಸಭೆಗೆ ತಡವೇನು । ನಮ್ಮ
ಮನ್ನಣೆ ಕೈಗೊಳ್ಳಿರಿನ್ನು । ಸಣ್ಣ
ಮನ್ನಣೆ ಕೈಗೊಳ್ಳಿರಿನ್ನು । ಬಲು
ಬನ್ನ ಬಟ್ಟಿರುವಿರಿ ಸಣ್ಣವರೆಲ್ಲವರು ॥ ಬನ್ನಿ ಬನ್ನಿ ॥ ಪಲ್ಲವಿ ॥
ಕಾಲಿಗೆರೆದುಕೊಳ್ಳಿ ನೀರು । ಮುಖದ
ಮೇಲೇರುತ್ತಿದೆ ಬೆವರ್ಜೋರು । ಬಹು
ಆಲಸ್ಯ ಪಟ್ಟರುವಿರಿ ಏಲಕ್ಕಿ ಸಾರು ಕುಡಿರಿ ॥ ಬನ್ನಿ
ಕಲ್ಲು ಸಕ್ಕರೆ ದ್ರಾಕ್ಷೆಯನ್ನು । ಹೊಸ
ಬೆಲ್ಲ ಸಕ್ಕರೆ ಯೆಳನೀರನ್ನು । ಬಹು
ಉಲ್ಲಾಸದಲ್ಲಿ ಕೊಳ್ಳಿ ಇಲ್ಲವಾದ್ರೆ ತರಿಸಿ ಕೊಳ್ಳಿ ॥ ಬನ್ನಿ ಬನ್ನೀ ॥

ಮದುವೆಯ ಮನೆ ಕಡೆಯವರು ದಿಬ್ಬಣಿಗರಿಗೆ ಹೀಗೆ ಸತ್ಕಾರ ಮಾಡಿದಾಗ ದಿಬ್ಬಣಿಗರು "ಬಂತು ಬಂತು ಬಂತೆಮಗುಪಚಾರ" ಎಂದು ಹೇಳುವ ಉತ್ತರ ಅವರ ಹಾಡಿನಲ್ಲಿ ಬರುತ್ತದೆ. ಮದುವೆ ಮಂಟಪ, ನೆರೆದ ಸಭೆ, ಬಂಧು ವರ್ಗ, ಬಂದು ಕುಳಿತ ಸಮೂಹ - ಇವನ್ನೆಲ್ಲ ವರ್ಣಿಸುವ ಸಭಾ ವಿಸ್ತಾರದ ಹಾಡು ಈ ಸಂದರ್ಭದಲ್ಲಿ ಪ್ರಯೋಗಗೊಳ್ಳುತ್ತದೆ. ಮುಹೂರ್ತ ಸಮೀಪಿಸಿದಾಗ ವಧುವನ್ನು ಆಕೆಯ ಸೋದರಮಾವನು ಮಂಟಪಕ್ಕೆ ಕರೆತರುತ್ತಾನೆ. ಅಂತಹ ವಿವರವುಳ್ಳ ಈ ಕೆಳಗಿನ ಹಾಡಿನಲ್ಲಿ ಇಂದ್ರ ಶಚಿಯರ ವಿವಾಹ ವಿಚಾರ ಬರುತ್ತದೆ. ಮೂರು ನಾಲ್ಕು ಮಾತ್ರೆಗಳ ಗಣಗಳು ಈ ಹಾಡಿನಲ್ಲಿವೆ. ಪಲ್ಲವಿಯಲ್ಲಿ ಕೊನೆಯ ಪಾದಕ್ಕೆ ವಿಳಂಬಗತಿಯಿರುತ್ತದೆ. ಇದೊಂದು ಸಪ್ತಪದಿ.

ಶ್ರೀ ಮಹಾಗುರು ಚರಣದೆಡೆಗೆರಗೀ । ಸಂತೋಷದಿಂದಲಿ
ಕಾಮಹರನಡಿದಾವರೆಗೆ ಬಾಗಿ
ಕಾಮನಯ್ಯನ ಮನದಿ ನುತಿಸಿ ಸು
ತ್ರಾಮನಿಗೆ ಪರಿಣಯದ ಮೊದಲು ಪು
ಲೋಮಜೆಯ ಕರೆತಂದ ಚರಿತವ
ನಾ ಮುದದಿ ವಿವರಿಸುವೆ ಸುಗುಣೋ ॥
ದ್ದಾಮ ಜನ ಕೇಳಿ—ಮುದ ತಾಳಿ ॥ ೧ ॥
ಸುತ್ತ ನೆರೆದಿಹ ಮುನಿಪ ವೃಂದವನು । ಗೆಲ್ಲಲ್ಕೆ ಮನ್ಮಥ
ನೆತ್ತುತ್ತೈತಹ ಕೈದೊ ಪೇಳಿನ್ನು
ವಿಸ್ತರಿಸಲರಿದೆಂಬ ತೆರದಿಂ

ಮತ್ತಗಜಗಾಮಿನಿಯರಾ ಶಚಿ
ಯೊತ್ತಿನಲಿ ಬರೆ ತನು ಸು ಗಂಧಕೆ
ಮುತ್ತುತಾರದಿ ಮೊತ್ತವೈತರೆ ॥
ಮತ್ತೆ ಕರೆತಂದ - ನಲವಿಂದ ॥ ೨ ॥

ವಧು ಸೀತೆ ಶ್ರೀ ರಾಮನ ಕೊರಳಿಗೆ ಹೂಮಾಲೆಹಾಕಿದುದನ್ನು ಕೆಳಗಿನ ಹಾಡು ವಿವರಿಸುತ್ತದೆ. ಹೂ ಮಾಲೆ ಹಾಕುವ ವೇಳೆಗೆ ಇದನ್ನು ಹಾಡುತ್ತಾರೆ -

ಲೋಲನಯತೆ ಸೀತೆ । ಮಾಲೆಯ ರಾಮಗೆ
ವಿನೋದದಿ ಹಾಕಿದಳು ಮೋದದಿ ಸುಮವ
ಫುಲ್ಲ ವೇಣಿಯು ತಾನು । ಮೆಲ್ಲಡಿ ಹಜ್ಜೆಯ
ನಿಲ್ಲದೆ ನಾಚುತ ಮಲ್ಲಿಗೆ ಸುಮವ

ವಿವಾಹದ ಸಂದರ್ಭ ಧಾರೆಯೆರೆಯುವಂತೆಯೇ, ವರನು ವಧುವಿಗೆ ಕೊರಳ ನೂಲು (ಮಂಗಲಸೂತ್ರ) ಕಟ್ಟುವದು ಮುಖ್ಯ. ಕೆಳಗಿನ ಉದಾಹರಣೆಯಲ್ಲಿ ಕಮಲಾಕ್ಷನು ರಮೆಗೆ ಮಂಗಲ ಸೂತ್ರವನ್ನು ಕಟ್ಟಿದ ವಿವರವಿದೆ. ಈ ಹಾಡಿನ ಸೊಲ್ಲನ್ನು 'ಸರಳಾರ' ಎನ್ನುತ್ತಾರೆ. ಪ್ರತಿಯೊಂದು ಸೊಲ್ಲಿನ ಕೊನೆಗೆ ಎರಡು ಪಾದಗಳ ಪಲ್ಲವಿಯಿದೆ.

ಪೇಳುವೆ ನಾನತಿ ಹರುಷದಲೀ । ಶ್ರೀ
ಲೋಲನ ಮಂಗಲ ಕರವಿಲ್ಲೀ ॥ ಪಲ್ಲವಿ ॥
ಪಟ್ಟೆಯ ಬಿಡುನೂಲನೆ ನೇಯುತ್ತಲೆ
ಮುಟ್ಟ ಚಿನ್ನದ ಬೊಟ್ಟದಕಿರಿಸಿ
ತಟ್ಟನೆಯರಶಿನಪೂಸಿ ಕೈಗೊಳ್ಳುತ
ಪಟ್ಟದ ಸತಿಗಳಕೊಂದಿಸುತ ॥ ಪೇಳುವೆ....

ಮದುವೆಯಲ್ಲಿ ಧಾರೆ ನಡೆದ ವೇಳೆ ಹಾಡುವ ಹಾಡುಗಳಲ್ಲಿ 'ಕಲ್ಯಾಣಗಳು' ಎಂಬ ಬಗೆಯವು ಉದ್ದವಾದ ಹಾಡುಗಳಾಗಿವೆ. ಇವುಗಳಲ್ಲಿ ಹತ್ತಿಪ್ಪತ್ತು ಸೊಲ್ಲುಗಳಿರುತ್ತವೆ. ಗಿರಿಜಾ ಕಲ್ಯಾಣ, ಸೀತಾ ಕಲ್ಯಾಣ ಮಂತಾದ ಹತ್ತಾರು ಹಾಡುಗಳು ಸಿಗುತ್ತವೆ. ಅವುಗಳಲ್ಲಿ ಗಿರಿಜಾ ಕಲ್ಯಾಣದಿಂದಾಯ್ದ ಕೆಲವು ಸೊಲ್ಲುಗಳಿವು. ಕೊನೆಯ ಸಾಲು ವಿಳಂಬಗತಿಯುಳ್ಳುದು.

ಗಣಪ ವಾಗ್ದೇವಿಯರಡಿಗೆ ವಂದಿಸುತ
ಫಣಿಶಯನನ ಪಾದವನಜಕೆರಗುತ
ತ್ರಿಣಯಗೆ ವಂದಿಸಿ ಗುರುವ ಧ್ಯಾನಿಸುತ
ಗುಣನಿಧಿ ಮಹಾಮಾಯೆಯ ಪ್ರಾರ್ಥಿಸುತ ॥
ಗಿರಿಜಾ ಕಲ್ಯಾಣವನೊರೆವನು

ಪಾರ್ವತಿಯ ಚೆಲುವನ್ನು ವರ್ಣಿಸುವ ಸೊಲ್ಲುಗಳಲ್ಲಿ ಇದೊಂದು -

ಮೆರೆವ ಮುಖವು ಪೂರ್ಣ ಚಂದ್ರನಂತಿರಲು
ಸರಸಿಜನಾಳದಂತೆಸೆವ ಬಾಹುಗಳು
ಉರಗರಾಜನ ಹೆಡೆಯಂತಿಹ ವೆದೆಯೊಳು

ಮೆರೆವ ಕೋಮಲ ಮೊಗ್ಗೆಯಂಥ ಕುಚಗಳು ॥
ನಡುಸಿಂಹನಂತೆ - ಯೆಸೆದಿರೆ

ಸ್ತನಗಳನ್ನು ಹಾವಿನ ಹೆಡೆಗೆ ಹೋಲಿಕೆ ಮಾಡಿದ್ದು ಕವಿಯ ಸ್ವೋಪಜ್ಞತೆಗೆ ಸಾಕ್ಷಿಯಾಗುತ್ತದೆ. ಅವಳ ಭಕ್ತಿಯನ್ನು ಪರೀಕ್ಷಿಸಲೆಂದು ಶಿವನು ಬ್ರಾಹ್ಮಣವೇಷದಲ್ಲಿ ಬಂದು ಮಾಡಿದ ಶಿವನಿಂದೆಯ ಸೊಲ್ಲುಗಳಲ್ಲಿ ಒಂದೆರಡು ಇಂತಿವೆ.

ಮಾವ ದಕ್ಷನೊಳಗೆ ಕಲಹವ ಬಯಸಿ
ಭಾವಕಿಯಳ ಮಹಾಧ್ವರಕೆ ಕಳುಹಿಸಿ
ಕೇವಲ ಕೆಡಿಸಿದ ತನ್ನ ವಲ್ಲಭೆಯನ್ನು
ಯಾವ ಕಾರ್ಯಕೆ ಮನವಾತನ ಮೇಲಿನ್ನು ॥
ಕೋಪಿದ ಮದ್ದಾನೆ - ನಿಭಾ ಯಾನೇ

ಈ ಹಾಡಿನ ಕೊನೆಗೆ ಕಣ್ವಪುರದ (ಕಾಸರಗೋಡು ತಾಲೂಕಿನ ಕುಂಬಳೆಯ) ಗೋಪಾಲ ಕೃಷ್ಣದೇವರ ಅಂಕಿತವಿದೆ.

ಮದುವೆ ಎಂಬುದು ಹೇಗೆ ಗಂಡು ಹೆಣ್ಣೆಂಬ ಉಭಯ ವ್ಯಕ್ತಿಗಳನ್ನು ವಿಧಿಪೂರ್ವಕ ಒಂದಾಗಿಸುವ ಸಮಾರಂಭವೋ ಹಾಗೆಯೇ ಎರಡು ಕುಲಗಳೊಳಗೆ ಸಂಬಂಧವನ್ನು ದೃಢವಾಗಿ ಬೆಸೆಯುವ ಸಂದರ್ಭವೂ ಆಗಿರುತ್ತದೆ. ಈ ಸಂದರ್ಭದಲ್ಲಿ ವಿನೋದಕ್ಕಾಗಿ ಪರಸ್ಪರ ದೂರುವ ಹಾಡುಗಳೂ ಪ್ರಚಲಿತವಿವೆ. ಕಪ್ಪಿನ ಶೋಭಾನೆ ಅವುಗಳಿಗೊಂದು ಉದಾಹರಣೆ. ಇದರಲ್ಲಿ ವರನ ಕಡೆಯವರು ವಧುವನ್ನೂ ವಧುವಿನ ಕುಲವನ್ನೂ ತೆಗಳುತ್ತಾರೆ. ಅದಕ್ಕೆ ವಧುವಿನ ಕಡೆಯವರು ಹಾಡಿನಲ್ಲಿ ಉತ್ತರವನ್ನು ಕೊಡುತ್ತಾರೆ. ಕೆಳಗಿನ ಹಾಡಿನ ಸೊಲ್ಲುಗಳು ತ್ರಿಪದಿಯಾಗಿದೆ.

ಮದುವೆ ಮಂಟಪದಲ್ಲಿ । ಮದುವಳಿತಿಯೆ ಕಪ್ಪು
ಮದುವಳ್ತಿ ತಾಯಿ ಮೊದಲೇ ಕಪ್ಪು
ಮದುವಳ್ತಿ ತಾಯಿ ಮೊದಲೇ ಕಪ್ಪವರ ವಂಶ
ಮೂಜಗ ಕಪ್ಪು, ಚವುದಿ ಕಪ್ಪು, ಶೋಭಾನವೇ

ಇವಕ್ಕೆ ವಧುವಿನ ಕಡೆಯವರ ಉತ್ತರದ ಒಂದು ಸೊಲ್ಲು -

ಹತ್ತೆಂಟು ಪಾಪಾಸು ಹೊತ್ತಿಗೆ ಹರಿದವು
ಗುತ್ತಿಯ ರಾಜ್ಯ ತಿರುಗಾಡಿ ಬಂದಿರೆ
ಮಗಳ ಕೇಳಲಿಕೆ - ನೀವಂದು

ಮದುವೆಯೆಂದರೆ, ಬಂದವರಿಗೆ ಬಾಯುಪಚಾರ ಹೇಳಿ, ಫಲತಾಂಬೂಲ ಕೊಟ್ಟೋ ಕೊಡದೆಯೋ ಕಳುಹಿಸಿ ಕೊಡುವ ಜಿಪುಣ ಕಾರ್ಯಕ್ರಮವಲ್ಲ. ಅಲ್ಲಿ ವಿಶೇಷ ಭಕ್ಷ್ಯಭೋಜ್ಯಗಳ ಊಟವಿರಬೇಕು. ದಕ್ಷಿಣೆಯೂ ಇರಬೇಕು. "ಬ್ರಾಹ್ಮಣೋ ಭೋಜನ ಪ್ರಿಯಃ" ಎಂಬ ಮಾತಂತೂ ಪ್ರಚಲಿತವೇ ಇದೆ. ಎಡೆಮಾಡುವ ಶೋಭಾನ ಈ ಸಂದರ್ಭಕ್ಕಾಗಿಯೇ ಇರುತ್ತದೆ. ಶಿವ-ಪಾರ್ವತಿಯರ ವಿವಾಹ ಸಂದರ್ಭದ ಭೂರಿಭೋಜನ ಕುರಿತಾದ ಹಾಡು ಎಡೆಮಾಡುವ ಹಾಡು.

ಉದಾಹರಣೆಗಳಿವು -

ಬಾಲಕಿಯನು ಶಿವಗೇ - ಪರ್ವತ
ಪಾಲನು ಸಭೆಯೊಳಗೇ
ಲೀಲೆಯೊಳಗೆ ತಾ ಪಾಲಿಸಿ ಸಭೆ ಜನ
ಜಾಲದ ಕೈಯಲಿ ಪೇಳಿದನುಚಿತದಿ

"ಊಟಕ್ಕಾಯಿತು, ಕೈಕಾಲು ಮುಖ ತೊಳೆದು ಸಿದ್ಧವಾಗಿರಿ" ಎಂದುದೇ ತಡ. ಜನರು ಘೋ ಎಂದೆದ್ದು ಕಾಲ್ಮೊಗ ತೊಳೆದು ಹಂತಿ ಮಾಡಿ ಕುಳಿತರು. ಅವರಿಗೆ ಕುಡಿಬಾಳೆಲೆ ಕೊಡಲಾಯಿತು. ಜಲಪಾತ್ರೆಗೆ ನೀರು ಹೊಯ್ದರು. ಗಂಧಾಕ್ಷತೆ ಕೊಟ್ಟರು. ಬಡಿಸಲು ಪ್ರಾರಂಭವಾಯಿತು. ತುಪ್ಪದಿಂದ ಅನ್ನಶುದ್ಧಿಯಾಯಿತು. ಉಪ್ಪು ಉಪ್ಪಿನಕಾಯಿ ಪಲ್ಯಗಳನ್ನು ಬಡಿಸಿದ ಕೆಲವು ಅಡುಗೆಗಳ ವಿವರ ಈ ಹಾಡಿನಲ್ಲಿದೆ -

ಸಾಸಿವೆ ತಾಳುಗಳು । ರುಚಿಕರ
ಕೋಸಂಬರಿಯುವಿಲು
ತೋಪದಿ ಬಹಳ ವಿ
ಶೇಷದಿ ಸಭೆಗೆ ವಿ
ಲಾಸದೊಳಿಕ್ಕಲು
ಬೇಸರಗೊಳ್ಳದೆ

ಅಡುಗೆ ಪದಾರ್ಥಗಳನ್ನು ಬಡಿಸುವುದರಲ್ಲಿ ಸೂಕ್ತವಾದ ಅನುಕ್ರಮ ಯಾವುದು? ಎಂಬುದನ್ನು ಹವ್ಯಕರ ಪದ್ಧತಿಯಿಂದ ತಿಳಿದುಕೊಳ್ಳಬೇಕು. ಆ ಪದ್ಧತಿ ಈ ಹಾಡಿನಲ್ಲಿ ಬರುತ್ತದೆ. ಉಪ್ಪು, ಉಪ್ಪಿನಕಾಯಿ, ಕೋಸಂಬರಿ, ಪಲ್ಯಗಳನ್ನು ಬಡಿಸಿದನಂತರ ಅನ್ನ ತುಪ್ಪಗಳು, ಅನಂತರ ಕೈನೀರು ಹಾಕಿ ಎಲ್ಲರೂ ಒಂದೇ ವೇಳೆಗೆ ಊಟ ಪ್ರಾರಂಭಿಸುವದು ಶಿಷ್ಟಾಚಾರ. ಆ ಮೇಲೆ ಕ್ರಮವಾಗಿ ಸಾರು, ಮುದ್ದೆಹುಳಿ (ಕೊದಿಲು), ಅನಂತರ ಪಾಯಸಗಳು ಮತ್ತು ಇತರ ಸಿಹಿಯ ಭಕ್ಷ್ಯಗಳು. ಆಮೇಲೆ ಮೇಲೋಗರ (ಕಾಯಿ ಹುಳಿ, ಮಜ್ಜಿಗೆ ಹುಳಿ), ಕೊನೆಗೆ ಮೊಸರು ಅಥವಾ ಮಜ್ಜಿಗೆ. ಈ ಅನುಕ್ರಮ ಹವ್ಯಕ ಸಂಪ್ರದಾಯ. ಅಂತಹ ಸಂಪ್ರದಾಯಕ್ಕೆ ಅನುಗುಣವಾಗಿಯೇ ಇರುವ ಹಾಡು ಮೇಲಿನದು. ಇನ್ನೆರಡು ಸೊಲ್ಲುಗಳ ಉದಾಹರಣೆ -

ಆಯಿತು ಭಕ್ಷ್ಯಗಳು, ತನ್ನಿರಿ
ಕಾಯಿಹುಳಿಯ ಸೊಬಗು
ಪ್ರೀಯದೊಳೆನೆ ಸಮುದಾಯದ ಜನಕೆ ನಿ
ರಾಯಸದಲಿ ತಂದೀಯುತ ಬಡಿಸಲು ॥
ಮುದದಲಿ ಶುಭವರಿತು । ತಂದರು
ದಧಿಯನು ಮುದವಾಂತು । ಬುಧರಿಗೆ ಶೀಘ್ರದೊ
ಳದ ಬಡಿಸಲು ಮತ್ತದೊ ಭೋಜನ ವಿಧ
ವಿಧದಲಿ ಗೈದರು

ಪರಿಣೀತ ದಂಪತಿಗಳು ಅರುಂಧತೀದರ್ಶನ ಮಾಡುವುದೂ ಮದುವೆಗೆ ಸಂಬಂಧಿಸಿದ ಒಂದು ಕಾರ್ಯಕ್ರಮ. ಅದಕ್ಕೂ ಒಂದು ಶೋಭಾನೆಯಿದೆ. ಶಿವಪಾರ್ವತಿಯರು ಮದುವೆಗಾಗಿ ಅರುಂಧತೀ ದರ್ಶನ ಮಾಡಿದುದನ್ನು ಇದರಲ್ಲಿ ಹೇಳಿದೆ. 'ನಕ್ಷತ್ರ ನೋಡುವ ಹಾಡು' ಎಂದು ಇದಕ್ಕೆ ಹೆಸರು. ಈ ಹಾಡಿನ ಕೊನೆಯ ಸೊಲ್ಲಿನಲ್ಲಿ ಕೋಳಿಯೂರಿನ ದೇವರ ಅಂಕಿತವಿದೆ.-

ಶ್ರೀ ಕೈಲಾಸಗಿರೀಶ್ವರನು । ಕರು
ಣಾಕರ ವರದ ಶಿವಂಕರನು
ಲೋಕದೊಡೆಯ ಲಕ್ಷ್ಮೀಪತಿ ಸಖನು
ಆ ಕಮಲಾನನೆ ಪಾರ್ವತಿ ಸಹ ಶುಭ
ದಾಕೆಯರುಂಧತಿಯೂ – ನೆನೆದರು ॥
ಚಂದ್ರನ ಶಿರದಿ ಧರಿಸಿದವನು – ಸುರ
ವೃಂದವಿನುತನಾಗೆಸೆದವನು
ನಂದಿವಾಹನನು ನತಪಾಲಕನು
ಚಂದದಿ ವಿಧಿಜನ ಸತಿಯನಿರೀಕ್ಷಿಸಿ
ಬಂದು ಸಲಹುವನು – ಮುದದಿಂದ

ಮದುಮಕ್ಕಳನ್ನು ಹಸೆಗೆ ಕರೆವ ಹಾಡುಗಳು ಹಲವಿವೆ. ಇದೀಗ ಶ್ರೀ ರಾಮನನ್ನು ಹಸೆಗೆ ಕರೆವ ಹಾಡಿದು - ಇದೊಂದು ಧವಳಾರದ ಹಾಡು.

ದಶರಥನುದರದಿ ಜನಿಸಿ ತಾಟಕಿಯೆಂಬ
ಅಸುರೆಯ ಸಂಹರಿಸಿ । ಮಾರೀಚಾದಿ
ಅಸಮ ದೈತ್ಯರ ಜಯಿಸಿ । ಲಕ್ಷ್ಮಣನ ವೆರಸಿ ॥
ಕುಶಲದಿಂ ನಡೆತರುತ ಗೌತಮ
ಋಷಿಯ ಪತ್ನಿಯನುದ್ಧರಿಸಿ ಶೋ
ಭಿಸುವ ಬಿಲ್ಮುರಿಯುತ್ತ ಸೀತೆಯ
ಕುಶಲ ಮಿಗೆ ವರಿಸಿರ್ದ ಶುಭಕರ ॥
ಬಿಸಜಾಕ್ಷ ರಾಮ—ಹಸೆಗೇಳು

ಮದುಮಗಳನ್ನು ಹಸೆಗೆ ಕರೆವ ಹಾಡಿನ ಉದಾಹರಣೆಯಿದು. ಇದರಲ್ಲಿ ದಾಕ್ಷಾಯಣಿಯನ್ನು ಹಸೆಗೆ ಕರೆಯಲಾಗಿದೆ.-

ಬಾರೆ ದಾಕ್ಷಾಯಣಿ । ತೋರುವ ಹಸೆಗೀಗ
ನೀರಜಮುಖಿಯಳೆ, ಬಾರೆ ಮಧ್ಯದಿ ಬೇಗ
ಮಣಿ ಭೂಷಣದ ತೊಟ್ಟು । ಹಣೆಗೆ ಕುಂಕುಮವಿಟ್ಟು
ಮಣಿವರ ಸಲಹುವ । ಗುಣನಿಧಿ ಹಸೆಗೀಗ

ಮದುವೆಯ ಅನಂತರ ಚತುರ್ಥಿಯ ವರೆಗೆ ವರನು ವಧೂಗೃಹದಲ್ಲಿರುತ್ತಾನೆ. ಚತುರ್ಥಿಯಂದು ವರನ ಕಡೆಯವರ ಕಿರುದಿಬ್ಬಣ ಬರುತ್ತದೆ. ಮಗನ ಮದುವೆಯ ಸಮಾರಂಭಕ್ಕೆ ಬಾರದಿದ್ದ ತಾಯಿ ಚತುರ್ಥಿ ದಿಬ್ಬಣದಲ್ಲಿ ಬರುತ್ತಾಳೆ. ಸೊಸೆಗೆ ಒಳ್ಳೆಯ ಕಾಲುಂಗುರ ಮಾಡಿಸಿ

ತರುತ್ತಾಳೆ. ಚುತುರ್ಥಿ ದಿಬ್ಬಣಿಗರು ಬಂದಾಗ ವರನು ಕಾಣಿಸುವುದಿಲ್ಲ. ಇದರಿಂದ ಅವರಿಗೆಲ್ಲ ದಿಗಿಲು ! ಇದನ್ನು ಅವರ ಶೋಭಾನೆ ವ್ಯಕ್ತಪಡಿಸುತ್ತದೆ. ತ್ರಿವುಡೆತಾಳದ ಗತಿಯಿಂದ ಕೂಡಿ ಛಂದೋ ವೈಶಿಷ್ಟವುಳ್ಳ ಹಾಡಿದು -

ಶ್ರೀಮತಿಯರಿರ ಕೇಳಿರೆಮ್ಮಯ ಮೋಹನದ ಕಣಿಯಾ
ಕೋಮಲಾಂಗ ಸುಶೀಲ ಶ್ರೀ ಹರಿಯ
ಈ ಮಹಾಸಭೆಯಲ್ಲಿ ನತಜನ
ಕಾಮ ತನ್ನುದರಾಬ್ಧಿ ಚಂದ್ರನ
ಪ್ರೇಮದಿಂದಲೆ ಕಾಣದೆಯೆ ಮನ
ಸಾಮಧಾನವಗೊಳ್ಳಲರಿದಿಂ

ದೆತ್ತಲೂ । ಹುಡುಕಿದರು ತೋರನು
ಸುತ್ತಲೂ । ಮೋಹಿಸಿದಿರೇಯೆಂ
ದತ್ತಲೂ । ನಿಜ ಬಾಲಕನನೆತ್ತೆತ್ತಲೂ । ಅರಸುತ್ತಲೂ
ಕಾಮಿನಿಯರೊಗ್ಗಿನಲಿ ದೇವಕಿ
ಶ್ರೀಮನೋಹರಗರಸಿ ಬಳಲಿದು
ಕಾಮನಯ್ಯನ ನೆನೆದು ನೆರೆದಿಹ
ಸೋಮಮುಖಿಯರ ಮರಳಿ ನೋಡುತ ॥
ಪ್ರೇಮದಿ ಕೃಷ್ಣನನು - ತೋರಿರಮ್ಮ

ಶೋಭಾನೆಗಳಲ್ಲಿ ದೀರ್ಘವಾದ ಸೊಲ್ಲುಗಳಿಂದ ಕೂಡಿದ ಹಾಡಿದು. ಅಲ್ಲಲ್ಲಿ ಪಾದಗಳಿಗೆ ಉಪಪಾದಗಳೂ ಇವೆ. ನಡೆ ಒಂದೇ ಆದರೂ ನಡುವೆ ಲಯ ನಿಂತುಕೊಳ್ಳುತ್ತದೆ. ಸೊಲ್ಲಿನ ಕೊನೆಯ ಪಾದವು ವಿಳಂಬಗತಿಯುಳ್ಳುದಾಗಿದೆ. ಧಾಟಿಯಂತು ಹಾಡಿದರೆ ಮಾತ್ರವೇ ಈ ಹಾಡು ಸೊಗಸು.

ಮದುಮಗನನ್ನು ಕಾಣದೆ ತವಕಗೊಂಡ ದಿಬ್ಬಣರಿಗೆ ಮನೆಕಡೆಯವರು ಹಾಡಿನ ಮೂಲಕವೇ ಸಮಾಧಾನ ಹೇಳುತ್ತಾರೆ. ಅವರ ಹಾಡಿನ ನವಪದಿಯ ಒಂದು ಸೊಲ್ಲಿದು - ಚತುರ್ಮಾತ್ರಾಗಣ ಗಳುಳ್ಳುದು. ಕೊನೆಯ ಪಾದಕ್ಕೆ ವಿಳಂಬಿತ ಗತಿ.

ಶ್ರೀಕರ ಮುಖಿಯರೆ ಲಾಲಿಸಿ ಮಾತ
ಯಾಕಿನಿತೆಂಬರಿ ಕಳವಳಗೊಳುತ
ಜೋಕೆಯೊಳಡರಿಸಲೇಕೆ ಶ್ರೀವರನ
ಸೋಕಿದ ಮೋಹವೆ ನುಡಿಯುವದೇನ
ಆ ಕಮಲಾಂಬಕ ಶ್ರೀ ವಧುವ ಮುಖಾ । ಲೋಕನದಿಂದಲೆ ನಸುನಗೆ ಬೀರುತ
ನೇಕಾಭರಣ ವಿಭೂಷಿಸುತುಜ್ವಲ
ದಾ ಖರಕಾಂತಿಯ ನಗಿಸುವ ಮುದದಿಂ
ದೀ ಕಡೆಗೈತಹನು - ಶ್ರೀಧರನು

ಚತುರ್ಥಿಯ ಕಟ್ಟುಕಟ್ಟಳೆಯ ಕಾರ್ಯಕ್ರಮಗಳೆಲ್ಲವೂ ಹೀಗೆ ಶೋಭಾನೆಗಳೊಂದಿಗೆ ನಡೆಯುತ್ತವೆ. ವರನ ತಾಯಿ ತನ್ನ ಸೊಸೆಗೆ ಕಾಲುಂಗುರ ತೊಡಿಸುವುದು ವಾಡಿಕೆ. ಅದಕ್ಕೂ ಹಾಡು ಇದೆ -

ಬಾರೆ ಬಾರೆಲೆ ನಾರೀ ಯಾತಕೆ ನಾಚುವೆ
ಕಾಲಿಗೆ ಉಂಗುರ ತೊಡಿಸುವೆವು ನಾವು ॥ ಪಲ್ಲವಿ ॥
ಕಂದನ ರಾಣಿಗೆ । ಚಂದದ ಉಂಗುರ
ಸಂಭ್ರಮದಿಂದಲಿ ಇಟ್ಟಳು ಬೇಗ ॥
ಮಲ್ಲಿಗೆಯರಲಿನ ಮಾಲೆಯ ಮುಡಿಸಿ
ಮೋಹದಿ ತೊಡೆಯೊಳು ಕುಳ್ಳಿರಿಸಿದಳು

ಚತುರ್ಥಿಯ ಅನಂತರದ ಮುಖ್ಯ ಸಮಾರಂಭ ವಧೂವರರು ಗೃಹ ಪ್ರವೇಶ ಮಾಡುವುದು. ಇದನ್ನು 'ಸಟ್ಟು ಮುಡಿ' ಎನ್ನುತ್ತಾರೆ. ಅಂದು ವಧುವಿನ ಗೃಹದಿಂದ ದಂಪತಿಗಳು ದಿಬ್ಬಣದಲ್ಲಿ ಬರುತ್ತಾರೆ. ಬಂದ ದಿಬ್ಬಣಿಗರನ್ನು ಎದುರುಗೊಳ್ಳುವುದು, ಸತ್ಕರಿಸುವುದು, ಉಪಚಾರ ಹೇಳುವುದು - ಮುಂತಾದುವೆಲ್ಲವೂ ಹಾಡಿನ ಮೂಲಕ ನಡೆಯುತ್ತವೆ. ಕೆಲವು ಕ್ರಿಯಾಭಾಗ ಮುಗಿಸಿ ವಧೂವರರನ್ನು ಹೊಸ್ತಿಲನ್ನು ದಾಟುವಾಗ ವರನ ತಂಗಿ ಅವರನ್ನು ತಡೆಯುವುದು ಒಂದು ಸಂಪ್ರದಾಯ. ಬಾಗಿಲು ತಡವ ಹಾಡಿನಲ್ಲಿ ಈ ವಿವರ ಬರುತ್ತದೆ. ಅಲ್ಲಿ ಒಂದು ಒಪ್ಪಂದ ವೇರ್ಪಡುತ್ತದೆ - ಈ ದಂಪತಿಗಳಿಗೆ ಗಂಡುಮಗುವಾದರೆ ಸೋದರಿಕೆಯ ಹೆಣ್ಣನ್ನು ತರುವುದು, ಹೆಣ್ಣು ಮಗುವಾದರೆ ಅದನ್ನು ಸೋದರ ಸಂಬಂಧಕ್ಕೆ ಕೊಡುವುದು - ಎಂದು. ಲಜ್ಜಾಶೀಲೆಯಾದ ಮದುಮಗಳನ್ನು ಸರಸವಾಗಿ ನಾಚಿಕೆ ಪಡಿಸುವ ಹಾಡಿದು. ಈ ಹಾಡು 'ಧವಳಾರ' ಎನಿಸುತ್ತದೆ.

ರಂಗನ ಪರಿಣಯದೈದನೆ ದಿವಸದಿ / ಮಂಗಳೋಕುಳಿಯನಾಡಿ
ಭೂಸುರಂತ । ರಂಗದಿಷ್ಟವನೆ ನೀಡಿ । ವಿನೋದದೊ । ಳಂಗನೆಯಳನು ಕೂಡಿ
ಬರುತಿರಲು ನೋಡಿ ॥
ಅಂಗಜನ ಮದದಾನೆಯಂದದಿ
ಅಂಗನೆಯರ ಸಮ್ಮೇಳದಿಂದಲಿ
ಅಂಗನಾಮಣಿ ರುಕ್ಮಿಣೀಯುತ
ರಂಗಧಾಮನ ತಡೆದು ದ್ವಾರದಿ ॥
ತಂಗಿ ಸುಭದ್ರೆ - ನುಡಿದಳು ॥ ೧ ॥

ಎಲ್ಲಿಗೆ ಗಮನವಿನ್ನು । ಅಣ್ಣಯ್ಯಕೇಳ್
ನಿಲ್ಲೊಂದು ಮಾತುಂಟನ್ನು । ಈ ಲೋಕದೊ
ಳಿಲ್ಲದ ನಡತೆಯನ್ನು । ಹೇಳಿದವನು ನೀನು ॥
ಎಲ್ಲಲೋಕಕ್ಕೊಡೆಯ ಲಕ್ಷ್ಮೀ
ವಲ್ಲಭನೆ ನೀನೊಲಿದು ಕಡುಕೃಪೆ
ಯಲ್ಲಿಯೆನಗಿಷ್ಟವನು ಈ ಕ್ಷಣ

ದಲ್ಲಿ ಪಾಲಿಸುವನಕ ಕದಬಿಡೆ ॥
ದಯಮಾಡಣ್ಣಯ್ಯ - ಶ್ರೀಕೃಷ್ಣಯ್ಯ ॥ ೨ ॥

ಬಾಗಿಲು ಬಿಡದಿರುವ ತಂಗಿ ಸೌಭದ್ರೆಯ ಮನವೊಲಿಸುವುದಕ್ಕಾಗಿ ಕೃಷ್ಣನು ಆಕೆಗೆ ವಸ್ತ್ರ ಆಭರಣ, ಆನೆ, ಕುದುರೆ, ಹಸುಗಳು ಮುಂತಾದುವುಗಳ ಆಸೆ ತೋರಿಸುತ್ತಾನೆ. 'ಅವನ್ನೆಲ್ಲ ಕೊಡುತ್ತೇನೆ ಕದಬಿಡು' ಎನ್ನುತ್ತಾನೆ. ಆದರೂ ಬಿಡಳು ಮುಂದಿನ ಸಂಬಂಧದ ಒಪ್ಪಂದಕ್ಕೆ ಮಾತ್ರ ಬಾಗಿಲ ಕದ ಬಿಡುತ್ತಾಳೆ.

ಮದುವೆ ಗೃಹಪ್ರವೇಶಗಳು ದಾಂಪತ್ಯ ಜೀವನದ ಪ್ರಾರಂಭದ ಸಮಾರಂಭಗಳು. ಇವುಗಳಿಗೆ ಸಂಬಂಧಿಸಿದ ಆಚರಣೆಗಳು ನೂರಾರು. ಎಲ್ಲವಕ್ಕೂ ಶೋಭಾನೆಗಳು. ಈ ಸಾಹಿತ್ಯ ಪರಂಪರೆವಿಡಿದು ಪ್ರಚಾರವಾಗಿ ಬಂದಿದೆ. ಇಷ್ಟೇ ಅಲ್ಲ. ವಧು ಮುಂದೆ ಋತುಮತಿಯಾಗುವಳು. ಅದಕ್ಕೂ ಸಂಬಂಧಿಸಿದ ಶೋಭಾನೆಗಳಿವೆ. ಆಕೆ ತವರು ಮನೆಯಲ್ಲಿ ಋತುಮತಿಯಾದರೆ ಗಂಡನ ಮನೆಗೂ ಗಂಡನ ಮನೆಯಲ್ಲಿ ಋತುವಾದರೆ ಅವಳ ತಾಯಿ ಮನೆಗೂ ಕೂಡಲೇ ಸುದ್ದಿ ಹೋಗಬೇಕು. ಹೋಗುವಾಗ 'ಹೂವಿನ ಕೊಟ್ಟೆ' ಕೊಂಡು ಹೋಗಬೇಕು. ಮುಂದೆ 'ದಿಂಡು' ಎಂಬ ಸಮಾರಂಭ ನಡೆಯಬೇಕು. ದಿಂಡಿನ ಹಾಡುಗಳು ಅನೇಕ. ಮತ್ತೆ ಆಕೆ ಬಸುರಿಯಾದ ಮೇಲೆ ಸೀಮಂತ ಸಮಾರಂಭ. ಈ ಸಮಾರಂಭಕ್ಕೆ 'ಕೋಡಿ' ಎಂದು ಹೆಸರು. ಅನಂತರ ಪುತ್ರೋತ್ಸವಗಳೊಂದಿಗೆ ನೆರವೇರುತ್ತದೆ. ಹುಟ್ಟಿದ ಮಗುವಿನ ಸಾಮಾಜಿಕ ಸಂಸ್ಕಾರಗಳೂ ಹಾಡಿನೊಡವೆರೆಯುತ್ತವೆ. ಮಗುವನ್ನು ತೊಟ್ಟಿಲಿಗೆ ಹಾಕುವುದು, ಗುಂಡನ್ನಿಟ್ಟು ತೂಗುವುದು. ಮುಂದೆ ಮಗುವಿಗೆ ಚವಲ, ಉಪನಯನ - ಇವೆಲ್ಲವೂ ಹಾಡುಗಳಿಂದ ಕೂಡಿದ ಸಮಾರಂಭಗಳೇ ಆಗಿವೆ. ಇಷ್ಟೇ ಅಲ್ಲ, ಮನೆಯಲ್ಲೊಂದು ಶಿವಪೂಜೆ, ಸತ್ಯನಾರಾಯಣ ಪೂಜೆ, ದುರ್ಗಾಪೂಜೆ, ಶಾರದಾ ಪೂಜೆಯಾದರೂ ಆ ಸಂಬಂಧದ ಶೋಭಾನೆಗಳನ್ನು ಹಾಡುವರು. ಹೋಮ ಕಾರ್ಯಕ್ರಮಕ್ಕೂ ಹಾಡು ಪ್ರಚಲಿತವಾದುದೇ ಆಗಿದೆ. ಪ್ರತಿಯೊಂದು ಧಾರ್ಮಿಕ ಮಂಗಲ ಕಾರ್ಯವೂ ಹೀಗೆ ಶೋಭಾನೆಗಳಿಂದ ಶೋಭಾಯಮಾನವಾಗುತ್ತದೆ. ಅವುಗಳಲ್ಲಿ ಮದುವೆಗೆ ಸಂಬಂಧಿಸಿದವನ್ನು ಮಾತ್ರ - ಅದೂ ಕೂಡ ಕೇವಲ ದಿಗ್ದರ್ಶಕವಾಗಿ ಈ ಲೇಖನದಲ್ಲಿ ತಿಳಿಸಲಾಗಿದೆ.

ಇಷ್ಟೊಂದು ಶೋಭನಗೀತ ಸಾಹಿತ್ಯವಿದ್ದಲೂ ಅದು ಮುದ್ರಿತವಾಗದೆ ಇನ್ನೂ ಕೈಬರಹದ ಪ್ರತಿಗಳಲ್ಲಿ , ಓಲೆಗರಿಗಳಲ್ಲಿ ಅಡಗಿ ಕುಳಿತಿದೆ. ನಾಶವಾಗುತ್ತಿದೆ. ಇಂದಿಗೆ ಆ ಹಾಡುಗಳನ್ನು ಕಲಿತವರು ತೀರಾ ಕಡಿಮೆ. ಅವನ್ನು ಹಾಡಬಲ್ಲವರು, ಹಾಡುವ ಕುತೂಹಲವಿದ್ದರೂ ಧಾಟಿಯನ್ನರಿತವರು ಎಲ್ಲೋ ಕೆಲವರು ಮಾತ್ರ. ಇಂದಿನ ಸಾಮಾಜಿಕ ಸಮಾರಂಭಗಳು ವಿಧಿಬದ್ಧವಾಗಿ ನಡೆಯುವುದೂ ಇಲ್ಲ. ಆದುದರಿಂದ ಶೋಭಾನೆ ಹಾಡುಗಳು ಇಂದು ತಮ್ಮ ಸ್ಥಾನ - ಮಾನಗಳನ್ನು ಕಳೆದುಕೊಂಡಿವೆ. ಅವನ್ನು ಸಂಗ್ರಹಿಸಿ ಪ್ರಕಟಿಸಿದರೆ, ಅವನ್ನು ಎಲ್ಲರಿಗೂ ದೊರೆಯುವಂತೆ ಮಾಡಿದರೆ, ಒಂದು ದೊಡ್ಡ ಸಾಹಿತ್ಯ ಸಂಪತ್ತನ್ನು ಉಳಿಸಿದಂತಾಗುತ್ತದೆ. ಈ ಹಾಡುಗಳಲ್ಲಿ ಸಂಶೋಧನ ವಿಷಯ ವಿಪುಲವಾಗಿದೆ. ನಮ್ಮ ಸಮಾಜ ಪದ್ಧತಿಗಳಿಗೆ

ಅರ್ಥವೇನು? ಅವುಗಳಲ್ಲಿ ನೆಲೆಗೊಂಡ ಸಂಸ್ಕೃತಿಯೇನು? ಸ್ವಾರಸ್ಯವೇನು? ಅನುಕರಣೀಯವೂ ಅನುಸರಣೀಯವೂ ಆದ ಅಂಶಗಳೇನು? ಎಂಬುದನ್ನರಿಯಲು ಈ ಸಾಹಿತ್ಯ ಸಾಧನವಾದೀತು. ಈ ಕುರಿತು ವಿಸ್ತೃತ ವಿವರಣೆಗಿಲ್ಲಿ ಅವಕಾಶವಿಲ್ಲ. ಸವಿಸ್ತರವೂ, ಸುವಿಸ್ತರವೂ ಆಗುವಂತೆ ವಿವರಣೆಗಳೊಂದಿಗೆ, ಅದಷ್ಟೂ ಸಮಗ್ರವೆನಿಸುವಂತೆ ಹವ್ಯಕರ ಸಮಾಜಪದ್ಧತಿಯನ್ನು ಬಿಂಬಿಸುವ ಬೃಹತ್ 'ಶೋಭನಗೀತ ಸಂಕಲನವನ್ನು' ಹೊರತರ ಬೇಕಾಗಿದೆ. ಅದಕ್ಕಾಗಿಯೇ ಅಸಂಖ್ಯ ಶೋಭಾನಗಳನ್ನು ಒಟ್ಟುಗೂಡಿಸಿರುವ ಕಾರ್ಯವೂ ತಕ್ಕಷ್ಟು ಆಗಿದೆ. ಈ ಲೇಖನವೊಂದು ದಾರಿಗಂಬ ಮಾತ್ರ.

□

೨೫

ಹವ್ಯಕ ಜನಪದ ಸಾಹಿತ್ಯ

ಕರ್ನಾಟಕದಲ್ಲಿ ಅಚ್ಚಗನ್ನಡಿಗರಾದ ಬ್ರಾಹ್ಮಣರ ಒಂದು ವರ್ಗದವರು ಹವ್ಯಕರು. ಇವರನ್ನು ಹವಿಕರೆಂದು ಕರೆಯುವರು; ಹೈಗರೆಂತಲೂ ಹೇಳುವರು. ಮೂಲತಃ ಇವರು ಉತ್ತರಹಿಂದುಸ್ತಾನದ ಅಹಿಕ್ಷೇತ್ರದವರು. ಹಿಂದೆ, ಕದಂಬರಾಜ ಮಯೂರಶರ್ಮನು (ಕ್ರಿ.ಶ. ೩೨೫-೩೪೫) ಹವ್ಯಕವ್ಯ ಧರ್ಮಾಚರಣೆಯ ಪಾಲನೆಗಾಗಿ ೩೨ ಕುಟುಂಬಗಳನ್ನು ಅಲ್ಲಿಂದ ಈ ನಾಡಿಗೆ ಕರೆತಂದನೆಂದು ಇತಿಹಾಸವಿದೆ. ಅಂತಹ ಹವ್ಯಕರು ಈಗ ಧಾರ್ಮಿಕವಾಗಿ ಶ್ರೀ ಶಂಕರಾಚಾರ್ಯರ ಶಿಷ್ಯಪರಂಪರೆಯ ಗುರುಮಠಕ್ಕೆ ಅಧೀನರು. ಕರ್ನಾಟಕರಾಜ್ಯದಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ (ಕಾಸರಗೋಡು ಭಾಗವೂ ಸೇರಿ), ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿರುತ್ತಾರೆ. ವೈದಿಕವೃತ್ತಿ ಮತ್ತು ಕೃಷಿಜೀವನ - ಅದರಲ್ಲಿಯೂ ಮುಖ್ಯವಾಗಿ ಅಡಕೆಯ ಕೃಷಿ, ಇವರಿಗೆ ಕುಲಕ್ರಮಾಗತ. ಇತರ ಎಲ್ಲಾ ಉದ್ಯೋಗಗಳಲ್ಲಿಯೂ ಅವರವರ ಪ್ರಾವೀಣ್ಯಕ್ಕೆ ಅನುಗುಣವಾಗಿ ನಿಯುಕ್ತರಾಗಿದ್ದು ಭಾರತದ ಎಲ್ಲೆಡೆಯೂ - ವಿದೇಶಗಳಲ್ಲಿಯೂ ಅಲ್ಲಲ್ಲಿ ಇವರನ್ನು ಕಾಣಬಹುದು.

ಹವ್ಯಕರ ಭಾಷೆ ಕನ್ನಡ. ಇದನ್ನು ಕನ್ನಡದ ಒಂದು ಉಪಭಾಷೆ (Dilect) ಎನ್ನಬಹುದು. ಬಹುಷಃ ಇದು ಕನ್ನಡದ ಪ್ರಾಚೀನ ರೂಪವೆಂದರೆ ತಪ್ಪಲ್ಲ ; ಪರಿಶೀಲಿಸಿದರೆ ಇದು ಗೊತ್ತಾಗಬಹುದು. ಈಗ ಇದೊಂದು ಜಾನಪದಭಾಷೆಯೂ ಹೌದು. ಈ ಭಾಷೆಯಲ್ಲಿ ವಿಪುಲ ಶಬ್ದಸಂಪತ್ತಿದೆ. ಒಳ್ಳೊಳ್ಳೆಯ ನುಡಿಗಟ್ಟುಗಳು, ಗಾದೆಗಳು, ಮಂಡೆಕತೆ (ಒಗಟು) ಗಳು, ಜಾನಪದ ಕಥೆಗಳೂ ಇವೆ. ಇವೆಲ್ಲವೂ ಸಾಹಿತ್ಯದ ಗದ್ಯಮುಖವಾದರೆ, ಪದ್ಯಮುಖವಾಗಿ ಜಾನಪದವರ್ಗಕ್ಕೆ ಸೇರುವ ಮಕ್ಕಳ ಪದಗಳು, ಆಟದ ಪದಗಳು, ವಿನೋದ ಪದಗಳು, ಯಕ್ಷಗಾನ ಪದಗಳು, ಭಜನೆ ಪದಗಳು, ಜನಜೀವನದ ಸುಖದುಃಖಗಳನ್ನು ಚಿತ್ರಿಸುವ ತ್ರಿಪದೀರೂಪದ ಬಿಡಿಹಾಡುಗಳು ಅಸಂಖ್ಯಾತವಾಗಿವೆ. ಇನ್ನೊಂದು ಬಗೆಯ ಜಾನಪದಗೀತ ಪ್ರಭೇದವಾಗಿರುವ ಶೋಭನ ಗೀತಗಳ ಅಥವಾ 'ಶೋಭಾನೆ ಹಾಡುಗಳ' ಮಹಾನಿಧಿಯೇ ಹವ್ಯಕರಲ್ಲಿದೆ! ಈಗೀಗ ಅವುಗಳ ಪ್ರಾಚುರ್ಯ ಕುಗ್ಗುತ್ತಿದ್ದರೂ ಇನ್ನೂ ಉಳಿದುಕೊಂಡ ಈ ಬಗೆಯ ಹಾಡುಗಳು ಕೆಲವು ಸಾವಿರದಷ್ಟಿವೆಯೆಂದರೆ ಅತಿಶಯೋಕ್ತಿಯಲ್ಲ. ಬರಿಯ ಸಂಖ್ಯೆಯಲ್ಲ; ಅವುಗಳ ಬಗೆಬಗೆಯ ಧಾಟಿಗಳು, ಸಾಹಿತ್ಯಾಂಶಗಳು, ಸಂಸ್ಕೃತಿಪ್ರತಿಪಾದನೆಗಳು ಅನನ್ಯವಾದುವೆಂಬುದರಲ್ಲಿ ಸಂದೇಹವಿಲ್ಲ. ಇದು ಮಹಿಳಾಗೇಯ ಸಾಹಿತ್ಯವೆನಿಸುತ್ತದೆ. ಅಂದರೆ, ಇದನ್ನು ಆಯಾ ಸಂದರ್ಭದಲ್ಲಿ ಮಹಿಳೆಯರು - ಮುತ್ತೈದೆಯರು ಹಾಗೂ ಕನ್ಯೆಯರೇ

ಹಾಡಬೇಕಾದುದು. ಆದುದರಿಂದ ಈ ವರ್ಗದ ಗೀತಗಳಿಗೆ - ಶೋಭಾನೆಗಳಿಗೆ, ಹಾಡುಗಳು ಎಂದೇ ಹೆಸರಾಗಿರುತ್ತದೆ.

ಅನೇಕರು ಶೋಭಾನೆಗಳನ್ನು ಪದಗಳು ಇಲ್ಲವೆ, ಸೋಬಾನೆ ಪದಗಳು ಎನ್ನುವುದು ಇತರ ಕಡೆ ಕಂಡುಬರುತ್ತದೆ. ಹಾಗೆಯೇ ದಾಸರ ಕೀರ್ತನೆಗಳನ್ನು 'ದಾಸರ ಹಾಡುಗಳು' ಎಂದೂ ಹೇಳುತ್ತಾರೆ. ಅಂಥವರಿಗೆ 'ಪದ' ಮತ್ತು 'ಹಾಡು' ಸಮಾನಾರ್ಥಕ! ಅದನ್ನೂ ಹಾಡುತ್ತಾರೆ. ಇದನ್ನೂ ಹಾಡುತ್ತಾರೆ ಎಂಬುದರಿಂದ ಎರಡೂ ಒಂದೇ ಅಲ್ಲವೆಂಬುದು ಹವ್ಯಕ ವಲಯದಲ್ಲಿ ನಿಶ್ಚಿತವಾಗಿರುವ ಅಂಶವಾಗಿದೆ. ಲಾಕ್ಷಣಿಕವಾಗಿ 'ಪದ' ಎಂಬುದು ತಾಳದ ಗತಿಯಿಂದ ಕೂಡಿದುದು. ಆದುದರಿಂದಲೇ ದಾಸರ ಪದ, ಯಕ್ಷಗಾನಪದ, ಭಜನೆ ಪದ, ತುಂಡು ಪದವೆನಿಸುತ್ತದೆ. ಹವ್ಯಕರದಲ್ಲಿ 'ಪದ' ಎಂಬುದು ಗಂಡುಸರ ಹಾಡು ಎಂತಲೂ 'ಹಾಡು' ಎಂಬುದು ಹೆಂಗುಸರು ಹಾಡುವಂಥದು ಎಂತಲೂ ಪ್ರಚಲಿತವಾಗಿರುತ್ತದೆ. ಹಾಡಿಗೆ ತಾಳದ ಗತಿಯಿರಬಹುದಾದರೂ ತಾಳದ ವಾದನವಿರುವುದಿಲ್ಲ. ಅದಲ್ಲದೆ, ಒಂದೇ ಹಾಡಿನ ಸೊಲ್ಲು ವಿಲಂಬಿತ, ಮಧ್ಯಮ, ಮತ್ತು ದ್ರುತಗತಿಯುಳ್ಳದಾಗಿಯೂ ಇರುವುದರಿಂದ ತಾಳಹಾಕದೆ ಹಾಡುವುದೇ ರೂಢಿವಡೆದಿರುತ್ತದೆ.

ಈ ಹವ್ಯಕಬಾಷೆ ಪ್ರದೇಶಾನುಗುಣವಾದ ರೂಪವ್ಯತ್ಯಾಸಗಳಿಂದ ಕೂಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕರ ಮಾತು ಒಂದು ತೆರನಾದರೆ, ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ ಕಡೆಯದು, ಪರಸ್ಪರ ಅರ್ಥವಾಗುವಂತಿದ್ದರೂ ವ್ಯತ್ಯಾಸಗಳಿಂದ ಕೂಡಿಯೇ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯೊಳಗೆ ಕೂಡ, ಸೀಮೆಗನುಗುಣವಾಗಿ ಭಿನ್ನತೆಗಳು ಇದ್ದೇ ಇವೆ. ಜಾನಪದಲಕ್ಷಣಕ್ಕೆ ಅನುಗುಣವಾಗಿ ಇಂತಹ ವ್ಯತ್ಯಾಸ ಸಹಜ. ಬಲುಮಟ್ಟಿಗೆ ಶೋಭಾನೆಗಳು—ಯುಕ್ಷಗಾನಪದ, ದಾಸರ ಪದಗಳಂತೆ ಶಿಷ್ಟಭಾಷೆಗೆ ಸಮೀಪವಿರುತ್ತದೆ. ಎಲ್. ಗುಂಡಪ್ಪನವರಿಂದ ಸಂಪಾದಿತವಾಗಿ ಪ್ರಕಾಶಿತವಾಗಿರುವ 'ನಾಡ ಪದಗಳು' ಎಂಬ ಕೃತಿಗೆ ಬರೆದ ಮುನ್ನುಡಿಯಲ್ಲಿ ಬಿ.ಎಂ. ಶ್ರೀಯವರು ಹೀಗೆಂದಿದ್ದಾರೆ -

"ಹವ್ಯಕ ಜನಪದಸಾಹಿತ್ಯ ಎಂಬೀ ವರ್ಗದಲ್ಲಿ ಬರುವ ಎಲ್ಲವೂ ಹವ್ಯಕಭಾಷೆಯಲ್ಲಿ ಇವೆ ಎನ್ನಲು ಬರುವುದಿಲ್ಲ. ಆದುದರಿಂದ ಇದಕ್ಕೆ ಅರ್ಥವನ್ನು ಸ್ವಲ್ಪ ವ್ಯಾಪಕವಾಗಿಯೇ ಮಾಡಿಕೊಳ್ಳಬೇಕಾಗಿದೆ - ಹವ್ಯಕರ ಜನಜೀವನ ಸಂಸ್ಕೃತಿಗಳನ್ನು ಚಿತ್ರಿಸುವ ಜನಪದಗೀತಗಳು, ಹವ್ಯಕರಲ್ಲಿ ಪ್ರಚಲಿತವಾಗಿರುವುವು, ಹಾಗೂ ಹವ್ಯಕಭಾಷೆಯಲ್ಲಿಯೂ ಇರತಕ್ಕವು - ಎಂದು ವ್ಯಾಪ್ತಿಯನ್ನು ಪರಿಗಣಿಸಬೇಕಾಗುತ್ತದೆ". ಬಿ.ಎಂ. ಶ್ರೀಯವರ ಈ ಮಾತು ಪ್ರಸ್ತುತ ಪ್ರಬಂಧಕ್ಕೂ ಅನ್ವಯಿಸುವುದೆಂದು ತಿಳಿಸಲು ಬಯಸುತ್ತೇನೆ. ಇನ್ನೀಗ ಹವ್ಯಕ ಜನಪದಸಾಹಿತ್ಯದ ಗದ್ಯಮುಖ ಪದ್ಯಮುಖಗಳನ್ನು ಕೆಲಮಟ್ಟಿಗೆ ಅವಲೋಕಿಸಬಹುದು -

ಗದ್ಯಮುಖ : ಈ ಪ್ರಕಾರದ ಸಾಹಿತ್ಯವನ್ನು ನುಡಿಗಟ್ಟು, ಗಾದೆ, ಮಂಡೆಕತೆ ಮತ್ತು ಕತೆಗಳು ಎಂದು ವರ್ಗೀಕರಿಸಬಹುದು. ಆದರೆ ಇವೆಲ್ಲವುಗಳಲ್ಲಿಯೂ ಜಿಲ್ಲೆಗನುಗುಣವಾಗಿ, ಸೀಮೆಗನುಗುಣವಾಗಿ ಭಾಷಾರೂಪವ್ಯತ್ಯಾಸವೆಲ್ಲವನ್ನೂ ಇಲ್ಲಿ ಅನುಲಕ್ಷಿಸಲಾಗುವುದಿಲ್ಲ.

ದಿಗ್ದರ್ಶಕವಾಗಿ ಮಾತ್ರ ಕೆಲವೇ ಉದಾಹರಣೆಗಳನ್ನು ಕೊಡಬಹುದಾಗಿದೆ. ಕೆಲವು ನುಡಿಗಟ್ಟುಗಳು- 'ಅವಂಗೆ ಬೆನ್ನು ಬೇಡುತ್ತು' (ಅವನಿಗೆ ಬೆನ್ನು ಬೇಡುತ್ತಿದೆ) - ಅವನು ಏಟುತಿನ್ನಲು ತಕ್ಕುದಾದ ತಪ್ಪುಮಾಡುತ್ತಿದ್ದಾನೆ - ಎಂದು ಇದರ ಅರ್ಥ. 'ಕಣ್ಣಡ್ಡ ಹೋಪಾಗ ನೀನು ಬಂದೆ ' - ನನಗೆ ನಿದ್ದೆ ಹತ್ತುವ ವೇಳೆಗೆ ನೀನು ಬಂದಿರುವೆ ಎಂದು ಇದರ ಅರ್ಥ.'ಅವಂಗೆ ಕೊಡ್ಲೆ ಕೈ ಬಾರ'- ಅವನು ಯಾರಿಗೂ ಏನೂ ಕೊಡದಿರುವ ಜಿಪುಣ ಎಂದು ಇದರ ಅರ್ಥ. 'ಅಳ್ಳೆ ಕುತ್ತುತ್ತು'- ಮತ್ಸರವಾಗುತ್ತಿದೆ ಎಂದರ್ಥ. ಇಂಥವು ಹವಿಕರ ಬಳಕೆಯಲ್ಲಿ ಎಷ್ಟೂ ಇವೆ. ಇವಿಲ್ಲಿ ದಿಗ್ದರ್ಶಕ ಉದಾಹರಣೆಗಳು.

ಗಾದೆಗಳು : 'ಖರ್ಜೂರ ಹಣ್ಣಪ್ಪಾದ ಕಾಕೆಗೆ ಬಾಯಿಹುಣ್ಣು' (ಖರ್ಜೂರ ಹಣ್ಣಾಗುವಾಗ ಕಾಗೆಗೆ ಬಾಯಿ ಹುಣ್ಣು) ಅನುಕೂಲ ಪರಿಸ್ಥಿತಿ ಬಂದರೂ ಅದನ್ನು ಸ್ವಪ್ರಯೋಜನಕ್ಕೆ ತರಲು ಅಸಮರ್ಥತೆ. 'ಕವುಂಚಿ ಬಿದ್ದರೂ ಮೂಗು ಮೇಲೆ' - ಸೋತರೂ ಸೋಲನ್ನು ಒಪ್ಪದಿರುವಿಕೆಯ ಸಂದರ್ಭದಲ್ಲಿ ಇದನ್ನು ಬಳಸಲಾಗುತ್ತಿದೆ. 'ಅವಂಗೆ ಮಾತು ಮಾರುದ್ದ. ಕೈ ಚೋಟುದ್ದ' - ಅವನು ಮಾತಿನಂತೆ ನಡೆದುಕೊಳ್ಳದವನು ಎಂಬರ್ಥದಲ್ಲಿ. 'ಉರಿಮೂಡೆ ಗೆಜ್ಜಳ್ಸಿದ ಹಾಂಗೆ'- ಪರಿಸ್ಥಿತಿಯನ್ನು ಹದಗೆಡಿಸಿದ ಸಂದರ್ಭದಲ್ಲಿ ಹೇಳತಕ್ಕ ಗಾದೆ. 'ಶಕ್ಕರೆಗೆ ಸೀವು ಕಲಿಸಿದ ಹಾಂಗೆ' - (ಸಕ್ಕರೆಗೆ ಸಿಹಿಯನ್ನು ಕಲಿಸಿದ ಹಾಗೆ) ಬಲ್ಲವನಿಗೆ ಹೇಳಿಕೊಡುವುದು ಅನವಶ್ಯ ಎಂಬಲ್ಲಿ ಇದರ ಪ್ರಯೋಗ. 'ಕಂಬಕ್ಕೆ ಸುತ್ತ ಬಂದ ಹಾಂಗೆ' - ಕೊನೆಗೊಳ್ಳದ ವ್ಯರ್ಥಕಾರ್ಯ ಎಂಬರ್ಥದಲ್ಲಿ ಇದರ ಬಳಕೆ. ಕೆಲವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಮಂಡೆಕತೆ: ಒಗಟು ಅಥವಾ ಮುಂಡಿಗೆ ಎಂದು ಸಾಹಿತ್ಯದಲ್ಲಿ ಹೇಳಲಾಗಿರುವ ಪ್ರಕಾರವನ್ನು ಹವ್ಯಕರು ಮುಖ್ಯವಾಗಿ ದ.ಕ. ಜಿಲ್ಲೆಯವರು 'ಮಂಡೆಕತೆ' ಎನ್ನುವರು. ಅದರ ನಿಜಾರ್ಥವು ಒಡನೆಯೇ ಹೊಳೆಯದೆ (ಮಂಡೆಯಾಗಿ, ಬಡ್ಡಾಗಿ) ಇರುವುದೇ 'ಮಂಡೆಕತೆ' ಎನ್ನಲು ಕಾರಣವಾಗುತ್ತದೆ. ಕೆಲವು ಉದಾಹರಣೆಗಳಿವು; 'ತಲೆ ಕೆಳ, ಕಾಲು ಮೇಲೆ, ಇದರ ಅರ್ಥ ಸಿಕ್ಕ' (=ನೆಲುವು). ನೆಲುವಿನ ಹಗ್ಗ ಮೇಲು ಗಡೆ ಮತ್ತು ಅದರ ತಲೆ ಕೆಳಗಿರುತ್ತದೆ. ನೆಲುವಿಗೆ ಹವ್ಯಕ ಭಾಷೆಯಲ್ಲಿ 'ಸಿಕ್ಕ' ಎನ್ನುವರು. ಸಿಗಲಾರದು ಎಂದೂ ಅರ್ಥವಿದೆ. ಮಾತಿನ ಧ್ವನಿಯಲ್ಲಿ 'ಸಿಗಲಾರದು' ಎಂದುದಾಗಿ ಭಾಸವಾಗುವುದು. ಹೀಗೆ ಇದೊಂದು ಜಾಣ್ಮೆಯ ಒಗಟಾಗಿರುತ್ತದೆ. ಪ್ರಶ್ನೆಯಲ್ಲೇ ಉತ್ತರವಿರುವುದರಿಂದ ಅಲಂಕಾರಶಾಸ್ತ್ರದಲ್ಲಿ ಇಂತಹ ನಿರೂಪಣೆಯನ್ನು 'ಚಿತ್ರಾಲಂಕಾರ' ಎನ್ನುವರು. 'ಗೆಡು ಮೇಲೆ ಹಣ್ಣು, ಹಣ್ಣ ಮೇಲೆ ಗೆಡು' (ಗಿಡದ ಮೇಲೆ ಹಣ್ಣು, ಹಣ್ಣಿನ ಮೇಲೆ ಗಿಡ) ಅಂದರೆ ಅನಾನಾಸು. 'ಒಳ ತಿಂದು ಹೆರ ಇಡುಕ್ಕುದು, ಹೆರ ತಿಂದು ಒಳ ಇಡುಕ್ಕುದು' ಅಂದರೆ - ತೆಂಗಿನ ಕಾಯಿ ಮತ್ತು ಮಾವಿನ ಕಾಯಿ. ಇಂಥವು ಇನ್ನೆಷ್ಟೂ ಇವೆ.

ಕತೆಗಳು: ಹವ್ಯಕರ ಜಾನಪದ ಕತೆಗಳು ಇನ್ನೂ ಬೆಳಕು ಕಾಣದವು ಎಷ್ಟೋ ಇದ್ದವು ಈಗ ಮರೆಯಾಗಿವೆ. ಬಳಕೆ ತಪ್ಪಿರುವುದೇ ಇದಕ್ಕೆ ಕಾರಣ. ಉಳಿದಿರುವುವು ಕೂಡ, ಬೆಳಕಿಗಾಗಿ ಕಾದಿವೆಯೆಂದರೆ ತಪ್ಪಿಲ್ಲ. "ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಜನಪದ ಕತೆಗಳು" ಎಂಬೊಂದು

ಪುಸ್ತಕ ಶಾಂತಿ ನಾಯಕ ಎಂಬವರಿಂದ ಸಂಪಾದಿತವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ (ಬೆಳ್ಳಿ ಬಿಟ್ಟ ಬಳ್ಳಿ ಮಾಲೆ ೩೩) ೧೯೮೧ ರಲ್ಲಿ ಪ್ರಕಟವಾಗಿದೆ. ಇದರಲ್ಲಿ ೬೩ ಕತೆಗಳಿವೆ. ಈ ಕತೆಗಳನ್ನು ಆ ಕಡೆಯ ಹವ್ಯಕರ ಆಡುಮಾತಿನಲ್ಲಿ ಕೊಡಲಾಗಿದೆ. ಅವುಗಳಂತೆಯೇ ದ.ಕ. ಜಿಲ್ಲೆಯ ಕಡೆಯೂ ಸುಟ್ಟವಿನ ಕತೆ, ಜನಿವಾರದ ಕತೆ ಮುಂತಾದ ಅನೇಕ ಕತೆಗಳಿದ್ದವು. ಅವುಗಳಲ್ಲಿ ರಾಜ ರಾಣಿಯರು, ಅತ್ತೆಸೊಸೆಯರು, ತಂದೆ ಮಕ್ಕಳು ಮಾತ್ರವಲ್ಲದೆ ಪ್ರಾಣಿ ಪಕ್ಷಿಗಳೂ ಮರ ಗಿಡಗಳೂ ಮಾತಾಡುತ್ತವೆ. ಮಲತಾಯಿ ಮಕ್ಕಳ ದ್ವೇಷಾಸೂಯೆಗಳ ಹೃದಯದ್ರಾವಕ ಹಾಗೂ ರಂಜಕ ಚಿತ್ರಣಗಳಿರುತ್ತವೆ. ಒಳ್ಳೆಯ ನೀತಿಬೋಧೆಯೂ ಇರುತ್ತದೆ. ಇನ್ನಿಲ್ಲಿ, ಹವ್ಯಕ ಜನಪದ ಸಾಹಿತ್ಯದ ಪದ್ಯಮುಖವನ್ನು ಅವಲೋಕಿಸಲಾಗುವುದು. ಇವನ್ನು ಹವ್ಯಕರ ಜನಪದಗೀತಗಳು ಎನ್ನಬಹುದು. ಇವನ್ನು ಇಲ್ಲಿ ವಿನೋದದ ಪದಗಳು, ಮಕ್ಕಳ ಹಾಡುಗಳು, ಬಾಂಧವ್ಯದ ಹಾಡುಗಳು, ಕೆಲಸದ ಹಾಡುಗಳು, ಶೋಭಾನೆ ಹಾಡುಗಳು ಎಂದು ಸ್ಥೂಲವಾಗಿ ಪರಿಗಣಿಸಬಹುದು. ವಿನೋದದ, ಆದರೆ ನಿಜದ ಬದುಕಿನ ಚಿತ್ರಣವುಳ್ಳ ಯಕ್ಷಗಾನದ ಮಟ್ಟಿನ ಪದ ಹೀಗಿದೆ -

ಮಾರವಿ - ಏಕತಾಳ

ಕುಂಡೆಚ್ಚನ ಹಟದಿಂದಲಿ ನಮಗೊಂದು
ಖಂಡ್ಯಡಕೆಯು ನಷ್ಟಾ
ಕಂಡರೆ ಕಣ್ ಹಾರುಗು ಬಿದ್ದುರುವೆಯ
ಮುಂಡಗಳೆಷ್ಟೆಷ್ಟೋ.

ಕೇತಾರಗೌಳ - ಅಷ್ಟತಾಳ

ಕೊಳೆರೋಗ ಬಾರದ್ದ ಹಾಂಗೆ ಮದ್ದಿನ ಬಿಡ್ತು
ಬೆಳಿಕ್ರೀನ ನೋಡಿಕೊಂಡು
ಬೆಳೆವಾಗ ಕೊನೆಯೀಗ ಬಂತನ್ನೆ ಕುಂಡೆಚ್ಚಂ
ಗಳ ಮಾರಿಗಳ ಹಾವಳಿ

ಹೀಂಗೊಂದು ಉರುವೆಯ ತಿಂದರೆ ಕುಂಡೆಚ್ಚ
ಹೇಂಗಪ್ಪ ಬದುಕುವದು?
ಎಂಗೋಗೆ ಗೊಂತಾವುತಿಲ್ಲೆನ್ನೆ ರಾಮದೇ
ವ್ರಂಗೆ ಹರಕೆ ಹೇಳ್ವನೋ

ಕೆಟ್ಟ ಕುಂಡೆಚ್ಚಂಗೊ ಉರುವೆಯ ತಿಂಬದು
ಬಟ್ಟರೆ ಮಲರಾಯಂಗೆ
ಒಟ್ರಾಗಿ ಗ್ರಾಮದೋರೀ ವರ್ಷ ನೇಮವ
ಕೊಟ್ಟುಬಿಡುವೊ ಗೊಂತಾತೋ?

ಇಲ್ಲಿ 'ಉರುವೆ' ಎಂದರೆ ಅಡಕೆಯ ಹೀಚುಗಾಯಿ. ಕುಂಡೆಚ್ಚ ಎಂದರೆ ಅಳಿಲು. ಧಾರವಾಡದ ಕಡೆ ಇಣಚಿ ಎನ್ನುತ್ತಾರೆ. ಅಳಿಲುಗಳು ಉರುವೆಗಳನ್ನೆಲ್ಲ ತಿಂದುಹಾಕುವ ಕಾಟ

ಸಹಿಸಲಾರದ ಹವ್ಯಕರ ಗೋಳು ಇಲ್ಲಿ ವರ್ಣಿತವಾಗಿದೆ. ಇನ್ನೀಗ ಮಕ್ಕಳ ಹಾಡುಗಳನ್ನು ನೋಡೋಣ:

ಮಗು ಎಂದರೆ, ಮನೆಯಲ್ಲಿ ಮೂಡಿದ ಹೊಸಬೆಳಕು. ತಂದೆ ತಾಯಿಗಳಿಗೆ, ಅಣ್ಣತಮ್ಮ ಅಕ್ಕ ತಂಗಿಯರಿಗೆ, ಬಂಧುಬಳಗಕ್ಕೆಲ್ಲ ಅದೊಂದು ಆನಂದದ ಮಡು. ಆದುದರಿಂದ ಮಗುವನ್ನು ಮುದ್ದು ಮಾಡದವರಿಲ್ಲ. ಮುಟ್ಟಿ, ಮೂಸಿ, ಹಿಡಿದು, ಮುದ್ದಿಟ್ಟು, ಚಪ್ಪರಿಸಿ, ಎತ್ತಿ, ಆಡಿ, ಹಾಡಿ, ಮಾತಾಡಿ ನಕ್ಕುನಲಿಯದವರಿಲ್ಲ. ಮಹಾಕವಿ ರುದ್ರಭಟ್ಟನು ಮಗುವನ್ನು ಹೀಗೆ ಪ್ರಸ್ತಾವಿಸಿದ್ದಾನೆ -

ಕಳಹಂಸಂ ಸುಳಿಯದ ಪೂ
ಗೊಳನಮೃತಮರೀಚಿಯಿಲ್ಲದಂಬರ ಚಕ್ರಂ
ಕಳಭಂ ಸಂಚರಿಸದ ವನ
ವಳಯಂ ಸುತನಾಡದಂಗಳಂ ರಂಜಿಕುಮೇ (೨-೬೬)

ಅಜ್ಞಾತ ಜಾನಪದ ಕವಿಯ ಹಾಡಿನ ನುಡಿಯೊಂದು ಹೀಗಿದೆ -

ಎನ್ನ ಮಾಣಿಯ ಹಾಂಗೆ । ಇನ್ನೆರಡು ಮಾಣ್ಯಂಗೊ
ಚೆನ್ನಕೇಶವನ ಗುಡಿಯಲ್ಲಿ - ಬಪ್ಪಾಗ
ಸನ್ಯಾಸಿ ಪೂಜೆ - ಮರೆದಿಕ್ಕು.

ಅಂತಹ ಮಗುವನ್ನು ಲಾಲನೆ ಮಾಡುವ ವೇಳೆಗೆ ಹಲವಾರು ಹಾಡುಗಳು ಬೇಕಾಗುತ್ತವೆ. ತೊಟ್ಟಿಲ ತೂಗುವ ಕೆಲವು ಹಾಡುಗಳಿವೆ. ಅವುಗಳಲ್ಲಿ ನೀತಿಯಿದೆ; ಪ್ರೀತಿಯಿದೆ. ಮಗನೆಂದರೆ ಸಾಕಾಗುತ್ತಿತ್ತು. ಅದರೆ ಇಲ್ಲಿ ಅವನು ಅಬ್ಬೆಯ ಮಗ ! ಅಬ್ಬೆಯ ಮಗನು ಬಂದಾಗ, ಅವನಿಗೆ ಸನ್ಮಾನವೂ ಸಲ್ಲಬೇಕಲ್ಲವೇ? ಹಾಡಿನಲ್ಲಿ ನೋಡಿ : (ಇದು ಅಕ್ಕನ ಮಾತಿನಂತಿದೆ)

ಅಬ್ಬೆಯ ಮಗ ಬಂದ । ಅಬ್ಬಿಲಿ ನೀರಿಲ್ಲೆ
ಕಬ್ಬಿನ ಕೋಲ ಎಸರ್ ಹಿಂಡಿ - ಪಾಯಸ ಮಾಡಿ
ಅಬ್ಬೆಯ ಮಗನ - ಉಣಲ್ಹೇಳಿ

ಮನೆಗೆ ಬಂದೊಡನೆ ಮೊತ್ತಮೊದಲು ಕಾಲ್ತೊಳೆಯಲು ನೀರನ್ನು ಕೊಡಬೇಕು. ಆದರೆ, ಅಬ್ಬಿಯಲ್ಲಿ (ಎತ್ತರದಿಂದ ದಂಬೆಯಲ್ಲಿ ಬೀಳುವ ನೀರು ಇರುವ ಸ್ಥಳ) ಯಾಕೋ ನೀರಿಲ್ಲವಾಗಿದೆ. ಆದುದರಿಂದ ಬಾವಿಯಿಂದ ಅಥವಾ ಹತ್ತಿರದ ಕೆರೆಯಿಂದ ಬೇಗ ನೀರು ತನ್ನಿ ಎಂಬ ಸೂಚನೆಯ ಧ್ವನಿ ಈ ಮಾತಿನದು. ಸರಿ. ಕಾಲ್ತೊಳೆಯುವುದು, ಮೀಯುವುದು ಇವೆಲ್ಲ ಬಾಹ್ಯಸನ್ಮಾನಗಳು. ನಿಜವಾದ ಪ್ರೀತಿಸನ್ಮಾನವೆಂದರೆ ಪಾಯಸ ಮಾಡಿ ಊಟಕ್ಕೆ ಕರೆಯುವುದಾಗಿರುತ್ತದೆ. ಆದರೆ, ಬಡವರ ಮನೆ ! ಪಾಯಸಮಾಡಲು ಸಕ್ಕರೆಯಿಲ್ಲ, ಬೆಲ್ಲವೂ ಇಲ್ಲ, ಆದರೇನು? ಕಬ್ಬಿನ ಜಲ್ಲೆಗಳಿವೆ. ಕಬ್ಬುಬೆಳಸುವವರಿವರು. ಅವನ್ನು ಹಿಂಡಿ ರಸತೆಗೆದು ಪಾಯಸಮಾಡಿ ಸತ್ಕರಿಸುವುದನ್ನು ಇಲ್ಲಿ ಹೇಳಿದೆ. ಇಷ್ಟೊಂದು ಚಿಕ್ಕ ತ್ರಿಪದಿಯ ಸೊಲ್ಲಿನಲ್ಲಿ ತಾಯಿಯ ಮಗನ

ಮೇಲಣ ಪ್ರೀತಿ, ಸತ್ಕರಿಸುವ ತವಕ, ಬಡತನವಿದ್ದರೂ ಮನದ ಶ್ರೀಮಂತಿಕೆ ಇವೆಲ್ಲವೂ ಚಿತ್ರಿತವಾಗಿರುವುದನ್ನು ಭಾವದೃಷ್ಟಿಯಿಂದ ಕಾಣಬೇಕು.

ಮಗು ಅಳುವುದು ಸಹಜ. ಅದಕ್ಕೆ ಏನು ಹೇಳಬೇಕು? ಹೇಳಿದರೆ ಅರ್ಥವಾಗಲಿ, ಆಗದಿರಲಿ, ಹೇಳದಿರಲಾಗುವುದೇ ? ಇಂದು ಅರ್ಥವಾಗದಿದ್ದರೇನು? ಮುಂದೆ ಮಹಾಮೇಧಾವಿಯಾಗಬಹುದು. ಲೋಕಕ್ಕೇ ಮಾರ್ಗದರ್ಶಕನಾಗಬಹುದು. ಹಾಡು ಹೀಗಿದೆ-

ಏಕಳ್ವೇ ಏ ಮಾಣಿ । ಲೋಕಾಳ್ವೇ ನಿನ್ನ ಮಾವ
ತೂಕದುಂಗಿಲಿನ ಹಿರಿಯಪ್ಪ - ಕೇಳಿದ್ರೆ
ಬೇಕಾದ ವಸ್ತು - ತರಿಸುಗು (ಮಾಣಿ - ಗಂಡುಮಗು)

ಮಗು, ನೀನು ಏಕೆ ಅಳುವೆ? ಮುಂದೆ ನೀನು ಲೋಕದ ಅಳುವನ್ನೇ ನಿಲ್ಲಿಸತಕ್ಕ ಮಹಾತ್ಮನಾಗುವವನು. ಈಗ ನಿನಗೆ ಬೇಕಾದುದನ್ನು ಕೊಡುವವರಿದ್ದಾರೆ. ನಿನ್ನ ಮಾವನಿದ್ದಾನೆ. ಅದಲ್ಲದೆ, ಒಳ್ಳೆಯ ತೂಕವುಳ್ಳ ಉಂಗುರವನ್ನಿಟ್ಟು ಕೊಂಡಿರುವ ಹಿರಿಯನಾದ ಅಪ್ಪನಿದ್ದಾನೆ. ಅವರು ನಿನಗೆ ಬೇಕಾದುದನ್ನು ತರಿಸಿಕೊಡುವವರು - ಎಂಬ ಸಾಂತ್ವನ ಅರ್ಥಗರ್ಭಿತವಾಗಿದೆ. ಈ ಮಾತು ಅರ್ಥವಾದರೆ ಮಗು ಅಳುವುದನ್ನು ನಿಲ್ಲಿಸಬೇಕಲ್ಲವೇ? ಆದರೆ, ಅದು ಅಳುವನ್ನು ನಿಲ್ಲಿಸುವುದಿಲ್ಲ. ಹಾಗಾದರೆ ಸ್ವಲ್ಪ ಭಯ ಹುಟ್ಟಿಸಿ ನೋಡಬೇಕು. ಅದಕ್ಕಾಗಿ ಈ ಹಾಡಿದೆ -

ಮರುಗುವ ಮಕ್ಕಳ । ಆರಸ ಕೊಂಡೋಡಿತ್ತು
ಅರಸುತ್ತ ಬಕ್ಕು ನಿನ್ನ ಮಾವ - ಬಂದರೆ
ಅರಸನ ಗಾಥ - ಇಳಿಸುಗು.

'ಅರಸ' ಎಂದು ಓರ್ವ ಬಿಲ್ಲವನ ಹೆಸರು. ಆತ ದಷ್ಟಪುಷ್ಟವಾಗಿ ಕಾಣಲು ಭಯಂಕರನು. ಮಕ್ಕಳು ಅವನನ್ನು ಕಂಡೊಡನೆ ಹೆದರುವರು. ಅಳುವ ಮಕ್ಕಳನ್ನು ಈಗಲೇ ಅವನು ಕೊಂಡು ಓಡಿ ಹೋಗಿದ್ದಾನೆ. ಹಾಗೆಯೇ ನಿನ್ನನ್ನೂ ಕೊಂಡು ಹೋಗಬಹುದು - ಎನ್ನುವಷ್ಟರಲ್ಲಿ ಮಗು ಹೆದರಿ, ಅಳುವನ್ನು ನಿಲ್ಲಿಸಿರಬೇಕು. ಈಗ ಮಗುವಿನ ಭಯಪರಿಹಾರವಾಗಬೇಕು. ಅದಕ್ಕಾಗಿ ಮುಂದಿನ ಮಾತು 'ನಿನ್ನ ಮಾವ ಸಾಮಾನ್ಯನಲ್ಲ; ಆ ಅರಸನಿಗಿಂತ ಶೂರನು. ನಿನ್ನ ಮೇಲೆ ಅರಸನು ಕೈ ಮಾಡಿದರೆ, ನಿನ್ನ ಮಾವನು ಅರಸನನ್ನೇ ಹಿಡಿದು, ಬಡಿದು, ಅವನ ಗರ್ವಾಪಹಾರಮಾಡುವನು. ಎಷ್ಟೊಂದು ಅರ್ಥವತ್ತಾಗಿದೆ! ಹೆಣ್ಣು ಮಗುವನ್ನು ಕುರಿತ ಅರ್ಥವತ್ತಾದ ಒಂದು ಹಾಡಿನ ನುಡಿ ಇಂತಿದೆ -

ಕೂಸು ಕುಞ್ಞಿ ಕ್ಕನ ದೂರೆಲ್ಯೊ ಕೊಡಲಾಗ
ಮೂಡಲದೂರ ಕುವರಂಗೆ - ಕೊಟ್ಟರೆ
ದೋಸೆ ಕಾಯಹಾಲು - ತಿನಲಕ್ಕು

ಹೆಣ್ಣುಮಗುವೆಂದೊಡನೆ, ಅವಳೆಷ್ಟೇ ಚಿಕ್ಕವಳಿರಲಿ, ಅವಳನ್ನೆಲ್ಲಿಗೆ ಕೊಡುವುದೆಂಬುದೇ ಹಿರಿಯರ ಯೋಚನೆ. ಅದಕ್ಕೆ ತಕ್ಕ ನಿರ್ಣಯ, ಆ ನಿರ್ಣಯದಂತೆ ಮದುವೆ ಮಾಡಿಕೊಟ್ಟರೆ,

ಆಕೆ ಅಲ್ಲಿ ದೋಸೆ ಮಾಡಿ ಅದಕ್ಕೆ ಕಾಯಿಹಾಲು ಬೆರಸಿ ಸವಿಯಾಗಿ ಉಂಡುಕೊಂಡು ಸುಖವಾಗಿರಬಹುದು — ಎಂದಿಲ್ಲಿ ಹೇಳಿದೆ.

ಮಗು ಸ್ವಲ್ಪ ದೊಡ್ಡದಾಯ್ತೆಂದರೆ, ಅದರ ಚಟುವಟಿಕೆಗಳನ್ನು ಹೆಚ್ಚಿಸುವ ಪದಗಳು ಪ್ರಯೋಗಗೊಳ್ಳುತ್ತವೆ. ಅಂಥವುಗಳಲ್ಲಿ - ತಾ ತಾ ಗುಬ್ಬಿ, ಆನೆಯಾಡುವುದು, ತೋಳಿನಾಟ, ಮಗು ಇನ್ನೂ ದೊಡ್ಡವನಾದಾಗ ಕೈಮಡುಗುವ ಆಟ, ತಿರುಗುವ ಆಟ ಮುಂತಾದವು ಹವ್ಯಕರಲ್ಲಿ ಪ್ರಚಲಿತವಿವೆ. ಅವುಗಳಿಗೆಲ್ಲ ಪದ (ಹಾಡು) ಗಳಿವೆ. ಮಗು ಕುಳಿತುಕೊಂಡಿದ್ದಾಗ ತನ್ನ ಅಂಗೈಯನ್ನು ಮುಚ್ಚಿ ತೆರೆದು ಮಾಡುತ್ತದೆ. ಅದಕ್ಕಿರುವ ಪದ 'ತಾತಾ ಗುಬ್ಬಿ' ಅದು ಹೀಗೆ—

ತಾ ತಾ ಗುಬ್ಬಿ ತಾವೊನ್ನ ಗುಬ್ಬೀ
ಮುಚ್ಚೀಲು ತೆಗೆದರೆ ಮುನ್ನೂರು ಗುಬ್ಬೀ
ಜೆಗಲೀಲಿ ಎಲ್ಲಾ ಆಡುವ ಗುಬ್ಬೀ
ಜಾಲ ಮೇಗೆಲ್ಲಾ ನಡೆಯುವ ಗುಬ್ಬೀ

ಗುಬ್ಬಿ ಎಂದರೆ ಗುಬ್ಬಚ್ಚಿ. ಅದು ಬಲುಚಿಕ್ಕ ಹಕ್ಕಿ. ಎಳಮಗುವಿಗೆ ಸಂವಾದಿ. ಜಾಲು ಎಂದರೆ ಅಂಗಳ. ಮುಚ್ಚೀಲು ಅಂದರೆ ಮುಚ್ಚಳ. ಆನೆಯಾಡುವ ಹಾಡು ಹೀಗಿದೆ -

ಆನೆ ಆನೆ ಆನೇ । ಆನೆಬಂತೊಂದಾನೇ
ಅದು ಯಾವೂರ ಆನೆ? । ಆನೆಯೇಕೆ ಬಂತು?
ತೋಟಕೆ ನುಗ್ಗೀ ಬಂತು । ಮಕ್ಕಳ ಮುಂದೆ ಬಂತು

ಇನ್ನೊಂದು ಬಗೆಯ ಆನೆ ಹಾಡು ಹೀಗಿದೆ -

ಆನೇ ಆನೇ ಆನೇ ।।ಪಲ್ಲವಿ।।
ವಿಟ್ಟಲದೇವರ ಪುಟ್ಟಾನೇ
ಕೊಳ್ಳೂರ ದೇವರ ಕೊಂಬಾನೇ
ಮದವೂರ ದೇವರ ಮದ್ದಾನೇ

ಹೀಗೆ ಈ ಸೊಲ್ಲುಗಳನ್ನು ದೊಡ್ಡವರು ಹೇಳುತ್ತಿರುವಾಗ ಕುಳಿತುಕೊಂಡಿದ್ದ ಮಗುವನ್ನು ಮುಂದೆ ಮತ್ತು ಹಿಂದೆ ದೇಹವನ್ನು ಬಾಗಿಸುವಂತೆ ಪ್ರೇರಿಸಲಾಗುವುದು. ಹೀಗೆ ಮಗು ಬಾಗುವುದನ್ನೇ ಆನೆಯಾಡುವುದು ಎನ್ನಲಾಗುತ್ತದೆ. ಮುಂದಿನದು ತೋಳಾಟ. ಅದನ್ನು ಹೇಳುವಾಗ ಮಗು ತನ್ನ ಎರಡೂ ತೋಳುಗಳನ್ನು ಬೀಸಲು ಪ್ರೇರಿಸಲಾಗುತ್ತದೆ -

ತೋಳು ತೋಳು ತೋಳು
ತೋಳನಾಡಿ ಬಪ್ಪಾಗ । ಕಾಳು ಬೊಗ್ಗ ಕಚ್ಚತ್ತು
ಮದ್ದು ತಾರೋ ಮಾವಯ್ಯಾ । ಮದ್ದಿನ ಕೆತ್ತೆ ಮನೆಲಿಲ್ಲೆ

(ಕಾಳುಬೊಗ್ಗ - ಕರಿ ಗಂಡುನಾಯಿ.) ಇದರ ಭಾವಾರ್ಥ ಹೀಗಿದೆ - ಸಂಭ್ರಮದಲ್ಲಿ ತೋಳಾಟವನ್ನಾಡಿ ಬರುವಾಗ ಕರಿನಾಯಿ ಕಚ್ಚಿತಂತೆ. ಅದಕ್ಕೀಗ ಮದ್ದಾಗಬೇಕು. ಇಂತಹ ಕಷ್ಟಕಾಲದಲ್ಲಿ ನೆರವಾಗಬೇಕಾದರೆ ಮಾವನೇ ಆಗಬೇಕು. ಆದರೆ ಮದ್ದು ಕೊಡಲು ಅವನ

ಮನೆಯಲ್ಲಿ ಮದ್ದಿನ ಕೆತ್ತೆ ಇದ್ದದ್ದು ಮುಗಿದಿದೆ. ಹಾಗಾದರೆ ಇನ್ನೇನು? ಹಾಡಿನ ಸೊಲ್ಲನ್ನು ಮತ್ತೂ ಮತ್ತೂ ಹೇಳುವುದು.

ಮಕ್ಕಳ ಆಟದ ಪದಗಳಲ್ಲಿ 'ಬಟ್ಟಂಗೋಣಿ' ಎಂಬುದು ತಿರುಗುವ ಆಟದ ಪದ. ಕೈಮಡಗುವ ಆಟದ ಪದಗಳಾಗಿ 'ಅವಲಕ್ಕಿ ದವಲಕ್ಕಿ' ಮತ್ತು 'ಅರಿಪಿಣಿ' ಎಂಬೆರಡೂ ಹವ್ಯಕರಲ್ಲಿ ಪ್ರಚಲಿತವಾಗಿದೆ. ಅವನ್ನಿಲ್ಲಿ ಕೊಡಲಾಗುವುದು -

ಬಟ್ಟಂಗೋಣಿ ಬಡಬಡ ಗೋಣಿ
ಚಟ್ಟಿಮಕ್ಕಳ ಹೊನ್ನಂಗೋಣಿ
ಹತ್ತರೆ ಬಂದರೆ ಕತ್ತಿಲಿ ಕಡಿವೆ
ದೂರ ಹೋದರೆ ಹಜ್ಜೆ ಹಾಕ್ವೆ

೧. **ಅವಲಕ್ಕಿ ದವಲಕ್ಕಿ ಕಾಂಚನ ಮಿಣಿ ಮಿಣಿ**
ದಸ್ಕುಂ ಬುಸ್ಕುಂ ಕಯೀಂ ಕುಟ್ರೇ

೨. **ಅರಿಪಿಣಿ ತರಿಪಿಣಿ ತೋರಿಕ ಬಿಲ್ಲಂಕೇ**
ಚಟ್ವಾ ಲೈಟು ಕಾಲಂ ಕಯ್ಯಂ ಒನ್ನುಂ ಜಂಡಂ, ಪತ್ತಂ ಮಡಕ.

ಕೈಮಡಗುವ ಆಟದಲ್ಲಿ ಈ ಎರಡರಲ್ಲಿ ಒಂದನ್ನು ಒಬ್ಬನು ಬಾಯಲ್ಲಿ ಹೇಳುತ್ತ ತನ್ನ ತೋರುಬೆರಳಿನಿಂದ ಕೈಮಡಗಿದವರ ಒಂದೊಂದೇ ಕೈಯನ್ನು ಮುಟ್ಟುವನು. ಮೊದಲು, ಆಡುವ ಎಲ್ಲರ ಕೈಗಳು ನೆಲದಲ್ಲಿ ಕೆಳಮೊಗವಾಗಿರುತ್ತವೆ. ಹಾಡಿನ ಕೊನೆಯ ಶಬ್ದದ ಉಚ್ಚಾರಣೆ ಬಿದ್ದ ಕೈಗೆ ಗೆಲವು ಇರುತ್ತದೆ. ಆಗ ಮೊಗಚುತ್ತಾರೆ. ಮಕ್ಕಳಿಗೆ ಇದೊಂದು ಸ್ವಾರಸ್ಯದ ಜನಪದಕ್ರೀಡೆಯಾಗುತ್ತದೆ. ಅವಲಕ್ಕಿ, ದವಲಕ್ಕಿ ಎಂಬಲ್ಲಿ ಬೆಳ್ಳಗಾದ ಅವಲಕ್ಕಿ ಎಂದು ತಿಳಿಯಬಹುದು. ಕಾಂಚಣ ಮಿಣಿ ಮಿಣಿ ಎಂಬುದು ಹೊಳೆಯುವ ಕಂಚಿನ ಪಾತ್ರಗಳನ್ನು ದ್ಯೋತಿಸುವುದು. ಅದರಲ್ಲಿ ಕೆರೆದ ತೆಂಗಿನಕಾಯಿ ಸೂಳಿಗೆ ಬೆಲ್ಲ, ಏಲಕ್ಕಿಪುಡಿಬೆರೆಸಿ, ಅವಲಕ್ಕಿ ಹಾಕಿ ಕೈಗಳಲ್ಲಿ ಕಲಸುವಿಕೆಯನ್ನು 'ದಸ್ಕುಂ ಬುಸ್ಕುಂ' ಎಂಬ ಅನುಕರಣ ಶಬ್ದಗಳು ನಿರೂಪಿಸುತ್ತವೆ. ಹಾಗೆ ಕಲಸಿದ ಅವಲಕ್ಕಿಯನ್ನು ಗೆದ್ದ ಕೈಗೆ ಕೊಡಬೇಕಲ್ಲವೇ ? ಅದನ್ನೇ 'ಕಯಿಂ ಕುಟ್ರೇ' ಎಂಬ ಶಬ್ದಗಳು ನಿರೂಪಿಸುತ್ತವೆಂದು ತಿಳಿದುಕೊಳ್ಳಬಹುದು.

ಮಕ್ಕಳ ಹಾಡೂ ಹೌದು, ಕೆಲಸದ ಹಾಡೂ ಹೌದು - ಅಂತಹದು 'ಬೋಚು ಕಡೆವ ಹಾಡು' ಬೋಚು ಎಂದರೆ, ಮಕ್ಕಳ ಭಾಷೆಯಲ್ಲಿ 'ಮೊಸರು' ಅಂತಹ ಹಾಡಿದು -

ಜಳುಂ ಬುಳುಂ ಜಳುಂ ಬುಳುಂ ಎಮ್ಮೇ ಬೋಚು
ಚಳಿಂ ಪಿಳಿಂ ಚಳಿಂ ಪಿಳಿಂ ಹಶುವಿನ ಬೋಚು
ಬೋಚಾ ಕಡೆವಾ ನೇಣೆಲ್ಹೋತು?
ಆಚಮನೆಯಜ್ಜೀ ಕೊಂಡೋದಿತ್ತು
ಕೊಂಡು ಬಾ ಎಂದರೆ ತಿಂದಿಕ್ಕಿ ಬಂತು
ಅದು ಏವಜ್ಜೀ? ಅದು ಮರುಳಜ್ಜೀ.

ಎಳಮಗುವನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡು, ಈ ಹಾಡನ್ನು ಹೇಳುತ್ತಾ ಮೊಸರುಕಡೆಯುವಾಗ, ಮಗು ಕುಶಲವಾಗಿ ಮೊಸರು ಕಡೆವ ಶಬ್ದದೊಂದಿಗೆ ಹಾಡಿನ ಧ್ವನಿಯಿಂದ ಆನಂದಿಸುವುದು. ಎಳಮಗುವಿಗೆ ಅರ್ಥವಾಗದಿದ್ದರೂ ಈ ಹಾಡಿನಲ್ಲಿರುವ ವಿಚಾರ ಹಾಗೂ ಭಾವನೆ ಮಕ್ಕಳಿಗೆ ಹಿಡಿಸುವಂತೆಯೇ ಇರುವುದು ಲಕ್ಷ್ಯಾರ್ಹವಾಗಿದೆ.

ಸಂಜೆಯಾಗಿ ಹೊತ್ತು ಕಂತಿದೊಡನೆ, ಗಂಡುಸರು ಸಂಧ್ಯಾವಂದನೆಯನ್ನು ಆಚರಿಸುವರು. ಮಕ್ಕಳು ಮತ್ತು ಹೆಮ್ಮಕ್ಕಳು ಅದೇ ವೇಳೆ, ದೇವರ ದೀಪ ಹಚ್ಚಿ, ಹೊಡಾಡುವರು. ಅವರ ಜಾನಪದ ಮಂತ್ರ ಹೀಗಿರುತ್ತದೆ - 'ಬೆನಕ ಬೆನಕ ಏಕದಂತಾ ಪಚ್ಚೆಕಲ್ಲು ಪಾಣಿಪೀಠಾ ಮುತ್ತಿನುಂಡೇ ಹೊನ್ನಘಂಟೇ - ಇಂತೊಪ್ಪುವ ಶ್ರೀ ಸಿದ್ಧಿವಿನಾಯಕ ದೇವರ ಪಾದಕ್ಕೆ ನೂರೆಂಟು ನಮಸ್ತೇ ನಮಸ್ತೇ."

ಶೋಭಾನೆಗಳು

ಹವ್ಯಕರ ಜನಪದಗೀತಗಳಲ್ಲಿ ವಿಶಿಷ್ಟವಾಗಿರುವ ಮಹಿಳಾ ಗೇಯಸಾಹಿತ್ಯವಾಗಿ ಶೋಭಾನೆಗಳಿವೆ. ಅವನ್ನು ಮುಖ್ಯವಾಗಿ ಪುಣ್ಯಕಥಾತ್ಮಕ, ಐಚ್ಛಿಕ (ಪೂಜೆ, ವ್ರತ, ಹಬ್ಬ, ಹೋಮ), ಉಪನಯನ, ವಿವಾಹ ಸಂಬಂಧದ ಹಾಡುಗಳೆಂದು ವರ್ಗೀಕರಿಸಬಹುದು. (ಅವೆಲ್ಲವಕ್ಕೂ ಉದಾಹರಣೆಗಳನ್ನು ಇದೇ ಲೇಖಕನ 'ಹವ್ಯಕರ ಶೋಭಾನೆಗಳು' ಎಂಬ ದೊಡ್ಡ ಪುಸ್ತಕದಲ್ಲಿ ಕಾಣಬಹುದು) ಮದುವೆಗೆ ಸಂಬಂಧಪಟ್ಟಂತಿರುವ ಪರಿಮಿತ ಉದಾಹರಣೆಗಳನ್ನಿಲ್ಲಿ ಕೊಡಲಾಗುವುದು. 'ಮದುವೆ' ಎಂದಾಗ, ಸಮಾವರ್ತನೆ, ಕಲಶ, ಹೋಮ, ಪೂಜೆ, ದಿಬ್ಬಣ ಬರುವುದು, ದಿಬ್ಬಣ ಎದುರುಗೊಳ್ಳುವುದು. ಸತ್ಕರಿಸುವುದು, ಉಪಚಾರ ಹೇಳುವುದು, ದೂರುವುದು, ಸಪ್ತಪದಿ, ಮಾಂಗಲ್ಯಕಟ್ಟುವುದು, ಧಾರೆಯಾಗುವುದು, ಊಟಬಡಿಸುವುದು (ಎಡೆಮಾಡುವುದು), ದಿಬ್ಬಣವನ್ನು ಕಳುಹಿಕೊಡುವುದು, ಉಡುಗೊರೆ, ಒಸಗೆ, ಗೃಹಪ್ರವೇಶ, ಬಾಗಿಲು ತಡೆಯುವುದು ಇತ್ಯಾದಿ ಒಂದೊಂದು ಕ್ರಿಯಾಂಶಕ್ಕೆ ಅನ್ವಯಿಸುವ ಸೊಗಸಾದ ಹಾಡುಗಳಿರುತ್ತವೆ. ಅವೆಲ್ಲವನ್ನೂ ಆಸಕ್ತರು ಮೇಲೆ ಸೂಚಿತವಾದ ಕೃತಿಯಲ್ಲಿ ಬೇಕಿದ್ದರೆ ಕಾಣಬಹುದಾಗಿದೆ. ಕೆಲವನ್ನು ಮಾತ್ರ ಇಲ್ಲಿ ಲಕ್ಷಿಸಲಾಗುವುದು.

ದಿಬ್ಬಣ ಹೋಗುವಾಗ ಕೂಡ, ಶೋಭಾನೆ ಹಾಡುವುದು ಸಂಪ್ರದಾಯವಾಗಿರುತ್ತದೆ -

At their weddings Havigs employ musicians and their women sing Kanarese songs in these hours and on the roads when they escort the bridgegroom and the blindes (Bombay Gazeter, 1883, Vol. Xv Part - I, Page 124).

ಶೋಭಾನೆಗಳಿಗೆ ಮಂಗಲಗೀತವೆಂದೂ ಹೇಳುವರು. ನೃಸಿಂಹಸೂರಿ ವಿರಚಿತ 'ಪ್ರಯೋಗ ಪಾರಿಜಾತ' ಗ್ರಂಥದಲ್ಲಿ ಮಂಗಲಗೀತ ತೂರ್ಯಘೋಷದೊಂದಿಗೆ ವರನ ಕಡೆಯವರು 'ಕನ್ಯಾವರಣವಿಧಿ' ಗಾಗಿ ಅಂದರೆ ಬದ್ಧ (ನಿಶ್ಚಯ ತಾಂಬೂಲ)ಕ್ಕಾಗಿ ಕನ್ಯಾ ಗೃಹಕ್ಕೆ ತೆರಳಬೇಕೆಂಬ

ಸೂಚನೆಯಿದೆ. ಮದುವೆಗೆ ಮುಂಚಿತವಾಗಿ ವರ ವಧುಗಳಿಬ್ಬರ ಮನೆಯಲ್ಲಿಯೂ ನಾಂದಿಯಿರುತ್ತದೆ. ಅನಂತರ ಸಮಾವರ್ತನೆ. ಇದರ ಅಂಗವಾಗಿ ವರನು ಕಾಶೀಯಾತ್ರೆ ಕೈಗೊಳ್ಳುವ ಶಾಸ್ತ್ರವಿರುತ್ತದೆ. ಆಗ ಅವನ ಸೋದರಮಾವನು ತಡೆದು, ಕನ್ಯೆಯನ್ನು ಕೊಡುವುದಾಗಿ ಹೇಳುವ ಒಂದು ಹಾಡು ಹೀಗಿದೆ -

ಶ್ರೀ ಗಜವದನನ ಚರಣಕ್ಕೆ ಮಣಿದು
ವಾಗೀಶ್ವರಿಪದ ಯುಗಳವ ನೆನೆದು
ನಾಗಶಯನನ ವೈವಾಹಕೆಂದೆನುತನು
ರಾಗದಿಂದಲಿ ಸಮಾವರ್ತನೆಯನು ಗೈ ॥
ದಾಗಮನ ಪೇಳಿ—ಪೊಗಳುವೆ

ಚೆನ್ನದ ಚೆಲುವೆಯಾಗಿಹ ರುಕ್ಮಿಣಿಯ
ಮನ್ನಿಸಿ ಮಾಡಿಕೊಂಬೆನು ಪರಿಣಯವ
ಎನ್ನ ಮನ್ನಿಪುದೆಂದು ಸನ್ನುತ ರಂಗನು
ಮುನ್ನ ಕಾಶಿಗೆ ಹೊರ ಪಯಣವನೆಸಗಲು ॥
ಸನ್ನಾಹನಾಗಿ—ಪೊರಟನು

ಏಳಡಿ ಹಜ್ಜೆಯನಿಡುತ ಸಂತಸದಿ
ಬಾಲ ಕೃಷ್ಣಯ್ಯನು ಪೊರಡಲು ಮುದದಿ
ಬಾಲೆಯನೀವೆನು ಪೋಗದಿರೆನುತಲಿ
ಲೀಲೆಯಿಂದಲಿ ಸೋದರ ಬಂಧುಗಳು ಏ ॥
ಶಾಲದಿ ಬೋಧಿಸುತ—ತಡೆದರು

ಒಂಬತ್ತು ಸೊಲ್ಲುಗಳಿಂದ ಕೂಡಿರುವ ಈ ಹಾಡಿನಿಂದ ಮೂರನ್ನು ಮಾತ್ರ ಮಾದರಿಗಾಗಿ ಉದಾಹರಿಸಲಾಗಿದೆ. ವರನ ದಿಬ್ಬಣ ಬಂದು ತಲಪಿದ. ಮದುವೆಮನೆಯಲ್ಲಿ ದಿಬ್ಬಣಿಗರನ್ನು ಸಭೆಗೆ ಕರೆವ ಹಾಡಿದೆ -

ಬನ್ನೀ ಸಭೆಗೆ ತಡವೇಸು । ಬನ್ನಿ
ಬನ್ನೀ ಸಭೆಗೆ ತಡವೇಸು । ನಮ್ಮ : ಪಲ್ಲವಿ:
ಮನ್ನಣೆ ಕೈಕೊಳ್ಳಿರಿನ್ನು । ಸಣ್ಣ
ಮನ್ನಣೆ ಕೈಕೊಳ್ಳಿರಿನ್ನು । ಬಲು
ಬನ್ನಬಟ್ಟರುವಿರಿ ಸಣ್ಣವರೆಲ್ಲವರು । ಬನ್ನೀ : ೧:
ಕಾಲಿಗೆರೆದುಕೊಳ್ಳಿ ನೀರು । ಮುಖದ
ಮೇಲೇರುತಿದೆ ಬೆವರ್ ಜೋರು । ಬಹ
ಳಾಲಸ್ಯ ಪಟ್ಟರುವಿರಿ ಏಲಕ್ಕಿ ಸಾರು ಕುಡಿರಿ । ಬನ್ನೀ :೨:

'ಏಲಕ್ಕಿ ಪಾನ್ಕ ಕುಡಿರಿ' ಎಂದೂ ಪಾಠಾಂತರವಿದೆ. ಗಿರಿಜಾಕಲ್ಯಾಣದಿಂದ ಆಯ್ದ ಒಂದು ಸೊಲ್ಲನಿಲ್ಲಿ ಕೊಡಲಾಗಿದೆ -

ಗಣಪ ವಾಗ್ದೇವಿಯರಡಿಗೆ ವಂದಿಸುತ
ಫಣಿಶಯನನ ಪಾದ ವನಜಕೆರಗುತ
ತ್ರಿಯಣಗೆ ವಂದಿಸಿ ಗುರುವ ಧ್ಯಾನಿಸುತ
ಗುಣನಿಧಿ ಮಹಾಮಾಯೆಯ ಪ್ರಾರ್ಥಿಸುತ ।
ಗಿರಿಜಾಕಲ್ಯಾಣ - ವೊರೆವೆನು

ಈ ಹಾಡಿನ ಧಾಟಿಗೆ ಸರಳಾರವೆಂದು ಹೆಸರು. ಇದರ ಪ್ರತಿಯೊಂದು ಸೊಲ್ಲಿನಲ್ಲಿ ಐದು ಪಾದಗಳು. ಮೊದಲ ನಾಲ್ಕಕ್ಕೆ ಮಧ್ಯಮ ಗತಿಯಿರುತ್ತದೆ. ಕೊನೆಯದು ಪಾದಮಕುಟವಾಗಿದ್ದು ವಿಳಂಬಗತಿಯುಳ್ಳದಾಗಿದೆ. ಇಂತಹ ಹಾಡುಗಳಿಗೆಲ್ಲ ಬೇರೆ ಬೇರೆ ಧಾಟಿಗಳಿವೆ. ಇವನ್ನು ಕಲ್ತು ಹಾಡಬೇಕು.'

ಹವ್ಯಕರ ಜಾನಪದ ಸಾಹಿತ್ಯದಲ್ಲಿ ಸಂಶೋಧನೆಯ ಕಿರಣರೇಖೆಗಳು ಇತರ ಯಾವುದೇ ಜನಪದ ಸಾಹಿತ್ಯಕ್ಕಿಂತ ಹೆಚ್ಚಾಗಿವೆಯಲ್ಲದೆ, ಅವು ಇನ್ನೂ ಸಾಕಷ್ಟು ಸಂಶೋಧನೆಗೆ ಒಳಪಡದೆ ಈ ದಿಶೆಯಲ್ಲಿ ಕನ್ನೆನೆಲವಾಗಿ ಉಳಿದಿದೆ. ಭಾಷಾದೃಷ್ಟಿಯಿಂದ, ಸಾಹಿತ್ಯ ಪ್ರಭೇದದ ದೃಷ್ಟಿಯಿಂದ, ಛಂದೋವೈವಿಧ್ಯದ ನೆಲೆಯಿಂದ, ಅದರಲ್ಲಿ ಅಡಕವಾಗಿರುವ ಧಾರ್ಮಿಕ ಸಾಂಸ್ಕೃತಿಕ ಗರಿಮೆಯ ಗುರಿಯಿಂದ ಒಳಹೊಕ್ಕಷ್ಟೂ ಅದರ ಸತ್ವದ ಭಂಡಾರ ಗೋಚರಿಸುವಂತಿದೆ. ಛಂದಸ್ಸಿನಲ್ಲಿ ಅಚ್ಚರಿ ಮೂಡಿಸತಕ್ಕ ಹೊಸ ಬಗೆಗಳು ಕಾಣಸುವುದರಲ್ಲಿ ಸಂದೇಹವಿಲ್ಲ. ಈ ಹಾಡುಗಳು ವಿಶಿಷ್ಟರೀತಿಯ ದ್ವಿಪದಿಯಿಂದ ಪಂಚದಶಪದಿ (೧೫ ಪಾದಗಳ ಸೊಲ್ಲುಗಳುಳ್ಳವು) ವರೆಗೆ ಸೊಲ್ಲುಗಳುಳ್ಳವು. ಈವರೆಗೆ ಸೋದಾಹರಣವಾಗಿ ವಿವರಣೆಗೊಂಡುದನ್ನು ಹವ್ಯಕರ ಶೋಭಾನೆಗಳು, ಪರಾಮರ್ಶೆ, ಆ. ೩ ರಲ್ಲಿ ಕಾಣಬಹುದು.

ಹವ್ಯಕರ ಶೋಭಾನೆಗಳಲ್ಲಿ ಸರಳಾರ, ಧವಳಾರ - ಎಂಬ ಪ್ರಕಾರಗಳಿವೆ. ಇವುಗಳಲ್ಲಿ ಧವಳಾರ ವನ್ನು ಕುರಿತು ಡಿ.ಎಲ್. ನರಸಿಂಹಾಚಾರ್ಯರು, ಸಂಗೀತಭೂಷಣ, ಡಾ. ಆರ್ ಸತ್ಯನಾರಾಯಣ ಮುಂತಾದ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಆದರೆ ಅಂತಿಮ ಘಟ್ಟಕ್ಕೆ ಬಂದಿರಲಿಲ್ಲ. ಅದಕ್ಕಾಗಿ ಅವರು ಹವ್ಯಕರ ಶೋಭಾನೆಗಳಲ್ಲಿ, ಯಕ್ಷಗಾನ ಕೃತಿಗಳಲ್ಲಿ ಅವಲೋಕನ ಮಾಡಿಲ್ಲ. ಪ್ರಕೃತ, ಈ ಲೇಖಕನಿಗೆ ಹವ್ಯಕರ ಶೋಭಾನೆಗಳ ಮತ್ತು ಯಕ್ಷಗಾನ ಕೃತಿಗಳ ಛಂದಃ ಪರಿಚಯವಿರುವುದರಿಂದ ಅದು ಸಾಧ್ಯವಾಗಿದೆ. ಈ ವಿಚಾರದಲ್ಲಿ ಸೂಚಕವಾಗಿ ಕೆಳಗಿನ ಮಾತುಗಳನ್ನು ಉದ್ಧರಿಸಲಾಗುವುದು - (ಹ.ಶೋ. ಪುಟ : ೫೭೧)

'ಧವಳಾರಕ್ಕೆ ತ್ರಿಪದೀಮಕುಟವಿರಬೇಕು...ಕನ್ನಡದ ಧವಳ (ಧವಳಾರ) ಹಾಡುಗಳು ನಿರ್ದಿಷ್ಟ ಗಣ, ಗಣಸಂಖ್ಯೆ, ಪಾದಸಂಖ್ಯೆ, ಉಳ್ಳವಲ್ಲವಾದರೂ ಅವಕ್ಕೆ ವಿಶಿಷ್ಟವಾದ ಧಾಟಿಯಿದೆ. ಪಾದ, ಯತಿ, ಮುಡಿ, ವರಣ, ತಾಳದ ಲಯ, ವಿಳಂಬ - ಮಧ್ಯಮ - ದ್ರುತ ಎಂಬ ಗತಿಗಳು, ಗಣಪಲ್ಲಟ, ಅಥವಾ ಅಧಿಗಣ ಪ್ರಯೋಗ ಮುಂತಾದ ಲಕ್ಷಣಗಳಿಂದ, ಅವುಗಳ ಧಾಟಿ ಹಾಗೂ ಛಂದಸ್ಸು ರೂಪಗೊಂಡಿದೆ. ಆರತಿ ಬೆಳಗುವ ಹಾಡಾಗಿಯೇ 'ಧವಳಾರ' ಎಂದೆನಿಸಿದ ಈ ಬಗೆಯ ಧಾಟಿಯ ರಚನೆಗಳು ಪೂಜೆಯಲ್ಲಿ, ಮದುವೆ ಉಪನಯನಾದಿ ಸಂದರ್ಭಗಳಲ್ಲಿ ಹಾಡತಕ್ಕವಾಗಿವೆ. ಕತೆಹಾಡುಗಳೂ ಧವಳಾರದ ಧಾಟಿಯಲ್ಲಿ ರಚಿತವಾದುವು ಉಪಲಬ್ಧವಿವೆ. ಹೀಗೆ ಹವಿಕರ ಶೋಭಾನೆಗಳು ಧಾಟಿವೈಶಿಷ್ಟದಿಂದ ಮೆರುಗುವಡೆದಿವೆ'. □

೨೬

ಹವ್ಯಕ ಶೋಭಾನೆಗಳು

ಬ್ರಾಹ್ಮಣ ಸಮುದಾಯದಲ್ಲಿ ಒಂದು ವರ್ಗವಾಗಿರುವ ಹವ್ಯಕರ ವೈಶಿಷ್ಟವೇನು? ಇತರ ಬ್ರಾಹ್ಮಣರಲ್ಲಿ ಇಲ್ಲವೆ, ಇತರ ಯಾವುದೇ ಜನಜಾತಿಯಲ್ಲಿ ಅಷ್ಟಾಗಿ ಕಂಡುಬಾರದಿರುವ, ಆದರೆ ಹವ್ಯಕರಲ್ಲಿ ಉಲ್ಲೇಖಾರ್ಹವಾಗಿ ಕಾಣಿಸುವ ಮೌಲ್ಯವೇನು? ಎಂಬ ಪ್ರಶ್ನೆ ಸಹಜ. ಹವ್ಯಕೇತರರಿಗೆ ಕೇಳಿ ತಿಳಿದುಕೊಳ್ಳುವುದಕ್ಕೆ ಮತ್ತು ಒಳ್ಳಿತೆನಿಸಿದರೆ, ಅನುಸರಿಸುವುದಕ್ಕೆ ಇನ್ನೂ ತಮ್ಮನ್ನು ತಾವೇ ತಿಳಿದುಕೊಂಡಿರದ ಹವ್ಯಕರಿಗೆ ಈಗಲಾದರೂ ತಿಳಿದುಕೊಂಡು ಅಭಿಮಾನ ಪಡುವುದಕ್ಕೆ ಮತ್ತು ಇತರರೂಡನೆ ನೀವು ಇದನ್ನೇಕೆ ಅನುಸರಿಸಬಾರದು? ಎಂದು ಕೇಳುತ್ತ ಅವರೂ ಮೆಚ್ಚುವಂತೆ ಮಾಡುವುದಕ್ಕೆ ತಕ್ಕುದಾದ ಹವ್ಯಕ ಆಚಾರ ವಿಚಾರ ಭಾಷೆ ಸಾಹಿತ್ಯ ವಿಶೇಷಗಳೇನಿವೆ? ಎಂಬುದನ್ನು ತಿಳಿದವರು ಮಾತಿನ ಮೂಲಕ, ಬರೆವಣಿಗೆಯ ಮೂಲಕ ತಿಳಿಯಪಡಿಸುವುದು ಅವಶ್ಯಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ ಹವ್ಯಕರ ವೈದಿಕ ಲೌಕಿಕ ಆಚಾರ ವಿಚಾರಗಳು, ನಡೆವಳಿ, ಭಾಷೆ, ಸಾಹಿತ್ಯ - ಇವೆಲ್ಲವೂ ಅನನ್ಯವಾಗಿರುವುದಲ್ಲದ, ಅನೇಕ ವೈಶಿಷ್ಟ್ಯಗಳಿಂದ ಕೂಡಿರುವುದು ಲಕ್ಷ್ಯಾರ್ಹವಾಗಿದೆ.

ಈ ವಿಷಯಗಳಲ್ಲಿ ಒಂದೊಂದೂ ಪ್ರತ್ಯೇಕ ಲೇಖನಕ್ಕೆ ವಿಷಯವಾಗುತ್ತದೆ. ಪ್ರಕೃತ ಲೇಖನ ವಿಷಯ ಹವ್ಯಕ ಮಹಿಳೆಯರ ಗೇಯಸಾಹಿತ್ಯವಾಗಿರುವ 'ಶೋಭಾನೆಗಳು' ಎಂಬುದು. ಶೋಭಾನೆಗಳು ಹವ್ಯಕೇತರ ಬ್ರಾಹ್ಮಣರಲ್ಲಿ ಮಾತ್ರವಲ್ಲದೆ, ಬ್ರಾಹ್ಮಣೇತರರಲ್ಲಿಯೂ ಪ್ರಚಲಿತ ವಾಗಿದ್ದರೂ ಅವು ಗಾತ್ರ ಪಾತ್ರಗಳೆರಡಲ್ಲಿಯೂ ಸಾಟಿಯಾಗಲಾರವು. ಇಷ್ಟೊಂದು ಬಗೆಯ ಧಾಟಿ ಛಂದಸ್ಸುಗಳಿಂದೊಪ್ಪುವ ವೈವಿಧ್ಯವೂ ಬಾಹುಳ್ಯವೂ ಬೇರೆ ಕಡೆ ಕಂಡುಬಾರದಿರುವುದು ಹವ್ಯಕರ ಶೋಭಾನೆಗಳ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

ಧಾರ್ಮಿಕ ವಿಧಿಯಾಗಿ ನಡೆಸುವ ಪೂಜೆ, ಹೋಮ, ಹಬ್ಬ, ವ್ರತಾದಿಗಳಲ್ಲಿಯೂ ವಿವಾಹಾದಿ ಷೋಡಶ ಶುಭಸಂಸ್ಕಾರ ಸಮಾರಂಭಗಳಲ್ಲಿಯೂ ಆಯಾ ಕ್ರಿಯಾ ಸಂದರ್ಭಗಳಲ್ಲಿ ಮುತ್ತೈದೆಯರು (ಕನ್ಯೆಯರೊಡಗೂಡಿ ಕೂಡ) ಹಾಡುವ ಹಾಡುಗಳೇ 'ಶೋಭಾನೆಗಳು'. ಶೋಭಾನೆ ಹಾಡಿಲ್ಲದ ಯಾವುದೇ ಪ್ರಸ್ತ ಅಸಮರ್ಪಕ ಎಂಬಷ್ಟುಮಟ್ಟಿಗೆ ಈ ಹಾಡುಗಳು ನಮ್ಮ ಸಮಾಜದಲ್ಲಿ ಪ್ರಚಲಿತವಿದ್ದುವು. ಪುರೋಹಿತರು ವೇದಮಂತ್ರಗಳಿಂದ ಶುಭಕಾರ್ಯಗಳನ್ನು ನಡೆಸಿ ಕೊಡುವಾಗ, ವನಿತೆಯರು ಹಾಡತಕ್ಕ ಈ ಹಾಡಿನ ವರ್ಗ 'ವನಿತಾ ವೇದ' ಎಂದರೆ

ತಪ್ಪಲ್ಲ. ಮಂತ್ರಹೀನ ಶುಭಕಾರ್ಯಗಳಿಗೆ ಈ ಹಾಡುಗಳೇ ಮಂತ್ರವಾಗಬಹುದು. ಜಾನಪದ ಧಾಟಿ ಛಂದಸ್ಸುಗಳಿಂದೊಪ್ಪುವ ಈ ಹಾಡುಗಳಿಗೆ ಕೆಲವಕ್ಕೆ ಕಡಿಮೆಯೆಂದರೆ, ಮೂರು ನುಡಿ (Stanza) ಗಳಾದರೆ ನೂರಕ್ಕೆ ಮಿಕ್ಕಿದ ನುಡಿಗಳ ಹಾಡುಗಳೂ ಇವೆ. ಈ ಹಾಡುಗಳ ಸಂಖ್ಯೆ ಎಷ್ಟೋ ಸಾವಿರವಾಗಿದ್ದು ಬಹಳಷ್ಟು ಇನ್ನೂ ಅಪ್ರಕಟಿತ.

ಶೋಭಾನೆಹಾಡುಗಳು

ಲಲಿತಕಲೆಗಳಲ್ಲಿ ಅತಿಶಯ ಆಹ್ಲಾದಕರವೂ ಪರಿಣಾಮಕಾರಿಯೂ ಪರಸ್ಪರ ಪೋಷಕವೂ ಆಗಿರುವ ಯುಗಳ ಕಲೆ - ಸಾಹಿತ್ಯ ಮತ್ತು ಸಂಗೀತ. ಸಾಹಿತ್ಯದಲ್ಲಿ ಹೆಚ್ಚಿನ ಕೌಶಲಪೂರ್ಣ ವಾದುದು ಪದ್ಯ. ಅದು ವಿಶಿಷ್ಟ ಅಂಶಗಣ ಮಾತ್ರಾಗಣಗಳ ಛಂದೋರೂಪದಿಂದ ಗೇಯಗುಣದಿಂದ ಗೀತ, ಪದ, ಹಾಡು ಎಂದು ಕರೆಸಿಕೊಳ್ಳುವ ರೂಪತಾಳುತ್ತದೆ. ಸಂಗೀತ-ಸಾಹಿತ್ಯಗಳು ಮಾರ್ಗ, ದೇಶಿ ಎಂದು ಎರಡು ಬಗೆಯ ವರ್ಗೀಕರಣಕ್ಕೆ ಒಳಗಾಗುತ್ತವೆ. 'ಮೃಜ್ಯತೇ ಇತಿ ಮಾರ್ಗ:' 'ಮೃಜು ಶುದ್ಧೌ' ಎಂಬ ವ್ಯುತ್ಪತ್ತಿಯಂತೆ, ದೋಷವಿಲ್ಲದೆ ಶುದ್ಧವಾದುದು 'ಮಾರ್ಗ' ಅದು ಶಾಸ್ತ್ರದ ಕಟ್ಟುಪಾಡಿಗೆ ಒಳಗಾದುದು. ಸಂಗೀತವಿರಬಹುದು, ಸಾಹಿತ್ಯವೂ ಇರಬಹುದು. 'ದೇಶಿ' ಎಂಬುದು ಅದು ಪ್ರಚಲಿತವಿರುವ ಪ್ರದೇಶದ, ಜನರ, ಜನಾಭಿರುಚಿಯ ವೈವಿಧ್ಯಕ್ಕೆ ತಕ್ಕಂತೆ ವೈಶಿಷ್ಟ್ಯವನ್ನೂ ಬಹುರೂಪತೆಯನ್ನೂ ತಾಳಿರುತ್ತದೆ. ಸರಳತೆ ಸುಲಭಗ್ರಾಹ್ಯತೆಗಳೂ ದೇಶಿಯ ಲಕ್ಷಣಗಳು. ಸಂಗೀತಕ್ಕೆ ಸಂಬಂಧಿಸಿದಂತೆ ಮಾರ್ಗ ದೇಶಿಗಳ ಲಕ್ಷಣವನ್ನು ಹೀಗೆ ಹೇಳಿದೆ:

> **ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತಮುಚ್ಯತೇ**
> **ವಾರ್ಗೋ ದೇಶೀತಿ ತದ್ ದ್ವೇಧಾ ತತ್ರ ಮಾರ್ಗಃ ಸ ಉಚ್ಯತೇ**
> **ಯೋ ಮಾರ್ಗಿತೋ ವಿರಿಂಚಾದ್ಯೈಃ ಪ್ರಯುಕ್ತೋ ಭರತಾದಿಭಿ:**
> **ದೇವಸ್ಯ ಪುರತಃ ಶಂಭೋರ್ನಿಯತೋऽಭ್ಯುದಯ ಪ್ರದ:**
> **ದೇಶೇ ದೇಶೇ ಜನಾನಾಂ ಯದ್ರುಚ್ಯಾ ಹೃದಯರಂಜಕಂ**
> **ಗೀತಂ ಚ ವಾದನಂ ನೃತ್ಯಂ ತದ್ದೇಶೀತ್ಯಭಿಧೀಯತೇ**[೧]

ಇಲ್ಲಿ ಪ್ರಸ್ತುತವಾದುದು 'ದೇಶಿ' ಇದರ ತದ್ಭವ 'ದೇಸಿ' - ಇದನ್ನೆ 'ಜಾನಪದ' ಎಂಬುದು ಪ್ರಚಲಿತ. ಜಾನಪದಗೀತವರ್ಗದಲ್ಲಿ ಬಲುಮಟ್ಟಿಗೆ ಕೂಡಿದುದು, ಸ್ತ್ರೀಗೀತವಾದುದು (ಅಂದರೆ, ಹೆಂಗುಸರೇ ಹಾಡುವಂಥವು), ಆದರೆ ಸಕಲರಿಗೂ ಆಪ್ಯಾಯಮಾನವಾದುದು 'ಶೋಭಾನೆ ಹಾಡು'.

'ಶೋಭಾನೆ' ಎಂಬುದು ಶುಭ, ಶಿವ, ಸುಂದರ, ರಮಣೀಯ ಎಂಬ ಅರ್ಥವುಳ್ಳ 'ಶೋಭನ' ಎಂಬುದರ ಮಾರ್ಪಟ್ಟ ರೂಪ. 'ಶೋಭನ ಗೀತ' ಎಂಬುದು ಸಂಸ್ಕೃತದಲ್ಲಿ ಶೋಭಾನೆ ಹಾಡಿಗಿರುವ ಮುಖ್ಯವಾದ ಹೆಸರು. ಇದನ್ನೇ ಸ್ತ್ರೀಗೀತ, ಮಂಗಲಗೀತ, ಶುಭಗೀತ, ಶೋಭಾನೆ, ಶೋಭಾನ, ಶೋಭಾನೆ ಹಾಡು, ಸೋಬಾನೆ, ಸೋಬಾನ, ಸೋಬಾನಪದ, ಹೆಂಗಸರ ಹಾಡು ಎಂಬ ಹೆಸರುಗಳಿಂದ ಕರೆದಿದ್ದಾರೆ. 'ಸೋಬಾನ' ಎಂಬ ಉಚ್ಚಾರಣೆಯೇ

೧. ಶಾರ್ಙ್ಗದೇವ: ಸಂಗೀತ ರತ್ನಾಕರ, ಸ್ವರಾಧ್ಯಾಯ, ಶ್ಲೋಕ: ೨೧,೨೨,೨೩.

ಶುದ್ಧ ಜಾನಪದ ಎಂಬುದನ್ನು ನಿರೂಪಿಸುತ್ತದೆ. 'ಶೋಭಾನೆ ಹಾಡು' ಎಂಬಲ್ಲಿ ಈ ಹಾಡು ಜಾನಪದ ರೂಪರೇಖೆಯೊಳಗೇ ಇದ್ದರೂ ಸ್ವಲ್ಪಮಟ್ಟಿಗೆ ಅಭಿಜಾತ ಲಕ್ಷಣಗಳನ್ನು ಇಟ್ಟುಕೊಂಡಿದೆ ಎಂಬುದು ವೇದ್ಯವಾಗುವಂತಿದೆ. 'ಸೋಬಾನೆ ಪದ' ಎನ್ನಲಾಗುವ ಹಾಡಿನ ಭಾಷೆ, ವಸ್ತು, ವಿಷಯಗಳು - ಧಾಟಿ ಕೂಡ ಗ್ರಾಮ್ಯವನ್ನೇ ಹೊತ್ತುಕೊಂಡು ಮಣ್ಣಿಗೆ ಹೆಚ್ಚು ಅಂಟಿಕೊಂಡಿರುವುದು ತಿಳಿದುಬರುವ ಸಂಗತಿ. ಗೀತಗಳು, ಗೃಹಿಣೀಗೀತೆಗಳು ಎಂದೂ ಈ ಹಾಡಿನ ವರ್ಗವನ್ನು ಹೆಸರಿಸಿದವರಿದ್ದಾರೆ. ಇದು ಗೀತೆ, ಗೀತ ಎಂಬೆರಡು ಶಬ್ದಗಳ ಅರ್ಥವ್ಯತ್ಯಾಸದ ಬಗೆಗೆ ಅಲಕ್ಷ್ಯದ ಪರಿಣಾಮ. 'ಗೀತೆ' ಎಂಬುದು 'ಗೀತಾ' ಎಂಬುದರ ಸಮಸಂಸ್ಕೃತ ರೂಪ. ಅದು ತತ್ತ್ವಾತ್ಮಕವೂ ಆದುದು. ಆತ್ಮವಿದ್ಯೋಪದೇಶಕವೂ ಆದ ಸ್ತ್ರೀಲಿಂಗ ಶಬ್ದ. ಭಗವದ್ಗೀತೆ, ಶಿವಗೀತೆ, ಗಣೇಶಗೀತೆ ಇವು ಗೀತೆಗಳು. 'ಗೀತ' ಎಂಬುದು ಹಾಡು ಎಂಬ ಅರ್ಥವುಳ್ಳ, ಸಂಸ್ಕೃತದಲ್ಲಿ ನಪುಂಸಕಲಿಂಗವಾಗಿರುವ 'ಗೀತಂ' ಎಂಬುದರ ಸಮಸಂಸ್ಕೃತ ರೂಪವಾಗಿದೆ. ಈ ಸಂದರ್ಭದಲ್ಲಿ 'ಪದ', 'ಹಾಡು' ಎಂಬೆರಡು ರೂಪಗಳಲ್ಲಿ ಪ್ರಕೃತ ಯಾವುದು ಸಮಂಜಸ ಎಂಬುದೂ ಇಲ್ಲಿ ವಿವರಣೆಗೆ ತಕ್ಕುದಾಗಿದೆ:

ಹಾಡುವುದಕ್ಕೆ ಅಳವಡುವ ಪದಗತಿಯುಳ್ಳ ರಚನೆಯನ್ನು 'ಹಾಡು' ಎನ್ನುವುದು ಸಹಜ. 'ಪದ' ಎಂಬುದೂ ಹಾಡುವಂತಹ ರಚನೆಗೇ ಇರುವ ಹೆಸರಾಗಿದೆ. ಭರತನ ನಾಟ್ಯಶಾಸ್ತ್ರದಲ್ಲಿ ಅದರ ಲಕ್ಷಣವನ್ನು ಹೀಗೆ ಹೇಳಿದೆ:

ನಿಯತಾಕ್ಷರ ಸಂಬದ್ಧಂ ಛಂದೋ ಯತಿ ಸಮನ್ವಿತಂ
ನಿಬದ್ಧಂ ತು ಪದಂ ಜ್ಞೇಯಂ ಸತಾಲಪತನಾತ್ಮಕಂ[೨]

ಅಂದರೆ, ನಿಶ್ಚಿತವಾದ ಗಣಾಕ್ಷರಗಳಿಂದ ಬದ್ಧವಾದುದು, ಛಂದಸ್ಸು ಯತಿ (ಅಲ್ಲಲ್ಲಿ ವಿಶ್ರಮಸ್ಥಾನ) ಗಳಿಂದು ಕೂಡಿದುದು ನಿಬದ್ಧಗೇಯಕ್ಕೆ ಒಳಪಡುವಂತಹದು, ತಾಳದ ಪೆಟ್ಟುಗಳಿಗೆ ಹೊಂದಿಕೆಯುಳ್ಳುದು 'ಪದ'. ಈ ಲಕ್ಷಣಗಳಂತೆ 'ಶೋಭಾನೆ ಹಾಡು' ಪದವೆನಿಸುವುದಿಲ್ಲ. ಯಕ್ಷಗಾನ ಪದ, ದಾಸರ ಪದ, ಸರ್ವಜ್ಞಪದ ಎಂಬ ಪ್ರಯೋಗ ಅರ್ಥವತ್ತಾದುದು. ಗಂಡುಸರು ಹಾಡುವಂಥವು ಪದಗಳು ಎಂಬ ನಿರ್ಣಯವನ್ನು ಹಿಂದಿನವರು ಮಾಡಿದಂತಿದೆ. ಇದನ್ನು ಲಕ್ಷಿಸಿಲ್ಲದವರು ಶೋಭಾನೆ (ಸೋಬಾನ) ಪದ ಎನ್ನುವುದು, ದಾಸರ ಹಾಡುಗಳು (ಪುರಂದರ ದಾಸರ ಹಾಡುಗಳು) ಎಂದೇ ಕೀರ್ತನೆಗಳನ್ನು ಅಚ್ಚುಹಾಕಿಸಿರುವುದು ಕಂಡುಬರುತ್ತದೆ. ಗಂಡುಸರು ಹಾಡುವವನ್ನು ಪದಗಳು ಎಂತಲೂ ಹೆಂಗುಸರು ಹಾಡುವವನ್ನು 'ಹಾಡುಗಳು' ಎಂತಲೂ ಕರೆಯುವ ರೂಢಿ ಪ್ರಚಲಿತವಿದೆ. ಇಷ್ಟೇ ಅಲ್ಲ, ಶೋಭಾನೆಗಳಲ್ಲಿ ಹೆಚ್ಚಿನವೂ ತ್ರಿಪದೀ ಜನ್ಯವಾಗಿದ್ದು 'ತ್ರಿಪದೀ ತಾಳಹೀನಾ ಕರ್ಣಾಟಭಾಷಯಾ' ಎಂದಿರುವುದಕ್ಕೆ ಅನುಗುಣವಾಗಿ ನಿಶ್ಚಿತ ತಾಳಗತಿಗೆ ಅಳವಡದಿರುವುದೂ ಹೌದು. ಶೋಭಾನೆ ಹಾಡುವ ಸಂದರ್ಭದಲ್ಲಿ ಶ್ರುತಿ, ತಾಳವಾದ್ಯಗಳಾವುದೂ ಇರುವುದಿಲ್ಲ. ಸುಮಾರು ೧೦ನೆಯ ಶತಮಾನದಿಂದಲೇ (ಪಂಪನ ಕಾಲದಿಂದ) ಶೋಭಾನೆಗಳನ್ನು ಹಾಡಿದ ಉಲ್ಲೇಖಗಳು ಕನ್ನಡದ ಕಾವ್ಯಗಳಲ್ಲಿ

---

೨. ಭರತನ ನಾಟ್ಯ ಶಾಸ್ತ್ರದ : ಅಧ್ಯಾಯ ೩೨, ಶ್ಲೋಕ : ೨೮

ಬಂದಿದ್ದರೂ ಎಲ್ಲಿಯೂ ಶ್ರುತಿ ತಾಳ ವಾದ್ಯಗಳ ಹಿಮ್ಮೇಳವಿದ್ದ ಉದಾಹರಣೆ ಇಲ್ಲ. ಅದಕ್ಕೆ ಇನ್ನೊಂದು ಕಾರಣವೂ ಇದೆ :

ಶೋಭಾನೆ ಹಾಡುಗಳ ವರ್ಗದಲ್ಲಿ ತ್ರಿಪದಿ, ತ್ರಿಪದಿವಿಸ್ತರಣ, ಧವಳಾರಗಳಂತಹ ಹಾಡುಗಳಿದ್ದು ಅವಕ್ಕೆಲ್ಲ ವಿಳಂಬ, ಮಧ್ಯಮ, ದ್ರುತ (ತ್ವರಿತ) ಎಂಬ ಗತಿಗಳಿರುವುದರಿಂದ ಆ ಹಾಡುಗಳ ಸೊಲ್ಲುಗಳನ್ನು ತಾಳಗತಿಗೆ ಅಳವಡಿಸುವುದು ಸುಗಮವಲ್ಲ. ಈ ಕಾರಣಗಳಿಂದಾಗಿ, ಅಭ್ಯಾಸಮಾಡಿ ಯಾವುದನ್ನು ಯಾರೇ ಹಾಡಬಹುದಾದರೂ ಹೆಂಗುಸರು ಹಾಡುವುದನ್ನು 'ಹಾಡು' ಎಂದೂ ಗಂಡುಸರು ಹಾಡುವುದನ್ನು 'ಪದ' ಎಂದೂ ಹೇಳುವುದು ಅರ್ಥವತ್ತಾಗಿದೆ. ಶೋಭಾನೆ (ಸೋಬಾನೆ)ಯನ್ನು ಪದ ಎಂಬುದು ಅಷ್ಟೊಂದು ಸರಿಯಲ್ಲವೆಂಬುದು ವಿದಿತವಾಗುತ್ತದೆ.

ಪ್ರಾಚೀನತೆ

ಕನ್ನಡದ ಸಾಹಿತ್ಯೇತಿಹಾಸದಲ್ಲಿ ಕನ್ನಡ ಪದ್ಯಸಾಹಿತ್ಯಕ್ಕೆ ಯಾವ ಪ್ರಾಚೀನತೆ ಇದೆಯೋ ಅದೇ ಪ್ರಾಚೀನತೆ ಶೋಭಾನೆ ಹಾಡಿಗೂ ಇದೆಯೆಂಬುದು ನಿರ್ವಿವಾದ. ಬಹುಶ: ಇದಕ್ಕೆ ಇನ್ನೂ ಪ್ರಾಚೀನತೆ ಇದ್ದಿರಬೇಕು. ಏಕೆಂದರೆ, ಹದಿನಾರು ಬಗೆಯೆಂದು ಪ್ರಚಲಿತವಾದ ಶುಭಸಂಸ್ಕಾರಗಳಲ್ಲಿ ಮದುವೆ ಹಾಗೂ ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಎಲ್ಲ ಮಾನವರಿಗೂ ಅನ್ವಿತವಾದುವು. ವಿಶ್ವದಲ್ಲೇ ಅತಿ ಪ್ರಾಚೀನವಾದ ಹಿಂದುಗಳಲ್ಲಿ ಅನಾದಿಕಾಲದಿಂದ ಲೌಕಿಕ ವೈದಿಕ ಶುಭ ವಿಧಿ ವಿಧಾನಗಳು ನಡೆದುಬರುತ್ತಿದ್ದ ಸಂಗತಿ. ಅಂತಹ ಸಂದರ್ಭಗಳಲ್ಲಿ ಸಾಂಸ್ಕೃತಿಕ ಪ್ರಭಾವಕಾರಕವಾಗಿಯೂ ಶುಭಸಂಕೇತವಾಗಿಯೂ ಹೆಂಗುಸರು ಹಾಡು ಹೇಳುವ ರೂಢಿ ಇದ್ದಿತೆಂದೇ ಭಾವಿಸಬೇಕಾಗುತ್ತದೆ. ಶೋಭಾನೆ ಹಾಡು ಯಾವಾಗ ಹುಟ್ಟಿಕೊಂಡಿತು ಎಂಬುದನ್ನು ಶೋಭಾನೆಯ ಸೊಲ್ಲೊಂದು ನಿರೂಪಿಸುವುದು ಹೀಗೆ:—

ಸೋಬಾನ ಶುಭಕಾರ್ಯ ಯಾವಲ್ಲಿ ಹುಟ್ಯಾವ
ಬಾಗೆಯುಳ್ಳವರ ಮನಿಯಾಗ - ಶುಭಕಾರ್ಯ
ಆಗ ಹುಟ್ಯಾವ - ಬೆಳೆದಾವ[೩]

ಶೋಭಾನೆಗಳ ಹುಟ್ಟು ಅನಾದಿ ಎಂಬ ಭಾವನೆ ಈ ತ್ರಿಪದಿಯಲ್ಲಿ ಕಾಣುತ್ತದೆ. 'ಲೋಕಗೀತಗಳು' ಎಂಬೀ ಪುಸ್ತಕದ ಹೊರಮುಖುಕದಲ್ಲಿ ಈ ಮಾತುಗಳಿವೆ—ಕನ್ನಡ ಸೋಬಾನಗಳು ಕನ್ನಡ ಜನಪದ ಸಾಹಿತ್ಯದ 'ಮಂಗಲಪುಷ್ಪ'. ಅವು ಕನ್ನಡ ಹಳ್ಳಿಗರಿಗೆ ಲಗ್ನವಿಧಾನದ ಮಂತ್ರಗಳಿದ್ದಂತೆ . ಮಂಗಲಕಾರ್ಯಗಳಿಗೆ ಶುಭಾಶೀರ್ವಾದ ಸಂದೇಶವಿದ್ದಂತೆ. ಅವು ಹುಟ್ಟಿದ ಗಂಡು ಹೆಣ್ಣಿಗೆಲ್ಲ ಇಹಪರದ ಹಾದಿಯನ್ನು ತೋರಿಸುವ ಜೀವನದ ಬೆಳಕು. ಒಟ್ಟಿನ ಮೇಲೆ ಅವು ನಮ್ಮ ಸಮಾಜದ ಶಿಷ್ಟಾಚಾರವೆಂದೇ ಹೇಳಬೇಕು. ಹೀಗೆಂದಿರುವ ಈ

೩. ಬಿ.ಎಸ್. ಗದ್ದಗಿ ಮಠ (ಸಂ.) ಲೋಕಗೀತಗಳು (೧೯೬೦) ಪುಟ : ೯.
ಪ್ರ. ಮೈಸೂರು ರಾಜ್ಯದ ಸಾಹಿತ್ಯ ಸಂಸ್ಕೃತಿ ಇಲಾಖೆ, ಬೆಂಗಳೂರು.

ಪುಸ್ತಕದಲ್ಲಿ 'ಸೋಬಾನವು ನಮಗೆ ಶಿವಶರಣರ ಪರಂಪರೆಯಾಗಿದೆ' ಎನ್ನಲಾಗಿದೆ. ವಾಸ್ತವಿಕವಾಗಿ ಇದು ಬ್ರಾಹ್ಮಣ, ಬ್ರಾಹ್ಮಣೇತರ, ಜೈನ ಮುಂತಾದ ಎಲ್ಲ ಹಿಂದು ಪಂಗಡದಲ್ಲಿಯೂ ಪ್ರಾಕ್ಕಾಲದಿಂದ ಪ್ರಚಲಿತವಾಗಿರುವದು ಕಂಡುಬಂದಿದೆ. ಇದನ್ನು ದೃಢಪಡಿಸುವ ಇನ್ನೊಂದು ಜಾನಪದ ತ್ರಿಪದಿ ಹೀಗಿದೆ.

ಸೋಬಾನ ಹೇಳೋದ ಯಾರಮ್ಮ ಮಾಡಿದೊರು
ನಾರಾಯಣ ಬಲ್ಲ ಶಿವಬಲ್ಲ - ಸೋಬಾನ
ಸ್ವಾಮಿ ಈಶ್ವರನ ಮದುವೇಲಿ - ಸೋಬಾನ
ಆಗುಟ್ಟ ಆಗ - ಬೆಳದವೆ[೪]

ಇಲ್ಲಿ ಉದಾಹರಿಸಿದ ತ್ರಿಪದಿ ವಿಸ್ತರಣಗೊಂಡು ನಾಲ್ಕು ಪಾದಗಳಿಗೆ ಚಾಚಿದೆ. ಈ ತ್ರಿಪದಿಯ ಪ್ರಕಾರ, ಪ್ರಪಂಚದ ಮಾತಾಪಿತೃಗಳೆನಿಸಿದ ಶಿವಪಾರ್ವತಿಯರ ಮದುವೆಯ ಸಂದರ್ಭದಿಂದಲೇ ಶೋಭಾನೆ ಹಾಡು ಮೊದಲುಗೊಡು ಬೆಳೆದು ಬಂದಿದೆ.

ಜೈನರ ೨೪ ಮಂದಿ ತೀರ್ಥಂಕರರಲ್ಲಿ ಮೊದಲಿಗನಾದ ವೃಷಭದೇವನ ಜನ್ಮಾಭಿಷೇಕ ಕಲ್ಯಾಣೋತ್ಸವವನ್ನು ದೇವೇಂದ್ರನು ಮಂದರಾಚಲದಲ್ಲಿ ನೆರವೇರಿಸಿದಾಗ ದೇವಾಂಗನೆಯರು ಶೋಭಾನೆ (ಮಂಗಲಗೀತ) ಹಾಡಿಮದಾಗಿ ಕವಿ ಪಂಪನು (ಕ್ರಿ.ಶ. ೯೪೧) ಹೇಳಿದ್ದಾನೆ:

ಸುರಕರನಿರ್ಭರ ಹತಿಯಿಂ
ಸುರದುಂದುಭಿ ನಿನದಮಮರವನಿತಾ ವದನಾಂ
ಬುರುಹದಿನೊರ್ಮೆಯೆ ಮಂಗಲ
ಪರಂಪರಾ ಗೀತನಿನದಮೊದವಿತ್ತೆತ್ತಂ[೫]

ಶೋಭಾನೆ ಹಾಡುಗಳನ್ನು ಹಾಡುತ್ತಿದ್ದ ಉಲ್ಲೇಖ ಸಾಹಿತ್ಯದಷ್ಟೇ ಪ್ರಾಚೀನವೆಂಬುದನ್ನು ಮೇಲಿನ ಉದಾಹರಣೆ ದೃಢಪಡಿಸುತ್ತದೆ. ಆದಿಪಂಪನಿಂದ ಈಚೆಯ ನಾಗಚಂದ್ರನು (೧೦೩೦) ತನ್ನ 'ರಾಮಚಂದ್ರ ಚರಿತ ಪುರಾಣ' ದಲ್ಲಿ ಬರುವ ಸೀತಾಸ್ವಯಂವರ ವರ್ಣನೆಯಲ್ಲಿ, ಅಗ್ಗಳನು (೧೧೮೯) ಚಂದ್ರ ಪ್ರಭಪುರಾಣದಲ್ಲಿ, ಚೌಂಡರಾಜನು (೧೨೦೦) ನಳಚಂಪುವಿನಲ್ಲಿ, ಸೋಮರಾಜನು (೧೨೨೨) ಉದ್ಭಟಕಾವ್ಯದಲ್ಲಿ, ರಾಘವಾಂಕನು (೧೨೩೫) ಸಿದ್ಧರಾಮಚಾರಿತ್ರದಲ್ಲಿ-ಹೀಗೆಯೇ ಹತ್ತಾರು ಕನ್ನಡ ಕಾವ್ಯಗಳಲ್ಲಿ ಶೋಭಾನೆ, ಧವಳಶೋಭಾನೆಗಳನ್ನು ಮುತ್ತೈದೆಯರು ಹಾಡಿದ ಉಲ್ಲೇಖಗಳು ಕಂಡುಬರುತ್ತವೆ.

ಈ ಶೋಭಾನೆ ಹಾಡುಗಳು ಜಾನಪದದ ನಿಮ್ನಸ್ತರದಲ್ಲಿ ಗ್ರಾಮ್ಯಬಹುಳವಾಗಿಯೂ ಭಾಷೆ, ಸಾಹಿತ್ಯ, ವಿದ್ಯಾಸಂಸ್ಕಾರವುಳ್ಳ ಜನವರ್ಗದಲ್ಲಿ ಇವು ಸ್ವಲ್ಪಮಟ್ಟಿಗೆ ಪರಿಷ್ಕಾರಗೊಂಡೂ

---

೪. ಎಚ್. ಎಲ್. ನಾಗೇಗೌಡ (ಸಂ.) ಸೋಬಾನೆ ಚಿಕ್ಕಮ್ಮನ ಪದಗಳು ೧೯೬೯ ಪೀಠಿಕೆ ಪುಟ ೪

೫. ಪಂಪ: ಆದಿಪುರಾಣಂ, ಆ. ೭, ಪದ್ಯ ೭೯

೬. ಟಿ. ಕೇಶವಭಟ್ಟ (ಸಂ.) ಹವ್ಯಕರ ಶೋಭಾನೆಗಳು, ೧೯೮೬, ಪ್ರಸ್ತಾವನೆ 'ಲೋಕಗೀತಗಳು' ಎಂದಿರಬೇಕು.

ಬಳಕೆಯಾಗುತ್ತಿದ್ದವೆಂದು ತಿಳಿಯಲು ಆಧಾರಗಳಿವೆ. ಈ ಸಂಗತಿಯನ್ನು ಹಲವು ಸಂಶೋಧನೆಗಳಿಂದ ಕಂಡುಕೊಂಡು, ಜಾನಪದಗೀತವನ್ನೇ 'ಶುದ್ಧ ಜಾನಪದ' ಮತ್ತು 'ಶಿಷ್ಟ ಜಾನಪದ' ಎಂದು ವರ್ಗೀಕರಿಸಿ ಕೊಳ್ಳುವ ಔಚಿತ್ಯವನ್ನು ಈ ಮೊದಲೇ ಪ್ರತಿಪಾದಿಸಲಾಗಿದೆ.[೬]

ಈ ಬಗೆಯ ಶಿಷ್ಟ ಜಾನಪದರೂಪದಲ್ಲಿದ್ದ ಶೋಭಾನೆ ಹಾಡುಗಳ ಪ್ರಕಾರವೇ ಕವಿರಾಜಮಾರ್ಗೋಕ್ತವಾದ 'ಚತ್ತಾಣ' ಎಂಬ ದೇಸಿಗಬ್ಬವೆಂಬುದನ್ನು ಕೂಡ (ಅದರಲ್ಲೇ) ಸಮರ್ಥಿಸಲಾಗಿದೆ. ಜಾನಪದಗೀತಗಳನ್ನು ಸ್ಥೂಲವಾಗಿ, ಹೆಂಗುಸರ ಹಾಡುಗಳು, ಗಂಡುಸರ ಹಾಡುಗಳು - ಎಂದು ವಿಂಗಡಿಸಿಕೊಳ್ಳುವುದು ಹಿಂದಿನಿಂದಲೇ ಬಂದ ವಿಧಾನ. ಪ್ರಾಚೀನರು ಹಾಗೆಯೇ ವಿಂಗಡಿಸಿಕೊಂಡುದು ಕವಿರಾಜಮಾರ್ಗದಲ್ಲಿ ಗೊತ್ತಾಗುವ ಸಂಗತಿ. ಶಿಷ್ಟಭಾಷೆಗೆ ಹತ್ತಿರವೆನಿಸುವಂತೆ ಗ್ರಾಮ್ಯದಿಂದ ಮುಕ್ತವಾಗುವಷ್ಟು ಮಟ್ಟಿಗೆ ತಿದ್ದುಪಡಿಮಾಡಿದ ಗಂಡುಸರ ಹಾಡು (ಪದ) ಬೆದಂಡೆ ಎನಿಸಿತು. ಅಂಥವೇ ಹೆಂಗುಸರ ಹಾಡು (ಶೋಭಾನೆ) 'ಚತ್ತಾಣ' ಎನಿಸಿತು. ಇವೆರಡೂ ಬಗೆಯವೂ ಮಹಾಕವಿಪ್ರಣೀತ ಕಾವ್ಯಗಳಿಗೆ ಜಾನಪದ ಮಟ್ಟದಲ್ಲಿ ಸರಿಸಾಟಿಯಾಗಿ ಒಡಂಬಡುವಂತಾಯಿತು. ಇದನ್ನೇ ಕವಿರಾಜಮಾರ್ಗ ಸ್ಪಷ್ಟಪಡಿಸಿರುತ್ತದೆ.

ನುಡಿಗೆಲ್ಲಂ ಸಲ್ಲದ ಕ । ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ
ಗಡಿನ ನೆಗಳ್ತೆಯ ಕಬ್ಬದೊ । ಳೊಡಂಬಡಂಮಾಡಿದರ್ ಪುರಾತನ ಕವಿಗಳ್
(೧-೩೩)

ಹಿಂದಿನ ಕವಿಗಳಿಂದಲೇ ಇಂತಹ ತಿದ್ದುಪಡಿಯಾಗುತ್ತಿದ್ದಿತೆಂದು ಇಲ್ಲಿ ಅಭಿಪ್ರಾಯ. ಅವುಗಳ ಇಂದಿನ ಉಳಿಕೆಗಳ ಸ್ವರೂಪವೇ ಗಂಡುಸರು ಹಾಡುವ 'ಯಕ್ಷಗಾನ ಪದ' (ಬೆದಂಡೆ) ಹಾಗೂ ಹೆಂಗುಸರು ಹಾಡುವ 'ಶೋಭಾನೆ ಹಾಡು' (ಚತ್ತಾಣ) ಎಂಬ ನಿರ್ಣಯಕ್ಕೆ ಬರುವುದು ಸಕಾರಣವಾಗಿದೆ. ಈ ವಿವರಣೆ ಹಾಡುಗಳ ಪ್ರಾಚೀನತೆಗೆ ನಿದರ್ಶನವಾಗುತ್ತದೆ.

ಅನೇಕ ಜಾನಪದ ವಿದ್ವಾಂಸರು - ಶೋಭಾನೆಗಳೂ ಸೇರಿದಂತೆ, ಜಾನಪದಗೀತ ಸಮೃದ್ಧಿಯಿರುವುದು ಕೇವಲ ಕೆಳಮಟ್ಟದವರಲ್ಲಿ - ಅಂದರೆ ಕುರುಬರು, ಕೊರಮರು, ಒಕ್ಕಲಿಗರು, ಕುಂಬಾರರು, ಹೊಲೆಯರು, ಮಾದಿಗರು, ಎರವರು - ಮುಂತಾದ ನಿಮ್ನವರ್ಗದವರೆಂದು ಎಣಿಸಲಾದ ಪಂಗಡದವರಲ್ಲಿ ಎಂದೇ ಭಾವಿಸಿಕೊಂಡಿದ್ದಾರೆ. ಅಂತಹ ಜನವರ್ಗದಿಂದ ಬಲುಮಟ್ಟಿಗೆ ಗ್ರಾಮ್ಯಮಯವಾದ, ತ್ರಿಪದಿಯ ಹಾಗೂ ತ್ರಿಪದಿಯ ಛಾಯೆಯುಳ್ಳ ಹಳ್ಳಿಹಾಡುಗಳನ್ನು ಸಂಗ್ರಹಿಸುತ್ತ ಬಂದಿದ್ದಾರೆ. ಬ್ರಾಹ್ಮಣ, ಜೈನ, ವೀರಶೈವಾದಿ ಜನವರ್ಗದಲ್ಲಿ ಇವೆಲ್ಲಕ್ಕಿಂತ ನೂರ್ಮಡಿ ವೈಶಿಷ್ಟ್ಯ ವೈವಿಧ್ಯಗಳ ಛಂದಸ್ಸು, ಧಾಟಿ, ಸಂಸ್ಕೃತಿ ಮಹತ್ವಗಳಿರುವ ಶೋಭಾನೆ ಹಾಡುಗಳಿರುವುದನ್ನು ಲಕ್ಷಿಸಲಾಗದೆ, ಅವರು ತಮ್ಮ ನಿರ್ಣಯದಲ್ಲಿ ಮುಗ್ಗರಿಸಿದ್ದಾರೆ. ಈ ಕ್ಷೇತ್ರದಲ್ಲಿ ಆಗಿರುವ ಸಂಗ್ರಹ ಪ್ರಕಟನಗಳನ್ನು ಅವಲೋಕಿಸಿದರೆ, ನಿಜದ ಅರಿವಾಗುವುದು. ಆಗಿರುವ ಜಾನಪದ ಗೀತಸಂಗ್ರಹಗಳಲ್ಲಿ ಹೆಚ್ಚಿನ ಶೋಭಾನೆ ಹಾಡುಗಳು ಕೈಬಿಟ್ಟಿವೆ. ಕಾಟಾಚಾರಕ್ಕಾಗಿ ಎಂಬಂತೆ, ಕ್ಷುಲ್ಲಕವಾಗಿ ಕೆಲವನ್ನು ಅವು ಸೇರಿಸಿಕೊಂಡಿವೆ. ಅವನ್ನು ಸ್ವಲ್ಪ ಮಟ್ಟಿಗೆ ಅವಲೋಕಿಸಲಾಗುವುದು.

ಹಲಸಂಗಿ ಗೆಳೆಯರಿಂದ ಸಂಗ್ರಹಗೊಂಡು ೧೯೩೧ ರಲ್ಲಿ ಮೊದಲ ಮುದ್ರಣವಾಗಿ ಬಂದ 'ಗರತಿಯ ಹಾಡು' ತ್ರಿಪದೀ ಸಂಗ್ರಹವೆಂದೇ ಹೆಸರುಗೊಂಡಿದೆ. ಅದರಲ್ಲಿ ಶೋಭಾನೆ ಹಾಡುಗಳಿಲ್ಲ. ಕಾಪಸೆ ರೇವಪ್ಪನವರ ಸಂಗ್ರಹ - 'ಮಲ್ಲಿಗೆದಂಡೆ' (೧೯೩೫) ಯಲ್ಲಿ ೯ ವರ್ಗದ ಹಾಡುಗಳಿವೆ. ೫ನೆಯದು 'ಮದುವೆಯ ಹಾಡು' ಮತ್ತು ೬ ನೆಯದು 'ಸೋಬಾನದ ಹಾಡು'. ಇಲ್ಲಿರುವವು ಮದುವೆಯಲ್ಲಿ ಅತ್ಯಂತ ಪರಿಮಿತ ಆಚರಣೆಗಳಿಗೆ ಸೀಮಿತವಾಗಿವೆ. ಎಲ್ಲವೂ ತ್ರಿಪದಿಗಳೇ. ಇತರ ವೈವಿಧ್ಯವಿಲ್ಲ. ಭಾಷೆ ಶುದ್ಧಜಾನಪದ. ಕೂಸು ಒಪ್ಪಿಸುವ ಹಾಡಿನ ಒಂದೆರಡು ಸೊಲ್ಲುಗಳಿವು :

ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ
ಹಂಬಲಿಸಿ ನಿನ್ನ ಹಡೆದೇನ - ಸೋಬಾನ
ಹಂಬಲಿಸಿ ನಿನ್ನ ಹಡೆದೇನ ಚತ್ರದ
ಗೊಂಬಿ ನಿನಗೊಪ್ಪಿಸಿ - ಕೊಡಲ್ಹಾಂಗ । ಸೋಬಾನ

ತ್ರಿಪದಿಯ ಲಕ್ಷಣದಂತೆ ಇದನ್ನೇ ರೂಪಿಸುವಾಗ ಇನ್ನಷ್ಟು ಗ್ರಾಮ್ಯರೂಪ ತಾಳುತ್ತದೆ

ಒಂಬತ್ತಿಂ । ಗಳ್ನಿನ್ನ । ತುಂಬ್ಕೊಂಡು । ತಿರುಗೇನ ।
ಹಂಬಲ್ಸಿ । ನಿನ್ನ । ಹಡೆದೇನ । - ಚತ್ರದ ।
ಗೊಂಬಿನಿ । ನ್ಗೋಪ್ಸೀ । - ಕೊಡಲ್ಹಾಂಗ

ಇಲ್ಲಿ 'ನಿನ್ಗೋಪ್ಸಿ' ಎಂಬಲ್ಲಿರುವ ನಿನಗೆ ಎಂಬುದಕ್ಕೆ 'ನಿನ್ನನ್ನು' ಎಂಬ ಚತುರ್ಥಿ ವಿಭಕ್ತ್ಯರ್ಥ. ಇನ್ನೆರಡು ಸೊಲ್ಲುಗಳನ್ನು ನೋಡೋಣ:

ಮುಂಜಾನೆ । ದ್ನಮ್ಮಗ್ಳು । ತುಪ್ಪಬಾ । ನುಂಡೋಳು ।
ಪಟ್ಟಮಂ ಚದಲಿ । ಮಲಗೋಳು । ನಮ್ಮಗ್ಳು ।
ಕಟ್ಬೂತ ಕತೆಯ । ಹೇಳೂಳ

ಕುಂಬಳ । ಕಾಯೊಯ್ದು । ಕುಡುಗೊಲ್ಗೆ ಕೊಟ್ಟಂತೆ ।
ಇಂದ ನ । ಮ್ಮಗಳ । ಕೊಡತೀವ । - ಪಾರ್ವತಿ ।
ಕಂದನ ಸರಿ । ಮಾಡಿ । - ಸಲಹವ್ವಾ

ಮೊದಮೊದಲ ಜನಪದಗೀತ ಸಂಗ್ರಹದಲ್ಲಿ ಶೋಭಾನೆಗಳ ಸೇರ್ಪಡೆ ತೀರಾ ಬಡಕಲಾದರೂ ಆ ಮೇಲೆ ಹೆಚ್ಚುಗೊಳ್ಳುತ್ತಾ ಬಂದುದು ಕಂಡುಬರುತ್ತದೆ. ಕರ್ನಾಟಕದಲ್ಲಿ ಜನಪದಗೀತಗಳ ಸಂಶೋಧನೆಯಿಂದ ಪ್ರಥಮವಾಗಿ ಡಾಕ್ಟರೇಟ್ ಪಡೆದ ಬಿ.ಎಸ್. ಗದ್ದಗಿಮಠರ 'ಲೋಕಗೀತೆಗಳು' (೧೯೬೦) ಎಂಬ ಸಂಕಲನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೋಬಾನ ಹಾಡುಗಳಿವೆ. ಇವುಗಳಲ್ಲಿ ಎರಡು ಪಾದವುಳ್ಳವು ಮತ್ತು ನಾಲ್ಕು ಪಾದಕ್ಕೆ ಎಳೆದುಕೊಂಡುವು ಎಂಬ ಒಂದೆರಡನ್ನು ಬಿಟ್ಟಲ್ಲಿ, ಉಳಿದುವೆಲ್ಲವೂ ತ್ರಿಪದಿಗಳೇ. ಹಲವು ತ್ರಿಪದಿಗಳು ಛಂದಸ್ಸಿನಲ್ಲಿ ಕುಂಟುತ್ತವೆ. ಭಾಷೆ ಗ್ರಾಮ್ಯ, ಈ ಸಂಕಲನಕ್ಕೆ ಯಾವುದೇ ಆಚರಣೆಯ ಅನುಕ್ರಮವಾಗಲಿ ಶಾಸ್ತ್ರಕ್ರಮವಾಗಲಿ ಇಲ್ಲ. ಒಂದು ಉದಾ: ' ಕಾಲುಹಿಡಿಯುವುದು' ಎಂಬ ಶೀರ್ಷಿಕೆಯದು. (ವಾಸ್ತವವಾಗಿ ಇದು ಮದುವೆಯಾಗಿ ವಧುವಿನೊಂದಿಗೆ ಗೃಹಪ್ರವೇಶ ಮಾಡುವ ಅಣ್ಣನಿಗೆ

ಆತನ ತಂಗಿ ಅಡ್ಡ ನಿಂತು ಬಾಗಿಲು ತಡೆವ ಹಾಡು.) ' ಬಾಗಿಲ ಬಾಗಿಲ ತೋಳ ಬಿಡ ತಂಗಿ ಕಾಲ' ಪಲ್ಲವಿ.

ಕಟ್ಟಿಸಿದ ಬಾಗಿಲಕ ಕೆತ್ತಿಸಿದ ಒಣಕಿಯ
ಯಾಕಡ್ಡ ಚೆಲ್ಲಿದಿ ತಂಗಿ ||
ಒಣಕೊಗೆದ ಕಾರಣ ಯಾಕ ಕೇಳುವಿರಣ್ಣಾ
ಹಡೆದು ಹೆಣ್ಣಮಗ ಕೊಡಬೇಕು ||
ಹಣ್ಣಾ ಹಣ್ಣಂದರ ಯಾತರ ಹಣ್ಣವು
ಮಾವಿನ ಹಣ್ಣಾ ಕೊಡತೀನಿ ||
ಮಾವಿನ ನಿನಹಣ್ಣಾ ಏನು ಮಾಡಲಿ ಅಣ್ಣಾ
ಹಡೆದು ಹೆಣ್ಣಮಗ ಕೊಡಬೇಕು

ಶಿವಮೊಗ್ಗ ಜಿಲ್ಲೆಯ ಜಾನಪದಗೀತ ಸಂಗ್ರಹವಾಗಿ 'ಹಾಡ್ಹೇಳೆ ತಂಗಿ ದನಿಯೆತ್ತಿ' ಎಂಬುದರಲ್ಲಿ ಮದುವೆ ಹಾಡುಗಳಿದ್ದರೂ ಎಲ್ಲವೂ ತ್ರಿಪದಿಗಳೇ. ಆ ಜಿಲ್ಲೆಯಲ್ಲಿ ಪ್ರಚಲಿತವಿರುವ ಬೇರೆ ಬೇರೆ ಧಾಟಿಯ, ಛಂದಸ್ಸಿನ ಹಾಡುಗಳ ದರ್ಶನವಿಲ್ಲ. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿಯ ಚಿತ್ರಣವಿರುವ 'ಹಾಲಕ್ಕಿ ಪಾಯಸ' ಎಂಬ ಸಂಕಲನವೂ ಇಂತಹದೇ. ಇದರ ಭಾಷೆಯ ಗ್ರಾಮ್ಯ ವೈಶಿಷ್ಟ್ಯಕ್ಕೊಂದು ಉದಾಹರಣೆ : (ಹೆಣ್ಣು ಕೇಳುವ ಹಾಡು)

ಲಪ್ಪನ ಮನೆಯೆಂದು ಹೆಣ್ಣಾ ಕೇಲು ಹೋಗಿ
ಲಪ್ಪನ ಮನೆಯಲ್ಲಿ ಕುಲು ತಿ
ಲತ್ತುಗಿ ನೀ ಬಾರೆ ಮಾಯ್ನಣ್ಣೆ ಸಮಿಯುವ
ಮಾತನಾಡುವ ಜಗುಲಿಗೆ ||

(ಈ ಜಾನಪದ ಭಾಷೆಯಲ್ಲಿ ಅಕಾರದ ಉಚ್ಚಾರಣೆ ಲಕಾರವಾಗಿದೆ.)

ಶೋಭಾನೆ ಹಾಡುಗಳನ್ನೆ ಒಳಗೊಂಡ ಸಣ್ಣ ದೊಡ್ಡ ಸಂಕಲನಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಆಗಾಗ ಅಚ್ಚಾಗಿ ಪ್ರಕಟವಾಗಿವೆ. ಅವುಗಳ ಒಂದು ವಿವರಣಾತ್ಮಕ ನಿರೂಪಣೆಯನ್ನು 'ಹವ್ಯಕರ ಶೋಭಾನೆಗಳು' (೧೯೮೬) ಎಂಬ ಗ್ರಂಥದ ಎರಡನೆಯ ಅನುಬಂಧದಲ್ಲಿ ಕಾಣಬಹುದು.

ತ್ರಿಪದಿಗಳು ಮಾತ್ರವಲ್ಲದೆ, ಧಾಟಿಯಲ್ಲಿ ರಚನೆಯಲ್ಲಿ ವೈವಿಧ್ಯವುಳ್ಳ ಶೋಭಾನೆ ಹಾಡುಗಳಿರುವ ಮುದ್ರಿತ ಪುಸ್ತಕಗಳು ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಎಷ್ಟೋ ಹೊರಬಂದಿವೆ. ಉಡುಪಿಯ ಮಧ್ವಸಿದ್ಧಾಂತ ಗ್ರಂಥಮಾಲೆ, ಮಂಗಳೂರಿನ ನಿತ್ಯಾನಂದ ಗ್ರಂಥಮಾಲೆ ಶೋಭನಗೀತ ಪುಸ್ತಕ ಪ್ರಕಟನೆಗೆ ಹೆಸರಾಂತವು. ಆದರೆ, ಆ ಮುದ್ರಣಗಳಲ್ಲಿ ಪಾದವಿಭಜನೆ ಇಲ್ಲ. ಈಚೆಗೆ, ಬಂದಿರುವ ಶ್ರೀಮತಿಘಟ್ಟ ಕೃಷ್ಣ ಮೂರ್ತಿಯವರ ಗೀತೆಗಳು, ಗೃಹಿಣೀಗೀತೆಗಳು, ಶ್ರೀಮತಿ ವಾಗೀಶ್ವರೀ ಶಾಸ್ತ್ರಿಯವರ 'ಹೃದಯಸಂಪುಟ' ಮೊದಲಾದುವು ಪಾದಬದ್ಧವಾಗಿ ವೈವಿಧ್ಯಮಯವಾಗಿಯೂ ಇವೆ. ಆದರೆ,ಸಂಪಾದನ ಕಾರ್ಯ ಸಮರ್ಪಕವಾಗಿ ಕಂಡುಬರುವುದಿಲ್ಲ. ತಪ್ಪು ಉಚ್ಚಾರಣೆಗಳನ್ನು ಬೇಕೆಂತಲೇ ತುಂಬಿಕೊಂಡಂತಿವೆ.

ಒಳನೋಟ

ಶಿಷ್ಟ ಜಾನಪದವೆನಿಸುವ ಈ ಶೋಭಾನೆಗಳ ರೂಪವೈವಿಧ್ಯವನ್ನೂ ಅವು ವ್ಯಕ್ತಪಡಿಸುವ ರಸಿಕತೆಯನ್ನೂ ಸಂಸ್ಕೃತಿಯನ್ನೂ ಪರಿಮಿತಿಯಿಂದ ಇಲ್ಲಿ ದಿಗ್ದರ್ಶಿಸಬಹುದಾಗಿದೆ. ಶುಭಕಾರ್ಯಗಳೆಲ್ಲವೂ ವಿಘ್ನನಾಶಕನಾದ ಸಿದ್ಧಿ ಪ್ರದನಾದ ಗಣೇಶನ ಪೂಜೆಯಿಂದ ಮೊದಲುಗೊಳ್ಳುತ್ತವೆ. ಆಗ ಹಾಡುವ ಹಾಡಿದು : (ತ್ರಿಪದಿ)

ಸಿದ್ಧಿವಿನಾಯಕ ಸಿದ್ಧಿಯ ಮಾಡಯ್ಯ
ಸಿಬ್ಬಲುಂಡಲಿಗೆ ನಿನಗೀವೆ - ಗಣನಾಥ
ಶೀಘ್ರದಿ ಮತಿಯ - ಕರುಣಿಸು ॥
ಕಾರ್ಯವಿನಾಯಕ ಕಾರ್ಯವ ಮಾಡಯ್ಯಾ
ಕಾರೆಳ್ಳು ಕಡಲೆ ನಿನಗೀವೆ - ಗಣನಾಥ
ಕಾರ್ಯದಲಿ ಮತಿಯ - ಕರುಣಿಸು ॥

ತ್ರಿಪದೀ ರೂಪದ ಈ ಹಾಡಿನ ಎರಡು ಸೊಲ್ಲು (ನುಡಿ) ಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ. ಮದುವೆ ಹಾಡುಗಳ ವಿಷಯಕ್ಕೆ ಬಂದರೆ, 'ಹೆಣ್ಣು ಕೇಳುವ ಹಾಡು' ವಿಶೇಷ ಅರ್ಥವುಳ್ಳದ್ದು. ಈ ಕಾಲದಲ್ಲಿ ಹೆಣ್ಣನ್ನು ಕೇಳುವವರಿಲ್ಲ. ಮದುವೆಗಾದ ಕನ್ಯೆಗೆ ಎಣೆಯ ವರನ ಬೇಟೆಯೇ ಎಲ್ಲೆಲ್ಲೂ ! ಆದರೆ, ವರಾನ್ವೇಷಣೆಯ ಹಾಡು ಕಂಡುಬರುವುದಿಲ್ಲ. ಹಿಂದೆ ಹೆಣ್ಣಿಗೆ ಸಮಾಜದಲ್ಲಿದ್ದ ಹಿರಿಮೆಗೆ ಈ ಹಾಡು ದ್ಯೋತಕ. ಶಿವನಿಗೆ ಪಾರ್ವತಿಯನ್ನು ಕೊಡುವಂತೆ ಕೇಳುವ ಹಾಡು ಹೀಗಿದೆ :

ಕೊಡಬೇಕು ಪಾರ್ವತಿಯ । ಪರ್ವತರಾಯ
ಕೈಲಾಸ ವಾಸನಿಗೇ ॥ ಪ ॥
ಕೊಡಬೇಕು ನಿನ್ನಯ ಮೋಹದ ಮಗಳನು
ಕೊಡಬೇಕು ಪಾರ್ವತಿಯ । ಕೈಲಾಸದ
ಒಡೆಯ ಶಿವಗೆ ಸುತೆಯ ॥ ಅ.ಪ. ॥

ಮುಂದೆ ಮದುವೆ ನಿಶ್ಚಯವಾಯಿತೆಂದು ಇಟ್ಟುಕೊಳ್ಳೋಣ. ದಿನ ನಿಶ್ಚಯವಾದ ಮೇಲೆ ಕರೆಕೊಡುವ ಕಾರ್ಯವಿರುತ್ತದೆ. ಶ್ರೀ ಕೃಷ್ಣನ ಮದುವೆಗೆ ದೇವಕಿ ಕೇರಿಕರೆಯುವ ಹಾಡಿನ ೧೬ಸೊಲ್ಲುಗಳಲ್ಲಿ ಕೆಲವಿವು : (ಇದರ ಛಂದೋರೂಪವನ್ನು 'ಸರಳಾರ' ಎನ್ನುತ್ತಾರೆ)

(ಕರೆದಳೆ ದೇವಕಿ ಕೇರಿಯನು। ತರಳೆ ಬೇಗದಿ ಬರಬೇಕೆಂದು : ಪ)

ದೇವಕಿ ಉದಯವಾಗದ ಮುನ್ನ ಎದ್ದಳೆ
ಭಾವ ಮೈದುನರನು ಕರೆವೆನೆಂದು
ಗೋವಳರಾ ಮನೆ ಕೇರಿ ಪಟ್ಟಣಗಳ
ಭಾವೆಯರೊಡಗೊಂಡು ಕರೆದಳಾಗ—ಕರೆದಳೆ ದೇವಕಿ ॥ ೧ ॥
ಬಾಲಚಂದ್ರನ ಪ್ರಭೆ ಪೋಲ್ವ ಸೀರೆಯನುಟ್ಟು
ನೀಲ ಮಾಣಿಕದಾಭರಣವಿಟ್ಟು

ಕಾಲುಂಗಿಲ ಬೆಳ್ಳಿ ಹಿಂಡುಗಂಕಣ ತೊಟ್ಟು
ದೇವಕಿ ಕೇರಿಯ ಕರೆದಳಾಗ. ಕರೆದಳೆ ದೇವಕಿ ॥ ೨ ॥

ಬಡವರೆಲ್ಲರು ಬನ್ನಿ ಹುಡುಗರೆಲ್ಲರು ಬನ್ನಿ
ಬಡದೆ ಬನ್ನಿರಿ ಎಲ್ಲ ಬೆಳವಿಗಾಗಿ
ಕಡೆಯ ಕೇರಿಯ ಹೆಣ್ಣು ಮಕ್ಕಳೆಲ್ಲರು ನೀವು
ಸಡಗರದಿಂದ ಬನ್ನಿರೆಂದಳು—ಕರೆದಳೆ ದೇವಕಿ ॥ ೩ ॥

ವೇದ ಶಾಸ್ತ್ರದ ಪಂಡಿತರೆಲ್ಲರು ಬನ್ನಿ
ಸಾಧುಸಂತಾದಿ ಸುಜ್ಞಾನಿಗಳು
ಬೀದಿ ಬೀದಿಯಲೆಲ್ಲ ಕಂಡ ಕಂಡವರನು
ದೇವಕಿ ದೇವಿಯು ಕರೆದಳಾದ—ಕರೆದಳೆ ದೇವಕಿ ॥ ೪ ॥

ಮದುವೆ, ಹೋಮ, ಪೂಜೆ ಮುಂತಾದ ಯಾವುದೇ ಕಾರ್ಯದ ಯಾವುದೇ ಅಂಗವಿರಲಿ, ಅದಕ್ಕೊಂದು ಹಾಡಿರುತ್ತದೆ. ಹಾಡಿನ ಸೊಲ್ಲುಗಳು ಮೂರರಿಂದ ನೂರುಮಿಕ್ಕಿಯೂ ಇರುತ್ತವೆ. ಮದುಮಗಳಿಗೆ ತಲೆಗೆ ಎಣ್ಣೆ ಹಚ್ಚುವುದಕ್ಕೂ ಹಾಡು ಇದ್ದೇ ಇದೆ. ಕೆಳಗಿನದು ೬ ಪಾದಗಳಿರುವ ಅಂಶಗಣಾತ್ಮಕ ರಚನೆ. ಮೊದಲ ೨ ಪಾದಗಳಿಗೆ ವಿಳಂಬ ಗತಿ ಮತ್ತೆ ೩ ಪಾದಗಳಿಗೆ ಏಕತಾಳದ ಅಥವಾ ಅಟ್ಟತಾಳದ ದ್ರುತಗತಿ; ಕೊನೆಯ ಪಾದ ತ್ರಿಪದಿಮಕುಟವಾಗಿದ್ದು ವಿಳಂಬ ಗತಿಯುಳ್ಳುದಾಗಿದೆ.

ಶ್ರೀ ಮಹಾಲಕ್ಷ್ಮಿಯ ನೋಡಿ
ಕಾಮಿನಿಯರು ಕೈಯ ನೀಡಿ ॥
ಸಾಮಜಗಾಮಿನಿಯರು ಹರಿವಣದಿ
ನೇಮಿಸಿ ತೈಲವ ನೆತ್ತಿಯೊಳಿರಿಸುತ
ಕ್ಷೇಮದಿ ಸರ್ವರು ಮದುಮಗಳಿಗೆ ಸು ॥
ಪ್ರೇಮದಿ ಚರ್ಚಿದರು - ಹನಿಯೆಣ್ಣೆ ॥

ಮದುವೆ ಜರುಗುವುದು ವಧುವಿನ ಮನೆಯಲ್ಲಿ. ಅದಕ್ಕೆ ಮುನ್ನ ಸಕಾಲದಲ್ಲಿ ವರನ ದಿಬ್ಬಣ ಬರುತ್ತದೆ. ಬಂದವರನ್ನು ಉಪಚರಿಸುವ ಹಾಡಿನ ಕೆಲವು ಸೊಲ್ಲುಗಳು ಇಂತಿವೆ :

ಬಂದಿರೋ ಸರುವರು । ಬಂಧುಗಳೆಲ್ಲರು ॥ ಪ ॥
ಬಿಸಿ । ಲಿಂದ ಬಲು ಬಳಲುತಲಿ
ತೃಷೆ । ಯಿಂದ ಬಾಯಾರುತಲಿ
ಹಸಿವೇರೀ ಮುಖ ಬಾಡೀ ಹಸನಾಗಿ ದಣಿಸಿರಿ ॥ ೧ ॥
ಇಕೊ । ಳಿಲ್ಲಿ ಪರಿಮಳ ಜಲವು
ಮಗು । ಳಿಲ್ಲಿ ಶುದ್ಧೋದಕವು
ತೊಳಕೊಳ್ಳೀರೆಲ್ಲರೀಗ ಕೈಕಾಲು ಮುಖಗಳ ॥ ೨ ॥
ಮೃದು । ರತ್ನಕಂಬಳಿಯಲ್ಲಿ
ನವ । ರತ್ನ ಹಸೆಮಣೆಯಲ್ಲಿ
ವರವಿಷ್ಟರಗಳಲ್ಲಿ ಕುಳ್ಳಿರಿ ಸುಖದಲಿ ॥ ೩ ॥

ಮದುವೆಮಂಟಪದ ಮುಂದೆ ಮಹಾಜನರ ಸಭೆ. ಮುಹೂರ್ತಕ್ಕೆ ಮುನ್ನ ಎಲ್ಲರನ್ನೂ ಇಲ್ಲಿಗೆ ಬಂದು ಕುಳಿತುಕೊಳ್ಳುವಂತೆ ಸ್ವಾಗತಿಸಬೇಕು. ಅದಕ್ಕಾಗಿ 'ಸಭೆಗೆ ಕರೆವ ಹಾಡು' ಇದೊಂದು ಸ್ವಾಗತ ಭಾಷಣದ ಮಾದರಿ - ಹಾಡಿನಲ್ಲಿ.

ಬನ್ನೀ ಸಭೆಗೆ ತಡವೇನು । ಬನ್ನಿ
ಬನ್ನೀ ಸಭೆಗೆ ತಡವೇನು । : ಪ : ನಮ್ಮ
ಮನ್ನಣೆ ಕೈಗೊಳ್ಳಿರಿನ್ನು । ಬಲು
ಬನ್ನಬಟ್ಟಿರುವಿರಿ ಸಣ್ಣವರೆಲ್ಲವರು ಬನ್ನೀ ಬನ್ನೀ ॥ ೧ ॥
ಕಾಲಿಗೆರೆದುಕೊಳ್ಳಿ ನೀರು । ಮುಖದ
ಮೇಲೇರುತಿದೆ ಬೆವರ್ ಜೋರು । ಬಹ
ಳಾಲಸ್ಯಪಟ್ಟಿರುವಿರಿ ಏಲಕ್ಕಿ ಪಾರು ಕುಡಿರಿ. ಬನ್ನಿ ಬನ್ನೀ ॥ ೨ ॥
ಕಲ್ಲು ಸಕ್ಕರೆ ದ್ರಾಕ್ಷೆಯನ್ನು । ಹೊಸ
ಬೆಲ್ಲನೀರೆಳನೀರನ್ನು । ಬಲು
ಉಲ್ಲಾಸದಿಂದ ಕೊಳ್ಳಿ ಇಲ್ಲವಾದ್ರೆ ತರಿಸಿಕೊಳ್ಳಿ. ಬನ್ನಿ. ॥ ೩ ॥

ಮಹಾಕವಿಗಳು ವಿವಾಹ ಸಭೆಯನ್ನು ವರ್ಣಿಸಿರುವುದುಂಟು. ಜಾನಪದ ಕವಿಗಳಿಗೂ ಸರಳವಾಗಿ ಅಂತಹ ವರ್ಣನೆ ಮಾಡಲು ಬರುತ್ತದೆ. ಸಭಾಲಂಕಾರದ ಹಾಡು ಇಲ್ಲಿದೆ. ೧೬ ಸೊಲ್ಲುಗಳಿರುವ, ತ್ರಿಪುಟ ತಾಳ ಗತಿಯ ಈ ದ್ವಿಪದಿಗಳಲ್ಲಿ ಎರಡನೆಯ ಪಾದಾಂತ್ಯದ ಎರಡಕ್ಷರಗಳನ್ನು ತುಂಬ ಎಳೆದು ಹಾಡುವುದು ಇದರ ಧಾಟಿ :

ಗುರುಗಣಪತಿಯಾ ಭಜಿಸಿ ಶಾರದೆಯಾ
ಅರುಹುವೆ ಸಭೆಯ ವಿಸ್ತಾರಾ ॥ ಪ ॥
ಮಂಟಪ ಬಹಳಾ ಹೊಳೆಯಲು ಸಕಲಾ
ನೆಂಟರಿಷ್ಟರು ಬಂದರಾಗಾ ॥ ೧ ॥
ಕಂಬ ವಜ್ರಗಳು ಹೊಳೆಯುತ್ತಲಿರಲು
ರಂಭೆಹಣ್ಣಿನ ಗೊನೆ ನೂರು ॥ ೨ ॥
ರಂಗವಲ್ಲಿಗಳು ಬಹುಚಿತ್ರಗಳು
ಬಂಗಾರದೆಸಳಿನ ಹೂವು ॥ ೩ ॥

ವಿವಾಹ ಸಭೆಯಲ್ಲಿ ಮುಖ್ಯವಾಗಿ ಸ್ತ್ರೀಯರಿಗೆ ಹೂಹಚ್ಚುವದು ವಿಶೇಷ ಗೌರವಸೂಚಕ. ಪರಮ ಮಂಗಳಕರ. ಅಂತಹ ಹಾಡಿನ ಒಂದೆರಡು ಸೊಲ್ಲುಗಳಿವು -

ಹಚ್ಚಿದರ್ ಸುಮಗಳನು । ನಾರಿಯರು
ಸ್ವಚ್ಛದೊಳೆಲ್ಲವನು ॥ ಪ ॥
ಹೆಚ್ಚಿನ ಸಭೆಜನ ಮೆಚ್ಚುವಂದದಿ ಘನ
ಅಚ್ಚ ಮಲ್ಲಿಗೆಚೆಂಡ ಬಿಚ್ಚಿಕೊಳ್ಳುತ್ತ ಖಂಡ ॥ ೧ ॥
ಕಾಳಾಹಿವೇಣೀಯರು ॥ ಪನ್ನೀರು ಗಂಧ
ಕೋಲಾಹಲವ ಗೈದರು

ಬಾಲೆಯರ್ ಸುರುಚಿರ ಮಾಲೆಯರ್ ಸುಗುಣ ವಿ
ಶಾಲೆಯರ್ ಮುಕುರಕಪೋಲೆಯರ್ ಪೊಗಳುತ ॥ ೨ ॥
ಸುರಗಿ ಸೇವಂತಿಗೆಯ । ಬಹುವಿಧ
ಪರಿಮಳ ಸಂಪಗೆಯ
ತರತರ ಸುಮಗಳ ತರಿಸಿ ತರಿಸಿ ಸಮ
ಧರಿಸಿ ತಲೆಯ ಮೇಲೆ ನೆರೆದ ನೀರೆಯವೆಲ್ಲ ॥ ೩ ॥

ಶೋಭಾನೆ ಹಾಡುಗಳಲ್ಲಿ ಕಲ್ಯಾಣಗಳು, ಬಾಲಲೀಲೆ, ಪಾರಿಜಾತದ ಹಾಡು, ಸಮುದ್ರ ಮಥನ, ಮುಂತಾದ ಉದ್ದುದ್ದ ಕತೆಹಾಡುಗಳೂ ಇವೆ. ಸಮಾರಂಭಗಳಲ್ಲಿ ದೀರ್ಘಕ್ರಿಯಾಭಾಗ ನಡೆಯುತ್ತಿರುವಾಗ ಹಾಡಲು, ವಿರಾಮ ವೇಳೆಯಲ್ಲಿ ಪುಣ್ಯಕಥನ ಗೀತವಾಗಿಯೂ ಹೇಳಲು ಅವು ಉಪಯುಕ್ತವಾಗುತ್ತವೆ. ಅವುಗಳಲ್ಲಿ ಒಂದೊಂದಕ್ಕೂ ವಿಶಿಷ್ಟ ಧಾಟಿಗಳಿರುತ್ತವೆ. ಪಂಚಪದಿಯಾಗಿರುವ ಗಿರಿಜಾಕಲ್ಯಾಣ ಹಾಡಿನ ಸೊಲ್ಲು ಹೀಗಿದೆ :

ಗಣಪ ವಾಗ್ದೇವಿಯರಡಿಗೆ ವಂದಿಸುತ
ಫಣಿಶಯನನ ಪಾದವನಜಕೊಂದಿಸುತ
ತ್ರಿಣಯಗೊಂದಿಸಿ ಗುರುವರನ ಧ್ಯಾನಿಸುತ
ಗುಣನಿಧಿ ಮಹಾಮಾಯೆಯ ಪ್ರಾರ್ಥಿಸುತ
ಗಿರಿಜಾ ಕಲ್ಯಾಣವನೊರೆವನು ॥ ೧ ॥

ಪಾರಿಜಾತದ ಹಾಡಿನ ಮಾದರಿ ಹೀಗಿದೆ :

ಗುರು ಗಣಪತಿ ಶಾರದೆಯರಡಿಗೆಂಗುತ್ತ
ಹರಿ ಹರ ಕಮಲಜೋದ್ಭವಗೆರಗಿ
ಹರಿ ಹರ ಕಮಲಜೋದ್ಭವಗೆರಗುತ ಪೇಳ್ವೆ
ಕರುಣದಿ ಜನರಿದ ಲಾಲಿಪುದು - ಮುದದಿಂದ ॥ ೧ ॥
ಧಾರಿಣೀಪತಿ ಪರೀಕ್ಷಿತನೊಂದು ದಿನದೊಳು
ವಾರಿಧಿಶಯನನ ಕಥನವನು
ವಾರಧಿಶಯನನ ಕಥೆ ಕೇಳಿ ದಣಿಯದೆ
ಭೂರಿ ಸಂಭ್ರಮದಿಂದ ಶುಕನೊಡನೆ - ಬೆಸಗೊಂಡ ॥ ೨ ॥

ಸೊಸೆಗೆ ಕಾಲುಂಗುರವಿಡುವ ಹಾಡು ಹೀಗಿದೆ :

ಬಾರೆ ಬಾರೆಲೆ ನಾರಿ ಏತಕೆ ನಾಚುವೆ
ಕಾಲಿಗೆ ಉಂಗುರ ತೊಡಿಸುವೆವು ನಾವು ॥ ಪ ॥
ಮಾತೆಯೂ ಪ್ರೀತಿಯಿಂದಲಿ ತನ್ನ ಸೊಸೆಗೆಂದು
ತಂದ ಉಂಗುರವನ್ನೆ ಇಡುವಳು ಬೇಗದಿ ॥ ೧ ॥
ಕಂದನ ರಾಣಿಗೆ ಚೆಂದದ ಉಂಗುರ
ಸಂಭ್ರಮದಿಂದಲಿ ಇಟ್ಟಳು ಬೇಗ ॥ ೨ ॥

ಹಸೆಗೆ ಕರೆಯುವ ಹಾಡುಗಳು ಬಹುಸಂಖ್ಯೆಯಲ್ಲಿವೆ. ಅವುಗಳಲ್ಲಿ ಸಂವತ್ಸರದ ಹಾಡು ವಿಶೇಷವಾಗಿ ಉಲ್ಲೇಖನೀಯ. ಇದೊಂದು ಧವಳಾರದ ಹಾಡು ; ದಶಪದಿ. ಪ್ರತಿಯೊಂದು ಸೊಲ್ಲೂ ನಾಲ್ಕು ಕಡೆ ವರಣಗಳನ್ನುಳ್ಳದು. ವಿಳಂಬ ಗತಿಯಿಂದ ಪ್ರಾರಂಭಗೊಂಡು ಐದು ಪಾದಗಳಲ್ಲಿ ಇದೇ ಗತಿಯಿದ್ದು ಅನಂತರ, ಮೂರು ಪಾದಗಳು ದ್ರುತವಾಗುತ್ತವೆ. ಕೊನೆಯದಕ್ಕೆ ವಿಳಂಬಗತಿ : ಇದರಲ್ಲಿ ೧೧ ಸೊಲ್ಲುಗಳು. ೧೦ ಸೊಲ್ಲುಗಳಲ್ಲಿ ೬೦ ಸಂವತ್ಸರದ ಹೆಸರುಗಳು ಬರುತ್ತವೆ. ಅದರೊಂದಿಗೆ ವಿಷ್ಣುವಿನ ದಶಾವತಾರಗಳ ಉಲ್ಲೇಖ ಬರುತ್ತದೆ - (ಮೊದಲ ಸೊಲ್ಲಿನಲ್ಲಿ ೬ ಹೆಸರುಗಳು ಬಂದಿವೆ)

ಶ್ರೀ ಕರ ಪ್ರಭವ ಪ್ರಭಾಕರ ವಿಭವ ಶು
ಕ್ಲಾಂಬರ ವರ ಸಾಕಾರ । ಪ್ರಮೋದೂತ
ಭೀಕರ ಕರುಣಾಕರ । ಪ್ರಜೋತ್ಪತ್ತ್ಯ
ದಾ ಕಾರಣಾತ್ಮಾಕಾರ । ಅಂಗೀರಸ
ಶ್ರೀ ಕರ ಮತ್ಸ್ಯಾಕಾರ । ತಾಳ್ದ ಸುವಿಚಾರ ॥
ತಾ ಕರದೊಳಾ ನಿಗಮ ತಸ್ಕರ
ಣಾಕರನ ಸಂಹಾರಗೈದ ಕೃ
ಪಾಕರನೆ ಸತ್ಯವ್ರತಾತ್ಮ ಸು
ಧಾಕರದೆ ಬೋಧಿಸಿದ ವರ ಮಕ
ಲಾಕರನಿವಾಸ - ಹಸೆಗೇಳು ॥ ೧ ॥

ಬಹುರೂಪವೂ ಬಹುಮುಖವೂ ಆಗಿರುವ ಈ ಶೋಭಾನೆ ಹಾಡುಗಳನ್ನು ಧಾಟಿ, ಛಂದಸ್ಸು, ಕಾವ್ಯಗುಣ, ಭಾಷಾಸಂಪತ್ತು, ರಸಿಕತೆ, ಸಮಾಜಸಂಸ್ಕೃತಿ, ಬಂಧದ ಸೊಗಸು, ಗೇಯರಮ್ಯತೆ, ಮನಃ ಸಂಸ್ಕಾರ - ಮುಂತಾದ ಬಹುಮುಖಗಳಿಂದ ಅಭ್ಯಾಸ ಮಾಡಬಹುದಾಗಿದೆ; ಮಾಡಬೇಕಾಗಿದೆ. ಇಂತಹ ಅಭ್ಯಾಸದೊಂದಿಗೆ ಈ ಹಾಡುಗಳನ್ನು ಶುಭಸಮಾರಂಭಗಳಲ್ಲಿ ಸುವಾಸಿನಿಯರಿಂದ ಹಾಗೂ ಕನ್ಯಾಮಣಿಯರಿಂದ ಹಾಡಿಸುವ ರೂಢಿಯನ್ನು ಮೂಡಿಸುವುದು ಅವಶ್ಯವಾಗಿದೆ. ಇದರಿಂದ ನಮ್ಮ ಶುಭ ಸಂಸ್ಕಾರಗಳ ಪಾವಿತ್ರ್ಯ ವೃದ್ಧಿಯಾಗುವುದು. ಸಮಾಜದಲ್ಲಿ ನೀತಿ ಉನ್ನತಿತಾಳುವುದು. ಕುರುಡು ಕತ್ತಲೆಯಲ್ಲಿರುವ ಜನತೆಗೆ ಜ್ಞಾನದ ಬೆಳಕಿನ ದಿಕ್ಕು ಕಾಣುವಂತಾಗುವುದು ನಿಶ್ಚಯ.

□

೨೭

ಶಾಂತಲದೇವಿ ಕಾದಂಬರಿಯಲ್ಲಿ ದೇಶೀ ಶಬ್ದ ಸಂಪತ್ತು

(ಈ ಕಾದಂಬರಿಯಲ್ಲಿ ಒಟ್ಟುಪುಟಗಳು : ೨೧೪೨), ಅಧ್ಯಾಯಗಳು : ೧೭೫ + ಉಪಸಂಹಾರ. ಮೊದಲ ಮುದ್ರಣ, ಪ್ರಕಟನ : ೧೯೭೮, ಲೇಖಕರು : ದಿ|| ಸಿ.ಕೆ. ನಾಗರಾಜರಾವ್)

ಪಟ್ಟ ಮಹಾದೇವಿ ಶಾಂತಲ ದೇವಿ ಕಾದಂಬರಿಯಂತಹ ಸಾಹಿತ್ಯದ ಹಿರಿಮೆಯನ್ನು ಗರಿಮೆಯನ್ನು ಬೆಲೆಕಟ್ಟಲು ಹಲವು ಮಾನದಂಡಗಳು ಇರಬೇಕಾಗುತ್ತವೆ. ನಮ್ಮ ವ್ಯವಹಾರ ಕ್ಷೇತ್ರದಲ್ಲಿ ಉದ್ದ - ಅಗಲಗಳನ್ನು ಅಳೆಯುವ ಸಾಧನ ಒಂದಾದರೆ, ದ್ರವವನ್ನಳೆದ ಸಾಧನ ಇನ್ನೊಂದು. ಬಿಡಿ ಬಿಡಿಯಾದ ವಸ್ತು ವಿಷಯಗಳನ್ನು ಎಣಿಕೆಯಿಂದ, ಭಾರವನ್ನು ತೂಕದಿಂದ, ಸಮಯವನ್ನು ಕಾಲಮಾನದಿಂದ ಲೆಕ್ಕಹಾಕುತ್ತೇವೆ. ಹಾಗೆಯೇ ಸಾಹಿತ್ಯಕ್ಷೇತ್ರದಲ್ಲಿ ಆಯಾ ಸಾಹಿತ್ಯ ಕೃತಿಯ ಮೌಲ್ಯನಿರ್ಣಯ ಮಾಡಲು ಗಣಿಸುವ, ಎಣಿಸುವ ಅಂಶಗಳು ಅನೇಕ. ಅದರಲ್ಲಿ ಬರುವ ವಸ್ತು, ಪಾತ್ರ, ಘಟನೆಗಳು, ರಸಭಾವಗಳು. ಸಂಭಾವ್ಯತೆ, ಸಹಜತೆ, ಮೌಲ್ಯ, ನಿರೂಪಣವಿಧಾನ, ಪ್ರಭಾವ, ಪರಿಣಾಮ, ಭಾಷಾಪ್ರಯೋಗ - ಹೀಗೆ ಒಂದೊಂದೂ ಲಕ್ಷ್ಯಾರ್ಹವಾಗುತ್ತದೆ. ಅಭಿವ್ಯಕ್ತ ಭಾಷೆಯಂತೂ ಅತಿಮುಖ್ಯಸ್ಥಾನವಹಿಸುತ್ತದೆ. ವಿಶಿಷ್ಟ ಸಂವಾದ, ವಾಕ್ಪ್ರಯೋಗಗಳು, ಗಾದೆಗಳು, ವಾಕ್ಯವೇಷ್ಟನಗಳು, ಪ್ರತ್ಯಕ್ಷ ಪರೋಕ್ಷ ಕಥನಗಳು, ಕರ್ತೃ ಕರ್ಮವಾಚ್ಯಗಳು, ಪ್ರಶ್ನಾರ್ಥಕ - ನಿರ್ಧಾರಾರ್ಥಕಗಳು. ಸರಳ - ಸಂಯುಕ್ತ ಮಿಶ್ರ - ವಾಕ್ಯಗಳ ರಚನೆಗಳು - ಇಂಥವೆಲ್ಲವೂ ಭಾಷೆಯ ಪ್ರಯೋಗ ರೂಪಗಳಾಗಿ ಅಲ್ಲಲ್ಲಿಗೆ ಸೊಬಗನ್ನೀಯುತ್ತವೆ. ಅವನ್ನು ಅನುಲಕ್ಷಿಸಬೇಕಾಗುತ್ತದೆ. ಈ ಅನುಲಕ್ಷ್ಯಕ್ಕೆ ಕೂಡ, ಮೂಲಭೂತವಾದುದು - ಶಬ್ದ. ಆದುದರಿಂದ ಯಾವುದೇ ಕೃತಿಯಲ್ಲಿ ಶಬ್ದ ಸಂಪತ್ತನ್ನು ಸಮೀಕ್ಷಿಸುವುದು - ಮೊತ್ತಮೊದಲ ಹಾಗೂ ಅತಿಮುಖ್ಯವಾದ ಸಮೀಕ್ಷೆಯಾಗುತ್ತದೆ.

ಲಾಕ್ಷಣಿಕರು "ಶಬ್ದಾರ್ಥ ಸಹಿತೌ ಕಾವ್ಯಂ" - ಶಬ್ದ ಮತ್ತು ಅರ್ಥ ಎರಡೂ ಸಹಿತವಾದುದು ಕಾವ್ಯ - ಎಂದಿದ್ದಾರೆ. 'ಸಹಿತ' ಎಂಬಲ್ಲಿ ಹಿತಕರವಾದುದು - ಎಂಬರ್ಥವೂ ಉಂಟು. ಶಬ್ದ ಸಾಮರ್ಥ್ಯವಿಲ್ಲದಿದ್ದರೆ ಕೃತಿರಚನೆಯಾಗಲಾರದು. ಕಾವ್ಯ, ಕಾದಂಬರಿ ಮುಂತಾದ ಲಲಿತ ಸಾಹಿತ್ಯ ರಚನೆಯಾಗಲಿ, ವ್ಯಾಕರಣ ತತ್ತ್ವವಿಚಾರಾದಿ ಶಾಸ್ತ್ರ ರಚನೆಯಾಗಲಿ ಶಬ್ದ ಶಕ್ತಿಯಿಲ್ಲದವರಿಂದಾಗದು. ಶಬ್ದ ಸಮೃದ್ಧಿಯನ್ನು ಶಬ್ದಸಂಪತ್ತು ಎನ್ನಬಹುದು. ಶಬ್ದವೆಂಬುದು

ಅಮೂಲ್ಯ ರತ್ನ—'ಶಬ್ದಮಣಿ'. "ಶಬ್ದಮಣಿ ದರ್ಪಣ" ದಂತಹ ವ್ಯಾಕರಣ ಗ್ರಾಂಥರಚನೆಗೆ ಶಬ್ದಸಾಮರ್ಥ್ಯ ಎಂಬ ಗುಣವೇ ಮೂಲ ಸಂಪತ್ತು - ಎಂದು ಅದರಲ್ಲೇ ಹೇಳಿದೆ. ನೋಡಿ-

ಗುಣಮಮರೆ ಶಬ್ದಮಣಿದ
ರ್ಪಣನಾಮವನಿಟ್ಟು ನೆರೆಯೆ ಕರ್ಣಾಟಕಲ
ಕ್ಷಣ ಶಬ್ದ ಶಾಸ್ತ್ರಮಂ ಲಾ
ಕ್ಷಣಿಕರ್ ಪೇಳೆಂದು ಬೆಸಸೆ ಬಗೆವುಗೆ ಪೇಳ್ದಿಂ

ಇಲ್ಲಿ "ಗುಣ" ಎಂಬುದಕ್ಕೆ 'ಶಬ್ದಸಾಮರ್ಥ್ಯಗುಣ' ಎಂದೇ ಅರ್ಥವನ್ನು ಹೇಳಲಾಗಿದೆ. ಶಬ್ದ ಸಾಮರ್ಥ್ಯಗುಣವಾಗಿ ಕನ್ನಡದಲ್ಲಿ ಬಳಕೆಗೊಳ್ಳುವ ತದ್ಭವ ಶಬ್ದಗಳನ್ನು ದೇಶೀಯ (ಅಚ್ಚಗನ್ನಡ) ಶಬ್ದಗಳನ್ನು 'ಬೇಳ್ಪರ ಕಯ್ಯೊಕ್ಕ ನಿಧಿ' (ಬಯಸುವವರ ಕೈ ಸಾರ್ದ ನಿಧಾನ) ಎಂದು ಕೇಶಿರಾಜನು ಹೇಳಿದ್ದಾನೆ. (ಸೂತ್ರ ೨೯೯) ಅಚ್ಚಗನ್ನಡ ಅಥವಾ ದೇಶಿ (ದೇಸಿ) ಮತ್ತು ತದ್ಭವ ಶಬ್ದಗಳು - ಕನ್ನಡದ ಪ್ರಮುಖ ಶಬ್ದ ಸಂಪತ್ತು. ಸಂಸ್ಕೃತ ಶಬ್ದಗಳು ಈ ಸಂಪತ್ತಿಗೆ ಪೋಷಕಗಳು - ಎಂಬುದು ವಿದ್ವಜ್ಜನರ ಮತ. ಕಾವ್ಯವು ರಸಸ್ಯಂದಿಯಾಗಿ ಮನಸ್ಸಂತೋಷ ಪ್ರವವಾಗಿರಬೇಕಾದರೆ ಹೇಗಿರಬೇಕು - ಎಂಬುದನ್ನು ನಾಗಚಂದ್ರನು ತನ್ನ ಮಲ್ಲಿನಾಥಪುರಾಣದಲ್ಲಿ ಹೇಳಿರುವುದು ಇಲ್ಲಿ ಲಕ್ಷ್ಯಾರ್ಹ -

ಪದಮರ್ಥ ಪ್ರತಿಪಾದನ ಪ್ರವಣಮರ್ಥಂ ಶಬ್ದಸಂಪತ್ತಿ ಸಂ
ಪದಮಕ್ಲಿಷ್ಟ ಪದಾರ್ಥಸಂಗತಿ ರಸಪ್ರಸ್ಯಂದಿ ಮಾಳ್ಕುಂ ಮನೋ
ಮುದಮಂ ಕಾವ್ಯವಸೇವ್ಯವದ್ಯತನವೆಂಬೀ ಗಾಂಪುವೇಡೇಗಳುಂ
ಹೃದಯಗ್ರಾಹಿಗಳಾಗಿ ಶುಕ್ತಿಕೆಗಳಿಂ ಮುಕ್ತಾಫಲಂ ಪುಟ್ಟವೇ?

(ಆ.೧, ಪದ್ಯ ೩೭)

ಅಂದರೆ ಶಬ್ದವು ಸರಿಯಾಗಿ ಅರ್ಥಪ್ರತಿಪಾದನ ಮಾಡುತ್ತಿರಬೇಕು. ಅರ್ಥವು ಶಬ್ದಸಂಪತ್ತಿನಿಂದ ತುಂಬಿರಬೇಕು. ಈ ಶಬ್ದ - ಅರ್ಥಗಳ ಸೇರುವಿಕೆ ಅಕ್ಲಿಷ್ಟ (ಸುಲಭ) ವಾಗಿಯೂ ರಸಸ್ಯಂದಿಯೂ ಆಗಿರಬೇಕು. ಹೀಗಿದ್ದರೆ ಆ ಶಬ್ದ - ಅರ್ಥಗಳು ಮನಸ್ಸಿಗೆ ಆನಂದವನ್ನುಂಟುಮಾಡುವವು. ಕಾವ್ಯವು (ಸಾಹಿತ್ಯವು) ಗ್ರಾಹ್ಯವಾಗಿಲ್ಲ. ಆಧುನಿಕವಾಗಿದೆ - ಎಂದು ಹೀನೈಸುವ ತಿಳಿಗೇಡಿತನ ತಕ್ಕುದಲ್ಲ. ಚಿಪ್ಪುಗಳಿಂದ ಹೃದಯಕ್ಕೆ ಗ್ರಾಹ್ಯವಾಗುವ ಮುತ್ತುಗಳು ಹುಟ್ಟುವುದಿಲ್ಲವೇ? ಈ ಹೇಳಿಕೆಯ ಅನ್ವಯ ಕಾವ್ಯಕ್ಕೆ ಹೇಗೋ ಆಧುನಿಕ ಗದ್ಯಕಾವ್ಯವೆನಿಸುವ ಒಳ್ಳೆಯ ಕಾದಂಬರಿಗೂ ಸಲ್ಲುವ ಮಾತಾಗಿರುತ್ತದೆ.

ಕಾದಂಬರಿಯಲ್ಲಿ ಶಬ್ದಸಂಪತ್ತು - ಎನ್ನುವಾಗ, ಶಬ್ದಸಂಪತ್ತಿನ ವ್ಯಾಪ್ತಿಯಲ್ಲಿ ಸಂಸ್ಕೃತ, ತದ್ಭವ, ದೇಶ್ಯ (ಅಚ್ಚಗನ್ನಡ), ಅನ್ಯದೇಶ್ಯ, ಗ್ರಾಮ್ಯ ಎಂಬ ಐದು ಬಗೆಯವು ಸಮಾವೇಶವಾಗುತ್ತವೆ. ಸಂಸ್ಕೃತವನ್ನು ತ್ಯಜಿಸಿ ಅಚ್ಚಗನ್ನಡದಲ್ಲಿಯೆ ರಚಿತವಾದ ಕತೆಕಾದಂಬರಿಗಳಿಲ್ಲ. ಒಬ್ಬ ಆಂಡಯ್ಯ ಓರ್ವ ಮುಳಿಯ ತಿಮ್ಮಪ್ಪಯ್ಯ, ಇನ್ನೋರ್ವ ಕೊಳಂಬೆ ಪುಟ್ಟಣ್ಣಗೌಡ ಇವರು ಸ್ಪರ್ಧೆಯಿಟ್ಟು ಬರೆದ ಒಂದೊಂದು ಕೃತಿ ಅಚ್ಚಗನ್ನಡದ್ದಾಗಿ ಉದಾಹರಣೆಗೆ ಸಿಗುತ್ತದೆ. ಆಧುನಿಕ ಗದ್ಯ ರಚನೆಯಲ್ಲಿ

ಇದುವರೆಗೆ ಅಂತಹ ಪ್ರತ್ಯೇಕತೆ ನಡೆದಿಲ್ಲ. ಆಧುನಿಕ ಗದ್ಯದಲ್ಲಿ ಮೇಲಿನ ಐದೂ ಬಗೆಯ ಶಬ್ದಗಳ ಪ್ರಯೋಗಗಳಿವೆ. ಕನ್ನಡ ಎಂದಾಗ, ಅದರಲ್ಲಿ ಹಿತಮಿತವಾದ ಸಂಸ್ಕೃತ ಶಬ್ದಗಳ ಬಳಕೆ ಇದ್ದದ್ದೆ. ಅಂತಹ ಬಳಕೆ ಮುದ್ದಣ ಕವಿಯ ಮಾತಿನಂತೆ 'ಕರ್ಮಣಿ ಸರದೊಳ್ ಚೆಂಬವಳಮಂ ಕೋದಂತೆ ' ಕನ್ನಡಕ್ಕೆ ಸೊಗಸನ್ನು ಉಂಟು ಮಾಡುವುದು. ಸಂಸ್ಕೃತ ಶಬ್ದಗಳು, ಸಮಾಸ ಪದಗಳು ಹೆಚ್ಚು ಹೆಚ್ಚಾಗಿ ಬಳಕೆಯಾದರೆ, ಅಂತಹ ಕಾದಂಬರಿ ಪ್ರೌಢವೂ ಗಂಭೀರವೂ ಆಗುವುದು ಸಹಜ. ಹಿತವಾಗಿ ಮಿತವಾಗಿ ಸಂಸ್ಕೃತ ಶಬ್ದಗಳಿದ್ದರೆ, ಹೃದಯ ರಂಜಕವಾಗುವುದು. ಅನೇಕ ಕಾದಂಬರಿಕಾರರು ತಮ್ಮ ಸಾಹಿತ್ಯ ಭಾಷೆಯನ್ನು ಹಳ್ಳಿಗರ ಆಡುಮಾತಿಗೆ ನಿಕಟವರ್ತಿಯಾಗಿ ಮಾಡಿ , ಜಾನಪದ ಭಾಷಾ ಸತ್ವದಿಂದ ಬರೆದರೆ, ಹೆಚ್ಚು ಸಹಜತೆ ಮೂಡಿ ಬರುವುದೆಂಬ ದೃಷ್ಟಿಯಿಂದ ಗ್ರಾಮ್ಯಭಾಷೆಯನ್ನು ಅಧಿಕವಾಗಿಯೇ ಬಳಸಿರುವುದುಂಟು. ಒಂದು ದೃಷ್ಟಿಯಿಂದ ಇದು ಗುಣ. ಆದರೆ ಇನ್ನೊಂದು ದೃಷ್ಟಿಯಿಂದ ದೋಷ. ಗ್ರಾಮ್ಯವೆನಿಸುವ ನುಡಿಗಳು ಹಳ್ಳಿ ಹಳ್ಳಿಗೂ ಸೀಮೆ ಸೀಮೆಗೂ ವ್ಯತ್ಯಾಸ ಗೊಂಡಿರುವುದರಿಂದ , ಲೇಖಕನು ಪ್ರಯೋಗಿಸಿದ ಒಂದು ಗ್ರಾಮ್ಯ ಇನ್ನೊಂದು ಕಡೆಯವರಿಗೆ ಹಿಡಿಸದೆ, ಅರ್ಥವಾಗದೆ ದೋಷಯುಕ್ತವಾಗಿಯೇ ಕಾಣಬಹುದು. ಆದುದರಿಂದ ಶಿಷ್ಟಭಾಷೆಯ ಬಳಕೆ ಕಾದಂಬರಿ ರಚನೆಗೆ ಹೆಚ್ಚು ಸಮಂಜಸ. ಕೆಲಕೆಲವು ಅವ್ಯುತ್ಪನ್ನ ಪಾತ್ರಗಳ ಬಾಯಲ್ಲಿ ಗ್ರಾಮ್ಯವನ್ನು ತಂದರೆ ತಪ್ಪಾಗದು. ಈ ವಿಚಾರವನ್ನು ಪ್ರಸ್ತುತ ಕಾದಂಬರಿ ಕಾರರು (ನಾಗರಾಜ ರಾಯರು) ಚೆನ್ನಾಗಿ ಮನಗಂಡಿರುತ್ತಾರೆ. ಇದರಲ್ಲಿ ಗ್ರಾಮ್ಯ ಭಾಷೆಯ ಬಳಕೆಯಾಗಿರುವುದು ಕಡಮೆ ಎಡೆಗಳಲ್ಲಿ. ಆದರೆ ದೇಶೀಶಬ್ದಗಳ ಬಳಕೆ ಸಮೃದ್ಧವಾಗಿಯೇ ಆಗಿದೆ. ಇದರಿಂದ ಭಾಷೆಗೆ, ಭಾವಾಭಿವ್ಯಕ್ತಿಗೆ ಹೆಚ್ಚಿನ ಕಳೆಯೇ ಬಂದಿದೆ. ಅದಲ್ಲದೆ ಕಟ್ಟಡದ ಶಬ್ದ ಸಂಪತ್ತಿನ ಭಂಡಾರಕ್ಕೆ ಹೊಸ ಹೊಸ ಶಬ್ದಮಣಿಗಳನ್ನು ಇದೀಗ ಸೇರಿಸಿದಂತೆ ಆಗಿರುವುದು ಮೆಚ್ಚತಕ್ಕ ಸಂಗತಿ.

ಹಿಂದಿನ ಕವಿಗಳಲ್ಲಿ ಅನೇಕರು ತಮ್ಮ ಕಾವ್ಯಗಳಲ್ಲಿ "ಮಾರ್ಗ" ದೊಂದಿಗೆ ದೇಸಿ ಒಡಂಬಡುವಂತೆ ಸೇರಿಕೊಂಡಿರುವುದಾಗಿ ಅಭಿಮಾನದಿಂದ ಹೇಳಿಕೊಂಡಿದ್ದಾರೆ. ಕಾವ್ಯಬಂಧ ಚೆನ್ನಾಗಿ ಒಪ್ಪುವಂತಿರಬೇಕಾದರೆ, "ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು" ಎಂದು ಆದಿಕವಿ ಪಂಪನು ಹೇಳಿದ್ದಾನೆ. ದೇಸಿಯ ಪ್ರಯೋಗಗಳಿಂದ ಒಳನುಗ್ಗಬೇಕು, ಹಾಗೆ ಒಳಹೊಕ್ಕು ಆ ದೇಸಿಗಳನ್ನು ಮಾರ್ಗದೊಂದಿಗೆ ತಳ್ಳಬೇಕು, ಮುಂದುವರಿಯಬೇಕು - ಎಂದಿಲ್ಲಿ ಅಭಿಪ್ರಾಯ. ದೇಸಿಯ ಪ್ರಯೋಗಗಳಿಂದ ಪಂಪನ ರಚನೆಗೆ ವಿಶೇಷಕಳೆಬಂದಿದೆ. ಹಿರಿಮೆಯುಂಟಾಗಿದೆ. ದೇಸಿಯ ಮತ್ತು ಮಾರ್ಗದ ಬೆರಕೆಯದು ಶ್ರೇಷ್ಠ ಕೃತಿ - ಎಂದು ವಿಮರ್ಶಕರ ತೀರ್ಮಾನದ ಸಂಗತಿ.

'ದೇಸಿ' ಎಂಬುದು ಜನವಾಣಿಯಲ್ಲಿ ಮೂಡಿಬಂದ ಶಿಷ್ಟಶಬ್ದ. ಅದು ಭಾಷಾಪ್ರಕೃತಿಯ ಸತ್ವ. ಭಾಷೆಯ ಬೇರು. ಭಾಷೆಯೆಂಬ ಮರವನ್ನು ಬೆಳೆಯಿಸುವಂತಹದು. ಮಾರ್ಗ ಎಂಬುದು ಶಿಷ್ಟರ, ವಿದ್ವಾಂಸರ ಮತ್ತು ಶಾಸ್ತ್ರೀಯತೆಯ ಪರಿಷ್ಕಾರವನ್ನು ಪಡೆದು ಪ್ರೌಢವಾದುದು, ಗ್ರಂಥಸ್ಥವಾದುದು. 'ದೇಸಿ' ಇದೀಗ ತಾನೇ ಗ್ರಂಥಸ್ಥವಾಗಲು ತೊಡಗಿದುದೆಂದು ಹೇಳಬಹುದು.

ಸಾಹಿತ್ಯಕ್ಕೆ ಶಬ್ದಗಳೆಲ್ಲವೂ ಸಂಪತ್ತಿನ ಭಾಗಗಳೇ ಆದರೂ ದೇಶೀಶಬ್ದಗಳು ಮುಖ್ಯನದಿಗೆ ಸೇರಿದ ಉಪನದಿಗಳಂತೆ ಭಾಷೆಗೆ ಸೇರಿ, ಅದನ್ನು ಸಮೃದ್ಧಿಗೊಳಿಸುವಂಥವು. ದೇಶಿಯೆಂಬುದು ಶಬ್ದವಾಗಿ ನುಡಿಗಟ್ಟಾಗಿ, ಗಾದೆಯಾಗಿ, ಲೋಕಾನುಭವಗಳ ಅಭಿವ್ಯಕ್ತಿಯಾಗಿ ಹೊಮ್ಮಿಕೊಂಡಿರುತ್ತದೆ. ಪ್ರಸ್ತುತ, ಪಟ್ಟಮಹಾದೇವಿ ಶಾಂತಲದೇವಿ ಕದಂಬರಿಯು, ಕವಿಗಳು ಹಿರಿಮೆಯ ದ್ಯೋತಕವಾಗಿ ಘೋಷಿಸಿರುವಂತೆ - ದೇಶಿ ಮಾರ್ಗಗಳೆರಡರಿಂದಲೂ ಭೂಷಿತವಾಗಿರುತ್ತದೆ. ಈ ಕಾದಂಬರಿಯಲ್ಲಿ ಬಂದಿರುವ ಎಲ್ಲ ದೇಶೀ ಶಬ್ದಗಳನ್ನು ಪಟ್ಟಿಮಾಡುವುದು ಈ ಲೇಖಕನ ಉದ್ದೇಶವಲ್ಲ. ಕೆಲವನ್ನು ಆಯ್ದು, ಅವು ಹೇಗೆ ಹೊಸತೆನಿಸಿವೆ, ಅವುಗಳ ವ್ಯುತ್ಪತ್ತಿ ಹೇಗೆ, ಅವು ಭಾಷೆಗೆ ಹೇಗೆ ಪೋಷಕವಾಗಿವೆ - ಎಂಬುದನ್ನು ದಿಗ್ದರ್ಶಿಸುವ ಪ್ರಯತ್ನವೇ ಈ ಲೇಖನದ ಗುರಿ. ಈ ಶಬ್ದಗಳಲ್ಲಿ ಕೆಲವು ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ, ವ್ಯಾಕರಣ ಗ್ರಂಥಗಳಲ್ಲಿ ಕಂಡು ಬರುವವೇ ಆಗಿವೆ. ಆದರೆ, ಈಗೀಗ ಚಾಲನೆ ಕಳೆದುಕೊಂಡವಾಗಿದ್ದು. ಅವಕ್ಕೆ ಪುನಃ ಚಾಲನೆಯನ್ನು ಈ ಕಾದಂಬರಿಯಲ್ಲಿ ಕೊಟ್ಟಿರುವುದು ಮೆಚ್ಚಬೇಕಾದುದು. ಕೆಲವು ಸಂಸ್ಕೃತ ಶಬ್ದಗಳು ಕೂಡ, ಕನ್ನಡದಲ್ಲಿ ದೇಸಿಯೆನಿಸಿ, ಸಂಸ್ಕೃತದ ಅರ್ಥಕ್ಕಿಂತ ಭಿನ್ನವಾದ ಅರ್ಥದಲ್ಲಿ ಪ್ರಯೋಗವಾಗಿರುವುದೂ ಉಂಟು. ಉದಾ : 'ತಾತ' ಎಂಬುದು ಸಂಸ್ಕೃತದ ಶಬ್ದವಾಗಿದ್ದು 'ತಂದೆ' ಎಂಬ ಅರ್ಥವುಳ್ಳುದಾಗಿದೆ. ಕನ್ನಡದಲ್ಲಿ ಇದು ದೇಸಿಯಾಗಿ 'ಅಜ್ಜ' ಎಂಬರ್ಥದಲ್ಲಿ ನಮ್ಮ ನಾಡಿನ ಕೆಲವೆಡೆಗಳಲ್ಲಿ ರೂಢಿವಡೆದಿದೆ. ಹಾಗೆಯೇ 'ಧ್ಯಾನ' ಎಂಬರ್ಥದಲ್ಲಿ ಧ್ಯಾಸ ಎಂಬುದಿಲ್ಲಿ ಬಳಕೆಗೊಂಡಿದೆ. ಉದಾ: ಇಂದು ನಾಗರ ಪಂಚಮಿ ಎಂಬುದರ ಧ್ಯಾಸವೇ ಹೋಗಲಿಲ್ಲ. (ಪುಟ ೯೮೭).

ಈ ಕಾದಂಬರಿಯಲ್ಲಿ ಅರಮನೆಯ ಪರಿಸರದ ವಿಶೇಷವ್ಯಕ್ತಿವಾಚಕವಾಗಿರುವ, ಪಡೆಯಿಲ, ಪಸಾಯಿತ ಶಬ್ದಗಳು ಹೊಸ ಶಬ್ದಗಳೇನೂ ಅಲ್ಲ. ಪಡೆಯಿಲ - ಎಂಬಲ್ಲಿ 'ಪಡೆ' ಅಂದರೆ ' ಸೈನ್ಯ'. 'ಇಲ' ಎಂಬುದು ಅದರಲ್ಲಿ ಅವನು ವರ್ತಿಸುತ್ತಿರುವನು, ಎಂಬ ಅರ್ಥದ ತದ್ಧಿತ ಪ್ರತ್ಯಯ. ಶಬ್ದಮಣಿ ದರ್ಪಣದಲ್ಲಿ ಈ ಶಬ್ದದ ನಿಷ್ಪತ್ತಿಯಿದೆ. ಸೈನ್ಯದಲ್ಲಿ ವರ್ತಿಸುವವನು ಅರ್ಥಾತ್ ಸೈನಿಕ, ಸೈನ್ಯಾಧಿಕಾರಿ - ಎಂದು ಈ ಶಬ್ದದ ಅರ್ಥ. ಇದು ವ್ಯಾಕರಣ ಶುದ್ಧವಾದ ತದ್ಧಿತ ಶಬ್ದ. 'ಪಸಾಯಿತ' ವೂ ಹಾಗೆಯೇ. ಇಲ್ಲಿ 'ಪಸ' ಎಂಬುದು ಪೂರ್ವಪದ. ಪಸ ಪಸಾಯ - ಎಂಬುದಕ್ಕೆ ಉಡುಗೊರೆ. ಸಂಭಾವನೆ, ಬಹುಮಾನ ಎಂಬ ಅರ್ಥಗಳಿವೆ. 'ಆಯ್ತ' ಎಂಬ ತದ್ಧಿತ ಪ್ರತ್ಯಯವು ಈ ಕೆಲಸವನ್ನು ಇವನು ನಡೆಯಿಸುವನು - ಎಂಬ ಅರ್ಥದಲ್ಲಿರುವುದಾಗಿ ಶಬ್ದಮಣಿ ದರ್ಪಣದಲ್ಲಿ ಹೇಳಿದೆಯಲ್ಲದೆ, ಪಸಾಯ್ತ ಎಂಬ ಉದಾಹರಣೆಯನ್ನೂ ಅದರಲ್ಲಿ ಕೊಡಲಾಗಿದೆ. ಅರಮನೆಯಲ್ಲಿ ಉಡುಗೊರೆ, ಸಂಭಾವನೆಯ ವಸ್ತುಗಳ ಅಧಿಕಾರಿ—ಪಸಾಯ್ತ. ಇದು ಪಸಾಯಿತ, ಪಸಾಯತ - ಎಂಬ ರೂಪಗಳಲ್ಲಿಯೂ ಇದೆ. ಶೀಲಾರ್ಥದಲ್ಲಿ 'ಗುಳಿ' ಎಂಬ ತದ್ಧಿತ ಪ್ರತ್ಯಯವಿದೆ. ಲಂಚಂಗುಳಿ, ಸಾಲಂಗುಳಿ- ಎಂಬಂತೆ. ಈ ಕಾದಂಬರಿಯಲ್ಲಿ ಆಟಂಗುಳಿ ಶಬ್ದ ಬಂದಿದೆ. ಆಡುವುದು ಶೀಲವಾಗಿ ಉಳ್ಳವನು ಆಟಂಗುಳಿ, ಇದು ಕುಳಿ ಎಂಬ ರೂಪದಲ್ಲಿಯೂ ಇದೆ. ಪರಾಶ್ರಿತನಾದವನು - ಎಂಬರ್ಥದಲ್ಲಿ 'ಹೊರಕುಳಿ' ಎಂಬ ಶಬ್ದ ಈ ಕಾದಂಬರಿಯಲ್ಲಿ ಬಂದಿದೆ. ಸೇನಾಪತಿ

ಎಂಬರ್ಥವನ್ನು ಕೊಡುವ ಇನ್ನೊಂದು ಶಬ್ದ - ದಂಡನಾಯಕ. ದಂಡು ಎಂದರೆ ಸೈನ್ಯ. ದಂಡ ಎಂಬಲ್ಲಿ ಷಷ್ಠಿಯ ಅಕಾರ ಸೇರಿ, ದಂಡಿನ ಎಂಬರ್ಥವನ್ನು ಕೊಡುವುದು. ದಂಡನಾಯಕ ಎಂಬುದು ಸಮಾಸಪದವಲ್ಲ. ಎರಡು ಪದಗಳ ಏಕೀಭಾವ. ಆಗ ಮಧ್ಯಗತ ವಿಭಕ್ತಿಗೆ ಲೋಪವಿರುವುದಿಲ್ಲ. ಇದನ್ನು ಅಲಕ್ಷ್ಯದಿಂದ ಸಂಸ್ಕೃತ ಸಮಾಸವೆಂದೇ ಭಾವಿಸಿ ಕೂಡಿಸಿಯೇ ಹೇಳುವುದು, ಬರೆಯುವುದು ಪ್ರಚಲಿತವಾಗಿ ಹೋಗಿದೆ. 'ದಂಡನಾಯಕ' ಎಂಬುದು ರೂಪಾಂತರಗೊಂಡು ದಣ್ಣಾಯಕ, ಡಣ್ಣಾಯಕ ಶಬ್ದಗಳೂ ಪ್ರಚಲಿತವಾಗಿವೆ. ಈ ಕಾದಂಬರಿಯಲ್ಲಿ ಡಣ್ಣಾಯಕ ಪ್ರಯೋಗಗೊಂಡಿದೆ. ಶಯ್ಯಾಗೃಹ ಎಂಬರ್ಥದಲ್ಲಿರುವ ಸೆಜ್ಜೆವನೆ ಒಂದು ದೇಶೀಶಬ್ದ. ಇದರಲ್ಲಿ ಸೆಜ್ಜೆ ಎಂಬುದು ಶಯ್ಯೆಯ ತದ್ಭವ.

ಹಳಗನ್ನಡ ಕಾವ್ಯಗಳಲ್ಲಿ ಪ್ರಚಾರಗೊಂಡಿದ್ದು ಹೊಸಗನ್ನಡದಲ್ಲಿ ಚಾಲನೆ ಕಳೆದುಕೊಳ್ಳುತ್ತಿರುವ ಕೆಲವು ಶಬ್ದಗಳಿವು - ಅಕ್ಕಜ (ಆಶ್ಚರ್ಯ), ಅಗಡು (ತುಂಟತನ, ಶೌರ್ಯ) ಅಂದಳ, ಅಂದಣ (ಪಲ್ಲಕಿ), ಅಡ್ಡಣಿಗೆ (ಮುಕ್ಕಾಲುಮಣೆ) , ಅಂಕವರೆ (ಅಂಕ = ಯುದ್ಧ, ಪರೆ=ಚರ್ಮವಾದ್ಯ) ಅಂದರೆ ರಣಭೇರಿ. ಆರಡಿ (ತೊಂದರೆ), ಒಗತನ (ದಂಪತಿಗಳ ಕೂಡು ಬಾಳ್ವೆ) - ಒಕ್ಕತನ ಎಂದು ಕುಮಾರ ವ್ಯಾಸನ ಪ್ರಯೋಗವಿದೆ. ಒಸಗೆ (ಶುಭಕಾರ್ಯ, ಶುಭವಾರ್ತೆ), ಕಚ್ಚಳಿ (ಬಿರುದಿನ ಬಳೆ). ಕಾವಣ (ಚಪ್ಪರ). ಕೊಟ್ಟಣ (ಕಪ್ಪಕಾಣಿಕೆ). ಕೊಂಡೆತನ (ಚಾಡಿ). ಗರಗರಿಕೆ (ಸೊಗಸು) ಸ್ವಚ್ಛತೆ, ಅಚ್ಚುಕಟ್ಟುತನ), ಗೋನಾಳಿ (ಕೊರಲು). ಟೆಬ್ಬರಿಸು (ಶಕ್ತಿಕುಂದಿಸು), ಚವಲಂಬ (ಕಣ್ಣ ಎವೆ, ರೆಪ್ಪೆ) ಚೂಳಯ (ಬೈತಲೆಯ ಮುತ್ತಿನ ಆಭರಣ), ಡೆಂಕಣಿ (ಧ್ವಜದಂಡ). ತೆಕ್ಕೆ (ಆಲಿಂಗನ), ತಾಳವಟ್ಟ (ಬೀಸಣಿಗೆ), ತೆಲ್ಲಟಿ (ಉಡುಗೊರೆ), ದಡ್ಡಿ (ತೆರೆ, ಪರದೆ), ಲೆಂಕ (ಸೇವಕ).

ಇಂತಹ ಹಳಗನ್ನಡದ ಅಚ್ಚಗನ್ನಡ ಶಬ್ದಗಳು ಹೊಸಗನ್ನಡದ ಸಾಹಿತ್ಯದಲ್ಲಿ ಧಾರಾಳವಾಗಿ ಪ್ರಯೋಗಾರ್ಹವಾಗಿವೆ. ಅಂಥವನ್ನು ಈ ಕಾದಂಬರಿಯಲ್ಲಿ ಪ್ರಯೋಗಿಸುವ ಮೂಲಕ ಆ ಶಬ್ದಗಳಿಗೆ ನಿಂತುಹೋದ ಇಲ್ಲವೇ ಕಡಿಮೆಯಾದ ಚಲಾವಣೆಯನ್ನು ಪ್ರತಿಭಟಿಸಿ ಪುನರ್‌ವ್ಯವಹಾರಕ್ಕೆ ತಂದಿರುವುದು ಅಭಿನಂದನೀಯ ಸಂಗತಿ.

ವ್ಯಾಕರಣ ಶುದ್ಧಿಗೆ ಒಳಗಾಗದೆ, ಲೋಕರೂಢಿಯಲ್ಲಿ ಚಾಲನೆಗೊಳ್ಳುತ್ತಿರುವ ಕೆಲವು ಶಬ್ದಗಳು ಉದಾ : ಪದಸ್ತಿಕೆ, ದೊಡ್ಡಸ್ತಿಕೆ, ನಂಬಿಕಸ್ತ, ನಂಟಸ್ತಿಕೆ, ಇಂಥವು ಪ್ರಯೋಗಗೊಂಡಿವೆ. ನದಿಯ ವರೆಗೆ ಎಂಬರ್ಥದಲ್ಲಿ 'ನದಿಗುಂಟ' ಎಂಬ ಗ್ರಾಮ್ಯದ ಬಳಕೆಯನ್ನು ಕಾಣುತ್ತೇವೆ. ಅನ್ಯದೇಶ್ಯ ಶಬ್ದಗಳ ಪ್ರಯೋಗಕ್ಕೆ ಒಂದೆರಡು ಉದಾಹರಣೆಗಳಿವು - (ಪುಟ ೨೫೫) - ಈ ವ್ಯವಹಾರ ನನಗೆ ಪಸಂದಿಲ್ಲಾಂತ ಏನು ಮಾಡಾನ? ಇಲ್ಲಿ 'ಪಸಂದಿಲ್ಲ' ಎಂದರೆ 'ಚೆನ್ನಾಗಿಲ್ಲ.' ಎಂದರ್ಥ. ಈ ಶಬ್ದ ಹಿಂದೀ ಭಾಷೆಯದು. ಕೆಲಸ ನಿಭಾಯಿಸು. ಇಲ್ಲಿ ನಿಭಾಯಿಸು ಎಂದರೆ ಈಡೇರಿಸು ಎಂಬುದು ಅರ್ಥ. ಈ ಕ್ರಿಯಾಪದ ಹಿಂದಿಯದು.

ಈ ಕಾದಂಬರಿಯಲ್ಲಿ ಪ್ರಯೋಗಗೊಂಡಿರುವ ಕೆಲವು ದೇಶೀಶಬ್ದ ಪ್ರಯೋಗಗಳನ್ನು ಸಂದರ್ಭದೊಡನೆ ಇಲ್ಲಿ ವಿವರಿಸಲಾಗುವುದು. ಅರ್ಥವಿವರ, ಪರ್ಯಾಯ, ಬೇರೆ ಕಡೆಯ ರೂಪಾಂತರ, ಅವಶ್ಯಕಂಡಲ್ಲಿ ಪ್ರಕೃತ ಕಾದಂಬರಿಯ ಪ್ರಯೋಗ ಸಹಿತ ವಿವರಣೆಯಿದೆ.

೧. **ಅಂಕವಡಿ** (೧೦೨೪) - ಕುದುರೆಯನ್ನೇರುವಾಗ ಕಾಲಿಟ್ಟುಕೊಳ್ಳುವಂತೆ ಜೀನಿಗೆ ಅಳವಡಿಸುವ ಬಳೆಯೇ ಅಂಕವಡಿ. ಅಂಕವಡಿ, ರಿಕಾಪು - ಎಂಬವು ಇದಕ್ಕೆ ಪರ್ಯಾಯಶಬ್ದಗಳು. ಪ್ರಯೋಗ - ಪಲ್ಲವರಾಜಕುಮಾರಿಯರು (ಬಮ್ಮಲದೇವಿಯರು) ಎಡತೋಳಿಗೊಂದು ಅಂಬು ನಾಟಿದ್ದರೂ ತಮ್ಮ ಅಂಕವಡಿಯ ಹಿಡಿತ ಸಡಿಲಿಸದೆ, ಸನ್ನಿಧಾನದ ರಕ್ಷಣಾಕಾರ್ಯವೆಸಗಿದ್ದಾರೆ.

೨. **ಅಂಗತ್ತ** - ಶಾಂತಲದೇವಿ ... ಪಲ್ಲಂಗದ ಮೇಲೇ ಅಂಗತ್ತನಾಗಿ ಮಲಗಿದಳು. (೧೭೦೦) ಈ ಶಬ್ದ ಅಷ್ಟೇನೂ ಅ ಪ್ರಸಿದ್ಧವಲ್ಲ. ಎದೆ ಮೇಲಕ್ಕಾಗಿ ಎಂದು ಇದರ ಅರ್ಥ. ಅಂಗಾತ ಎಂದೂ ಪ್ರಯೋಗವಿದೆ.

೩. **ಅಂಗರಕ್ಕರು** (೪೯೯) - ಅಂಗರಕ್ಷಕರು - ಎಂದರ್ಥ.

೪. **ಅಗ್ರ** (೯೬೮) - ಊಟಕ್ಕೆ ಉಪಯೋಗಿಸುವ ಕುಡಿಬಾಳೆಯೆಲೆ.

೫. **ಅಡ್ಡಣಿಗೆ** - ಇದು ಮೂರುಕಾಲಿನ ಮಣೆ. ವೀರಶೈವರು ಊಟದ ಎಲೆಯನ್ನು ಅಥವಾ ತಟ್ಟೆಯನ್ನಿಡಲು ಇದನ್ನು ಉಪಯೋಗಿಸುತ್ತಾರೆ. ಇದಕ್ಕೆ ನಾಲ್ಕು ಕಾಲುಗಳೂ ಇರಬಹುದು. ಎಷ್ಟೋ ಮಂದಿ ಕನ್ನಡಿಗರಿಗೆ ಈ ಶಬ್ದದ ಪರಿಚಯವಿಲ್ಲದೆ, ಇಂಗ್ಲೀಷಿನ ' ಸ್ಟೂಲು 'ಶಬ್ದವನ್ನು ಬಳಸುತ್ತಾರೆ.

೬. **ಅರೆ** (೧೫೯) - 'ಕಪಾಟಿನ ಮೇಲಿನ ಅರೆಯಲ್ಲಿಟ್ಟಿದೇನೆ' - ಕಾವಾಟಿನ ಒಳಗಡೆಯ ಅಂತಸ್ತು. ಇದಕ್ಕೆ 'ಅದೆ' ಎಂತಲೂ ದೇಸಿಯ ಬಳಕೆ.

೭. **ಅಪಟಿ** (೫೦೦) - ಬಿಡಾರದ ಅಪಟಿಯನ್ನು ಹೊಕ್ಕು ದಡ್ಡಿಯೆಡೆಗೆ ಹೋದೆವು. ಶಬ್ದಕೋಶದಲ್ಲಿ ಈಶಬ್ದಾರ್ಥವಿದ್ದರೂ ಇದರ ಪ್ರಯೋಗ ಸಿಗುವುದು ವಿರಳ. ತೆರೆ ಅಥವಾ ಪರದೆ ಎಂದು ಇದರ ಅರ್ಥ. ದಡ್ಡಿ ಎಂಬುದಕ್ಕೆ ಪರದೆ, ಮಾಳಿಗೆ ಎಂಬರ್ಥಗಳಿವೆ. ಇಲ್ಲಿ ಮಾಳಿಗೆ ಎಂಬರ್ಥವಾಗಬಹುದು.

೮. **ಅಲ್ಲರ** (೯೨೦) - ಅಲ್ಲರದಿಂದ ಅವರು ತೀವ್ರ ಬೆಂಡಾಗಿದ್ದರು. ತೀವ್ರವಾದ ವಿರಹವ್ಯಥೆ - ಎಂದು ಈ ಶಬ್ದದ ಅರ್ಥ.

೯. **ಅಹಣಿ** (೧೧೨೪) - ತನ್ನ ಹುಟ್ಟಿದ ಹಬ್ಬದ ದಿನ ಹೇಗೆ ತನಗೂ ಶಾಂತಲದೇವಿಗೂ ಅಹಣಿಯಾಯಿತು? " ದ್ವಂದ್ವ ಎಂದರ್ಥ.

೧೦. **ಆದೀಕ** (೯೬೪) - ಅವರಿಗೆ ಬರುವ ಆದೀಕದ ಪ್ರಮಾಣವೇನು? ಲಾಭ, ಆದಾಯ - ಎಂದು ಇದರ ಅರ್ಥ.

೧೧. **ಆನರ್ತಶಾಲೆ** (೧೧೪೦) - ನಾಟ್ಯಶಾಲೆ.

೧೨. **ಆವಾರ** (೧-೪೭೨) - 'ಆವಾರದ ಬಾಗಿಲಿಗೆ ಒರಗಿ ನಿಂತ ಶಾಂತಲೆ' 'ಅವು (ಕುದುರೆಗಳು) ನೇರವಾಗಿ ಶಾಂತಲೆಯ ಮನೆಯ ಆವಾರದ ಬಳಿ ನಿಂತವು'. ಇಲ್ಲಿ 'ಆವಾರ' ಎಂದರೆ ಆವರಣ, ಅಂಗಳ.

೧೩. **ಆವುಟ** (೬೬೨) - " ಮೊದಲಿದ್ದ ಆವುಟವಿಲ್ಲ" ಅವುಟ ಎಂದರೆ ಬೂಟಾಟಿಕೆ, ನಟನೆ.

೧೪. **ಆಳರಸರು** (೭೦) - ಇದೊಂದು ಕೂಡುನುಡಿ, ಸಮಾಸಪದ. ತುಂಬ ಪ್ರಚಲಿತ ಶಬ್ದವೇ ಆದರೂ ಇದನ್ನು ಅರ್ಥಮಾಡುವ ಸಾಧು ವಿಧಾನ ಯಾವುದೆಂಬ ಕಲ್ಪನೆ ಹಲವರಲ್ಲಿಲ್ಲ. ಆಳುಗಳು ಮತ್ತು ಅರಸರು ಎಂದು ವಿಗ್ರಹ ಮಾಡಿದಾಗ ದ್ವಂದ್ವಸಮಾಸ ಪದವೆನಿಸುವುದು. ಆದರೆ ಉದ್ದಿಷ್ಟ ಅರ್ಥಬಾರದು. ಆದುದರಿಂದ ಆಳುವವರು ಆದ ಅರಸರು ಎಂದು ವಿಶೇಷಣ ಪೂರ್ವ ಪದವನ್ನಾಗಿ ಮಾಡಿದರೆ, ಸ್ಪಷ್ಟಾರ್ಥವಾಗುವುದು. ಆಳುತ್ತಿರುವ ಅರಸರು ಎಂದಿಲ್ಲಿ ಅರ್ಥ.

೧೫. **ಇಂಡೆ** (೪೯೫, ೪೯೬) - "ಇಂಡೆ ಕಟ್ಟಲು ಅರಮನೆಗೆ ಇಂಡೆಯವರ ಒಂದು ಕುಲವೇ ಮುಡಿಪಾಗಿರುತ್ತಿದೆಯಲ್ಲ ?" "ಮಲ್ಲಿಗೆಯ ಇಂಡೆ" - ದಂಡೆ ಅಥವಾ ಮಾಲೆ ಎಂದರ್ಥ.

೧೬. **ಉಳಿ** (೧೬೦) - ಕಾಲಿಗೆ ಹಾಕಿಕೊಳ್ಳುವ ಬೆಳ್ಳಿಯ ಸರಪಳಿ. ಇತರ ಕಡೆ - ರುಳಿ, ಲುಳಿ - ಎಂಬ ಪ್ರಯೋಗಗಳಿವೆ. ಕಾಲಿನ ರುಳಿ ಶಬ್ದ ಮಾಡಿತು - ಎಂಬುದು ಪ್ರಯೋಗ.

೧೭. **ಎಟ್ಟಿತನ** (೫೯೪) - ತಮ್ಮ ಮೂಗಿನ ನೇರಕ್ಕೆ ಪರರ ನಡೆವಳಿಕೆಗೆ ಬಣ್ಣ ಕಟ್ಟಿ ಹೋಗುವುದು ಎಟ್ಟಿತನ ವಾಗುತ್ತದೆ. ಸಂಭಾವಿತರಲ್ಲಿ ಎಟ್ಟಿತನದ ಸೋಂಕೂ ಇರಬಾರದು. ಹಟಮಾರಿತನ ಎಂದರ್ಥ.

೧೮. **ಎಸ** (೩೧, ೧೧೬೦) - ಯುವರಾಣಿ ಎಡ್ಡು ಬಂಗಾರದ ಪುಟ್ಟ ಕರಂಡವನ್ನು ತಂದು ಅದರ ಎಸವನ್ನು ತೆರೆದು - ಸೋಮನಾಥ ಪಂಡಿತರು ತಮ್ಮ ಔಷಧಿ ಕರಂಡದ ಎಸವನ್ನು ತೆರೆದಿಟ್ಟು ಜಕ್ಕಿಯ ನಾಡಿಯನ್ನು ಪರೀಕ್ಷಿಸುತ್ತಿದ್ದರು.- ಮುಚ್ಚಳ ಎಂದು ಇದರ ಅರ್ಥ. ಎಸರ್ಮುಚ್ಚೆ ಎಂಬ ಪ್ರಯೋಗ ರುದ್ರಭಟ್ಟನ ಜಗನ್ನಾಥವಿಜಯ ಕಾವ್ಯದಲ್ಲಿದೆ (ಆ. - ಪದ್ಯ ೩೦) ಅನ್ನಬೇಯಿಸಲು ಒಲೆಮೇಲಿಟ್ಟ ಪಾತ್ರೆಯ ಮರದ ಮುಚ್ಚಳಕ್ಕೆ ಈ ಹೆಸರಿದೆ. ಅನ್ನಕ್ಕಿಟ್ಟ ನೀರಿಗೆ ಎಸರ್ ಎನ್ನುವರು. ರನ್ನನೂ ಇದನ್ನು ಪ್ರಯೋಗಿಸಿದ್ದಾನೆ.

೧೯. **ಒಂಟು** (೧೦೭೧) - ಇಲ್ಲಿನ ಹವಾ ನಿಮಗೆ ಒಂಟಿದ ಹಾಗೆ ಕಾಣುತ್ತದೆ. ಒಗ್ಗು ಎಂದರ್ಥ.

೨೦. **ಒಳಲೆ** (೭೬) - "ಮಾಚಿಕಬ್ಬೆ ಹಾಲು ಒಳಲೆಯನ್ನು ತಂದು ಅಲ್ಲಿಟ್ಟು ಕಂಬಕ್ಕೆ ಒರಗಿ ಕುಳಿತು" - ಮಕ್ಕಳಿಗೆ ಹಾಲನ್ನು ಕುಡಿಸುವ ಶಂಖದ ಹಾಗಿರುವ ಹಾಲಿನ ಪಾತ್ರೆಯಿದು. ಸಿಂಪು ಎಂತಲೂ ಹೇಳುತ್ತಾರೆ.

೨೧. **ಒಸಿ** (೭೭೧) - ಸ್ವಲ್ಪ, ತುಸು

೨೨. **ಕಕಲಾತಿ** (೪೪೬, ೪೪೮, ೫೬೬, ೫೮೩) - ಮಾನಗೆಟ್ಟೋಳ ಮೇಲೆ ಯಾಕೆ ಇಷ್ಟು ಕಕಲಾತೀಂತ (೯೦೬) - ಕಕ್ಕುಲತೆ ಎಂದೂ ಶಬ್ದ ರೂಪವಿದೆ. ಕಕಲಾತಿ ದೇಸಿ. ಕನಿಕರ, ಪ್ರೀತಿ ಎಂದರ್ಥ.

೨೩. **ಕಂಸಾಳ** (೯೯೦) - ಕರೆಗಂಟೆ ಎಂಬರ್ಥದಲ್ಲಿ ಇದು ಬಳಕೆಯಾಗಿದೆ. ಈ ಶಬ್ದ ಕಾಂಸ್ಯತಾಳ, (ಅಂದರೆ - ಕಂಚಿನತಾಳ) ಎಂಬುದರ ತದ್ಭವ. ಕಂಸಾಳೆ ಪದಗಳು ಎಂಬಲ್ಲಿ ಕಂಸಾಳೆ, ಎಂಬುದು ಜಾನಪದ ಪ್ರಸಿದ್ಧಿಯುಳ್ಳದಾಗಿದೆ.

೨೪. **ಕಾರ್ವಾ** (೪೨೬) - 'ಶಾಂತಲೆಯ ಕಾರ್ವಾ ಕೆನೆಯಿತು' ಗಿಡ್ಡದ ಕುದುರೆ ಎಂದು ಇದರ ಅರ್ಥ. ಖರ್ವ ಎಂಬ ಸಂಸ್ಕೃತ ಶಬ್ದಕ್ಕೆ ಕುಳ್ಳ, ಗಿಡ್ಡ - ಎಂಬ ಅರ್ಥಗಳಿವೆ. ಅದರಿಂದ ಕಾರ್ವಾ ಬಂದಿರಬೇಕು.

೨೫. **ಕಿರಿಗೆಕಣ** (೧೦೮೨) - ಕನ್ಯೆಯರಿಗೆಲ್ಲ 'ಕಿರಿಗೆ ಕಣವನ್ನು ದಾನ ಮಾಡಲಾಯಿತು.' ಕಿರಿಗೆ = ಸಣ್ಣ, ಕಣ = ರವಕೆಬಟ್ಟೆ.

೨೬. **ಕಿರುಕುಳ** (೯೬೪) - ಅಂದರೆ 'ಚಿಲ್ಲರೆ ತೆರಿಗೆ'.

೨೭. **ಕುಮರಿಸು** (೪೯೪) - ಒಂದೇ ಸವನೆ ಸುರಿಸು. "ಮಡಿಲಲ್ಲಿದ್ದ ಹೂವಿನ ರಾಶಿಯನ್ನು ಹುಲ್ಲಿನ ಮೇಲೆ ಕುಮರಿಸಿದಳು".

೨೮. **ಕೇನಾರ** (೩೫) - "ಗಲ್ಲ ಕೇನಾರಗಳ ಮೇಲೆ ಕೈಯಾಡಿಸಿ" ಕೆನ್ನೆಯ ಮೇಲುಗಡೆ ಭಾಗ.

೨೯. **ಕೋಶಿಕೆ** (೭೭೧) - "ಒಂದು ಕೋಶಿಕೆ ನೀರು ತಾ" ಮಜ್ಜಿಗೆಯ ಕೋಶಿಕೆ ತಂದಳು (೭೭೧) - ಕುಡಿಯುವ ಉಪಕರಣ, ಗ್ಲಾಸು.

೩೦. **ಖಜಿಕೆ** - ಅಂದರೆ ಚಮಚ. ಔಷದ ಕರಂಡ ತೆಗೆದು ಮತ್ತೊಂದು ಖಜಿಕೆ ಔಷಧಿ ಕೊಟ್ಟರು.

೩೧. **ಗುತ್ತ** - "ಗುತ್ತನಾದ ಕಾಲಂದಿಗೆಗಳು. ಗುತ್ತವಾಗಿ ಬಳೆಯೇರಿಸು (೪೧೩)" ಕಂಠಿಹಾರ ದುಂಡುಕತ್ತಿಗೆ ಗುತ್ತನಾಗಿ ಅಲಂಕೃತವಾಗಿದೆ (೪೧೭). ಬಿಗಿಯಾಗಿ ಎಂದರ್ಥ.

೩೨. **ಗುಂಭ** - ಅಬ್ಬ ಮಹಾಗುಂಭಜನ" (೫೨೫) ಒಳಗರಿಯದ ಸ್ಥಿತಿ ಎಂದಿಲ್ಲಿ ಅರ್ಥ.

೩೩. **ಗುರಮಘಾತಕಿ** - ಯಾರಿಗೂ ತಿಳಿಯುವುದಿಲ್ಲ ಎಂದು ಆ ಗುರಮ ಘಾತಕಿ ಯೋಚಿಸಿರುವಂತೆ ಕಾಣುತ್ತದೆ. (೪೩೬) ಗುಪ್ತದ್ರೋಹಿ ಎಂದರ್ಥ.

೩೪. **ಚಚ್ಚರ** - "ಆ ಶಬ್ದವನ್ನು ಕೇಳಿ ಚಚ್ಚರಗೊಂಡಳು" (೧೧೫೦) ಎಚ್ಚರ ಎಂದಿಲ್ಲ ಅರ್ಥ. ಆದರೆ ಚೆಚ್ಚರ ಎಂಬುದು ಶೀಘ್ರ ಎಂಬ ಅರ್ಥವುಳ್ಳದಾಗಿದೆ -
ಭೋಂಕನೆ ಚೆಕ್ಕನೆ ಭೋರನೆ.
ಭೋಂಕಲ್ ಚಡಪುಡನೆ ಗರ್ರತಿರ್ರನೆಯೆನೆ
ತ್ತಂ ಕಡುಬೆಚ್ಚರ ಚೆಚ್ಚರ
ಮುಂ ಕೂಡಿರೆ ತಮ್ಮೊಳೊದವುಗುಂ ಶ್ರೀಘ್ರಾರ್ಥಂ (ಶ.ದ. ಅವ್ಯಯ ಪ್ರಕರಣ)

೩೫. **ಚಿಲ್ಲಾಣ** (೭೪೫) - ಅಂದರೆ ಚಿಕ್ಕ ಆಯುಧ, ದೊಡ್ಡಚೂರಿ.

೩೬. **ಚೊಂಗಿ** - "ಹೇಗಾದರೂ ನಾನು ಚೊಂಗಿ"(೯೨೬)- ಬುದ್ಧಿತಿರುಗಿದವಳು. ಚೊಂಗಿತನ (೯೩೫) - ಬುದ್ಧಿ ತಿರುಗಿರುವ ಸ್ವಭಾವ.

೩೭. **ಜಲಿಕ** - ಕನ್ನವ್ವೆಗೆ ಈ ಬಗೆಯ ಜಲಿಕರರೀತಿ ಗೊತ್ತಾಗುವುದಿಲ್ಲ (೪೦೩). ಮೋಸಗಾರ.

೩೮. **ಜೊಂಪೆ** - "ಜೊಂಪೆ ಜೊಂಪೆಯಾಗಿ ನೇತಾಡುತ್ತಿರುವ ಮಾವಿನಕಾಯಿ (೮೧೫)- ಅಂದರೆ - ಗೊಂಚಲು.

೩೯. **ಟವುಳಿ** (೭೪೫) - ಕುದುರೆಸವಾರರ ಲೋಹದ ಕವಚ.

೪೦. **ಡಂಕ** - ಇದೊಂದು ರಣವಾದ್ಯದ ಹೆಸರು. ಢಕ್ಕಾಢಕ್ಕೆ ಎಂದು ಕಾವ್ಯಪ್ರಯೋಗಗಳಿವೆ.

೪೧. **ಡಮಣಿ** (೨೨೭) - ಮೇನೆ; ಪೆಟ್ಟಿಗೆ ಗಾಡಿ, "ಡಮಣಿಯನ್ನು ಎಳೆಯುತ್ತಿದ್ದ ಎತ್ತುಗಳು."

೪೨. **ತರುಮಿಕೊಳ್ಳು** - ತಡೆ, ನಿಗ್ರಹಿಸು. "ಅವರನ್ನೆಲ್ಲ ತರುಮಿಕೊಂಡು ಬಂದು ಕಾವೇರಿಯಲ್ಲಿ ಮುಳುಗಿಸಬಹುದು" (೮೪೫). ಹಳಗನ್ನಡದಲ್ಲಿ ಇದೇ ಅರ್ಥದ ತರುಬು ಎಂಬ ಶಬ್ದವಿದೆ.

೪೩. **ಕಾಗುಡಿ** - ಅಡಗಿಕೊಳ್ಳುವ. ತಾಣ. "ಬಿಲ್ಗಾರರು ಕಾಗುಡಿಗಳ ಮರೆಯಿಂದ ಎಲ್ಲ ಕಡೆಯಿಂದ ಅಂಬುಗಳ ಮಳೆಗರೆಯಿಲಿ" (೭೪೫)

೪೪. **ತಿಲಕಾಲಕ, ತಿಲಕಾಲ** - ಹುಟ್ಟುವಾಗಲೇ ಮೈಮೇಲೆ ಇದ್ದ ಕರಿಯ ಕಲೆ; ಮಚ್ಚೆ. "ಅವಳ ಬಲಕೆನ್ನೆ ಮೇಲೆ ಗಲ್ಲಕುಳಿಗೆ ಸ್ವಲ್ಪ ಮೇಲೆ ಒಂದು ಹುರುಳಿಕಾಯಿಯಷ್ಟು ತಿಲಕಾಲಕ ಇತ್ತೆ? ಕತ್ತಿನ ಹಿಂಭಾಗದಲ್ಲಿ ಒಂದು ಕಡಲೆಕಾಳಿನ ಹಾಗೆ ಉಬ್ಬಿದ ತಿಲಕಾಲವೂ ಇತ್ತು " (೯೦೬)

೪೫. **ತೆವಲು** - ಚಾಳಿ, ಕಷ್ಟ. "ಇದೇನು ತೆವಲು ಬಂತು ಈ ಹೆಗ್ಗಡಿತಿಗೆ?" (೨೨೮). ಅವಳಿಗೆ ಶಸ್ತ್ರವಿದ್ಯೆ ಕಲಿಸಲು ಹೆಗ್ಗಡೆಗೇನು ತೆವಲು (೫೨೪). ನಿನ್ನ ತೆವಲಿಗೆ ಹಾಳು ಅಂಜನದ ಪ್ರಸಂಗ ಏಕೆ ಜರುಗಿಸಬೇಕಾಗಿತ್ತು ?" (೭೨೮)

೪೬. **ತೋಬರಿ** - ಕುದುರೆಯ ಮೇವು. ತೋಬರಿತುಂಬಿದ ತುರಗಶಾಲೆಗಳು (೮೪೪)

೪೭. **ದ್ರಾಬೆ** - ನೋಡಲು ಅಸಹ್ಯ. ಅಕರಾಳ ವಿಕರಾಳವಾಗಿ ದ್ರಾಬೆಯಂತೆ ಇರುವ ರಕ್ಕಸಿಯ ಮುಖ"

೪೮. **ನೇವಳ** - ಕೊರಳ ಹಾರ. "ನೇವಳ ದೇವಿಯ ಉನ್ನತ ಕುಚಗಳ ಮೇಲೆ ಹಾದು ಅದರ ವಜ್ರಖಚಿತ ಪದಕ ನೇತಾಡುತ್ತಿದೆ." (೪೧೭) ಶಾನ್ತಳೆಯ ಕೊರಳು ಎದೆ ನೇವಳ ಪದಕಗಳಿಂದ ಬೆಳಗಿತು (೪೫೦). ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಾಗಿರುವಂತೆ ನೇವಳ ಅಥವಾ ನೇವಾಳ ಎಂಬುದು ಚಿನ್ನದ ಅಥವಾ ಬೆಳ್ಳಿಯ ಸರಿಗೆಗಳನ್ನು ನೇಯ್ದು ಮಾಡಿದ ಕಟಿಸೂತ್ರ, ಸೊಂಟದ ಆಭರಣ. 'ನೇವಾಳಿಕ್ಕಿಳಿದರೆ ನಡು ಚೆಂದ ' ಎಂದು ಜಾನಪದ ತ್ರಿಪದಿಯ ವಾಕ್ಯವಿದೆ. ಕನ್ನಡ ಕಾವ್ಯಗಳಲ್ಲಿ ನೇವಳ, ನೇವಾಳ, ನೇವಣ- ಎಂಬ ರೂಪಗಳಲ್ಲಿಯೂ ಈ ಶಬ್ದವಿದೆ. ತೊರವೆ ರಾಮಾಯಣದ ಒಂದು ಪದ್ಯ ಹೀಗಿದೆ -

ಕುಶನೆ ಕೇಳು ಪತಿವ್ರತೆಯರಿಗೆ
ವಿಷಮೃತವಹುದುರಿ ಹಿಮಾನ್ವಿತ
ರಸವಹುದು ಬಲುಹಾವು ನೇವಳವಹುದು ಬೆಂಬಿಡದೆ

ಎಸಗಿದಪವಾದಂಗಳಿವು ತಾ
ಸಸಿನಸವಯದಿದು ಸಿದ್ಧ ಸಾಕುವ
ಶಿಶುವಿನವೊಲಿರ್ದಳು ವಿದೇಹಜೆಕೈಗಳಲಿ ಶಿಖಿಯ (ಸಂ. ೫೩-೯೫)

೪೯. **ಪಟವಾಸ** - ಶಿಬಿರ, ಡೇರೆ. "ಪಟವಾಸದ ಅಪಟಿಯ ಹೊರ ಭಾಗದಲ್ಲಿ ಸುತ್ತಲೂ ಕಾಪಿನವರು ಶಸ್ತ್ರಸಜ್ಜಿತರಾಗಿ ನಿಂತಿದ್ದರು" (೧೦೧೯)

೫೦. **ಪರಳಿಗ** - ಹಾದರಿಗ. "'ಆ ಬೆದೆಗಾರ್ತಿಯ ಮೇಲೆ, ಆ ಪರಳಿಗನ ಮೇಲೆ ಗಾಳಬ್ಬೆ ಕಣ್ಣಿಟ್ಟಳು' (೮೬೫)

೫೧. **ಪಿಂದಿ** - ಅಲ್ಪಜೀವಿ, ಅಲ್ಪವಸ್ತು. "ನಾವು ಚುಟವುಟನೆ ಕುದುರೆಯ ಮೇಲೆ ನೆಗೆದಾಡುವ ಪಿಂದಿಗಳಂತೆ ಅಲ್ಲ" (೭೪೪)

೫೨. **ಪೆಕರು** - ಬುದ್ಧಿಗೇಡಿ. "ನಾನೇನು ಪೆಕರೆ" (೮೬೫)

೫೩. **ಪೆಠಾರಿ** - ಪೆಟ್ಟಿಗೆ. "ಆ ಉಂಡೆಗಳನ್ನು ಬೇರೆ ಪೆಠಾರಿಯಲ್ಲಿ ಇಟ್ಟಿದ್ದರೆ ಚೆನ್ನಾಗುತ್ತಿತ್ತು" (೮೯೨).

೫೪. **ಬಿಕನಾಸಿ** - ಭಿಕ್ಷುಕ, ಕ್ಷುದ್ರಜೀವಿ-ಎಂದು ಶಬ್ದಕೋಶದಲ್ಲಿ ಅರ್ಥವಿದೆ. "ಬಿಕನಾಸಿಗಳಾದರೆ ಕೊಟ್ಟರೆ ಸಾಕೆಂದು ಕೈಚಾಚುತ್ತಾರೆ". (೩೮) ವಾಸ್ತವವಾಗಿ ಇದೊಂದು ಬೈಗುಳ ಶಬ್ದ. ಅನ್ಯದೇಶ್ಯವಿರಬಹುದು. 'ಬಿಕ್‌ನಾ' ಎಂದರೆ, ಹಿಂದಿಯಲ್ಲಿ ಮಾರುವುದು ಎಂದರ್ಥ. ಮೂಗನ್ನು ಮಾರಿದವನು, ವಾಸನೆಯರಿಯದವನು, ನಾಚಿಕೆಗೇಡಿ ಎಂಬರ್ಥದಲ್ಲಿ ಪ್ರಯೋಗ ರೂಢಿಯಿದೆ. ಶಬ್ದಮಣಿದರ್ಪಣದಲ್ಲಿ 'ಕಿತನಾಸಿ' (ಕಿತ್ತುಹೋದ ಮೂಗಿನವ)- ನಾಚಿಕೆಯಿಲ್ಲದವ ಎಂಬರ್ಥದಲ್ಲಿದೆ.

೫೫. **ಬೀಡಾರ** (೨೫) - ಇದು ಎಲ್ಲರಿಗೂ ಗೊತ್ತಿರುವ ಪ್ರಚಲಿತ ಶಬ್ದ. 'ಬಿಡಾರ' ಅಶುದ್ಧರೂಪ. ಬೀಡು (ವಾಸದ ವ್ಯವಸ್ಥೆಯುಳ್ಳದ್ದು) ಮತ್ತು ಆರ (ಆಹಾರ ವ್ಯವಸ್ಥೆಯುಳ್ಳದ್ದು) ಹೀಗೆ ಇವೆರಡೂ ಸೇರಿ 'ಬೀಡಾರ'ವಾಗಿದೆ.

೫೬. **ಬೆದೆಗಾರ್ತಿ** - ಸೂಳೆ. "ಕೈಸೆರೆಯಾದ ಬೆದೆಗಾರ್ತಿಯನ್ನೂ ಪರಳಿಗ(ಹಾದರಿಗ)ನನ್ನೂ ಸಾರ್ವಜನಿಕವಾಗಿ ನ್ಯಾಯಪರಿಶೀಲನೆಗೆ ಒಳಗು ಮಾಡುವುದಕ್ಕೆ ಸಭೆ ಸೇರಿಸುವ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂತು" (೮೮೫)

೫೭. **ಬೋಕಣ** - ಕುದುರೆ ಬಾಯಿಯ ಆಹಾರದ ಚೀಲ, ಬೊಕ್ಕಣ, "ಕೆಲವರನ್ನು ಬೋಕಣದ ಮೇಲ್ವಿಚಾರಣೆಯಲ್ಲಿ ಬಿಟ್ಟುಬಂದಿದ್ದೇನೆ" (೧೦೨೨)

೫೮. **ಬೊಂಕು** - ಹೇಳು, ಸುಳ್ಳು ಹೇಳು. 'ಸುಳ್ಳು ಬೊಂಕಿದ್ದಾನೆ ಆ ಬೂದಿ ಬಡಕ (೪೩೫)

೫೯. **ಮುಸಣಿ** -ಮುಸುಡು. "ಮಂಗನ ಮುಸಣಿಯಾಗಿತ್ತು" (೮೪೧)

೬೦. **ಮುಚ್ಚಟೆ** - ಮೋಹ. 'ಆ ಹೆಗ್ಗಡೆಗೆ ಮಗಳೊಂದ್ರೆ ಅತಿಮುಚ್ಚಟೇಂತ ಕಾಣುತ್ತೆ' (೪೯). "ಬಹುಶಃ ನಾವು ತೋರಿದ ಮುಚ್ಚಟೆ, ಪ್ರೀತಿ, ನಿನ್ನಲ್ಲಿ ಬಯಸಿದ್ದು ಬೇಕೆಂಬ ಹಟಮಾರಿತನ ಹುಟ್ಟಲು ಕಾರಣವಾಗಿರಬೇಕು" (೧೩೧೩)

೬೧. **ರಬ್ಬಳಿಗೆ** - ಜೋಳದ ಗಂಜಿ.... "ದೇಕವ್ವ ರಬ್ಬಳಿಗೆಯನ್ನು ತಂದಳು" ಪಿತ್ತಶಮನಕ್ಕೆ ಇದು ಸಹಕಾರಿ (೭೭೬)

೬೨. **ರಸವತಿ** - ಪಾಕಶಾಲೆ (೬೧೭). ಇದು ಸಂಸ್ಕೃತ ಶಬ್ದ.

೬೩. **ಲೋಹವಕ್ಕರೆ** - ಲೋಹದ ಪಕ್ಷರಕ್ಷೆ, ಕುದುರೆಯ ಕವಚ (೧೦೧೮) "ಲೋಹವಕ್ಕರೆಯ ಜಾತ್ಯಶ್ವಂಗಳಿರ್ಭಾಸಿರಂ" ಎಂದು ಶಬ್ದಮಣಿದರ್ಪಣದಲ್ಲಿ ಪ್ರಯೋಗವಿದೆ.

೬೪. **ವಂಕುಡಿ** - ದೊಡ್ಡ ಚೂರಿ.

೬೫. **ವಂಕ್ಷಣ** - ತೊಡೆಯ ಸಂದು. "ಅವನ ವಂಕ್ಷಣದಲ್ಲಿ ವಂಕುಡಿಯೊಂದು ಹೊಕ್ಕಿತ್ತು." (೮೪೬)

೬೬. **ವಡ್ಡವ್ಯವಹಾರಿ** (೬೧೮) - ರಫ್ತು ವ್ಯಾಪಾರ ಕುಶಲ.

೬೭. **ವಾವೆ** - ಸಂಟು, ಸಂಬಂಧ. "ವಾವೆಯಲ್ಲಿ ನಾನು ನಿಮ್ಮ ಪಾದ ಹಿಡಿಯಬೇಕೇ ವಿನಾ ನೀವು ಅಲ್ಲ" (೮೫೬)

೬೮. **ಹೆಜ್ಜುಂಕ** (೯೬೪) - ಹಿರಿದು ಸುಂಕ, ಅಧಿಕವಾದ ತೆರಿಗೆ.

೬೯. **ಹೇರಿಗ** - ಬೇಹುಗಾರ, ಗುಪ್ತಚರ (೪೭೯, ೪೯೯)

೭೦. **ಹೊಡೆ** - ಶತ್ರುಗಳ ದಾಳಿಯಿಂದ ರಕ್ಷಿಸುವುದಕ್ಕಾಗಿ ಕಲ್ಲಿನಿಂದ ಕಟ್ಟಿದ ಗೋಲಾಕಾರದ ವಾಸಸ್ಥಳ. 'ಇಲ್ಲಿನ ಅಪಾರ ಜನಸಂಖ್ಯೆಯ ರಕ್ಷಣೆಗೆ ಹೊಡೆಗಳನ್ನು ನಿರ್ಮಿಸಲಾಗುತ್ತಿದೆ' (೭೧೭)

ಇಂತಹ ದೇಶೀಶಬ್ದಗಳು ಈ ಕಾದಂಬರಿಯಲ್ಲಿ ಇನ್ನೆಷ್ಟೋ ಕಾಣಸಿಗುತ್ತವೆ. ಪ್ರತಿಯೊಂದನ್ನು ಆಯ್ದು ಅದರ ಪೂರ್ವಾಪರಗಳನ್ನು ಸಮೀಕ್ಷಿಸುವುದು ಒಂದು ಹಿರಿಯ ವಿಶೇಷಾಧ್ಯಯನವೇ ಆದೀತು. ದಿಕ್ಸೂಚಕವಾಗಿ ಮಾತ್ರ ಇಲ್ಲಿ ವಿವೇಚನೆ ಮಾಡಲಾಗಿದೆ.

ಶಬ್ದಸಂಪತ್ತಿನಿಂದ ಭಾಷೆಯ ಅಭಿವ್ಯಕ್ತಿ ಭಾವಗರ್ಭಿತವಾಗುತ್ತದೆ, ಸಂಪನ್ನವಾಗುತ್ತದೆ. ಎಷ್ಟೋ ಮಂದಿ ಕಾದಂಬರಿಕಾರರು ಕನ್ನಡ-ಸಂಸ್ಕೃತ ಶಬ್ದಸಂಪನ್ನರಾಗಿಲ್ಲದೆ ಅಥವಾ ತಮ್ಮದೇ ಆದ ಆಧುನಿಕ ಭಾಷಾಶೈಲಿಯದೆಂದು ಅನುಚಿತವಾಗಿ ಅಲ್ಲಲ್ಲಿ ಆಂಗ್ಲಶಬ್ದಗಳನ್ನು ಬಳಸುತ್ತಾರೆ. ಅವರ ಈ ತರದ ಬಳಕೆ ಅಸಮಂಜಸ ಶಬ್ದಮೇಳವಾಗುತ್ತದೆ. "ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ"-ಎಂದಿರುವ ನಯಸೇನನು ಈ ಮಾತನ್ನು ಅನುಚಿತವಾಗಿ ಸಂಸ್ಕೃತವನ್ನು ಕನ್ನಡದಲ್ಲಿ ಬೆರಸುವುದರ ವಿರುದ್ಧವಾಗಿ ಹೇಳಿದುದಾದರೂ ಅವನ ಈ ಮಾತು ಕನ್ನಡ-ಆಂಗ್ಲ ಶಬ್ದಗಳ ಬೆರಕೆಗೆ ಒಪ್ಪುತ್ತಿದೆ. ಈ ಕಾದಂಬರಿಯಲ್ಲಿ ಅಂತಹ ಕನ್ನಡ ಆಂಗ್ಲ ಶಬ್ದಮಿಶ್ರಣವಿಲ್ಲದಿರುವುದೇ ಇದರ ಗುಣೋತ್ಕರ್ಷದಲ್ಲಿ ಒಂದಾಗಿದೆ.

ಹಿಂದೆ ತಿಳಿಸಿದಂತೆ ಯಾವುದೇ ಕಾದಂಬರಿಗೆ ಹೊಸದೇಸೆಯನ್ನು ತರುವ ಮುಖ್ಯಾಂಶವೆಂದರೆ ಶಬ್ದಸಂಪತ್ತು. ಆ ಮೇಲೆ ನುಡಿಗಟ್ಟು, ಗಾದೆಗಳು. ಕೆಲವನ್ನಿಲ್ಲಿ ಉದಾಹರಿಸುವುದು ಸೂಕ್ತವೆನಿಸಬಹುದು. ಯಾವ ಅರ್ಥದಲ್ಲಿ ಅವು ಬಂದಿವೆಯೆಂಬುದರೊಂದಿಗೆ ಕಾಣಿಸಲಾಗುವುದು.

ಅಡ್ಡಗಾಲು ಹಾಕು (ತಡೆಯೊಡ್ಡು), ಅನುಕೂಲಸಿಂಧು (ತನಗೆ ಮಾತ್ರ ಅನುಕೂಲವಾದರಾಯಿತು, ಅದೇ ಸರಿ ಎಂಬ ಸ್ವಾರ್ಥದ ನೆಲೆ). ಇಳಿತೆಗೆ (ದೃಷ್ಟಿ ದೋಷ ಪರಿಹಾರ ಕ್ರಿಯೆ ಮಾಡು), ಕಣ್ಣು ಕಿಸುರಾಗು (ಮತ್ಸರಕ್ಕೆ ಕಾರಣವಾಗು), ಕಣ್ಣಿಗೆ ಬೀಳು (ಕಾಣಿಸು), ಕರುಳು ಕಿವುಚು (ತುಂಬಾ ನೋವುಂಟುಮಾಡು), ಕುರುಡಾಗಿ ಕುಳಿತಿರು (ಅಲಕ್ಷ್ಯ ಮಾಡು), ಗಂಟುಹಾಕು (ಸಂಬಂಧ ಕಲ್ಪಿಸು), ತಾಳಕ್ಕೆ ಕುಣಿ (ಅನ್ಯನು ಹೇಳಿದಂತೆಯೇ ಮಾಡು). ತುಟಿ ಕಚ್ಚಿಕೊಳ್ಳು (ಮಾತಾಡದಿರು), ದ್ರಾವಿಡ ಪ್ರಾಣಾಯಾಮ (ಬಳಸುಮಾತು), ನಡುವೆ ಬಾಯಿಹಾಕು (ನಡುವೆ ಮಾತಾಡು), ನಾಲಗೆಗೆ ಕಡಿವಾಣ ಹಾಕು (ಹೆಚ್ಚು ಮಾತಾಡದಿರು), ತಣ್ಣೀರೆರಚು (ಭಂಗ ಗೊಳಿಸು), ಪಾದ ಬೆಳಸು (ತೆರಳು), ಬಾಯಿಗೆ ಬೀಗಮುದ್ರೆ ಹಾಕು (ಮಾತೆತ್ತದಿರು), ಮಟ್ಟಹಾಕು (ಸದೆ ಬಡಿ), ಮೂಗುವಡು (ಮೂಕನಾಗು), ಮೆಲುಕುಹಾಕು (ಮತ್ತೆ ಮತ್ತೆ ಅದನ್ನೆ ಯೋಚಿಸು), ರೆಕ್ಕೆಮೂಡು (ಹೆಚ್ಚಾಗು) ಉದಾ : ಧೈರ್ಯಕ್ಕೆ ರೆಕ್ಕೆಮೂಡಿತು. ಹಾಲೆರೆ (ಪೋಷಿಸು), ಹುಂಗುಟ್ಟು, ಹೂಗುಟ್ಟು (ಕೇಳುತ್ತಿರು, ಒಪ್ಪಿಗೆ ಕೊಡು)-

ಇಂತಹ ನುಡಿಗಟ್ಟುಗಳು ಆಯಾ ಸಂದರ್ಭದ ಮಾತುಕತೆಗಳಲ್ಲಿ ಸಹಜವಾಗಿ ಮೂಡಿಬಂದುವಾಗಿ ಅಲ್ಲಲ್ಲಿಗೆ ಅವು ಭಾವಪುಷ್ಟಿಯನ್ನು ಒದಗಿಸುತ್ತಿವೆ. ಕೆಲವು ಗಾದೆಗಳು ಈ ಕೆಳಗಿನವು -

ಅನಿಷ್ಟಕ್ಕೆಲ್ಲ ಶನೀಶ್ವರ ಮೂಲ. ಎತ್ತಿಗೆ ರೋಗ ಬಂದರೆ ಕರುವಿಗೆ ಬರೆ ಹಾಕಿದ, ಕಾಲು ಕೆರೆದು ಜಗಳ ಆರಂಭಿಸುವ ರೀತಿ, ಕೆಟ್ಟವರ ಸಹವಾಸಕ್ಕಿಂತ ಒಳ್ಳೆಯವರೊಡನೆ ಗುದ್ದಾಟ ವಾಸಿ, ಕೆಟ್ಟನಾಲಗೆ ಲೋಕಾನೇ ಸುಡುತ್ತೆ, ಕೋಲೆ ಬಸವನ ಹಾಗೆ ಸರಿ ಎಂದರೆ ಸರಿ, ನಾಯಿ ಬೊಗಳಿದರೆ ದೇವಲೋಕ ಹಾಳೆ?, ಮುಳ್ಳನ್ನು ಮುಳ್ಳಿನಿಂದ ತೆಗೆಯಬೇಕು, ಹುಟ್ಟಿನಲ್ಲಿ ಬಂದ ಸುಳಿ ಸುಟ್ಟರೂ ಹೋಗದು - ಇತ್ಯಾದಿ.

ಪಟ್ಟಮಹಾದೇವಿ ಶಾನ್ತಲ ದೇವಿ ಎಂಬ ಈ ಬೃಹತ್ಕಾದಂಬರಿ ಉದ್ದಕ್ಕೂ ಓದಿಸಿಕೊಂಡು ಹೋಗುವ ಸಾಹಿತ್ಯಕೃತಿ. ಇದರ ಚಾಕಚಕ್ಯತೆಯಲ್ಲಿ ಶಬ್ದಸಂಪತ್ತೂ ಒಂದಾಗಿದೆ. ಪ್ರಸ್ತಾವಿಸಲಾದ ಉದಾಹರಣೆಗಳು ಸಮಗ್ರವಲ್ಲ. ಕೆಲವು ಮಾತ್ರ. ಹೊಸ ಹೊಸ ಶಬ್ದಗಳ ಅನುಭವ ನೀಡುತ್ತಾ ಓದುಗರ ಶಬ್ದ ಸಂಪತ್ತನ್ನು ಇದು ಹೆಚ್ಚಿಸುತ್ತದೆ. ನುಡಿಗಟ್ಟುಗಳ, ಗಾದೆಗಳ, ಸಹಜಾಲಂ ಕೃತಿಯುಕ್ತ ಸಂಭಾಷಣೆಗಳ, ಕಥಾಸನ್ನಿವೇಶಗಳ ಸಮೃದ್ಧಿ - ಓದುಗರಿಗೆ ವಿಶೇಷ ರೋಚಕವಾಗಿಯೇ ಇದೆ. ಕನ್ನಡಿಗರಿಗೆ ಇದನ್ನೊದಗಿಸಿದ ಲೇಖಕರು ಅಭಿನಂದನಾರ್ಹರು.

□

೨೮

ಡಾ|| ಗೋಕಾಕರ ಛಂದೋವೈವಿಧ್ಯ

ಆಧುನಿಕ ಸಾಹಿತ್ಯಕ್ಷೇತ್ರದಲ್ಲಿ ಬಹುಮುಖ ಪ್ರತಿಭೆಯ ದಿಗ್ಗಜರಲ್ಲಿ ಒಬ್ಬರಾಗಿ, ಅನೇಕ ಪೂರ್ವ ಪ್ರಶಸ್ತಿಗಳೊಂದಿಗೆ ಇದೀಗ ಜ್ಞಾನಪೀಠ ಪ್ರಶಸ್ತಿಯನ್ನೂ ವರಿಸಿಕೊಂಡವರು ಡಾ. ವಿನಾಯಕ ಕೃಷ್ಣ ಗೋಕಾಕರು. ಕನ್ನಡ ಸಾಹಿತಿಗಳಿಗೆ ಬಂದ ಜ್ಞಾನಪೀಠಪ್ರಶಸ್ತಿಗಳಲ್ಲಿ ಇದು ಐದನೆಯದಾಗಿದ್ದು ೧೯೭೦-೮೪ರ ಅವಧಿಯ ಭಾರತೀಯ ಸಾಹಿತ್ಯಕ್ಕೆ ಸಂದ ಅಪೂರ್ವವಾದ ಕೊಡುಗೆಯಾಗಿ ಈ ಪ್ರಶಸ್ತಿ ಬಂದಿರುವುದು ನಮಗೆಲ್ಲ ಅಭಿಮಾನದ ಸಂಗತಿ. ಗೋಕಾಕರಿಂದ ಕನ್ನಡದಲ್ಲಿ ಐವತ್ತಕ್ಕೂ ಹೆಚ್ಚು, ಇಂಗ್ಲಿಷಿನಲ್ಲಿ ಇಪ್ಪತ್ತೈದಕ್ಕೂ ಮಿಕ್ಕ ಕೃತಿರಚನೆಗಳಾಗಿವೆ. ಕನ್ನಡದಲ್ಲಿ ನವೋದಯ, ನವ್ಯ ಕಾವ್ಯ ರಚನೆಗಳನ್ನಲ್ಲದೆ ಸಾಹಿತ್ಯದ ಇತರ ಪ್ರಕಾರಗಳಾಗಿರುವ ನಾಟಕ, ಪ್ರವಾಸಕಥನ, ಕಾದಂಬರಿ, ವಿಮರ್ಶೆ-ಮುಂತಾದುವನ್ನೂ ರಚಿಸಿರುತ್ತಾರೆ. ಅವರ ಬದುಕು ಬರೆಹಗಳ ಒಂದೊಂದು ಪ್ರಕಾರವೂ ಅಧ್ಯಯನಕ್ಕೆ ಹಾಗೂ ವಿಚಾರಸಂಕಿರಣಕ್ಕೆ ವಿಪುಲವಾದ ಸೊತ್ತಿನಿಂದ ಕೂಡಿರುವುದು ನಿರ್ವಿವಾದ. ಪ್ರಕೃತ, ಅವರು ತಮ್ಮ ಕವನ ಕಾವ್ಯರಚನೆಗಳಲ್ಲಿ ಬಳಸಿಕೊಂಡಿರುವ ಛಂದಃಸ್ವರೂಪವನ್ನು ಆಲೋಚನೆಗೆ ಗುರಿಪಡಿಸುವುದು ನನ್ನ ಉದ್ದೇಶವಾಗಿದೆ.

ಗೋಕಾಕರ ಛಂದಃಪ್ರಕಾರಗಳನ್ನು ಲಕ್ಷಿಸುವುದಕ್ಕೆ ಹಿನ್ನೆಲೆಯಾಗಿ ಛಂದಸ್ಸಿನ ವ್ಯಾಪ್ತಿಯನ್ನು ಸಂಲಕ್ಷಿಸಬೇಕಾಗುತ್ತದೆ. ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ ಹೀಗೆಂದಿದ್ದಾನೆ-

ಛಂದಶ್ಶಾಸ್ತ್ರಂ ವಹಿತ್ರಂ ತದ್ವಿವಿಕ್ಷೋಃ ಕಾವ್ಯಸಾಗರಂ
ಛಂದೋಭಾಗ್ ವಾಙ್ಮಯಂ ಸರ್ವಂ ನ ಕಿಂಚಿತ್ ಛಂದಸಾ ವಿನಾ

ಅಂದರೆ, ಕಾವ್ಯವೆಂಬ ಸಮುದ್ರವನ್ನು ಪ್ರವೇಶಿಲು ಹಡಗಿನಂತಿರುವುದು ಛಂದಶಾಸ್ತ್ರ. ವಾಙ್ಮಯವೆಲ್ಲವೂ ಛಂದಸ್ಸಿನಿಂದ ಕೂಡಿದೆ. ಛಂದಸ್ಸಿಗೆ ಹೊರತಾದ ಸಾಹಿತ್ಯ ಯಾವುದೂ ಇಲ್ಲ. ಹೀಗೆನ್ನುವಾಗ, ಗದ್ಯ ಕೂಡಾ ಛಂದಸ್ಸಿನಿಂದ ಕೂಡಿದೆ - ಎಂದ ಹಾಗಾಯಿತು. ಅದು ಹೇಗೆ?

ಛಂದಸ್ಸಿಗೆ ಮೂಲಭೂತವಾದುವು ಲಘು ಗುರು ಅಕ್ಷರಗಳು. ಪದ್ಯವಿರಲಿ, ಗದ್ಯವಿರಲಿ ಅದು ಲಘು ಗುರು ಅಕ್ಷರಗಳಿಂದ ಕೂಡಿರುವುದಷ್ಟೆ ? ಆದುದರಿಂದ ಗದ್ಯದಲ್ಲಿಯೂ ಛಂದಸ್ಸಿದೆ ಎಂಬುದು ತಪ್ಪಲ್ಲ. ಯಾವುದೇ ಗದ್ಯವನ್ನು ಪದ್ಯದಂತೆ ರಾಗ ತಾಳಬದ್ಧವಾಗಿ ಹಾಡಲು ಬರುತ್ತದೆ ಎಂದು ಸಂಗೀತಜ್ಞರು ಹೇಳುತ್ತಾರೆ. ಕೆಲಮಟ್ಟಿಗೆ ನಾನೂ ಇದನ್ನು ಪ್ರಯೋಗದಿಂದ

ತೋರಿಸಬಲ್ಲೆ. ಗದ್ಯದ ಒಂದು ಪ್ರಕಾರವೇ ಆಗಿರುವ ಶರಣವಚನಗಳನ್ನು ರಾಗ-ತಾಳ ಬದ್ಧವಾಗಿ ಹಾಡುತ್ತಿದ್ದುದು, ಇಂದೂ ಪರಿಣತರು ಹಾಡುತ್ತಿರುವುದು ಸರ್ವವಿದಿತ. ತಾಳವು ಮಾತ್ರಾನುಗತ, ಛಂದಸ್ಸು ಮಾತ್ರಾನುಗುಣ, ಈ ಹಿನ್ನೆಲೆಯನ್ನಿಟ್ಟುಕೊಂಡು ಗೋಕಾಕರ ಕಾವ್ಯ ರಚನೆಗಳಲ್ಲಿ ಛಂದಸ್ಸನ್ನೂ ನಾವು ಕಾಣಬಹುದಾಗಿದೆ. ಇಲ್ಲಿ ನಾನು ಕೊಡುವ ಉದಾಹರಣೆಗಳು 'ಸಮಗ್ರ ವಿನಾಯಕ ವಾಙ್ಮಯಸಂಪುಟಗಳಿಂದ ಹಾಗೂ 'ಭಾರತ ಸಿಂಧು ರಶ್ಮಿ' ಕಾವ್ಯದಿಂದಾಗಿರುತ್ತದೆ.

ಗೋಕಾಕರ ಕವಿತೆಗಳಲ್ಲಿ ಅಕ್ಷರಗಣಗಳಿಂದಾಗುವ ಕಂದ ವೃತ್ತಗಳು ಕಂಡುಬರುವುದಿಲ್ಲ. ಮಾತ್ರಾಗಣದ ರಚನೆಗಳು ಯಥೇಷ್ಟವಾಗಿಯೇ ಇವೆ. ಅಂಶಗಣಳಿಂದ ಕೂಡಿದವೂ ಇವೆ. ಅಂಶಗಣ ಮಾತ್ರಾಗಣಗಳ ಬೆರಕೆ ಸಮೃದ್ಧವಾಗಿ ಚಟುವಟಿಕೆ ನಡೆಸಿದೆ. ಪೂರ್ವಕವಿ ಪ್ರಯುಕ್ತಗಳಾದ ಭಾಮಿನಿ-ವಾರ್ಧಕ-ಕುಸುಮ ಷಟ್ಪದಿಗಳು ಉದಾಹರಣೆಗೆ ಸಿಗುತ್ತವೆ. ಮಂದಾನಿಲ, ಲಲಿತ, ಉತ್ಸವ ರಗಳೆಗಳ ಗತಿವಿನ್ಯಾಸದಿಂದ ಕೂಡಿದ ಬಂಧಗಳು, ಮಿಶ್ರಬಂಧಗಳು, ತ್ರಿಪದಿಗಳಿಗೆ ಅಲ್ಲಲ್ಲೊಮ್ಮೆ ನೆಲೆ ಕಾಣುತ್ತವೆ. ರಾಗತಾಳಗಳಿಗೊಡಂಬಡುವ ಕೀರ್ತನೆಗಳ ಮಾದರಿಯೂ ಇದೆ. 'ಭಾರತ ಸಿಂಧು ರಶ್ಮಿ'ಯಲ್ಲಿ ಮಾತ್ರಾಗಣ ಅಂಶಗಣಗಳೆರಡರ ಸಮ್ಮಿಲನವೂ ಕಂಡುಬರುತ್ತದೆ.

ಗೋಕಾಕರ 'ಸ್ವಾಗತ-ಸ್ವಾಗತ' ಕವನದಲ್ಲಿ ದ್ವಿತೀಯಾಕ್ಷರ ಪ್ರಾಸದಿಂದೊಪ್ಪುವ ಒಂದು ಭಾಮಿನಿ ಷಟ್ಪದಿ ಹೀಗಿದೆ-

ಕಿನ್ನರಿಯ ಕೆಳಗಿರಿಸಿ ನುಡಿದನು
ತನ್ನ ಮನಕಾ ಕವಿಯು ನಿಲ್ಲೆ,
ಬನ್ನಬಡುತಿಹ ಮಾನವನ ದೇವಿಯರ ಮಹಿಳೆಯರ
ಚೆನ್ನ ರೂಪವ ನೀನು ನೋಡದ
ಮುನ್ನ ಅವರ್ಸಿರಿಯ ನುತಿಸಿದೆ
ಭಿನ್ನವಾಯಿತು ಗಾನ ಕವನವು ಬರಿಯ ಕನಸಾಯ್ತು

'ದಾರಿಕಾರಾ' ಎಂಬ ಕವನ (ಏಪ್ರಿಲ್, ೧೯೨೭ರ ರಚನೆ) ಪ್ರಾಸಹೀನ ವಾರ್ಧಕ ಷಟ್ಪದಿಯಲ್ಲಿ ಕಂಡುಬರುತ್ತದೆ-

ನನ್ನ ಮನದಿನಿನೆಳಲಿನಲಿ ನಿಲ್ಲುತರೆಚಣದೆ
ಮೋದಿಸುತ ಬಂದು ದಣುವಾರಿದೆಡೆ ತಿಳಿದೆದ್ದು
ಹೋದನೆನುವನಿತರೊಳು ಹೋದನೆಂಬಂತಾಗಿ ತೆರಳುವರೆ ದಾರಿಕಾರಾ
ನಿನ್ನ ನೆನಪಿರಲೆಂದು ತಂದು ಕುಸುಮವನೊಂದು
ನನ್ನ ಮನವೆಂಬ ಚೆನ್ನೆಗೆ ಮುಡಿಸಿ ಸಂತಸದಿ
ನನ್ನ ನೆನೆ ನೆನಸುನನಸಿನ ದಾರಿಯಂದಂದು ತೆರಳುವರೆ ದಾರಿಕಾರಾ

'ಕುಸುಮ ಷಟ್ಪದಿ' ಎಂದು ಹೆಸರನ್ನು ಕೊಟ್ಟಿಲ್ಲವಾದರೂ ಅದೇ ಛಂದೋಲಯವುಳ್ಳ ರಚನೆಯನ್ನು 'ಮೌನ-ಗಾನ' ಎಂಬ ಕವಿತೆಯಲ್ಲಿ ಕಾಣಬಹುದು. ಆದಿಪ್ರಾಸವಿಲ್ಲ, ಅಂತ್ಯಪ್ರಾಸವಿದೆ -

ಹಾಡಿದರೆ ಆನಂದ
ಇಲ್ಲದಿರೆ ಬರಿ ಚಂದ
ನುಡಿದರೇನದು ನುಡಿಯದಿದ್ದರೇನು
ತುಂಬಿ ತುಳುಕುವ ಜೀವ
ತನ್ನ ಉದಿಸಿದ ಭಾವ
ವನ್ನು ಸಿಂಗರಿಸದಿದ್ದರೆ ದೋಷವೇನು

ಭಾಮಿನಿಷಟ್ಪದಿಯಲ್ಲಿ ಬರುವ ಮೂರು ನಾಲ್ಕು ಮಾತ್ರೆಯ ಗಣಗಳ ಲಯವಿನ್ಯಾಸದಲ್ಲಿ ಪಂಜೆ ಮಂಗೇಶ ರಾಯರು, ಕುವೆಂಪು ಮುಂತಾದ ಆಧುನಿಕ ಕವಿವರರು ಕವನಗಳನ್ನು ರಚಿಸಿದ್ದಾರೆ. ಆದೇ ಮಾದರಿಯಲ್ಲಿ ಗೋಕಾಕರ 'ಮಲ್ಲಿಕಾ ಲತೆ' ಎಂಬ ಕವನವಿದೆ. ಆದರೆ, ಇದರಲ್ಲಿ ಎರಡನೆಯ ಪಾದದ ಕೊನೆಗೆ ನಾಲ್ಕು ಉಪಪಾದಗಳು, ಕೊನೆಗೆ ಮುಕ್ತಾಯದಲ್ಲಿ ಯಥಾರೀತಿಯದೊಂದು ಪಾದವಿದೆ -

ಜಾಜಿಮಲ್ಲಿಗೆ ಸೂಜಿಮಲ್ಲಿಗೆ ಕಂಪುಬೀರುವುದೆಲ್ಲಿಗೆ
ಮರೆತೆಯೇನ್ನೈ ನಾವು ಬಂದೆವು ನೀವುಗಳು ಇರುವಲ್ಲಿಗೆ
ನೀವುಗಳು ಇರುವಲ್ಲಿಗೆ
ಪರದ ಸೊಂಪನು ತಂದೆವು
ಮಂದಬುದ್ಧಿಯ ಗೇಹಕೆ
ಗೇಯದಿಂಪನು ತಂದೆವು
ಅಲರಲಂಪನು ತಳಿದ ಜೊಂಪನು ನೋಡಿ ತಣಿಯಲಿಕೆಂದೆವು

ಇದೇ ಛಂದೋಗತಿಯಲ್ಲಿ ಪಾದವ್ಯತ್ಯಾಸವುಳ್ಳ ಕವಿತೆ ಈ ಕೆಳಗಿನದು - 'ಗೆ' ಎಂದು ಈ ಕವನಶೀರ್ಷಿಕೆ

ಕಳೆಯಬಹುದೆಲೆ ತುಂಬುಜವ್ವನಕಿರುನ ರಾಗದ ಹೊಸತನ
ಶುಭವಸಂತದ ಪಿಕಗಳುಲಿವದು ಆಗಬಹುದೆಲೆ ಹುಸಿತನ
ಆಗ ನಾವೆಲ್ಲಿರುವೆವು
ಯಾವ ಲೋಕದಿ ಬೆರೆವೆವು
ಸಾವು ಬರುವುದಕಿಂತ ಮುಂಚೆಯೆ ಕಳೆಯಬಹುದಭಿಸಾರಿಕೆ
ನಮ್ಮ ಪ್ರೀತಿಯ ಮುಂದೆ ಗತಿಯೇನೆಂಬುದೊಡನುಡಿ ಸಾರಿಕೆ

ತ್ರಿಮಾತ್ರಾಗಣದ ಉತ್ಸವರಗಳೆಯ ಗತಿವಿನ್ಯಾಸದಲ್ಲಿ ಕೆಲವೆಡೆ ಉಪಪಾದಗಳಿಂದ ಕೂಡಿದ ರಚನೆಗಳನ್ನು ಗೋಕಾಕರಲ್ಲಿ ಕಾಣಬಹುದು. 'ಚೆಲುವು' ಎಂಬ ಕವಿತೆಯಿಂದ ಆಯ್ದ ಭಾಗ ಇಲ್ಲಿದೆ. ಇದರಲ್ಲಿ ಐದು ಮುಖ್ಯಪಾದಗಳೂ ನಾಲ್ಕು ಉಪಪಾದಗಳೂ ಇವೆ.

ಕಾಲಚಕ್ರವಾಗಿ ತಿರುಗಿ ಬಾನ ಬಯಲಿನಲ್ಲಿ ಹುದುಗಿ
ಇಂದುವಾಗಿ ಮುಂದೆ ಬಂದು ನೇಸರಾಗಿ ನಗುತ ನಿಂದು
ಇಲ್ಲಿ ಹರಿದು ಅಲ್ಲಿ ಹೊಳೆದು ಎಲ್ಲ ಕಡೆಗೆ ತುಂಬ ಬೆಳೆದು

ಹಚ್ಚ ಹಸಿರು ಬಿಚ್ಚು ಬಳಿದು ನನ್ನ ಜ್ಯೋತಿ ನೂರು ಕಡೆಗೆ
ಆದುವೆ ದಾರಿದೀಪ ಕಡಲ ಮಡಿಲಿನಲ್ಲಿ ಹಡಗು ಪಡೆಗೆ
ಸೌಂದರ್ಯವೆಂಬರು
ನನ್ನನಾ ನಿಳಿಂಪರು
ನನ್ನ ನೆಳಲನಳೆವರು
ಭೂಮಿದೇವಿಯಣುಗರು

'ಕವಿಜೀವನ' ಎಂಬ ಕವಿತೆ 'ಅತೀತಗ್ರಹ'. 'ವರಣ; ಗಳಿಂದ ಕೂಡಿ ಸೊಬಗುವಡೆದಿದೆ. ಪ್ರಾರಂಭದಲ್ಲಿ ಅತೀತಗ್ರಹವಿದೆ. ಮುಂದಿನ ಉಪಪಾದದ ಮೊದಲು ವರಣವಿದೆ -

ಸೌಂ.ದರ್ಯವೆಂಬ ದೃಶ್ಯ ಬಂದು ಮನೆಯ ಮಾಡಿತು
ಅವನ. ಮನದಿ ಮೂಡಿತು
ಅಲರಿ.ನಿಂದ ಎಲರು ತಂದ ವಾಸನೆ ಗಮಗಮಿಸಿತು
ಕವಿಯ.ಮನದಿ ರಮಿಸಿತು

ದಾಸರ ಕೀರ್ತನೆಯನ್ನು ಹೋಲುವ ರಚನೆ ಈ ಕೆಳಗಿನದು. ಇದರಲ್ಲಿ ಪಲ್ಲವಿಯಿದೆ, ಪಾದವಿದೆ, ಆದರೆ, ಆದಿಪ್ರಾಸವಿಲ್ಲ. ಪಂಚಮಾತ್ರಾಗಣಗಳಿಂದ ಕೂಡಿ ಝಂಪೆತಾಳಗತಿಯಲ್ಲಿದೆ. 'ನಂಬದಿರು ಈ ದೇಹ ನಿತ್ಯವಲ್ಲ' ಎಂಬ ಕೀರ್ತನೆಯನ್ನು ಹೋಲುವುದು.

ಗೀತೆಯೊಂದನು ಪ್ರೇರಿಸೆನ್ನ ದೊರೆಯೆ
ಗೀತೆಯೊಂದನು ಪ್ರೇರಿಸೀ ದನಿಯಲಿ 'ಪಲ್ಲವಿ'
ಬಲುದಿನಗಳಿಂದ ಹಾತೊರೆಯುತಿದೆ ಜೀವವಿದು
ಇನಿದನಿಯ ಉಲಿದಲೆದು ನಿನ್ನೆಡೆಗೆ ಬರಲು
ಗಾನಮಯ ಸಿಂಧುವೇ ಒಂದು ಗಾನದ ತೆರೆಯ
ಕರುಣಿಸುವೆಯಾ ಇಂತೆ ಇರಲು ಇರಲು

ಗೋಕಾಕರು ಬೇಂದ್ರೆಯವರ ಪ್ರಭಾವಕ್ಕೆ ಒಳಗಾದವರೆಂಬುದು ನಿಸ್ಸಂಶಯ. ಇವರ ಅಂಶಲಯ ಬಂಧಗಳು ಜಾನಪದದ ಛಾಯೆಗಳು ಇದನ್ನೆ ಹೇಳುತ್ತವೆ. ಗೋಕಾಕರ 'ದರ್ಶನ' ಎಂಬ ಕವನದಿಂದ ಆಯ್ದ ತ್ರಿಪದಿಯನ್ನಿಲ್ಲಿ ಅದಕ್ಕಾಗಿಯೇ ಉದಾಹರಿಸಬಹುದು. ಆದರೆ, ಈ ತ್ರಿಪದಿಗೆ ಆದಿ ಪ್ರಾಸವಿಲ್ಲ. ತ್ರಿಪದಿಯನ್ನು ಇಲ್ಲಿ ನಾಲ್ಕು ಪಾದಗಳಲ್ಲಿ ಕಾಣಿಸಿದೆ.

ಭೂದೇವಿ ಬೆಳೆದಾಳೆ ಕನಸಿನ ಸಿರಿಬೆಳೆಯ
ಹಿಗ್ಗಿ ನಿಂತಿತ್ತ—ನೆಲವೆಲ್ಲ
ಹಿಗ್ಗಿ ನಿಂತಿತ್ತ ನೆಲವೆಲ್ಲ ಏ ಗೆಳತಿ
ಸುಗ್ಗಿ ಬರತಿತ್ತ—ನಲಿನಲಿದು

ಇನ್ನೊಂದು ಕವನ 'ತಂಗಿ' ಎಂಬ ಶೀರ್ಷಿಕೆಯದು, ಅಂಶಗಣಾತ್ಮಕವಾಗಿ (೩ ವಿಷ್ಣು ೧ ಬ್ರಹ್ಮ) ಚೌಪದಿಯ ರೂಪದಲ್ಲಿದೆ -

ಬಾಳಿನ. ಗುಟ್ಟನು. ಬಲ್ಲೆನು. ,ತಂಗಿ
ನಿನಗದನುಸಿರಲು ಒಲ್ಲೆನು ತಂಗಿ
ನೋಡಿದ ವರ ಕಣ್ಣು ಹೋದವು ತಂಗಿ
ಕೇಳಿದ ವರುಕಿವು ಡಾದರು ತಂಗಿ

ಈ ಬಗೆಯಲ್ಲಿ ಮಾತ್ರಾಗಣ ಅಂಶಗಣ ಪ್ರಯೋಗದ ರಚನೆಯಲ್ಲಿ ಗೋಕಾಕರು ಸಿದ್ಧ ಹಸ್ತರು. ಸುನೀತಗಳನ್ನೂ ಬಹಳವಾಗಿ ರಚಿಸಿರುತ್ತಾರೆ. ವಿಶ್ವಾಮಿತ್ರ, ದಮಯಂತಿ, ಮಾಸತಿ ಮುಂತಾದವು ಇವರ ಸುನೀತಗಳು. ಲಯವಿನ್ಯಾಸಕ್ಕೆ ಒಡಂಬಡುವ ನವೋದಯ ಪಂಥದ ಕವನಗಳನ್ನಲ್ಲದೆ ನವ್ಯದ ಗೊತ್ತು ಗುರಿಯಲ್ಲಿ ಇವರ ಕೈ ಚೆನ್ನಾಗಿ ಮಾತನಾಡಿದೆ. 'ನಾಳಿನ ಬಾಳು' ಎಂಬ ಶೀರ್ಷಿಕೆಯಲ್ಲಿ ಕಾಶ್ಮೀರವನ್ನು ಕುರಿತು ಗೋಕಾರರು ಒಂದು ಸುದೀರ್ಘ ಕವನವನ್ನು ರಚಿಸಿದ್ದಾರೆ. ನವ್ಯಕವನಗಳು ಓದುಗಬ್ಬಗಳೇ ಹೊರತು ಹಾಡುಗಬ್ಬಗಳಲ್ಲ. ಆದುದರಿಂದ ಗುರು ಲಘುವಿನ್ಯಾಸಕ್ಕೆ, ಗಣಗಣನೆಗೆ ಒಳಪಡಲಾರವು. ಉದಾ:

ಆವರಿವರ ನಿರೀಕ್ಷೆಯಂತಿರಲಿ
ಕಾಶ್ಮೀರ
ನಿನ್ನನ್ನು ನೀನು ನಿರೀಕ್ಷಿಸಿಕೊಂಡಿದ್ದೀಯಾ?
ಲಲಿತಾದಿತ್ಯನ ಯುಗದಲ್ಲಿಯಂತೆ
ರಷ್ಯ ಒಂದೆಡೆಗಾತುಕೊಂಡಿದ್ದರೆ
ಚೀನ ಇನ್ನೊಂದೆಡೆಗೆ ಆಂತುಕೊಂಡಿದೆ
ಪಾಕಿಸ್ತಾನ ಮತ್ತೊಂದೆಡೆಗೆ ಬಾಯ್ದೆರೆದಿದೆ

'ನನ್ನ ಹಾಡು' ಎಂಬ ನವ್ಯ ಕವನ ಅಂತ್ಯಪ್ರಾಸಗಳಿಂದ ಕೂಡಿದೆ. ಕೆಲವು ಸಾಲುಗಳಿವು-

ಇದು ನನ್ನ ಭಾರತ
ನನ್ನ ನಾಡು
ನನ್ನ ಸುಖದುಃಖದ ಬೀಡು
ನಾನು ಪಟ್ಟ ಪಾಡು
ನಾನು ಹಾಡಿದ ಹಾಡು
ಇದು ನನ್ನ ಭಾರತ
ಪಡುವಣದಂತೆ ಬೆಳೆಯದಿದ್ದರೇನಂತೆ
ಇದು ಬೆಳೆಯುವ ನಾಡು
ಅಮೇರಿಕೆಯಂತೆ ಬಲಾಢ್ಯವಾಗದಿದ್ದರೇನಂತೆ
ಇದು ಭವಿಷ್ಯತ್ತಿನ ನಾಡು
ಆಡುಂಬೊಲವನ್ನು ಕೇಡೆಂದವರುಂಟೆ
ಅವರ ನಾಲಗೆ ಕಳಚಿ ಬಿದ್ದೀತು
ಇದು ನನ್ನ ಭಾರತ
ನನ್ನ ನಾಡು

ಗೋಕಾಕರ ಕಾವ್ಯಮಕುಟಮಣಿ ಎನಿಸುವ ಮಹಾಕಾವ್ಯ 'ಭಾರತ ಸಿಂಧುರಶ್ಮಿ' ವೈಶಿಷ್ಟ್ಯಪೂರ್ಣ ಛಂದಸ್ಸಿನಲ್ಲಿ ರಚಿತವಾಗಿದೆ. 'ಮುಕ್ತ ಛಂದಸ್ಸು' ಎಂದು ಇದನ್ನು ಕರೆಯಲಾಗಿದೆ. 'ಸಂಕೀರ್ಣ ಛಂದಸ್ಸು' ಎಂತಲೂ ಹೇಳುತ್ತಾರೆ. 'ಮುಕ್ತ' ಎಂದರೆ 'ಬಿಡಲ್ಪಟ್ಟುದು' ಎಂಬ ಅರ್ಥದಿಂದ ಕೂಡಿದ್ದರೂ ಇದರ ರಚನೆಯಲ್ಲಿ ಛಂದಸ್ಸನ್ನೇ ಕೈಬಿಡಲಾಗಿದೆ ಎಂದರ್ಥವಲ್ಲ. ಕನ್ನಡದ ದೇಶೀಚ್ಛಂದಸ್ಸಿನಲ್ಲಿ ವಿಶೇಷ ಪ್ರಚುರತೆ ಪಡೆದಿರುವ ಮಾತ್ರಾಗಣ ಅಂಶಗಣಗಳೆರಡೂ ಇದರಲ್ಲಿ ಮುಕ್ತ ಅವಕಾಶವನ್ನು - ಯಥೇಷ್ಟ ಅವಕಾಶವನ್ನು ಪಡೆದುಕೊಂಡಿರುವುದರಿಂದ ಇದು 'ಮುಕ್ತ ಛಂದಸ್ಸು' ಎನಿಸಿದೆ. ಹಾಗೆಯೇ ಇವೆರಡೂ ಬಗೆಯ ಗಣಸಂಯೋಜನೆ ಇದರಲ್ಲಿ ಕಂಡುಬರುವುದರಿಂದ 'ಸಂಕೀರ್ಣ ಛಂದಸ್ಸೂ' ಹೌದು. ಇದರ ಛಂದಃ ಸ್ವರೂಪವನ್ನು ಸರಿಯಾಗಿ ತಿಳಿಯಬೇಕಾದರೆ, ಛಂದಸ್ಸಿನ ಅನೇಕ ರಹಸ್ಯಗಳನ್ನು ತಿಳಿದಿರಬೇಕಾಗುತ್ತದೆ. ಮುಡಿ, ಪದ್ಮಗಣ- ಎಂಬಿವನ್ನು ತೀ ನಂ ಶ್ರೀಯವರು ಹಿಂದೆಯೇ ಆವಿಷ್ಕಾರಮಾಡಿದ್ದಾರೆ. ಇವಲ್ಲದೆ - ವರಣ, ಅತೀತಗ್ರಹ, ಅಧಿಗಣ, ಅರ್ಧಕ, ನಿರಸ್ತ, ಧ್ಮಾತ - ಎಂಬೀ. ವಿಚಾರಗಳ ಅರಿವೂ ಇರಬೇಕಾಗುತ್ತದೆ.

ಕನ್ನಡದ ದೇಶೀಚ್ಛಂದಸ್ಸಿನಲ್ಲಿ ಗುರು ಲಘುಪಲ್ಲಟಗಳಿಗೆ ಎಡೆಯಿದೆ. ಕೆಲವೆಡೆ ದೀರ್ಘವನ್ನು ಇಲ್ಲವೆ ಗುರ್ವಕ್ಷರವನ್ನು ಹ್ರಸ್ವವಾಗಿ ಪರಿಗಣಿಸಬೇಕಾಗುತ್ತದೆ. ಇನ್ನು ಕೆಲವೆಡೆ ಹ್ರಸ್ವವನ್ನು ಗುರುವಾಗಿ ಗಣಿಸಬೇಕಾಗುತ್ತದೆ. ಇದರ ಪರಿಣಾಮವಾಗಿ ಅಕ್ಷರಕೂಟವು ತನ್ನ ಸ್ವರೂಪದಲ್ಲಿ ಯಾವುದೇ ಗಣವಾಗಿದ್ದರೂ ಓದುವ ಮಟ್ಟಿನಲ್ಲಿ ಅದನ್ನು ಬೇರೊಂದು ಗಣವಾಗಿ ಪರಿಭಾವಿಸಬೇಕಾಗುತ್ತದೆ. ಹೀಗಾಗುವುದು ಗುಣವೆ? ದೋಷವೆ? ಎಂಬುದು ವಿಚಾರಾರ್ಹ.

ಸಂಸ್ಕೃತ ವ್ಯಾಕರಣವನ್ನು ವಿಶದಪಡಿಸುವ ಪಾತಂಜಲಿ ಮಹಾಭಾಷ್ಯದಲ್ಲಿ ಹ್ರಸ್ವ ದೀರ್ಘ ಪಲ್ಲಟವು ಸ್ವರದೋಷವೆನಿಸುತ್ತದೆ. ದೀರ್ಘವು ಹ್ರಸ್ವವಾಗಿ ಉಚ್ಚಾರಣೆಗೊಂಡರೆ ಅದು ಅರ್ಧಕ ಎನಿಸುವುದು. ಹ್ರಸ್ವವು ದೀರ್ಘವಾದರೆ 'ಧ್ಮಾತ' ಎನಿಸುವುದು. ತ್ವರಿತೋಚ್ಚಾರಣೆಯಿಂದ ಎರಡು ಮೂರು ಅಕ್ಷರಗಳಿಗೆ ಒಂದೇ ಅಕ್ಷರದ ಮೌಲ್ಯವುಂಟಾದರೆ ಅದು 'ನಿರಸ್ತ' ಎಂಬ ದೋಷವಾಗುವುದು. ಸಾಮಗಾನದಂತೆ ಎಳೆದು ಹೇಳಬೇಕಾಗಿ ಬಂದರೆ ಅದನ್ನು 'ಪ್ರಗೀತ' ಎನ್ನುವರು. ವ್ಯಾಕರಣದ ದೃಷ್ಟಿಯಿಂದ ಇವು ದೋಷಗಳು. ಗೇಯ ಪ್ರಯೋಗ ಪ್ರಧಾನವಾದ ಕನ್ನಡ ಹಾಡುಗಳಲ್ಲಿ ಇವು ನಿರ್ದೋಷಗಳು. ಅಲ್ಲದೆ ಗೇಯ ಸೌಂದರ್ಯದಾಯಕವಾಗುತ್ತವೆ. ಈ ಬಗೆಯ ಪ್ರಯೋಗಗಳು ಮುಖ್ಯವಾಗಿ ಜಾನಪದ ಕವಿಗಳ ನಿಷ್ಪ್ರತಿಬಂಧಕ ಧೋರಣೆಯ ರಚನಾವೈಖರಿಯನ್ನು ದ್ಯೋತಿಸುವ ಛಂದೋಗುಣಗಳೆನಿಸುತ್ತವೆ. ಈ ಹಿನ್ನೆಲೆಯಿಂದ ಭಾರತ ಸಿಂಧುರಶ್ಮಿಯ ಛಂದಸ್ಸನ್ನು ಲಕ್ಷಿಸಬೇಕಾಗುತ್ತದೆ. ಕಾವ್ಯ ಪಂಕ್ತಿಗಳು ಪಂಚಮಾತ್ರಾ ಪ್ರಧಾನವಾದುವು. ಅಲ್ಲಲ್ಲಿ ಅಂಶಲಯಗಳು ತಲೆಯೆತ್ತಿಕೊಂಡಿವೆ. ಪೀಠಿಕಾಸಂಧಿಯಲ್ಲಿ ಮೊದಲ ಮೂರು ಸಾಲುಗಳಿವು -

> ಇರಲಿ ಶಾಲಿಗ್ರಾಮ ಬಾಣಲಿಂಗವೆ ಇರಲಿ
> ಇರಲಿರಲಿ ಸ್ವರ್ಣರೇಖೆಯ ಸೂರ್ಯಕಾಂತ ಶಿವ
> ಸ್ವರ್ಣಭದ್ರ ಪಾಷಾಣ ವಿಷ್ಣು ಶಿವ ಶಕ್ತಿ ರವಿ

ಇಲ್ಲಿ ಎರಡನೆಯ ಪಾದದ ಮೊದಲ ಪಂಚಮಾತ್ರಾಗಣದ ಕೊನೆಯ ಅಕ್ಷರ ಹ್ರಸ್ವವಿದ್ದರೂ ದ್ವಿತ್ವಾಕ್ಷರದ ಹಿಂದೆ ನಿಂತಿದೆ. ಆದರೂ ಅದನ್ನು ಗುರುವೆಂದು ಗಣಿಸುವಂತಿಲ್ಲ. ಹಾಗೆಯೇ ಮೂರನೆಯ ಪಾದದಲ್ಲಿ ಮೊದಲನೆಯ ಗಣ ಆರು ಮಾತ್ರೆಯದು. ಅದನ್ನು ತೇಲಿಸಿ ಉಚ್ಚರಿಸಿ ಐದು ಮಾತ್ರೆಯದನ್ನಾಗಿ ಲೆಕ್ಕಿಸಬೇಕಾಗುತ್ತದೆ. ಅಂದರೆ ಅದನ್ನು 'ನಿರಸ್ತ' ಗೊಳಿಸಬೇಕಾಗುತ್ತದೆ. ಇನ್ನೊಂದು ಉದಾಹರಣೆ : (ಸಂಧಿ ೩, ಪುಟ: ೪೫)

ಮಾನವರ ತಿಂಗಳದು ಪಿತೃಗಳಿಗೊಂದು ದಿನ
ಮನುಷ್ಯ ವರ್ಷವಿದು. ದೇವಮಾ ನದ ದಿನವು
ಹನ್ನೆರಡು ಸಾವಿರ ದೇವಮಾ ನದ ವರ್ಷ

ಇದರಲ್ಲಿ 'ಪಿತೃಗಳಿ' ಎಂಬುದು ನಾಲ್ಕು ಮಾತ್ರೆಯ ಗಣ ಆದರೆ ಅದನ್ನು 'ಪಿತೃ' ಎಂದು ಓದಿಕೊಳ್ಳಬೇಕಾಗುವುದು. ಎರಡನೆಯ ಪಾದಾರಂಭದ 'ಮನುಷ್ಯ' ಎಂಬುದು ನಾಲ್ಕು ಮಾತ್ರೆಯ ಗಣವೇ ಆಗಿದ್ದರೂ ಅದು ಮಧ್ಯಗುರುವಾಗಿ ಗತಿಯಲ್ಲಿ ಎಡವುತ್ತದೆ. ಮೂರನೆಯ ಪಾದದಲ್ಲಿ ಬರುವ 'ಸಾವಿರ' ಎಂಬುದು ಚತುರ್ಮಾತ್ರಾ ಗಣ. ಐದು ಮಾತ್ರೆಯದಾಗಲು ಅದರ ಕೊನೆಯ ಹ್ರಸ್ವಕ್ಕೆ ಗುರುಮೌಲ್ಯವನ್ನೀಯಬೇಕಾಗುತ್ತದೆ.

ಇದೇ ಕಾವ್ಯದಲ್ಲಿ ಇನ್ನೊಂದೆಡೆ (ಪರೀಕ್ಷಣ ಸಂಧಿಯಲ್ಲಿ) ಎರಡು ಪಾದಗಳು ಇಂತಿವೆ -

ಒಮ್ಮೆ ಮುಂ ಬರಿದಿರಲು ಸತ್ಯವ್ರತಸ್ವಾ ಯಂಭುವಿನ
ಚಿತಾಗ್ನಿ ಭೂಮಿಯನು ಕಾಣಬೇ ಕೆಂದೆಣಿಸಿ

ಇಲ್ಲಿ 'ಸತ್ಯವ್ರತಸ್ವಾ' ಎಂಬುದು ಎಂಟು ಮಾತ್ರೆಯುಳ್ಳದಾಗಿದೆಯಷ್ಟೇ? ಇದನ್ನಿಲ್ಲಿ ಐದು ಮಾತ್ರೆಗಳನ್ನಾಗಿ ನಿರಸ್ತಗೊಳಿಸಬೇಕಾಗುತ್ತದೆ. ಹಾಗೆಯೇ 'ಚಿತಾಗ್ನಿ' ಎಂಬಲ್ಲಿ ನಾಲ್ಕೇ ಮಾತ್ರೆಗಳಿರುವುದನ್ನು ಐದು ಮಾತ್ರೆಯದನ್ನಾಗಿ ಮಾಡಲು 'ತಾ' ಎಂಬುದನ್ನು ಎಳೆದು ಪ್ಲುತ ಗೊಳಿಸಬೇಕಾಗುವುದು. ಛಂದಸ್ಸಿನ ದೃಷ್ಟಿಯಿಂದ ಭಾರತ ಸಿಂಧುರಶ್ಮಿಯನ್ನು ಒಂದು ಕಸರತ್ತಿನ ಗಣಗುಣಗಳ ರಚನೆ ಎಂದರೆ ತಪ್ಪಲ್ಲ. ಇದೇ ಕಾವ್ಯಭಾಗದಲ್ಲಿ ಅಂಶಗಣಗಳಿಂದಾದ ಪದ್ಯರೂಪಕ್ಕಿನ್ನೊಂದು ಉದಾಹರಣೆ ಹೀಗಿದೆ - (ಸತ್ಯವ್ರತನ ಆರೋಹಣ ಎಂಬ ಸಂಧಿ. ಪುಟ : ೫೦೭)

ಹಾರುವ ಹಕ್ಕಿಯ ಹೋಲುವ ದೋಣಿಗಳು
ಅಂಬುಧಿಯೊಳು ತೇ. ಲಿವೆ ತೋರುತ ಹಿಂದೆ.
ಎಚ್ಚ ಬಾಣಬಿ ಚ್ಚಿರುವ ಬೆಳಕುಗೆರೆಯ
ರಜತಪ ಥಗಳಿವು ಎಂದು ಸಾರುವಂತೆ

ಈ ರಚನೆ ೩ ವಿಷ್ಣು ೧ ರುದ್ರ ಗಣಗಳಿಂದಾಗಿದೆ. ನಾಲ್ಕು ಕಡೆಗಳಲ್ಲಿ ವಿಷ್ಣುಗಣಸ್ಥಾನದಲ್ಲಿ ಬ್ರಹ್ಮಗಣಗಳು ಬಂದಿವೆ. ಈ ಬಗೆಯ ಗಣಪಲ್ಲಟ ತ್ರಿಪದಿಗಳಲ್ಲಿ, ಸಾಂಗತ್ಯಪದ್ಯಗಳಲ್ಲಿ ಎಷ್ಟೋ ಸಿಗುತ್ತವೆ. ಈ ಕಾವ್ಯದಲ್ಲಿ ಚತುರ್ಮಾತ್ರಾಗಣದ ಮಂದಾನಿಲ ರಗಳೆಗೂ ಸ್ಥಾನವಿದೆ. ಕೆಳಗಿನ ಉದಾಹರಣೆಯಲ್ಲಿ ಪಾದಾಂತ್ಯದ ಗಣ ಮೂರು ಮಾತ್ರೆಯಾದಾದರೂ

ಪಾದಾಂತ್ಯಾಕ್ಷರವನ್ನು ಗುರುವೆಂದಿಟ್ಟುಕೊಂಡು ಅದನ್ನು ನಾಲ್ಕು ಮಾತ್ರೆಯ ಗಣವೆಂದು ಗಣಿಸಬಹುದು. ಉದಾ:

ಅಮರಾ ವತಿಯೊಳ ಗಿಹ ಭೋ ಗೇಂದ್ರ
ಬಗೆದಿಹ ತಾನೇ ಸೂರ್ಯ ಚಂದ್ರ
ಇಂದ್ರನಿ ರುವನಿದೊ ಸೊಕ್ಕಿದ ನವಿಲು
ಅದಕಂ ತೆಯೆ ಎದ್ದಿರುವದು ಹುಯಿಲು
ಕಲಿಸುವೆ ನವನಿಗೆ ಒಳ್ಳೆಯ ಪಾಠ
ಅನ್ಯಭೋ ಗೇಂದ್ರಗೆ ಕೊಡುವೆನು ಪೀಠ (ಪುಟ: ೫೪೬)

ಈ ಉದಾಹೃತ ಭಾಗದಲ್ಲಿ ಬರುವ 'ಸೂರ್ಯ' ಎಂಬುದನ್ನು ಛಂದೋ ಲಯಕ್ಕೆ ಅನುಗುಣವಾಗಿ 'ಸೂರ್ಯಾ' ಎಂದು ಧ್ಯಾತಗೊಳಿಸಬೇಕಾಗುತ್ತದೆ. ಹಾಗೆಯೇ 'ಅನ್ಯಭೋ' ಎಂಬುದನ್ನು ಚತುರ್ಮಾತ್ರೆಗೆ ಹಿಡಿಸಲು ಅಂತ್ಯಾಕ್ಷರವನ್ನು ಹ್ರಸ್ವಕ್ಕೆ ತರಬೇಕಾಗುತ್ತದೆ. ಇದು ಅನಿವಾರ್ಯ.

ಕನ್ನಡದೇಸಿಯ ಛಂದಸ್ಸಿನಲ್ಲಿ ಇಂತಹ ವಿಕಲ್ಪಗಳಿಗೆಲ್ಲ ಮಾನ್ಯತೆಯುಂಟು. ಅನುಸರಣೆಯುಂಟು. ಆದರೆ ಎಲ್ಲೆಲ್ಲಿ ವಿಕಲ್ಪಗಳಿವೆ ಎಂಬುದನ್ನು ತಿಳಿದುಕೊಳ್ಳಲು ತಾಳಗತಿ ಛಂದೋಗತಿಗಳ ಆಳವಾದ ಹಾಗೂ ಪ್ರಯೋಗಾತ್ಮಕವಾದ ಅಧ್ಯಯನದ ಹಿನ್ನೆಲೆಯೂ ಬೇಕೆಂಬುದು ನಿಶ್ಚಯ.

ಡಾ. ಗೋಕಾಕರು ತಮ್ಮ ನವೋದಯ ಕೃತಿಗಳನ್ನು ಬಿಟ್ಟರೆ, ಇನ್ನುಳಿದ ಕೃತಿಗಳಲ್ಲಿ ಹಾಗೂ ಭಾರತ ಸಿಂಧುರಶ್ಮಿಯಲ್ಲಿ ಇಂತಹ ವಿಕಲ್ಪಮಯ ಮಾತ್ರಾಗಣ ಅಂಶಗಣಗಳನ್ನು ಯಥೇಚ್ಛವಾಗಿ ಬಳಸಿಕೊಂಡಿದ್ದಾರೆ ಎಂದು ನಾವು ತೀರ್ಮಾನಿಸಿಕೊಳ್ಳಬಹುದಾಗಿದೆ.

☐

೨೯

ಚಂದ್ರಾವತಿ (ಸೌಂದರ್ಯ ದರ್ಶನ)

ಕನ್ನಡದ ಸಾಹಿತ್ಯೋದ್ಯಾನ ನಿರಂತರ ಪ್ರವರ್ಧಮಾನವಾಗಿ ಬಂದಿದೆ. ಶಬ್ದ - ಅರ್ಥ- ಭಾವ ಲಕ್ಷಣಗಳಿಂದ ಕೂಡಿದ ಕಾವ್ಯ ನಾಟಕಾದಿಗಳೇ ಇಲ್ಲಿ ಫಲ ಪುಷ್ಪ ಸಂಪತ್ತುಗಳು. ಉದ್ಯಾನದ ಮರಗಿಡ ಬಳ್ಳಿ, ನನೆಕೊನೆ, ಹೂ ಮಿಡಿ ಕಾಯಿ ಹಣ್ಣುಗಳು, ಕೇವಲ ಸಸ್ಯಸಂಪತ್ತುಗಳು ; ಅವು ಋತುಮಾನಕ್ಕೆ ತಕ್ಕಂತೆ ಒಂದೆಡೆ ಹೊಸಹೊಸತಾಗಿ ಕಾಣಿಸುವಂತೆ ಇನ್ನೊಂದೆಡೆ ಹಳಹಳತಾಗಿ ಬಿದ್ದುಹೋಗುತ್ತವೆ. ಸಾಹಿತ್ಯೋದ್ಯಾನದವು ಸತ್ಫಲಪುಷ್ಪಗಳು - ಶಾಶ್ವತವಾದುವು. ಇಲ್ಲಿ ಮುಗುಳು ಮುಗುಳೇ, ಅರಳಿದ ಹೂ ಯಾವಾಗಲೂ ಅರಳಿದ್ದು ಮಗಮಗಿಸುವುದು. ಮಸುಕಾಗದು, ಬಾಡದು, ಆಯ್ದಂತೆ ಅಕ್ಷಯವೆನಿಸುವುದು. ಬುಧಾಳಿ ಬಂದು ಕುಡಿದು ಬತ್ತಿಹೋಗದ ಮಕರಂದವನ್ನುಳ್ಳುದು; ಇದರ ಎಸಳು ಹಳತಾಗದು, ಉದುರದು, ಹುಳು ಕೊರೆಯದು, ಹೊಸಹೂಗಳರಳಿದಂತೆ ಸಂಖ್ಯಾಭಿವೃದ್ಧಿ, ಸುವಾಸನೆಯ ಸಮೃದ್ಧಿ, ಆನಂದಸಿದ್ಧಿ. ಇಂತಹ ಭವ್ಯ ಸಾಹಿತ್ಯೋದ್ಯಾನದ ಸುಮನೋರಾಜಿಯಲ್ಲಿ ಒಂದೆನಿಸಿದೆ- ಈ ಸ್ವಚ್ಛಕಳೆಯ ಅಚ್ಚಬಿಳಿಯ ಆರೆಸಳ ಹೊಸ ಚೆಲ್ವ ಮಲ್ಲಿಗೆ ಹೂ, "ಚಂದ್ರಾವತಿ" ಎಂಬ ಖಂಡಕಾವ್ಯ.

ಈ ಕಾವ್ಯದ ವಸ್ತು ಚಿಕ್ಕದು. ಆದರೂ ಚೊಕ್ಕದಾಗಿ ಪುಣ್ಯ - ಭಕ್ತಿ - ಕಮನೀಯತೆಗಳ ತ್ರಿವಿಕ್ರಮಕ್ಕೆ ವಾಮನಸ್ವರೂಪವಾಗಿದೆ. ಶ್ರೀ ಶೈಲದ ಶ್ರೀ ಮಲ್ಲಿಕಾರ್ಜುನಲಿಂಗ ಪ್ರತಿಷ್ಠಾಪನೆಯ ಪುಣ್ಯಕರ ಆಖ್ಯಾಯಿಕೆ ಇದರ ಕಥಾವಸ್ತು. ಮಲ್ಲಿಕಾರ್ಜುನಲಿಂಗಕ್ಕೆ ಆನುಪೂರ್ವಿಕೆಯಾಗಿ ಶ್ರೀ ಶೈಲಲಿಂಗ, ಪರ್ವತಲಿಂಗ ಎಂದು ಹೆಸರುಗಳು. ಶಿಲಾದಮುನಿಯ ಪುತ್ರನಾದ ಪರ್ವತನು ಮಾಡಿದ ತಪದಿಂದ "ಪರ್ವತಲಿಂಗ" ಎಂಬ ನಾಮವೂ ವಸುಮತಿ ಎಂಬ ಋಷಿಕನ್ಯೆ ಈ ಸ್ಥಳದಲ್ಲೇ ಶಿವನನ್ನೊಲಿಸಿದುದರಿಂದ "ಶ್ರೀ ಶೈಲಲಿಂಗ" ಎಂಬ ಹೆಸರೂ ಪೂರ್ವಕಥಾಸೂಚಿ ಈ ಕಾವ್ಯದಲ್ಲಿದೆ. ಇದೇ ಲಿಂಗಕ್ಕೆ ಲೋಕಸ್ತುತವಾಗಿ "ಮಲ್ಲಿಕಾರ್ಜುನಲಿಂಗ" ಎಂಬ ಅಭಿಧಾನ ಪಾತ್ರತೆಗೆ ಕಾರಣಳು ಈ ಕಾವ್ಯಕಥೆಯೊಡತಿ ಸುಗುಣವತಿ, ಭಕ್ತಿವತಿ, "ಚಂದ್ರಾವತಿ", ಆಕೆಯದೇ ಇಲ್ಲಿ ಕಾವ್ಯಾಭಿಧಾನ.

ಚಂದ್ರಾವತಿಯ ಜನಕನು ಶ್ರೀ ಶೈಲಪ್ರಾಂತವನ್ನು ಆಳುತ್ತಿದ್ದ ಮಹಾರಾಜಾ ಚಂದ್ರಗುಪ್ತನು. ಇವನು ಶಿವಭಕ್ತನು, ವೀರಚರಿತನು, ಸಾರಭರಿತನು, ನೀತಿ ನಿರತನು. ಶ್ರೀ ಶೈಲದ

ಸೂರ್‍ಯಸಿಂಹಾಸನದ ಜಗದ್ಗುರುಗಳ ಶಿಷ್ಯನು. ಸತ್ಯವಂತ, ನ್ಯಾಯಶಾಲಿ, ಗೋಭಕ್ತನು. ಚಂದ್ರಗುಪ್ತನು ತನ್ನ ಗೋವುಗಳನ್ನು ಕಾಯಲು ಗೋಪಾಲಕನೊರ್ವನನ್ನು ನೇಮಿಸಿದ್ದನು. ಒಂದು ದಿನ ರಾಜನ ಹಸುಗಳ ಮಂದೆಯಲ್ಲಿ ಕರೆವ ಹಸುವೊಂದು ಬಂದಿರಲಿಲ್ಲ. ಆ ಗೋಪಾಲಕನು ಮರುದಿನ ತಾನೇ ಎಚ್ಚರಿಕೆ ವಹಿಸಿ ಪರೀಕ್ಷಿಸಲು, ಆ ಹಸು ಶ್ರೀ ಶೈಲದ ಒಂದು ಶಿವಲಿಂಗದ ಮೇಲೆ ಸ್ವತಃ ಕ್ಷೀರಾಭಿಷೇಕ ಮಾಡುತ್ತಿತ್ತು. ಈ ವಾರ್ತೆಯನ್ನು ಗೋಪಾಲಕನು ಚಂದ್ರಗುಪ್ತನಿಗೆ ತಿಳಿಸಿದನು. ಇದನ್ನು ಕೇಳಿದ ಸಹಜಶಿವಶರಣೆ ಚಂದ್ರಾವತಿ ಶಿವಲಿಂಗ ದರ್ಶನೋತ್ಕಂಠೆಯಾದಳು.

ಮರು ಮುಂಜಾನೆ ಚಂದ್ರಗುಪ್ತನೂ ಚಂದ್ರಾವತಿಯೂ ಶ್ರೀ ಶೈಲಕ್ಕೆ ಬಂದು ಅದೇ ಶಿವಲಿಂಗವನ್ನು ಮಲ್ಲಿಗೆ ಹೂಗಳಿಂದ ಅರ್ಚಿಸಿದರು. ಚಂದ್ರಾವತಿ ಭಕ್ತಿ ಪರವಶೆಯಾಗಿ ಶಿವಲಿಂಗೋಪಾಸನೆಯನ್ನು ಕೈಕೊಂಡು ನಿತ್ಯವೂ ಮಲ್ಲಿಗೆ ಹೂಗಳಿಂದ ಅರ್ಚಿಸುತ್ತಾ ಹಲವು ವರ್ಷಗಳನ್ನೇ ಕಳೆದಳು. ಒಮ್ಮೆ ಶಿವರಾತ್ರಿಯಂದು ಆಕೆಯ ಅನನ್ಯಭಕ್ತಿಗೆ ಮೆಚ್ಚಿ ಶಿವನು ಸ್ವಸ್ವರೂಪವನ್ನು ಮರೆ ಮಾಡಿ, ಸುಂದರ ತರುಣನಾಗಿ ಬಳಿಗೆ ಬಂದನು. ಚಂದ್ರಾವತಿ ದಾಂಪತ್ಯ ಜೀವನವನ್ನು ಸ್ವೀಕರಿಸಿಲು ಪ್ರೇರಿಸಿ, ಕಲ್ಲಿಗೆ ಮಲ್ಲಿಗೆ ಹೂಗಳನ್ನಿಡುವುದಕ್ಕಿಂತ ಸಿರಿಮುಡಿಯಲ್ಲಿ ಧರಿಸುವುದೇ ಸಾರ್ಥಕವೆಂದು ಹೇಳಲು ಆಕೆ ಸಿಟ್ಟಾಗಿ ಆ ತರುಣನನ್ನು ಜರೆದಳು. ಕೊನೆಗೆ ತರುಣನು ಶಿವಸ್ವರೂಪನಾಗಿ 'ವರಗಳನ್ನು ಬೇಡು' ಎನ್ನಲು ಚಂದ್ರಾವತಿ "ಶಿವರಾತ್ರಿಯಿಂದ ಚೈತ್ರ ಪೌರ್ಣಮಿಯ ವರೆಗೆ ಪರ್ವತಲಿಂಗದಲ್ಲಿ ನೆಲಸಿ, ಭಕ್ತರಿಗೆ ಪುಣ್ಯಸೌಖ್ಯಗಳನ್ನಿತ್ತು ಕಾಪಾಡು. ಮಲ್ಲಿಗೆ ಹೂಗಳಿಂದ ಅರ್ಚಿಸಿದ ಫಲವಾಗಿ 'ಮಲ್ಲಿಕಾರ್ಜುನ' ಎಂಬ ಹೆಸರನ್ನು ತಾಳು" ಎಂದು ಕೇಳಿಕೊಂಡಳು. ಶಿವನು ಆಕೆಯ ಇಷ್ಟವನ್ನು ಸಲ್ಲಿಸಿದನು. ಮುಂದೆ ಚಂದ್ರಾವತಿಯು ಭ್ರಮರಾಂಬೆಯ ಊಳಿಗವೊಂದನ್ನೇ ಜೀವನದ ಧ್ಯೇಯವಾಗಿಟ್ಟು, ಶ್ರೇಷ್ಠಭಕ್ತೆಯಾಗಿ ಸ್ತ್ರೀ-ಲೋಕಕ್ಕೆ ಆದರ್ಶಳಾಗಿ ಬಾಳಿ, ಮುಕ್ತೆಯಾದಳು. ಮುಂದಿನ ಋಷಿಮುನಿ ಶರಣಶರಣೆಯರಿಗೆ ಪುಣ್ಯಸ್ಥಳವೆನಿಸಿದ ಶ್ರೀಶೈಲ ಮಲ್ಲಿಕಾರ್ಜುನಲಿಂಗದ ಮಹಿಮೆಯ ಸಂಸ್ಥಾಪಕಳಾಗಿ ಕೀರ್ತಿಶರೀರೆಯಾದಳು. ಇದಿಷ್ಟು ಕಥಾ ವಸ್ತು.

ಇದೇ ಶ್ರೀಶೈಲದ ಮಲ್ಲಿಕಾರ್ಜುನನನ್ನೇ ಅದ್ರಿನಿಲಯನೆಂತಲೂ ಶ್ರೀಶೈಲವಾಸಿ ವಿಭುವೆಂತಲೂ ಶ್ರೀಗಿರಿಮಲ್ಲಿಕಾರ್ಜುನನೆಂತಲೂ ಸಂಬೋಧಿಸಿ ಶ್ರೀ ಶಂಕರಭಗತ್ಪಾದರು ತಮ್ಮ "ಶಿವಾನಂದಲಹರಿ" ಯಲ್ಲಿ ಮೂರು ವೃತ್ತಗಳಲ್ಲಿ ಸ್ತುತಿಸಿದ್ದಾರೆ. ಅವುಗಳಲ್ಲಿ ಶ್ಲೇಷರೂಪಕದ ಒಂದು ವೃತ್ತವಿದು

ಸಂಧ್ಯಾರಂಭವಿಜೃಂಭಿತಂ ಶ್ರುತಿಶಿರಃಸ್ಥಾನಾಂತರಾಧಿಷ್ಠಿತಂ
ಸಪ್ರೇಮ ಭ್ರಮರಾಭಿರಾಮಮಸಕೃತ್ ಸದ್ವಾಸನಾಶೋಭಿತಂ
ಭೋಗೀಂದ್ರಾಭರಣಂ ಸಮಸ್ತ ಸುಮನಃ ಪೂಜ್ಯಂ ಗುಣಾವಿಷ್ಕೃತಂ
ಸೇವೇ ಶ್ರೀ ಗಿರಿಮಲ್ಲಿಕಾರ್ಜುನ ಮಹಾಲಿಂಗಂ ಶಿವಾಲಿಂಗಿತಂ ॥

ಈ ಶ್ರೀಶೈಲದ ಮೂಲದಲ್ಲಿಯೇ ಶ್ರೀ ಸೂರ್ಯಸಿಂಹಾಸನದ ಜಗದ್ಗುರುಪೀಠವು ನೆಲೆವಡೆದು ಶ್ರೀ ವೀರಶೈವ ಮತದ ಉದ್ಧಾರವಾಗಿದೆ. ಈ ಜಗದ್ಗುರು ಪರಂಪರೆಯಲ್ಲಿ ಬಂದ ಸಾರಸ್ವತ ತಪೋಧನರೂ "ಅಭಿನವ ಪಂಡಿತಾಚಾರ್ಯ" ಬಿರುದಾಂಕಿತರೂ ಆಗಿರುವ ಶ್ರೀ ಜ.ಚ.ನಿ. ಶ್ರೀಗಳವರು ಸ್ವತಃ ಪಾರ್ವತೀದೇವಿಯ ಸಂಸ್ತುತಿ ಮೂಲಕವಾಗಿ ಭಕ್ತಿಭಾವದಿಂದ ರಚಿಸಿ ಅರ್ಪಿಸಿದ ಆರೆಸಳ ಮಲ್ಲಿಗೆ ಈ 'ಚಂದ್ರಾವತಿ' ಎಂಬ ಕಾವ್ಯವು. ಚಂದ್ರಾವತಿಯು ಶಿವನಿಗರ್ಪಿಸಿದ ಮಲ್ಲಿಗೆಯಂತೆ ಶ್ರೀ ಮಲ್ಲಿಕಾರ್ಜುನದೇವರ ಪ್ರಸಾದರೂಪದಂತೆ, ಶಿವನ ಜಟಾಜೂಟದಿಂದ ಇಳಿದ ಸುರತಟಿನಿಯಂತೆ ಇದು ಪಾವನವೆನಿಸುವುದರಲ್ಲಿ ಆಶ್ಚರ್ಯವಿಲ್ಲ.

ಈ ಕಾವ್ಯವಸ್ತುವಿಗೆ ಮೂಲವು ಪಾಲ್ಕುರಿಕೆಸೋಮನಾಥನ (ಕ್ರಿ.ಶ. ೧೨೦೦) ಪಂಡಿತಾರಾಧ್ಯ ಚರಿತ್ರಾಂತರ್ಗತವಾಗಿದೆಯೆಂದೂ ಆದುದರಿಂದ ಇದು ಕಾಲ್ಪನಿಕ ಕಥೆಯಲ್ಲವೆಂದೂ ಪೂಜ್ಯಕವಿವರ್ಯರೆಂದಿದ್ದಾರೆ. ಇದರಲ್ಲಿ ಚಂದ್ರಾವತಿಯ ನಿಚ್ಚಟದ ಭಕ್ತಿಯನ್ನು ಶಿವನು ಕಪಟಯುವಕವೇಷದಿಂದ ಬಂದು ಕೆಣಕಿ ಪರೀಕ್ಷಿಸುವ ಕಥಾಂಶವು ಗಿರಿಜಾಕಲ್ಯಾಣದ ಕಥಾಭಾಗವನ್ನು ಹೋಲುತ್ತಿದೆ. ಅಲ್ಲಿ ಶಿವನು ಕಪಟವಟುವಾಗಿ ತಪಸ್ವಿನೀ ಪಾರ್ವತಿಯ ಬಳಿಗೆ ಬಂದು ಶಿವನಿಂದಾತ್ಮಕವಾದ ಚುಚ್ಚುಮಾತುಗಳಿಂದ ಕೆಣಕಿ, ಕೊನೆಗೆ ಆಕೆಯ ಮನಸ್ಥೈರ್ಯದ ಭಕ್ತಿಗೆ ಒಲಿದು ಪ್ರತ್ಯಕ್ಷನಾಗುವನು. ಆ ಛಾಯೆ ಇಲ್ಲಿದೆ. ವರ್ಣನೆಯಲ್ಲಿಯೂ ಕೆಲವೆಡೆ ಪೂರ್ವಕವಿಗಳ ಪ್ರಭಾವವು ಇಣಕಿದೆ. ಈ ಕಾವ್ಯಕುಸುಮದಲ್ಲಿ ಪ್ರಾರ್ಥನೆಗೇ ಮೀಸಲಾದ ಮೊದಲನೆಯ ಎಸಳಿನಲ್ಲಿ ಜಗಜ್ಜನನಿ ಭವಾನಿಯ ಸ್ತುತಿಯಲ್ಲಿ ಬಂದಿರುವ ಉಲ್ಲೇಖನೀಯಗಳಿವು.

ಸರಸತಿಗೆ ವಾಣಿಶಕ್ತಿಯನಿತ್ತವಳ್ ನೀನೆ
ಹರಿಸತಿಗೆ ಲಕ್ಷ್ಮೀ ಶಕ್ತಿಯನಿತ್ತವಳ್ ನೀನೆ
ಸ್ಮರಸತಿಗೆ ರೂಪಶಕ್ತಿಯನಿತ್ತವಳ್ ನೀನೆ
ಸುರಸತಿಗೆ ಕ್ಷಾತ್ರಶಕ್ತಿಯನಿತ್ತವಳ್ ನೀನೆ ॥

ಈ ಅಭಿವ್ಯಕ್ತಿ "ಶ್ರೀಪತಿಗೆ ಸೊಬಗನುಡುಪಶಿಗೆ ಶಾಂತಿಯನು ವಾಣೀಪತಿಗೆ ಚಾತುರ್ಯಮಂ.." ಇತ್ಯಾದಿಯಾಗಿ ಕೊಟ್ಟವನೆಂದು ಪಂಪಾವಿರೂಪಾಕ್ಷನನ್ನು ಸ್ತುತಿಸಿದ ರಾಘವಾಂಕ ಕವಿಯ ಭಾವಾನುಸರಣದಂತಿದೆ. ಚಂದ್ರಾವತಿಯು ಭಕ್ತಿ ರಸದಲ್ಲಿ ಮುಳುಗಿ ಗಿಡಬಳ್ಳಿಗಳೊಡನೆ "ನಿಮ್ಮಲ್ಲಿ ಕೆಂಜೆಡೆಯ ಎನ್ನೊಡೆಯ ಬಂದಿಹನೆ ಪೇಳಿರೇ!" ಎನ್ನುವಲ್ಲಿ ಅಕ್ಕಮಹಾದೇವಿಯ "ಚಿಲಿಮಿಲಿಯೆಂದೋದುವ ಗಿಳಿಗಳಿರ, ನೀವು ಕಂಡಿರೆ," ಎಂಬ ಛಾಯೆ ಕಾಣುತ್ತದೆ. ಹೀಗೆ ಒಂದೊಂದೆಡೆ ಪೂರ್ವ ಪರಿಚಿತವಾದ ಅರ್ಥಗಳೇ ಬಂದರೂ ಸನ್ನಿವೇಶಾನುಗುಣವಾದ ರಸಸಂಪರ್ಕದಿಂದ ಇಲ್ಲಿಗಿವು ಹೊಸತಾಗಿ ಕಾಣುತ್ತವೆ, ವಸಂತಕಾಲದ ಮರಗಳಂತೆ.

ದೃಷ್ಟಪೂರ್ವಾ ಅಪಿಹ್ಯರ್ಥಾಃ ಕಾವ್ಯೇ ರಸಪರಿಗ್ರಹಾತ್
ಸರ್ವೇ ನವಾ ಇವಾಭಾಂತಿ ಮಧುಮಾಸ ಇವ ದ್ರುಮಾಃ ॥

ಧ್ವನ್ಯಾಲೋಕದ ಈ ಉಕ್ತಿ ಇಲ್ಲಿಗೆ ಅನ್ವಯಿಸುತ್ತದೆ.

ಕಾವ್ಯಕ್ಕೆ ಶೋಭಾಕರ ಧರ್ಮವೆನಿಸುವ ಅಲಂಕಾರಗಳಿಂದ ಕೂಡಿದ ಪ್ರಕೃತಿವರ್ಣನೆ ಈ ಚಿಕ್ಕ ಕಾವ್ಯದಲ್ಲಿ ಸುಂದರವಾಗಿ ಬಂದಿರುವುದು ಅವಲೋಕಿಸಿದಾಗ ತಿಳಿಯುತ್ತದೆ. ಇಲ್ಲಿ ಎರಡನೆಯ ಎಸಳು ಶ್ರೀ ಶೈಲದ ವರ್ಣನೆ. ಶ್ರೀ ಶೈಲದಲ್ಲಿ ನಳನಳಿಸಿ ಬೆಳೆದ ಮರಗಳು ಕವಿ ಮಾಂತ್ರಿಕತೆಯಿಂದ ಜಂಗಮಗಳೇ ಆಗಿವೆ -

ಚಿಗುರೆಲೆಯುಟ್ಟು, ಮೇಣ್ ಕೆಲಂ
ನೆರೆ ಹೊನ್ನಿನೋಲ್ ಹೊಳೆವ ಹಣ್ಣೆಲೆಯುಡಿಗೆಯುಟ್ಟು
ಭಾಳದೊಳ್ ಪುಷ್ಪಚಯಮೆಂತೆಂಬ ಪರಿಶುಭ್ರ
ಭಸಿತವಿಟ್ಟು ತೊಳಗುವ ತ್ರಿಪುಟಿಯೊಳ್ ತಿಲಕದಂ
ತೆಸೆದಿರ್ಪ ಭೃಂಗದಾ ಬಟ್ಟಿಟ್ಟು, ಕಪ್ಪಾದ
ಹಕ್ಕಿ ಹಿಂಡುಗಳ ಜಡೆಮುಡಿಗಟ್ಟಿ, ಝೇಂಕಾರ
ದೋಂಕಾರ 'ಜಪಂಗೆಯ್ಯುತ್ತ' ಪುಷ್ಪಪರಾಗ
ಭಸ್ಮಾಂಗದಿಂದೊಸೆದು ಕೈಲಾಸಕೈತರುವ
ತವಸಿಗಳ ತಿಂತಿಣಿಯ ತೆರದಂತೆ ತೋರುವದು ॥

ಶ್ರೀ ಶೈಲ ವರ್ಣನೆಯಲ್ಲಿ ದೃಶ್ಯಸೌಂದರ್ಯ , ಭಾವಸೌಂದರ್ಯ , ಮಹಿಮಾಸೌಂದರ್ಯಗಳು ಅಡಕವಾಗಿವೆ.

ಪ್ರಕೃತಿವರ್ಣನೆ ಪ್ರಭಾತವರ್ಣನೆಗಳಂತೆ ವ್ಯಕ್ತಿಜೀವನ ವರ್ಣನೆಯಲ್ಲಿಯೂ ವರ್ಣನಾ ಕ್ರಮದಲ್ಲಿಯೂ ಕಾವ್ಯರಚನೆಯ ಹಿರಿಮೆಯಿದೆ. ಚಂದ್ರಾವತಿಯು ಓರ್ವ ಕಾರಣಕನ್ಯೆ. ಆಕೆಯ ಜನನದ ಸಂದರ್ಭದಲ್ಲಿ ಪೂರ್ವಕವಿಗಳಂತೆ ತಾಯಿಗೆ ಮಕ್ಕಳ ಬಯಕೆ, ಗರ್ಭಧಾರಣೆ, ದೋಹದ, ಪ್ರಸವ, ನಾಮಕರಣಾದಿ ಸಾಂಪ್ರದಾಯಿಕ ವರ್ಣನಾಕ್ರಮದಿಂದ ಪುಟಗಳನ್ನು ತುಂಬಿಸುವ ಗೋಜಿ ಇಲ್ಲಿಲ್ಲ. ಚಂದ್ರನಲ್ಲಿ ಚಂದ್ರಿಕೆ, ಸಿಂಧುವಿನಲ್ಲಿ ಮುತ್ತು, ಸಹಜವಾಗಿ ಜನಿಸುವಂತೆ ಗುಪ್ತವಂಶವನ್ನು ವ್ಯಕ್ತವಂಶವನ್ನಾಗಿಸಲು, ರಾಜವಂಶವನ್ನು ಋಷಿವಂಶವಾಗಿಸಲು, ಆಕೆ ಹುಟ್ಟಿದಳು. ಪೆಂಪು, ರೀತಿ, ನೀತಿ, ಗಾಡಿ, ಮೋಡಿ, ನಡತೆಗಳು ಅನ್ಯಾದೃಶ. ಶಿವಭಕ್ತಿಪರಾಯಣೆಯಾದ ಆಕೆಯ ಭಕ್ತಿಯ ರೂಪಕವಿದು

ಹೃದಯದಾ ಭೂಮಿಯೊಳ್ ಭಕ್ತಿರಸವನೆರೆದು
ಹದವಾಗಿ ಪಂಚಾಕ್ಷರಿಯ ಬೀಜವದು ಮೊಳೆಯೆ
ಬುದ್ಧಿಯೊಳ್ ಸುಜ್ಞಾನ ಪುಷ್ಪವದು ನನೆಬಿರಿಯೆ
ಸದ್ಭಾವದೊಳನುಭಾವದಾ ನರುಗಂಪುಗಿಯೆ
ಜೀವಿಪಳ್ ಹರಕರುಣೆಯ ಫಲಮಂ ಪಡೆದು
ಸೇವಿಪಳ್ ವರಮುಕ್ತಿಯ ರಸಮಂ ನಲಿದು ॥

ಈ ಕಾವ್ಯದ ನಾಲ್ಕನೆಯ ಎಸಳಿನಲ್ಲಿ ಗೋಧನದ ವಿಸ್ತೃತ ವರ್ಣನೆಯಿದೆ. ಗೋವಿನಂತಹ ಪವಿತ್ರಜೀವಿ ಇನ್ನೊಂದಿಲ್ಲ. ಈ ಪವಿತ್ರತೆ ಕೇವಲ ಭಾವನಾತ್ಮಕವಲ್ಲ, ವೈಜ್ಞಾನಿಕವೂ ವ್ಯಾವಹಾರಿಕವೂ ಆಗಿದೆ. ಈ ಅಧ್ಯಾಯದ ಪ್ರಾರಂಭವೇ ಈ ಪಸುತಾಯ ಮೇಲ್ಮೆಯನ್ನು ಓದಿದಂತಲ್ಲ

ತಾಯ್ ತನ್ನೆದೆವಾಲಿಂ ಮೂರ್ ಬರಿಸ ಕಾಪಾಡೆ
ತಾಯ್ ಕವಿಲೆ ಮೊಲೆವಾಲಿನಿಂ ನೂರ್ ಬರಿಸ ನಾಡೆ
ಸಾಕುವುದು ತಾನಲ್ತೆ ಮನುಜರಂ ದಿವಿಜರಂ ॥

ಈ ಭಾಗವನ್ನೋದುವಾಗ ಗೋಮಾಹಾತ್ಮ್ಯದ ಕಥೆಗಳೆಲ್ಲವೂ ಕಣ್ಣಿಗೆ ಕಟ್ಟುತ್ತವೆ. ಗೋವಿನ ಮಹತಿಯನ್ನು ತಿಳಿಸುವ ಕನ್ನಡ ಜನಪದ ಕವಿಯೋರ್ವನ 'ಪುಣ್ಯಕೋಟಿಯ ಕಥೆ'ಯೂ ಇಲ್ಲಿ ಸ್ಮರಣೆಗೆ ಬರುವುದು

ಎನ್ನ ಉಚ್ಛ್ವಾಸಗಳೆ ವೇದವು
ಎನ್ನ ನೇತ್ರವೆ ಸೂರ್ಯಚಂದ್ರರು
ಎನ್ನ ಕರ್ಣವೆ ಇಂದ್ರಲೋಕವು
ಎನ್ನ ದೇಹವಿದೊಳ್ಳಿತು ॥

ಇತ್ಯಾದಿಯಾಗಿ ಹೇಳಿರುವುದು ಇಲ್ಲಿ ಸ್ಮರಣೀಯ. ಗೋವು ಎಂಬ ಹೆಸರು ಬಂದಲ್ಲೆಲ್ಲ ಹೇಗೆ ಶ್ರೇಷ್ಠತೆ, ಪವಿತ್ರತೆ, ಪುಣ್ಯ ಹಾಸುಹೊಕ್ಕಿದೆ ಎಂಬ ವಿವರವು ಈ ಕಾವ್ಯದ 'ಗೋಧನ' ಎಂಬ ಭಾಗದಲ್ಲಿದೆ. ಕೊನೆಗೆ ಸಾರಾಂಶವಾಗಿ ಹೇಳಿದುದಿದು—

ಧೇನುವಿಂ ವ್ಯಕ್ತಿ ದೇಶದುನ್ನತಿ ।
ಧೇನುವಿಂ ವಿಶ್ವದುನ್ನತಿ ಶಾಶ್ವತದುನ್ನತಿ
ಧೇನುವಿಂ ಸಕಲ ಮಾನುಷವರ್ಗಕೆ ಸದ್ಗತಿ
ಧೇನುವಿಂ ಪ್ರಕೃತಿ ಪ್ರಗತಿ ಮತಿ ಮಹೋನ್ನತಿ

ಸತ್ಕವಿಕೃತಿಗಳು ಸತ್ಪ್ರೇರಣೆಯಿಂದಲೇ ರಚನೆಗೊಳ್ಳುತ್ತವೆ. ಮಾನವ ಜನಾಂಗಕ್ಕೆ ಉಪಯುಕ್ತವಾಗುವ ದಿವ್ಯತತ್ತ್ವದ ನಿರೂಪಣವೇ ಮುಖ್ಯವಾದ ಪ್ರೇರಣೆಯೆನ್ನಬಹುದು. ಆದುದರಿಂದಲೇ ಶ್ರೇಷ್ಠ ಕೃತಿಗಳಲ್ಲಿ ಕಾವ್ಯಧರ್ಮಕ್ಕೂ ಧರ್ಮಕ್ಕೂ ಆಸರೆಯಿರುತ್ತದೆ. ಅಮಂಗಲ ಪರಿಹಾರ, ಆನಂದ, ಉಪದೇಶ ಈ ಮೂರನ್ನೂ ಅಭಿವ್ಯಕ್ತಪಡಿಸುವ ಅಂತಃ ಪ್ರೇರಣೆಯಿಂದ ಸ್ಫೂರ್ತಿಗೊಂಡು ಸತ್ಕವಿಗಳು ತಮ್ಮ ಕೃತಿಯಲ್ಲಿ ಲೋಕೋತ್ತರವೆನಿಸುವ ಪಾತ್ರಗಳ ಮೂಲಕ ನುಡಿಯುವರು.

ಚಂದ್ರಾವತಿಯ ಮಾತಿನಲ್ಲಿ ಬಂದ, ಕೆಲವು ಉಕ್ತಿಗಳು, ಕವಿಗಳ ಪ್ರೇರಣೆಯಿಂದ ಹೊಮ್ಮಿದ ಕಾವ್ಯದ ತಿರುಳೆನ್ನಬಹುದು -

'ಕೆಡುವ ಕಡುನೋವಿಗೆಡೆಯಪ್ಪ ಮೈ ಚೆಲುವಿಂಗೆ
ಕೆಡದಿರ್ಪ ಭಾವದಾ ಚೆಲುವು ಮಿಗಿಲಲ್ಲವೇಂ"?
"ಮೃತ್ಯುವಿಗೆ ತುತ್ತಾಗುವೀ ದುಃಖ ಜೀವನಕೆ
ಮೃತ್ಯುಂಜಯನೊಲುಮೆಯಾ ಬಾಳು ಮಿಗಿಲಕ್ಕೆ"
"ಸಲ್ಲದಿದು ದೇವನಂ ಕಲ್ಲೆಂದು ಪೇಳುವರೆ"

ಚಂದ್ರಾವತಿಯು ಭಕ್ತಿಯಿಂದ ಶಿವನನ್ನೊಲಿಸಿ, ಆತನಲ್ಲಿ ಭೌತಿಕ ಭಾಗ್ಯವನ್ನಾಗಲೀ ಕೈಲಾಸವನ್ನಾಗಲೀ ಕೇಳಲಿಲ್ಲ. ತಾನೊರ್ವಳು ಸುಖಪಡಬಹುದಾದ ಸ್ವಾರ್ಥಕ್ಕೆ ಬಲಿಯಾಗದೆ, ಲೋಕಕ್ಕೇ ಸೌಖ್ಯಾವಹವಾಗುವ ವರಬೇಡಿದಳು. ಇದು ಆಕೆಯ ಆದರ್ಶಗುಣವನ್ನು ಕೃತಿಕಾರರು ಮೆಚ್ಚಿ ತಿಳಿಸಿದ ಅಂಶವೆನ್ನಬಹುದು.

ಈ ಕೃತಿಯನ್ನು ಕುರಿತು ಇಷ್ಟು ತಿಳಿಸಿದ ಮೇಲೆ ಇದರ ಛಂದೋರಚನೆಯನ್ನು ಉದ್ದೇಶಿಸಿ ಒಂದಿಷ್ಟು ತಿಳಿಸದಿದ್ದರೆ ಕೊರತೆಯೆನಿಸಬಹುದು. ಕಾವ್ಯದ ಛಂದಸ್ಸು "ಲಲಿತರಗಳೆ" ಎಂದಿದೆ ಕವಿವಾಣಿ. ಪ್ರತಿಯೊಂದು ಪಾದದಲ್ಲಿ ಐದು ಮಾತ್ರೆಗಳ ನಾಲ್ಕು ಗಣಗಳಿರುವುದು ಲಲಿತರಗಳೆಯ ಸಾಮಾನ್ಯ ಲಕ್ಷಣ. ಆದರೆ ಇಲ್ಲಿ ಈ ಲಕ್ಷಣವು ಹೆಚ್ಚಿನ ಪಾದಗಳಲ್ಲಿ ಅನ್ವಿತವಾಗುವುದಾದರೂ ಕೆಲವೆಡೆ ಪಾದಗಳ ಒಟ್ಟು ಮಾತ್ರೆಗಳ ಸಂಖ್ಯೆಯಲ್ಲಿ ಮಾತ್ರ ರಗಳೆಯ ಲಕ್ಷಣವಿದೆ. ಕನ್ನಡದ ದೇಶೀಯ ಛಂದದ ಲಕ್ಷಣದಂತೆ ಕೆಲವೆಡೆ ಅಕ್ಷರಗಳನ್ನು ಸಂಕ್ಷೇಪಿಸಿ ಅಥವಾ ವಿಕ್ಷೇಪಿಸಿ ಉಚ್ಚರಿಸಿ ಮಾತ್ರೆಗಳನ್ನು ಸಮಗೊಳಿಸಬೇಕಾಗಿ ಬರುವ ಸಂದರ್ಭಗಳೂ ಇವೆ. ಇದರಿಂದ ಕವಿಗಳು ಪೂರ್ವಲಕ್ಷಣವನ್ನೇ ಗುರಿಯಾಗಿ ಅನುಸರಿಸದೆ ತಮ್ಮದೇ ಆದ ಲಯಪ್ರಧಾನವಾದ ನಡೆಯನ್ನು ಅನುಸರಿಸಿದ್ದಾರೆ ಅಥವಾ ತಮ್ಮ ವಚನರಚನಾ ಪ್ರಭಾವವನ್ನು ಬೀರಿದ್ದಾರೆ ಎನ್ನಬಹುದು. ಅದಕ್ಕಾಗಿ ಒಂದೆರಡು ಪಾದಗಳ ಉದಾಹರಣೆಗಳನ್ನು ಕೊಡಬಹುದು. ಲಕ್ಷಣಗಳನ್ನರಿಯಬಹುದು. ಗಣನಿಯಮ ಸರಿಯಾಗಿದ್ದು ತಾಳಕ್ಕೆ ಒಂದಿಷ್ಟು ಎಡವದಂತಿರುವ ಗತಿಯನ್ನು 'ಅನುಗತಲಯ' (Running Rhythm) ಎನ್ನಬಹುದು. ಇಂತಹ ಲಯ ಈ ಕೃತಿಯಲ್ಲಿ ಬಹಳವಾಗಿದೆ. ಈ ಅನುಗತಲಯದಲ್ಲೇ ಒಳಗೊಳಗೆ ಲಯಗಳು ಗೋಚರಿಸಿದರೆ ಅವನ್ನು 'ಅಂತರ್ಗತಲಯ' (Internal Rhythm) ಎನ್ನಬಹುದು. ಅದೂ ಇಲ್ಲಿದೆ. ಮೇಲೆ ಉದಾಹರಿಸಲಾದ ಪದ್ಯಭಾಗದ ಕೊನೆಯ ಪಂಕ್ತಿ ಅಂತಹದು. ಇನ್ನು ಕೆಲವೆಡೆ ಗುರು ಲಘುಗಳ ಸ್ಥಾನ ಪಲ್ಲಟದಿಂದ ಧೀಂಕೃತ ಲಯವೂ (Sprung Rhythum) ಇದರಲ್ಲಿ ಗೋಚರಿಸುತ್ತದೆ ಎಂಬದೂ ಮೇಲಣ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

ಇದರಿಂದ ಒಟ್ಟಿನಲ್ಲಿ ಈ ಚಂದ್ರಾವತೀ ಕಾವ್ಯವು ಒಂದು ಸಹಜ ಕವಿತೆಯಾಗಿದೆ. ಪ್ರಯತ್ನ ಕವಿತೆಯಲ್ಲ ಎನ್ನಬಹುದು. ಚಂದ್ರಾವತಿಯ ಜನನದಂತೆಯೇ ಇದರದೂ ಜನನ. ಅಲ್ಲಿ ಆಕೆ "ರಾಜತೇಜಕೆ ಬ್ರಹ್ಮ ಕೇಜಮಂ ತುಂಬಲು" ಗುಪ್ತಕುಲಕ್ಕೆ ಹೊಸ ಜಸವನ್ನು ವ್ಯಕ್ತಪಡಿಸಲು ಸರ್ವಮಂಗಳೆಯ ರೂಹುಗೊಂಡಂದದಿಂ' ಹುಟ್ಟಿದಳು. ಅದೇ ಉದ್ದೇಶದಿಂದ ಕನ್ನಡಿಗರ ಕುಲಕ್ಕೆ ಹೊಸ ಜಸ ವನ್ನುಂಟುಮಾಡಲು ಚಂದ್ರಾವತಿಯೇ ರೂಪತಾಳಿದಂತೆ ಈ ಕೃತಿ ಮೈತಾಳಿದೆ. ಆದುದರಿಂದಲೇ ಸಾಹಿತ್ಯದ ಮತ್ತು ರಚನೆಯ ದೃಷ್ಟಿಗಳಿಂದ ಇದು ವೈಶಿಷ್ಟ್ಯಮಯವಾದ ಕವಿತೆಯಾಗಿದೆ.

□

ಶ್ರೀಶೈಲ ಜಗದ್ಗುರು ಶ್ರೀ ನಿಡುಮಾಮಿಡಿ ಸ್ವಾಮಿಗಳ ರಜತ ಸಂಭಾವನಾ ಸಂಪುಟಕ್ಕಾಗಿ ಬರೆದುದು - ೨೭-೯-೧೯೭೪.

೩೦

ತುರಂಗಭಾರತ - ಸಂಪಾದನವನ್ನು ಕುರಿತು

ಪರಮದೇವ ಕವಿಯ (ಕ್ರಿ.ಶ. ೧೬೪೩-೧೭೦೮) ತುರಂಗಭಾರತ ಇದೀಗ ದ್ವಿತೀಯ ಆವೃತ್ತಿಯ ಮುದ್ರಣ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಯಾಗಿ ೧೯೮೬ ರಲ್ಲಿ ಅಚ್ಚಾಗಿ, ೧೯೮೮ ರಲ್ಲಿ ಹೊರಬಂದಿದೆ. ಕಿರೀಟ ಚತುರ್ದಳಾಕೃತಿಯ ೯೪೪ ಪುಟಗಳ ಈ ಕಾವ್ಯ ಐದು ರೂಪಾಯಿ ಬೆಲೆಯಲ್ಲಿ ದೊರಕುವಂತಾದುದು ಓದುಗರ ಭಾಗ್ಯ; ಕನ್ನಡಿಗರಿಗೊಂದು ಅಭಿಮಾನ. ಇದಕ್ಕೆ ಕಾರಣರಾದ ಗ್ರಂಥಸಂಪಾದಕರು, ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಗಳು ಮತ್ತು ಪ್ರಕಟನೆಗೆ ಧನಸಹಾಯ ನೀಡಿದ ನಮ್ಮ ರಾಜ್ಯ ಸರಕಾರದವರು ಗುಣಗಾನಾರ್ಹರೆಂಬುದು ನಿರ್ವಿವಾದ. ವ್ಯಾಸಭಾರತದ ೧೮ ಪರ್ವಗಳ ಕಥಾವಸ್ತುವನ್ನು ಒಳಗೊಂಡು ವಾರ್ಧಕಷಟ್ಪದಿಯಲ್ಲಿ - ತುರಂಗಗತಿಯುಳ್ಳುದೆನಿಸುವಂತೆ, ರಚಿತವಾದ ಏಕಮೇವ ಮಹಾಭಾರತ ಕಾವ್ಯ ಎಂಬ ದೃಷ್ಟಿಯಿಂದ ಈ ಗ್ರಂಥ ವೈಶಿಷ್ಟ್ಯವನ್ನು ತಾಳಿದೆ. ಅಂತಹ ವೈಶಿಷ್ಟ್ಯಪೂರ್ಣ ಕಾವ್ಯದ ಸಂಪಾದನದಲ್ಲಿ ಗುಣದೋಷಗಳೆರಡೂ ಇವೆ. ಆದರೆ ದೋಷಗಳು ಗುಣಕ್ಕಿಂತ ಹೆಚ್ಚಾಗಿ ಎದ್ದು ಕಾಣಿಸುತ್ತ ಓದುಗರಿಗೆ ತೊಡಕನ್ನುಂಟುಮಾಡುತ್ತವೆ.

ಕನ್ನಡಿಗರ ಒಲವು ಮೆಚ್ಚಿಕೆಗಳನ್ನು ಗಳಿಸಿರುವ ಈ ತುರಂಗಭಾರತ ಕ್ರಿ.ಶ. ೧೮೮೯ ರಲ್ಲಿ ಕೆ. ವೆಂಕಟರಮಣ ಶಾಸ್ತ್ರೀ ಸೂರಿ ಅವರಿಂದ ಸಂಪಾದಿತವಾಗಿ ಮೊತ್ತಮೊದಲ ಆವೃತ್ತಿಯಾಗಿ ಬೊಂಬಾಯಿಯಲ್ಲಿ ಪ್ರಕಟವಾಗಿದೆ. ಅನಂತರ ಈಗ ಶ್ರೀ ಕೆ. ಜಗನ್ನಾಥ ಶಾಸ್ತ್ರೀಯವರ ಪುನಸ್ಸಂಪಾದನದಿಂದ ಹೊರ ಬಂದು, ಬೇಕೆಂಬವರಿಗೆಲ್ಲ ಇದರ ಪ್ರತಿ ಲಭಿಸುವಂತಾಗಿದೆ. ಇದರ ಸಂಪಾದನವನ್ನು ಕುರಿತು ಲಕ್ಷ್ಯಾರ್ಹವಾದುದದನ್ನು ನಿರೂಪಿಸುವುದೇ ಪ್ರಕೃತ ಈ ಬರೆಹದ ಉದ್ದೇಶ.

ಗ್ರಂಥಸಂಪಾದನವೆಂಬುದು ಕನ್ನಡದಲ್ಲಿ ಸಾಕಷ್ಟು ಪ್ರಬುದ್ಧಾವಸ್ಥೆಯನ್ನು ತಾಳಿದ್ದರೂ ಹಲವರು ಗ್ರಂಥಸಂಪಾದನ ಮಾಡಿದವರು ಸಂಪಾದನ ಶಾಸ್ತ್ರವನ್ನು ಲಕ್ಷಿಸದಿರುವುದರಿಂದ ಪ್ರಕಟಗೊಂಡ ಹಲವಾರು ಕಾವ್ಯಗಳು ದೋಷಮಯವಾಗಿರುವುದು ವಿದಿತ. ಮೂಲ ಪ್ರತಿಗಳು ಸಾಕಷ್ಟು ಸಿಕ್ಕಿದ್ದರೂ ಪಾಠಾಂತರವನ್ನು ತೋರಿಸಿಕೊಡದೆ ಸರಿಯಾಗಿ ಗ್ರಂಥಸಂಪಾದನೆ

ತುರಂಗ ಭಾರತ: ಸಂ ಕೆ. ಜಗನ್ನಾಥಶಾಸ್ತ್ರಿ ಪು. ೧, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು - ೫೬೦೦೧೮.

ಮಾಡಿದೆವೆಂದುಕೊಂಡವರಿದ್ದಾರೆ. ಸಮೃದ್ಧವಾಗಿ ಪಾಠಾಂತರ ಟಿಪ್ಪಣಿಗಳನ್ನು ಅಲ್ಲಲ್ಲೇ ಕೊಟ್ಟಿದ್ದರೂ ಸ್ವೀಕೃತ ಪಾಠಶುದ್ಧಿಯಿಲ್ಲದ ಸಂಪಾದನಗಳೂ ಇವೆ. ಇಂಥವುಗಳಲ್ಲಿ ಪ್ರಸ್ತಾವನೆ, ತದಂಗವಾಗಿ ಕವಿ ಕಾವ್ಯ ವಿಚಾರ ವಿಮರ್ಶೆಗಳೂ ವಿಸ್ತೃತವಾಗಿಯೇ ಇರುತ್ತವೆ. ಸೂಕ್ತ ಅನುಬಂಧಗಳೂ ಇರುತ್ತವೆ. ಇಷ್ಟು ಮಾತ್ರದಿಂದ ಅದನ್ನು ಸಮರ್ಥ ಸಂಪಾದನೆ ಎಂಬಂತಿಲ್ಲ. ಗ್ರಂಥಸಂಪಾದನದಲ್ಲಿ ಅತಿಮುಖ್ಯವಾದುದೆಂದರೆ - ಶುದ್ಧಪಾಠನಿರ್ಣಯ, ಪಾಠಶುದ್ಧಿಯುಳ್ಳ ಪದ್ಯಭಾಗವೇ ಮುಖ್ಯವಾಗಿ ವೀಕ್ಷಕರ ಲಕ್ಷ್ಯಕ್ಕೆ ಬರುವ ಅಂಶ. ಈ ವಿಷಯದಲ್ಲಿ ತುರಂಗ ಭಾರತದ ಸಂಪಾದನ ಕಾರ್ಯ ತೀರ ಸೊರಗಿದೆ.

ಈ ಉದ್ಗ್ರಂಥಕ್ಕೆ ರಚಿಸಲಾದ ಪ್ರಸ್ತಾವನೆಯ ಭಾಗಗಳಲ್ಲಿ (ಇದು ೬೨ ಪುಟಗಳಷ್ಟಿದೆ) ಒಂದೆರಡು ಅಂಶಗಳನ್ನು ಬಿಟ್ಟರೆ, ಇನ್ನಿತರವು ಸಂಪಾದಕರ ಆಳವಾದ ಅಧ್ಯಯನದ ಫಲವಾಗಿ ಸಮರ್ಥವಾಗಿಯೇ ಬಂದಿವೆ. ಅವು ಮೆಚ್ಚತಕ್ಕವೇ ಆಗಿವೆ. ಗ್ರಂಥಕ್ಕೆ ತುರಂಗಭಾರತ ಎಂಬ ಹೆಸರಾಗಲು ಕಾರಣ, ತುರಂಗಲಯ ಎಂಬುದೇನು ಎಂಬ ವಿಚಾರ ಇವಿನ್ನೂ ಪ್ರಶ್ನಾರ್ಹವಾಗಿಯೇ ಉಳಿಯುತ್ತವೆ ಎಂಬುದನ್ನು ಸೂಚಿಸಲು ಬಯಸುತ್ತೇನೆ

ತುರಂಗ ಲಯ : ಈ ಕಾವ್ಯಕ್ಕೆ **ತುರಂಗಭಾರತ** ಎಂಬ ಹೆಸರೇಕೆ ? ಎಂಬುದಕ್ಕೆ ಹಿಂದಿನ ಆವೃತ್ತಿಯ ಸಂಪಾದಕರಾದ ವೆಂಕಟರಮಣ ಶಾಸ್ತ್ರಿಗಳು ಹೇಳಿರುವುದು ಹೀಗೆ: ಇದು ಜೈಮಿನಿಭಾರತದಂತೆ, ವಾರ್ಧಿಕಷಟ್ಪದಿಯಿಂದ ರಚಿಸಲ್ಪಟ್ಟ ಕಾರಣ, ಇದನ್ನು ಒಂದು ತರದ ಗತ್ತಿನಿಂದ ಓದಬೇಕಾಗುತ್ತದೆ. ಆ ಗತ್ತಿನ ಸ್ವರೂಪವು ಸಾಧಾರಣ ಕುದುರೆಯ ಗುಪ್ಪಿನಂತೆ ಇರುವದಾದ್ದರಿಂದಲೂ, ಪೂರ್ವದಲ್ಲಿ ಈ ಮಾದರಿಯ ಒಂದು ಗ್ರಂಥವನ್ನು ಪಂಡಿತರಾಜ ಜಗನ್ನಾಥನೆಂಬ ಕವಿಯು ರಚಿಸಿ, ಅದಕ್ಕೆ 'ಅಶ್ವಧಾಟಿ ಪ್ರಬೋಧಿಕಾ' ಎಂದು ಹೆಸರನ್ನಿಟ್ಟಿರುವುದರಿಂದಲೂ, ಈ ಮೊದಲು ಇನ್ನೊಂದು ತರದಿಂದ ಈ ಗ್ರಂಥವು ಕನ್ನಡದಲ್ಲಿ ಭಾಮಿನಿಷಟ್ಪದಿಯಲ್ಲಿತ್ತಾದ್ದರಿದಲೂ, ಈ ಗ್ರಂಥಕ್ಕೆ ಜನರು 'ತುರಂಗಭಾರತ' ವೆಂದು ರೂಢಿಯಾಗಿ ಅಂದುಕೊಂಡರು. ಆದರೆ ಈ ಹೆಸರು ಜನರಿಂದಲೇ ಕಲ್ಪಿತವಾದದ್ದಲ್ಲದೆ, ಗ್ರಂಥಕರ್ತರಿಂದ ಇಡಲ್ಪಟ್ಟಿತೆಂತ ಎಲ್ಲಿಯೂ ವ್ಯಕ್ತವಾಗುವುದಿಲ್ಲ. ಗ್ರಂಥ ಕರ್ತನು ಇದಕ್ಕೆ 'ಸಂಕ್ಷೇಪ ಭಾರತ'ವೆಂದು ಆದಿಯಲ್ಲಿ ಬರೆದಿರುತ್ತಾನೆ.

ಇವರ ಅಭಿಪ್ರಾಯದಂತೆ, ವಾರ್ಧಕಷಟ್ಪದಿಯಲ್ಲಿರುವ ಜೈಮಿಮಿಭಾರತದ ಲಯಕ್ಕೂ ಅದೇ ಛಂದಸ್ಸಿನ ತುರಂಗಭಾರತದ ಲಯಕ್ಕೂ ವ್ಯತ್ಯಾಸವಿಲ್ಲ. ಅದರಂತೆ ನನ್ನ ಪರಿಶೀಲನೆಯಲ್ಲಿ ತ್ವರಿತದ ಜಂಪೆತಾಳಕ್ಕೆ ಅಳವಡುವ ಪಂಚಮಾತ್ರಾ ಗಣಘಟಿತವಾದ ವಾರ್ಧಕಷಟ್ಪದಿಯ ಲಯವನ್ನೇ 'ತುರಂಗಲಯ' ಎಂದು ಕರೆದಿರುವುದು ಕಂಡುಬರುತ್ತದೆ.

ಶ್ರೀ ಕೆ. ಜಗನ್ನಾಥ ಶಾಸ್ತ್ರಿಯವರು, ಜೈಮಿನಿ ಭಾರತ, ತುರಂಗಭಾರತ ಎಂಬಿವೆರಡು ವಾರ್ಧಕಷಟ್ಪದಿಯವೇ ಆಗಿದ್ದರೂ ಜೈಮಿನಿ ಭಾರತ ವಾಚನದ ಲಯವೇ ಬೇರೆ, ತುರಂಗ ಭಾರತದ ವಾಚನದ ಲಯವೇ ಬೇರೆ ಎಂದಿದ್ದಾರೆ. ಇದನ್ನು ಸಾಧಿಸಲು ಅವರು ಮಾಡಿದ ಪ್ರಯತ್ನಕ್ಕೆ ಗಟ್ಟಿನೆಲವಿಲ್ಲ. ಜೈಮಿನಿಭಾರತ ವಾಚನಕ್ರಮದಲ್ಲಿ ಅನ್ವಯಕ್ರಮಕ್ಕಾಗಿ ಪದಗಳನ್ನು

ಹೇಗೆ ವಿನ್ಯಾಸಗೊಳಿಸಬೇಕಾಗುತ್ತದೆ ಎಂಬುದಕ್ಕೆ ಅವರು ಒಂದು ಉದಾಹರಣೆ ಕೊಟ್ಟು, ತುರಂಗವಾಚನಕ್ರಮದಲ್ಲಿ ಪದ್ಯ ಪ್ರಾರಂಭಿಸಿದ ಮೇಲೆ ಪದ್ಯಪೂರ್ವಾರ್ಧದ ಕೊನೆಯವರೆಗೆ ಎಲ್ಲಿಯೂ ನಿಲ್ಲುವಂತಿಲ್ಲ ಎಂದಿರುತ್ತಾರೆ. ಈ ಮಾತು ದುರ್ಬಲ. ಒಂದು ಉದಾಹರಣೆಗಾಗಿ, ತುರಂಗಭಾರತದ ಪೌಲೋಮ ಪರ್ವದ ೫ ನೆಯ ಪದ್ಯ ನೋಡಿ:

'ಪೇಳಿ ಸರಿದನು ಮುನಿಪ ವನಿತೆಗಂ ಸ್ನಾನಕಂ' ಇದನ್ನು ಗಮಕದಲ್ಲಿ ವಾಚನ ಮಾಡುವಾಗ ಮೊದಲು ಹೀಗೆಯೇ ವಾಚನ ಮಾಡಿ, ಮತ್ತೆ ಪದಗಳನ್ನು ಅತ್ತಿತ್ತ ಮಾಡಲೇ ಬೇಕಾಗುವುದಿಲ್ಲವೇ? 'ಮುನಿಪ ವನಿತೆಗಂ' ಪೇಳಿ ವಾಚನ ಮಾಡಿ, ಮತ್ತು ಪದಗಳನ್ನು ಅತ್ತಿತ್ತ ಮಾಡುತ್ತ 'ಮುನಿಪ ವನಿತೆಗಂ ಪೇಳಿ ಸ್ನಾನಕಂ ಸರಿದನು' - ಎಂದು ಅನ್ವಯ ಮಾಡಲೇಬೇಕಾಗುತ್ತದೆ. ಇಂತಹ ಉದಾಹರಣಗಳು ತುರಂಗಭಾರತದಲ್ಲಿ ಒಂದಲ್ಲ, ಎಷ್ಟೋ ಇವೆ. ಹೀಗಿರುವಾಗ ತುರಂಗಭಾರತವಾಚನದ ಲಯವೇ ಬೇರೆ ಎನ್ನುವುದು ಹೇಗೆ? ಇದಲ್ಲದೆ ಮಾನ್ಯ ಸಂಪಾದಕರ ಇನ್ನೊಂದು ಬೀಳುಮಾತು ಹೀಗಿದೆ:-

ವಾರ್ಧಕಷಟ್ಪದಿಯನ್ನು ಜೈಮಿನಿಲಯದಲ್ಲಿ ವಾಚನ ಮಾಡುವಾಗ ೧,೨,೪,೫ ನೆಯ ಪಾದಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳಿಗೆ ಲಯ ಬರುವಂತೆ ವಾಚನ ಮಾಡಬೇಕು (ಪುಟ : ೬೧). ಇದು ಹೇಗೆ ಸರಿ? ಜೈಮಿನಿಭಾರತದ ಮೊದಲ ಪದ್ಯದ ಎರಡು ಪಾದಗಳನ್ನೆ ನೋಡೋಣ:

'ಶ್ರೀ ವಧುವಿನಂಬಕ ಚಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ
ತೀವಲಯದ....

ಸಂಪಾದಕರೆನ್ನುವಂತೆ ಇಲ್ಲಿ ೧ ನೆ ಮತ್ತು ೨ ನೆ ಪಾದಗಳ ಕೊನೆಗೆ ಲಯವಿರುವುದೆ? ಅಲ್ಲಿ ಲಯ ಬರುವಂತೆ ವಾಚನ ಮಾಡಿದರೆ ಸುಶ್ರಾವ್ಯವಾಗುವುದೇ? ಗಮಕ ಕಲೆಗೆ ಇದು ವಿರುದ್ಧದ ಮಾತಲ್ಲವೆ? ಗಮಕವೆಂಬುದಾಗಲಿ, ತಾಳ-ಲಯ-ಮಾತ್ರೆ ಛಂದೋವಿಚಾರವಾಗಲಿ, ಅರ್ಥಾನುಗುಣವಾಗಿ ಪದ್ಯವನ್ನು ಅನ್ವಯ ತಪ್ಪದಂತೆ ಓದಬೇಕೆಂಬುದಾಗಲಿ ತಿಳಿಯದವರು ಒಪ್ಪುವರೋ ಏನೋ!

ಈ ಪ್ರತಿಪಾದನೆಗಳಿಂದ ಅನಿಸುವುದು ಇಷ್ಟು - ಪಂಚಮಾತ್ರಾಗಣಗಳಿಂದಾಗುವ ರಚನೆಯನ್ನು ಅಂದರೆ, ಯಕ್ಷಗಾನದಲ್ಲಿ ತ್ವರಿತ ಝಂಪೆ ತಾಳದ ಪದಪದ್ಯಗಳನ್ನು ತುರಂಗ ಲಯದವು ಎನ್ನಲು ಅಡ್ಡಿಯಿಲ್ಲ. ಆಗ ಶ್ರೀ ಶಂಕರಾಚಾರ್ಯರ ಅಂಬಾಷ್ಟಕ , ವಾರ್ಧಕಷಟ್ಪದಿ ಕುಸುಮಷಟ್ಪದಿ ಪದ್ಯಗಳು, ಇದೇ ತಾಳಗತಿಯ ದಾಸರ ಪದಗಳು ಮತ್ತು ಯಕ್ಷಗಾನ ಪದಗಳು ತುರಂಗ ಲಯದ ರಚನೆಗಳೆನ್ನಬಹುದು. ಕುದುರೆಯ ಓಟದ ಒಂದೊಂದು ನೆಗೆತವೂ ಈ ಪಂಚಮಾತ್ರಾಗಣದ ಲಯಕ್ಕೆ ಹೊಂದಿಕೊಳ್ಳಬಹುದು. ಶ್ರೀ ಜಗನ್ನಾಥ ಶಾಸ್ತ್ರಿಗಳೆನ್ನುವಂತೆ, ಜೈಮಿನಿ ಲಯ, ತುರಂಗ ಲಯ ಇವೆರಡೂ ಒಂದೇ ಅಲ್ಲ ಎಂಬುದನ್ನು ಒಪ್ಪಲಾಗುವುದಿಲ್ಲ.

ಸಂಪಾದನ ವಿಧಾನ:

ಪರಮದೇವ ಕವಿ ವಿನಯಿಯೂ ಹೌದು, ಸತ್ಯವನ್ನು ಮರೆ ಮಾಡದವನೂ ಹೌದು. ಅವನ ಸ್ವಗತವಿದು :

> **ತಿಳಿದ ಕವಿಯಲ್ಲಮರ ಕಾವ್ಯಂಗಳಂ ಮುನ್ನ**
> **ಹೊಲಬನರಿಯೆನು ಸಂಸ್ಕೃತಂಗಳಂ ಕನ್ನಡದ**
> **ನೆಲೆಯನರಿಯೆನು ಗ್ರಂಥದರ್ಥಂಗಳಂ ಶಾಸ್ತ್ರಮನ್ನರಿಯೆ ಮಜಡ ನಾನು**

(ಪೀಠಿಕೆ : ಪದ್ಯ ೩)

ಇಲ್ಲಿ ಮೂರನೆಯ ಪಾದದ ಕೊನೆಗಿರುವ 'ಶಾಸ್ತ್ರಮನ್ನರಿಯೆ ಮಜಡ ನಾನು' ಎಂಬ ಪಾಠವು ಬೊಂಬಾಯಿ ಪ್ರತಿಯದು; ಶುದ್ಧಪಾಠವೆಂಬುದರಲ್ಲಿ ಸಂದೇಹವಿಲ್ಲ. ಆದರೆ, ಸಂಪಾದಕರು ಅದನ್ನು ಸ್ವೀಕರಿಸಿಲ್ಲ. ಅದನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಅದು ಇರಬೇಕಾಗಿದ್ದ ಸ್ಥಳದಲ್ಲಿ 'ಶಾಸ್ತ್ರಗಳನರಿಯದಾ ಜಡನೂ' ಎಂಬ ಛಂದೋಭಂಗವುಳ್ಳ ಪಾಠವನ್ನು ಪರಿಷ್ಕೃತ ಪಾಠವೆಂಬಂತೆ ಕಾಣಿಸಿದ್ದಾರೆ. ಇದರಿಂದ ಆ ಪದ್ಯತುರಂಗದ ಒಂದು ಕಾಲು ಕುಂಟಾಗಿದೆ !

ಕವಿಯೇ ಒಪ್ಪಿಕೊಂಡಿರುವಂತೆ, ಕವಿ ತಿಳಿಯದೆಯೆ ಮಾಡಿರುವ ತಪ್ಪುಗಳೂ ಇದರಲ್ಲಿವೆ-(೧) (ಸಂ. ೩೪-೩) ವಿವಿಧಟವಿ. ಇಲ್ಲಿ 'ವಿವಿಧಾಟವಿ' ಎಂದಿರಬೇಕಿತ್ತು. ತಿದ್ದಿದರೆ ಛಂದೋದೋಷ. ಆದುದರಿಂದ ತಿದ್ದುವಂತಿಲ್ಲ. ಇಂತಹ ಸಂಧಿದೋಷದ ಉದಾಹರಣೆಗಳು ಬೇರೆಯೂ ಇವೆ.

(೨) ಪದ್ಯದ ನಡುವೆ ಬರುವ ಪೂರ್ವಪದಾಂತ್ಯ ಹ್ರಸ್ವವಾಗಿ, ಪರಪದಪೂರ್ವವು ದ್ವಿತ್ವವಾಗಿರುವುದು ಮತ್ತು ಇದನ್ನು ಶಿಥಿಲವಾಗಿ ಪರಿಗಣಿಸಬೇಕಾಗುವುದು : ಸದ್ಗತಿಯ ವ್ಯರ್ಥದಿಂ (ಸಂಧಿ : ೧, ಪದ್ಯ : ೧೬) ಇರುವ ಸ್ಥಿತಿಯಂ ಸಂ. ೩೪, ೨) ಇಂಥವಕ್ಕೆ ಈ ಕಾವ್ಯದಲ್ಲಿ ಲೆಕ್ಕವೇ ಇಲ್ಲ.

(೩) ಪೂರ್ವಪದಾಂತ್ಯದ ಬಿಂದುವಿಗೆ ಪರಪದಪೂರ್ವದಲ್ಲಿ ಸ್ವರ ಬಂದಾಗ ಪೂರ್ವಪದಾಂತ್ಯದ ಬಿಂದುವನ್ನುಳಿಸಿಕೊಂಡು ಮುಂದಿನ ಸ್ವರಕ್ಕೆ ಅನುನಾಸಿಕವನ್ನು ಹಚ್ಚಿಕೊಳ್ಳುವುದು : 'ಉತ್ತಮತರಂ ಮಾದುದೊಂದು' (ಸಂ.೨, ಪದ್ಯ: ೨), ಕಾರಣಂ ಮುಚ್ಚರಿಸೆ (ಸಂ.೨, ಪದ್ಯ: ೧೦) ಇಂತಹ ಉದಾಹರಣೆಗಳು ಕಾವ್ಯದ ಉದ್ದಕ್ಕೂ ಇವೆ. ಇಂತಹ ಕಡೆಗಳಲ್ಲಿ ಸಂಪಾದಕರು - 'ಉತ್ತಮತರಂ ಅದುದೊಂದು' ಎಂದು, ಕಾರಣಂ ಉಚ್ಚರಿಸೆ ಎಂದು ತಿದ್ದಿಕೊಂಡಿದ್ದಾರೆ. ಇಂತಹ ತಿದ್ದುಪಡಿಯಿಂದ ಕಾವ್ಯದ ಉದ್ದಕ್ಕೂ ವಿಸಂಧಿದೋಷ ತುಂಬಿಹೋಗಿದೆ. ಕವಿಕೃತವಾದ ಒಂದು ದೋಷವನ್ನು ಪರಿಹರಿಸುವಲ್ಲಿ ಸಂಪಾದಕರಿಂದ ಮತ್ತೊಂದು ದೋಷ ಸೃಷ್ಟಿಯಾಗುವುದಾದಲ್ಲಿ ಕವಿಕೃತವಾದ ದೋಷವನ್ನು ಹಾಗೇ ಇಟ್ಟುಕೊಂಡು ಈ ವಿಷಯವನ್ನು ಪ್ರಸ್ತಾವನೆಯಲ್ಲಿ ಹೇಳಿಬಿಟ್ಟಿರುವುದೇ ಲೇಸು.

ಹಿಂದೆ ಹೇಳಿರುವಂತೆ, ಗ್ರಂಥಸಂಪಾದನೆಯಲ್ಲಿ ಅತಿಮುಖ್ಯವಾದುದು ಕವಿಯೇ ರಚಿಸಿರಬಹುದಾದ ಪಾಠದ ನಿರ್ಣಯ. ಪರಮದೇವ ಕವಿಗೆ ವಾರ್ಧಕಷಟ್ಪದಿಯ ರಚನೆ

ಸಿದ್ಧಿಸಿದೆ. ಆದುದರಿಂದ ಅವನ ರಚನೆಯಲ್ಲಿ ಛಂದೋದೋಷವಿರಲು ಸಾಧ್ಯವಿಲ್ಲ. ಛಂದೋದೋಷವೇನಾದರೂ ಆಗಿದ್ದರೆ ಅದು ಲಿಪಿಕಾರರಿಂದಾದುದು, ಇಲ್ಲವೆ ಗ್ರಂಥಪ್ರತಿಯನ್ನು ತಿದ್ದಿರಬಹುದಾದ ಅಪರಿಣತರ ಕೈಯಿಂದಾದುದು. ಅಂತಹ ಛಂದೋದೋಷವನ್ನು ನೀಗಿ ಮಾಡುವ ಗ್ರಂಥಪರಿಷ್ಕರಣೆ ಗ್ರಂಥಸಂಪಾದನ ನೈಪುಣ್ಯದ ಅಂಶ. ತುರಂಗಭಾರತದ ಮೊದಲ ಆವೃತ್ತಿಯಲ್ಲಿ ವಿಸಂಧಿದೋಷ ಛಂದೋದೋಷಗಳು ಇದ್ದರೂ ಈ ಎರಡನೆ ಆವೃತ್ತಿಯಲ್ಲಿ ಇದ್ದಷ್ಟಿಲ್ಲ. ಇದರಲ್ಲಿ ಸುಮಾರು ೫೦ ಪ್ರತಿಶತ ಪದ್ಯಗಳೂ ಛಂದಸ್ಸಿನಲ್ಲಿ ಮುಗ್ಗರಿಸಿವೆ. ಅಸಾಧುಪಾಠ ಸ್ವೀಕಾರ ಮತ್ತು ಛಂದೋಭಂಗಗಳು ಈ ಆವೃತ್ತಿಯನ್ನು ಕಳೆಗೆಡಿಸಿವೆ ಅಥವಾ ಕೊಲೆಮಾಡಿವೆ. ಇನ್ನೂ ಒಂದೆರಡು ಎದ್ದು ಕಾಣುವ ಸಂಪಾದನದೋಷವನ್ನು ಮುಚ್ಚಿಡುವುದು ಅಪಚಾರ ವಾಗುತ್ತದೆ. ಅವನ್ನಿಲ್ಲಿ ತೋರಿಸುತ್ತಿದ್ದೇನೆ :-

೧) ಕನ್ನಡದಲ್ಲಿ ಸಪ್ತಮೀ ಭಕ್ತಿ ಪ್ರತ್ಯಯಗಳಲ್ಲಿ 'ಒಳ್' ಎಂಬುದಿದೆ. 'ಓಳ್' ಎಂಬುದು ಅಸಾಧು. ಈ ತುರಂಗಭಾರತದ ಉದ್ದಕ್ಕೂ 'ಓಳ್' ಎಂಬ ದೀರ್ಘ ರೂಪವನ್ನೇ ಇಟ್ಟುಕೊಳ್ಳಲಾಗಿದೆ. -

ಇದರಿಂದಾಗಿ ಆಕಾರದೋಳ್, ಮನೆಯೋಳ್, ತವಕದೋಳ್ ಎಂಬ ಅಸಾಧುರೂಪಗಳನ್ನು ನಾವು ಕಾಣುತ್ತಿದ್ದೇವೆ.

೨) ಆಕರವನ್ನು ತಪ್ಪಾಗಿ ಕೊಟ್ಟಿರುವುದೂ ಉಂಟು ಉದಾ : ಸಂಧಿ : ೨, ಪದ್ಯ: ೩- ಇಲ್ಲಿ 'ಋ ಚಿ ಚ ಮು' ಎಂಬ ಅಶುದ್ಧ ಪದವನ್ನು ಸ್ವೀಕರಿಸಲಾಗಿದೆ. ಅಡಿಟಿಪ್ಪಣಿಯಲ್ಲಿ ಕಾಣಿಸಿರುವಂತೆ ಬೊಂಬಾಯಿ ಪ್ರತಿಯಲ್ಲಿ 'ರಾಯ' ಎಂಬುದು ಇದಕ್ಕೆ ಪಾಠಾಂತರ. ಹೀಗೆ ಇಲ್ಲಿ ಸ್ವೀಕೃತ ಪಾಠ ತಪ್ಪು. ಅಡಿಟಿಪ್ಪಣಿಯಲ್ಲಿ ಕೊಟ್ಟಿರುವುದೂ ತಪ್ಪು. ತುರಂಗ ಭಾರತದ ಬೊಂಬಾಯಿಯ ಪ್ರತಿ ನನ್ನಲ್ಲಿದೆ. ಅದರಲ್ಲಿ 'ರಾಯ' ಎಂಬ ಪಾಠಾಂತರವಿಲ್ಲ. ಶುದ್ಧಪಾಠವಾಗಿರುವ 'ಋ ಷಿ ಚ ಮು' ಎಂಬುದಿದೆ. ಇದನ್ನೆ ಪದ್ಯದಲ್ಲಿಡಬೇಕಾಗಿತ್ತು. ಬೇರೆ ಕಡೆ ಬೇರೆ ರೀತಿಯ ಇಂತಹ ತಪ್ಪುಗಳಿಗೆ ಉದಾಹರಣೆಗಳಿವೆ. ದಿಗ್ದರ್ಶನಕ್ಕೆ ಇಷ್ಟೇ ಸಾಕು.

೩) ಹೀಗೆ ಅಸಮರ್ಪಕ ಸಂಪಾದನದಿಂದಾದ ತಪ್ಪುಗಳಿಗೆ ಹೆಚ್ಚಳವನ್ನು ಉಂಟುಮಾಡಿರುವ ಅಚ್ಚಿನ ತಪ್ಪುಗಳ ಹಾವಳಿ ಈ ಕಾವ್ಯದಲ್ಲಂತೂ ಮಿತಿಮೀರಿದೆ !

'ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋ: ಕಿರಣೇಷ್ವಿವಾಂಕ:' ಎಂಬುದು ಕಾಳಿದಾಸನ ಕುಮಾರಸಂಭವ ಕಾವ್ಯದಲ್ಲಿ ಬಂದ ಮಾತು. ಅದರಂತೆ, ಎಲ್ಲೋ ಒಂದು ತಪ್ಪಿದ್ದರೆ, ಅದನ್ನೆ ದೊಡ್ಡದು ಮಾಡತಕ್ಕದ್ದಲ್ಲ. ಚಂದ್ರನ ಕಳಂಕ ಆತನ ಕಿರಣ ಸಮೂಹದಲ್ಲಿ ಮರೆಯಾಗುವಂತೆ, ಆ ತಪ್ಪು ಗುಣಸಮುಚ್ಚಯದಲ್ಲಿ ಮುಳುಗಿಹೋಗುವುದು. ಆದರೆ, ಒಂದು ಕೃತಿಯಲ್ಲಿ ದೋಷಗಳೇ ಹೆಚ್ಚಾಗಿದ್ದರೆ, ಇರುವ ಗುಣವು ಕೂಡ ಕಾಣಿಸದಂತಾಗುವುದಲ್ಲವೆ ? ಈ ಮಾತು ಈ ಗ್ರಂಥಕ್ಕೆ ಅನ್ವಯಿಸುವಂತಿದೆ. ಆದುದರಿಂದ ತುರಂಗಭಾರತದ ಈಗಣ ಮುದ್ರಿತ ಪ್ರತಿಗಳು ಬೇಗನೆ ಮುಗಿದು ಹೋಗಲಿ.' ಮೂರನೆ ಮುದ್ರಣ ದೋಷರಹಿತವಾಗಿ ಹೊರಬಂದು ಕಾವ್ಯರಸಿಕರು ಓದಿ, ಗಮಕಿಗಳಿಂದ ವಾಚನ ಮಾಡಿಸಿ, ನಲಿವಂತಾಗಲಿ'. ಎಂಬುದೇ ಈ ಸಮೀಕ್ಷೆಯ ಸಹೃದಯತೆಯ ಆಕಾಂಕ್ಷೆ. ☐

೩೧

ಕೊಡಗಿನ ಪ್ರಾಚೀನ ಮತ್ತು ಆಧುನಿಕ ಕವಿ - ಕಾವ್ಯ

ಪ್ರಸ್ತಾವನೆ :

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಈ ಸಾಹಿತ್ಯಗೋಷ್ಠಿಯಲ್ಲಿ ನನ್ನ ಈ ಉಪನ್ಯಾಸವನ್ನು ಸಹೃದಯರ ಮುಂದಿಡಲು ಸಂತೋಷಿಸುತ್ತೇನೆ. ಈ ಸಂತೋಷಕ್ಕೆ ಪ್ರೇರಕವಾದುವು ಮೂರು ಕಾರಣಗಳು - ಮೊದಲನೆಯದಾಗಿ, ಈ ಕೊಡಗಿನಲ್ಲಿ ೧೯೫೧ರಿಂದ ೧೯೬೦ ರ ತನಕ ನಾನು ಕನ್ನಡ ಅಧ್ಯಾಪಕನಾಗಿ ಸೇವೆ ಸಲ್ಲಿಸಿದ್ದೇನೆ. ಇದರಿಂದ ಕೊಡಗಿನವನಾಗಿದ್ದೇನೆ. ಎರಡನೆಯದಾಗಿ, ನಾನು ಇಲ್ಲಿದ್ದಾಗ ರಚಿಸಿ ಪ್ರಕಟಿಸಿದ 'ಸತ್ತ್ವಾಲೋಕನಂ' ಎಂಬ ಹಳಗನ್ನಡದ ಹೊಸ ಚಂಪೂ ಕಾವ್ಯವು ೧೯೬೦ರಲ್ಲಿ ರಾಜ್ಯ ಬಹುಮಾನಗಳಿಸಿದೆ. ಈ ರಚನೆಯಿಂದ ಕೊಡಗಿನ ಕವಿಪಂಕ್ತಿಯಲ್ಲಿ ಚಿಕ್ಕದೊಂದು ಮಣೆ ನನಗೆ ದೊರಕಿದೆಯೆಂದು ವಿನಯದಿಂದ ತಿಳಿಸಬಯಸುತ್ತೇನೆ. ಇನ್ನು ಮೂರನೆಯದಾಗಿ, ಕೊಡಗಿನ ಪ್ರಾಚೀನ ಕಾಲದ ಓರ್ವ ಕವಿಯ ಒಂದು ಕಾವ್ಯ ಅಜ್ಞಾತವಾಗಿದ್ದುದು ನನ್ನಿಂದ ಸಂಪಾದಿತವಾಗಿ, ಭಾರತೀಯ ಜ್ಞಾನಪೀಠದ ಮೂಲಕ ಪ್ರಕಾಶಿತವಾಗಿ, ಕೊಡಗಿನ ಭಾವುಕರು ಈಗಂತೂ ಇದರಿಂದಾಗಿ ಇನ್ನಷ್ಟು ಆತ್ಮಗೌರವ ತಾಳಲು ಅವಕಾಶವಾಗಿದೆ - ಎಂಬುದನ್ನು ನನಗೆ ಬಹಿರಂಗ ಪಡಿಸಲು ಸಾಧ್ಯವಾಗಿದೆ. ಆದುದರಿಂದ ತಾವೆಲ್ಲ, ಅವಧಾನಚಿತ್ತರಾಗಿ ಕಿವಿಗೊಡಬೇಕಾಗಿ ಕೋರುತ್ತೇನೆ-

ಪ್ರಾರಂಭದಲ್ಲಿ ಈ ಉಪನ್ಯಾಸ ವಿಷಯದ ವ್ಯಾಪ್ತಿಯನ್ನು ಕುರಿತು ಸ್ವಲ್ಪ ವಿವರ ಅವಶ್ಯ. 'ಕೊಡಗಿನ' ಎಂಬ ಪ್ರಾದೇಶಿಕ ಮಿತಿಗೆ ವ್ಯಾಖ್ಯೆ ಬೇಕಾದೀತು. ಕವಿ ಕೊಡಗು ಮೂಲದವನಾಗಬೇಕೆ? ಅಂದರೆ, ಆತ ಕೊಡಗಿನಲ್ಲೇ ಹುಟ್ಟಿ ಬೆಳೆದು, ಕೊಡಗಿನಲ್ಲೇ ಕಾವ್ಯ ಬರೆದು, ತನ್ನ ಜೀವಮಾನವನ್ನು ಈ ಮಣ್ಣಿನಲ್ಲೇ ಸವೆಯಿಸಿದವನಾಗಬೇಕೆ ? ಎಂಬುದು ಮೊದಲ ವಿಷಯ. ವ್ಯಾಪ್ತಿಯನ್ನು ಹೀಗೆ ಸೀಮಿತಗೊಳಿಸುವುದರಿಂದ ಪವಿತ್ರ ಕಾವೇರೀ ಭೂಮಿಯ ವಿಶಾಲ ಸಂಸ್ಕೃತಿಯನ್ನೂ ಇಲ್ಲಿಯ ಕವಿಗಳನ್ನೂ ಅವರ ಕೃತಿಗಳನ್ನೂ ಇಲ್ಲಿಯವರೇ ಆದ ನಾವು ಅಮಾನ್ಯ ಮಾಡಿದ ಅಪರಾಧಕ್ಕೆ ಪಕ್ಕಾಗುವೆವು. ಈಚೆಗೆ, ಬೆಂಗಳೂರು ವಿಶ್ವವಿದ್ಯಾಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಎಂಬ ಗ್ರಂಥ ಸಂಪುಟಕ್ಕೆ 'ಕನ್ನಡಿಗರ ಅನ್ಯಭಾಷಾ ಕೃತಿಗಳು' ಎಂಬ ಲೇಖನವನ್ನು ನಾನು ಬರೆಯುವಾಗ ಅದರ ವ್ಯಾಪ್ತಿ ವಿಷಯವಾಗಿ ಬಂದ ಸಮಸ್ಯೆಯೇ ನನಗಿಲ್ಲಿಯೂ ಬಂದಿದೆ. ಅಲ್ಲಿ ಕನ್ನಡಿಗರು ಯಾರು ಎಂಬುದನ್ನು ಮೊದಲು

ನಿರ್ಣಯಿಸಬೇಕಾಯಿತು. ಕನ್ನಡ ಬಲ್ಲವ, ಕನ್ನಡದ ನೆಲದಲ್ಲಿ ಹುಟ್ಟಿದವ, ಉದ್ಯೋಗ ನಡೆಸಿದವ, ವಾಸ ಮಾಡಿದವ, ಆಸರೆ ಪಡೆದವ - ಕನ್ನಡಿಗನಾಗುತ್ತಾನೆ. 'ಇಗ' ಪ್ರತ್ಯಯಕ್ಕೆ ಈ ಅರ್ಥವ್ಯಾಪ್ತಿಯಿದೆ. ಹಾಗೆಯೇ ಕೊಡಗಿನಲ್ಲಿ ಪರಂಪರೆವಿಡಿದು, ತಮ್ಮದೇ ನೆಲದ ಭಾಷೆ, ಜಾತಿ, ಕಟ್ಟುಕಟ್ಟಳೆಗಳನ್ನು ಅನುಸರಿಸುವವರು ಕೊಡಗರು ಅಥವಾ ಕೊಡವರು ಎನಿಸಿದ್ದಾರೆ. ವೃತ್ತಿನಿಮಿತ್ತ ಕೆಲವೇ ಸಮಯವಾದರೂ ಆಗಲಿ, ಆಶ್ರಯ ಪಡೆದವರಾದ ನನ್ನಂಥವರೂ ಕೊಡಗಿನವರು ಅಥವಾ ಕೊಡಗಿಗರು ಎನಿಸುತ್ತೇವೆ. ದಿ. ಪಂಜೆಯವರು, ಎಂ. ಎಸ್. ಅನಂತಪದ್ಮನಾಭ ರಾಯರು, ಎ.ಎಸ್. ರಾಮಕೃಷ್ಣ, ಸಿದ್ಧಯ್ಯ ಪುರಾಣಿಕರು - ಈ ಬಗೆಯವರೆಲ್ಲ ಕೊಡಗಿಗರು. ಇಂಥವರ ಕಾವ್ಯ ರಚನೆ 'ಕೊಡಗಿನ' ಎಂಬ ಸಂದರ್ಭವಾಚಕಕ್ಕೆ ಅರ್ಹವಾಗುತ್ತದೆ - ಎಂದಿಲ್ಲಿ ಲಕ್ಷಿಸಲಾಗಿದೆ.

ಕವಿ, ಕಾವ್ಯ ಎಂಬ ವಿಷಯದಲ್ಲಿಯೂ ವ್ಯಾಪ್ತಿಯನ್ನು ನಿರ್ಣಯಿಸಬೇಕಾಗುತ್ತದೆ. 'ಪ್ರಾಚೀನ ಕವಿ-ಕಾವ್ಯ' ಎಂದಾಗ ಒಂದು ನಿರ್ದಿಷ್ಟ ಕಲ್ಪನೆ ಯಾರಿಗೂ ಬರುತ್ತದೆ. ಲಕ್ಷಣಬದ್ಧವಾಗಿ ಸತ್ಕಾವ್ಯ-ಮಹಾಕಾವ್ಯಗಳನ್ನು ರಚಿಸಿದವರು ಮಾತ್ರ ಹಿಂದೆ ಕವಿಗಳೆನಿಸುತ್ತಿದ್ದರು. ಇಂದು ಹಾಗಲ್ಲ, ಕೆಲವು ಪದ್ಯದ ತುಣುಕುಗಳನ್ನು-ಅವು ಸಂಬದ್ಧವಿರಲಿ, ಅಸಂಬದ್ಧವಿರಲಿ, ಗೀಚಿದವರೂ ಕವಿಗಳೇ! ಅವರ ರಚನೆಗಳೂ ಕಾವ್ಯಗಳೇ. 'ಕಾವ್ಯ' ಎನಿಸಬೇಕಾದರೆ ವಸ್ತು, ಪಾತ್ರ, ರಸ, ವರ್ಣನೆ, ಅಲಂಕಾರ, ಛಂದೋವ್ಯಾಕರಣ ನಿಯಮ, ಜೀವನಮೌಲ್ಯ ಸಂದೇಶ-ಇವನ್ನೆಲ್ಲ ಉಳ್ಳ ಬೃಹದ್ರಚನೆಯಾಗಬೇಕು-ಎಂಬೀ ದೃಷ್ಟಿ ಪ್ರಾಚೀನ ಕವಿಗಳಿಗೆ ಮಾತ್ರ ಸಲ್ಲುವ ಹಾಗೆ ಕಾಣುತ್ತದೆ. ಇಂದಿನವರಲ್ಲಿ ಅನೇಕರು ಈ ಕಾವ್ಯಲಕ್ಷಣಗಳಲ್ಲಿ ಯಾವುದೋ ಒಂದನ್ನೋ ಎರಡನ್ನೋ ಇಟ್ಟುಕೊಂಡು ಕೃತಿರಚನೆ ಮಾಡಿದ್ದಾರೆ, ಮಾಡುತ್ತಿದ್ದಾರೆ. ಸರ್ವಾಂಗಪೂರ್ಣವಲ್ಲದ ಅವನ್ನು 'ಕಾವ್ಯ' ಎಂದೇ ಕರೆಯುತ್ತಾರೆ. ಇದು ಸರಿಯೇ? ತಪ್ಪೇ? ನಿರ್ಧಾರವಾಗಿಲ್ಲ. ಪ್ರಾಚೀನರು ಇಂಥವನ್ನು 'ಅಭ್ಯಾಸ ಕವಿತೆಗಳು' ಎಂದು ಕರೆಯುತ್ತಿದ್ದರು. ಇವು ಅಂದು ಸಮಾಜದ ಮನ್ನಣೆಗೆ ಪಾತ್ರವಾಗಲಿಲ್ಲ. ಅವುಗಳಲ್ಲಿಯೂ ಭಾವರಸ ಸ್ಯಂದಿಯಾಗಿ ಜೀವನಚಿತ್ರಣವುಳ್ಳವು, ಮನಮುಟ್ಟುವಂಥವು, ಕವಿನಾಮವಿಲ್ಲದವು 'ಜಾನಪದ'ವೆನಿಸಿದವು. ಅವು ಗ್ರಂಥಸ್ಥವಾಗದೆ, ಬಾಯಿಂದ ಬಾಯಿಗೆ ಹರಿದು, ಮಾರ್ಪಾಟುಗಳನ್ನು ಯಥೇಚ್ಛವಾಗಿ ಪಡೆದು ಪ್ರಚಲಿತವಾಗಿ ಇರುತ್ತಿದ್ದವು. ಇಂದಾದರೆ, ಮುದ್ರಣ ಸೌಕರ್ಯವಿರುವುದರಿಂದ ಹಣವೊಂದಿದ್ದರೆ ಯಾವ ಕೃತಿಯನ್ನೂ ಎಷ್ಟು ಸಾವಿರ ಸಂಖ್ಯೆಯಲ್ಲಿಯೂ ಹೊರತರಬಹುದು. ಹೀಗೆ ಅತಿಪ್ರಸರಣ ಪಾತ್ರತೆಯಿಂದ ಕೃತಿಗಳ ಕರ್ತೃವಿಗೆ ಹಿರಿಮೆಯೂ ಜನಪ್ರಿಯತೆಯೂ ಬರಬಹುದು. ಆದುದರಿಂದಲೇ ಇಂದು ತುಂಡು ಗವಿತೆ ಬರೆದವರೂ ಕವಿಪಟ್ಟವೇರುತ್ತಾರೆ. ಅವರ ಕವನಗಳಲ್ಲಿ ಒಂದೊಂದನ್ನೂ 'ಕಾವ್ಯ' ಎಂದೇ ಹೇಳತೊಡಗಿದ್ದರಿಂದ ಇಂದು 'ಕಾವ್ಯಾಭಾಸ'ವೇ ಹೆಚ್ಚಾಗಿದೆ. ಆದರೇನು ಮಾಡೋಣ? 'ಕಾವ್ಯ' ಎಂದು ನಾಮಕರಣಮಾಡಿ ಮುದ್ರಿಸಿ ಹೊರಗೆ ತಂದಾಗ 'ಅದು ಕಾವ್ಯವಲ್ಲ' ಎಂದು ಯಾರಾದರೂ ಹೇಳಿದರೆ, ಹಾಗ ಹೇಳುವುದನ್ನು ಅಪಸ್ವರವೆನ್ನಬಹುದು, ಅಸೂಯೆಯೆನ್ನಬಹುದು. ಹಾಗೆ ಹೇಳುವುದು ಮೂಗುಹರಕನಿಗೆ ಕನ್ನಡಿ ತೋರಿಸಿ ಬಯ್ಯಿಸಿಕೊಳ್ಳುವ ಕೆಲಸವಾಗಬಹುದು. ಆದರೂ ಮನಸ್ಸಿಗೆ ಕಂಡ ವಾಸ್ತವವನ್ನು ಹೇಳದಿರುವುದು ಆತ್ಮದ್ರೋಹವಾಗದಿರದು.

‘ಆಧುನಿಕ ಕವಿ ಕಾವ್ಯ’ ವಿಚಾರದಲ್ಲಿ ಇತ್ತೀಚೆಯ ಕವನಗಳು, ಭಾವಗೀತಗಳು ಕೂಡ ಲಕ್ಷ್ಯಾರ್ಹವಾಗಿ ಪರಿಗಣಿಸುವುದೇ ಇಂದಿಗೆ ಉಚಿತವಾಗುತ್ತದೆ. ಅದಲ್ಲವಾದರೆ, ಕಾವ್ಯಕ್ಷೇತ್ರವೆಂಬುದೇ ಇಂದು ಬರಡೆಂದು ಹೇಳಿಕೊಂಡು ನಾವು ಮೊಗ ತಗ್ಗಿಸಬೇಕಾಗುತ್ತದೆ. ಇಂದು ಗದ್ಯಸಾಹಿತ್ಯ ಸಮೃದ್ಧವಾಗಿದೆ. ಕಾದಂಬರಿ, ಕಥೆ, ಪ್ರಬಂಧ, ವಿಮರ್ಶೆ, ಪತ್ರಿಕಾರಂಗ ಮುಂತಾದ ರೂಪದಲ್ಲಿ ಗದ್ಯ ಮೆರೆಯುತ್ತಿದೆ. ಅಂತಹ ಗದ್ಯ ಲೇಖಕರನ್ನು ಈ ನನ್ನ ಪ್ರಬಂಧ ಕವಿಪಂಕ್ತಿಯಲ್ಲಿ ಇಟ್ಟಿಲ್ಲ. ಅವರ ಗದ್ಯರಚನೆಗಳನ್ನು ಕಾವ್ಯವೆಂದು ಪರಿಗಣಿಸಿಲ್ಲ. ಬರಿಯ ಏನೇನೋ ಅಭ್ಯಾಸಗವಿತೆಗಳನ್ನು ನುಡಿತುಣುಕುಗಳನ್ನು ಕಾವ್ಯವೆನ್ನುವಾಗ ಅವನ್ನು ಬರೆದವರನ್ನು ‘ಕವಿಗಳು’ ಎನ್ನುವಾಗ ಕಥೆ, ಲೇಖನ, ಒಳ್ಳೆಯ ಸಂಪಾದಕೀಯಗಳನ್ನು ಕಾವ್ಯವೆಂದರೆ, ಅವುಗಳ ಕರ್ತೃಗಳನ್ನು ಕವಿ, ಮಹಾಕವಿ ಎಂದರೇನು ದೋಷ? ಹೀಗಿದ್ದರೂ ಪ್ರಕೃತ ಉಪನ್ಯಾಸದಲ್ಲಿ ಕಾವ್ಯಪಟ್ಟ ಕವಿಪಟ್ಟಗಳನ್ನು ಪದ್ಯ ಕವಿತೆ ಹಾಗೂ ಅವುಗಳ ಕರ್ತೃಗಳಿಗೆ ಸೀಮಿತಗೊಳಿಸಲಾಗಿದೆ.

ನಾನು ಈ ಜಿಲ್ಲೆಯಲ್ಲಿದ್ದುದು ೧೯೫೧ರಿಂದ ೧೯೬೦ರ ವರೆಗೆ. ಆದರಿಂದೀಚೆ ಅದೆಷ್ಟು ಮಂದಿ ಕವಿಗಳು ಈ ಕೊಡಗಿನಲ್ಲಿ ಕಾಣಿಸಿಕೊಂಡರೋ ಅವರ ರಚನೆಗಳು ಏನೇನಿವೆಯೋ ಇವನ್ನು ಕೂಲಂಕಷವಾಗಿ ಪರಿಶೀಲಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಈ ಉಪನ್ಯಾಸದಲ್ಲಿ ಅಂತಹದೇನಾದರೂ ಬಿಟ್ಟುಹೋಗಿದ್ದರೆ, ಸಹೃದಯರು ಮನ್ನಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಕೊಡಗು ಪ್ರಮುಖವಾಗಿ ದ್ವಿಭಾಷಾಭಾಷಪ್ರದೇಶ. ಇಲ್ಲಿಯ ಜನಭಾಷೆ, ಜಾನಪದಭಾಷೆ ಕೊಡಗು. ಇಲ್ಲಿ ಕನ್ನಡ ರಾಜಭಾಷೆ, ಸಾಹಿತ್ಯಾಧ್ಯಯನ ಭಾಷೆ. ಕೊಡಗು ಭಾಷೆಯಲ್ಲಿ ವಿಶೇಷವಾದ ಜಾನಪದ ಗೀತಸಂಪತ್ತಿದೆ. ಈ ಭಾಷೆಯಲ್ಲಿ ನಾಟಕಗಳೂ ರಚಿತವಾಗಿವೆ. ೧೮೬೨ ರಿಂದ ೧೯೪೪ರ ವರೆಗೆ ಜೀವಿಸಿದ್ದ ಹರದಾಸ ಅಪ್ಪಚ್ಚಕವಿ ಇಲ್ಲಿ ಸ್ಮರಣೀಯ ವ್ಯಕ್ತಿ. ಅವರು ಕನ್ನಡದಲ್ಲಿ ಕಂದ-ವೃತ್ತ ರಚನೆಗಳನ್ನೂ ಹಾಡುಗಳನ್ನೂ ರಚಿಸುವ ಮೂಲಕ ಸಾಹಿತ್ಯಸೇವೆಯನ್ನು ಪ್ರಾರಂಭಿಸಿದರು. ಅನಂತರ ಇಲ್ಲಿಯ ಜನತೆಯ ಹೃದಯಕ್ಕೆ ಸಮೀಪವೆನಿಸುವ ಕೊಡಗುಭಾಷೆಯಲ್ಲಿ ಹಲವು ನಾಟಕಗಳನ್ನು ಬರೆದಿದ್ದಾರೆ. ಕೊಡಗು ಭಾಷೆಯಲ್ಲಿ ಹುತ್ತರಿ, ಕೈಲ್ಮೂರ್ತ ಮುಂತಾದ ಹಬ್ಬದ ವಿಷಯಕ್ಕೂ ಜನಜೀವನಕ್ಕೂ ಸಂಬಂಧಿಸಿದ ಜನಪದಗೀತಗಳು ವಿಪುಲವಾಗಿಯೇ ಇವೆ. ಅವುಗಳ ಪರಿಶೀಲನೆ ಈ ಉಪನ್ಯಾಸಕ್ಕೆ ಅವಿಷಯವಾದುದರಿಂದ ಹೆಚ್ಚೇನೂ ಪ್ರಸ್ತಾವಿಸಲಾರೆನು. ಕನ್ನಡ ಕವಿ-ಕಾವ್ಯವಿಚಾರ ನೋಡೋಣ. ಕಾಲಖಂಡವನ್ನನುಸರಿಸಿ ಈ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಇತ್ತಣ ಕಾಲವನ್ನು ಇಲ್ಲಿ ಆಧುನಿಕವೆಂದೂ ಅತ್ತಣ ಕಾಲವನ್ನು ಪ್ರಾಚೀನವೆಂದೂ ಇಲ್ಲಿ ಪರಿಗಣಿಸಲಾಗಿದೆ.

ಕೊಡಗು ಕಾಡು ಬೆಟ್ಟಗಳ ನಾಡು. ಮಳೆ ಚಳಿ ಇಲ್ಲಿ ಹೆಚ್ಚು. ಸಂಚಾರಕ್ಕೆ ಅಡಚಣೆಯಾಗುತ್ತಿದ್ದ ಪ್ರದೇಶ. ಇಂತಹ ಕಡೆ ಪ್ರಾಚೀನ ಕಾಲದಲ್ಲಿಯೂ ಕವಿಗಳಿದ್ದರೆ? ಅವರು ಕನ್ನಡದಲ್ಲಿ ಕಾವ್ಯರಚನೆ ಮಾಡಿದ್ದರೆ? ಎಂಬ ಪ್ರಶ್ನೆ ಸಹಜ. ಕನ್ನಡನಾಡಿನ ಇತರ ಕಡೆಗಳಲ್ಲಿ ಇದ್ದಷ್ಟು ಬಹುಸಂಖ್ಯೆಯ ಕವಿಗಳಾಗಲೀ ಕಾವ್ಯಗಳಾಗಲೀ ಈ ಪುಟ್ಟ ಸೀಮೆಯಲ್ಲಿ ಇರಲಿಲ್ಲ. ಆದರೂ ಕನ್ನಡಿಗರಾದ ನಾವು ಅಭಿಮಾನಪಡುವಷ್ಟು ಮಟ್ಟಿಗೆ ಕವಿ-ಕಾವ್ಯವಿಚಾರವುಳ್ಳ ಕೊಡಗು ನಾಡಿನ

ಕನ್ನಡಸಾಹಿತ್ಯಚರಿತ್ರೆ ಇದ್ದೇ ಇದೆ. ಸುಮಾರು ಐದನೆಯ ಶತಮಾನದಿಂದಲೇ ಕೊಡಗಿನ ಶಾಸನಗಳು ಸಿಕ್ಕಿವೆ. ನೂರ ಆರು ಶಾಸನಗಳು ಉಪಲಬ್ಧವಿರುವುದಾಗಿ ತಿಳಿದುಬಂದಿವೆ. ಆದರೆ ಇವು ವರ್ಣಿಸಬಹುದಾದ ಕವಿಗಳಿಂದ ರಚಿತವಾದುವಾಗಿ ತಿಳಿದುಬರುವುದಿಲ್ಲ. ಇನ್ನು ಗ್ರಂಥಕರ್ತೃ ಕವಿಗಳ ವಿಚಾರವನ್ನು ನೋಡೋಣ.

ಕೊಂಗುನಾಡು ಎನಿಸಿದ್ದ ಈ ಕೊಡಗು, ಪ್ರಾಚೀನ ಕಾಲದಲ್ಲಿ ಗಂಗರಾಜರ ಅಧೀನವಾಗಿತ್ತು. ಗಂಗರಾಜ ಎರೆಯಪ್ಪನ ಆಶ್ರಯದಲ್ಲಿ ಒಂದನೆಯ ಗುಣವರ್ಮನು ಹರಿವಂಶ ಮತ್ತು ಶೂದ್ರಕ ಎಂಬೆರಡು ಕಾವ್ಯಗಳ ಕರ್ತೃ. ಆ ಎರಡೂ ಉಪಲಬ್ಧವಿಲ್ಲ. ಅವನ 'ಶೂದ್ರಕ'ದಿಂದ ಆರಿಸಿದ ಕೆಲವು ಪದ್ಯಗಳು ಕಾವ್ಯಸಾರದಲ್ಲಿಯೂ, ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿಯೂ ದೊರೆಯುತ್ತವೆ. ಈ ಗುಣವರ್ಮನು (ಕಾಲ ಕ್ರಿ.ಶ. ೯೦೦) ಕೊಡಗಿನ ಪ್ರಾಚೀನ ಕವಿಗಳಲ್ಲಿ ಒಬ್ಬನು ಎಂದು ಅಭಿಮಾನದಿಂದ ಕೆಲವರು ಹೇಳುತ್ತಾರೆ. ಒಂದನೆಯ ನಾಗವರ್ಮನು ಕೊಡಗಿನ ಕವಿ ಎಂದೂ ಹೇಳಿಕೆಯಿದೆ. ಇವನು ಛಂದೋಂಬುಧಿ ಮತ್ತು ಕರ್ಣಾಟಕ ಕಾದಂಬರಿ ಚಂಪುವಿನ ಕರ್ತೃ. ಇವನ ಕಾಲ ಕ್ರಿ.ಶ. ೯೦೦. ರಕ್ಕಸಗಂಗನು (೮೮೬-೯೧೩) ತನ್ನ ಆಶ್ರಯದಾತನೆಂದು ಇವನು ಹೇಳಿಕೊಂಡಿದ್ದಾನೆ. ಈ ರಕ್ಕಸ ಗಂಗನ ಉಲ್ಲೇಖವುಳ್ಳ ಒಂದು ಶಾಸನ ಕೊಡಗಿನಲ್ಲಿ ಸಿಕ್ಕಿದೆ. ಇಷ್ಟುಮಾತ್ರದಿಂದ ಈ ಕವಿ ಕೊಡಗಿನಲ್ಲಿ ಇದ್ದವನೆನ್ನುವುದು ಸರಿಗಾಣದು. ನಾಗವರ್ಮನೇ ತನ್ನ ಛಂದೋಂಬುಧಿಯಲ್ಲಿ ತನ್ನ ಸ್ಥಳವನ್ನು ಹೇಳಿದ್ದಾನೆ. ಅಂದು ವೆಂಗಿನಾಡಿನ ವೆಂಗಿಪಳು. ಅದು ಈಗಿನ ಆಂಧ್ರದಲ್ಲಿದೆ. ಆದುದರಿಂದ ನಾಗವರ್ಮನನ್ನು ಕೊಡಗಿನ ಕವಿಯೆನ್ನುವ ನಿರ್ಣಯ ದುರ್ಬಲವಾಗಿ ತೋರುತ್ತದೆ. ಚಂದ್ರನಾಥಾಷ್ಟಕವನ್ನು ಬರೆದ ಮೌಕ್ತಿಕ ಕವಿ (ಕ್ರಿ.ಶ. ೧೧೨೦) ವೆಣ್ಣಂಗಡಲಿನವನು. ಈ ಸ್ಥಳ ಕೊಂಗಾಳ್ವನೆಂಬ ರಾಜನಿಗೆ ಸೇರಿದುದು. ಆದುದರಿಂದ ಇವನು ಕೊಡಗಿನ ಓರ್ವ ಪ್ರಾಚೀನ ಕವಿ ಎಂದು ವಿದ್ವಾಂಸರು ಸಾಧಿಸಿದ್ದಾರೆ. ಕ್ರಿ.ಶ. ಹದಿನಾರನೆಯ ಶತಮಾನದ ಚೆಂಗಾಳ್ವರ ಆಳಿಕೆಯ ಕಾಲದ ಕವಿಗಳನ್ನು ಕೊಡಗಿನವರೆಂದು ಹೇಳಬಹುದು.

ಕೊಡಗನ್ನಾಳಿದ ಅರಸುಮನೆತನಗಳಲ್ಲಿ ಚೆಂಗಾಳ್ವರ ಸ್ಥಾನ ಮಹತ್ತ್ವಪೂರ್ಣವಾದುದು. ಇವರು ಕ್ರಿ.ಶ. ಹತ್ತನೆಯ ಶತಮಾನದಿಂದ ಹದಿನಾರನೆಯ ಶತಮಾನದ ವರೆಗೆ ಮೈಸೂರು ಜಿಲ್ಲೆಯ ಪಶ್ಚಿಮ ಭಾಗವನ್ನೂ ಈ ಕೊಡಗು ಸೀಮೆಯನ್ನೂ ಆಳಿದ್ದಾರೆ. ಈ ರಾಜವಂಶದವರು ಮೊದಲು ಜೈನರಾಗಿದ್ದು ಆ ಮೇಲೆ ವೀರಶೈವರಾದರು. ಇವರು ವಿದ್ಯಾಭಿಮಾನಿಗಳು, ಮತಸಹಿಷ್ಣುಗಳು, ಮಹಾದಾನಿಗಳು ಮತ್ತು ಕಾವ್ಯ ಕವಿಪೋಷಕರು. ಹುಣಸೂರು ಶಾಸನಗಳ ಪ್ರಕಾರ, ಚೆಂಗಾಳ್ವರು ಚಂದ್ರವಂಶದ ಯಾದವರು; ಶ್ರೀಕೃಷ್ಣನ ವಂಶಜರು. ದ್ವಾರಾವತಿಯನ್ನಾಳಿದ ಚೆಂಗಾಳ್ವನೆಂಬವನಿಂದ ಇವರ ಕುಲಕ್ಕೆ ಈ ಹೆಸರು ಬಂತು. ಚೆಂಗಾಳ್ವರಾಳಿದ ನಾಡು ಚೆಂಗನಾಡೆನಿಸಿತು. ಅದು ಈಗಿನ ಹುಣಸೂರು ತಾಲೂಕಿಗೆ ಸೇರಿದ ಪ್ರದೇಶವೆಂದು ತಿಳಿದುಬಂದಿದೆ. ೧೨೪೫ ರಿಂದ ಈ ಚೆಂಗಾಳ್ವರ ರಾಜದಾನಿ ಕೊಡಗು ಜಿಲ್ಲೆಯ ಸಿದ್ಧಾಪುರದ ಸಮೀಪವಿರುವ ಶ್ರೀರಂಗಪಟ್ಟಣವಾಗಿತ್ತು; ಪಿರಿಯರಾಜನೆಂಬ ಚೆಂಗಾಳ್ವರಸನಿಂದ ಅದು 'ಪಿರಿಯಪಟ್ಟಣವೆನಿಸಿತು. ಇದೇ ವಂಶದಲ್ಲಿ ಬಂದ ನಂಜರಾಜನು ಕೊಡಗಿನಲ್ಲಿ 'ನಂಜರಾಜ ಪಟ್ಟಣ'ವೆಂಬ ರಾಜಧಾನಿಯನ್ನು ನಿರ್ಮಿಸಿ ಅಲ್ಲಿದ್ದು ೧೫೦೨ ರಿಂದ ೧೫೩೩ರ ವರೆಗೆ

ರಾಜ್ಯವಾಳಿದನು. ಈ ನಂಜರಾಜನ ಮಗ ನಂಜುಂಡರಾಜ. ಈ ಚೆಂಗಾಳ್ವರ ಸಚಿವರು ಉತ್ತಮ ಕವಿಗಳಾಗಿದ್ದರು. ಈ ಸಚಿವರಲ್ಲಿ ಎರಡು ಶಾಖೆಗಳು ಕಂಡುಬಂದಿವೆ. ಒಂದು ಶಾಖೆಯಲ್ಲಿ ಬಂದಿರುವ ವಿಜಯ ಭೂಪಾಲನು ವಿಷ್ಣುಭಕ್ತ. ಅವನ ಮಗ ಮೂರನೆಯ ಮಂಗರಸ ಕವಿ, ಜೈನನು. ಈತನು ಚೆಂಗಾಳ್ವರಾಜ ವಂಶದ ವಿವಾಹಸಂಬಂಧವನ್ನೂ ಪಡೆದು, ಮಂತ್ರಿಯೂ ಆಗಿ ಧಾತುಪುರದ ಅಧಿಪನಾಗಿದ್ದನು. ಧಾತುಪುರ ಎಂಬುದು ಈಗಿನ ಕಲ್ಲಹಳ್ಳಿ. ಈ ಗ್ರಾಮ ಹುಣಸೂರು ತಾಲೂಕಿನ ಚಿಲುಕುಂದ ಹೋಬಳಿಯಲ್ಲಿರುವುದಾಗಿ ತಿಳಿದುಬರುತ್ತದೆ. ಇವನು ಶ್ರೇಷ್ಠಕವಿಯಾಗಿ ಹಲವು ಕಾವ್ಯಗಳನ್ನು ರಚಿಸಿದ್ದಾನೆ.

ಇದೇ ಮಂಗರಸಕವಿಯ ಸೋದರನು 'ಮಾಧವ' ಎಂಬವನು. ಮಾಧವನ ಮಗ ನಂಜುಂಡ ಕವಿ ವೀರಶೈವನು. ಪರದಾರ ಸೋದರ 'ರಾಮನಾಥಚರಿತ' ಎಂಬ ಸಾಂಗತ್ಯಕೃತಿಯನ್ನು ಇವನು ರಚಿಸಿದ್ದಾನೆ. ಧಾರ್ಮಿಕ ಸಹಿಷ್ಣುತೆಗೆ ಹೆಸರಾದ ಸತ್ಕುಲ ಚೆಂಗಾಳ್ವರದು ಹಾಗೂ ಅವರ ಸಚಿವರದೆಂದು ಇದರಿಂದ ವಿದಿತವಾಗುತ್ತದೆ. ಮೂರನೆಯ ಮಂಗರಸನು ಬರೆದ ಕೃತಿಗಳಿವು -

೧. ಸೂಪಶಾಸ್ತ್ರ	ವಾರ್ಧಕಷಟ್ಪದಿ	೪೫೦ ಪದ್ಯಗಳು
೨. ಸಮ್ಯಕ್ತ್ವಕೌಮುದಿ	ವಾರ್ಧಕಷಟ್ಪದಿ	೭೮೩ ಪದ್ಯ
೩. ಜಯನೃಪಕಾವ್ಯ	ಪರಿವರ್ಧಿನಿಷಟ್ಪದಿ (೧೬ ಸಂಧಿ)	೧,೧೪೫ ಪದ್ಯಗಳು
೪. ಪ್ರಭಂಜನಚರಿತೆ	ಸಾಂಗತ್ಯ	೬೦೬ ಪದ್ಯ
೫. ಶ್ರೀಪಾಲಚರಿತ	ಸಾಂಗತ್ಯ (೧೪ ಸಂಧಿ)	೧,೫೨೭ ಪದ್ಯ
೬. ನೇಮಿಜಿನೇಶ ಸಂಗತಿ (ಹರಿವಂಶ)	ಸಾಂಗತ್ಯ	೫,೮೩೫ ಪದ್ಯಗಳು

'ಸೂಪಶಾಸ್ತ್ರ' ಅಡಿಗೆಯ ವಿಧಾನವನ್ನು ಪದ್ಯರೂಪದಲ್ಲಿ ತಿಳಿಸುವ ಶಾಸ್ತ್ರಗ್ರಂಥ. 'ಸೂಪ' ಎಂದರೆ ತೊವ್ವೆ ಅಥವಾ ಸಾರು. 'ಸಾರು' ಎಂಬುದಿಲ್ಲಿ ವ್ಯಾಪಕಾರ್ಥವಾಗಿ ಪಲ್ಯ, ಹುಳಿ, ಮೇಲೋಗರ ಮುಂತಾದ ವಿವಿಧ ಶಾಕಪಾಕಗಳನ್ನು ಪ್ರತಿನಿಧಿಸುತ್ತದೆ. ಈ ಶಾಸ್ತ್ರಗ್ರಂಥದ ಹಿರಿಮೆಯನ್ನು ಕವಿ ಹೀಗೆ ಕೊಂಡಾಡಿದ್ದಾನೆ -

ರಸದಾಳಿಯಂತೆ ರಮಣಿಯರ ಚೆಂದುಟಿಯಂತೆ
ಪೊಸ ಜೇನ ಕೊಡದಂತೆ ಪೊಣ್ಮುವೆಳಜವ್ವನೆಯ
ರೊಸೆದೀವ ತಾಂಬೂಲದಂತೆ ಕಾದಿಳಿಪಿಯಾರಿದ ಬಟ್ಟವಾಲಿನಂತೆ
ಅಸಿಯಳೊಡನಾಟದಂತರಮಾವಿನಿನಿವಣ್ಣ
ರಸದಂತೆಯಮೃತದಂ ತತಿ ರುಚಿಯ ಪಡೆದುದು
ರಸಿಕನತಿ ನಿಪುಣ ಮಂಗರಸನುಸಿರಿದ ಸೂಪಶಾಸ್ತ್ರದ ಕವಿತೆಯ ಮಾತು.

ಇವನ ಇನ್ನುಳಿದ ಕಾವ್ಯಗಳೆಲ್ಲವೂ ಧರ್ಮಪ್ರತಿಪಾದಕಗಳಾಗಿವೆ; ರಸವತ್ತಾಗಿವೆ; ಸುಂದರವಾದ ಕಥೆಗಳಿಂದ ಕೂಡಿವೆ. ನೇಮಿಜಿನೇಶಸಂಗತಿಯಲ್ಲಿ ಜೈನ ಪರಿಭಾಷೆಗೆ ಅನುಗುಣವಾಗಿ ಕೌರವ-ಪಾಂಡವರ ಕಥೆ ಬರುತ್ತದೆ.

ನಂಜುಂಡಕವಿಯ (ಕಾಲ ೧೫೪೦) ರಾಮನಾಥಚರಿತೆ, ಒಂದು ಚಾರಿತ್ರಿಕ ಕಾವ್ಯ. ಸುಮಾರು ಆರುಸಾವಿರ ಪದ್ಯಗಳಿಂದ ಕೂಡಿದೆ. (ಇದರ ಕಥಾವಸ್ತುವಿನ ಸಾರವಿದು)-

ಒಮ್ಮೆ ಶಿವನ ಓಲಗಕ್ಕೆ ಓರ್ವ ಗಂಧರ್ವನು ಬಂದು ಶಿವನನ್ನು ವಂದಿಸಿದನು. ಪಾರ್ವತಿಗೆ ವಂದನೆ ಮಾಡಲಿಲ್ಲ. ಅವಳು ಸಿಟ್ಟಾದಳು. ಅವನು ಯಾರೆಂದು ಕೇಳಿದಾಗ ಶಿವನು-'ಇವನೇ ಹಿಂದೆ ಇಂದ್ರಕೀಲದಲ್ಲಿ ನನ್ನೊಡನೆ ಕಾದಾಡಿದ ಅರ್ಜುನ; ಶೂರ ವೀರ, ಶುದ್ಧವಾದ ನಡತೆಯವನು. ಇಂದ್ರಲೋಕದಲ್ಲಿ ಒಲಿದು ಬಂದ ಊರ್ವಶಿಯ ಮೋಹಕ್ಕೆ ಬಲಿಯಾಗದಂತಹ ಶುಚಿ. ಪರವನಿತೆಯನ್ನು ನೋಡನು. ಮನಸ್ಸಿಲ್ಲದ ದೇಹದಿಂದ ಪರಸ್ತ್ರೀಯನ್ನು ವಂದಿಸನು. ಆದುದರಿಂದಲೇ ಸಾಲೋಕ್ಯ ಪದವಿಗೆ ಏರಿದ್ದಾನೆ ಎಂದನು. 'ಇವನನ್ನು ಒಮ್ಮೆ ಮರ್ತ್ಯಲೋಕಕ್ಕೆ ಕಳುಹಿಸಿದರೆ, ಇವನ ಶುಚಿತ್ವವನ್ನು ಪರೀಕ್ಷೆಗೆ ಈಡುಮಾಡುವೆನು' ಎಂದಳು. ಅದರಂತೆ ಶಿವನಾಜ್ಞೆಯಿಂದ ಆ ಗಂಧರ್ವರೂಪದ ಅರ್ಜುನ ಭೂಲೋಕದಲ್ಲಿ ಕಂಪಿಲರಾಜನ ಹಿರಿಯ ರಾಣಿ ಹರಿಹರದೇವಿಯಲ್ಲಿ ರಾಮಾಭಿದಾನದಿಂದ ಜನಿಸಿದನು. ಪಾರ್ವತಿಯ ಪ್ರೇರಣೆಯಂತೆ ಊರ್ವಶಿಯು ಕುಮಾರರಾಮನನ್ನು ಮೋಹದ ಬಲೆಯಲ್ಲಿ ಬೀಳಿಸುವೆನೆಂದು ಪ್ರತಿಜ್ಞೆಮಾಡಿ ಕಂಪಿಲರಾಜನ ಎರಡನೆಯ ಹೆಂಡತಿ ರತ್ನಾಜಿ ಎಂಬವಳಾದಳು. ಕುಮಾರರಾಮನು ಶೌರ್ಯ, ಔದಾರ್ಯ, ಶುಚಿ, ಸದ್ಗುಣ, ಸೌಂದರ್ಯಗಳಲ್ಲಿ ಅದ್ವಿತೀಯನಾಗಿದ್ದನು. ರತ್ನಾಜಿ ಅವನನ್ನು ಮೋಹಕ್ಕೆ ಬೀಳಿಸುವ ಪ್ರಯತ್ನದಲ್ಲಿ ವಿಫಲಳಾದಳು. ಆಕೆ ಈಗ ಕಪಟ-ಅಸತ್ಯಗಳ ಮಾರ್ಗ ಹಿಡಿದಳು. ರಾಮನು ತನ್ನ ಶೀಲವನ್ನು ಭಂಗಿಸಿದುದಾಗಿ ಕಂಪಿಲ ರಾಜನಿಗೆ ದೂರು ಕೊಟ್ಟು ಅವನಿಗೆ ಮರಣದಂಡನೆ ವಿಧಿಸುವಂತೆ ಮಾಡಿದಳು. ಮಂತ್ರಿ ಬೈಚಪ್ಪನು ರಾಮನ ಶುಚಿತ್ವವನ್ನು ಬಲ್ಲನು. ಅವನಿಲ್ಲವಾದರೆ ನಾಡಿಗೆ ಕೇಡಾಗುವುದೆಂದು ನಿಶ್ಚಯಿಸಿ, ಅವನನ್ನು ನೆಲಮಾಳಿಗೆಯಲ್ಲಿ ಗೌಪ್ಯವಾಗಿರಿಸಿದನು. ರಾಮನಿಲ್ಲವಾದ ಸುದ್ದಿ ಕೇಳಿದ ದಿಲ್ಲಿಯ ಸುಲ್ತಾನನು ಕಂಪಿಲನ ಮೇಲೆ ಯುದ್ಧಸೇನೆಯನ್ನು ಕಳುಹಿಸಿದನು. ಕಂಪಿಲನು ಕಂಗೆಟ್ಟನು. ಮಂತ್ರಿ ರಾಮನನ್ನು ಹೊರತಂದನು. ಅವನು ಯುದ್ಧಕ್ಕಿಳಿದನು. ರತ್ನಾಜಿಗೆ ಪೂರ್ವಸ್ಮರಣೆ ಬಂದು, ಆಕೆಯು ದೇಹತ್ಯಾಗ ಮಾಡಿದಳು. ರಾಮನ ದಿವ್ಯಾಶ್ವ ಸತ್ತಿತು. ಯುದ್ಧದಲ್ಲಿ ರಾಮನು ದೇಹತ್ಯಾಗ ಮಾಡಿದನು. ಹೀಗೆ ಈ ಕಾವ್ಯವಸ್ತು ಒಂದು ವೀರಕಥೆ, ಶುದ್ಧವಾದ ನಡತೆಯ ಕಥೆ. ಈ ಕಾವ್ಯ ಪ್ರತಿಪಾದಿಸುವ ಮೌಲ್ಯವನ್ನು ಕುರಿತು ಕವಿವಾಣಿಯದು-

ಆವ ಕುಲದಲಿ ಪುಟ್ಟಲಿ ಪೆರವೆಣ್ಣಳ
ಭಾವಿಸನಾವನವನಿಗೆ
ದೇವರು ಸರಿಯಲ್ಲ ನರಪಶುಗಳ ಬಲು
ದಾವಣಿಯವನೆ ಕೇಳವನು ॥
ಹರಿಣಿಗೆ ಸಾಟ ರಂಭೆಗೆ ಸರಿ ಮೇನಕಿ

ಗೊರೆಯಹ ಹೆಜ್ಜೊಲ್ಲು ಬಂದು
ಕರವ ಹಿಡಿಯೆ ಕರಗದ ಕರಣದ ವೀರ
ನುರು ಚರಿತವನುಸುರುವೆನು ॥

ಅಲಂಕಾರ, ರೀತಿ, ರಸ, ವರ್ಣನೆ, ನೀತಿ ವಿಚಾರಗಳಿಂದ ಈ ರಾಮನಾಥಚರಿತೆ ಅತಿಶ್ರೇಷ್ಠಕಾವ್ಯವಾಗಿ ವಿದ್ವನ್ಮಾನ್ಯವಾಗಿದೆ.

ಸ್ಪಷ್ಟವಾಗಿ ತಿಳಿದುಬರುವಂತೆ ಪ್ರಾಚೀನ ಕವಿಗಳಲ್ಲಿ ಕೊಡಗಿನವನೇ ಆದವನು ದೇವಪ್ಪಕವಿ. ಇವನ ಕಾಲ ಕ್ರಿ.ಶ. ೧೫೪೦. ಇವನ ರಚನೆ 'ರಾಮವಿಜಯ ಕಾವ್ಯ'. ಇದು ಇಪ್ಪತ್ತು ಸಂಧಿಗಳುಳ್ಳ, ೩೨೦೦ ಸಾಂಗತ್ಯ ಪದ್ಯಗಳಿಂದ ಕೂಡಿದ ಜೈನಧರ್ಮ ಪ್ರತಿಪಾದಕವಾದ ಕಾವ್ಯ. ಈ ಕಾವ್ಯದ ಓಲೆಗರಿಯ ಪ್ರತಿ ೧೯೫೪ರಲ್ಲಿ ನನಗೆ ಮೈಸೂರಿನ ಪಾರ್ಶ್ವನಾಥ ಜಿನಾಲಯದಲ್ಲಿ ದೊರಕಿತು. ಈ ಕಾವ್ಯವನ್ನು ಕುರಿತು ನಾನು ಮಡಿಕೇರಿಯ 'ಶಕ್ತಿ' ಪತ್ರಿಕೆಯ ೪-೪-೧೯೬೩ರ ಸಂಚಿಕೆಯಲ್ಲಿ ಒಂದು ಲೇಖನವನ್ನು ಬರೆದು ಕವಿ ವಿಚಾರವನ್ನು ಬಹಿರಂಗಪಡಿಸಿದ್ದೆನು. ಕರ್ಣಾಟಕ ಕವಿಚರಿತೆ ಭಾಗ ೩, ಪುಟ ೪೪೭ರಲ್ಲಿ ಈ ಕವಿಯ ಮತ್ತು ಕಾವ್ಯದ ಸಂಕ್ಷಿಪ್ತ ಪರಿಚಯವಿತ್ತು. ಆದರೆ ಅದು ಸರಿಯಿರಲಿಲ್ಲ. ಹಿಂದೆ ಜಯಕರ್ಣಾಟಕ ಪತ್ರಿಕೆಯ ಸಂಪುಟ ೧೦ ಸಂಚಿಕೆ ೫ರಲ್ಲಿ ಡಿ.ಕೆ. ಭೀಮಸೇನರಾಯರು ಈ ಕವಿಯ ವಿಚಾರವಾಗಿ ತಿಳಿಸಿದ ಅಂಶಗಳಲ್ಲಿಯೂ ತಪ್ಪುಗಳಿದ್ದವು. ತೊರವೆರಾಮಾಯಣ (ಮೈಸೂರು ಪ್ರಾಚ್ಯ ಸಂಶೋಧನ ಸಂಸ್ಥೆಯ ಪ್ರಕಟನೆ) ಭಾಗ ೨, ಪೀಠಿಕೆಯಲ್ಲಿ ರಾಮವಿಜಯದ ವಿಚಾರವಾಗಿ ತಿಳಿಸಿದುದರಲ್ಲಿಯೂ ತಪ್ಪುಗಳಿದ್ದವು. ಡಿ.ಎಲ್.ಎನ್. ಅವರು ಪಂಪರಾಮಾಯಣ ಸಂಗ್ರಹದ ಮುನ್ನುಡಿಯಲ್ಲಿ 'ರಾಮವಿಜಯ'ವನ್ನು ವಿಮಲಸೂರಿಯ ಪರಂಪರೆಯದಾಗಿ ಸೂಚಿಸಿದ್ದಾರೆ. ಇದು ಕೂಡ ಸರಿಯಲ್ಲ. ಈ ಕಾವ್ಯ ಗುಣಭದ್ರಾಚಾರ್ಯರ ಪರಂಪರೆಯದು.

ಈ ಗ್ರಂಥವನ್ನು ಸಂಪಾದಿಸಲು ನಾನು ಕಯ್ಗೆತ್ತಿಕೊಂಡ ಅನಂತರ, ಬೇರೆ ಪ್ರತಿಗಳನ್ನೂ ಒದಗಿಸಿಕೊಂಡು ಗ್ರಂಥಪರಿಷ್ಕರಣ ಮಾಡಿರುತ್ತೇನೆ. ವಿಸ್ತಾರವಾದ ಪೀಠಿಕೆ, ಅದರಲ್ಲಿ ಕವಿ, ಕವಿಯ ಕಾಲ, ಗ್ರಂಥವಿಮರ್ಶೆ, ಪಾಠಾಂತರ ಸೂಚಿಗಳಲ್ಲದೆ ಪ್ರತಿಪದ್ಯಕ್ಕೂ ಸರಳಾನುವಾದ, ಸೂಕ್ತ ಅನುಬಂಧಗಳು, ತಪ್ಪಿಲ್ಲದ ಮುದ್ರಣ-ಇವುಗಳಿಂದ ಗ್ರಂಥ ಶಾಸ್ತ್ರೀಯವಾಗಿ ರೂಪ ತಾಳಿದೆ. ಇದು ಭಾರತೀಯ ಜ್ಞಾನಪೀಠದ ಮೂರ್ತಿದೇವೀ ಗ್ರಂಥಮಾಲೆಯ ಕನ್ನಡದ ಮೊದಲನೆಯ ಪುಷ್ಪವಾಗಿ ೧೯೬೯ರಲ್ಲಿ ಹೊರಗೆ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ಮಾರಾಟ ಮಾಡುತ್ತಿದೆ. ಇದರ ಸಂಕ್ಷಿಪ್ತ ಪರಿಚಯವನ್ನು ಬೇರೆಯಾಗಿ ಅಚ್ಚುಹಾಕಿಸಿರುತ್ತೇನೆ.

ದೇವಪ್ಪನು ಬ್ರಾಹ್ಮಣವಂಶದ ಜೈನನೆಂದು ಹೇಳಿಕೊಂಡಿದ್ದಾನೆ. ತನ್ನ ಸ್ಥಳ, ಕುಲ, ಸ್ಥಾನ, ಇವುಗಳ ಪರಿಚಯವನ್ನು ಅವನೇ ಸ್ಪಷ್ಟವಾಗಿ ಹೀಗೆ ಹೇಳಿದ್ದಾನೆ-

ಸಿಂಗರವಡೆದ ಹೊಯ್ಸಳದೇಶಕೊಪ್ಪುವ
ಚೆಂಗನಾಡದರ ಮಧ್ಯದೊಳು
ಮಂಗಲಮಯವಾಗಿಹುದಾ ಪೊಳಲ ಬೆ
ಡಂಗ ನಾನೇನ ಬಣ್ಣಿಪೆನು.

ಆ ಪಟ್ಟಣ ರಾವಂದೂರು. ಅಲ್ಲಿ (ಈ ಕವಿಯ ಪಿತಾಮಹ) ಸಚಿವ ದೇವಪ್ಪ. ಅವನ ಮಗ ಬುಕ್ಕರಸ, ಬುಕ್ಕರಸನ ಸತಿ ಪಾಯಮ್ಮ. ಈ ದಂಪತಿಗಳ ಮಗನೇ ದೇವಪ್ಪ ಕವಿ. ಇವನು ರಾವಂದೂರನ್ನು ಬಿಟ್ಟು ಬಂದನಂತೆ -

ಇರದಲ್ಲಿಂ ನಂಜರಾಯ ಪಟ್ಟಣಕ್ಕೈದಿ
ಕರೆದೀವ ದಾನಿ ಚೆಂಗಾಳ್ವ
ವರವಂಶಾಬ್ಧಿ ಚಂದಿರ ನಂಜುಂಡ ಭೂ
ವರಗತಿ ಹಿತವನೆಂದೆನಿಸಿ ॥
ಧರೆಗೊಳ್ಳಿದನಾಗಿ ಮಂತ್ರಿಪದವನಾಂ
ತಿರುತಿರ್ದೆ ವಿಭವದೊಳಿನ್ನ
ಕರೆಮು ಭವ್ಯರು ಜಿನಕಥೆ ಪೇಳೆನಲಾ
ನೊರೆದೆನೀ ರಾಮವಿಜಯವ ॥

ದೇವಪ್ಪ ಕವಿಗೆ ಆಶ್ರಯವಿತ್ತ ನಂಜುಂಡರಾಜನು ನಂಜರಾಯ ಪಟ್ಟಣದ ಸ್ಥಾಪಕನಾದ ನಂಜರಾಯನ ಮಗ. ಅವನನ್ನು ಈ ಕವಿ 'ಕರೆದೀವ ದಾನಿ'ಯೆಂದೂ ಚೆಂಗಾಳ್ವವಂಶಾಬ್ಧಿ ಚಂದ್ರನೆಂದೂ ವಿಶೇಷಿಸಿದ್ದಾನೆ. ಹುಣಸೂರು ೨೪ನೆಯ ಶಾಸನದಲ್ಲಿ ಈ ನಂಜುಂಡರಾಜನ ಹಿರಿಮೆಯನ್ನು ಒಂದು ಪ್ರೌಢ ಸಂಸ್ಕೃತ ಪದ್ಯದಲ್ಲಿ ವರ್ಣಿಸಲಾಗಿದೆ. ರಾಮನಾಥಚರಿತ ಕಾವ್ಯಕರ್ತೃ ಈತನಲ್ಲ. ಭವ್ಯರು ಕವಿಯ ಬಳಿಗೆ ಬಂದು, ಅವನ ಮಾತಿನ ರಸಿಕತೆಯನ್ನು ಬಣ್ಣಿಸಿದ ಪದ್ಯಗಳಲ್ಲಿ ಒಂದೆರಡಿವು -

ತಿಂಗಳ ಜೊನ್ನದೊಳಾಡಿ ವಸಂತನೊ
ಳಂಗೀಕರಿಸಿ ಕಾಂತೆಯರ
ಕಂಗಡೆಯೊಡನಾಡಿ ಕಾಮಬಾಣದೊಳೋದಿ
ದಂಗದಂತಿವೆ ನಿನ್ನ ಮಾತು ॥
ಸಕ್ಕರೆಯಂತೆಳ ಜವ್ವನೆಯರ ಪೊಸ
ತೆಕ್ಕೆಯಂತಿನಿರಸದಂತೆ

ಮಕ್ಕಳ ತೊದಲಂತೆ ಮಮತೆಯನೆಮ್ಮ ಮ
ನಕ್ಕೀವುತಿವೆ ನಿನ್ನ ಮಾತು ॥
ಸವಿ ಬಲು ಜವ್ವನೆಯರ ನುಡಿಗಿಮ್ಮಡಿ
ಸವಿ ತಕ್ಕರ ನುಡಿಯದಕೆ
ಸವಿ ಮಕ್ಕಳ ತೊದಲ್ನುಡಿಯಾ ನುಡಿಯಿಂದ
ಸವಿ ನಿನ್ನಯ ಸವಿ ಮಾತು ॥

ಭವ್ಯರಾಡಿದ ಇನ್ನೊಂದು ಮಾತು ಲಕ್ಷ್ಯಾರ್ಹ -

ಕೇಳೊಂದು ಮಾತ ಮೀರದಿರಘ ಬಪ್ಪುದ
ಹೇಳುವುದಿಲ್ಲಾವು ನಿನಗೆ

ಕಾಳು ನುಡಿಯ ಬಿಟ್ಟು ಜಿನಕಥೆಯನು ಹೇಳು
ಹೇಳು ನಮ್ಮಾಣೆಯೆಂದೆನಲು ॥

ಹಿಂದೆ ಇದ್ದ ಮಹಾಕವಿ ಜನ್ನನು ಕಾವ್ಯಕ್ಕೆ ಸಹೃದಯರ ಆವಶ್ಯಕತೆಯನ್ನು ಸೊಗಸಾಗಿ ನಿರೂಪಿಸಿದ್ದಾನೆ-'ಕಟ್ಟಿಯು ಮೇಸೊ ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ?'- ಎಂದಿದ್ದಾನೆ. ದೇವಪ್ಪಕವಿಯ ಮಾತು ಹೀಗಿದೆ -

ಬಲ್ಲವರೊಂದಾಲಿಸಿ ಕೇಳಿ ಕವಿತೆಯ
ಸೊಲ್ಲಿನೊಳೆಡರಿಲ್ಲವೆಂದು
ಸೊಲ್ಲಿಸೆ ಬಳಿಕಲೆನ್ನಯ ಕೃತಿ ಜಗದೊಳ
ಗೆಲ್ಲಿಯು ಸಲುವುದಚ್ಚರಿಯೆ? ॥

ಈ ಕಾವ್ಯದ ವಸ್ತು ಜೈನಪರಂಪರೆಗೆ ಅನುಗುಣವಾಗಿರುವ ರಾಮಾಯಣ. ಜೈನ ಪರಂಪರೆಯ ರಾಮಾಯಣದಲ್ಲಿ ಸ್ಪಷ್ಟ ವ್ಯತ್ಯಾಸಗಳಿರುವ ಎರಡು ಶಾಖೆಗಳಿವೆ. ಮೊದಲನೆಯ ಶಾಖೆಯ ಪ್ರವರ್ತಕನು ವಿಮಲಸೂರಿ. ಇವನು ಪ್ರಾಕೃತದಲ್ಲಿ ರಚಿಸಿದ 'ಪವುಮ ಚರಿಯ'ದ ಕಥೆಗೆ ಅನುಸಾರವಾಗಿ ಕನ್ನಡದಲ್ಲಿ ಪಂಪರಾಮಾಯಣ, ಕುಮುದೇಂದು ರಾಮಾಯಣ, ಚಂದ್ರಸಾಗರನ ಜಿನರಾಮಾಯಣ-ಮುಂತಾದವು ಇವೆ. ದೇವಪ್ಪನ ಕೃತಿಗೆ ಮೂಲವಾದುದು ಕ್ರಿ.ಶ. ೮೯೮ರಲ್ಲಿ ಅಮೋಘವರ್ಷ ನೃಪತುಂಗನ ಆಶ್ರಯದಲ್ಲಿದ್ದ ಜೈನಗುರು ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿ ಬರುವ ರಾಮಾಯಣದ ಕಥೆ. ಚಾವುಂಡರಾಯನ ರಾಮಕಥೆ, ನಾಗರಾಜಕವಿಯ ಪುಣ್ಯಾಸ್ರವ, ದೇವಪ್ಪನ ರಾಮವಿಜಯ-ಇವೆಲ್ಲ ಗುಣಭದ್ರಾಚಾರ್ಯರ ಶಾಖೆಯವು. ಈ ಕಥಾವಸ್ತುವಿನ ಮುಖ್ಯಾಂಶ ಹೀಗಿದೆ.

ದಶರಥನ ಪಟ್ಟದರಸಿ ಸುಬಲಾದೇವಿಯಲ್ಲಿ ಜನಿಸಿದವನು ರಾಮ. ಕೈಕೆಯ ಮಗ ಲಕ್ಷ್ಮಣ. ಇದರಲ್ಲಿ ರಾಮನಿಗೆ ವನವಾಸವಿಲ್ಲ. ವಿಶ್ವಾಮಿತ್ರನೊಡನೆ ಮಿಥಿಲೆಗೆ ಹೋಗುವ ಪ್ರಸಂಗವೂ ಇಲ್ಲ. ಸೀತಾವಿವಾಹವಾದ ಮೇಲೆ ರಾಮನು ತನ್ನ ಹಿರಿಯರ ನೆಲವಾಗಿರುವ ವಾರಾಣಸಿಯನ್ನು ಗೆದ್ದು ಉದ್ಯಾನ ವಿಹಾರದಲ್ಲಿದ್ದಾಗ ರಾವಣನು ರಾಮನ ರೂಪದಲ್ಲಿ ಬಂದು ಸೀತಾಪಹರಣ ಮಾಡುತ್ತಾನೆ. ಲಂಕೇಶ ರಾವಣ ಮಣಿಮತಿ ಎಂಬಾಕೆಯ ವಿದ್ಯಾಸಾಧನೆಗೆ ವಿಘ್ನವನ್ನುಂಟು ಮಾಡಿದ್ದರಿಂದ ಆಕೆ ಸಿಟ್ಟಾಗಿ 'ನಿನಗೆ ಮಗಳಾಗಿ ಹುಟ್ಟಿ ನಿನ್ನ ಮರಣಕ್ಕೆ ಕಾರಣಳಾಗುವೆನು' ಎಂದು ಪ್ರತಿಜ್ಞೆ ಮಾಡಿ ಸತ್ತು, ಮಂಡೋದರಿಯಲ್ಲಿ ಜನಿಸಿದಳು. ಆಕೆ ಹುಟ್ಟಿದಾಗ ಉತ್ಪಾತಗಳಾದವು. ರಾವಣನು ಆ ಶಿಶುವನ್ನು ಪೆಟ್ಟಿಗೆಯಲ್ಲಿ ದೇಶಾಂತರಕ್ಕೆ ಒಯ್ಯಿಸಿ, ಹೂಳಿಸಿದನು. ಆ ಪೆಟ್ಟಿಗೆ ಜನಕನಿಗೆ ಸಿಕ್ಕಿತು. ಅದೇ ಮಗು ಸೀತೆ. ಜನಕನ ಹೆಂಡತಿ ವಸುಧಾದೇವಿ ಅವಳನ್ನು ಸಲಹಿದಳು. ರಾವಣನಿಗೆ ಗೊತ್ತಾಗದಂತೆ ಸೀತೆಯನ್ನು ರಾಮನಿಗೆ ವಿವಾಹ ಮಾಡಲಾಯಿತು.

ಸೀತಾಪಹರಣವಾದಾಗ ದಶರಥನು ಒಂದು ಕನಸನ್ನು ಕಂಡನು. ಉತ್ತರ ದಿಕ್ಕಿನ ಚಂದ್ರನನ್ನು ದಕ್ಷಿಣದ ರಾಹು ನುಂಗಿದುದನ್ನು ಕಂಡು, ಅದು ಸೀತಾಪಹರಣವೆಂದು ಅರ್ಥಮಾಡಿದನು. ರಾಮನಿಗೆ ಸೈನ್ಯ ಸಹಾಯವನ್ನು ಕಳುಹಿಸಿದನು. ರಾಮನು ದಕ್ಷಿಣಕ್ಕೆ ದಂಡಯಾತ್ರೆ ಕೈಕೊಂಡನು.

ಅಣುವ ಸುಗ್ರೀವರು ಅವನಿಗೆ ಸಹಾಯಕರಾದರು. ವಾಲಿಯನ್ನು ಲಕ್ಷ್ಮಣನು ಕೊಂದನು. ಅಣುವನು ಶ್ರೀರಾಮನ ಪತ್ರವನ್ನೂ ಮುದ್ರಿಕೆಯನ್ನೂ ಲಂಕೆಗೆ ಒಯ್ದು ಸೀತೆಗೆ ಕೊಟ್ಟು ಬಂದ ಮೇಲೆ ರಾಮನ ಸೇನಾಪತಿಯಾದನು. ವಿಭೀಷಣನನ್ನು ಕೂಡಿಕೊಂಡು ರಾವಣನೊಡನೆ ಸಂಧಿಯ ಮಾತುಗಳನ್ನು ಆಡಿದನು. ಇನ್ನೊಮ್ಮೆ ಹೋಗಿ ವನಭಂಗ ಪುರದಹನಗಳನ್ನು ಮಾಡಿಬಂದನು. ರಾಮನು ಇಂದಗಿಯ ಸಂಹಾರಕ. ಲಕ್ಷ್ಮಣನು ರಾವಣ ಸಂಹಾರಕ. ಕೊನೆಗೆ ಲಕ್ಷ್ಮಣನು ತನ್ನ ಹತ್ಯೆಗಳ ಪಾಪದಿಂದ 'ಪಂಕಪ್ರಭೆ' ಎಂಬ ನರಕಕ್ಕೆ ಇಳಿಯುತ್ತಾನೆ. ರಾಮ ಅಣುವರು ಜಿನದೀಕ್ಷೆಯಿಂದ ಮೋಕ್ಷಗಾಮಿಗಳಾಗುತ್ತಾರೆ.

ಈ ಕಾವ್ಯಕಥೆಯನ್ನು ಹಿಂದೆ ಮಗಧ ದೇಶದ ರಾಜಗೃಹದಲ್ಲಿ ಅರಸನಾಗಿದ್ದ ಶ್ರೇಣಿಕನು (ಇವನೇ ಶಿಶುನಾಗವಂಶದ ಬಿಂಬಸಾರನು. ಕಾಲ ಕ್ರಿ.ಪೂ. ೬೦೦-೫೫೨) ತನ್ನ ಮಡದಿಯಾದ ಚೇಳಿನಿಗೆ ಹೇಳಿದಂತೆ ನಿರೂಪಿತವಾಗಿದೆ. ಈ ರಸಿಕರಾಜಂಪತಿಗಳ ಸರಸ ಸಂವಾದಗಳಿಂದ ಈ ಕಾವ್ಯದ ಸಂಧಿಗಳ ಆದಿ-ಅಂತ್ಯಗಳು ಮನೋಜ್ಞವಾಗಿವೆ. ಕವಿತಾಶಕ್ತಿಯಲ್ಲಿ ಇವನು ರತ್ನಾಕರವರ್ಣಿಗೆ ಕಡಿಮೆಯವನಲ್ಲ. ಇವನ ಸಮಕಾಲೀನನಾದ ನಂಜುಂಡಕವಿ ತನ್ನ ರಾಮನಾಥಚರಿತೆಯಲ್ಲಿ ಇವನ ಅನೇಕ ಪದ್ಯಗಳನ್ನು ಪದ್ಯಾಂತರರೂಪದಲ್ಲಿ ಅನುಸರಿಸಿ ಬರೆದಿದ್ದಾನೆ. ಇವನ ಹಿರಿಮೆಗೆ ಇದೊಂದು ನಿದರ್ಶನ.

ಕೆಲವು ವರ್ಷಗಳ ಹಿಂದೆ ವಿರಾಜಪೇಟೆಯಲ್ಲಿ ಕೊಡಗು ಸಾಹಿತ್ಯ ಸಮ್ಮೇಳನ ನಡೆದಿದೆ. ಅದರ ವರದಿಗಳನ್ನು ಕಂಡಿದ್ದೇನೆ. ಅಲ್ಲಿ ಈ ಕೊಡಗಿನ ಕವಿಯ ಕಾವ್ಯದ ಪರಿಚಯವನ್ನು ಮಾಡಿಕೊಟ್ಟವರಿಲ್ಲ. ಈಗ ಇಲ್ಲಿ ಅದನ್ನು ಸ್ವಲ್ಪಮಟ್ಟಿಗೆ ಈಡೇರಿಸಲು ಸಾಧ್ಯವಾದುದು ಸಂತೋಷದ ಸಂಗತಿ. ಈ ಕಾವ್ಯದ ಸಂಧಿಗಳ ಕೊನೆಯ ಪದ್ಯ ಹೀಗಿದೆ-

> **ಕೋವಿದರುಗಳ ಹೃತ್ಕಮಲ ಭಾಸ್ಕರ ವಾ**
> **ಗ್ದೇವಿಯ ಮುಖಮಣಿಮುಕುರ**
> **ಭಾವಕರುಗಳ ಸಂತಸಸಾಗರ ಮಿತ್ರ**
> **ದೇವಪ್ಪನೊರೆದ ಸತ್ಕಾವ್ಯ.**

ಹೀಗೆ ಇದೊಂದು ಕೊಡಗಿನ ಪ್ರಾಚೀನ ಕವಿಯೋರ್ವನ ಸತ್ಕಾವ್ಯ.

ಕೊಡಗಿನ ಆಧುನಿಕ ಕವಿ-ಕಾವ್ಯವಿಚಾರ :

ಆಧುನಿಕ ಕವಿ-ಕಾವ್ಯಗಳನ್ನು ಕುರಿತು ಕೆಲವು ಮಾತುಗಳನ್ನಿಲ್ಲಿ ತಿಳಿಸಬೇಕಾಗಿದೆ. 'ಆಧುನಿಕ' ಎಂಬುದು ಕಾವ್ಯವಸ್ತು, ಶೈಲಿ, ಭಾಷೆ, ರಚನಾ ಕ್ರಮ ಮುಂತಾದ ದೃಷ್ಟಿಗಳಿಂದ ಪ್ರಾಚೀನಕ್ಕಿಂತ ಭಿನ್ನವಾಗಿರುವ ಸಂಗತಿ ಎಲ್ಲರಿಗೂ ತಿಳಿದಿದೆ. ಆದರೂ ಕೊಡಗಿನ ಆಧುನಿಕ ಕವಿಗಳಲ್ಲಿ ಛಂದೋಬದ್ಧ ಲಾಕ್ಷಣಿಕ ಕಾವ್ಯಕರ್ತೃಗಳೂ ಲಯವಿನ್ಯಾಸದ ಸೊಗಸಿನ ಹಾಡುಗಳ ನಿರ್ಮಾಪಕರೂ ಇದ್ದಾರೆ. ಭಾವಗೀತ ಲಾವಣಿಗಳನ್ನು ಬರೆದ ಕವಿಕವಯಿತ್ರಿಯರೂ ಇದ್ದಾರೆ. ಅವರಲ್ಲಿ ಪಂಜೆಮಂಗೇಶರಾಯರು ಮೊದಲು ಉಲ್ಲೇಖನೀಯರು. ಮಂಗಳೂರಿನವರಾದ ಇವರು ಕೊಡಗಿನ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದವರು.

ಶಾಲೆಯ ಮಕ್ಕಳಿಗಾಗಿ ಪದ ಪದ್ಯಗಳನ್ನು ರಚಿಸಿದವರಲ್ಲಿ ಇವರು ಕನಿಷ್ಠಿಕಾಧಿಷ್ಠಿತರು. 'ಕವಿಶಿಷ್ಯ' ಎಂಬ ಕಾವ್ಯನಾಮದಿಂದ ಸೊಗಸಾದ ಕವಿತೆಗಳನ್ನು ರಚಿಸಿದ್ದಾರೆ. ತಾರಮ್ಮಯ್ಯ ತಂದು ತೋರಮ್ಮಯ್ಯ, ಹಾವಿನ ಹಾಡು, ಮೂಡುವನು ರವಿ, ತೆಂಕಣ ಗಾಳಿಯಾಟ, ಹುತ್ತರಿ ಹಾಡು-ಇಂಥವು ಇವರ ಚಿರಕೃತಿಗಳು. ಮಹಾಕವಿ ಪಂಪನ 'ಬನವಾಸಿ' ಕುರಿತ ಪದ್ಯಗಳಂತೆ ಪಂಜೆಯವರ 'ಹುತ್ತರಿ ಹಾಡು' ಒಂದು ರೋಮಾಂಚಕ ಕವಿತೆ. ಅದರ ಒಂದೆರಡು ಸೊಲ್ಲುಗಳನ್ನು ಉದಾಹರಿಸುತ್ತೇನೆ-ಮೊದಲನೆಯದು ಪ್ರಾಕೃತಿಕ ವಿಷಯ-

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ
ಎಲ್ಲಿ ಮುಗಿಲಲಿ ಮಿಂಚನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೋ
ಅಲ್ಲಿ ಆ ಕಡೆ ನೋಡಲಾ
ಅಲ್ಲಿ ಕೊಡಗರ ಬೀಡಲಾ
ಅಲ್ಲೆ ಕೊಡಗರ ನಾಡಲಾ!

ಮುಂದಿನದು ಜನರ ಶೌರ್ಯದ ಹಿರಿಮೆಯನ್ನು ಸಾರುತ್ತದೆ -

ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು
ಕವಣೆ ತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು
ಸವರಿ ಆನೆಯ ಸೊಂಡಿಲಿನ ರಣ ಕೊಂಬನಾರ್ ಭೋರ್ಗರೆದರೋ
ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟೆಯ ಮೆರೆದರೋ
ಅವರು ಸೋಲ್ ಸಾವರಿಯರು
ಅವರು ಕಡುಗಲಿ ಗರಿಯರು
ಅವರೆ ಕೊಡಗಿನ ಹಿರಿಯರು

ಕೊಡಗಿನ ಆಧುನಿಕ ಕವಿಗಳಲ್ಲಿ ಎದ್ದುಕಾಣುವ ಇನ್ನೊಂದು ಹೆಸರು ಶ್ರೀ ಎಂ.ಎಸ್.ಅನಂತ ಪದ್ಮನಾಭ ರಾಯರದು. ಇವರು ವೃತ್ತಿಯಲ್ಲಿ ಕೊಡಗಿನ ವಿಧಾನಸಭೆಯ ಹಿರಿಯ ವರದಿಗಾರರಾಗಿ ಇದ್ದರು. ನಿವೃತ್ತರಾಗಿ ಈಗ (೧೯೭೯) ಬೆಂಗಳೂರಿನಲ್ಲಿದ್ದಾರೆ. ಖ್ಯಾತ ಗಮಕಿ, ಕವಿ ಮತ್ತು ಲೇಖಕರು. ೧೯೭೦ಲರಲ್ಲಿ ರಾಜ್ಯದ ಸಾಹಿತ್ಯ ಎಕಾಡೆಮಿಯ ಗಮಕ ಪ್ರಶಸ್ತಿ ವಿಜೇತರು. ಇವರು ಷಟ್ಪದಿಯಲ್ಲಿ ಬರೆದ ತುಲಸೀರಾಮಾಯಣಕ್ಕೆ ೧೯೩೬ರಲ್ಲಿ ದೇವರಾಜ ಬಹದ್ದೂರ್ ಬಹುಮಾನ ದೊರಕಿದೆ. 'ಕಪ್ಪಣ್ಣ' ಎಂಬ ಕಾವ್ಯನಾಮದಲ್ಲಿ 'ಶ್ರೀಕೃಷ್ಣ ಕಥಾಮೃತಂ' ಎಂಬ ಕಾವ್ಯವನ್ನು ರಚಿಸಿದ್ದಾರೆ. 'ಕಾವೇರಿ ಕಥಾಮೃತಂ' ಎಂಬುದೂ ಇವರ ರಚನೆ. ಈಚೆಗೆ ಮಹಾಭಾರತದ ಕೊನೆಯ ಅಷ್ಟಪರ್ವಗಳನ್ನು ಭಾಮಿನಿಷಟ್ಪದಿಯಲ್ಲಿ ಬರೆದಿದ್ದಾರೆ. ಇವರು ಛಂದೋಬದ್ಧವಾಗಿ ಕೃತಿರಚನೆ ಮಾಡಿದ ಓರ್ವ ಭಕ್ತಕವಿ.

ಈ ಜಿಲ್ಲೆಯ ಕವಿಗಳ ಪಂಕ್ತಿಯಲ್ಲಿ ಟಿ. ಕೇಶವ ಭಟ್ಟರನ್ನು ಹೆಸರಿಸಬಹುದಾಗಿದೆ. ಅವರು ಬರೆದ ಸತ್ವಾಲೋಕನಂ - ಎಂಬುದು ಹಳಗನ್ನಡ ಶೈಲಿಯ ಹೊಸ ಚಂಪೂಕಾವ್ಯ.

ಇದರ ಕಥಾವಸ್ತು 'ಕೃಷ್ಣಾರ್ಜುನರ ಕಾಳಗ' - ಅರ್ಜುನನ ಸತ್ತ್ವಪರೀಕ್ಷೆ. ಕಂದ - ವೃತ್ತ - ಗದ್ಯಾತ್ಮಕವಾಗಿ ಎಂಟು ಅಶ್ವಾಸಗಳಿಂದ ಕೂಡಿದೆ. ಕೊಡಗು ಕರ್ಣಾಟಸಂಘದ ರಜತಮಹೋತ್ಸವದ ದಿನ (ದಿನಾಂಕ ೨೧-೨-೧೯೫೯) ದಿ. ಅ.ನ. ಕೃಷ್ಣರಾಯರು ಇದನ್ನು ಬಿಡುಗಡೆ ಮಾಡಿದರು. ೧೯೬೦ರಲ್ಲಿ ಈ ಗ್ರಂಥಕ್ಕೆ ರಾಜ್ಯಬಹುಮಾನ ದೊರಕಿತು. ಈ ಕಾವ್ಯವನ್ನು ಕುರಿತು ಕವಿ ಬೇಂದ್ರೆಯವರು ಬರೆದ ಪದ್ಯಗಳಲ್ಲಿ ಎರಡು ಇವು-'

ಕಾವ್ಯಂ ಜೈನಕವೀಶ್ವರರ್ ತುಳಿದ ಮಾರ್ಗಂ ಸಮ್ಮತಂ ವಸ್ತುವುಂ
ಸೇವ್ಯಂ ವೈಷ್ಣವ ಶ್ರೋತ್ರಿಯಾಗ್ರಣಿಗಳಿಂ ತಾಂ ಬಂಧುರಂ ಬಂಧದೊಳ್
ಶೈವಾನುಗ್ರಹಮೊಂದಿ ಬಂದಿದೆ ಕಣಾ ಇನ್ನೇನಭಿಪ್ರಾಯಮೋ
ದೈವಾನುಗ್ರಹಮುಂಟೆ ಬೇರೆ ಕವಿಗಂ ಸಾರಸ್ವತಂ ಸಂಗತಂ.

ಕೇಶವ ಕವಿಕೃತ ಕಾವ್ಯಂ
ಪ್ರಾಶನ ಯೋಗ್ಯಂ ಸದಂತರಂಗಂ ತೀರ್ಥಂ
ಆ ಶಿವನುಂ ಕೇಶವನುಂ
ಪೋಷಿತರೇಕಾಂಗಮಾಗಿ ನಿಂದರ್ ಕೃತಿಯೊಳ್

ಕವಿ, ಗಮಕಿ ವಿದ್ವಾಂಸರಾದ ನಂ. ಅಶ್ವತ್ಥನಾರಾಯಣ-ಅವರು ಹೇಳಿದ ಮಾತುಗಳಿವು- "ಈಗಿನ ಕಾಲದಲ್ಲಿ ಚಂಪೂಕಾವ್ಯವನ್ನು ಬರೆವವರು ವಿರಳ. ಇಲ್ಲವೆಂದರೂ ತಪ್ಪಾಗಲಾರದು. ಶ್ರೀ ಟಿ. ಕೇಶವ ಭಟ್ಟರು ಇಂಥ ಮಹೋದ್ಯಮವನ್ನು ಕೈಗೊಂಡು ಯಶಸ್ವಿಗಳಾಗಿದ್ದಾರೆ. ಕನ್ನಡ ಸಾಹಿತ್ಯ ಭಂಡಾರಕ್ಕೆ ಇದೊಂದು ಬೆಲೆಯುಳ್ಳ ಕಾಣ್ಕೆಯಾಗಿದೆ. ಗಮಕ ವಾಚನಕ್ಕೆ ಈ ಕಾವ್ಯ ಚೆನ್ನಾಗಿ ಅಳವಡುತ್ತದೆ. ಕಂದವೃತ್ತಗಳನ್ನು ನಿರಾಯಾಸವಾಗಿ ಬರೆಯುವುದರಲ್ಲಿ ಭಟ್ಟರು ಸಿದ್ಧ ಹಸ್ತರು. ಒಳ್ಳೆಯ ಗಮಕಿ ಮನಸ್ಸು ಮಾಡಿದರೆ ಅವುಗಳನ್ನು ಕುಣಿಸಬಹುದು. ಇಂಥ ಸುಂದರ ವಸ್ತುಕ ಕಾವ್ಯವು ಅತ್ಯಂತ ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ."

ಕೊಡಗಿನ ಆಧುನಿಕ ಕವಿಗಳಲ್ಲಿ ಒಬ್ಬರಾದ ಬಿ.ಡಿ. ಗಣಪತಿ ಅವರು ಪತ್ರಿಕಾ ಸಂಪಾದಕತ್ವದೊಂದಿಗೆ ಭಾವಪೂರ್ಣವಾದ ಕವನಗಳನ್ನೂ ಬರೆದಿದ್ದಾರೆ. ಶ್ರೀ ಕೆ. ಸಚ್ಚಿದಾನಂದಯ್ಯನವರು ಹಲವಾರು ವರ್ಷ ಕೊಡಗಿನ ಅಧ್ಯಾಪನ ಸೇವೆ ಸಲ್ಲಿಸಿದವರು. ಈಗ ಮೈಸೂರಿನಲ್ಲಿದ್ದಾರೆ. 'ಚಿರಂತನ' ಎಂಬ ಕಾವ್ಯನಾಮದಿಂದ ಇವರು ಆಯಾ ಪ್ರಕರಣಕ್ಕೊಪ್ಪುವ ಭಾವಗೀತಗಳನ್ನು ರಚಿಸುತ್ತ ಬಂದಿದ್ದಾರೆ. ಶ್ರೀ ವಿ.ಎಸ್. ರಾಮಕೃಷ್ಣ ಅವರು ಉತ್ತಮ ವಾಗ್ಮಿ, ಲೇಖಕರು ಮತ್ತು ಕವಿ. ವಾರ್ಧಕಷಟ್ಪದಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಹಿಮೆ, ಶ್ರೀ ಪದ್ಮಾನಂದ ಗುರುಜೀ ಚರಿತ್ರೆ, ಶ್ರೀ ಕಾವೇರೀವಿಜಯ ಮುಂತಾದುವನ್ನು ರಚಿಸಿದ್ದಾರೆ. ಇಂದಿನ ಸಮ್ಮೇಳನಾಧ್ಯಕ್ಷರಾದ ಶ್ರೀ ಸಿದ್ಧಯ್ಯ ಪುರಾಣಿಕರು ವಾಗ್ಮಿಗಳು, ಲೇಖಕರು, ಕನ್ನಡದಲ್ಲಿ ಖ್ಯಾತ ಕವಿ. ಕೊಡಗಿನ ಜಿಲ್ಲಾಧಿಕಾರಿಗಳಾಗಿದ್ದುದರಿಂದ ಕೊಡಗಿನ ಕವಿ ಇವರು. 'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ರಚಿತವಾದ ಇವರ ಕವಿತೆಗಳು ಕರ್ಣಾಟಕದಲ್ಲೆಲ್ಲ ಪ್ರಸಿದ್ಧವಾಗಿವೆ. (ಪ್ರತಿಭೆ, ಭಾವಸ್ಫುರಣ, ನಿರ್ಮಾಣ-ಈ ಶಕ್ತಿತ್ರಯವನ್ನು ಸಿದ್ಧಿಸಿಕೊಂಡ ರಚನೆಗಳು ಇವರದಾಗಿವೆ). ಡಾ.ಐ.ಎಂ. ಮುತ್ತಣ್ಣನವರು ನೂರಾರು ಭಾವಗೀತಗಳನ್ನು

ಕನ್ನಡದಲ್ಲಿ ರಚಿಸಿದ್ದಾರೆ. ಆಧುನಿಕ ಕವಿಗಳಲ್ಲಿ ವಿಶೇಷ ಉಲ್ಲೇಖನೀಯರಾಗಿದ್ದಾರೆ. ಬಾಳಲೆ ವಿಜಯಲಕ್ಷ್ಮಿ, ಜೂನಿಯರ್ ಕಾಲೇಜಿನ ಪ್ರಾಂಶುಪಾಲರಾಗಿರುವ ಶ್ರೀ ಎಸ್. ಶಂಕರನಾರಾಯಣ ಭಟ್ಟರು ಓರ್ವ ಭಾವುಕ ಕವಿ, ಸಂಶೋಧಮತಿಗಳು, ಲೇಖಕರು. ಹೂದೋಟ, ಗಂಗಾಸಲಿಲ-ಇವು ಪ್ರಕಟವಾಗಿರುವ ಇವರ ಕವನ ಸಂಕಲನಗಳು. ಅಮ್ಮತ್ತಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿರುವ ಪೇಜಾವರ ತಾರಾನಾಥ-ಅವರು ಓರ್ವ ಕವನ ಕವಿ. 'ಕೊಳಲಜೋಗಿ' ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಇತ್ತೀಚೆಗೆ ಕೆ.ಕೆ. ಭಕ್ತ ಎಂಬವರೂ ಕವಿತೆಗಳನ್ನು ಬರೆಯುತ್ತಿದ್ದಾರೆ. ಶ್ರೋತೃಗಳ ಮನಸ್ಸನ್ನು ಮುಟ್ಟುವ ಲಾವಣಿಗಳನ್ನು ರಚಿಸಿ ಕವಯಿತ್ರಿಯಾಗಿ ಖ್ಯಾತಿಗಳಿಸಿರುವ ಶ್ರೀಮತಿ ಬಿ.ಎ. ದೇವಕಿಯಮ್ಮನವರು ಸುಮಾರು ಇಪ್ಪತ್ತೈದು ವರ್ಷಗಳಿಂದಲೇ ತಮ್ಮ ಲಾವಣಿಗಳನ್ನು ಸಭೆಗಳಲ್ಲಿ ಹಾಡುತ್ತಿದ್ದುದನ್ನು ಮರೆಯತಕ್ಕುದಲ್ಲ. ಈಗಂತೂ ಅವರು ಕವನ ರಚನೆಯಲ್ಲಿ ಇನ್ನಷ್ಟು ಯಶಸ್ಸನ್ನು ಗಳಿಸಿರಬೇಕು.

ಇನ್ನೂ ಎಷ್ಟೋ ಮಂದಿ ಕವಿಗಳು ಕವಯಿತ್ರಿಯರು ಕೊಡಗಿನವರಾಗಿ ಕೃತಿರಚನೆ ಮಾಡಿದವರು, ಮಾಡುತ್ತಿರುವವರು ಇರಬಹುದು. ಅವರಲ್ಲಿ ಅನೇಕರು ಎಲೆಮರೆಯ ಕಾಯಿಗಳಂತೆ ಪ್ರಸಿದ್ಧಿಪ್ರಾಙ್ಮುಖರಾಗಿ ಇರಬಹುದು. ಪ್ರಸಿದ್ಧರಾಗಿಯೇ ಇದ್ದರೂ ಈ ಉಪನ್ಯಾಸಕಾರನಿಗೆ ಮಾತ್ರ ಅವರು ಅಜ್ಞಾತರಾಗಿ ಇರಲಿಕ್ಕೂ ಸಾಧ್ಯ. ನಾನು ಕೊಡಗಿನವನಾಗಿ ಮತ್ತೆ ದೂರಹೋಗಿ ಹತ್ತೊಂಬತ್ತು ವರ್ಷಗಳಾಗಿವೆ. ಆದುದರಿಂದ ಕೊಡಗಿನ ಆಧುನಿಕ ಕವಿಕಾವ್ಯಗಳ ಉಲ್ಲೇಖ ವಿಚಾರದಲ್ಲಿ ಈ ಉಪನ್ಯಾಸ ಪರಿಪೂರ್ಣವಲ್ಲ. ಪ್ರಮಾದದಿಂದಲೋ ಅನುಭವಲೋಪ ದೋಷದಿಂದಲೋ ನಿಜಾಂಶಗಳು ಬಿಟ್ಟುಹೋದುದಕ್ಕಾಗಿ ಯಾರೂ ಬೇಸರಪಡಬಾರದು. ಸಹೃದಯರು ನನ್ನನ್ನು ಮನ್ನಿಸುವ ಮೂಲಕ ತಮ್ಮ ಗುಣವನ್ನು ಮೆರೆಯಿಸಬೇಕಾಗಿ ಪ್ರಾರ್ಥಿಸುತ್ತೇನೆ. □

ಕೊಡಗು ಜಿಲ್ಲಾ ಕನ್ನಡಸಾಹಿತ್ಯಸಮ್ಮೇಳನ, ಮಡಿಕೇರಿ, ಮೇ ೨ ರಿಂದ ೪ - ೧೯೭೯ ಇದರ ಆಶ್ರಯದಲ್ಲಿ ೩-೫-೧೯೭೯ ರಂದು ನಡೆದ ಸಾಹಿತ್ಯಗೋಷ್ಠಿಯಲ್ಲಿ ಮಂಡಿಸಿದ ಉಪನ್ಯಾಸ.

೩೨

ಶಾಂತಿ ಸಂದೇಶ

ಇಂದು ಜಗತ್ತಿನಲ್ಲಿ ಎಲ್ಲೆಲ್ಲಿಯೂ ಅಶಾಂತಿ ಕವಿದಿರುವುದು ಕಂಡು ಬರುತ್ತದೆ. ರಾಷ್ಟ್ರ ರಾಷ್ಟ್ರಗಳೊಳಗೆ ಸಂಘರ್ಷದ ಪರಿಸ್ಥಿತಿಯಿದೆ. ನಮ್ಮ ದೇಶದೊಳಗೂ ಅಶಾಂತಿಯ ಛಾಯೆ ನೆಲಸಿದೆ. ಪ್ರಾಂತಪ್ರಾಂತಗಳೊಳಗೆ, ಜಾತಿಪಂಗಡಗಳೊಳಗೆ, ಹೆಚ್ಚೇಕೆ - ಮನೆಮನೆಯೊಳಗೆ ಮನಗಳೊಳಗೆ ತಿಕ್ಕಾಟದ ಸನ್ನಿವೇಶವಿದೆ. ಹೊರಗಿನಿಂದ ಶಾಂತಿಯ ಪರದೆಯಿದ್ದರೂ ಆ ಪರದೆಯನ್ನೆತ್ತಿ ಕ್ಷೋಭೆಯ ರಕ್ಕಸನು ಭಯಂಕರಾಕಾರ ತಳೆದು ಹೊರಗೆ ಬರಲು ತಡವಿಲ್ಲವೆಂಬಂತಿದೆ. ದೇಶದಲ್ಲಿ ಯಾವುದೋ ಒಂದು ಕಡೆ ಗಲಭೆ, ದಂಗೆ, ಮುಷ್ಕರ, ಅಶಾಂತಿಗಳ ಕಿಡಿ ತಲೆದೋರಿದೊಡನೆ ಅದು ಶೀಘ್ರವೇ ಜ್ವಾಲಾಮುಖಿಯಾಗುವುದನ್ನೂ ಕಂಡಿದ್ದೇವೆ. ಇಂದಿನ ವಿಜ್ಞಾನಯುಗದಲ್ಲಿ ವಿಧ್ವಂಸಕ ಶಕ್ತಿಯ ಪ್ರಮಾಣವೂ ಬೃಹತ್ತಾಗಿ ಬಳೆದಿದೆ. ಹೀಗಿದ್ದರೆ ಮಾವನರೆಲ್ಲ ದಾನವರೆ? ಅವರಲ್ಲಿ ಶಾಂತಿಯ ಹಾಗೂ ನೆಮ್ಮದಿಯ ಕಾಂಕ್ಷೆಯೇ ಇಲ್ಲವೆ? ನರಮೇಧವೇ ಮಾನವನ ಜೀವಿತೋದ್ದೇಶವಾಯಿತೆ ? ಇಲ್ಲ, ಎಂದಿಗೂ ಇಲ್ಲ. ವೈಯಕ್ತಿಕವಾಗಿ ತನಗೆ ಸುಖಶಾಂತಿ ಸಿಗಬೇಕೆಂದು ಆತ ಹಾರಯಿಸುತ್ತಾನೆ. ಅದಕ್ಕಾಗಿ ಯತ್ನಿಸುತ್ತಾನೆ. ಆದರೆ, ಈ ಸುಖಶಾಂತಿಗಳು ಸಮಗ್ರ ಸಮಾಜಕ್ಕೂ ವಿಶ್ವಕ್ಕೂ ವ್ಯಾಪಕವಾಗಬೇಕೆಂಬ ವಿಶಾಲಬುದ್ಧಿ ಮಸುಕಾದುದೇ ಲೋಕದ ಅಶಾಂತಿಗೆ ಕಾರಣವೆನ್ನಬಹುದು.

ವಿಶ್ವದಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕಾಗಿ ಇಂದು ವಿಶ್ವಸಂಸ್ಥೆಯ ಪ್ರಣಾಲಿಕೆಯಿದೆ, ಪಂಚಶೀಲ ತತ್ವವಿದೆ. ದೇಶದೊಳಗಿನ ಶಾಂತಿಗಾಗಿ ರಾಜ್ಯಘಟನೆ ಹಾಗೂ ತದನುಸಾರ ಕಾನೂನುಗಳೂ ಇವೆ. ರಕ್ಷಣಾ ದಳಗಳಿವೆ. ಆದರೆ ಶಾಂತಿಯಿಲ್ಲ. ಜನರಲ್ಲಿ ಅವನು, ಇವನು, ಅನ್ಯನು, ನನ್ನವನು ಎಂಬ ಭೇದಭಾವವುದಿಸಿ ಅಲ್ಪಬುದ್ಧಿ ತಲೆದೋರಿ ಅಶಾಂತಿ ಹೆಡೆಯೆತ್ತುವಂತಾಗಿದೆ.

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಂ
ಉದಾರಚರಿತಾನಾಂ ತು ವಸುಧೈವ ಕುಟುಂಬಕಂ

(ಇವನು ನನ್ನವನು, ಇವನು ಬೇರೆಯವನು ಎಂದು ಭೇದ ಬಗೆಯುವುದು ಅಲ್ಪಬುದ್ಧಿಯವರ ಲಕ್ಷಣ. ಆದರೆ, ಉದಾರಚರಿತರಿಗೆ ಪ್ರಪಂಚವೇ ತಮ್ಮ ಕುಟುಂಬವೆನಿಸುವುದು.)

ಇಂತಹ ಉದಾತ್ತಭಾವನೆ ನಮ್ಮ ಪೂರ್ವಿಕರಲ್ಲಿ ಇತ್ತೆಂದು ನಮ್ಮ ಪ್ರಾಚೀನ ಸಾಹಿತ್ಯದಿಂದ ಮತ್ತು ಇತಿಹಾಸದಿಂದ ತಿಳಿದುಬರುತ್ತದೆ. ಭಾರತದ ಪ್ರಾಚೀನ ಕಾಲ ಸುಖ - ಸಮೃದ್ಧಿ

ವಿದ್ವತ್ತು, ತ್ಯಾಗ, ಶೌರ್ಯ, ತಪಸ್ಸುಗಳಿಗೆ ಆಕರವಾಗಿದ್ದು ಶಾಂತಿಯನ್ನು ಪರಿಪಾಲಿಸುತ್ತಿತ್ತೆಂದು ಕಾಣುತ್ತದೆ. ಮಾನವ ಜನಾಂಗದ ಏಳಿಗೆಗಾಗಿ ಸಾರಲಾದ ವೇದಮಂತ್ರಗಳಲ್ಲಿ ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಶಾಂತಿ ಸಂದೇಶಗಳು ಬರುತ್ತವೆ. ಅವು ಇಂದಿಗೂ ನಮ್ಮನ್ನು ಸುಜ್ಞಾನದ ಕಡೆಗೆ, ಸನ್ಮಾರ್ಗದೆಡೆಗೆ, ಶಾಂತಿ - ಸುಖ ಸಿದ್ಧಿಗಳ ತಡಿಗೆ ದಾರಿತೋರುವಂಥವಾಗಿವೆ. ಇಂತಹ ಸದ್ವಿಚಾರದ ಪ್ರಾರ್ಥನೆ ಬಂದಲ್ಲೆಲ್ಲ ಕೊನೆಗೆ 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂದು ಮೂರು ಬಾರಿ ಶಾಂತಿಯ ಉಚ್ಚಾರಣೆ ಬರುತ್ತದೆ. ಇದು ಸರ್ವರಿಗೂ ಆವಶ್ಯಕವಾದ ಮೂರು ಬಗೆಯ ಶಾಂತಿಯನ್ನು ಪ್ರತಿಪಾದಿಸುವಂತಿದೆ.

ಉಪನಿಷತ್ತುಗಳಲ್ಲಿ ಮೊದಲನೆಯದಾದ ಈಶೋಪನಿಷತ್ತಿನ ಶಾಂತಿ ಪ್ರಾರ್ಥನೆಯನ್ನು ಮೊದಲು ನೋಡೋಣ :—

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ
ಓಂ ಶಾಂತಿ ಶ್ಯಾಂತಿ ಶ್ಯಾಂತಿಃ

(ಓಂ ಕಾರರೂಪವಾಗಿರುವ ಪರಮಾತ್ಮವಸ್ತು ಸಂಪೂರ್ಣವಾಗಿರುವಂಥದು. ಆ ಪೂರ್ಣ ವಸ್ತುವಿನಿಂದ ಪ್ರಕಟವಾದ ಈ ಜಗತ್ತೂ ಪೂರ್ಣವಾದುದು. ಏಕೆಂದರೆ, ಪೂರ್ಣದಿಂದಲೇ ಪೂರ್ಣವು ಉಂಟಾಗಬಲ್ಲುದು. ಪೂರ್ಣ ವಸ್ತುವಿನಿಂದ ಪೂರ್ಣ ವಸ್ತುವುಂಟಾದ ಮೇಲೆಯೂ ಅದು ಪೂರ್ಣವಾಗಿಯೇ ಉಳಿಯುವುದು)

ಪರಮಾತ್ಮನ ಕಲ್ಪನೆ ಈ ಮಂತ್ರದಲ್ಲಿದೆ. ಎಲ್ಲವೂ ಅವನಿಂದಲೇ ಆದುದರಿಂದ ಎಲ್ಲವೂ ಅವನೇ. ಭಗವದ್ಗೀತೆಯಲ್ಲಿ ಹೇಳುವ 'ವಾಸುದೇವಃ ಸರ್ವಂ' ಎಂಬ ಮಾತೂ 'ಈಶ್ವರಃ ಸರ್ವಭೂತಾನಂ ಹೃದ್ದೇಶೇಽರ್ಜುನ ತಿಷ್ಠತಿ' ಎಂಬ ಅಭಿಪ್ರಾಯವೂ ಈ ಆಶಯವನ್ನೇ ಪುಷ್ಟೀಕರಿಸುತ್ತದೆ. ಎಲ್ಲವೂ ಪರಮಾತ್ಮನೇ ಆದ ಮೇಲೆ ದ್ವೇಷ - ಅಸೂಯೆ - ಅನ್ಯಾಯ - ಹಿಂಸೆಗಳಿಗೆ ಆಸ್ಪದವೆಲ್ಲಿ? ವ್ಯಕ್ತಿಯೊಬ್ಬನು ಇನ್ನೊಬ್ಬನಿಗೆ ಮಾಡಿದ ದ್ರೋಹವು ನೇರವಾಗಿ ಭಗವಂತನಿಗೆ ಮಾಡಿದ ದ್ರೋಹವೇ ಆಗುವುದು. ಆದುದರಿಂದ ಮಾನವನ, ಕೃತ್ಯಗಳೆಲ್ಲವೂ ಲೋಕಹಿತಕರವಾಗಬೇಕು - ಎಂಬ ಜ್ಞಾನ ತತ್ವ, ಈ ಶಾಂತಿ ಪ್ರಾರ್ಥನೆಯಲ್ಲಿ ಅಡಕವಾಗಿದೆ.

ಶಾಂತಿ ಪ್ರಾರ್ಥನೆಯ ಕೊನೆಗೆ ಮೂರು ಬಾರಿ ಮಾಡುವ ಶಾಂತ್ಯುಚ್ಚಾರಣೆಗಂತೂ ವಿಶೇಷವಾದ ಉದ್ದೇಶವಿದೆ. 'ಶಾಂತಿ' ಎಂಬ ಶಬ್ದವು ಸಮತ್ವ, ಗಲಭೆ-ಕ್ಷೋಭೆಗಳಿಲ್ಲದಿರುವುದು, ವಿಷಮತೆಯಿಲ್ಲದಿರುವುದು - ಎಂಬ ಅರ್ಥಕೊಡುತ್ತದೆ. ಇದು ವೈಯಕ್ತಿಕ, ಸಾಮಾಜಿಕ, ಜಾಗತಿಕ - ಎಂದು ಮೂರುವಿಧವಾಗಿದ್ದು ಪ್ರತಿಯೊಬ್ಬನೂ ಕಾಂಕ್ಷಿಸಬೇಕಾದುದು ಮತ್ತು ಅದಕ್ಕಾಗಿ ಯತ್ನಿಸಬೇಕಾದುದು.

ವೈಯಕ್ತಿಕ : ವ್ಯಕ್ತಿಯ ಶರೀರದಲ್ಲಿ ಸಪ್ತಧಾತುಗಳ ಸಮಾನತೆ, ಮನಸ್ಸು - ಬುದ್ಧಿ - ಇಂದ್ರಿಯಗಳಲ್ಲಿ ವಿಷಮತೆಯಿಲ್ಲದಿರುವುದು, ಆರೋಗ್ಯ - ಇವು ವೈಯಕ್ತಿಕ ಶಾಂತಿಯ ಲಕ್ಷಣಗಳು. ಈ ಶಾಂತಿಯಿಂದ ದೀರ್ಘಾಯುವುಂಟಾಗುವುದು; ಉದಾತ್ತವಾದ ಸಾಮಾಜಿಕ ಜೀವನ ನಡೆಸಲು ಲೋಕಹಿತಕ್ಕಾಗಿ ತ್ಯಾಗಶೌರ್ಯಗಳನ್ನು ಮೆರೆಸಲು ಸಾಧ್ಯವಾಗುವುದು. ಧರ್ಮಸಾಧನೆಗೆ

ಅನುವಾಗುವುದು. 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂದಿರುವುದು ವೈಯಕ್ತಿಕ ಶಾಂತಿಯ ಅರ್ಥವೇ ಆಗಿದೆ.

ಸಾಮಾಜಿಕ : ಮನುಷ್ಯನು ಸಮಾಜ ಜೀವಿ. ಸಮಾಜದಲ್ಲಿ ಅಸಮಾನತೆ, ಪರಸ್ಪರದ್ವೇಷಾದಿಗಳಿದ್ದರೆ ಶಾಂತಿಭಂಗವಾಗುವುದು. ಆದುದರಿಂದ ವಿವಿಧ ಜಾತಿಯ, ವರ್ಗದ, ಭಾಷೆಯ, ಮತಸಂಪ್ರದಾಯಗಳ ಅನುಯಾಯಿಗಳಲ್ಲಿ ಅನ್ಯೋನ್ಯವಾಗಿ ಸಮತ್ವ, ಅವಿರೋಧ, ಉಪಕಾರ ಬುದ್ಧಿ ಮಾಡಿಬರಬೇಕು - ಎಂಬುದಕ್ಕಾಗಿ 'ಶಾಂತಿ' ಯ ಎರಡನೆಯ ಉಚ್ಚಾರಣೆಯಿರುತ್ತದೆ.

ಜಾಗತಿಕ : ಮೇಲಿನ ಈ ಎರಡು ಬಗೆಯ ಶಾಂತಿಗಳು ಸಾಲವು. ಪಂಚಭೂತಗಳ ಪ್ರಕೋಪದಿಂದಾಗುವ ಅನಾಹುತಗಳು, ಗ್ರಹಗತಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ - ಮುಂತಾದ ವಿಪ್ಲವಗಳ ಬಾಧೆಯೂ ಬರಬಾರದು. ಇದಕ್ಕಾಗಿ ಮೂರನೆಯ 'ಶಾಂತಿ' ಶಬ್ದೋಚ್ಚಾರಣೆ ಇರುತ್ತದೆ.

ಈ ಮೂರು ಬಗೆಯ ಶಾಂತಿಗಾಗಿ ಮನುಷ್ಯನು ಕರ್ತವ್ಯವನ್ನು ಮಾಡಬೇಕೆಂಬ ಸೂಚನೆ ಇದರಲ್ಲಿದೆ. ಅಂತಹ ಸಾಧ್ಯಕರ್ತವ್ಯಗಳಿಂದಲೇ ಈ ತ್ರಿವಿಧವಾದ ಶಾಂತಿ ದೊರಕುವುದೆಂಬುದು ಇಲ್ಲಿ ನಿಗೂಢವಾದ ಅಭಿಪ್ರಾಯವಾಗಿದೆ. ಈ ಮೂರು ವಿಧದ ಶಾಂತಿಯನ್ನು **ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ** - ಎಂಬ ತ್ರಿವಿಧವಾದ ತಾಪಗಳ ಶಾಂತಿಯೆಂತಲೂ ಕರೆಯ ಬಹುದು. ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಆತ್ಮ - ಇವಕ್ಕೆ ಸಂಬಂಧಿಸಿದುದು. ಆಧ್ಯಾತ್ಮಿಕ- ಇವುಗಳ ತಾಪಹರಣಕ್ಕಾಗಿ ಶಾಂತಿಯ ಉಚ್ಚಾರಣೆಯೊಂದೇ ಸಾಲದು. ಸಾಧನೆಗಳಿರಬೇಕು. ಭಕ್ತಿ, ಉಪಾಸನೆ, ಅಧ್ಯಯನ, ವ್ಯಾಯಾಮ, ಯೋಗಸಾಧನೆ - ಮುಂತಾದುವುಗಳಿಂದ ಆಧ್ಯಾತ್ಮಿಕ ವಾದ ಸುಖ - ಶಾಂತಿಗಳು ಲಭಿಸುವವು. 'ಆಧಿಭೌತಿಕ ಶಾಂತಿ' ಎಂಬುದು ಸಮಸ್ತ ಜೀವರಾಶಿಗೆ ಸಂಬಂಧಿಸಿದುದು. ಮನುಷ್ಯರು ಮನುಷ್ಯರಲ್ಲಿ ಮಾತ್ರವೇ ಅಲ್ಲದೆ, ಸಕಲ ಪ್ರಾಣಿಜಗತ್ತಿನಲ್ಲಿ ಸುಯೋಗ್ಯವ್ಯವಹಾರ ನಡೆಸುವುದರಿಂದ ಇದು ಲಭಿಸುವುದು. ಈ ವೈದಿಕ ಆದರ್ಶ ಬಹಳ ಮೇಲು ಮಟ್ಟದ ಸಮಾಜವಾದವೇ ಆಗಿದೆ. ಗೀತೆಯಲ್ಲಿ ಹೇಳಿರುವ ಸಮದರ್ಶಿತ್ವ ಹೀಗಿದೆ - (೫-೧೮)

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ

(ವಿದ್ಯೆವಿನಯಗಳಿಂದ ಕೂಡಿದವನಲ್ಲಿ, ಬ್ರಾಹ್ಮಣನಲ್ಲಿ, ಗೋವಿನಲ್ಲಿ, ಆನೆಯಲ್ಲಿ, ನಾಯಿಯಲ್ಲಿ ಹಾಗೂ ನಾಯಿಯನ್ನು ತಿನ್ನತಕ್ಕ ಮನುಷ್ಯರಲ್ಲಿ ಕೂಡ, ಜ್ಞಾನಿಗಳು ಸಮಾನತೆಯ ದೃಷ್ಟಿಯುಳ್ಳವರಾಗಿರುತ್ತಾರೆ.)

ಇಂದಿನ ಪ್ರಪಂಚದ ರಾಜನೀತಿ ಮಾನವರಲ್ಲಿ ವರ್ಣ ಭೇದವನ್ನು ನಿರಾಕರಿಸುತ್ತದೆ. ಇದು ಒಳ್ಳೆಯದೇ, ಆದರೆ, ಸಕಲ ಜೀವಿಗಳಲ್ಲಿಯೂ ಸಮದರ್ಶಿತ್ವವನ್ನು ಇಟ್ಟಿರುವ ಋಷಿಮುನಿಗಳ ಭಾರತೀಯ ಆದರ್ಶಕ್ಕೆ ಇದು ಸಮಾನವಾಗದು. ಭಾರತೀಯ ಆದರ್ಶ ಸಂಗತಿಗಳನ್ನು ನೆನಸಿಕೊಳ್ಳುವುದೇ ನಮಗೀಗ ಮೊದಲು ಬೇಕಾದುದು. ಸಮಾನತೆಯ ಹೆಸರಿನಲ್ಲಿ

ಲೋಕೋನ್ನತಿಯ ಹೆಸರಿನಲ್ಲಿ ಇಂದು ದ್ವೇಷ, ಹಿಂಸೆ, ಅನ್ಯಾಯಗಳು ನಡೆಯುತ್ತವೆ. ಶಾಂತಿಯ ಪಥದಲ್ಲಿ ಜನತೆ ಇರುವಂತೆ ಕಾಣುವುದಿಲ್ಲ. ಏಕೆಂದರೆ, ವೈದಿಕ ಶಾಂತಿ ಮಂತ್ರವು ತಿಳಿಸುವಂತೆ ಮೊತ್ತಮೊದಲು ವ್ಯಕ್ತಿಯು ತನ್ನ ಕಲುಷಿತ ಮನಸ್ಸನ್ನು ಸ್ವಚ್ಛಗೊಳಿಸಬೇಕು. ಶಾಂತ ಪಡಿಸಬೇಕು. ಅದರಿಂದ ಎಲ್ಲರಲ್ಲಿಯೂ ಮೈತ್ರೀಭಾವವನ್ನು ಮೂಡಿಸಬೇಕು. ಆಗ ಮಾತ್ರ ಶಾಂತಿ ನೆಲೆಯೂರಬಲ್ಲುದು. ತನ್ನ ಹೃದಯದಲ್ಲಿ ಅನ್ಯರಿಗೆ ದ್ರೋಹ ಮಾಡುವ ಭಾವನೆಯಿರುವ ತನಕ, ಶಾಂತಿಯ ವಿಚಾರವೇ ಬರಲಾರದು. ವಿಚಾರವೇನೋ ಬಂದರೂ 'ಶಾಂತಿ' ಎಂಬ ಹೆಸರಿನಲ್ಲಿ 'ಅಶಾಂತಿ' ಯೇ ತಾಂಡವವಾಡೀತು! ಇದನ್ನೇ ಸರ್ವಜ್ಞಕವಿ ಚೆನ್ನಾಗಿ ಹೇಳಿದ್ದಾನೆ-

ನ್ಯಾಯದಲಿ ನಡೆದು ಆ । ನ್ಯಾಯವೇ ಬಂದಿಹುದು
ನಾಯಿಗಳು ಆರು ಇರುವನಕ - ನರರೊಂದು
ನಾಯಿಹಿಂಡೆಂದ - ಸರ್ವಜ್ಞ

ಸ್ವಾರ್ಥದ ರೂಪಾಂತರಗಳಾದ ಕಾಮ ಕ್ರೋಧಾದಿ ಆರು ಅಂತಃಶತ್ರುಗಳು ಇರುವಷ್ಟು ಸಮಯ ಮನುಷ್ಯರು ನಾಯಿಗಳ ಹಾಗೆ ಪರಸ್ಪರ ದ್ವೇಷಮಾಡುತ್ತಾ ಇರುತ್ತಾರೆ. ಈ ಆರು ನಾಯಿಗಳಿಲ್ಲದಂತಾಗುವುದೇ ಅಂತಃಕರಣ ಶುದ್ಧಿ.

ಹೀಗೆ ವ್ಯಕ್ತಿ ತನ್ನ ಅಂತಃಕರಣ ಶುದ್ಧಿಯ ಮೂಲಕ ಶಾಂತಿಯನ್ನು ಗಳಿಸಿ, ತನ್ನ ಪರಿವಾರ, ಕುಟುಂಬ, ಜಾತಿ, ಸಂಘ, ಸಮಾಜ, ದೇಶ, ಸಾಮ್ರಾಜ್ಯ, ಜಗತ್ತುಗಳಲ್ಲಿ ಶಾಂತಿಯನ್ನು ಅಭಿವೃದ್ಧಿಗೊಳಿಸಲು ಯತ್ನಿಸಬಲ್ಲನು. ಇದು ವೇದೋಕ್ತವಾದ ಆದರ್ಶ.

ಇನ್ನು ಮೂರನೆಯದು 'ಆಧಿದೈವಿಕ ಶಾಂತಿ'. ಹಿಂದಿನ ಎರಡು ಬಗೆಯ ಶಾಂತಿ ದೊರಕಿತೆಂದರೆ, ಮೂರನೆಯದನ್ನು ಸಾಧಿಸಲಿಕ್ಕಾದೀತು. ಪಂಚಭೂತಗಳು, ಸೂರ್ಯಚಂದ್ರಾದಿ ಗ್ರಹಗಳು, ನಕ್ಷತ್ರಗಳು, ವಿದ್ಯುತ್ತು - ಇತ್ಯಾದಿಗಳ ಶಾಂತಿಯನ್ನು ಯಜ್ಞ, ದಾನ, ತಪಸ್ಸು - ಮುಂತಾದ ಸತ್ಕರ್ಮಗಳಿಂದ, ವ್ರತಪೂಜಾದಿಗಳಿಂದ ಸಾಧಿಸಬಹುದೆಂದು ವೇದವು ಸಾರುತ್ತದೆ.

ಆಧ್ಯಾತ್ಮಿಕ ಶಾಂತಿಯಲ್ಲಿ ಮೂರು ಪ್ರಯೋಜನಗಳು ಉದ್ದಿಷ್ಟವಾಗುತ್ತವೆ. ಅವನ್ನು ಶಾರೀರಕ, ಮಾನಸಿಕ ಮತ್ತು ಆತ್ಮಿಕ - ಎಂದು ವಿಭಾಗಿಸಬಹುದು. ಶೌಚ, ವ್ಯಾಯಾಮ, ಶ್ರಮ, ಸ್ನಾನ, ಪಾನ, ಭೋಜನ - ಇವುಗಳ ಕ್ರಮಬದ್ಧ ವ್ಯವಹರಣೆ ಶಾರೀರಿಕವಾದ ಶಾಂತಿಗೆ ದಾರಿ. ಇವುಗಳೊಡನೆ ಅಧ್ಯಯನ, ಭಕ್ತಿ, ಧ್ಯಾನ, ಭಜನ, ಚಿಂತನಶೀಲತೆಗಳಿಂದ ಮತ್ತು ತದನುಗುಣವಾದ ಶಾರೀರಿಕ ಮಾನಸಿಕ ಕಾರ್ಯಗಳಿಂದ ಮಾನಸಿಕ ಹಾಗೂ ಆತ್ಮಿಕ ಶಾಂತಿಗಳು ಲಭಿಸುವವು. ಇವನ್ನೇ ಇನ್ನೊಂದು ವಿಧವಾಗಿ ಸ್ಥೂಲಶರೀರ, ಸೂಕ್ಷ್ಮಶರೀರ ಕಾರಣಶರೀರಗಳಿಗೆ ಸಂಬಂಧಿಸಿದವಾಗಿ ತಿಳಿದುಕೊಳ್ಳಬಹುದು.

ಸಮಾಜದ ಮತಧರ್ಮಗಳ ಸಂಪ್ರದಾಯಗಳಂತೆ ಆಚರಿಸುವ ಸತ್ಕಾರ, ಪೂಜೆ, ವ್ರತ, ಹಬ್ಬ - ಮುಂತಾದ ಪುಣ್ಯಕ್ರಿಯೆಗಳು ತ್ರಿವಿಧತಾಪಗಳ ಪರಿಹಾರಕ್ಕಾಗಿಯೇ ಇರುತ್ತವೆ.. ದೇವರಿಗೆ, ಅಗ್ನಿಗೆ, ಗುರುಹಿರಿಯರಿಗೆ ಪ್ರದಕ್ಷಿಣೆಯನ್ನು ಮೂರು ಬಾರಿ ಮಾಡುವುದು ರೂಢಿ.

ಆರತಿಯೆತ್ತುವಾಗ ಮೂರು ಬಾರಿ ಚಿಕ್ಕದಾಗಿ ಮತ್ತೆ ಮೂರು ಬಾರಿ ಸ್ವಲ್ಪ ದೊಡ್ಡದಾಗಿ ಆ ಮೇಲೆ ಕೊನೆಗೆ ಮೂರು ಬಾರಿ ತುಂಬ ದೊಡ್ಡದಾಗಿ ವಿಸ್ತರಿಸಿ ಎತ್ತಬೇಕೆನ್ನುತ್ತಾರೆ. ಇದು ಮೂರರ ಆವೃತ್ತಿಯ ದ್ಯೋತಕವಾಗಿದ್ದು, ತಾಪತ್ರಯಗಳ ಪರಿಹಾರ ಮೂಲಕವಾದ ಶಾಂತಿಯನ್ನೇ ಉದ್ದೇಶಿಸಿದೆ. ಈ ಮೂರು ತಾಪಗಳನ್ನು ಕಟ್ಟಿಡುವ ಸಂಕೇತವಾಗಿ ಯಜ್ಞೋಪವೀತಕ್ಕೆ ಎಳೆಗಳು ಮೂರು ಎನ್ನಲಾಗಿದೆ. ಆ ಮೂರೆಳೆಗಳು ಬ್ರಹ್ಮಗ್ರಂಥಿಯಿಂದ ಬಂಧಿತವಾಗಿರುವುದು 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂಬ ಪ್ರಾರ್ಥನೆಗೆ ಅನುಗುಣವಾಗಿ ಅರ್ಥಪೂರ್ಣವಾಗಿದೆ.

ಲೋಕದಲ್ಲಿ ನಾವು ಗುರು- ಶಿಷ್ಯ , ಪಂಡಿತ - ಪಾಮರ , ಉಚ್ಚ - ನೀಚ, ಧನಿಕ- ದರಿದ್ರ, ಅಧಿಕಾರಿ- ಅನಧಿಕಾರಿ - ಎಂಬ ದ್ವಂದ್ವವರ್ಗವನ್ನು ಕಾಣುತ್ತೇವೆ. ಈ ವರ್ಗಗಳು, ಅಪರಿಹಾರ್ಯ. ಧನಿಕದರಿದ್ರರ ಅಂತರವನ್ನು ರಾಜಕೀಯ ಬಲದಿಂದ ಅಥವಾ ದಾನಧರ್ಮದ ಬಲದಿಂದ ಕಡಮೆಮಾಡಬಹುದು. ಈ ಎರಡು ವರ್ಗಗಳೊಳಗೆ ವೈಷಮ್ಯವೆಂಬುದು ಯೋಗ್ಯವಲ್ಲ, ಅದು ಅಪರಿಹಾರ್ಯವೂ ಅಲ್ಲ. ಈ ವರ್ಗ ಒಂದರೊಡನೊಂದು ಬೆರೆತು ಅಭಿವೃದ್ಧಿಗೊಳ್ಳಬೇಕೆಂದು ಜ್ಞಾನಿಗಳ ಆಶಯ. ಈ ಹೊಂದಾಣಿಕೆಯನ್ನು 'ಲೋಕಸಂಗ್ರಹ' ಅಥವಾ 'ಸಂಘಟನೆ' ಎಂದಿದ್ದಾರೆ. ಸಾಮುದಾಯಿಕವಾಗಿ ಮಾಡಬೇಕಾದ ಪ್ರಶಸ್ತಕರ್ಮವೇ ಲೋಕಸಂಗ್ರಹ. ಅದಕ್ಕಾಗಿ ರಚಿತವಾದಂತಿರುವ ಐದು ಉಪದೇಶಗಳಿಂದ ಕೂಡಿದೆ ಈ ಕೆಳಗಿನ ಶಾಂತಿ ಸಂದೇಶ -

ಓಂ ಸಹ ನಾವವತು ಸಹನೌ ಭುನಕ್ತು
ಸಹ ವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು
ಮಾ ವಿದ್ವಿಷಾವಹೈ ಓಂ ಶಾಂತಿ ಶ್ಯಾಂತಿ ಶ್ಯಾಂತಿಃ

(ನಮ್ಮಿಬ್ಬರ ಜ್ಞಾನವು ನಮ್ಮಿಬ್ಬರನ್ನು ರಕ್ಷಿಸಲಿ, ನಮಗಿಬ್ಬರಿಗೂ ಭೋಜನವನ್ನು ನೀಡಲಿ, ನಾವಿಬ್ಬರೂ ಒಟ್ಟಾಗಿ ಶಕ್ತಿಯನ್ನು ಗಳಿಸಿಕೊಳ್ಳೋಣ, ನಮ್ಮ ಜ್ಞಾನವು ತೇಜಸ್ವಿಯಾಗಿ ಪರಿಣಮಿಸಲಿ, ಇತರರಿಂದ ನಾವು ಸೋಲದೆ ಇದ್ದು ಅನ್ಯೋನ್ಯವಾಗಿ ಸ್ನೇಹದಿಂದಿದ್ದು ದ್ವೇಷಿಸದೆ ಇರೋಣ.)

ಈ ಪ್ರಾರ್ಥನೆ ಜ್ಞಾನದ ನಿಜವಾದ ಲಕ್ಷಣವನ್ನು ತಿಳಿಸುತ್ತದೆ. ಅಧ್ಯಯನದಿಂದ ಸ್ವಸಂರಕ್ಷಣೆಯ ಶಕ್ತಿ ಬರುವುದಿಲ್ಲವಾದರೆ, ಜೀವನೋಪಾಯ (ಹೊಟ್ಟೆ ಹೊರೆಯುವ) ಪ್ರಶ್ನೆ ಕಠಿನವಾಗುವುದಾದರೆ, ಉತ್ಸಾಹಹೀನತೆಯುಂಟಾಗುವುದಾದರೆ, ತೇಜೋಹೀನತೆಯೇ ಅಧಿಕವಾಗುವುದಾದರೆ, ಪರಸ್ಪರ ದ್ವೇಷಹೆಚ್ಚುವುದಾದರೆ - ಅದು ನಿಜವಾದ ಜ್ಞಾನವಲ್ಲ. ಪಾಠಶಾಲೆ, ಶಿಕ್ಷಣಾಲಯ, ಗುರುಕುಲ, ಆಶ್ರಮ, ವಿಶ್ವವಿದ್ಯಾಲಯ - ಮುಂತಾದವನ್ನು ನಡೆಸುವವರು ಲಕ್ಷಿಸತಕ್ಕ ಅಂಶ ಈ ಮಂತ್ರದಲ್ಲಿದೆ. ನಮ್ಮ ಶಿಕ್ಷಣದ ಸ್ವರೂಪ ಹೇಗಿರಬೇಕೆಂಬುದನ್ನು ಈ ಮಂತ್ರಾರ್ಥವು ತಿಳಿಸುವುದರಿಂದ ಇದು ಲೋಕಕ್ಕೆಲ್ಲ ಮಾರ್ಗದರ್ಶಕವಾಗಿದೆ.

ಕೇನೋಪನಿಷತ್ತಿನ ಇನ್ನೊಂದು ಶಾಂತಿ ಸಂದೇಶ ಇಲ್ಲಿ ಉಲ್ಲೇಖನೀಯ. ಇದು ಸತ್ಕರ್ಮಸಾಧನೆಗಾಗಿ ವೈಯಕ್ತಿಕ ಕ್ಷೇಮವನ್ನು ಉದ್ದೇಶಿಸಿದೆ. ಇದು ಹೀಗಿದೆ -

(ನನ್ನ ಎಲ್ಲಾ ಅಂಗಗಳು ಹೃಷ್ಟಪುಷ್ಟವಾಗಲಿ! ನನ್ನ ಮಾತು, ಪ್ರಾಣ, ಕಣ್ಣು, ಕಿವಿ - ಮುಂತಾದ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳು ಬಲಿಷ್ಠವಾಗಲಿ, ಇವೆಲ್ಲವೂ ಬ್ರಹ್ಮವಸ್ತುಜ್ಞಾನ ವಿಷಯಗಳು. ನಾನು ಜ್ಞಾನವನ್ನು ನಿರಾಕರಿಸೆನು, ಜ್ಞಾನವು ನನ್ನನ್ನು ತಿರಸ್ಕರಿಸದಿರಲಿ. ಯಾರೊಬ್ಬರ ನಾಶವೂ ಆಗದಿರಲಿ. ಉಪನಿಷತ್ತಿನಲ್ಲಿ ಹೇಳಿರುವ ಧರ್ಮ ನನ್ನಲ್ಲಿ ಸ್ಥಿರವಾಗಿ ನಿಲ್ಲಲಿ.

ಭಾರತೀಯ ಧಾರ್ಮಿಕ ಸಂಪ್ರದಾಯಗಳಲ್ಲಿ ಶಾಂತಿಗಾಗಿ ಮಾಡುವ ಕರ್ಮಗಳು ಅನೇಕವಾಗಿವೆ. ಯಾವ ಕಾರ್ಯಕ್ರಮಕ್ಕೂ ಆದಿಯಲ್ಲಿ ವಿಘ್ನಶಾಂತಿಗಾಗಿ ಮಾಡುವ ಸ್ತುತಿಯಿರುತ್ತದೆ -

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ

ಈ ವಿಘ್ನೇಶಸ್ತುತಿಯ ಮೂಲಕ ವಿಘ್ನಶಾಂತಿಯನ್ನು ಆವಾಹಿಸಿಯೇ ಸಕಲ ಸತ್ಕ್ರಿಯೆಗಳು ಪ್ರಾರಂಭವಾಗುತ್ತವೆ. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ವೆನಿಸುವ ಯಾವ ಕಾರ್ಯವಿದ್ದರೂ ಅದು ಸುಸೂತ್ರವಾಗಿ ನೆರವೇರುವಂತೆ , ಅದಕ್ಕೆ ಎಡರಡಸದಂತೆ, ಈ ಪ್ರಾರ್ಥನೆ ನಡೆಯುವುದು ವಾಡಿಕೆಯೇ ಆಗಿದೆ. ಶಾಂತಿ ಕ್ರಿಯೆಗಳಲ್ಲಿ ಗ್ರಹಶಾಂತಿ, ಭೂತಶಾಂತಿ, ಉದಕಶಾಂತಿ, ಋತುಶಾಂತಿ, ರೋಗಶಾಂತಿ - ಮುಂತಾದುವುಗಳಿಗೆ ಸಂಬಂಧಿಸಿದ ಮಂತ್ರ, ಔಷಧ, ಹೋಮ, ಪೂಜೆ ಮುಂತಾದವನ್ನು ಆಚರಿಸುತ್ತಾರೆ. ದಾನಧರ್ಮಗಳನ್ನು ಮಾಡುತ್ತಾರೆ. ಮಂತ್ರೋಕ್ತವಾಗಿ ದಾನ ಮಾಡುವಲ್ಲೆಲ್ಲ ದಾನದ ಗುರಿ ಕೀರ್ತಿಯಲ್ಲ , ಸ್ವರ್ಗ ಪ್ರಾಪ್ತಿಯಲ್ಲ, ಭೋಗ ಪ್ರಾಪ್ತಿಯೂ ಅಲ್ಲ, ಶ್ಲಾಘನೆಯಲ್ಲ. ಕೇವಲ ಶಾಂತಿಯೇ ಆಗಿದೆ

ಅನಂತ ಪುಣ್ಯ ಫಲದಮತಃ ಶಾಂತಿಂ ಪ್ರಯಚ್ಛಮೇ

ಹೀಗೆನ್ನುವಲ್ಲಿ ಶಾಂತಿಯನ್ನೇ ದಾನದ ಉದ್ದೇಶವಾಗಿ ಸಾರಲಾಗಿದೆ. ನಮ್ಮ ಪುರಾಣ ಇತಿಹಾಸಕಾಲಗಳಲ್ಲಿ ತ್ಯಾಗ - ದಾನ - ಬಲಿದಾನಗಳಿಂದ ಪ್ರಖ್ಯಾತರಾದ ಮಹಾಪುರುಷರು ಹಾಗೂ ವೀರರು ಶಾಂತಿಯನ್ನೇ ತಮ್ಮ ಕಾರ್ಯಕ್ಕೆ ಗುರಿಯಾಗಿಟ್ಟರು. ಕ್ಷೇಮೇಂದ್ರನೆಂಬ ಕವಿ ಪರೋಪಕಾರದಂತಹ ಪುಣ್ಯಕಾರ್ಯ ಬೇರೆಯಿಲ್ಲವೆನ್ನುತ್ತಾನೆ. ಅದರಲ್ಲೇ ಶೀಲ, ಕುಲ, ಸದ್ಭಾವ, ಧರ್ಮ, ತತ್ವ - ಮೊದಲಾದವು ಅಡಕವಾಗಿವೆಯೆಂದು ಹೇಳುತ್ತಾ ಶಾಂತಿಯನ್ನು ಅದರಲ್ಲೇ ಗ್ರಹಿಸಲು ಬರುತ್ತದೆಂದು ಹೇಳುತ್ತಾನೆ -

ಶೀಲಂ ಶೀಲಯತಾಂ ಕುಲಂ ಕಲಯತಾಂ ಸದ್ಭಾವಮಭ್ಯಸ್ಯತಾಂ
ವ್ಯಾಜಂ ವರ್ಜಯತಾಂ ಗುಣಂ ಗಣಯತಾಂ ಧರ್ಮೇ ಧಿಯಂ ಬಧ್ನತಾಂ
ಶಾಂತಿಂ ಚಿಂತಯತಾಂ ತಮಃ ಶಮಯತಾಂ ತತ್ತ್ವಶ್ರುತಿಃ ಶೃಣ್ವತಾಂ
ಸಂಸಾರೇ ನ ಪರೋಪಕಾರ ಸದೃಶಂ ಪಶ್ಯಾಮಿ ಪುಣ್ಯಂ ಸತಾಂ ॥

(ಶೀಲವನ್ನು ಗಳಿಸುವುದು, ಒಳ್ಳೆಯ ಕುಲವನ್ನು ಸೇರುವುದು. ಒಳ್ಳೆಯ ಭಾವನೆಯನ್ನು ಅಭ್ಯಸಿಸುವುದು, ಜಗಳವನ್ನು ಬಿಟ್ಟುಬಿಡುವುದು, ಗುಣವನ್ನು ಲಕ್ಷ್ಯವಿಡುವುದು, ಧರ್ಮದಲ್ಲಿ

ಬುದ್ಧಿಯನ್ನಿಡುವುದು, ಶಾಂತಿಯನ್ನು ಚಿಂತನೆಮಾಡುವುದು, ತಮೋಗುಣವನ್ನು ನಾಶಮಾಡುವದು, ತತ್ವ ಜ್ಞಾನವನ್ನು ಕೇಳುವುದು - ಇವೆಲ್ಲವೂ ಪರೋಪಕಾರಗುಣದಲ್ಲಿ ಅಂತರ್ಗತವಾಗಿ ರುವುದರಿಂದ ಪರೋಪಕಾರಕ್ಕೆ ಸಮಾನವಾದ ಪುಣ್ಯದ ಕಾರ್ಯ ಇನ್ನೊಂದಿಲ್ಲ.)

ಪರೋಪಕಾರದ ಅಥವಾ ತ್ಯಾಗದ ಫಲ ಶಾಂತಿ. ಶಾಂತಿಯನ್ನು 'ಅಮೃತತ್ವ' ಎಂತಲೂ ಕರೆದಿದ್ದಾರೆ. ಅದು ಚಿರಂತನವಾದ ಸೌಭಾಗ್ಯ -

ನ ಕರ್ಮಣಾ ನ ಪ್ರಜಯಾ ನಾ ಧನೇನ
ತ್ಯಾಗೇನೈಕೇ ಅಮೃತತ್ವಮಾನಶುಃ

ಅಮೃತತ್ವವನ್ನು - ಅಂದರೆ ಶಾಂತಿಯನ್ನು ಪಡೆಯುವುದಕ್ಕಾಗಿ ಹಲವಾರು ಲೌಕಿಕ ಕರ್ಮಗಳನ್ನು ಮಾಡುವವರಿದ್ದಾರೆ. 'ನಾಪುತ್ರಸ್ಯ ಗತಿಃ' ಎಂಬ ವಾಕ್ಯದಂತೆ ಮಕ್ಕಳಿಲ್ಲದವನಿಗೆ ಸದ್ಗತಿಯಿಲ್ಲ. ಆದುದರಿಂದ ಪುತ್ರವಂತನು ಸದ್ಗತಿಪಡೆಯುವನೆಂದು ತಿಳಿದವರಿದ್ದಾರೆ. ಹಾಗೆಯೇ ಚತುರ್ವಿಧ ಪುರುಷಾರ್ಥಗಳಲ್ಲಿ ಒಂದಾಗಿರುವ ಧನದಿಂದ ಇತರ ಎಲ್ಲವನ್ನೂ ಸಾಧಿಸಬಹುದು-ಎನ್ನುವವರಿದ್ದಾರೆ. ಆದರೆ ಮೇಲಿನ ವೇದ ವಾಕ್ಯವು ಇವಾವುದರಿಂದಲೂ ಅಮೃತತ್ವ ದೊರೆಯದು, ತ್ಯಾಗದಿಂದ ಮಾತ್ರ ದೊರೆಯುವುದೆಂದು ಸಾರುತ್ತದೆ. ತ್ಯಾಗವು ಶಾಂತಿಗೆ ದಾರಿ. ತ್ಯಾಗದಿಂದಲೇ ಶ್ರೀ ರಾಮನು 'ಶಾಂತಮೂರ್ತಿ' ಎನಿಸಿದ್ದನು -

ರಾಜೇಂದ್ರಂ ಸತ್ಯಸಂಧಂ ದಶರಥತನಯಂ ಶ್ಯಾಮಲಂ ಶಾಂತಮೂರ್ತಿಂ ॥

ಶ್ರೀ ರಾಮನ ಶಾಂತತೆ ಎಂಬುದು ಕ್ರೋಧ - ಶೌರ್ಯ - ಲೋಕಹಿತ ಭಾವಗಳನ್ನು ಅಂಕಿತದಲ್ಲಿಟ್ಟುಕೊಂಡ ಗಾಂಭೀರ್ಯವಲ್ಲದೆ, ದೌರ್ಬಲ್ಯ ಭಯಗಳ ಪರಿಣಾಮವಲ್ಲವೆಂಬುದು ವಿದಿತವಾಗುತ್ತದೆ.

ಶ್ರೀ ರಾಮನು ತ್ಯಾಗದಲ್ಲೇ ಶಾಂತಿಯನ್ನೂ ತೃಪ್ತಿಯನ್ನೂ ಕಂಡವನು. ದಶರಥನು ತನಗೆ ರಾಜ್ಯಾಭಿಷೇಕ ಮಾಡುವನೆಂಬ ವಾರ್ತೆ ಕೇಳಿಬಂದಾಗ ಅವನಿಗೆ ಹೆಚ್ಚಿನ ಸಂತೋಷವೇನೂ ಆಗಲಿಲ್ಲವಂತೆ! ಅವನು ಎಂದಿನಂತೆಯೇ ಇದ್ದನು. ಆ ಮೇಲೆ ಕೈಕೆ ಅವನನ್ನು ವನವಾಸಕ್ಕೆ ಕಳುಹಲು ಕಾರಣಳಾದುದನ್ನು ಕೇಳಿದಾಗಲೂ ಅಷ್ಟೇ. ಅವನಿಗೆ ಆಕೆಯ ಮೇಲೆ ಕೋಪ ಬರಲಿಲ್ಲ. ತಂದೆಯ ಮೇಲೆ ಅಥವಾ ತಮ್ಮನಾದ ಭರತನ ಮೇಲೆ ವೈರ ಮೂಡಲಿಲ್ಲ. ಅದಕ್ಕಾಗಿ ವ್ಯಸನವೂ ಆಗಲಿಲ್ಲ.

ಅವನು ಕೈಕೆಯೊಡನೆ "ಹಾಗೆಯೇ ಆಗಲಿ. ನಾನು ವನವಾಸಕ್ಕೆ ತೆರಳುವೆನು. ರಾಜನ ಮಾತನ್ನು ಸಲ್ಲಿಸುವುದಕ್ಕಾಗಿ ಜಟೆಯನ್ನು ಧರಿಸಿ ನಾರುಡೆಯನ್ನು ಉಡುತ್ತೇನೆ" ಎಂದನು.

ಭಾಸಕವಿಯ ಪ್ರತಿಮಾನಾಟಕದಲ್ಲಂತೂ ವಲ್ಕಲವನ್ನುಟ್ಟು ಕಾಡಿಗೆ ತೆರಳುವುದೇ ತನಗೆ ಗೌರವವೆಂಬಂತೆ ಶ್ರೀ ರಾಮನು ವರ್ತಿಸುತ್ತಾನೆ. ಇಂತಹ ರಾಜ್ಯತ್ಯಾಗವು ಶಾಂತಿಯನ್ನು ತಂದುದು ಶ್ರೀ ರಾಮನಿಗೆ ಮಾತ್ರವಲ್ಲ, ಕೈಕೆಗೂ ಅದು ಮನಶ್ಶಾಂತಿಕರವಾಗಿತ್ತು. ಸೀತೆಗೆ ಅದರಿಂದ ಏನೂ ಬೇಸರವಾಗಲಿಲ್ಲ. ಮುಂದೆ ರಾವಣಾದಿ ರಾಕ್ಷಸರ ಸಂಹಾರದಿಂದ

ಧರ್ಮೋದ್ಧಾರವಾಗಿ ಅದೇ ತ್ಯಾಗವು ವಿಶ್ವಶಾಂತಿಗೆ ಕಾರಣವಾಯಿತೆನ್ನುವಾಗ ಅದರ ಹಿರಿಮೆ ಯಾರಿಗೆ ತಾನೆ ವೇದ್ಯವಾಗದು?

ಕೌಟುಂಬಿಕವಾಗಿ ಹಾಗೂ ವೈಯಕ್ತಿಕವಾಗಿ ಶಾಂತಿಯನ್ನು ಹೇಗೆ ಪಡೆಯಬಹುದೆಂಬುದನ್ನು ಅಥರ್ವವೇದದ ಒಂದು ಮಂತ್ರ ಹೀಗೆ ತಿಳಿಸುತ್ತದೆ

ಅನುವ್ರತಃ ಪಿತುಃ ಪುತ್ರೋ ಮಾತ್ರಾ ಭವತು ಸಮ್ಮನಾಃ
ಜಾಯಾ ಪತ್ಯೇ ಮಧುವತೀಂ ವಾಚಂ ವದತು ಶಾಂತಿಮಾನ್
ಮಾ ಭ್ರಾತಾ ಭ್ರಾತರಂ ದ್ವಿಕ್ಷನ್ ಮಾ ಸ್ವಸಾರಮುತಸ್ವಸಾ
ಸಮ್ಯಂಚಃ ಸವ್ರತಾ ಭೂತ್ವಾ ವಾಚಂ ವದತ ಭದ್ರಯಾ॥

(ಮಗನು ತಂದೆಗೆ ವಿಧೇಯನಾಗಿ ವರ್ತಿಸಲಿ, ತಾಯಿಯ ಮೇಲೆ ಒಳ್ಳೆಯ ಭಾವನೆಯನ್ನಿಡಲಿ, ಹೆಂಡತಿ ತನ್ನ ಗಂಡನೊಡನೆ ಸವಿನುಡಿಯನ್ನು ಆಡುತ್ತ ಶಾಂತಭಾವವನ್ನು ತಾಳಿರಲಿ, ಸಹೋದರನು ತನ್ನ ಸಹೋದರರನ್ನು ದ್ವೇಷಿಸದಿರಲಿ, ಸೋದರಿಯು ತನ್ನ ಸೋದರಿಯನ್ನು ದ್ವೇಷಿಸದಿರಲಿ. ಮನೆಯಲ್ಲಿ ಎಲ್ಲರೂ ಪರಸ್ಪರವಾಗಿ ನಿಯಮದಂತಿದ್ದು, ಶುಭಕರವಾದ ಮಾತನ್ನೇ ಆಡುತ್ತಿರಲಿ.)

ಒಂದು ಕಾಲದಲ್ಲಿ 'ವಸುಧೈವ ಕುಟುಂಬಕಂ' ಎಂಬ ತತ್ವವನ್ನು ಆಚರಿಸಿ ಜಗತ್ತಿಗೆ ಸಾರಿದ ನಮ್ಮ ಜನಾಂಗ ಇಂದು ಒಡೆದು ಚೂರುಚೂರಾಗಿದೆ. ಒಂದು ಮನೆಯೊಳಗೇ ಹಲವು ಪಂಗಡಗಳಾಗಿ ಒಬ್ಬರನ್ನೊಬ್ಬರು ದ್ವೇಷಿಸುವ ಸ್ಥಿತಿಯೊದಗಿದೆ. ಪರಸ್ಪರ ಪೋಷಕ - ಸಹಾಯಕ, ವಾತ್ಸಲ್ಯಮಯ ಸ್ಥಿತಿಯಲ್ಲಿದ್ದ ಸಂಯುಕ್ತ ಪರಿವಾರ ಈ ಕಾಲದಲ್ಲಿ ಅಸಂಯುಕ್ತವಾಗಿದೆ. ಧರ್ಮಬಾಹಿರ ಜೀವನದ ಕಡೆಗೆ ಮುಖಮಾಡಿದೆ. ಇದಕ್ಕೆಲ್ಲ ಕಾರಣ, ಅಜ್ಞಾನ. ವೇದ ಉಪನಿಷತ್ತು, ಗೀತೆ, ಪುರಾಣ ಇತಿಹಾಸಗಳ ಪರಿಚಯವಿಲ್ಲದಿರುವುದು. ವಿದೇಶೀಯರ ಭೌತಿಕ ಸಂಸ್ಕೃತಿಯ ದುಷ್ಪ್ರಭಾವ - ಎನ್ನಬಹುದು. ಇದರಿಂದ ಉಂಟಾಗಿರುವ ಅಶಾಂತಿಯನ್ನು ಪರಿಹರಿಸಲು ನಮ್ಮ ಪೂರ್ವ ಸಾಹಿತ್ಯದಿಂದ ಸತ್ಪ್ರೇರಣೆಯನ್ನು ಪಡೆಯುವುದು ಆವಶ್ಯಕ.

ವೈಯಕ್ತಿಕವಾಗಿ ಶಾಂತಿಯನ್ನು ಗಳಿಸುವ ಹಲವು ಉಪಾಯಗಳನ್ನು ನಾವು ಭಗವದ್ಗೀತೆಯಲ್ಲಿ ಕಾಣಬಹುದು. ಸ್ವಾರ್ಥದ ಕಾಮನೆಗಳನ್ನೂ ಅಹಂಕಾರವನ್ನೂ ಬಿಟ್ಟರೆ ಶಾಂತಿ ದೊರೆಯುವುದೆಂದು ಒಂದೆಡೆ ಹೇಳಿದೆ -

ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ
ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ (೨-೭)

ಈ ಮಾತು ಕರ್ಮಯೋಗವನ್ನು ದೃಷ್ಟಿಯಲ್ಲಿಟ್ಟು ಹೇಳಿದಂತಿದೆ. ಇನ್ನು ಜ್ಞಾನಯೋಗದಲ್ಲಿ ನೋಡೋಣ

ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ (೪-೩೯)

(ಪರವಸ್ತುವಿನಲ್ಲಿ ಮನಸಿಟ್ಟವನಾಗಿ, ಇಂದ್ರಿಯ ಜಯತ್ವವನ್ನು ತಾಳಿ, ಶ್ರದ್ಧೆಯಿಂದ ಕೂಡಿದವನು ಜ್ಞಾನವನ್ನು ಪಡೆಯುತ್ತಾನೆ. ಜ್ಞಾನ ಪ್ರಾಪ್ತಿಯಾದರೆ, ಬಹುಬೇಗನೆ ಶಾಂತಿ ದೊರೆಯುವುದು)

ಅಶಾಂತಿಗೆ ಕಾರಣಗಳಾದ ಕಾಮಕ್ರೋಧಾದಿಗಳು, ದ್ವೇಷ, ದರ್ಪಾದಿಗಳು ಅಜ್ಞಾನ ಜನ್ಯಗಳಾಗಿವೆ. ಜ್ಞಾನ ಪ್ರಾಪ್ತವಾಯಿತೆಂದರೆ, ಕ್ಷುಲ್ಲಕ ವಿಚಾರಗಳೆಲ್ಲವೂ ತೊಲಗಿಹೋಗಿ, ಮನಶ್ಶಾಂತಿ ಲಭಿಸುವುದು. ವೈಯಕ್ತಿಕವಾದ ಶಾಂತಿಯು ಸಮಾಜದ ಮೇಲೂ ವಿಶ್ವದ ಮೇಲೂ ಪ್ರಭಾವವನ್ನು ಬೀರುವುದು.

ಜ್ಞಾನವುಂಟಾಗಬೇಕಾದರೆ ಒಳ್ಳೆಯ ಬುದ್ಧಿಬೇಕು. ಅದಕ್ಕಾಗಿ ಮನುಷ್ಯನು ಯೋಗನಿರತನಾಗಬೇಕು. 'ಯೋಗ' ಎಂಬುದಕ್ಕೆ ಗೀತೆಯಲ್ಲಿ "ಯೋಗಃ ಕರ್ಮಸುಕೌಶಲಂ, ಸಮತ್ವಂ ಯೋಗ ಉಚ್ಚತೇ" ಎಂದು ವಿವರಣೆ ಕೊಟ್ಟಿದೆ. ಅದರಂತೆ ಕೌಶಲಯುಕ್ತವಾಗಿ ಕೆಲಸವನ್ನು ಮಾಡುವುದು ಅಂದರೆ ಪೂರ್ಣ ತನುಮನಃ ಶಕ್ತಿಗಳಿಂದ ಕಲಾಪೂರ್ಣವಾಗಿ ಉತ್ಕೃಷ್ಟವಾಗಿ ಕೆಲಸಮಾಡುವುದು ಯೋಗವೆನಿಸುತ್ತದೆ. ಕರ್ಮವೆಂಬುದು ದೇವರ ಪೂಜೆ (Work is Worship) ಕಾಯಕವೇ ಕೈಲಾಸ - ಎಂಬ ಭಾವನೆಯನ್ನಿಟ್ಟು ಪೂರ್ಣ ಮನಸ್ಸಿನಿಂದ ದುಡಿಯುವುದು - ಫಲಾಪೇಕ್ಷೆಯಿಲ್ಲದೆ ಕರ್ತವ್ಯಬುದ್ಧಿಯಿಂದ ದುಡಿಯುವುದು ಯೋಗವೆನಿಸುವುದು. ಹಾಗೆಯೇ ಸುಖದುಃಖ, ಮಾನ - ಅಪಮಾನಾದಿ ದ್ವಂದ್ವಗಳಲ್ಲಿ ಸಮತ್ವವೂ ಯೋಗವೆನ್ನಲಾಗಿದೆ. ಇಂತಹ ಯೋಗದಿಂದ ಕೂಡಿದವನೇ ಯುಕ್ತನು. ಯುಕ್ತನಾಗಿ ಕರ್ಮವನ್ನು ಮಾಡಬೇಕೆಂದು ಭಗವದ್ಗೀತೆ ಸಾರಿದೆ -

ನಾಸ್ತಿ ಬುದ್ಧಿರಯುಕ್ತಸ್ಯ ನಚಾಯುಕ್ತಸ್ಯ ಭಾವನಾ ।
ನಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಂ ॥

(ಅಯುಕ್ತನಿಗೆ - ಅಂದರೆ ಯೋಗರಹಿತನಿಗೆ ಬುದ್ಧಿಯಿರಲಾರದು. ಅವನಲ್ಲಿ ಭಕ್ತಿಯೂ ಇರಲಾರದು. ಭಕ್ತಿಯಿಲ್ಲದವನಿಗೆ ಶಾಂತಿ ದೊರೆಯದು. ಶಾಂತಿಯಿಲ್ಲದವನಿಗೆ ಸುಖವೆಲ್ಲಿ?)

ಇದರಿಂದ ಕರ್ತವ್ಯಶೀಲತೆಯಿಂದಲೇ ಬುದ್ಧಿ, ಶಕ್ತಿ, ಶಾಂತಿ, ಸುಖಗಳು ಪ್ರಾಪ್ತವಾಗುವುವೆಂದು ವಿದಿತವಾಗುವುದು. ಯೋಗವಿಲ್ಲದವನು ಅಜ್ಞಾನಿಯಾಗಿ ಅಶಾಂತನಾಗುವನು. ಅಜ್ಞಾನದೊಡನೆ ತಮೋಗುಣ ಬಂದು ಬಿಡುವುದು. ಅದನ್ನು ಪರಿಹರಿಸಲು ಶಿವನನ್ನು ಪ್ರಾರ್ಥಿಸಬೇಕೆಂದು ಶ್ರೀ ಶಂಕರಾಚಾರ್ಯರು 'ಶಿವಾನಂದಲಹರಿ' ಯಲ್ಲಿ ಹೀಗೆ ಹೇಳುತ್ತಾರೆ:-

ಏಕೋ ವಾರಿಜಬಾಂಧವಃ ಕ್ಷಿತಿನಭೋವ್ಯಾಪ್ತಂ ತಮೋಮಂಡಲಂ
ಭಿತ್ವಾ ಲೋಚನಗೋಚರೋಽಪಿ ಭವತಿ ತ್ವಾಂ ಕೋಟಿಸೂರ್ಯಪ್ರಭಃ
ವೇದ್ಯಃ ಕಿಂ ನ ಭವಸ್ಯಹೋ ಘನತರಂ ಕೀದೃಗ್ಭವೇನ್ಮತ್ತಮಃ
ತತ್ಸರ್ವಂ ವ್ಯಪನೀಯ ಮೇ ಪಶುಪತೇ ಸಾಕ್ಷಾತ್ ಪ್ರಸನ್ನೋ ಭವ

(ಒಬ್ಬನೇ ಆಗಿರುವ ಸೂರ್ಯನು ಭೂಮ್ಯಾಕಾಶಗಳಲ್ಲಿ ಹರಡಿರುವ ಕತ್ತಲೆಯ ಮೊತ್ತವನ್ನು ನಾಶಮಾಡಿ, ನಮ್ಮ ಕಣ್ಣಿಗೆ ಕಾಣಿಸುತ್ತಾನೆ. ನೀನಾದರೋ ಕೋಟಿ ಸೂರ್ಯರ ಪ್ರಕಾಶವುಳ್ಳವನು.

ಆದರೆ, ನನಗೆ ಕಾಣಿಸುವುದಿಲ್ಲವೇಕೆ? ಆಹಾ! ನನ್ನನ್ನು ಕವಿದಿರುವ ತಮಸ್ಸು ಅದಾವ ಬಗೆಯದೋ! ಎಲೈ ಶಿವನೇ, ಅದೆಲ್ಲವನ್ನೂ ಹೋಗಾಡಿಸಿ, ನನಗೆ ಪ್ರಸನ್ನನಾಗು.)

ಈ ಬಗೆಯ ಭಕ್ತಿಯ ಪ್ರಾರ್ಥನೆ ವೈಯಕ್ತಿಕವಾಗಿ ಸಾಮೂಹಿಕವಾಗಿ ನಿಯಮಬದ್ಧವಾಗಿ ಸಲ್ಲಬೇಕು. ಅಜ್ಞಾನಪರಿಹಾರಕ್ಕೆ ಇದೂ ಒಂದು ಉಪಾಯ. ದೇವರನ್ನು ಹೃದಯದಲ್ಲಿ ಧ್ಯಾನಿಸಿದರೆ ಇದೂ ಒಂದು ಉಪಾಯ. ದೇವರನ್ನು ಹೃದಯದಲ್ಲಿ ಧ್ಯಾನಿಸಿದರೆ ವಾಂಛಿತವೆಲ್ಲವೂ ಲಭಿಸುವವು ಎಂದು ಹೇಳಿದೆ:

ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಭವಃ
ಯೇಷಾಮಿಂದೀವರ ಶ್ಯಾಮೋ ಹೃದಯೇ ಸುಪ್ರತಿಷ್ಠಿತಃ

(ಯಾರ ಹೃದಯದಲ್ಲಿ ಕನ್ನೆಯ್ದಿಲೆಯಂತೆ ಕಪ್ಪಾದ ಶ್ರೀ ವಿಷ್ಣು ನೆಲಸಿರುವನೋ ಅವರಿಗೆ ಸಕಲ ವಿಧವಾದ ಲಾಭವೂ ಜಯವೂ ಲಭಿಸುವುವು. ಅವರಿಗೆ ಸೋಲವೆಂಬುದೇ ಇಲ್ಲ)

ಈ ಪ್ರಾರ್ಥನಾ ಶ್ಲೋಕದೊಡನೆ ಉಪನಿಷತ್ತಿನ ಪ್ರಾರ್ಥನೆಯೊಂದನ್ನು ಸೇರಿಸಿಕೊಳ್ಳಬೇಕು. ಅದು ಹೀಗಿದೆ -

ಅಸತೋ ಮಾ ಸದ್ಗಮಯ ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ ॥ ಓಂ ಶಾಂತಿ ಶ್ಯಾಂತಿ ಶ್ಯಾಂತಿಃ ॥

(ಭಗವಂತನೇ, ನನ್ನನ್ನು ಅಸತ್ಯದಿಂದ ಸತ್ಯದೆಡೆಗೆ ಒಯ್ಯು: ಕತ್ತಲೆ ಯಿಂದ (ಅಜ್ಞಾನದಿಂದ) ಬೆಳಕಿನ (ಜ್ಞಾನದ) ಕಡೆಗೆ ಕೊಂಡು ಹೋಗು; ಮರಣದಿಂದ ಅಮರತ್ವದ ಕಡೆಗೆ ಕೊಂಡೊಯ್ಯು. ಮೂರುವಿಧದ ತಾಪಗಳಿಂದ ಶಾಂತಿಯುಂಟಾಗಲಿ)

ಈ ಬಗೆಯ ಉದಾತ್ತ ದೃಷ್ಟಿಯನ್ನಿಟ್ಟ ಮನೀಷಿಗಳಾದ ಕವಿಗಳು ಉತ್ತಮವಾದ ಸಾಹಿತ್ಯ ಕೃತಿಗಳನ್ನು ನಿರ್ಮಾಣ ಮಾಡಿದ್ದಾರೆ. ಕಾವ್ಯ, ನಾಟಕ, ಅಲಂಕಾರದ ಗ್ರಂಥಗಳನ್ನು ರಚಿಸಿ, ಜನತೆಗೆ ಶಾಂತಿ - ಸುಖಗಳ ಮಾರ್ಗವನ್ನು ತೋರಿಸಿದ್ದಾರೆ. ಅವರ ರಚನೆಗಳು ಆದಿ, ಅಂತ್ಯ ಮಂಗಳಕರವಾಗಿ ಕವಿಗೂ ಪಾಠಕರಿಗೂ ಸುಖ - ಶಾಂತಿಗಳನ್ನು ತರುವಂಥವಾಗಿವೆ. ಆಶೀರ್ನಮಸ್ಕ್ರಿಯೂ ವಸ್ತುನಿರ್ದೇಶಗಳಲ್ಲಿ ಯಾವುದಾದರೊಂದು ಪದ್ಧತಿಯಿಂದ ಕಾವ್ಯಾರಂಭಮಾಡದ ಸಂಸ್ಕೃತ ಕವಿಗಳಿಲ್ಲವೆನ್ನಬಹುದು. ಅವರ ಕಾವ್ಯಗಳಲ್ಲಿ ಎಲ್ಲಿಯೂ ಧರ್ಮ ನೀತಿಗಳ ಪಕ್ಷಕ್ಕೇ ಅಂತಿಮ ಜಯ. ಆದುದರಿಂದ ಪರಿಣಾಮದಲ್ಲಿ ಲೋಕಕ್ಕೆ ಶಾಂತಿ, ಕ್ಷೇಮ. ಪ್ರಪಂಚಕ್ಕೆ ಶಾಂತಿಯನ್ನೇ ಹಾರಯಿಸಿದ ಪೂರ್ವ ಕವಿಗಳು ದುಃಖಾಂತವಾಗುವ ಕಾವ್ಯ ನಾಟಕಗಳನ್ನು ರಚಿಸಲಿಲ್ಲ. ಅವರ ಕೃತಿಯ ಅಂತ್ಯದಲ್ಲಿ ಶಾಂತಿಗಾಗಿ ಪ್ರಾರ್ಥನೆ ಇದ್ದೇ ಇದೆ. ಕವಿಕಾಳಿದಾಸನು, ಅಭಿಜ್ಞಾನ ಶಾಕುಂತಲ ದಲ್ಲಿ ಮಾಡಿರುವ ಅಂತ್ಯಮಂಗಲದಲ್ಲಿ ವಿಶ್ವಕ್ಕೆ ಶಾಂತಿಯ ಸಂದೇಶವಿದೆ.

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ
ಸರಸ್ವತೀ ಶ್ರುತ ಮಹತಾಂ ಮಹೀಯತಾಂ

ಮಮಾಪಿ ಚ ಕ್ಷಪಯತು ನೀಲಲೋಹಿತಃ
ಪುನರ್ಭವಂ ಪರಿಗತ ಶಕ್ತಿರಾತ್ಮಭೂಃ

(ರಾಜನು ಪ್ರಜೆಗಳಿಗೆ ಹಿತವಾಗಿ ವರ್ತಿಸಲಿ, ವಿದ್ವತ್ಕವಿಗಳ ಮಾತಿಗೆ ಗೌರವ ದೊರೆಯಲಿ, ಶಕ್ತಿ ಸಂಪನ್ನನೂ ಸ್ವಯಂಭುವೂ ಆದ ಶಿವನು ನನ್ನ ಪುನರ್ಜನ್ಮವನ್ನು ಪರಿಹರಿಸಲಿ. ಇದರಲ್ಲಿ ವಿಶ್ವಕ್ಕೇ ಶಾಂತಿಯ ಸಂದೇಶವಿದೆ.)

ರಾಜನು ದುಷ್ಟರ ದಳನವನ್ನೂ ಶಿಷ್ಟರ ಪರಿಪಾಲನೆಯನ್ನೂ ಮಾಡುವುದರಿಂದ ಲೋಕದಲ್ಲಿ ಶಾಂತಿಯುಂಟಾಗುತ್ತದೆ. ಕವಿವಾಣಿ ಜನತೆಗೆ ಸನ್ಮಾರ್ಗದರ್ಶನವಾಗಿ ಜ್ಞಾನದಾಯಕವಾಗಿ ಶಾಂತಿಗೆ ಕಾರಣವಾಗುತ್ತದೆ. ಪುನರ್ಜನ್ಮ ನಿವೃತ್ತಿಯಿಂದ ಪಾರಮಾರ್ಥಿಕವಾಗಿ ಪರಮ ಶಾಂತಿ ಲಭಿಸುತ್ತದೆ. ಹೀಗೆ ಇದು ವೈಯಕ್ತಿಕ, ಸಾಮಾಜಿಕ ಹಾಗೂ ಜಾಗತಿಕ ಶಾಂತಿಯನ್ನೇ ಲಕ್ಷ್ಯವಿಟ್ಟ ಕವಿವಾಣಿಯೆಂದು ಹೇಳಬಹುದು. ಇದೇ ರೀತಿಯಾಗಿ ಬೇರೆಬೇರೆ ಸಂಸ್ಕೃತ ಕವಿಗಳು ತಮ್ಮ ಕಾವ್ಯಗಳಲ್ಲಿ, ಕಾವ್ಯಸಂದೇಶಗಳಲ್ಲಿ ಮಾಡಿರುವ ಶಾಂತಿ ಪ್ರಾರ್ಥನೆಯ ವಿವಿಧ ಸ್ವರೂಪಗಳನ್ನು ನಾವು ಕಾಣಬಹುದು.

ಸಾಮಾನ್ಯವಾಗಿ ಪೂಜೆ, ವ್ರತ- ಇತ್ಯಾದಿ ಪುಣ್ಯಕಾರ್ಯಗಳಲ್ಲಿ ಕೊನೆಗೆ ಹೇಳುವ ಶ್ರೇಯ: ಪ್ರಾರ್ಥನೆ ಇದೆ. ಅದು ಕೂಡ ಮೂರು ವಿವಿಧ ಶಾಂತಿಯನ್ನೇ ಉದ್ದೇಶಿಸಿರುತ್ತದೆ. ಉದಾಹರಣೆಯಿದು-

ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ಭವೇತ್ಃ
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ
ದೇಶೋಽಯಂ ಕ್ಷೋಭರಹಿತಃ ಸಜ್ಜನಾಃ ಸಂತು ನಿರ್ಭಯಾಃ


ಪ್ರಜೆಗಳಿಗೆಲ್ಲ ಕ್ಷೇಮವು ಒದಗಲಿ, ನ್ಯಾಯವಾದ ರೀತಿಯಿಂದ ಭೂಮಿಯನ್ನು ಆಳಲಿ. ಗೋವುಗಳಿಗೂ ಬ್ರಹ್ಮವಿದರಿಗೂ ಯಾವಾಗಲೂ ಶುಭವಾಗಲಿ. ಎಲ್ಲಾ ಜನರೂ ಸುಖಿಗಳಾಗಲಿ!

(ಸರ್ವರೂ ಸುಖಿಗಳಾಗಲಿ, ರೋಗರಹಿತರಾಗಲಿ, ಮಂಗಲಕರವಾದುದನ್ನೇ ನೋಡುವಂತಾಗಲಿ ಯಾವನೊಬ್ಬನಿಗೂ ದುಃಖವಾಗದಿರಲಿ.

ಸಕಾಲದಲ್ಲಿ ಮಳೆಯಾಗಲಿ: ಭೂಮಿ ಸಸ್ಯದಿಂದ ಸಮೃದ್ಧವಾಗಲಿ. ಈ ದೇಶವು ಶಾಂತಿಯುಳ್ಳುದಾಗಲಿ. ಸತ್ಪುರುಷರು ಭಯವಿಲ್ಲದೆ ಬಾಳುವಂತಾಗಲಿ.)

ಇದೇ ನಮ್ಮ ಪೂರ್ವಿಕರ ಶಾಂತಿ ಸಂದೇಶ. ನಮ್ಮದೂ ಇದೇ ಪ್ರಾರ್ಥನೆ. ಈ ಪ್ರಾರ್ಥನೆಗೆ ಅನುಗುಣವಾದ ಶೀಲಸಮುಚ್ಚಯವು ಸಾಮಾಜಿಕರಲ್ಲಿ ಜಾಗೃತವಾಗಬೇಕು.

□



ಪ್ರೊ. ಟಿ. ಕೇಶವ ಭಟ್ಟರು ಹಳಗನ್ನಡ ಹಾಗೂ ಹಲವು ಶಾಸ್ತ್ರಶಾಖೆಗಳಲ್ಲಿ ಆಳವಾದ ಪರಿಣತಿ ಪಡೆದವರು. ಅವರು ದಕ್ಷಿಣ ಕನ್ನಡದ ಪಂಡಿತ ಶ್ರೇಷ್ಠರಾದ ವಿದ್ವಾನ್ ಮುಳಿಯ ತಿಮ್ಮಪ್ಪಯ್ಯ, ವಿದ್ವಾನ್ ಕುಕ್ಕಿಲ ಕೃಷ್ಣಭಟ್ಟ, ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟ ಇಂಥ ವಿದ್ವನ್ಮಣಿಗಳ ಸಾಲಿಗೆ ಸೇರಿದವರು.

ಅವರು ಭಾಷೆಗೂ ಸಮಾಜಕ್ಕೂ ಇರುವ ಸಂಬಂಧಗಳನ್ನು ಪರಂಪರೆಗೂ ವ್ಯಾಕರಣಕ್ಕೂ ಇರುವ ಸಂಬಂಧಗಳನ್ನು ಬರಹದಲ್ಲಿ ನುಸುಳುವ ಆನುಷಂಗಿಕ-ಪ್ರಾಸಂಗಿಕ ದೋಷಗಳನ್ನು ಹೇಳುವಾಗ ನಿರ್ಮಮವಾಗಿ, ಕಳಕಳಿಯಿಂದ ಬಹು ಎಚ್ಚರದಿಂದ ಬರೆಯುತ್ತಾರೆ.

ಹೀಗಾಗಿ, ಪ್ರೊ. ಟಿ. ಕೇಶವ ಭಟ್ಟರು ಹಲವು ಬಗೆಯ ವಿದ್ವತ್ ಕುತೂಹಲಗಳನ್ನು ಹೊಂದಿದ್ದಾರೆ. ಈ ಬಗೆಯ ವಿದ್ವತ್ ಚಟುವಟಿಕೆಗಳನ್ನು ಅವರು ಬೇರೆ ಬೇರೆಯೆಂದು ತಿಳಿಯುವುದಿಲ್ಲ, ಅವುಗಳಲ್ಲಿ ಸಾವಯವ ಸಂಬಂಧಗಳ ತಂತುಗಳು ಇರುವುದನ್ನು ಅವರು ತೋರಿಸುತ್ತಾರೆ.

ನಾವು ಈ ಅಂಶಗಳನ್ನು ಭಟ್ಟರ ಬರೆಹದಲ್ಲಿ ಕಾಣಬಹುದು. ಈ ಗ್ರಂಥದೊಳಗಿನ ಲೇಖನಗಳ ಮೇಲೆ ಕಣ್ಣಾಡಿಸಿದಂತೆಲ್ಲ ಪ್ರತಿಯೊಂದು ಮಾತನ್ನು ಅವರು ತೂಗಿ ಬೆಲೆಕಟ್ಟಿ ಬರೆಯುತ್ತಾರೆಂದು ಯಾರಿಗಾದರೂ ಅನಿಸದೆ ಇರದು.

ಈ ಅಂಶವು ಗ್ರಂಥದ ಮೇಲ್ಮೆಯನ್ನೂ ವಿದ್ವತ್ತಿನ ಆಳವನ್ನೂ ಒಟ್ಟಿಗೆ ತಿಳಿಸುತ್ತದೆ. ಇವರ ಬರೆಹದಲ್ಲಿ ಔಚಿತ್ಯ ಹಾಗೂ ಸಾರಲ್ಯಗಳು ಒಟ್ಟೊಟ್ಟಿಗೆ ಕಾಣಿಸಿಕೊಳ್ಳಲು ಇದೂ ಒಂದು ಕಾರಣವೆಂದು ನನಗೆ ತೋರುತ್ತದೆ. ಪ್ರೊ. ಟಿ. ಕೇಶವ ಭಟ್ಟರ ಕನ್ನಡ ಮತ್ತು ಸಂಸ್ಕೃತ ಉಭಯ ಭಾಷಾ-ಸಾಹಿತ್ಯಗಳ ವ್ಯುತ್ಪತ್ತಿ ಇದರ ಜತೆಗೆ ಇಂಗ್ಲಿಷ್ ಭಾಷಾ ಸಾಹಿತ್ಯಗಳ ಉತ್ಪತ್ತಿಗಳನ್ನು ಬಹು ಹದವಾಗಿ ಹೊಂದಿದ್ದಾರೆ. ಇವೆರಡೂ ಇವರಲ್ಲಿ ಬಿಡಿಸಲಾರದಷ್ಟು ಹೆಣೆದುಕೊಂಡಿವೆ. ಈ ಗ್ರಂಥದ ಹೆಸರು 'ವಾಗ್ಭೂಷಣ'! ಈ ಮಾತು ಅವರ ವ್ಯಕ್ತಿತ್ವವನ್ನೂ ಕೃತಿಯ ಅಂತಃಸತ್ವವನ್ನೂ ಒಟ್ಟೊಟ್ಟಿಗೆ ಅನಾವರಣ ಮಾಡುತ್ತದೆ.

ಕನ್ನಡ ಪುಸ್ತಕ ಪ್ರಾಧಿಕಾರದ ಈ ಕೃತಿ ಪ್ರಕಟಣೆ ಸುಜನರಿಗೆ ಪ್ರೀತಿಯಾಗಲೆಂದು ನಾನು ಆಶಿಸುತ್ತೇನೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಅಧ್ಯಕ್ಷರು

ಬೆಲೆ ರೂ. ೨೦೦/-

ISBN 81-7713-025-0

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ